ಕನ್ನಡ ಭಾಷಾಶಾಸ್ತ್ರ

(An Approach to the Study of Kannada Language)

ಪ್ರೊ. ರಾ. ಯ. ಧಾರವಾಡಕರ
ಎಂ. ಎ.

೧೯೫೦

ರಸಜ್ಞ ಪಂಡಿತರಾದ,

ಶ್ರೀ. ತಿ. ಶ್ರೀಕಂಠಯ್ಯ, ಎಂ.ಎ.

ಅವರಿಗೆ-

ವಿಶ್ವಾಸಪೂರ್ವಕ ಸಮರ್ಪಣೆ.

ರಾ.ಯ. ಧಾರವಾಡಕರ

೨೧-೬-೧೯೫೧ ಧಾರವಾಡ.

ಕನ್ನಡ ಭಾಷಾಶಾಸ್ತ್ರ

(An Approach to the Study of Kannada Language)

ಪ್ರೊ. ರಾ. ಯ. ಧಾರವಾಡಕರ

ಎಂ. ಎ.

೧೯೫೦

ಮುದ್ರಕರು
ಶ್ರೀ. ಎಸ್. ಎಸ್. ಬೆಂಗೇರಿ
ವಿಜಯ ಮುದ್ರಾಲಯ
ಧಾರವಾಡ.

ಮೊದಲ ಆವೃತ್ತಿ : ೫೦೦ ಪ್ರತಿ

೧೯೫೦

ಪ್ರಕಾಶಕರು
ಪ್ರೊ. ರಾ. ಯ. ಧಾರವಾಡಕರ
ಎಂ. ಎ.
ಮಾಳಮಡ್ಡಿ, ಧಾರವಾಡ.

ಅರ್ಪಣೆ

ಬಾಳಬೆಳಕನ್ನಿತ್ತ

ತಾಯಿ-ತಂದೆಗಳಿಗೆ—

ಾದ —ಧಾ. ರಾ. ಯು.

ಮೊದಲ-ಮಾತು

ರಸ ಮತ್ತು ಅಲಂಕಾರಗಳ ದೃಷ್ಟಿಯಿಂದ ಕನ್ನಡ **ಸಾಹಿತ್ಯದ** ಅಭ್ಯಾಸವು ನಡೆದಷ್ಟು ಭಾಷಾ ದೃಷ್ಟಿಯಿಂದ ಈ ವರೆಗೆ ಅಷ್ಟಾಗಿ ನಡೆದಿಲ್ಲವೆಂದೇ ಹೇಳಬೇಕು. ಮಾನ್ಯ ಪಂಡಿತರಾದ ಶ್ರೀ. ಆರ್. ನರಸಿಂಹಾಚಾರ್ಯರು, ಶ್ರೀ. ಗೋವಿಂದ ಪೈ, ಶ್ರೀ. ಶಂ. ಬಾ. ಜೋಶಿ ಅವರು ಡಾ. ನರಸಿಂಹಯ್ಯ ಮೊದಲಾದ ಪೂರ್ವಸೂರಿಗಳು ಈ ಮಾರ್ಗದಲ್ಲಿ ಈಗಾಗಲೇ ಎಷ್ಟೋ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದರೂ, ಜನತೆಯ ಅಭಿರುಚಿ ಇನ್ನೂ ಈ ವಿಧದಲ್ಲಿ ಅಷ್ಟಾಗಿ ಜಾಗ್ರತವಾಗಿಲ್ಲ. ಹೀಗಾಗಿ, **ಭಾಷೆಯ ದೃಷ್ಟಿಯಿಂದ ಕನ್ನಡ ಸಾಹಿತ್ಯ** ಮತ್ತು **ನುಡಿಗಳ** ಅಭ್ಯಾಸವು ಇನ್ನೂ ಸಾಕಷ್ಟಾಗಬೇಕಾಗಿದೆ... ಕನ್ನಡದ ಅಧ್ಯಯನ ಮತ್ತು ಅಧ್ಯಾಪನ ಕಾಲದಲ್ಲಿ ನನಗೆ ಅವಶ್ಯವೆನಿಸಿದ ಹಲವು ಮಾತುಗಳನ್ನು ಇಲ್ಲಿ ಹೇಳಲು ಯತ್ನಿಸಿದ್ದೇನೆ.

ಈ ಪುಸ್ತಕದ ಮೊದಲನೆಯ ಪ್ರಕರಣದಲ್ಲಿ **ಭಾಷೆಯ ಉತ್ಪತ್ತಿಯನ್ನು** ಕುರಿತು ವಿವರಣೆಯಿದೆ: ಮಾತು ಹುಟ್ಟಿ, ಅರ್ಥ ಬಂದಿತೋ? - ಅಥವಾ ಅರ್ಥವನ್ನು ಧರಿಸಿಯೇ ಮಾತು ಹುಟ್ಟಿಕೊಂಡಿತೋ?— ಎನ್ನುವುದು ಇನ್ನೂ ಬಿಡಿಸಲಾರದ ಸಮಸ್ಯೆಯಾಗಿದೆ. ಯಾವುದಾದರೊಂದು ಶಬ್ದವನ್ನು ಉಚ್ಚರಿಸಿದಾಗ ಅದೇ ಅರ್ಥ ಪ್ರತೀತಿಯೇಕಾಗಬೇಕು?—ಬೇರೆ ಅರ್ಥ ಏಕಾಗಬಾರದು?— ಎಂಬುದು ನಿಜವಾಗಿಯೂ ಮಹತ್ವದ ಪ್ರಶ್ನೆ. "ಪೆಟ್ಟಿಗೆ" ಎಂದು ಧ್ವನಿಯನ್ನು ಉಚ್ಚರಿಸಿದ ಕೂಡಲೇ, ಆ ವಿಶಿಷ್ಟಾಕೃತಿ, ಆ ಬಣ್ಣ, ಆ ವಿಷಯ—ಅವೇ ಏಕೆ ಗಮ್ಯವಾಗಬೇಕು?—

ಆ ಧ್ವನಿಗೆ ಕೇವಲ ಕಡ್ಡಾಯವಾಗಿ (Arbitrarily) ಆ ಅರ್ಥ ಬಂದಿತೇ? ಹೇಗೆ?— ಈ ಮಾತನ್ನು ಅನೇಕ ಪ್ರಾಚೀನ ಪಂಡಿತರೂ ಚರ್ಚಿಸಲು ಯತ್ನಿಸಿದ್ದಾರೆ. ಉದಾಹರಣೆಗೆ, ಪತಂಜಲಿ ಮಹರ್ಷಿಗಳು ತಮ್ಮ ಮಹಾಭಾಷ್ಯದಲ್ಲಿ ಇದೇ ಪ್ರಶ್ನೆಯನ್ನೇ ಎತ್ತಿಕೊಳ್ಳುತ್ತ— "ಗೌಃ ಇತಿ ಅತ್ರ ಕಃ ಶಬ್ದಃ?" —ಎಂದು ಪ್ರಶ್ನೆ ಕೇಳುತ್ತಾರೆ. "ಆಕಳು" ಎಂದಾಗ ಯಾವುದು ನಿಜವಾದ ಶಬ್ದ?—"ಕೆಂಪು, ಬಿಳಿ, ಕರಿ" ಎಂಬುದೆ?* — "ಅಲ್ಲ"; ಯಾಕೆಂದರೆ, ಅದು ಕೇವಲ "ವರ್ಣ"; ನಾಯಿ ಬೆಕ್ಕುಗಳೂ ಆ ವರ್ಣದವಿರಬಹುದು. ಹಾಗಾದರೆ, "ಆ ಗಂಗೆದೊಗಲು, ಆ ಬಾಲ, ಆ ಇಣೆ -ಇವೇ ಆ ಶಬ್ದವೇ?"- "ಅಲ್ಲ; ಯಾಕೆಂದರೆ ಅದೂ ಕೇವಲ ದ್ರವ್ಯ"........ "ಹಾಗಿದ್ದಲ್ಲಿ, ಆ ಬಾಲ ಅಲುಗಾಡಿಸುವುದು, ಕಣ್ಣು ಮಿಳುಕಿಸುವುದು - ಅದು ಶಬ್ದವೇ?"— "ಅದೂ ಅಲ್ಲ; ಯಾಕೆಂದರೆ, ಅದು ಕೇವಲ 'ವ್ಯಾಪಾರ' "— ಹಾಗಾದರೆ "ಶಬ್ದವೆಂದರೇನು?"— ಮಹರ್ಷಿಗಳ ಪ್ರಕಾರ, ಯಾವ ಧ್ವನಿಯ ಉಚ್ಚಾರದಿಂದ ಈಯೆಲ್ಲ

---

* "ಯತ್ ತರ್ಹಿ ತತ್ ಶುಕ್ಲಃ ನೀಲಃ ಕಪಿಲಃ....ಇತಿ ಸ ಶಬ್ದಃ?"
"ನ ಇತ್ಯಾಹ; ಗುಣಃ ನಾಮ ಸಃ";
"ಯತ್ ತರ್ಹಿ ತದ್ ಇಂಗಿತಂ, ಚೇಷ್ಟಿತಂ—ಇತಿ ಸ ಶಬ್ದಃ?"
"ನ ಇತ್ಯಾಹ; ಕ್ರಿಯಾ ನಾಮ ಸಾ"—ಇತ್ಯಾದಿ.

ಅವಧರಿಪುದು ವಿಬುಧರ್;
ದೋಷವನ್ ಇದರೊಳ್ ಏನಾನುವನ್
ಉಳ್ಳೊಡಂ, ಪ್ರಿಯದಿಂ ತಿರ್ದುವುದು;
ಗುಣಯುಕ್ತಮುಂ ದೋಷವಿದೂರಮುಂ
ಆಗೆ ಮೆಚ್ಚಿ ಕೈಕೊಳ್ವುದಿದಂ —

ಕಡಿಮೆ ಪರಿಶ್ರಮ ಇಲ್ಲವೆ ಕಡಿಮೆ ತಿಳಿವಳಿಕೆಯ ಮೂಲಕ ಇರಬಹುದಾದ ದೋಷಗಳನ್ನು ಪ್ರಾಜ್ಞರು ದಯವಿಟ್ಟು ಮನ್ನಿಸಬೇಕು. ಇಷ್ಟು ಹೇಳಿ, ಈ 'ಉದ್‌ಗ್ರಂಥ'ವನ್ನು — ಅಲ್ಲ 'ಅಡ್ಡಗ್ರಂಥ'ವೆಂದೇ ಹೇಳಲೇ? – ವಾಚಕರ ಕೈಯಲ್ಲಿರಿಸುತ್ತೇನೆ.

ಧಾರವಾಡ
ವಿಜಯದಶಮಿ ೧೯೫೦ } —ಧಾ. ರಾ. ಯ.

ಪರಿವಿಡಿ

ಪ್ರಕರಣ ೫— ಕನ್ನಡ ಮತ್ತು ನೆರೆಹೊರೆಯ ಭಾಷೆಗಳು—

ಪ್ರಕರಣ ೬—ಭಾಷೆಯಲ್ಲಿ ಕಂಡುಬರುವ ಕನ್ನಡರ ಸಂಸ್ಕೃತಿ—

ಪ್ರಕರಣ ೭— ಕನ್ನಡ ವ್ಯಾಕರಣದ ಮುಖ್ಯಾಂಶಗಳು—

ಪರಿಶಿಷ್ಟಗಳು—

CONTENTS

ಮೊದಲನೆಯ ಪ್ರಕರಣ

ಭಾಷೆ, ಅದರ ಉತ್ಪತ್ತಿ ಮತ್ತು ಬೆಳವಣಿಗೆ

ಇಡೀ ಮಾನವ ಪ್ರಪಂಚದ ಶೋಧಗಳಲ್ಲೆಲ್ಲ ಭಾಷೆಯ ಉಪಯೋಗದ ಶೋಧದಷ್ಟು ಅದ್ಭುತವಾದದ್ದೂ, ಮಹತ್ವಪೂರ್ಣವಾದದ್ದೂ ಯಾವುದೂ ಇಲ್ಲವೆಂದು ಡಾರ್ವಿನ್‌ರವರ ಅಭಿಪ್ರಾಯ. ಯಾಕೆಂದರೆ, ಮೋಟುಮರದಂತಿದ್ದ ಆದಿಮಾನವನು ತನ್ನ ಆಸೆ–ಎನಿಸಿಕೆಗಳನ್ನು, ಅನುಭವ–ಭಯಗಳನ್ನು, ಕೃತಜ್ಞತೆ–ಪ್ರಾರ್ಥನೆಗಳನ್ನು ಸಲ್ಲಿಸಿದ್ದು, ಧ್ವನಿಗೆ ಬಂದಿರುವ ಈ ಅರ್ಥವ್ಯಕ್ತಿಯ ಮೂಲಕವಾಗಿಯೇ. ಸಂಪರ್ಕವು ಪ್ರಾರಂಭವಾದಾಗ ಚಿಗುರಿದ ಭಾಷೆ, ಆ ಸಂಪರ್ಕವು ಮತ್ತಷ್ಟು ಗಾಢವೂ ದೃಢವೂ ಆಗುವಂತೆ ಮಾಡಿತು.

ಇಷ್ಟಾದರೂ, ಭಾಷೆ ಹುಟ್ಟಿದ ರೀತಿಯೇನು ? ಅದರ ಮೂಲ ಸ್ವರೂಪವು ಹೇಗೆ? ಅದರ ಪ್ರಾರಂಭ ಎಂತು—ಈ ಮೊದಲಾದ ಪ್ರಶ್ನೆಗಳಿಗೆ ಇನ್ನೂ ಕೊನೆಯ ಉತ್ತರ ದೊರೆತಿಲ್ಲ. ಜನ ಇದ್ದಷ್ಟು ಇದರಲ್ಲಿ ಭಿನ್ನಾಭಿಪ್ರಾಯಗಳಿವೆ. ಇಷ್ಟೇ ಅಲ್ಲದೆ, ಡಾ. ವ್ಹಿಟ್ನೆ ಅವರು ಹೇಳುವಂತೆ ಎಷ್ಟೋ ಸಲ ಈ ವಿಚಾರವೆಲ್ಲ ನಿರರ್ಥಕವೇನೋ ಎನಿಸುವಂತಿದೆ. ಈ ಬಗ್ಗೆ ಡಾ. ವ್ಹಿಟ್ನೆ ಅವರು ಹೇಳುವದೇನೆಂದರೆ :

> "No theme in linguistic science is more often and more voluminously treated than this, and by scholars of every grade and tendency; nor any, it may be added, with less profitable result in proportion to the labour extended; the greater part of what is said and written upon it is a mere windy talk, the assertion of subjective views which commend themselves to no mind save the one that produces them, and which are apt to be offered with a confidence and defended with a tenacity, that are in inverse ratio to their acceptableness. This has given a bad repute among sober-minded philologists ".*

ಮೊದಲಿನ ಕಾಲದಲ್ಲಿಯಂತೂ ಭಾಷೆಯ ಉಗಮವನ್ನು ಧಾರ್ಮಿಕ ರೀತಿಯಲ್ಲೇ ವಿವರಿಸುತ್ತಿದ್ದರು. ಪರಮಾತ್ಮನು ಪರ್ವತ-ಸಮುದ್ರಗಳನ್ನು ಸೃಷ್ಟಿಸಿದಂತೆಯೇ, ಭಾಷೆಯನ್ನೂ ಸೃಷ್ಟಿಸಿದನೆಂದು ಧಾರ್ಮಿಕ ಮತ. ಬೈಬಲ್ಲದ ಪ್ರಕಾರ ಮೂಲತಃ ಶಬ್ದವು ಪರಮಾತ್ಮನಲ್ಲಿ ಮಾತ್ರವಿತ್ತಂತೆ. ಅನಂತರ ಪ್ರೊಮಿಥ್ಯೂಸ್ ಭೂಮಿಗೆ ಬೆಳಕನ್ನು ತಂದಹಾಗೆ ಶಬ್ದವೂ ಭೂಮಿಗೆ ಇಳಿಯಿತೆಂದು ನಂಬುಗೆ. ಅಷ್ಟೇ ಅಲ್ಲದೆ, Old Testamentದ ಪ್ರಕಾರ ಈ ಭೂಮಿಯಲ್ಲಿರುವ ಭಾಷೆಯ ವೈವಿಧ್ಯತೆಗೆ ಮನುಷ್ಯನು ಮಾಡಿದ ಪಾಪವೇ ಕಾರಣ. ಹೀಗಾಗಿ ಭಾಷೆ ದೇವರಿಂದಲೇ ನಿರ್ಮಿತವೆಂದು ಕ್ರಿಶ್ಚಿಯನ್ ಅಭಿಪ್ರಾಯ.

---

* O. L. S. I.279

ಸಂಸ್ಕೃತದ ಗೀರ್ವಾಣತ್ವವನ್ನು ಸಾರುವ ಹಿಂದೂ ಕಲ್ಪನೆಯು ಕೂಡ ಇದರಿಂದ ತೀರ ದೂರವೇನೂ ಇಲ್ಲ. ಅಂಭೃಣಿಸೂಕ್ತದ ಪ್ರಕಾರ ವಾಗ್ದೇವಿ ರುದ್ರವಸುಗಳ ಕೂಡ ಚರಿಸುತ್ತಿದ್ದಾಳೆ. "ಅಹಂ ರುದ್ರೇಭಿಃ ವಸುಭಿಃ ಚರಾಮ್ಯಹಮಾದಿತ್ಯೈಃ ಉತ ವಿಶ್ವದೇವೈಃ" ಇ. ಕನ್ನಡ ಕೇಶಿರಾಜನ ಪ್ರಕಾರ :

"ತನು ವಾದ್ಯಮ್, ನಾಲಗೆ ವಾದನದಂಡಮ್
ಕರ್ತೃ ಆತ್ಮಮ್ ಅವನ ಮನೋವೃತ್ತಿ ನಿಮಿತ್ತಮಾಗಿ
ಧವಳವರ್ಣಮ್ ಅಕ್ಷರರೂಪಂ ಪುಟ್ಟುಗುಂ
ಶ್ವೇತಮ್ ಅದರ ಕಾರ್ಯಮ್ ಶಬ್ದಮ್."

ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ಭಾಷೆಯ ಉತ್ಪತ್ತಿಯ ಬಗ್ಗೆ ಹೇಳದಿದ್ದರೂ, ಪ್ರಪಂಚದ ಎಲ್ಲ ಭಾಷೆಗಳೂ ಮೂರುವರೆ ಭಾಷೆಗಳಿಂದ ಹುಟ್ಟಿದುವೆಂದು ಹೇಳುತ್ತಾನೆ. ಅವನ ಪ್ರಕಾರ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮತ್ತು ಪೈಶಾಚಿಕಗಳೆಂಬ 'ಮೂರುವರೆ ಭಾಷೆ'ಗಳಿಂದ ಹಿಂದುಸ್ಥಾನದ ಇತರ ಛಪ್ಪನ್ನ (೫೬) ಭಾಷೆಗಳಾದ 'ದ್ರಾವಿಡ, ಆಂಧ್ರ, ಕರ್ನಾಟಕ' ಮೊದಲಾದವು ಹುಟ್ಟಿಕೊಂಡವು.— "ಸಂಸ್ಕೃತಮ್ ಪ್ರಾಕೃತಮ್ ಅಪಭ್ರಂಶಮ್ ಪೈಶಾಚಿಕಮ್ ಎಂಬ ಮೂರುವರೆ ಭಾಷೆಗಳೊಳ್ ಪುಟ್ಟುವ ದ್ರವಿಡಾಂಧ್ರ-ಕರ್ಣಾಟಕಾದಿ-ಷಟ್ಪಂಚಾಶತ್ ಸರ್ವವಿಷಯಭಾಷಾ ಜಾತಿಗಳಕ್ಕುಂ".

ಹದಿನೇಳನೆಯ ಶತಮಾನದ ಭಟ್ಟಾಕಲಂಕನ ಪ್ರಕಾರ ಪ್ರಪಂಚದ ಭಾಷೆಗಳೆಲ್ಲ ಪರಮಾತ್ಮನಿಂದಲೇ ಹುಟ್ಟಿದುವು. ಅಂತಲೇ, ಇಂಥ ಸೃಷ್ಟಿಕರ್ತನಾದ ಶ್ರೀವರ್ಧಮಾನಸ್ವಾಮಿಗಳನ್ನು ಅವನು ವಂದಿಸುತ್ತಾನೆ:

"ನಮಃ ಶ್ರೀವರ್ಧಮಾನಾಯ, ವಿಶ್ವವಿದ್ಯಾವಭಾಸಿನೇ,
ಸರ್ವ ಭಾಷಾಮಯೀ ಭಾಷಾ ಪ್ರವೃತ್ತಾ ಯನ್ಮುಖಾಂಬುಜಾತ್"

ಹಾಗಾದರೆ, ಒಬ್ಬನೇ ದೇವನಿಂದ ನಿರ್ಮಿತವಾದ ಈ ಭಾಷೆ ಕನ್ನಡಿಗರಲ್ಲಿ ಕನ್ನಡವಾಗಿಯೂ: ಮರಾಠಿಗರಲ್ಲಿ ಮರಾಠಿಯಾಗಿಯೂ, ಆಂಗ್ಲರಲ್ಲಿ ಇಂಗ್ಲಿಷವಾಗಿಯೂ ಹೇಗೆ ಪರಿಣಮಿಸಿರಬೇಕು? ಭಟ್ಟಾಕಲಂಕನ ಪ್ರಕಾರ, ಇದರ ಕಾರಣವೇನೆಂದರೆ,—ಒಂದೇ ಮುಗಿಲಿನಿಂದ ಬಿದ್ದ ನೀರು, ಬೇರೆ ಬೇರೆ ನೆಲದ ಗುಣದ ಮೂಲಕ, ಲವಣ-ಮಧುರ-ಕಷಾಯ ಎಂದು ಮೊದಲಾಗಿ ರಸಭೇದವನ್ನು ಹೊಂದುವಂತೆ, ಇಲ್ಲವೆ ಶರತ್ಕಾಲದ ಸೂರ್ಯನು ಸ್ವಾತೀ ನಕ್ಷತ್ರಗತನಾಗಲು ಅದೇ ನೀರು ತಾಮ್ರಪರ್ಣಿ ಶುಕ್ತಿಗಳಲ್ಲಿ ಮುಕ್ತಾಫಲಗಳಾಗಿಯೂ, ಸಪ್ತಚ್ಛದ ಗಳಲ್ಲಿ ಪಚ್ಚಕರ್ಪೂರವಾಗಿಯೂ ಪರಿಣಮಿಸುವಂತೆ, ತೀರ್ಥಂಕರರ ಈ ದಿವ್ಯಧ್ವನಿಯ ರೀತಿಯಾಗಿದೆ. "ನನು ಏಕಸ್ಯಾಃ ಏವ ಭಗವದ್ವಾಣ್ಯಾಃ ನಾನಾ ಭಾಷಾತ್ಮಕತ್ವಮ್ ಕಥಮ್ ಉಪಪದ್ಯತ ಇತಿ ಚೇತ್— ದಿವ್ಯಧ್ವನೇಃ ಅಯಮ್ ಅಚಿಂತ್ಯಮಹಿಮಾ ಸ್ವಭಾವಃ—ಯಥಾ ಪ್ರಾವೃಟ್ಕಾಲೇ ನಭಸ್ಥಲಾತ್ಪತಿತಮ್ ಅಂತರಿಕ್ಷಂ ಜಲಮ್ ಏಕಮ್ ಅವ್ಯಕ್ತರಸಮ್ ಅಪಿ"—ಇತ್ಯಾದಿ.

"ಭಗವದ್ಭಾಷೆಯು ಸ್ವೋತ್ಪತ್ತಿ ಸಮಯದಲ್ಲಿ ಸಮುದ್ರಘೋಷಗಳಂತೆ ಅವ್ಯಕ್ತೈಕ ಭಾಷಾರೂಪ ವಾಗಿದ್ದರೂ, ಶ್ರೋತೃಗಳ ಶ್ರೋತ್ರಪ್ರದೇಶಗಳನ್ನು ಹೊಂದಿ ಆಯಾ ಭಾಷೆಗಳಾಗಿ ಪರಿಣಮಿಸುವುದು ಭಗವದ್ವಾಣಿಯ ವಿಚಿತ್ರ ಮಹಿಮೆ"ಯೆಂದು ಪ್ರಾಜ್ಞರಾದ ಪದ್ಮನಂದಾಚಾರ್ಯರು ಹೇಳುತ್ತಾರೆ.

ಜೈನರಲ್ಲಿ ಪ್ರಸಿದ್ಧವಾದ ಮಹಾಪುರಾಣದಲ್ಲೂ ಕೂಡ—

" ದೇವಾ ದೈವೀಂ, ನರಾ ನಾರೀಂ, ಶಬರಾಶ್ಚಾಪಿ ಶಾಬರೀಂ
ತಿರ್ಯಂ ಚೋಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಮ್ "

ಎಂದು ಹೇಳಿದೆ.

ಈ ಪ್ರಕಾರ, ಪ್ರಪಂಚದಲ್ಲಿ ೧೮ ಮಹಾಭಾಷೆಗಳೂ, ೭೦೦ ಉಪಭಾಷೆಗಳೂ ಇವೆಯೆಂದು ಭಟ್ಟಾಕಲಂಕನ ಮತ.

ಆದರೆ ಭಾಷೆಯ ದೈವತ್ವವನ್ನು ಹೇಳುವ ಈ ವಾದವು ಇಂದಿನ ವಿಚಾರಯುಗಕ್ಕೆ ಸರ್ವಥಾ ಸರಿ ಹೋಗದು. ಯಾಕಂದರೆ ಭಾಷೆಯು ಪರಮಾತ್ಮನಿರ್ಮಿತವೇ ಆಗಿದ್ದರೆ, ಅವನಂತೆ ಅದೂ ಪರಿಪೂರ್ಣವೇ ಆಗಿರುತ್ತಿತ್ತು. ಈಗಿನ ಭಾಷೆಗಳಲ್ಲಿಯ ಅಪೂರ್ಣತೆ ವಿಕ್ಷಿಪ್ತತೆಗಳು ಆ ಸೃಷ್ಟಿಯಲ್ಲಿ ಇರುತ್ತಿರಲಿಲ್ಲ. ಅಷ್ಟೇ ಅಲ್ಲದೆ, ಒಬ್ಬನೇ ವ್ಯಕ್ತಿಯಿಂದ ಭಾಷೆ ನಿರ್ಮಿತವಾಗಬಲ್ಲದೆಂಬ ವಿಚಾರಸರಣಿಯೇ ದೋಷಪೂರಿತವಾದದ್ದು. ಯಾಕಂದರೆ, ಭಾಷೆಯು ಸಾಮಾಜಿಕ ಸಂಪರ್ಕದ ಆವಶ್ಯಕತೆಯಾಗಿದೆಯೇ ಹೊರತು ಕೇವಲ ಮೌನದ ಅಭಿವ್ಯಕ್ತಿಯಾಗಿಲ್ಲ. ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ಓಟೊ ಯೆಸ್ಪರ್ಸನ್ನ ಅವರು ಹೇಳುವಂತೆ :—

" The very imperfections and changeability of language, speak against its divine origin. Language as gradually developed must be the work of man himself, and therein is different from the immutable cries and songs of the lower creation."*

ಹೀಗಾಗಿ, ಭಾಷೆಯ ಉಗಮದ ಬಗ್ಗೆ ಇರುವ ಈ ಚರ್ಚೆಯನ್ನು ಕಂಡಾಗ ಪುನಃ ವ್ಹಿಟ್ನಿ ಅವರ ಮಾತೇ ನೆನಪಾಗುತ್ತದೆ.

"......The greater part of what is said and written upon it, is a mere windy talk, assertion of subjective views, which commend themselves to no mind, save the one that produces them "

ಅಂತಲೇ, ಕ್ರಿ. ಶಕ ೧೮೬೬ರಲ್ಲಿ ಪ್ಯಾರಿಸ್‌ದ "La Societe' de Linguistique" ಸಂಸ್ಥೆಯು ಭಾಷೆಯ ಉಗಮದ ಪ್ರಶ್ನೆಯನ್ನು ಚರ್ಚಿಸಲೇಕೂಡದೆಂದು ವಿಧಿಸಿತು.

ಹಾಗಾದರೆ, ಇಷ್ಟರವುಟ್ಟಿಗೆ ಶಾಸ್ತ್ರಜ್ಞರ ಕುತೂಹಲವನ್ನು ಕೆರಳಿಸಿದ ಈ ಭಾಷೆಗಳ ಉಗಮವಾದ ದ್ದಾದರೂ ಹೇಗೆ ಎಂಬುದನ್ನು ನೋಡೋಣ :—

ಭಾಷೆ ಯಾವ ರೀತಿ ಹುಟ್ಟಿತೆಂಬುದರ ಬಗ್ಗೆ ಪಂಡಿತರು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಈ ಕೆಳಗಿನ ಆರು :—

ಹಲವು ಪಂಡಿತರ ಪ್ರಕಾರ ಮನುಷ್ಯನು ಇಂದು ಉಪಯೋಗಿಸುವ ಶಬ್ದಗಳೆಲ್ಲ ಪ್ರಾಣಿಗಳ ಧ್ವನಿಯ **ಅನುಕರಣೆ.** ಹೀಗಾಗಿ ' ಕಾಕಾ ' ' ಕ್ರಾ ' ಎನ್ನುವದರ ಮೂಲಕ ಸಂಸ್ಕೃತ ಕಾಕವೂ, ಕನ್ನಡ ಕಾಗೆಯೂ,

* Language -P 61.

ಸಂಸ್ಕೃತದ ಗೀರ್ವಾಣತ್ವವನ್ನು ಸಾರುವ ಹಿಂದೂ ಕಲ್ಪನೆಯು ಕೂಡ ಇದರಿಂದ ತೀರ ದೂರವೇನೂ ಇಲ್ಲ. ಆಂಭ್ರಣಿಸೂಕ್ತದ ಪ್ರಕಾರ ವಾಗ್ದೇವಿ ರುದ್ರವಸುಗಳ ಕೂಡ ಚರಿಸುತ್ತಿದ್ದಾಳೆ. "ಅಹಂ ರುದ್ರೇಭಿಃ ವಸುಭಿಃ ಚರಾಮ್ಯಹಮಾದಿತ್ಯೈಃ ಉತ ವಿಶ್ವದೇವೈಃ" ಇ. ಕನ್ನಡ ಕೇಶಿರಾಜನ ಪ್ರಕಾರ:

"ತನು ವಾದ್ಯಮ್, ನಾಲಗೆ ವಾದನದಂಡಮ್
ಕರ್ತೃ ಆತ್ಮಮ್ ಅವನ ಮನೋವೃತ್ತಿ ನಿಮಿತ್ತಮಾಗಿ
ಧವಳವರ್ಣಮ್ ಅಕ್ಷರರೂಪಂ ಪುಟ್ಟುಗುಂ
ಶ್ವೇತಮ್ ಅದರ ಕಾರ್ಯಮ್ ಶಬ್ದಮ್."

ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ಭಾಷೆಯ ಉತ್ಪತ್ತಿಯ ಬಗ್ಗೆ ಹೇಳದಿದ್ದರೂ, ಪ್ರಪಂಚದ ಎಲ್ಲ ಭಾಷೆಗಳೂ ಮೂರುವರೆ ಭಾಷೆಗಳಿಂದ ಹುಟ್ಟಿದುವೆಂದು ಹೇಳುತ್ತಾನೆ. ಅವನ ಪ್ರಕಾರ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮತ್ತು ಪೈಶಾಚಿಕಗಳೆಂಬ 'ಮೂರುವರೆ ಭಾಷೆ'ಗಳಿಂದ ಹಿಂದುಸ್ಥಾನದ ಇತರ ಛಪ್ಪನ್ನ (೫೬) ಭಾಷೆಗಳಾದ 'ದ್ರಾವಿಡ, ಆಂಧ್ರ, ಕರ್ನಾಟಕ' ಮೊದಲಾದವು ಹುಟ್ಟಿಕೊಂಡವು.—"ಸಂಸ್ಕೃತಮ್ ಪ್ರಾಕೃತಮ್ ಅಪಭ್ರಂಶಮ್ ಪೈಶಾಚಿಕಮ್ ಎಂಬ ಮೂರುವರೆ ಭಾಷೆಗಳೊಳ್ ಪುಟ್ಟುವ ದ್ರವಿಡಾಂಧ್ರ-ಕರ್ಣಾಟಕಾದಿ-ಷಟ್ಪಂಚಾಶತ್ ಸರ್ವವಿಷಯಭಾಷಾ ಜಾತಿಗಳಕ್ಕುಂ".

ಹದಿನೇಳನೆಯ ಶತಮಾನದ ಭಟ್ಟಾಕಲಂಕನ ಪ್ರಕಾರ ಪ್ರಪಂಚದ ಭಾಷೆಗಳೆಲ್ಲ ಪರಮಾತ್ಮನಿಂದಲೇ ಹುಟ್ಟಿದುವು. ಅಂತಲೇ, ಇಂಥ ಸೃಷ್ಟಿಕರ್ತನಾದ ಶ್ರೀವರ್ಧಮಾನಸ್ವಾಮಿಗಳನ್ನು ಅವನು ವಂದಿಸುತ್ತಾನೆ:

"ನಮಃ ಶ್ರೀವರ್ಧಮಾನಾಯ, ವಿಶ್ವವಿದ್ಯಾವಭಾಸಿನೇ,
ಸರ್ವ ಭಾಷಾಮಯೀ ಭಾಷಾ ಪ್ರವೃತ್ತಾ ಯನ್ಮುಖಾಂಬುಜಾತ್"

ಹಾಗಾದರೆ, ಒಬ್ಬನೇ ದೇವನಿಂದ ನಿರ್ಮಿತವಾದ ಈ ಭಾಷೆ ಕನ್ನಡಿಗರಲ್ಲಿ ಕನ್ನಡವಾಗಿಯೂ: ಮರಾಠಿಗರಲ್ಲಿ ಮರಾಠಿಯಾಗಿಯೂ, ಆಂಗ್ಲರಲ್ಲಿ ಇಂಗ್ಲಿಷವಾಗಿಯೂ ಹೇಗೆ ಪರಿಣಮಿಸಿರಬೇಕು? ಭಟ್ಟಾಕಲಂಕನ ಪ್ರಕಾರ, ಇದರ ಕಾರಣವೇನೆಂದರೆ,—ಒಂದೇ ಮುಗಿಲಿನಿಂದ ಬಿದ್ದ ನೀರು, ಬೇರೆ ಬೇರೆ ನೆಲದ ಗುಣದ ಮೂಲಕ, ಲವಣ-ಮಧುರ-ಕಷಾಯ ಎಂದು ಮೊದಲಾಗಿ ರಸಭೇದವನ್ನು ಹೊಂದುವಂತೆ, ಇಲ್ಲವೆ ಶರತ್ಕಾಲದ ಸೂರ್ಯನು ಸ್ವಾತೀ ನಕ್ಷತ್ರಗತನಾಗಲು ಅದೇ ನೀರು ತಾಮ್ರಪರ್ಣಿ ಶುಕ್ತಿಗಳಲ್ಲಿ ಮುಕ್ತಾಫಲಗಳಾಗಿಯೂ, ಸಪ್ತಚ್ಛದಗಳಲ್ಲಿ ಪಚ್ಚಕರ್ಪೂರವಾಗಿಯೂ ಪರಿಣಮಿಸುವಂತೆ, ತೀರ್ಥಂಕರರ ಈ ದಿವ್ಯಧ್ವನಿಯ ರೀತಿಯಾಗಿದೆ. "ನನು ಏಕಸ್ಯಾಃ ಏವ ಭಗವದ್ವಾಣ್ಯಾಃ ನಾನಾ ಭಾಷಾತ್ಮಕತ್ವಮ್ ಕಥಮ್ ಉಪಪದ್ಯತ ಇತಿ ಚೇತ್—ದಿವ್ಯಧ್ವನೇಃ ಅಯಮ್ ಅಚಿಂತ್ಯಮಹಿಮಾ ಸ್ವಭಾವಃ—ಯಥಾ ಪ್ರಾವೃಟ್ಕಾಲೇ ನಭಸ್ಥಲಾತ್ಪತಿತಮ್ ಅಂತರಿಕ್ಷಂ ಜಲಮ್ ಏಕಮ್ ಅವ್ಯಕ್ತರಸಮ್ ಅಪಿ"—ಇತ್ಯಾದಿ.

"ಭಗವದ್ಭಾಷೆಯು ಸ್ವೋತ್ಪತ್ತಿ ಸಮಯದಲ್ಲಿ ಸಮುದ್ರಘೋಷಗಳಂತೆ ಅವ್ಯಕ್ತೈಕ ಭಾಷಾರೂಪವಾಗಿದ್ದರೂ, ಶ್ರೋತೃಗಳ ಶ್ರೋತೃಪ್ರದೇಶಗಳನ್ನು ಹೊಂದಿ ಆಯಾ ಭಾಷೆಗಳಾಗಿ ಪರಿಣಮಿಸುವುದು ಭಗವದ್ವಾಣಿಯ ವಿಚಿತ್ರ ಮಹಿಮೆ"ಯೆಂದು ಪ್ರಾಜ್ಞರಾದ ಪದ್ಮನಂದಾಚಾರ್ಯರು ಹೇಳುತ್ತಾರೆ.

ಜೈನರಲ್ಲಿ ಪ್ರಸಿದ್ಧವಾದ ಮಹಾಪುರಾಣದಲ್ಲೂ ಕೂಡ—

"ದೇವಾ ದೈವೀಂ, ನರಾ ನಾರೀಂ, ಶಬರಾಶ್ಚಾಪಿ ಶಾಬರೀಂ
ತಿರ್ಯಂ ಚೋಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಮ್"

ಎಂದು ಹೇಳಿದೆ.

ಈ ಪ್ರಕಾರ, ಪ್ರಪಂಚದಲ್ಲಿ ೧೮ ಮಹಾಭಾಷೆಗಳೂ, ೭೦೦ ಉಪಭಾಷೆಗಳೂ ಇವೆಯೆಂದು ಭಟ್ಟಾಕಲಂಕನ ಮತ.

ಆದರೆ ಭಾಷೆಯ ದೈವತ್ವವನ್ನು ಹೇಳುವ ಈ ವಾದವು ಇಂದಿನ ವಿಚಾರಯುಗಕ್ಕೆ ಸರ್ವಥಾ ಸರಿ ಹೋಗದು. ಯಾಕೆಂದರೆ ಭಾಷೆಯು ಪರಮಾತ್ಮನಿರ್ಮಿತವೇ ಆಗಿದ್ದರೆ, ಅವನಂತೆ ಅದೂ ಪರಿಪೂರ್ಣವೇ ಆಗಿರುತ್ತಿತ್ತು. ಈಗಿನ ಭಾಷೆಗಳಲ್ಲಿಯ ಅಪೂರ್ಣತೆ ವಿಕ್ಷಿಪ್ತತೆಗಳು ಆ ಸೃಷ್ಟಿಯಲ್ಲಿ ಇರುತ್ತಿರಲಿಲ್ಲ. ಅಷ್ಟೇ ಅಲ್ಲದೆ, ಒಬ್ಬನೇ ವ್ಯಕ್ತಿಯಿಂದ ಭಾಷೆ ನಿರ್ಮಿತವಾಗಬಲ್ಲದೆಂಬ ವಿಚಾರಸರಣಿಯೇ ದೋಷಪೂರಿತವಾದದ್ದು. ಯಾಕೆಂದರೆ, ಭಾಷೆಯು ಸಾಮಾಜಿಕ ಸಂಪರ್ಕದ ಆವಶ್ಯಕತೆಯಾಗಿದೆಯೇ ಹೊರತು ಕೇವಲ ಮೌನದ ಅಭಿವ್ಯಕ್ತಿಯಾಗಿಲ್ಲ. ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ಓಟೊ ಯೆಸ್ಪರ್ಸನ್ನ ಅವರು ಹೇಳುವಂತೆ:—

> "The very imperfections and changeability of language, speak against its divine origin. Language as gradually developed must be the work of man himself, and therein is different from the immutable cries and songs of the lower creation."*

ಹೀಗಾಗಿ, ಭಾಷೆಯ ಉಗಮದ ಬಗ್ಗೆ ಇರುವ ಈ ಚರ್ಚೆಯನ್ನು ಕಂಡಾಗ ಪುನಃ ವ್ಹಿಟ್ನಿ ಅವರ ಮಾತೇ ನೆನಪಾಗುತ್ತದೆ.

> "……The greater part of what is said and written upon it, is a mere windy talk, assertion of subjective views, which commend themselves to no mind, save the one that produces them"

ಅಂತಲೇ, ಕ್ರಿ. ಶಕ ೧೮೬೬ರಲ್ಲಿ ಪ್ಯಾರಿಸ್‌ದ "La Societe' de Linguistique" ಸಂಸ್ಥೆಯು ಭಾಷೆಯ ಉಗಮದ ಪ್ರಶ್ನೆಯನ್ನು ಚರ್ಚಿಸಲೇಕೂಡದೆಂದು ವಿಧಿಸಿತು.

ಹಾಗಾದರೆ, ಇಷ್ಟರಮಟ್ಟಿಗೆ ಶಾಸ್ತ್ರಜ್ಞರ ಕುತೂಹಲವನ್ನು ಕೆರಳಿಸಿದ ಈ ಭಾಷೆಗಳ ಉಗಮವಾದದ್ದಾದರೂ ಹೇಗೆ ಎಂಬುದನ್ನು ನೋಡೋಣ:—

ಭಾಷೆ ಯಾವ ರೀತಿ ಹುಟ್ಟಿತೆಂಬುದರ ಬಗ್ಗೆ ಪಂಡಿತರು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಈ ಕೆಳಗಿನ ಆರು:—

ಪಲವು ಪಂಡಿತರ ಪ್ರಕಾರ ಮನುಷ್ಯನು ಇಂದು ಉಪಯೋಗಿಸುವ ಶಬ್ದಗಳೆಲ್ಲ ಪ್ರಾಣಿಗಳ ಧ್ವನಿಯ **ಅನುಕರಣೆ.** ಹೀಗಾಗಿ 'ಕಾಕಾ' 'ಕ್ರಾ' ಎನ್ನುವದರ ಮೂಲಕ ಸಂಸ್ಕೃತ ಕಾಕವೂ, ಕನ್ನಡ ಕಾಗೆಯೂ,

---

* Language-P 61.

ಇಂಗ್ಲಿಷ್ Crow ಶಬ್ದವೂ ಹುಟ್ಟಿಕೊಂಡವು. ಅದರಂತೆಯೇ ‘ ಕುಕ್ಕೂ ’ ಎನ್ನುವ Cuckoo, ಕೋಕಿಲ, ಕೋಗಿಲೆ ಮೊದಲಾದುವು ಹುಟ್ಟಿಕೊಂಡವು. ಇದರಂತೆ ಇನ್ನೂ ಹತ್ತಾರು ಉದಾಹರಣೆಗಳನ್ನು ಕೊಡಬಹುದು. ಆಕಳು ಅರ್ಥದಲ್ಲಿಯ ‘ ಅಂಬಾ ’; ಗೂಗೂ ಎನ್ನುವ ಗೂಗೆ; ಗಣಗಣ ಎನ್ನುವ ಗಣ್ಟೆ; ಝೂಂಗಟಿ; ಡಮರು: ಪಜಿ, ಇತ್ಯಾದಿ. ಶ್ರೀ. ಮುಜುಮದಾರ ಅವರ ಪ್ರಕಾರ, ಮಹಾಭಾರತದ ‘ ಕೋಲಾಹಲ, ಕಿಲಕಿಲ ’ ಶಬ್ದಗಳೂ, ರಾಮಾಯಣದ ‘ ಹಾಲಾಹಲ ’, ‘ ಗದ್ಗದ ’, ‘ ಹುಂಬಾ ’ ಶಬ್ದಗಳೂ ಈ ರೀತಿಯಿಂದಲೇ ಬಂದುವು. ಅರಣ್ಯಕಾಂಡದ ೨೩ನೆಯ ಅಧ್ಯಾಯದಲ್ಲಿ ಪಕ್ಷಿಗಳು ಗೈಯುವ ಧ್ವನಿಯನ್ನೇ ಶಬ್ದರೂಪದಲ್ಲಿಡಲಾಗಿದೆ. “ **ಚೀಚೀಕುಚೀತಿ** ವಾಸ್ಯಂತೋ **ಬುಭುಭುಸ್ತತ್ರ** ಸಾರಿಕಾಃ ”. ಹರಿವಂಶದಲ್ಲೂ ‘ ಚೀಚೀಕು ’ ಇದೆ. ಪತಂಜಲಿಯ ಕಾಲದಲ್ಲಿ (ಕ್ರಿ. ಪೂ. ೨) ಇವನ್ನು ಅಪವಿತ್ರವೆಂದು ಗ್ರಹಿಸಲಾಗಿತ್ತು. ಖಟ್–ಖಟ್; ಠಣ್–ಠಣ್; ಝುಣ್–ಝುಣ್; ರಣರಣಕ — ಮೊದಲಾದ ಶಬ್ದಗಳು ದೇಶ್ಯವೆಂದು ಹೇಮಚಂದ್ರನು ಹೇಳುತ್ತಾನೆ. ಝುಂಕಾರ, ಮಡ್ಮಡ, ಷಟ್ಪದ — ಮೊದಲಾದ ಶಬ್ದಗಳು ಕಾಲಿದಾಸ ಭಾರವಿಗಳಲ್ಲಿ ಬರುತ್ತವೆ. ಕ್ರಿ. ಶ. ೭ ರಿಂದಂತೂ, ಖಟ್–ಖಟಾಯತೇ; ಘುರ್–ಘುರಾಯತೇ; ಮಡ್–ಮಡ್ಯೈಸ್ಮ — ಮೊದಲಾದ ಪ್ರಯೋಗಗಳು ಪ್ರಾರಂಭವಾದವು. ಇದರಂತೆಯೇ ಕನ್ನಡದಲ್ಲಿಯ ಸಿಳ್ಳು, ಚಿಚೇಂದ್ರಿ, ಪಟಾಕ್ಷಿ, ಚಟಾಕಿ, ಧಡಲ್‌ಬಾಜಿ, ಚುರಮುರಿ, ಮುರಮುರಿ, ಡಮರು, ಝೂಂಗಟಿ, ಜೇವೊಡೆ, ಟಂಕಾರ — ಮೊದಲಾದ ಶಬ್ದಗಳು ಅನುಕರಣದಿಂದಲೇ ಬಂದುವು. ಯುದ್ಧದ ಪರಿಭಾಷೆಯಲ್ಲಿಯ ಅನೇಕ ಉಪಕರಣಗಳನ್ನು ವಿವರಿಸುವ ಕನ್ನಡ ಪದಗಳು ಈ ರೀತಿಯಾಗಿಯೇ ಬಂದಂತೆ ಕಾಣುತ್ತವೆ. ಉದಾ : ಪಟಲು; ಢಕ್ಕೆ; ಕಹಳೆ; ಒದ್ದರ; ಪಜಿ; ಹೆಬ್ಬರೆ; ತಂಬಟೆ; ಡಮಾಮಿ; ಡಬ್ಬು; ಚಂಬಕ; ಡವುಡೆ; **ನಪಿರಿ** (ದುಂದುಭಿ); ಬುರುಗು; ಮುವುರಿ; ಬೊಂಬುಳಿಡೋಳು (ಜಜರುಜಂಗಿ) ಇತ್ಯಾದಿ.

“ ಚಂಬಕ, ಡವುಡೆ, ನಪಿರಿ, ಬುರುಗುಗಳನುರೆ,
ಕೊಂಬಿನ ಕಾಳೆ, ಮುವುರಿಯ,
ಬೊಂಬುಳಿಡೋಳು, ನಿಸ್ಸಾಳಗಳಬ್ಬರ
ತುಂಬಿತಾಕಾಶಮಂಡಲವ ”

— ಗೋವಿಂದ ವೈದ್ಯ

ಪ್ರಾಣಿಗಳು ಈ ಶಬ್ದವನ್ನು ಮಾಡುವಾಗಾಗಲೀ, ಅಥವಾ ವಸ್ತುಗಳಿಂದ ಈ ಸಪ್ಪಳವು ಹೊರಡುವಾಗಾಗಲೀ ಅವಕ್ಕೆ ಪ್ರಥಮತಃ ವಿಶಿಷ್ಟವಾದ ಅರ್ಥವಿರದಿದ್ದರೂ ಮಾತುಗಾರನಿಂದ ಒಮ್ಮೆ ಉಪಯುಕ್ತವಾದ ಮೇಲೆ ಅವಕ್ಕೆ ಈ ಅರ್ಥವ್ಯಕ್ತಿ ಬರುತ್ತದೆ. ಈ ವಿಚಾರಸರಣಿಗೆ ಅನುಕರಣವಾಚಕತತ್ವವೆಂದು ಹೇಳಬಹುದು. ಇದಕ್ಕೆ ಇಂಗ್ಲಿಷಿನಲ್ಲಿ ‘ Bow-wow theory ’ ಎಂದು ಕರೆಯುತ್ತಾರೆ. ಆದರೆ ಮ್ಯಾಕ್ಸ್ ಮುಲ್ಲರ ಮೊದಲಾದ ಪಂಡಿತರಿಗೆ ಈ ಅಭಿಪ್ರಾಯವು ಸರಿದೋರುವದಿಲ್ಲ. ಯಾಕಂದರೆ ಮೊದಲನೆಯದಾಗಿ, ಬುದ್ಧಿವಂತಿಕೆಯಲ್ಲಿ ಪ್ರಾಣಿ ಮತ್ತು ಇತರ ಅಚೇತನ ವಸ್ತುಗಳಕಿಂತ ಶ್ರೇಷ್ಠನಾದ ಮನುಷ್ಯನು ಅವುಗಳ ಅನುಕರಣೆ ಮಾಡಿ ಶಬ್ದಗಳನ್ನು ಸಿದ್ಧಿಸಿಕೊಂಡನೆಂಬುದು ಅವರ ಪ್ರಕಾರ ದುಸ್ಸಾಧ್ಯ. ಅಷ್ಟೇ ಅಲ್ಲದೆ ಎರಡನೆಯದಾಗಿ, ಈ ರೀತಿ ಅನುಕರಣ ಮೂಲಕವಾಗಿ ಹುಟ್ಟಿದ ಶಬ್ದಗಳು ಕೋಶದಲ್ಲಿ ಇರುವವಾದರೂ ಎಷ್ಟು ? ಇವುಗಳ ಸಂಖ್ಯೆ ತೀರ ಕಡಿಮೆ. ಅಂತಲೇ ಮ್ಯಾಕ್ಸ್ ಮುಲ್ಲರ್ ಅವರು ಇದರ ಬಗ್ಗೆ ಹೇಳುವದೇನಂದರೆ : —

“ The onomatopoic theory goes very smoothly as long as it deals with cackling hens, and quacking ducks; but round that poultry-yard there is a high wall, and

we soon find that it is behind that wall that language really begins."

ಅಷ್ಟೇ ಅಲ್ಲದೆ ಅವರು ಮತ್ತೊಂದೆಡೆಗೆ ಈ ಬಗ್ಗೆ ಹೇಳುವದೇನೆಂದರೆ:—

> "Words of this kind (i. e. cuckoo) are like artificial flowers, without a root. They are sterile, and unfit to express anything beyond the one object which they imitate"

ಆದರೆ, ಈ ರೀತಿಯ ವಿಮರ್ಶೆಯಲ್ಲಿ ಎಷ್ಟೇ ತಥ್ಯಾಂಶವಿದ್ದರೂ, ಇದೂ ಸಂಪೂರ್ಣ ಸತ್ಯವಾಗಲಾರದು. ಯಾಕಂದರೆ ಇತರ ಪ್ರಾಣಿಗಳ ಸಪ್ಪಳವನ್ನು ಮನುಷ್ಯನು ಅನುಕರಿಸಿದರೆ—ಅನುಕರಿಸುತ್ತಿದ್ದರೆ—ಅದರಲ್ಲಿ ಅವನ ಬುದ್ಧಿಮತ್ತೆಗೆ ಅವಮಾನವಾಗಬೇಕಾದುದೇನೂ ಇಲ್ಲ. ಎರಡನೆಯದಾಗಿ, ಈ ರೀತಿಯ ಶಬ್ದಗಳು ಕೋಶದಲ್ಲಿ ಕಡಿಮೆ ದೊರೆಯುತ್ತಿರಬಹುದಾದರೂ, ಇವುಗಳ ಭಾವನೆಯ ಮೂಲಕ ನಿಷ್ಪನ್ನವಾಗಬಹುದಾದ ಶಬ್ದಗಳಿಗೇನೂ ಕಡಿಮೆ ಇಲ್ಲ. ಯಾಕಂದರೆ, ಸ್ವತಃ ಮ್ಯಾಕ್ಸ್ ಮುಲ್ಲರರೇ ಅನ್ಯತ್ರ coquet ಮೊದಲಾದ ಶಬ್ದಗಳು ಈ ರೀತಿ ಬಂದುವೆಂದು ಹೇಳುತ್ತಾರೆ. ಹೀಗಾಗಿ ಮೊದಲು ಕೇವಲ ಅನುಕರಣವಾದುದು ಅನಂತರ ತದ್ವತ್ತಾಗಿಯಾಗಲೀ, ಇಲ್ಲವೆ ಸಾಂಕೇತಿಕವಾಗಿಯಾಗಲೀ ಭಾಷಾಕೋಶವನ್ನು ಬೆಳೆಸಲಿಕ್ಕೆ ಸಹಾಯಕವಾಗುತ್ತದೆ.

ಎರಡನೆಯ ತತ್ವವೆಂದರೆ "ಉದ್ಗಾರವಾಚಕತತ್ವ". ಇದಕ್ಕೆ ಇಂಗ್ಲಿಷಿನಲ್ಲಿ 'Pooh pooh theory' ಎನ್ನುತ್ತಾರೆ. ಇದರ ಪ್ರಕಾರ "ದುಃಖ ಇಲ್ಲವೆ ಅತಿ ತೀಕ್ಷ್ಣವಾದ ಸಂವೇದನೆಯ ಶಾಬ್ದಿಕ ಉದ್ಗಾರವೇ ಭಾಷೆ." ("Language is derived from instantaneous ejaculation called forth by pain or other intense sensation or feelings.") ಉದಾ: ಆಃ; ಓ; ಹೂಂ; ಅಹ್; ಚಚ್; ಆಹಾ; ಥೂ; ಇತ್ಯಾದಿ. ಮೇಲಿನ ಏಕವರ್ಣಗಳನ್ನೇ ನೋಡಿದರೂ ಪ್ರತಿಯೊಂದರಲ್ಲಿ ಬೇರೆ ಬೇರೆ ಭಾವನೆಯಿರುವದಲ್ಲದೆ, ಪ್ರತಿಯೊಂದು ವರ್ಣಕ್ಕೂ ಒಂದೊಂದು ಶಬ್ದದ ಸಾಮರ್ಥ್ಯವಿದೆಯೆಂಬುದನ್ನು ಕಾಣಬಹುದಾಗಿದೆ. ಆಃ ಎಂಬುದು ಸ್ವಯಂತೃಪ್ತ ಹೆಕ್ಕಳಿಕೆಯಲ್ಲಿ ಬರುತ್ತಿದ್ದರೆ, 'ಓ' ಆಶ್ಚರ್ಯದಲ್ಲಿಯೂ, 'ಹೂಂ' ಸಮ್ಮತಿಯಲ್ಲಿಯೂ, 'ಅಹಾ' ವಿಸ್ಮಯದಲ್ಲಿಯೂ, ಚಚ್ ಮತ್ತು ಥೂಗಳು ಜಿಗುಪ್ಸೆಯಲ್ಲಿಯೂ, ಆಹಾ ಎಂಬುದು ತೊಂದರೆ ದಾಟಿದ ಆನಂದದಲ್ಲಿಯೂ ಬರುತ್ತವೆ. ಪುರಂದರದಾಸರಂತೂ 'ಥೂ' ವರ್ಣವನ್ನು ಜಿಗುಪ್ಸೆಯ ಶಬ್ದದಂತೇ ಉಪಯೋಗಿಸಿದ್ದನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು:—

> "ಥೂ ನಿನ ಮಾರಿಮ್ಯಾಲ ಟೊಣ್ಯಾ
> ಛೀ ಥೂ ಮಾರೀಮ್ಯಾಲ್" — ಇತ್ಯಾದಿ.

ಒಂದು ವಿಷಯದ ಬಗ್ಗೆ ಜಿಗುಪ್ಸೆಪಟ್ಟುಕೊಂಡು ಮನುಷ್ಯನು ಅದನ್ನು ಹೀಯಾಳಿಸಲು ಉಗುಳುವಾಗ ಮಾಡುವ ಸ್ವರವೇ 'ಥೂ,' ಅದೇ ನಂತರ ಸಾಂಕೇತಿಕವಾಗಿ ಜಿಗುಪ್ಸಾರ್ಥದಲ್ಲಿ ಬಂದಿತು. ಹೀಗೇ, ಕೋಶಗಳು ಬೆಳೆಯುತ್ತಿವೆಯೆಂದು ಈ ಪಂಡಿತರ ಅಭಿಪ್ರಾಯ. ಅಂಬಿಕಾತನಯದತ್ತರು ಬರೆದ 'ಹೂ' ಎಂಬ ಕವಿತೆಯಲ್ಲಿಯ ಸುಂದರ ಸನ್ನಿವೇಶವನ್ನು ನೆನೆದಾಗ ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲೂ ಹೀಗೆ ಶಬ್ದಗಳು ಹುಟ್ಟಿರಬಹುದೇ ಎಂದು ಊಹಿಸಲು ಸಾಧ್ಯವಿದೆ.

ಬ್ರಹ್ಮನ ಮನಸ್ಸಿನಲ್ಲಿ ಮೊಳೆತ 'ಹೂ' ಎಂಬ ಭಾವವೇ ಅವರ ಪ್ರಕಾರ—

ನೆಲದ ಬಸಿರಲಿ ಮೊಳೆದು
....
ಮುಂಗಾರ ಮಳೆಗೆದ್ದು
ಗಿಡಬಳ್ಳಿಗಳ ಕೊನೆಗೆ ರೂಪವನೆ ತಳೆದು–
ನನೆಯಾಗಿ, ಮೊನೆಯಾಗಿ,
ಮುಗುಳಾಗಿ ಅರಳಾಗಿ,
'ಪುಃ' ಎಂದು ಬಿಟ್ಟುಸಿರೆ ತಾನೆ ಹೆಸರಾಯ್ತು

ಮೂರನೆಯ ತತ್ವವೆಂದರೆ "Ding-dong theory" ಎಂಬುದು. ಇದನ್ನು ಪ್ರತಿಪಾದಿಸಿದವರು ಮ್ಯಾಕ್ಸ್ ಮುಲ್ಲರ್ ಪಂಡಿತರು. ಇವರ ಪ್ರಕಾರ, ಪ್ರಪಂಚದ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಒಂದು 'ನಾದ'ವಿದ್ದು, ಮಾತಾಡುವ ಮನುಷ್ಯನ ಆತ್ಮವು ಈ 'ನಾದ'ಕ್ಕೆ ಅಭಿವ್ಯಕ್ತಿ ಕೊಡುವುದೇ ಭಾಷೆ. ಈ ರೀತಿಯ ನಿಗೂಢ (Mystic) ತತ್ವವನ್ನು ಸ್ವತಃ ಮ್ಯಾಕ್ಸ್ ಮುಲ್ಲರರೇ ಆಮೇಲೆ ಬಿಟ್ಟುಬಿಟ್ಟದ್ದರಿಂದ ಅದರ ವಿವರವಾದ ಚರ್ಚೆಯನ್ನೇನೂ ನಾವಿಲ್ಲಿ ಮಾಡಬೇಕಾಗಿಲ್ಲ.

ಭಾಷೆಯ ಉಗಮದ ಬಗ್ಗೆ ಇರುವ ನಾಲ್ಕನೆಯ ತತ್ವವೆಂದರೆ—"Yo-he-ho theory" ಎಂಬುದು. ಇದನ್ನು ಪ್ರತಿಪಾದಿಸಿದವರು "Noire" ಎನ್ನುವವರು. ಇವರ ಪ್ರಕಾರ ಮನುಷ್ಯನು ಯಾವುದೇ ಪರಿಶ್ರಮವನ್ನು ಮಾಡುವಾಗ, ಸ್ವಾಭಾವಿಕವಾಗಿಯೇ ಅದರ ಶ್ರಮಪರಿಹಾರವಾಗುವದಕ್ಕಾಗಿ ಉಸಿರನ್ನೂ ಅದರ ಜೊತೆಗೆ ಧ್ವನಿಯನ್ನೂ ಹೊರಗೆ ಬಿಡುತ್ತಿರುತ್ತಾನೆ. ತತ್ಪರಿಣಾಮವಾಗಿ ಈ ರೀತಿ ಮಾಡುವ ಸಪ್ಪಳವೇ ಕಾಲಕ್ರಮೇಣ ಆ ಮಾತಿನ ಕ್ರಿಯೆಯನ್ನು ಸೂಚಿಸುತ್ತದೆ. ಉದಾ: ಕನ್ನಡ ಹೈದ; ಹೊಯ್ಲ; ಇಂಗ್ಲಿಶ್ 'Heave', 'Haul' ಇತ್ಯಾದಿ.

ಆದರೆ ಯೆಸ್ಪರ್ಸನ್ ಮೊದಲಾದ ಆಧುನಿಕ ಭಾಷಾಶಾಸ್ತ್ರಜ್ಞರಿಗೆ ಈ ಯಾವ ತತ್ವಗಳೂ ಅಷ್ಟು ಸಮ್ಮತವಿಲ್ಲ. ಯಾಕಂದರೆ—ಮೊದಲನೆಯದಾಗಿ ಈ ಪ್ರಕಾರ ಹುಟ್ಟಿದ ಶಬ್ದಗಳು ಯಾವದೇ ಭಾಷೆಯ ಕೋಶಗಳಲ್ಲಿ ಇರುವುದು ತೀರ ಕಡಿಮೆ—

> "Each of the three chief theories enables one to explain *parts of language*, but still only parts, and not even the most important parts—the main body of language seems hardly to be touched by any of them."

ಎರಡನೆಯದಾಗಿ, ಶರೀರಶಾಸ್ತ್ರದೃಷ್ಟಿಯಿಂದಲೂ ಈ ರೀತಿ ಶಬ್ದಗಳನ್ನು ನಿರ್ಮಿಸಿಕೊಳ್ಳುವ ವರೆಗೆ ಮನುಷ್ಯನು ತೀರ ಮೂಕನಾಗಿ ಕುಳಿತಿದ್ದನೆಂಬುದೂ ಅವರಿಗೆ ಸಮ್ಮತವಿಲ್ಲ. ಆದ್ದರಿಂದ ಯೆಸ್ಪರ್ಸನ್ ಅವರು ಶಿಶುಗಳ ಭಾಷೆ, ಅನಾಗರಿಕ ಜನಾಂಗಗಳ ಭಾಷೆ ಮತ್ತು ಭಾಷೆಗಳ ಇತಿಹಾಸ ಇವುಗಳ ಮೇಲಿಂದ ಭಾಷೆಯ ಉಗಮವನ್ನು ನಿಷ್ಕರ್ಷಿಸಲು ಯತ್ನಿಸುತ್ತಾರೆ. ಅವರ ಪ್ರಕಾರ ಭಾಷೆ ಎಂದೋ ಬೆಳೆದು ಒಂದು ಕಾಲಕ್ಕೆ ನಿಂತಿತೆಂಬುದು ಸರಿಯಲ್ಲ. ದಿನಾಲು ಭಾಷೆ ಸೃಷ್ಟಿಯನ್ನು ಪಡೆಯುತ್ತಿರುತ್ತದೆ. ಭಾಷೆಯ ಈ ಉಗಮವನ್ನು ನಾವು ಚಿಕ್ಕಮಕ್ಕಳು ಭಾಷೆಯನ್ನು ಕಲಿಯುವುದರಲ್ಲಿ ಕಾಣಬಹುದು. ಚಿಕ್ಕ ಮಗುವು ಯಾವುದೋ ಧ್ವನಿಯನ್ನು ಮಾಡುತ್ತದೆ. ಮೊದಮೊದಲು ಆ ಧ್ವನಿಯ ಅರ್ಥವು ಅದಕ್ಕೇ ಗೊತ್ತಿರುವದಿಲ್ಲ. ಏನೋ

" ಪಪ " ಅನ್ನುತ್ತದೆ. ಸುತ್ತಲಿದ್ದವರೋ ಅಥವಾ ತಾಯಿಯೋ ಯಾರೋ ಹತ್ತಿರದ ಒಂದು ಟೊಪ್ಪಿಗೆಯನ್ನು ಅದರ ಕೈಯಲ್ಲಿ ಕೊಡುತ್ತಾರೆ. ಮತ್ತೊಂದು ಸಲ ಪುನಃ ' ಪಪ ' ಅನ್ನುತ್ತದೆ. ಆವಾಗಲೂ ಟೊಪ್ಪಿಗೆಯನ್ನೇ ಯಾರಾದರೂ ತಂದು ಕೊಟ್ಟರೆ, ಈ ಅನುಭವಗಳ ಸರಪಣಿಯ ಮೂಲಕ, ' ಪಪ ' ಎಂದ ಸಲವೆಲ್ಲ ಟೊಪ್ಪಿಗೆಯೇ ಸಿಗುತ್ತದೆಂದು ಅದಕ್ಕೆ ದೃಢವಾಗುತ್ತದೆ. ಹೀಗಾಗಿ ಈ ಅನುಭವಗಳ ಸರಪಣಿಯ ಮೂಲಕ ಆ ಮಗುವಿನ ಭಾಷಾಕೋಶದಲ್ಲಿ ' ಪಪ ' ಅಂದರೆ ಟೊಪ್ಪಿಗೆಯಾಯಿತು; ' ಮಮ ' " ಮ್ಮಮ್ಮ ", ಅಂದರೆ ಊಟವಾಯಿತು; ' ಆಬು ' ನೀರಾಯಿತು; ಇತ್ಯಾದಿ. ಈ ಒಗ್ಗೆ ಯೆಸ್ಪರ್ಸನ್ ಅವರು ಹೇಳುವದೇನೆಂದರೆ:—

> " Here in the child's first purposeless murmuring, crowing and babbling, we have real nature-sounds; here we may expect to find some clue to the infancy of the language of the race ".

ಅಷ್ಟೇ ಅಲ್ಲದೆ, ಎಷ್ಟೋ ಸಲ ಇಂಥ ಒಂದು ಶಿಶುಭಾಷೆಯೂ ಕೂಡ ಬೆಳೆಯುವದುಂಟು. ಮಲಗಿಸು ಎನ್ನುವ ಅರ್ಥದಲ್ಲಿ ' ಮುಗೋಸ್ ' ಎಂಬುದನ್ನೂ, ಮೋಟಾರು ಎಂಬರ್ಥದಲ್ಲಿ ' ಪಂಪಂ ' ಎಂಬುದನ್ನೂ, ಪಗಡಿ ಎನ್ನುವಲ್ಲಿ ' ಪಡಗಿ ' ಎಂಬುದನ್ನೂ, ' ಮಿಂವ್ ' ಎಂದರೆ ಬೆಕ್ಕು, ' ಅಂಬಾ ' ಎಂದರೆ ಆಕಳು ಎಂಬುದನ್ನೂ ಸೃಷ್ಟಿಸಿಕೊಂಡದ್ದನ್ನು ಕಾಣಬಹುದು.

> " Again we must not neglect the way children have of creating new words never heard before, and often attaching a sense to originally meaningless conglomerations of sounds. "

ಇದರಂತೆಯೇ ಹಿರಿಯರೆಂಬುವರೂ ಕೂಡ ಎಷ್ಟೋ ಸಲ ಹೊರನಾಡಿನಲ್ಲಿದ್ದಾಗ ತಮಗೆ ಗೊತ್ತಿರದ ವಸ್ತುಗಳ ನಿರ್ದೇಶಕ್ಕಾಗಿ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಿಕೊಳ್ಳುವುದೂ ಉಂಟು. ಈ ಬಗ್ಗೆ ಪ್ರಿನ್ಸಿಪಾಲ ವಿ. ಕೃ. ಗೋಕಾಕರವರು ತಮ್ಮ ' ಸಮುದ್ರದಾಚೆ ' ಎಂಬ ಪುಸ್ತಕದಲ್ಲಿ ವಿವರಿಸಿದ ಒಂದು ಘಟನೆಯು ಮನೋಜ್ಞವಾಗಿದೆ. ನಮ್ಮ ಸಮಾಜದಲ್ಲಿ ಯಾವನಾದರೊಬ್ಬನು ವಾಕ್-ಸಾಮರ್ಥ್ಯವುಳ್ಳ ವಾಕ್‌ಶ್ರೀಯುತನಿದ್ದರೆ ಬೇಕಾದ ಹಾಗೆ ಕೋಶಗಳನ್ನು ಬೆಳೆಸಿಕೊಳ್ಳಬಹುದು. ಹಾಗಾದರೆ, ಆ ಘಟನೆಯನ್ನು ಗೋಕಾಕರ ಬಾಯಿಂದಲೇ ಕೇಳೋಣ :—" ಸ್ಟ್ರಾಟ್‌ಫರ್ಡದಲ್ಲಿ ಶೇಕ್ಸಪಿಯರನು ಹುಟ್ಟಿದ ಮನೆಯೆದುರಿಗೆ ಒಂದು ಚಹದಂಗಡಿಯಿದೆ. ಎಲ್ಲ ಕಡೆಗೆ ತಿರುಗಾಡಿ ಬಂದು ಅಲ್ಲಿ ಚಹ ತೆಗೆದುಕೊಂಡೆವು.... ಚಹದೊಡನೆ ರುಚಿಯುಳ್ಳ ಬಿಸ್ಕೀಟಿನಂತಹ ಒಂದು ತಿನಸನ್ನು ಮಾಲಕಳು ತಂದುಕೊಟ್ಟಳು. ಎಲ್ಲರಿಗೂ ಅದರ ಸವಿ ಹತ್ತಿತು. ನಮ್ಮಲ್ಲಿ ಒಬ್ಬರು ಅದನ್ನು ' ಫಜ್ ' ಎಂದು ಕರೆದರು. ಸರಿ; ಎಲ್ಲರೂ ' ಫಜ್ ' ಬೇಕೆಂದು ಹೂಲಿ ಎಬ್ಬಿಸಿದರು. ಒಂದೆರಡು ಸಲ ಅದನ್ನು ತಂದುಕೊಟ್ಟ ಮೇಲೆ "It is not fudge reallv; we call it oat-cake" ಎಂದು ಮಾಲಕಳು ಹೇಳಿದಳು. ನಾವೆಲ್ಲರೂ ಕೂಡಿ ' ಫಜ್ ' ಎಂದು ಹೆಸರಿಟ್ಟವರ ಫಜೀತಿ ಮಾಡಿದೆವು. ಆ ಮಾಲಕಳು ಆ ವಸ್ತು ' ಫಜ್ ' ಅಲ್ಲವೆಂದು ಹೇಳಿದ್ದರ ಮೂಲಕ ಈ ಶಬ್ದ ಗೊತ್ತಾಯಿತು. ಇಲ್ಲವಾದರೆ ಅಲ್ಲಿದ್ದ ನಮ್ಮವರ ಹೊಸ ಭಾಷೆಯಲ್ಲಿ ಅದು ' ಫಜ್ ' ಆಗುತ್ತಿತ್ತು. " ಬಹುಶಃ ಅನಂತರ ನಮ್ಮಲ್ಲಿ ಬಂದ ಗೋಕಾಕರು ನಮಗೆ ಹೇಳದಿದ್ದರೆ ನಾವೂ ಅದೇ ಶಬ್ದವನ್ನು ಉಪಯೋಗಿಸುತ್ತಿದ್ದೆವು.

ಆದ್ದರಿಂದ ಯೆಸ್ಪರ್ಸನ್ ಅವರ ಪ್ರಕಾರ ಆದಿಮಾನವನ ಭಾಷೆಯು ಅನೇಕ ಕಠಿಣ ವರ್ಣಗಳಿಂದ ಕೂಡಿದ್ದು, ಬೇರೆ ಬೇರೆ ಅರ್ಥವಿವರಣೆಗಾಗಿ ಬೇರೆ ಬೇರೆ ಶಬ್ದಗಳನ್ನು ಉಪಯೋಗಿಸದೆ, ಇದ್ದ ಶಬ್ದಗಳಲ್ಲಿಯೇ

ಸ್ವರ ವ್ಯತ್ಯಾಸದ ಮೂಲಕ ಅಭಿವ್ಯಕ್ತಿ ಮಾಡುವಂಥದೂ (ಇಂದಿಗೂ ಅನೇಕ ಆಫ್ರಿಕನ್ ಭಾಷೆಗಳ ಹಾಗೆ), ಸಂಗೀತದ ಹಾಗೆ ಭಾವ ಮತ್ತು ರಾಗಗಳುಳ್ಳದ್ದೂ ಬಹಳ ಉದ್ದುದ್ದವಾದ ಶಬ್ದಗಳುಳ್ಳದ್ದೂ ಆಗಿದೆ.

> "We may perhaps draw the conclusion that primitive language in general was rich in all kinds of difficult sounds."
>
> "......tone plays an important part in many primitive languages";
>
> "......we must therefore, conclude that the speech of uncivilized and primitive man was more passionately agitated than ours; more like music or song":
>
> "........we must imagine primitive language as consisting (chiefly at least) of many long words, full of difficult sounds, and sung rather than spoken."

ಅಷ್ಟೇ ಅಲ್ಲದೆ, ಕೋಶದ ದೃಷ್ಟಿಯಿಂದಲೂ, ಪ್ರತಿಯೊಂದು ಪ್ರಾಚೀನ ಭಾಷೆಯಲ್ಲಿ ವಿಶಿಷ್ಟ ವಸ್ತುಗಳನ್ನು ಸಂಬೋಧಿಸಲು ಶಬ್ದಗಳಿವೆಯೇ ಹೊರತು, ಸಾಮಾನ್ಯಾರ್ಥವನ್ನು ಸೂಚಿಸಲು ಶಬ್ದಗಳಿರಲಿಲ್ಲ. ಉದಾಹರಣೆಗಾಗಿ, ಟಾಸ್ಮಾನಿಯಾದ ಅನಾಗರಿಕರಲ್ಲಿ ಅಂಟಿನ ಗಿಡ, ಹೂವಿನ ಗಿಡ—ಮೊದಲಾಗಿ ಭಿನ್ನ ಭಿನ್ನ ಗಿಡಗಳಿಗೆ ಅನೇಕ ಪ್ರತ್ಯೇಕ ಹೆಸರುಗಳಿದ್ದರೂ, 'ಗಿಡ' ಎನ್ನುವ ಸಾಮಾನ್ಯಾರ್ಥಸೂಚಕವಾದ ಪದವಿಲ್ಲ ವಂತೆ! ಅವರಲ್ಲಿ 'ಕಠಿಣ, ಮೃದು, ತಣ್ಣಗೆ, ಬಿಸಿ, ಉದ್ದ, ದುಂಡ' ಈ ಮೊದಲಾದ ಭಾವವಾಚಕಗಳೂ ಇಲ್ಲವಂತೆ! ಮೋಹಿಕನ್‌ರಲ್ಲಿ ಭಿನ್ನ ಭಿನ್ನ ವಸ್ತುಗಳನ್ನು ಕತ್ತರಿಸಲು ಅರ್ಥ ಹೇಳುವ ಬೇರೆ ಬೇರೆ ಪದ ಗಳಿದ್ದರೂ, 'ಕತ್ತರಿಸು' ಎನ್ನುವ ಸಾಮಾನ್ಯಾರ್ಥವನ್ನು ಸೂಚಿಸುವ ಪದವಿಲ್ಲ. ಕೇಂದ್ರ ಬ್ರೇಝಿಲ್‌ದ Bakaini ಜನರಲ್ಲಿ ಪ್ರತಿಯೊಂದು ವರ್ಗದ ಗಿಳಿಗೂ ಬೇರೆ ಬೇರೆ ಹೆಸರಿದ್ದರೂ 'ಗಿಳಿ' ಎನ್ನುವ ಸಾಮಾನ್ಯ ವಾಚಕವಿಲ್ಲ. ಝೂಲು ಜನರಲ್ಲಿ 'ಕೆಂಪು ಆಕಳ,' 'ಬಿಳಿ ಆಕಳ' ಈ ಮೊದಲಾಗಿ ಬೇರೆ ಬೇರೆ ಶಬ್ದಗಳಿದ್ದು 'ಆಕಳ' ಎನ್ನುವ ಸಾಮಾನ್ಯ ಶಬ್ದವಿಲ್ಲ. ಅಷ್ಟೇ ಏಕೆ, ಇಂದಿಗೂ ಕನ್ನಡದಲ್ಲಿ ಕಂಡುಬರುವ ಒಂದು ಅಂಶವೂ ಕೂಡ ಬಹುಶಃ ಇದೇ ದಾರಿಯನ್ನೇ ತೋರಿಸುತ್ತಿರಬಹುದು. ಉದಾಹರಣೆಗಾಗಿ, ಕನ್ನಡದಲ್ಲಿ Brother ಭ್ರಾತೃ, Sister ಸ್ವಸೃ, ಮೊದಲಾದ ಸಂಬಂಧಗಳನ್ನು ಸೂಚಿಸುವ ಪದಗಳು ಬರಿಯ ಸಂಬಂಧ ಗಳನ್ನು ಸೂಚಿಸುತ್ತವಷ್ಟೇ ಅಲ್ಲದೆ ವಯಸ್ಸನ್ನೂ ಸೂಚಿಸುತ್ತವೆ. ಹೀಗಾಗಿ ಈ ಸಂಬಂಧವನ್ನು ಹೇಳುವಾಗ ಕನ್ನಡದಲ್ಲಿ 'ಅಣ್ಣ' 'ತಮ್ಮ' 'ಅಕ್ಕ' 'ತಂಗಿ' ಮೊದಲಾಗಿ ಆಪ್ತತ್ವ ಮತ್ತು ವಯಸ್ಸು ಎರಡನ್ನೂ ಹೇಳುವ ಶಬ್ದಗಳಿವೆಯಲ್ಲದೆ Brother ಮತ್ತು Sister ಈ ರೀತಿಯಾಗಿ ಸಾಮಾನ್ಯಾರ್ಥವನ್ನು ಸೂಚಿಸುವ ಪದಗಳಿಲ್ಲ. ಆದ್ದರಿಂದ ಯೆಸ್ಪರ್ಸನ್ ಅವರು ಹೇಳುವ 'Many languages have no word for 'brother' but have words for elder brother' or 'younger brother'" ಎನ್ನುವ ಅಭಿಪ್ರಾಯವು ಕನ್ನಡಕ್ಕೂ ಅನ್ವಯಿಸುತ್ತದೆಂದು ಹೇಳಬಹುದು. ಚೆರೋಕಿ (Cherokee) ಭಾಷೆಯಲ್ಲಿ 'ಸ್ವಚ್ಛಮಾಡು' ಎಂದು ಸಾಮಾನ್ಯವಾಚಿಯಿರದೆ, ಯಾವ ಯಾವ ವಸ್ತುಗಳು ಸ್ವಚ್ಛಮಾಡಲ್ಪಟ್ಟಿರುತ್ತವೆಯೋ,ಆ ಆ ರೀತಿ ಶಬ್ದಗಳಿವೆ. ಅಂದರೆ ಚೆರೋಕಿ ಭಾಷೆಯಲ್ಲಿ Kutuwo ಅಂದರೆ 'ನಾನು ನನ್ನನ್ನು ತೊಳೆಯುತ್ತೇನೆ; ಸ್ನಾನಮಾಡುತ್ತೇನೆ'; Kulestula ಅಂದರೆ 'ನನ್ನ ತಲೆಯನ್ನು ತೊಳೆದುಕೊಳ್ಳುತ್ತೇನೆ'; Takasula ಅಂದರೆ 'ನನ್ನ ಕೈ ಇಲ್ಲವೆ ಕಾಲನ್ನು ತೊಳೆದುಕೊಳ್ಳುತ್ತೇನೆ'; Tsejuwu ಅಂದರೆ 'ಕೂಸನ್ನು ಸ್ನಾನಮಾಡಿಸುತ್ತೇನೆ' ಇತ್ಯಾದಿ— ಆದರೆ 'Wash' ತೊಳೆ ಎನ್ನುವ ಅರ್ಥದಲ್ಲಿ ಸಾಮಾನ್ಯ ಪದನೇ ಇಲ್ಲ!

ಅದರಂತೆ ಭಾಷೆಯ ಉಗಮದಲ್ಲಿ ತರ್ಕಸರಣಿಗೆ ಯೋಗ್ಯವಾದ ಪದಗಳಾಗಲಿ, ವಿಚಾರಗಳನ್ನು ಹೇಳುವ ಶಬ್ದಗಳಾಗಲೀ ಇರಲಿಲ್ಲ. ಹೆಚ್ಚಾಗಿ ಭಾವನೆ, ಎನಿಸಿಕೆ, ಆವೇಶ.

ಆದ್ದರಿಂದ ಯೆಸ್ಪರ್ಸನ್ ಅವರ ಪ್ರಕಾರ ಪ್ರಾಚೀನ ಭಾಷೆಯು ಯಾವ ರೀತಿ ಇತ್ತೆಂದರೆ:

"Language, then began with half-musical unanalysed expressions for individual beings and solitary events. Languages composed of, and evolved from, such words and quasi-sentences are clumsy and insufficient instruments of thought, being intricate, capricious and difficult. But from the beginning the tendency has been one of progress, slow fitful progress, but still progress towards greater and greater clearness, regularity, ease and pliancy"

ಆದ್ದರಿಂದ ಭಾಷೆಯು ಯಾವಾಗಲೂ ಮಡುಗಟ್ಟಿ ನಿಂತ ಕೊಳಚಿ ನೀರಿನ ಹಾಗೆ ನಿಂತಿರದೆ ಹರಿಯುತ್ತಿರುವ ನೀರಿನ ಪ್ರವಾಹದ ಹಾಗೆ ನಿತ್ಯಪರಿವರ್ತನಶೀಲವಾಗಿ ಪ್ರಗತಿಸಮ್ಮುಖವಾಗಿದೆ. ಜೀವಿಸುತ್ತಿರುವ ಮನುಷ್ಯನು ಯಾವ ರೀತಿ ಹೊರಗಿನ ಹವೆ ನೀರುಗಳನ್ನು ಬಿಟ್ಟು ಬದುಕಲಾರನೋ ಹಾಗೆಯೇ ಈ ಭಾಷಾವೃಕ್ಷವು ಕೂಡ ತನ್ನ ಸತ್ವವನ್ನು ಬೆಳೆಸಿಕೊಳ್ಳಲು ತಾನೇ ಬೇರು ಬಿಟ್ಟ ನೆಲದ ಕ್ಷಾರವನ್ನೂ, ಹೊರಗಿನ ಕೋಶ ಮತ್ತು ಪ್ರಭಾವಗಳ ಹವೆಯನ್ನೂ ಉಣ್ಣಲೇಬೇಕು. ಮಗುವಿನ ಮೇಲಿನ ಪ್ರೀತಿಯಿಂದ ಅದನ್ನು ಕಬ್ಬಿಣ ಕಟ್ಟಿನಲ್ಲಿ ಇಡಲಾಗದಂತೆ, ಭಾಷೆಯನ್ನು ಕೂಡ ನಿರ್ಬಂಧಿಸಲು ಸಾಧ್ಯವಿಲ್ಲ. ಹೀಗೆ ನಿತ್ಯಪರಿವರ್ತನಶೀಲವಾದ ಭಾಷೆಯು ಈ ರೀತಿ ಬದಲಾಗುವದೇ ಭಾಷೆಯ ಬೆಳವಣಿಗೆ ಇಲ್ಲವೆ ಪ್ರಗತಿ ಎಂದು ಕರೆಯಲ್ಪಡುತ್ತದೆ.

ಹಾಗಾದರೆ, ಭಾಷೆಯಲ್ಲಿಯ ಈ ಬದಲಾವಣೆ—ಬೆಳೆಯುವ ರೀತಿ—ಮತ್ತು ಕಾರಣಗಳೇನು ನೋಡೋಣ.

ನಿರ್ಮಿತವಾದ ಒಂದು ಭಾಷೆಯು ವ್ಯತ್ಯಾಸವನ್ನು ಹೊಂದಲಿಕ್ಕೆ ಪ್ರಾಮುಖ್ಯವಾಗಿ ಎರಡು ಕಾರಣಗಳಿರುತ್ತವೆ. ಒಂದು ಆಂತರಿಕ, ಮತ್ತೊಂದು ಬಾಹ್ಯ.

ಆಂತರಿಕ ಕಾರಣಗಳೆಂದರೆ ಭಾಷೆಯನ್ನು ಉಪಯೋಗಿಸುತ್ತ ಉಪಯೋಗಿಸುತ್ತ ಮನುಷ್ಯನಿಗೆ ತನ್ನ ಸೌಕರ್ಯ, ಸುಭಗತೆ ಮತ್ತು ಸೌಂದರ್ಯಗಳಿಗಾಗಿ ಅಲ್ಲಲ್ಲಿ ವ್ಯತ್ಯಾಸಗಳನ್ನು ಮಾಡಬೇಕೆಂದೆನಿಸುತ್ತದೆ. ಮನುಷ್ಯನ ಪ್ರಾಚೀನ ಭಾಷೆಯು ಯಾವ ರೀತಿ ತುಂಬಾ ತೊಡಕಿನದಾಗಿತ್ತೆಂಬುದನ್ನು ಈ ಮೊದಲೇ ನೋಡಿದ್ದೇವೆ. ಆದುದರಿಂದ ತನ್ನ ಸೌಲಭ್ಯಕ್ಕಾಗಿ ಮನುಷ್ಯನು ಯಾವಾಗಲೂ ಭಾಷೆಯನ್ನು ಪುನಃ ಪುನಃ ಮಾರ್ಪಡಿಸಿಕೊಳ್ಳುತ್ತಿರುತ್ತಾನೆ. ಇವುಗಳಲ್ಲಿ ಮುಖ್ಯವಾದ ಕಾರಣಗಳೆಂದರೆ ಮಾನವಸಹಜವಾದ ಸೌಲಭ್ಯಾಕಾಂಕ್ಷೆ ಮತ್ತು ಸ್ಪಷ್ಟತೆಯ ದೃಷ್ಟಿ. ಈ ರೀತಿಯಾಗಿ 'ಶ್ರೀನಿವಾಸ' ಇದ್ದುದು 'ಶೀನ' ಆಗುತ್ತದೆ; ನಾರಾಯಣ 'ನಾಣಿಯೋ' 'ನಾನಿಯೋ' ಆಗುತ್ತಾನೆ. (ಭಾಷಾ ವ್ಯತ್ಯಾಸದ ಇತರ ಕಾರಣಗಳನ್ನು ನಾಲ್ಕನೆಯ ಪ್ರಕರಣದಲ್ಲಿ ನೋಡುವುದು).

ಇದೂ ಅಲ್ಲದೆ ವ್ಯಕ್ತಿಸಹಜವಾಗಿರುವ ಭಿನ್ನ ಭಿನ್ನ ಶರೀರಸ್ಥಾಯಿಗಳೂ ಭಾಷಾವ್ಯತ್ಯಾಸಕ್ಕೆ ಕಾರಣವಾಗುತ್ತವೆ.

ಆದರೆ, ಇದರಷ್ಟೇ ಅಥವಾ ಇದಕ್ಕೂ ಹೆಚ್ಚು ಮಹತ್ವದ ಕಾರಣಗಳೆಂದರೆ ಬಾಹ್ಯಕಾರಣಗಳು. ಇವನ್ನು ಮೂರು ರೀತಿಯಾಗಿ ವಿಂಗಡಿಸಬಹುದು.

ಯಾವದೇ ಒಂದು ನಾಡು ತೀರ ವಿಸ್ತಾರವಾಗಿದ್ದು, ಅದು ಅನೇಕ ದೊಡ್ಡ ದೊಡ್ಡ ನದಿ ಪರ್ವತಗಳಿಂದ ವಿಭಾಗಿಸಲ್ಪಟ್ಟಿದ್ದರೆ, ಸ್ವಾಭಾವಿಕವಾಗಿಯೇ ಅಲ್ಲಿಯ ಜನರಲ್ಲಿ ಪರಸ್ಪರ ಸಂಪರ್ಕವು ಕಡಿಮೆಯಾಗುತ್ತದೆ. ಹೀಗಾಗಿ, ಪರಸ್ಪರ ಸಂಪರ್ಕಗಳ ಮೂಲಕ ಹೆಚ್ಚಾಗಿ ಒಂದುಗೂಡುತ್ತ ಹೋಗುತ್ತಿರಬೇಕಾದ ಭಾಷೆಯಲ್ಲಿ ವೈಲಕ್ಷಣ್ಯಗಳು ಕಾಣಿಸಿಕೊಳ್ಳಲು ಪ್ರಾರಂಭವಾಗುತ್ತವೆ. ಕನ್ನಡನಾಡು ಕೃಷ್ಣೆ ಗೋದಾವರಿ ಮತ್ತು ಕಾವೇರಿ ಮೊದಲಾದ ನದಿಗಳಿಂದಲೂ, ಸಹ್ಯಾದ್ರಿ ನೀಲಗಿರಿ ಮೊದಲಾದ ಪರ್ವತಸಾಲುಗಳಿಂದಲೂ ಅನೇಕ ಕಡೆಗೆ ವಿಭಾಗಿಸಲ್ಪಟ್ಟಿದ್ದರ ಮೂಲಕ ಇಂಥ ಅನೇಕ ಭಾಷಾವೈಲಕ್ಷಣ್ಯಗಳು ಕಂಡುಕೊಳ್ಳುವುದು ಸ್ವಾಭಾವಿಕವಾಗಿದೆ. ರೈಲುಮಾರ್ಗಗಳ ಅನುಕೂಲತೆ ಇರದ ಪ್ರಾಚೀನ ಕಾಲದಲ್ಲಂತೂ ಈ ವ್ಯತ್ಯಾಸವು ಇದಕ್ಕೂ ಹೆಚ್ಚಾಗಿದ್ದರೆ ಆಶ್ಚರ್ಯವೇನೂ ಇಲ್ಲ.

ಆದರೆ ಈ ಬಾಹ್ಯಕಾರಣಗಳಲ್ಲಿ ಪ್ರಕೃತಿನಿರ್ಮಿತವಾದ ಈ ಪ್ರತಿಬಂಧಗಳಿಗಿಂತ ಎಷ್ಟೋ ಪಾಲು ಹೆಚ್ಚು, ಸ್ವತಃ ಮಾನವನಿರ್ಮಿತವಾದ ರಾಜಕೀಯ ಆಧಿಪತ್ಯಗಳು ಹೆಚ್ಚಿನ ಪ್ರತಿಬಂಧಕಗಳಾಗುತ್ತವೆ. ಕನ್ನಡನಾಡಂತೂ ೧೫ಕ್ಕೆ ಕಡಿಮೆ ಇಲ್ಲದಷ್ಟು ಭಾಗವಾಗಿ ಹಂಚಲ್ಪಟ್ಟಿದ್ದರಿಂದ ಒಂದು ಆಧಿಪತ್ಯದ ಭಾಷೆ ಕನ್ನಡಲಿಪಿಯಲ್ಲೇ ಬರೆಯಲ್ಪಟ್ಟಿದ್ದರೂ ಎಷ್ಟೋ ಸಲ ಮತ್ತೊಂದು ಆಧಿಪತ್ಯದವರಿಗೆ ಅರ್ಥವಾಗುತ್ತಿಲ್ಲ. ಈ ರೀತಿ ಮೈಸೂರಿನ ಅನೇಕ ಪ್ರಯೋಗಗಳು ಧಾರವಾಡದವರಿಗೂ, ಧಾರವಾಡದ ಅನೇಕ ಪ್ರಯೋಗಗಳು ಮೈಸೂರು ಮಂಗಳೂರಿನವರಿಗೂ, ಧಾರವಾಡ ಮೈಸೂರವರ ಪ್ರಯೋಗಗಳು ನೀಲಗಿರಿಯವರಿಗೂ ಅರ್ಥವಾಗದಿರುವದಕ್ಕೂ ಇದೇ ಕಾರಣ. ನಮ್ಮಲ್ಲಿಯ 'ಜಕಾತಿ' ಹೈದರಾಬಾದ ನಿಜಾಮಶಾಹಿಯಲ್ಲಿ 'ಕರೋಡಗಿರಿ'ಯಾಗುತ್ತದೆ. ನಮ್ಮಲ್ಲಿಯ ವ್ಯಾಜ್ಯದ ಭಾಷೆಗೂ ಹೈದರಾಬಾದದ ಭಾಷೆಗೂ ಸಂಬಂಧವೇ ಇಲ್ಲ.

ಇದರಂತೆ ಬಾಹ್ಯಕಾರಣಗಳಲ್ಲಿ ಅನ್ಯಭಾಷಾಸಂಪರ್ಕವೂ ಕೋಶಗಳನ್ನು ಎಷ್ಟೋ ಮಟ್ಟಿಗೆ ಬದಲಿಸುವಲ್ಲಿ ಕಾರಣವಾಗುತ್ತದೆ. ಹೀಗಾಗಿ, ಈ ಆಂತರ ಬಾಹ್ಯಕಾರಣಗಳ ಮೂಲಕ ಭಾಷೆಯು ಯಾವಾಗಲೂ ವ್ಯತ್ಯಾಸವನ್ನು ಹೊಂದುತ್ತಲೇ ಹೋಗುತ್ತಿರುತ್ತದೆ. ಈ ವ್ಯತ್ಯಾಸಗಳು ಒಂದು ಕಾಲಕ್ಕೆ ಅತಿಯಾಗಿ ಪರಸ್ಪರ ಸಂಪರ್ಕವು ತಪ್ಪಿದಾಗ ಉಪಭಾಷೆಗಳಾಗಲೀ ಮಿಶ್ರಭಾಷೆಗಳಾಗಲೀ ಹುಟ್ಟಿಕೊಳ್ಳುತ್ತವೆ. ಎಷ್ಟೋ ಸಲ ಈ ಉಪಭಾಷೆ ಮತ್ತು ಮಿಶ್ರಭಾಷೆಗಳು ತಾಯಿಭಾಷೆಯನ್ನಾಡುವ ಜನಕ್ಕೂ ಕೂಡ ಅರ್ಥವಾಗದಂತಾಗುತ್ತವೆ. ಉದಾ: ತುಳು, ಕೊಡಗು, ನೀಲಗಿರಿ, ಬಡಗ, ಕುರುಂಬ ಇ. ಭಾಷೆಗಳು.

ಈ ರೀತಿ ಭಾರತೇತರ ದೇಶಗಳಲ್ಲಿ ಇಂಗ್ಲಿಷ್ ಭಾಷೆಯ ಪರಿಣಾಮವಾಗಿ ಇಂಥ ಹೊಸ ಭಾಷೆಗಳು ಯಾವ ರೀತಿ ಹುಟ್ಟಿಕೊಂಡಿವೆಯೆಂಬುದನ್ನೂ ಅವುಗಳ ರೀತಿ ಎಂಥದೆಂಬುದನ್ನೂ ಸ್ವಲ್ಪ ನೋಡೋಣ:—

'ಬೀಚ್-ಲಾ ಮಾರ್' ಇಲ್ಲವೆ 'ಬೆಚೆ-ಲೆ ಮಾರ್' ಎಂಬುದು ಇಂಥ ಭಾಷೆಗಳಲ್ಲಿ ಒಂದು. ಇದಕ್ಕೆ ಈ ಹೆಸರು ಏಕೆ ಬಂದಿದೆಯೋ ನಿರ್ದಿಷ್ಟವಾಗಿ ತಿಳಿಯದು. ಈ ಭಾಷೆಯನ್ನು ಪ್ಯಾಸಿಫಿಕ್ ಸಮುದ್ರದ ಪಶ್ಚಿಮ ಕರಾವಳಿಯಲ್ಲಿಯ ಕೂಲಿಕಾರರೆಲ್ಲರೂ ಹೆಚ್ಚುಕಡಿಮೆ ಉಪಯೋಗಿಸುತ್ತಾರೆ. ಈ ಭಾಷೆಯು ಹುಟ್ಟಿಕೊಂಡ ರೀತಿಯೆಂದರೆ ಎಷ್ಟೋ ಶತಮಾನಗಳ ಹಿಂದಿನಿಂದ ಅನೇಕ ಸಾಹಸಿಗಳಾದ ಪಾಶ್ಚಿಮಾತ್ಯರು ಈ ಭಾಗದಲ್ಲಿ ಹೋಗಿ ನೆಲಸಿ ಅಲ್ಲಿ ವಸತಿಗಳನ್ನು ಮಾಡಿದರು. ಅಲ್ಲದೆ, ತಮ್ಮ ತೋಟ-ಪಟ್ಟಿಗಳಲ್ಲಿ

ಕೆಲಸ ಮಾಡಲು ಹೊರಗಿನಿಂದ ಅನೇಕ ಕೂಲಿಕಾರರನ್ನು ಹಿಡಿದು ತಂದರು. ಇದರ ಪರಿಣಾಮವಾಗಿ, ಪರಸ್ಪರ ಭಾಷೆಗಳು ತಿಳಿಯದ ಅನೇಕ ಜನಾಂಗಗಳ ಕೂಲಿಕಾರರ ಸಂಕರವು ಪ್ರಾರಂಭವಾಯಿತು. ಇದರಿಂದ ಆ ಪ್ರದೇಶದ ಮೂಲನಿವಾಸಿಗಳು ಮತ್ತು ಈ ಹೊರಗಿನ ಕೂಲಿಕಾರರು ಕೂಡಿ ಒಂದು ಹೊಸ ಭಾಷೆಯನ್ನೇ ನಿರ್ಮಿಸಿದರು. ಈ ಭಾಷೆಯಲ್ಲಿಯ ಕೋಶವು ಹೆಚ್ಚಾಗಿ ಇಂಗ್ಲಿಷವೇ ಆಗಿದ್ದರೂ ಸ್ವತಃ ಒಬ್ಬ ಇಂಗ್ಲಿಷ್ ಮನುಷ್ಯನಿಗೇ ಈ ಭಾಷೆಯನ್ನು ಸರಿಯಾಗಿ ಮನನ ಮಾಡಿದ ಹೊರತು ಅರ್ಥವಾಗುವಂತಿಲ್ಲ.

ಉದಾಹರಣೆಗೆ ಬೀಚ್–ಲಾ–ಮಾರ್ ಭಾಷೆಯಲ್ಲಿ "ನುಸಿಪೆಪಾ"–'Nusipepa' ಅಂದರೆ, ಪತ್ರ–ಯಾವುದೇ ಲಿಖಿತ ಇಲ್ಲವೆ ಮುದ್ರಿತ ಕಾಗದ. 'ಮೇರಿ' ಎಂದರೆ 'ಸ್ತ್ರೀ'—ಸಾಮಾನ್ಯಾರ್ಥ. ಯಾವಳೇ ಸ್ತ್ರೀ 'ಮೇರಿ' ಎಂದು ಮಾತ್ರ ಕರೆಯಲ್ಪಡುತ್ತಾಳೆ. 'ಬುಲೋ ಪೆನ್ನ' 'Bulo penn'. Blue paintದ ತದ್ಭವ.

ಸ್ವಾಭಾವಿಕವಾಗಿಯೇ, ಈ ಭಾಷೆಯ ಕೋಶವು ತೀರ ಸಣ್ಣದಿದ್ದದರಿಂದ, ಎಷ್ಟೋ ಹೊಸ ವಿಚಾರಗಳನ್ನು ಹೇಳಲು ಅವರು ಇದ್ದ ಶಬ್ದಗಳನ್ನೇ ಉಪಯೋಗಿಸಿ 'ಸಮಾಸ'ಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಎಷ್ಟೋ ಸಲ ಈ ಸಮಾಸಗಳು ಒಂದೊಂದು ಸಾಲು ಸಹಿತ ಆಗಬಹುದು.

ಈ ಭಾಷೆಯಲ್ಲಿ Fellow ಶಬ್ದವು ಸಾವಿರ ಸಲ ಬರುತ್ತಿರುತ್ತದೆ. ಅದರಂತೆಯೇ ಕ್ರಿಯಾಪದ ಮತ್ತು ನಾಮಪದಗಳ ರೀತಿಯೂ ವಿಚಿತ್ರವಾಗಿದೆ.

ಸಂಖ್ಯಾವಾಚಕಗಳಲ್ಲಿ ಹಲವು ಸಲ-ನಮ್ಮ ಕನ್ನಡದ ಐವಿಪ್ಪತ್ತು ಒಂದರ ಹಾಗೆ–'ten fellow ten one fellow" ಅಂದರೆ ಒಂದುನೂರಾ ಒಂದು Fellow ಎನ್ನುವುದು ಬರಿಯ ಪಾದಪೂರಣ ಮಾತ್ರ; ಅದಕ್ಕೆ ವಿಶೇಷ ಅರ್ಥವಿಲ್ಲ. ಹೀಗೇ, 'big fellow tobacco" "big fellow name" ಪ್ರತಿಯೊಂದೂ fellowವೇ! ಹಾಗೇ ಬೆಕ್ಕು ಪುಸ್ ಪುಸ್ ಸಪ್ಪಳ ಮಾಡುತ್ತ ಪ್ರೀತಿ ಮಾಡುವುದೇ ಇಲ್ಲಿ "ಪ್ರೀತಿಸು" ಧಾತುವಿನ ಪದ. "He puss — puss belong this fellow"—ಅಂದರೆ ಅವನು ಈ ಮನುಷ್ಯನನ್ನು ಪ್ರೀತಿಸುತ್ತಾನೆ.

ಬೀಚ್–ಲಾ–ಮಾರ್‌ದ ಪ್ರಯೋಗಪದ್ಧತಿ ಇನ್ನೂ ವಿಚಿತ್ರವಿದೆ. ಈ ಭಾಷೆಯಲ್ಲಿ 'ಕೈ–ಕೈ' (Kai Kai) ಅಂದರೆ ಊಟ. 'ನನಗೆ ಹೊಟ್ಟೆ ಹಸಿದಿದೆ' ಎಂದು ಹೇಳಬೇಕಾದರೆ, ಅವರು "My belly no got kai-kai" ಎಂದು ಹೇಳುವದುಂಟು. "ಪಿಯಾನು" ಎಂದು ಹೇಳಬೇಕಾದರೆ "*big fellow bokus (box) you fight him he cry*" ಅಂದರೆ "ದೊಡ್ಡ ಪೆಟ್ಟಿಗೆ ನೀನು ಯುದ್ಧ ಮಾಡಿದರೆ ಒದರುವುದು"! "ಸ್ತ್ರೀಯು ಗರ್ಭಿಣಿಯಾಗಿದ್ದಾಳೆ" ಎಂದು ಹೇಳಬೇಕಾದರೆ "Woman he got faminil (family) inside"!! "ಅವನು ಬಹಳ ಹೊತ್ತು ಎಚ್ಚರದಿಂದಿದ್ದನು" ಎಂದು ಹೇಳಬೇಕಾದರೆ "He took daylight a long time" ಎಂದು ಹೇಳುವದುಂಟು. 'ಬೋಳು ನೆತ್ತಿಯವ' ಎಂದು ಹೇಳಬೇಕಾದರಂತೂ ಎಲ್ಲ ಕಾವ್ಯ–ಅಲಂಕಾರಗಳೂ ಕೂಡಿಯೇ ಬರುತ್ತವೆ. "grass belong head belong him all he die finish"; ಅಥವಾ "coconut belong him grass no crop". ಗ್ರಾಮ್ಯಇಂಗ್ಲಿಷ್‌ದಲ್ಲಿ coconut ಅಂದರೆ ತಲೆ. ಹಕ್ಕಿಗಳ 'ಪುಚ್ಛ' ಇಲ್ಲವೆ 'ಗರಿ' ಎಂದು ಹೇಳಬೇಕಾದರೆ, 'grass belong pigeon". 'ಪೀಜನ್' ಅಂದರೆ ಯಾವುದೇ ಪಕ್ಷಿ—ಇಂಥದೇ ಎಂದು ನಿರ್ದಿಷ್ಟವಲ್ಲ. ಒಂದು ಸಲ ಒಬ್ಬನಿಗೆ ಕರಗಸ ಬೇಕಾಗಿತ್ತಂತೆ; ಆಗ ಅವನು ತನ್ನ Beech-la-marದಲ್ಲಿ ಕೇಳಿದ ರೀತಿಯೊಂದರೆ "You give me brother belong tomahawk, *he come he*

go". ತೊನೊಹಾಕ್ ಅಂದರೆ ಆಸ್ಟ್ರೇಲಿಯದಲ್ಲಿ ಸಣ್ಣ ಕೊಡಲಿ. ಕರಗಳ—'he come he go'—ಸಣ್ಣ ಕೊಡಲಿಯೇ ಅಲ್ಲವೇ? ಪಟ್ಟಣಕ್ಕೆ ಹೋಗಿ ಬಂದ ಒಬ್ಬ ಆಳುಮನುಷ್ಯನು ತಾನು ನೋಡಿದ ರೈಲುಗಾಡಿಯನ್ನು 'steamer he *walk about along bush*" ಎಂದು ವರ್ಣಿಸಿದನಂತೆ! ಸರ್ವಜ್ಞನ ಎತ್ತುಗತ್ತೆಗಳಿಲ್ಲದ ವರ್ಣನೆ ಇದರ ಮುಂದು ಬರಿಯ ಕಾವ್ಯದ ಸೀಮೆಗೆ ಸೇರಿದ್ದು. ಸರಿ! ಬೀಚ್-ಲಾ-ಮಾರ್‌ದಲ್ಲಿ cover ಅಥವಾ ಪಾಕೀಟಿಗೆ ಏನೆನ್ನುವರು ಗೊತ್ತೋ?—'house belong letter'—ಅದು ಪತ್ರಗಳು ವಾಸಿಸುವ ಮನೆಯೇ ಅಲ್ಲವೇ? ಎಂಥ ಕಾವ್ಯದ ಕಣ್ಣು. ಈ ರೀತಿ ಅಲ್ಲಿಯ ದೇಶೀಯರು ಅದರ ಸರಿಯಾದ ಶಬ್ದ ತಮಗೆ ದೊರಕದಿದ್ದಾಗ ಇಂಥ ಅನೇಕ ಪ್ರಯೋಗಗಳನ್ನು ಮಾಡಿ ತಮ್ಮ ಕೋಶವನ್ನು ಹೆಚ್ಚಿಸಿದ್ದುಂಟು. ಮತ್ತು ಈ ಪ್ರಯೋಗಗಳು ಕೂಡ ಎಲ್ಲರಿಗೂ ಅಲ್ಲಿ ಅರ್ಥವಾಗುತ್ತಿವೆ.

ಬೀಚ್-ಲಾ-ಮಾರ್‌ದಂತೇ 'ಪಿಡ್ಗಿನ್ ಇಂಗ್ಲಿಶ್' 'Pidgin English'. ಪಿಡ್ಗಿನ್ ಇದು ಇಂಗ್ಲಿಷ್ 'Business'ದ ಚೀನೀ ತದ್ಭವ. ಇಂಗ್ಲಿಷ್ ಬಿಝಿನೆಸ್ ಚೀನಿಯಲ್ಲಿ 'ಪಿಡ್ಗಿನ್' ಆಯಿತು. ಈ ಭಾಷೆಯನ್ನು ಚೀನ, ಜಪಾನ ಮತ್ತು ಕ್ಯಾಲಿಫೋರ್ನಿಯಾದಲ್ಲಿಯ ಅನೇಕ ಜನರು ಇಂಗ್ಲಿಷರ ಕೂಡ ಮಾತಾಡುವದಕ್ಕಾಗಿ ಉಪಯೋಗಿಸುತ್ತಾರೆ. ಒಂದು ಭಾಷೆಯು ತರದ ಮೇಲೆ ಮತ್ತೊಂದು ಭಾಷೆಯ ಕಟ್ಟಡವು ನಿಲ್ಲುವಾಗ ಯಾವ ರೂಪವನ್ನು ತೆಗೆದುಕೊಳ್ಳುತ್ತದೆಂಬುವಕ್ಕೆ ಪಿಡ್ಗಿನ್ ಒಳ್ಳೆಯ ದೃಷ್ಟಾಂತ.

ಇದರಲ್ಲಿ 'ನಂಬಾ ಒನ್' 'Lumber one' ಅಂದರೆ ಉತ್ಕೃಷ್ಟ, ಸುಂದರ; 'ನಾನು ರಾಯಭಾರಿಯ ಆಳಾಗಿದ್ದೇನೆ' ಎಂದು ಹೇಳಬೇಕಾದರೆ "My belongy consoo boy". "ನೀನು ಜಾಣನಿದ್ದೀ" ಎಂದು ಹೇಳಬೇಕಾದರೆ, "You belong clever inside" ಎಂದು ಹೇಳುವುದುಂಟು. 'ಮನೆಯಲ್ಲಿ ಇರುತ್ತಾರೆಯೋ?' ಎನ್ನುವದರ ಉತ್ತರ ಇಂಥ ಭಾಷೆಗಳಲ್ಲಿ ವಿಚಿತ್ರವಾಗಿರುತ್ತದೆ. "Massa (Master) live?" ಇದರ ಉತ್ತರ—'he no live' ಅಥವಾ 'he live for hup (upstairs)!' ಮೂರು ಸ್ತಂಭಗಳುಳ್ಳ ಉಗಿಹಡಗವನ್ನು ಪಿಡ್ಗಿನ್‌ದಲ್ಲಿ ವಿವರಿಸುವ ರೀತಿಯೆಂದರೆ: "Thlee (three) piece bamboo, two piece puff-puff, walk-along inside, none see". ಪಿಡ್ಗಿನ್‌ದಲ್ಲಿ walk along ಅಂದರೆ ಎಂಜಿನ್ನು. side ಅಂದರೆ ಭಾಗ, ಸ್ಥಳ.

ಆದ್ದರಿಂದ ಈ ರೀತಿ ಅನ್ಯಭಾಷಾ ವರ್ಗಗಳ ಪ್ರಭಾವವಾಗಿ, ಇಲ್ಲವೆ ಅತಿಯಾದ ಅನುಕರಣೆಯ ಮೂಲಕ, ಮೂಲದ ಭಾಷೆಯ ಸ್ವರೂಪವು ಕೂಡ ಬದಲಿಸಿ ಯಾವ ರೀತಿ ಒಂದು ಹೊಸದಾದ ಭಾಷಾರೂಪವೇ ಪ್ರಾರಂಭವಾಗುತ್ತದೆಂಬುದಕ್ಕೆ ಮೇಲೆ ವಿವರಿಸಿದ ಪಿಡ್ಗಿನ್, ಬೀಚ್-ಲಾ-ಮಾರ್‌ಗಳಲ್ಲದೆ ಚಿನೋಕ ಮೊದಲಾದ ಇನ್ನೂ ಉಳಿದ ಭಾಷೆಗಳನ್ನೂ ಸೇರಿಸಬಹುದು. ಸ್ವಾಭಾವಿಕವಾಗಿಯೇ ಇಂಥ ಭಾಷೆಗಳಲ್ಲಿ ತಪ್ಪು ಉಚ್ಚಾರಗಳು, ವ್ಯಾಕರಣವನ್ನು ಆದಷ್ಟು ಸರಳವಾಗಿ ಮಾಡಿಕೊಳ್ಳುವ ಹವಣಿಕೆ, ಕೋಶದ ವಿರಲತೆ ಮೊದಲಾದವುಗಳು ಕಂಡುಬರುತ್ತವೆ.

ನಮ್ಮ ಕನ್ನಡ ಭಾಷೆಯಲ್ಲೂ ನಾವು ಇಂಥ ವ್ಯತ್ಯಾಸ-ವೈಪರೀತ್ಯವನ್ನು ಗುರುತಿಸದೆ ಇಲ್ಲ. ಕನ್ನಡದಲ್ಲಿ ಬರುವ ದಕ್ಷಿಣೋತ್ತರ ಮಾರ್ಗಗಳು ಈ ರೀತಿ ಒಂದು ಭಾಷೆಯ ಜನ ಮತ್ತೊಂದು ಭಾಷೆಯನ್ನು ಕಲಿಯಲು ಪ್ರಾರಂಭಿಸಿದಾಗ ಉಂಟಾದ ರೂಪಗಳೆಂದು ಹೇಳಲು ಬಾರದಿದ್ದರೂ, ಈ ರೀತಿ ಒಂದುಗೂಡಿಕೆ ಮತ್ತು ಸಂಪರ್ಕಗಳಿಲ್ಲದೆ ವೈಪರೀತ್ಯಗಳು ಹಾಗೆಯೇ ಸಾಗಿ ಬಂದಿದ್ದರೆ ಭಾಷೆ ಯಾವ ಸ್ವರೂಪವನ್ನು ಪಡೆಯಬಹುದಾಗಿತ್ತೆಂಬುದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಹಾಗಾದರೆ, ಕನ್ನಡದಲ್ಲಿ ಈ ದಕ್ಷಿಣೋತ್ತರ ಮಾರ್ಗ

ಎಂದರೇನು? ಇದರ ರೀತಿ ಮತ್ತು ಕಾರಣಗಳೇನು? ಇಂದಿಗೂ ಇದರ ಅವಶೇಷಗಳೇನಾದರೂ ನಮ್ಮ ಭಾಷೆಯಲ್ಲಿ ಕಂಡುಬರುತ್ತಿವೆಯೋ ನೋಡೋಣ:—

ಉತ್ತರ ದಕ್ಷಿಣ ಮಾರ್ಗ: ಚರಿತ್ರೆ:—ಕನ್ನಡದಲ್ಲಿ ಉತ್ತರ ದಕ್ಷಿಣ ಮಾರ್ಗಗಳಿವೆಯೆಂಬುದನ್ನೂ ಮತ್ತು ಅವುಗಳ ಸ್ಪಷ್ಟವಾದ ಉದಾಹರಣೆಗಳನ್ನೂ ಮೊಟ್ಟಮೊದಲಿಗೆ ಹೇಳಿದವನೆಂದರೆ ಕವಿರಾಜಮಾರ್ಗಕಾರ (ಕ್ರಿ. ಶ. ೯). ಅವನ ನಂತರ ಬಂದ 'ಶಬ್ದಾನುಶಾಸನ ನಿಜೇಷ್ಟಸಿದ್ಧಿ'ಗಳಿದ್ದ ಕೇಶಿರಾಜನು ಕೂಡ, ತನ್ನ ಕಾಲದಲ್ಲಿ ಮಾರ್ಪಡುತ್ತಿದ್ದ ಕನ್ನಡದ ಬಗ್ಗೆ ಅನೇಕ ಮಾತುಗಳನ್ನು ಹೇಳಿದ್ದರೂ, ಈ ಉತ್ತರ ದಕ್ಷಿಣ ಮಾರ್ಗಗಳ ಬಗ್ಗೆ ಚಕಾರ ಶಬ್ದವನ್ನು ಕೂಡ ಎತ್ತಿಲ್ಲ.

ಹೀಗಾಗಿ ಹಲವು ವಿಮರ್ಶಕರ ಪ್ರಕಾರ ಈ ರೀತಿಯ ವಿಭಜನೆ ಸ್ವಕಪೋಲಕಲ್ಪಿತವೆಂದೂ, ಮತ್ತು ಕವಿರಾಜಮಾರ್ಗಕಾರನು ಹೇಳಿದ ದೃಷ್ಟಾಂತಗಳೆಲ್ಲ ದಂಡಿಯ ಕಾವ್ಯಾದರ್ಶಕ್ಕೆ ಸಂಬಂಧಪಟ್ಟವೆಂದೂ ಹೇಳುತ್ತಾರೆ.

ಕವಿರಾಜಮಾರ್ಗಕಾರನ ಪ್ರಕಾರ ಹಲಕೆಲವು ಶಬ್ದ ಮತ್ತು ವ್ಯಾಕರಣ ರೂಪಗಳು ಈ ಎರಡೂ ಮಾರ್ಗದ ವೈಶಿಷ್ಟ್ಯ. ಉದಾಹರಣೆಗೆ—ನೋಡುರ್ವೆ, ಬೇಡುರ್ವೆ ಎಂಬುದು ಉತ್ತರಮಾರ್ಗವಾಚಕ. ನೋಟ್ಪ್ಪೆ, ಬೇಟ್ಪ್ಪೆ ಎಂಬುದು ದಕ್ಷಿಣಮಾರ್ಗವಾಚಕ. ಆದರೆ, ಇದರಂತೆ ಸೂಡುರ್ವೆ ಎಂದಲ್ಲದೆ, ಸೂಟ್ಪ್ಪೆ ಎಂದಾಗಲೀ, ಕೂಡುರ್ವೆ ಎಂದಲ್ಲದೆ ಕೂಟ್ಪ್ಪೆ ಎಂದಾಗಲೀ, ಕಾಡುರ್ವೆ ಎಂದಲ್ಲದೆ ಕಾಟ್ಪ್ಪೆ ಎಂದಾಗಲೀ, ತೋಡುರ್ವೆ ಎಂದಲ್ಲದೆ ತೋಟ್ಪ್ಪೆ ಎಂದಾಗಲೀ ಹೇಳಕೂಡದು.

ಇದರಂತೆ ಬರಿಸುರ್ವೆ, ಇರಿಸುರ್ವೆ, ತರಿಸುರ್ವೆ ಎಂಬುದು ದಕ್ಷಿಣಮಾರ್ಗವಾಚಕ; ಬರಿರ್ಪೆ, ಇರಿರ್ಪೆ, ತರಿರ್ಪೆ ಎಂಬುದು ಉತ್ತರಮಾರ್ಗವಾಚಕ; ಬರಿಪ್ಪೆ, ಇರಿಪ್ಪೆ, ತರಿಪ್ಪೆ ಎಂಬುದು ಉತ್ತರೋತ್ತರ ಮಾರ್ಗವಾಚಕ. ಆದರೆ ಇದರಂತೆಯೇ, ಪರಸುರ್ವೆ ಎಂದಲ್ಲದೆ ಪರರ್ಪೆ ಎಂದಾಗಲೀ, ಬೆರಸುರ್ವೆ ಎಂದಲ್ಲದೆ ಬೆರರ್ಪೆ ಎಂದಾಗಲೀ ಹೇಳಕೂಡದು. ಸರ್ವನಾಮಗಳಲ್ಲಿ ನಾನ್, ನಾಮ್, ಉತ್ತರಮಾರ್ಗದವು; ಆನ್, ಆಮ್, ದಕ್ಷಿಣಮಾರ್ಗದವು.

ಈ ರೀತಿ ಮಾರ್ಗಭೇದಗಳುಂಟೆಂದು ಒಪ್ಪಿದ ಅನೇಕ ವಿಮರ್ಶಕರು ಇವಕ್ಕೆ ಅನ್ಯಭಾಷಾ ಸಂಪರ್ಕವೇ ಕಾರಣವೆಂದು ಹೇಳುತ್ತಾರೆ. ದಕ್ಷಿಣಮಾರ್ಗಕ್ಕೆ ತಮಿಳು ಹತ್ತಿರದಲ್ಲಿದ್ದುದರಿಂದಲೂ ಮತ್ತು ತಮಿಳಿನಲ್ಲಿ 'ಟ'ಕಾರವಿದ್ದು ಶಬ್ದಗಳು ವ್ಯಂಜನಾಂತವಾಗಿರಲು ಸಾಧ್ಯವಿದ್ದುದರಿಂದಲೂ, ಅಲ್ಲಿಯ ರೂಪಗಳೆಲ್ಲ ಈ 'ಟ'ಕಾರವನ್ನೊಳಗೊಂಡವೆಂದು ಅವರ ಅಭಿಪ್ರಾಯ. ಅಂದರೆ, ನೋಡು ಧಾತುವಿಗೆ, ಕಾಲಸೂಚಕ 'ಪ' ಮತ್ತು ಆಖ್ಯಾತಪ್ರತ್ಯಯ ಎನ್ ಹತ್ತಿ, ತಮಿಳಿನ ರೀತಿಯಲ್ಲಿ ನೋಡು+ವ+ಎನ್=ನೋಟ್+ಪ+ಎನ್= ನೋಟ್ಪೆನ್; ನೋಟ್ಪೆನ್ — ಸಿದ್ಧವಾಯಿತೆಂದು ಅವರ ಮತ. ಆದರೆ ಉತ್ತರಮಾರ್ಗಕ್ಕೆ ತೆಲುಗು ಸಮೀಪದಲ್ಲಿದ್ದು, ತೆಲುಗು ಶಬ್ದಗಳೆಲ್ಲ ಸ್ವರಾಂತವಾಗಿದ್ದರ ಮೂಲಕ ಅಲ್ಲಿ ಈ ರೀತಿ ರೂಪಗಳಾಗಲಿಲ್ಲ. ಉದಾ:—ನೋಡು+ವ+ಎನ್=ನೋಡುವೆನ್. ಹಾಗೆಯೇ, ನಾನು ಸರ್ವನಾಮ ತೆಲುಗಿನಲ್ಲಿದೆ; ಆಣ್ ತಮಿಳಿನಲ್ಲಿದೆ.

ಆದರೆ ಮೇಲೆ ವಿವರಿಸಿದ ಮತ್ತೊಂದು ಪಂಗಡವು ಈ ರೀತಿ ಮಾರ್ಗಭೇದಗಳನ್ನೇ ಒಪ್ಪುವದಿಲ್ಲ. ಯಾಕಂದರೆ, ಅವರ ಪ್ರಕಾರ ಕವಿರಾಜಮಾರ್ಗ ಗ್ರಂಥವಾದ ಒಂದು ಶತಮಾನದಲ್ಲೇ ಹುಟ್ಟಿದ ಅನೇಕ

ಗ್ರಂಥಗಳಲ್ಲಿ ಪ್ರತ್ಯಕ್ಷವಾಗಿ ಈ ಭೇದಗಳು ಕಂಡುಬರುತ್ತಿಲ್ಲ. ೧೦ನೆಯ ಶತಮಾನದ ಪಂಪನಲ್ಲಿ ಮಾಪ್ಪಿ, ನೋಪ್ಪಿ, ಬೇಪ್ಪಿ ರೂಪಗಳು ದೊರಕುತ್ತವೆ.

ಮೇಲಿನ ವಿವರಣೆಯ ಪ್ರಕಾರ ಉತ್ತರ ಕರ್ನಾಟಕದ ಪಂಪ ದಕ್ಷಿಣಮಾರ್ಗಕ್ಕೆ ಸೇರಬೇಕಾಯಿತು! ಆದಿಪುರಾಣದಲ್ಲಿ ಉತ್ತರೋತ್ತರಮಾರ್ಗದ ಶೋಕಿಪ್ಪ ರೂಪವಿದೆ. ಹಾಗಿದ್ದಲ್ಲಿ ಪಂಪನ ರೀತಿ ದಕ್ಷಿಣ ಮಾರ್ಗದ್ದೋ, ಇಲ್ಲವೆ ಉತ್ತರೋತ್ತರಮಾರ್ಗದ್ದೋ? ಅಷ್ಟೇ ಅಲ್ಲದೆ ಶಿವಮೊಗ್ಗೆಯ ಶಾಸನವೊಂದರಲ್ಲಿ 'ಪುರುಡಿಪ್ಪ' ಎಂಬ ರೂಪವು ಬರುತ್ತದೆ. ಅಂದಾಕ್ಷಣಕ್ಕೆ ದಕ್ಷಿಣದ ಶಿವಮೊಗ್ಗೆ ಉತ್ತರೋತ್ತರಮಾರ್ಗಕ್ಕೆ ಸೇರಬೇಕಾಯಿತು. ವಿಜಯಪುರದ ಸುಪ್ರಸಿದ್ಧ ಕವಿಯಾಗಿದ್ದ ನಾಗಚಂದ್ರನ ಪಂಪರಾಮಾಯಣದ ಮೊದಲನೆಯ ಎರಡು ಪದ್ಯಗಳಲ್ಲೇ 'ನಮಗೆ' 'ಎನ್ಮೊಳ್' ಎಂಬ ಎರಡೂ ರೂಪಗಳಿವೆ. ಆದ್ದರಿಂದ ಈ ಮಾರ್ಗಗಳಿದ್ದುದೇ ಸುಳ್ಳು. ಕವಿರಾಜಮಾರ್ಗಕಾರನು ಕಾವ್ಯಾದರ್ಶಾದಿಗಳಿಗೆ ಹೇಳಿದ ಲಕ್ಷ್ಯಗಳನ್ನೇ ನಾವು ತಪ್ಪಾಗಿ ತಿಳಿದುಕೊಳ್ಳುತ್ತೇವೆ ಎಂದು ಇವರ ಅಭಿಪ್ರಾಯ.

ಸಿದ್ಧಾಂತ :—ಹಾಗಾದರೆ ಈ ಚರ್ಚೆಯ ಸಿದ್ಧಾಂತವೇನು? ನೃಪತುಂಗನು ಹೇಳುವ ನಿರ್ದಿಷ್ಟ ವಿವರಣೆಯ ಮೇಲಿಂದಲೂ, ಪ್ರಪಂಚದ ಇತರ ಭಾಷೆಗಳ ಇತಿಹಾಸದ ಅವಲೋಕನದಿಂದಲೂ, ಮತ್ತು ಇಂದಿಗೂ ಸ್ವತಃ ಕನ್ನಡಭಾಷೆಯಲ್ಲಿಯೇ ಕಂಡುಬರುತ್ತಿರುವ ಪ್ರಾದೇಶಿಕ ವಿಕ್ಷಿಪ್ತತೆಗಳ ಮೂಲಕವೂ ಈ ರೀತಿ ಒಂದು ಕಾಲಕ್ಕೆ ಕನ್ನಡದಲ್ಲಿ ಉತ್ತರ ಮತ್ತು ದಕ್ಷಿಣಮಾರ್ಗಗಳೆಂಬುವು ಇದ್ದುವೆಂಬುದನ್ನು ನಾವು ಒಪ್ಪಲೇ ಬೇಕು. ಅಂದಿನ ಕನ್ನಡದಂತೆಯೇ ಹದಿನಾಲ್ಕನೆಯ ಶತಮಾನದ ಇಂಗ್ಲಿಷವು ಸಹ ಯಾವ ರೀತಿ ಅನೇಕ ವಿಧವಾಗಿದ್ದಿತೆಂಬುದನ್ನು ಹೆಚ್ಚುಕಡಿಮೆ ಇದೇ ರೀತಿಯಲ್ಲೇ L. P. Smith ಅವರು ಈ ರೀತಿ ವಿವರಿಸುತ್ತಾರೆ:—

> "The old dialects of English diverged until the inhabitants of each part of the country could hardly understand each other. The dialects of this period can roughly be divided into *three* parts, — Southern dialect, Midland, and the Northern from Humber to Aberdeen."

ಇದೂ ಹೋಗಲಿ; ಇಂದಿನ ಕನ್ನಡದ ಭಾಷಾವೈಚಿತ್ರ್ಯಗಳನ್ನು ನೋಡಿದವರೆಯೇ ಈ ದೇಸಿ ಮತ್ತು ಪ್ರಯೋಗಗಳ ಅನಂತ ವಿಧತೆಯು ಕಂಡುಬರದಿರದು. ಸ್ಪಷ್ಟವಾಗಿ ಕಂಡುಬರುವ ಮೈಸೂರು ಧಾರವಾಡ ಮಂಗಳೂರು ಕನ್ನಡಗಳನ್ನು ನಾವೀಗ ಬದಿಗಿರಿಸಿದರೂ, ಹೈದರಾಬಾದದ ಕನ್ನಡದ ರೀತಿಯೇ ಬೇರೆಯಾಗಿದೆ. ಗಡಿನಾಡಿನಲ್ಲಿಯ ಕನ್ನಡವಂತೂ ಆ ಆ ಪ್ರದೇಶಗಳ ವಿದೇಶೀಯ ಪ್ರಭಾವಲಯಕ್ಕೆ ಒಳಗಾಗಿದೆ. ಶೇಡಬಾಳ ತೇರದಾಳಗಳಂಥ ಗಡಿನಾಡಿನ ಜೈನಮತೀಯರ ಕನ್ನಡದಲ್ಲಿ ನೆರೆಹೊರೆಯ ಮರಾಠಿಯ ಪ್ರಭಾವವನ್ನೂ, ಮೊದಲಿನ ತಾಯ್ನುಡಿಯಾದ ಕನ್ನಡದ ಅನೇಕ ಪ್ರಾಚೀನ ರೂಪಗಳನ್ನೂ ಕಾಣಬಹುದಾಗಿದೆ.

ಉದಾ:—ಪಾತೂಬಿ ಭೈಂದಾಳು; ಸಾತೂಬಿ ಭೈಂಧಾಳು; ಜೋಳದಾಗಿನ ಅಕ್ಕೂಬಿ ಭೈಂದಾಳು—ಎಂಬ ವಾಕ್ಯದಲ್ಲಿಯ 'ಬಿ' ಎಂಬುದು ಅನ್ಯಭಾಷಾಸಂಪರ್ಕವನ್ನೂ, 'ಜೋಳ' 'ಭೈಂದಾಳು' ಎನ್ನುವ ಪದಗಳು ಪ್ರಾಚೀನ ಕನ್ನಡದ ರೂಪ ಮತ್ತು ಭಾಷೆಯ ಬೆಳವಣಿಗೆಯ ರೀತಿಯನ್ನೂ ತೋರುತ್ತಿವೆ. ಇದರಂತೆಯೇ—'ಪಾರ್‌ಗಳೆಲ್ಲಾ ಪಿಂಗಳಾಸ್ ಫೈತಾವು—ಮೆರಣೂಕ್ ಏನ್ ಬರ್‍ಯಾಣೆಲ್ಲ'—ಎಂಬಲ್ಲಿಯ 'ಬಾಲಕಾ'ರ್ಥದ 'ಪಾರ್' ಪ್ರಾಚೀನ ಕನ್ನಡದ ರೂಪ. ಅಷ್ಟೇ ಏಕೆ? ಧಾರವಾಡದ ಹಲವು ಪ್ರಯೋಗ

ಗಳು ವಿಜಾಪುರದವರಿಗೂ, ವಿಜಾಪುರದ ಹಲವು ಪ್ರಯೋಗಗಳು ಧಾರವಾಡದವರಿಗೂ ಅರ್ಥವಾಗುತ್ತಿಲ್ಲವೆಂದು ಹೇಳಿದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಮೈಸೂರಿನವರು ಯಾರಾದರೂ ನಮಗೆ "ಕಾವಲಿಯಲ್ಲಿಯ ಒಳ್ಳೇ ದೋಸೆಯನ್ನು" ತಿನಹೇಳಿದರೆ ನಾವು ರೇಗಿಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ.

ಅದರಂತೆಯೇ, ಧಾರವಾಡದ ಈ ಕೆಳಗಿನ ವಾಕ್ಯವು 'ಆ ಬೆಲ್ಲದ ಕುಳ್ಳು ಮುಚ್ಚುಕಟಗೆಯಿಂದ ಒಡೆದು ಬೀಗ ಹಾಕು'—ಎಂಬುದು ಬಹುಶಃ ವಿಜಾಪುರದವರಿಗೆ ಅರ್ಥವಾಗಲಿಕ್ಕಿಲ್ಲ. ಬೆಲ್ಲದ ಕುಳ್ಳು ಅಂದರೇನು? — **ಮುಚ್ಚು** (ಮಗುಚು) ಕಟಗೆ .... ಅಂದರೆ ....? 'ಬೀಗ' ಬಹುಶಃ ಅರ್ಥವಾಗ ಬಹುದು. ಇಲ್ಲಿ ಧಾರವಾಡದ 'ಕುಳ್ಳು' ಅಂದರೆ 'ಸೆಗಣಿ'ಯದಲ್ಲ; ಬೆಲ್ಲದ ಪೆಂಟೆ; ಮುಚ್ಚುಕಟಗೆ ದಿನದ ವ್ಯವಹಾರದ 'ಖಡಚಿ'-ಇತ್ಯಾದಿ. ಇವರಂತೆಯೇ, ಇನ್ನೂ ಹಲವಾರು ಪ್ರಯೋಗಗಳನ್ನು ಕಾಣಬಹುದು. ಅಂತಲೇ, ೧೯೦೬ರಲ್ಲಿ 'Linguistic Survey of India' ಗ್ರಂಥವನ್ನು ಬರೆದ ಗ್ರೀರ್ಸನ್ ಅವರು ವಿಜಾಪುರ ಭಾಷೆಯನ್ನು ಬೇರೆಯಾಗಿಯೇ ಹೇಳಿ, ಅದರ ಕೆಲವುಟ್ಟಿನ ವೈಶಿಷ್ಟ್ಯಗಳನ್ನೂ ವಿವರಿಸಬೇಕಾಯಿತು. ಇದರ ಬಗ್ಗೆ ಗ್ರೀರ್ಸನ್ ಅವರು ಬರೆಯುವದೇನಂದರೆ:—

> "The Kanarese spoken in Bijapur is locally known as Bijapuri. It does not, however, differ from the standard form of the language to such an extent that it deserves to be considered as a separate dialect. The difference is chiefly one of pronunciation."*

ಹೀಗಾಗಿ, ಡಾ. ಗ್ರೀರ್ಸನ್ ಅವರ ಪ್ರಕಾರ, 'ವಿಜಾಪುರಿ' ಭಾಷೆಯಲ್ಲಿ ಅಂತ್ಯವರ್ಣವು 'ಎ'ಕಾರ ವಾಗಿರದೆ 'ಅ'ಕಾರವಾಗಿರುತ್ತದೆ. ಉದಾ:— ಯಾಕೆ 7 ಯಾಕ; 'an anuswara is some times written before ವ' ಉದಾ:—ಕಿಂವಿ; ಅಂವ—ಇ. 'The plural suffix ಗಳು, however sometimes becomes ಗೋಳು' — ಯಪ್ಪಗೋಳು, ಇ. ಇ. ಈ ಭಾಷೆಯಲ್ಲಿ 'ಇದ್ದಾನೆ' 'ಇದ್ದಾರೆ' ಪದಗಳು 'ಹಾನ' 'ಹಾರ' ಎಂದೂ ಆಗುತ್ತವೆ.

ವ್ಯಾಕರಣ ಇಲ್ಲವೆ ಭಾಷಾ-ಶಾಸ್ತ್ರದ ಅಭ್ಯಾಸದ ಆವಶ್ಯಕತೆ

ಕಲೆ ಮತ್ತು ಶಾಸ್ತ್ರ—ಪ್ರವಾಹ ಮತ್ತು ಅದರ ನಿಯಂತ್ರಣ—ಇವು ಎಂದಿನಿಂದಲೂ ಕೂಡಿ ಬಂದುವೇ. ಹೀಗಾಗಿ ಯಾವುದೇ ಒಂದು ಶಾಸ್ತ್ರದ ವಿಷಯವಾಗಿ ಯಾರೂ ಪೌರೋಹಿತ್ಯ ವಹಿಸುವ ಕಾರಣ ವಿಲ್ಲ. ಆದರೂ, ಭಾಷೆಯ ಶಾಸ್ತ್ರದ ಅಭ್ಯಾಸವು ಇಷ್ಟರ ಮಟ್ಟಿಗೆ ನಮ್ಮ ಉತ್ಸಾಹ ಮತ್ತು ವೇಳೆಗಳನ್ನು ವ್ಯಯಿಸುತ್ತಿದ್ದರೆ, ಇವುಗಳ **ಅಭ್ಯಾಸ** ನಿಜವಾಗಿಯೂ ಆವಶ್ಯಕವೇ?—ಎಂಬುದು ಒಳ್ಳೆಯ ಪ್ರಶ್ನೆ.

ಯಾಕಂದರೆ, ಭಾಷೆಯ **ಶಾಸ್ತ್ರದ** ಜ್ಞಾನವಿಲ್ಲದೆ, ನಾವೆಷ್ಟು ಜನ ಭಾಷೆಯನ್ನು ಯಶಸ್ವಿಯಾಗಿ ಉಪಯೋಗಿಸುತ್ತಿಲ್ಲ? ಈ **ಶಾಸ್ತ್ರ**ಜ್ಞಾನವಿಲ್ಲದೆ, ನಾವೆಲ್ಲ ನಮ್ಮ ಆಯುಷ್ಯದಲ್ಲಿ ಬರಿಯ ಮೂಕರಾಗಿಯೇ ಬಿಟ್ಟದ್ದೇವೆಯೇ? ನಮ್ಮ ನಮ್ಮ ವಿಚಾರಗಳನ್ನು ನಾವು ಅಭಿವ್ಯಕ್ತಗೊಳಿಸುತ್ತಿಲ್ಲವೇ? ಅಷ್ಟೇ ಏಕೆ? ಈ ಮಾತು ಭಾಷೆಯ ಶಾಸ್ತ್ರದಂತೆ ಉಳಿದೆಲ್ಲ ಶಾಸ್ತ್ರಗಳಿಗೂ ಅನ್ವಯಿಸುತ್ತದೆ. ಈಸು ಬಾರದ ಮನುಷ್ಯ ಆಳವಾದ ನೀರಿನಲ್ಲಿಳಿದರೆ,ಬಹುಶಃ ತಿರುಗಿ ಬರಲಾರನೆಂಬುದಕ್ಕೆ ಯಾವ **ತರ್ಕಶಾಸ್ತ್ರದ** ನೆರವೂ ಬೇಡ;ವ್ಯವಹಾರಗಮ್ಯ.

* L. S. I, Vol. IV, P. '81.

ಉಂಡ ಅನ್ನವನ್ನು ಪಚನಮಾಡಿಕೊಳ್ಳಲು ಯಾವ **ಆಹಾರಶಾಸ್ತ್ರದ** ಜ್ಞಾನವೂ ಅವಶ್ಯವಾಗಿ ಬೇಕೇ ಎಂದು ಇಲ್ಲ. ಅಥವಾ ಒಂದು ಆಣೆಯೋ ಅಥವಾ ಎರಡಾಣೆಯೋ ಹಣ ಕೊಟ್ಟರೆ ಒಂದು ಸಿಂಗಲ್ ಚಹ ಸಿಗುತ್ತ ದೆಂಬುದನ್ನು ಅರಿಯಲಿಕ್ಕೆ ಯಾವ **ಅರ್ಥಶಾಸ್ತ್ರಜ್ಞ**ನ ಸಹಾಯವೂ ಬೇಕಿಲ್ಲ. ಅಂದಮೇಲೆ ನಮ್ಮ ವಿಚಾರಗಳ ಅಭಿವ್ಯಕ್ತಿಗಾಗಿ ನಾವು ಭಾಷೆಯನ್ನು ಎಂದಿನಿಂದಲೂ ಉಪಯೋಗಿಸುತ್ತಿರುವಾಗ ಆದೂ ಯಶಸ್ವಿಯಾಗಿ ಉಪಯೋಗಿಸುತ್ತಿರುವಾಗ– ಈ ಶಾಸ್ತ್ರಗಳ ಅಭ್ಯಾಸವಾಗಲೀ ಜ್ಞಾನವಾಗಲೀ ಇಲ್ಲದ ಅಧಿಕಪ್ರಸಂಗ; ಉಪದ್ವ್ಯಾಪ. ವೇಳೆ ಹೋಗದವರು ತಮ್ಮ ಪಾಂಡಿತ್ಯವನ್ನು ತೋರಿಸಲು ನಿರ್ಮಿಸಿಕೊಂಡ ಒಂದು ಇಂದ್ರಜಾಲ.

ನಿಜ; ಈ ಮೇಲಿನ ಅಭಿಪ್ರಾಯದಲ್ಲಿ ಸತ್ಯಾಂಶವಿಲ್ಲದೇ ಇಲ್ಲ. ನಮ್ಮ ವಿಚಾರಗಳ ಅಭಿವ್ಯಕ್ತಿಗಾಗಿ, ನಾವು ಎಂದಿನಿಂದಲೂ ಭಾಷೆಯನ್ನು ಉಪಯೋಗಿಸುತ್ತಿದ್ದೇವೆ—ಅದೂ ಯಶಸ್ವಿಯಾಗಿ ಉಪಯೋಗಿಸುತ್ತಿದ್ದೇವೆ. ನಾವು ಎಂದೂ ಸೋತು ನಿಂತಿಲ್ಲ. ಅಂದಮೇಲೆ ಈ ಶಾಸ್ತ್ರದ ಅಭ್ಯಾಸದ ಆವಶ್ಯಕತೆಯೇನು? ಸುಪ್ರಸಿದ್ಧ ಫ್ರೆಂಚ್ ಲೇಖಕರಾದ Voltaire ಅವರಂತೂ ಭಾಷಾಶಾಸ್ತ್ರಜ್ಞರೆಂದರೆ "Who care little for consonants and still less for vowels" ಎಂದು ಚೇಷ್ಟೆ ಮಾಡಿದರು.

ಹೌದು; ಆದರೆ ಒಂದು ಮಾತು. ನಿಸರ್ಗದತ್ತವಾದ ವಾಕ್-ಸಾಮರ್ಥ್ಯವು ಹಲವರಲ್ಲಿರ ಬಹುದಾದರೂ, ನಿಜವಾಗಿಯೂ ನಮ್ಮಲ್ಲಿ ಎಷ್ಟು ಜನ **ಸರಿಯಾಗಿ** ಭಾಷೆಯನ್ನು ಉಪಯೋಗಿಸುತ್ತಿದ್ದೇವೆ? ಅದೂ ಅಲ್ಲದೆ ಈಸು ಬಾರದ ಮನುಷ್ಯ ಹಾಗೇ ಮುಳುಗಿದಾಗೇನೂ ಯಾವ ತರ್ಕಶಾಸ್ತ್ರವೂ ಬೇಡ; ಆದರೆ ಈಸು ಬಂದ ಮನುಷ್ಯ ಮುಳುಗಿದರೆ ಮಾತ್ರ, ಕಾರಣದ ಶೋಧವಾಗಲೇಬೇಕು. ಆಗ ತರ್ಕಶಾಸ್ತ್ರದ ಮೊರೆ ಇಲ್ಲದೆ ಗತಿ ಇಲ್ಲ. ಉಂಡ ಆಹಾರವನ್ನು ಪಚನಮಾಡಿಕೊಳ್ಳಲು ಆಹಾರಶಾಸ್ತ್ರದ ಆವಶ್ಯಕತೆ ಅಷ್ಟಾಗಿ ಅನಿಸದಿದ್ದರೂ, ಉಂಡ ಆಹಾರ ಅಪಚನವಾಗಹತ್ತಿದಾಗ ಮಾತ್ರ ಆಹಾರಶಾಸ್ತ್ರವೇ ನಮಗೆ ಕೈಕೊಡಬೇಕು. ಒಂದಾಣೆಗೆ ಒಂದು ಸಿಂಗಲ್ ಚಹ ದೊರಕುವವರೆಗೆ ಮಾತ್ರ ಯಾವ ಅರ್ಥಶಾಸ್ತ್ರಜ್ಞನ ನೆರವೂ ಬೇಡ. ಆದರೆ, ಒಂದಾಣೆಯೇಕೆ, ಒಂದು ರೂಪಾಯಿಗೂ ಒಂದು ಸಿಂಗಲ್ ಚಹ ದೊರಕದಿದ್ದಾಗ ಅರ್ಥಶಾಸ್ತ್ರ ಅವಶ್ಯವಾಗಿ ಬೇಕೇಬೇಕು. ಅದೇನು ಅತಿಪ್ರಸರಣವೋ—ಲಾಭವೃತ್ತಿಯ ಅತಿಸಾರವೋ ಎಂಬುದನ್ನು ಆ ಶಾಸ್ತ್ರಜ್ಞನೇ ಕಂಡುಹಿಡಿಯಬೇಕು.... ಹೀಗಾಗಿ, ವ್ಯವಹಾರ ಸರಳವಾಗಿರುವ ವರೆಗೆ ಇಂಥ ಶಾಸ್ತ್ರಗಳ ನೆರವು ಅಷ್ಟಾಗಿ ಎನಿಸದಿದ್ದರೂ, ಸ್ವಲ್ಪ ಯಂತ್ರ ಎಲ್ಲಿಯಾದರೂ ಮಂದವಾದರೆ, ಇಡೀ ಸಮಾಜವೇ ನಷ್ಟವಾಗ ಬಹುದೆಂಬ ಹೆದರಿಕೆಯ ಸಲುವಾಗಿಯಾದರೂ ಈ ಶಾಸ್ತ್ರಗಳ ಜ್ಞಾನದ ಆವಶ್ಯಕತೆ ತುಂಬಾ ಇದೆ. ನಾನು ಆಡಿದ—ಅಥವಾ ಬರೆದ—ಭಾಷೆ ತಮಗೆ ಸರಿಯಾಗಿ ಅರ್ಥವಾಗದೇ ಏನಾದರೂ ವಿಪರೀತ ವಿಚಾರಗಳನ್ನು ಹುಟ್ಟಿಸುವಂತಿದ್ದರೆ, **ಭಾಷಾಶಾಸ್ತ್ರಜ್ಞನೇ** ಈ ಭಾಷೆಯ ಆರೋಗ್ಯವನ್ನು ಸರಿಪಡಿಸಬಲ್ಲನು. ಹೀಗಾಗಿ, ಈ ಶಾಸ್ತ್ರಜ್ಞಾನವು ಭಾಷೆಯ 'ರೋಗರುಜಿನಾದಿಗಳ' ಬಗ್ಗೆ ನಮ್ಮನ್ನು ಜಾಗರೂಕರನ್ನಾಗಿ ಮಾಡಿ ಸಮಾಜದ ಸಾಮೂಹಿಕ ಆರೋಗ್ಯಕ್ಕೆ ಸಹಕಾರಿಯಾಗಿದೆ. ಉದಾಹರಣೆಯಿಂದ ವಿಚಾರವನ್ನು ಸ್ಪಷ್ಟಮಾಡೋಣ — ಈಗ ನಮಗೆ ಹತ್ತಿರವಿದ್ದವರ ಪೈಕಿ ಯಾರಾದರೊಬ್ಬರ ಜ್ಞಾತಿಗಳು ತೀರಿಕೊಂಡಿದ್ದಾರೆಂದು ಗ್ರಹಿಸೋಣ. ಆಗ ಈ ಸಮಾಚಾರದ ವಿಷಯ ಅನೇಕ ವಿಧವಾಗಿ ಕೇಳಬಹುದು.—"ಏನೋ ನಿನ್ನ ತಮ್ಮ ಸತ್ತನಂತೆ?" "ಏನೋ ನಿನ್ನ ತಮ್ಮ ತೀರಿಕೊಂಡರಂತೆ?" "ಏನೋ ನಿನ್ನ ತಮ್ಮ ಒಗೆಸಿದರಂತೆ?" ಇತ್ಯಾದಿ.

ಇಲ್ಲಿ ಪ್ರತಿಯೊಂದು ಪದದ ಅರ್ಥವೂ ಹೆಚ್ಚುಕಡಿಮೆ ಒಂದೇ ಆದರೂ, ಅವುಗಳ ಭಾವ ಎಷ್ಟು ವ್ಯತ್ಯಾಸವನ್ನು ಸೂಚಿಸುತ್ತದೆಂಬುದನ್ನು ಗಮನಿಸಬೇಕು. ಹಾಗೆಯೇ "ನೀವು ಬನ್ನಿ" "ತಾವು ಬರಬೇಕು"

"ತಾವು ದಯಮಾಡಿಸಬೇಕು" ಎಂಬ ಮೊದಲಾದ ಪ್ರಯೋಗಗಳು ಬೇರೆ ಬೇರೆ ಸಂದರ್ಭಗಳನ್ನೇ ಸೂಚಿಸುತ್ತಿರುವುದನ್ನು ಕಾಣುತ್ತೇವೆ.

ಆದ್ದರಿಂದ, ಭಾಷೆಯ ಸರಿಯಾದ ಈ ವಿವರಗಳನ್ನು ಗ್ರಹಿಸಿ, ಅದನ್ನು ತುಂಬಾ ಯಶಸ್ವಿಯಾಗಿ ಉಪಯೋಗಿಸಲು ಭಾಷಾ-ಶಾಸ್ತ್ರದ ಜ್ಞಾನವು ತೀರ ಆವಶ್ಯಕವಾಗಿದೆ.

ಅಷ್ಟೇ ಅಲ್ಲ; ಈ ಶಾಸ್ತ್ರಜ್ಞಾನದ ವಿರುದ್ಧವಾದ ಆಕ್ಷೇಪಣೆ ಕೇವಲ ಇಂದು ನಿನ್ನೆಯದು ಮಾತ್ರವಲ್ಲ. ಇಂದಿನ ಸುಧಾರಕರಕಿಂತ ಸಹಸ್ರಪಟ್ಟು ಒಟಾಗಿ ಹಿಂದಿನವರು ಈ ಪ್ರಶ್ನೆಗಳನ್ನು ಎಂದೋ ಕೇಳಿದ್ದಾರೆ. ಹೊಟ್ಟೆಗೆ ಹಿಟ್ಟಿಲ್ಲದಾಗ ಇಂಥ ಶುಷ್ಕಶಾಸ್ತ್ರದ ಅಭ್ಯಾಸದ ಆವಶ್ಯಕತೆಯೇನು?—ಅದೇನು ಹೊಟ್ಟೆಗೆ ಕೂಳು ತರುತ್ತಿದೆಯೇ?—ಹೊಟ್ಟೆಗೆ ಬಿಡಿಕಾಸು ಸಹ ತರದ ಈ ಶಾಸ್ತ್ರಾಭ್ಯಾಸವು ಅನವಶ್ಯಕ. ಅಂತಲೇ, ಮಾಘ ಕವಿಯು ಹೇಳಿದ್ದೇನೆಂದರೆ:—

ಬುಭುಕ್ಷಿತೈಃ ವ್ಯಾಕರಣಂ ನಭುಜ್ಯತೇ
ಪಿಪಾಸಿತೈಃ ಕಾವ್ಯರಸೋ ನ ಪೀಯತೇ
ನ ವಿದ್ಯಯಾ ಕೇನಚಿದ್‌ಧೃತಂ ಕುಲಂ

ಆದ್ದರಿಂದ,

ಸುವರ್ಣಮೇವ ಆರ್ಜಯ ನಿಷ್ಫಲಾಃ ಕಲಾಃ-॥

ಈ ಅಭಿಪ್ರಾಯವನ್ನೇ ಶ್ರೀ. "ಕಾವ್ಯಾನಂದ" ಪುಣೇಕರ ಅವರು— "ಹಸಿದರೆ **ಶಬ್ದಶಾಸ್ತ್ರವನು** ಭಕ್ಷಿಸರೆ? — ತೃಷಿತರ್ ಸುಕಾವ್ಯದ ರಸವನು ಪಾನಮಾಡಿ ಸಂತೋಷವ ಗೆಯ್ದರೆ? ತರ್ಕಶಾಸ್ತ್ರದಭ್ಯಸನದಿ ಮುಕ್ತರಾಗುವರೆ? — ಕಾಲದ ಜಾಲಕೆ ಸಿಕ್ಕ ಮರ್ತ್ಯರು! **ವಸುವಿರೆ ಸರ್ವಸಾಧ್ಯಂ;** ಅದರಿಂ ಅವನರ್ಜಿಸು ನಿಷ್ಫಲಂ ಕಲಾ—"* ಅಷ್ಟೇ ಏಕೆ? ಈ ಪ್ರಶ್ನೆಯ ಚರ್ಚೆಯು ಏನಿಲ್ಲೆಂದರೂ ಸುಮಾರು ನಾಲ್ಕು ಸಾವಿರ ವರುಷಗಳಿಂದ ನಡೆದುಬಂದದ್ದನ್ನು ನಾವು ನೋಡುತ್ತೇವೆ. ಯಾಕಂದರೆ, ಸುಮಾರು ನಾಲ್ಕು ಸಾವಿರ ವರುಷಗಳ ಹಿಂದೆಯೇ ನಿಧಾನವಾಗಿ ವ್ಯಾಕರಣವು ಅಭ್ಯಾಸಕ್ರಮದಿಂದ ಮಾಯವಾಗುತ್ತಿದ್ದಿತು. ಆ ಕಾಲದಲ್ಲಿ ಪ್ರತಿಯೊಂದು ಶಬ್ದದ ಸ್ಥಾನ, ಕರಣ, ನಾದ, ಅನುಪ್ರದಾನ—ಮೊದಲಾದವುಗಳ ಸಂಸ್ಕಾರವುಳ್ಳ ಬ್ರಾಹ್ಮಣನಿಗೆ ಮಾತ್ರ ವೈದಿಕಶಬ್ದಗಳನ್ನು ಕಲಿಸುತ್ತಿದ್ದರು. ಈ ಶಾಸ್ತ್ರವನ್ನು ಅರಿಯದಿದ್ದವನು ವೇದಕ್ಕೆ ಅನಧಿಕಾರಿ. ಸರಿಯಾಗಿ ವ್ಯಾಕರಣಜ್ಞಾನವಿದ್ದವನೇ ಮಾತ್ರ ವೇದಗಳ ಸಂರಕ್ಷಣೆಯನ್ನು ಮಾಡಬಲ್ಲವನಾದ್ದರಿಂದ, ಪ್ರತಿಯೊಬ್ಬ ಬ್ರಾಹ್ಮಣನ ಅಭ್ಯಾಸಕ್ರಮದಲ್ಲಿ ವ್ಯಾಕರಣಜ್ಞಾನವು ಒಂದು ಆವಶ್ಯಕ ಅಂಶವಾಗಿದ್ದಿತು. ಆದರೆ, ಮೇಲೆ ವಿವರಿಸಿದಂತೆ ಸುಮಾರು ೪,೦೦೦ ವರ್ಷಗಳ ಹಿಂದೆಯೇ ಈ ಕ್ರಮವು ವಿಪರ್ಯಾಸವನ್ನು ಹೊಂದುತ್ತಿರುವುದನ್ನು ಕಾಣುತ್ತೇವೆ.

ಕ್ರಿಸ್ತ ಪೂರ್ವ ಎರಡನೆಯ ಶತಕದಲ್ಲಿದ್ದ ಪತಂಜಲಿ ಮಹರ್ಷಿಗಳು ಈ ಪ್ರಶ್ನೆಯನ್ನು ಅಂದೇ ಎದುರಿಸಿದ್ದಾರೆ. ಪೂರ್ವಪಕ್ಷದವರು "ಕಿಮ್ ಪುನರಿದಮ್ ವ್ಯಾಕರಣಮ್ ಏವ

* ಪ್ರಭಾತ (೧೯೧೪)

ಅಧಿಜಿಗಾಂಸಮಾನೇಭ್ಯಃ ಪ್ರಯೋಜನಮ್ ಅನ್ವಾಖ್ಯಾಯತೇ — ನ ಪುನಃ ಅನ್ಯದ್ ಅಪಿ ಕಿಂಚಿತ್ ? — " (ಅಂದರೆ—" ಏನು ? ಇದು ಬರಿಯ ವ್ಯಾಕರಣವನ್ನು ಮಾತ್ರ ಅಭ್ಯಾಸ ಮಾಡುವವರಿಗೆ ಅದರ ಪ್ರಯೋಜನವನ್ನು ಹೇಳುತ್ತೀರಲ್ಲಾ ? ಇದರಂತೆಯೇ, ಉಳಿದ ಯಾವ ಶಾಸ್ತ್ರಗಳಿಗೂ ಹೇಳುವುದಿಲ್ಲವಲ್ಲ!") ಎಂದು ಕೇಳಿದಾಗ ಆಚಾರ್ಯರು ಈ ಸಮಸ್ಯೆಗೆ ಕೊಟ್ಟ ಉತ್ತರವಿದು :— " (ಸರಿ); ಪುರಾಕಲ್ಪ ಏತದಾಸೀತ್— **ಸಂಸ್ಕಾರೋತ್ತರಕಾಲಮ್ ಬ್ರಾಹ್ಮಣಾಃ ವ್ಯಾಕರಣಂ ಸಮಧೀಯತೇ**—ತೇಭ್ಯಃ ತತ್ರ ಸ್ಥಾನ, ಕರಣ, ನಾದ, ಅನುಪ್ರದಾನಜ್ಞೇಭ್ಯಃ ವೈದಿಕಾಃ ಶಬ್ದಾಃ ಉಪದಿಶ್ಯಂತೇ—ತದ್ **ಅದ್ಯತ್ವೇ ನ ತಥಾ–ವೇದಮ್ ಅಧೀತ್ಯ ತ್ವರಿತೋ ವಕ್ತಾರೋ ಭವಂತಿ—' ವೇದಾಂತೋ ವೈದಿಕಾಃ ಶಬ್ದಾಃ ಸಿದ್ಧಾಃ–ಲೋಕಾತ್ ಚ ಲೌಕಿಕಾಃ – ಅನರ್ಥಕಮ್ ವ್ಯಾಕರಣಮ್ '** ಇತಿ. (ಮೇಲೆ ನಾವು ವಿವರಿಸಿದ ತರ್ಕಸರಣಿಗೆ ಎಷ್ಟು ಹೊಂದುವಂಥ ಮಾತು! ಅಂತಲೇ,) ತೇಭ್ಯಃ **ವಿಪ್ರತಿಪನ್ನ ಬುದ್ಧಿಭ್ಯಃ ಅಧ್ಯೇತೃಭ್ಯಃ ಆಚಾರ್ಯಃ ಇದಮ್ ಶಾಸ್ತ್ರಮ್ ಅನ್ವಾಚಷ್ಟೇ"** "ಏನು! — ವೇದಗಳಿಂದ ವೈದಿಕ ಪದಗಳು ಸಿದ್ಧವಾದವು! ಲೋಕರೂಢಿಯಿಂದ ಲೌಕಿಕ ಶಬ್ದಗಳ ವಿಷಯವು ತಿಳಿಯಿತು! ಅಂದ ಮೇಲೇನು ವ್ಯಾಕರಣಜ್ಞಾನವು ನಿರರ್ಥಕ" ಎಂದು ಗಳುಹುವ ವಿಪ್ರತಿಪನ್ನಬುದ್ಧಿಯ ಬಟುಗಳ ತಲೆ-ಸಮವಾಗಿರಲೆಂದೇ ಆಚಾರ್ಯರು ಈ ಶಾಸ್ತ್ರವನ್ನು ಹೇಳಿದರು.

ಪತಂಜಲಿ ಮಹರ್ಷಿಗಳಂತೂ ವ್ಯಾಕರಣದ ಹದಿನೆಂಟು ಪ್ರಯೋಜನಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಎಲ್ಲವೂ ಇಂದಿನ ಕಾಲದಲ್ಲಿ ಅಷ್ಟೇ ಪ್ರಧಾನವಾಗಿರದಿದ್ದರೂ, ಹಲವಾದರೂ ಇಂದಿನ ವರೆಗೂ ನಡೆದು ಬಂದ ಮಾತುಗಳಾಗಿವೆ.

ಪತಂಜಲಿ ಮಹರ್ಷಿಗಳ ಪ್ರಕಾರ ಯಾವುದೇ ಒಂದು ಪ್ರಯೋಗದ **ಸರಿಯಾದ** ಅರ್ಥವನ್ನು ಗ್ರಹಿಸಬೇಕಾದರೆ, ವ್ಯಾಕರಣದ ಅಭ್ಯಾಸವು ಆವಶ್ಯಕ. ಉದಾಹರಣೆಗೆ, ಪುಣ್ಯಕಾಮಿಗಳಾದ ಯಜಮಾನರು 'ಸ್ಥೂಲಪೃಷತಿ'ಯಾದ ಆಕಳವನ್ನು ದಾನಮಾಡಬೇಕೆಂದು ಯಾಜ್ಞಿಕರು ಹೇಳುತ್ತಾರೆ. ಸ್ಥೂಲ ಅಂದರೆ ದಪ್ಪ, ಪೃಷತಿ ಅಂದರೆ ಕಲೆ. ಸರಿ; ಇದರಲ್ಲಿ ಸಂದೇಹವೆಂದರೆ— "ಸ್ಥೂಲಪೃಷತಿಯಾದ ಆಕಳು" ಎಂದರೇನು ? — ಸ್ಥೂಲಾ ಚ ಪೃಷತೀ ಚ — ಸ್ಥೂಲಪೃಷತೀ — ಅಂದರೆ, **ದಪ್ಪವಾದದ್ದೂ ಮತ್ತು ಕಲೆಯುಳ್ಳದ್ದೂ** ಆದ **ಆಕಳ** ಎಂದು ಅರ್ಥವೋ ಅಥವಾ ?—ಸ್ಥೂಲಾನಿ ಪೃಷಂತಿ ಯಸ್ಯಾಃ ಸಾ ಅಯಮ್ — ಅಂದರೆ ದಪ್ಪವಾದ ಅಂದರೆ ಅಗಲವಾದ ಕಲೆಗಳುಳ್ಳ ಆಕಳು ಎಂಬ ಬಹುವ್ರೀಹಿ ಅರ್ಥವೋ ? ಮೊದಲನೆಯ ಸಂದರ್ಭದಲ್ಲಿ ಕೇವಲ ಆಕಳವು ದಪ್ಪವಿದ್ದು ಅದರ ಮೈಮೇಲೆ ಕೇವಲ ಸಣ್ಣ ಸಣ್ಣ ಕಲೆಗಳಿದ್ದರೂ ನಡೆದು ಹೋಗುತ್ತದೆ. ಆದರೆ, ಎರಡನೆಯ ವಿಗ್ರಹದ ಪ್ರಕಾರ ಆಕಳದ ಮೈಮೇಲೆ ಕಲೆಗಳಿರಬೇಕಷ್ಟೇ ಅಲ್ಲ, ಅವು ಸ್ಥೂಲಪೃಷತಿಯಾಗಿರಬೇಕು! ಅಂದರೆ ಆ ಕಲೆಗಳು ವಿಶಾಲವಾಗಿರಬೇಕು. ಆಕಳು ಬೇಕಾದರೆ ದಪ್ಪವಿರಲಿ ಬಿಡಲಿ. ಈ ರೀತಿ ಸರಿಯಾಗಿ ಅರ್ಥವನ್ನು ಗ್ರಹಿಸದೆ ಮಾಡಿದ ಯಜ್ಞವು ನಿರರ್ಥಕವಾದೀತು! ಇದರ ಸರಿಯಾದ ಅರ್ಥವು ವಾಗ್‌ಯೋಗವನ್ನು ಬಲ್ಲ ವೈಯಾಕರಣಿಗೆ ಮಾತ್ರ ಗೊತ್ತಾಗುತ್ತದೆ. "ತಾಮ್ ನ ಅವೈಯಾಕರಣಃ ಸ್ವರತಃ ಅಧ್ಯವಸ್ಯತಿ — ಯದಿ ಪೂರ್ವಪದ ಪ್ರಕೃತಿಸ್ವರತ್ವಂ ಬಹುವ್ರೀಹಿಃ, ಅಥ ಸಮಾಸಾಂತ ಉದಾತ್ತತ್ವಮ್ ತತಃ ತತ್ಪುರುಷಃ ಇತಿ." ಆದ್ದರಿಂದ ಪತಂಜಲಿ ಮಹರ್ಷಿಗಳ ಪ್ರಕಾರ, **ಅಸಂದೇಹಾರ್ಥಂ ಚ ಅಧ್ಯೇಯಂ ವ್ಯಾಕರಣಮ್**.

ಇದರಂತೆಯೇ, ಅಸ್ಪಷ್ಟವೋ ಇಲ್ಲವೇ ದುಷ್ಟವೋ ಆದ ಸಂಧಿಪ್ರಕ್ರಿಯೆಗಳು ಕೂಡ ಅನರ್ಥವನ್ನೇ ಉಂಟುಮಾಡುತ್ತವೆ. ಕನ್ನಡದ ಕೇಶಿರಾಜನು ಶ್ರುತಿದುಷ್ಟ ಮತ್ತು ಶ್ರುತಿಕಷ್ಟಗಳನ್ನು ಸಂಧಿದೋಷಗಳಾಗಿಯೇ

ಹೇಳಿದನು. ಶ್ರುತಿದುಷ್ಟಗಳಾದ — ಪೂಸಲೆ ಸೊಗಸು, ಪೊಸತುಲ್ಲಾರಂ, ಮೆಚ್ಚುತೆ ಉಣ್ಣಿಂ, ತರುಡಕ್ಕೆ— ಮೊದಲಾದುವು ಯಾವಾಗಲೂ ಹೇಯವಾದುವು. ಉತ್ತೇಜನಾರ್ಥವಾಗಿ, 'ಹೇಲಯ' ಎಂದು ಹೇಳಬೇಕಾಗಿದ್ದ ಅಸುರರು ಯಾವ ರೀತಿ "ಹೇ ಲಯಃ" "ಅಯ್ಯೋ ನಾಶ!" ಎಂದು ಕೂಗಿಕೊಂಡು ಸತ್ತರೆಂಬುದನ್ನು ಪತಂಜಲಿ ಮಹರ್ಷಿಗಳು ವರ್ಣಿಸುತ್ತಾರೆ. ಆದ್ದರಿಂದ **"ಮ್ಲೇಚ್ಛಾಃ ಮಾ ಭೂಮ ಇತಿ ಅಧ್ಯೇಯಂ ವ್ಯಾಕರಣಮ್".**

ಆದ್ದರಿಂದ ಯಾವುದೇ ಪ್ರಯೋಗವನ್ನಾಗಲೀ ಅರಿತು, ಸರಿಯಾಗಿ ಪ್ರಯೋಗಿಸಬೇಕು. ಅದರ ಸಂಧಿ ಸಮಾಸ ರೂಪಗಳಾಗಲೀ, ಇಲ್ಲವೇ ಉಚ್ಚಾರ ರೀತಿಯಾಗಲೀ ಯಾವ ವಿಧವಾಗಿದೆಯೆಂಬುದನ್ನು ಅರಿತು ಕೊಂಡಿರಬೇಕು. ಅದಿಲ್ಲದಿದ್ದರೆ, ಮುಗಿಲಿನಿಂದೆರಗಿದ ಸಿಡಿಲು ಗಿಡಗಂಟೆಗಳನ್ನು ಕಿತ್ತು ಎಸೆಯುವಂತೆ, ಅಂಥ ಪ್ರಯೋಗಗಳು ನಮ್ಮನ್ನೇ ಕೊಂದುಹಾಕಿ ಬಿಡುತ್ತವೆ. ಅದರಲ್ಲಿ ಸಮಾಸಗಳ ವಿಷಯವಾಗಿಯಂತೂ ತೀರ ಜಾಗರೂಕರಾಗಿರಬೇಕು. ಕೇವಲ **ಅವಧಾರಣಾಭೇದದಿಂದ** ಒಂದೇ ಸಮಾಸಪ್ರಯೋಗವು ಬಹುವ್ರೀಹಿ ಯಾಗಬಹುದು; ಇಲ್ಲವೆ ತತ್ಪುರುಷವಾಗಬಹುದು. ಆದ್ದರಿಂದ ಈ ಪ್ರಭೇದಗಳನ್ನು ಸರಿಯಾಗಿ ಅರಿತಿರಬೇಕು. ಇದನ್ನು ಅರಿಯದೆ "ಇಂದ್ರಶತ್ರು" ಎಂಬ ಪದದ ಪ್ರಯೋಗವು ಅದನ್ನು ಉಪಯೋಗಿಸಿದ ಯಜಮಾನನನ್ನೇ ಯಾವ ರೀತಿ ಕೊಂದುಹಾಕಿತೆಂಬುದರ ವಿಷಯವು ಶತಪಥ ಬ್ರಾಹ್ಮಣದಲ್ಲೂ* ತೈತ್ತರೀಯ ಸಂಹಿತೆಯಲ್ಲೂ ಬರುತ್ತದೆ.

ಆ ಕಥೆ ಹೀಗೆ:—ಒಂದು ಸಲ, ಸ್ವರ್ಗಲೋಕದಲ್ಲಿ ಇಂದ್ರನಿಗೂ ಮತ್ತು 'ತ್ವಷ್ಟೃ'ವಿಗೂ ಜಗಳ ವಾಯಿತು. ಅದಕ್ಕೆ ಕಾರಣವೆಂದರೆ, ಸೋಮಸೇವನ ಕಾಲದಲ್ಲಿ ತ್ವಷ್ಟೃವು ಇಂದ್ರನಿಗೆ ಸೋಮವನ್ನು ಕೊಡದಿದ್ದುದೇ. ಈ ಅವಮಾನದಿಂದ ಕ್ರುದ್ಧನಾದ ಇಂದ್ರನು ತಾನಾಗಿಯೇ ಸೋಮಪಾತ್ರೆಯಲ್ಲುಳಿದ ಸೋಮರಸವನ್ನು ಸೇವಿಸಿದನು. ಆದರೆ, ಇದನ್ನು ಕಂಡ ತ್ವಷ್ಟೃವಿಗೆ ಮತ್ತಷ್ಟೂ ಕೋಪ ಬಂದಿತು. ಅದಕ್ಕಾಗಿ ಅವನು ಆ ಪಾತ್ರೆಯಲ್ಲಿ ಇನ್ನೂ ಉಳಿದುಳಿದ ರಸವನ್ನು ಅಗ್ನಿಗೆ ಆಹುತಿ ಕೊಡುತ್ತ "ಇಂದ್ರಶತ್ರು **ವರ್ಧಸ್ವ**" ಎಂದು ಶಾಪವಿತ್ತನು. ಅಂದರೆ "ಇಂದ್ರನ ಶತ್ರುವಾಗಿ ನೀನು ಬೆಳೆ" ಅಂದರೆ "ಶತ್ರುವಾದ ಇಂದ್ರನನ್ನು ಕೊಲ್ಲುವ ಹಾಗೆ ನೀನು ಬೆಳೆ" ಎಂದು ಅವನ ಮಾತಿನ ಅಪೇಕ್ಷೆ ಇತ್ತು. ಆದರೆ, ದುರ್ದೈವದಿಂದ ಆ ಶಾಪ ದಲ್ಲಿಯ ಪೂರ್ವಪದದ ಅವಧಾರಣೆಯ ಮೂಲಕ ಅದು ಬೇರೆ ಅರ್ಥವನ್ನೇ ಕೊಟ್ಟಿತು. "ಇಂದ್ರಶತ್ರು ವರ್ಧಸ್ವ" ಎನ್ನುವ ಪ್ರಯೋಗವು ಉಚ್ಚಾರ ಮೂಲಕವಾಗಿ "ಇಂದ್ರನು ನಿನ್ನ ಶತ್ರುವಾಗಿ ಬೆಳೆಯಲಿ!" ಎಂಬ ಅರ್ಥವನ್ನು ಕೊಟ್ಟಿತು. ಅದರಿಂದ, ಅಗ್ನಿಪ್ರವೇಶ ಮಾಡಲು ಹರಿಯುತ್ತಿರುವ ಸೋಮವು 'ವೃತ್ರ' ಎಂಬ ಸರ್ಪವಾಗಿ ಶಾಪವನ್ನಿತ್ತ ಯಜಮಾನನನ್ನೇ ಹಿಂಸಿಸಿತು. ತೈತ್ತರೀಯದಲ್ಲಂತೂ, ಈ ಶಾಪವನ್ನು ಕೇಳಿದ ಕೂಡಲೇ ಇಂದ್ರನನ್ನು ಕೊಲ್ಲಬೇಕೆಂದು ಸೆಡೆದು ನಿಂತ ಅಗ್ನಿಯು ಉಚ್ಚಾರದೋಷವನ್ನು ಕೇಳಿ ಮ್ಲಾನವದನವಾಗಿ ಕುಸಿಯಿತೆಂದು ವರ್ಣನೆಯಿದೆ. ಒಟ್ಟು ಮಾತಿನ ಮತಿತಾರ್ಥವೇನೆಂದರೆ, ಯಾವುದೇ ಪ್ರಯೋಗದ ಸ್ವರ-ಅವಧಾರಣೆಗಳನ್ನು ಸರಿಯಾಗಿ ತಿಳಿಯದೆ ಅದನ್ನು ಪ್ರಯೋಗಿಸಿದರೆ ಇಂದ್ರನ ಕುಲಿಶದ ಹಾಗೆ ತಿರುಗಿ ಬಿದ್ದು ಅದು ಯಜಮಾನನನ್ನೇ ಕೊಲ್ಲುತ್ತದೆ—ಪತಂಜಲಿಗಳು ಹೇಳಿದ ಹಾಗೆ—

ದುಷ್ಟಃ ಶಬ್ದಃ ಸ್ವರತೋ ವರ್ಣತೋ ವಾ
ಮಿಥ್ಯಾಪ್ರಯುಕ್ತೋ ನ ತಮ್ ಅರ್ಥಮ್ ಆಹ;
ಸ ವಾಗ್ ವಜ್ರೋ ಯಜಮಾನಂ ಹಿನಸ್ತಿ
ಯಥಾ ಇಂದ್ರಶತ್ರುಃ ಸ್ವರತಃ ಅಪರಾಧಾತ್ ||

---

* I vi; VIII x.

ಆದ್ದರಿಂದ, **ದುಷ್ಟವಾದ ಶಬ್ದಗಳನ್ನು ಉಚ್ಚಾರ ಮಾಡಬಾರದೆಂಬ ಉದ್ದೇಶದಿಂದಲಾದರೂ ವ್ಯಾಕರಣಶಾಸ್ತ್ರದ ಅಭ್ಯಾಸದ ಆವಶ್ಯಕತೆಯಿದೆ.**

ಒಂದು ಮಾತು; ಪತಂಜಲಿ ಮಹರ್ಷಿಗಳು ಹೇಳಿದ ಮೇಲಿನ ಮಾತು ಇಂದಿನ ಎಷ್ಟೋ ಜನರಿಗೆ ಮನಸ್ಸು ಹಿಡಿಯಲಿಕ್ಕಿಲ್ಲ. ಆದರೆ ಭಾಷೆಯ ಈ ಸರಿಯಾದ ಉಚ್ಚಾರದ ಬಗ್ಗೆ ಅನೇಕ ಆಧುನಿಕ ಪಾಶ್ಚಿಮಾತ್ಯ ತತ್ವಜ್ಞರೂ ಕೂಡ ಇದೇ ಅಭಿಪ್ರಾಯವನ್ನು ಸೂಚಿಸುತ್ತಿದ್ದಾರೆಂಬುದನ್ನು ನೆನೆದಾಗ ಪತಂಜಲಿ ಮಹರ್ಷಿಗಳ ಮಾತಿನ ಸತ್ಯತೆ ಹೊಳೆಯುತ್ತದೆ. ಉದಾಹರಣೆಗೆ ರಸ್ಕಿನ್ ಎಂಬ ಸುಪ್ರಸಿದ್ಧ ಆಂಗ್ಲತತ್ವವೇತ್ತನು ಯಾವುದಾದರೂ ಕಾವ್ಯದ ಸರಿಯಾದ ಅಭ್ಯಾಸಕ್ಕೆ ಶಬ್ದ ಮತ್ತು ಅರ್ಥಗಳ ಸರಿಯಾದ ಜ್ಞಾನವು ಅವಶ್ಯವೆಂದು ಹೇಳಿ ಈ ರೀತಿ ಬರೆಯುತ್ತಾನೆ:—

> "Let the accent of the words be watched: and closely; and let their meaning be watched and more closely still...... *A few words well-chosen and distinguished will do work that a thousand can not... words, if they are not watched will do deadly work some times.*"*

ಸರಿಯಾಗಿ ಗ್ರಹಿಸದ ಶಬ್ದಗಳು ಅನರ್ಥೋಪಾತವನ್ನೇ ಉಂಟುಮಾಡುತ್ತವೆ.— ಸ ವಾಗ್ ವಜ್ರೋ ಯಜಮಾನಮ್ ಹಿನಸ್ತಿ ಯಥೇಂದ್ರ ಶತ್ರುಃ ಸ್ವರತೋಽಪರಾಧಾತ್—

ಆದ್ದರಿಂದ ಶಬ್ದಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಉಪಯೋಗಿಸಬೇಕು. ರಸ್ಕಿನ್ ಅವರು ಹೇಳಿದ ಹಾಗೆ "ಸರಿಯಾಗಿ ಆಯ್ದು ಸಮ್ಯಕ್ ಪ್ರಯುಕ್ತವಾದ ಒಂದು ಶಬ್ದವು ಸಾವಿರ ಶಬ್ದಗಳು ಮಾಡದಷ್ಟು ಕಾರ್ಯವನ್ನು ಸಾಧಿಸುತ್ತದೆ."

ಇದೇ ಮಾತನ್ನೇ ಪತಂಜಲಿ ಮಹರ್ಷಿಗಳು ಕೂಡ ಇದಕ್ಕೂ ಸುಂದರವಾಗಿ ಹೇಳಿದ್ದಾರೆ. ಮಹರ್ಷಿಗಳ ಪ್ರಕಾರ "ಎಲ್ಲಿ ಜ್ಞಾನವಂತರು, ಮೊರದಲ್ಲಿ ಧಾನ್ಯಗಳನ್ನು ಕೇರಿದ ಹಾಗೆ, ಸರಿಯಾಗಿ ಶಬ್ದಗಳನ್ನು ಆಯ್ದು ಪ್ರಯೋಗಿಸುತ್ತಾರೋ ಅಂಥವರ ಭಾಷೆಯಲ್ಲಿ ಮಿತ್ರರು ಮೈತ್ರಿಯನ್ನು ಕಂಡುಕೊಳ್ಳುತ್ತಾರೆ ಮತ್ತು ಯಾವಾಗಲೂ ಸಾಕ್ಷಾತ್ ಲಕ್ಷ್ಮೀದೇವಿಯೇ ಅಲ್ಲಿ ನೆಲಸಿರುತ್ತಾಳೆ."

ಸಕ್ತುಮ್ ಇವ ತಿತಉನಾ ಪುನಂತೋ
ಯತ್ರ ಧೀರಾಃ ಮನಸಾ ವಾಚಮ್ ಅಕ್ರತ
ಅತ್ರ ಸಖಾಯಃ ಸಖ್ಯಾನಿ ಜಾನತೇ
ಭದ್ರೈಷಾ ಲಕ್ಷ್ಮೀ ನಿಹಿತಾಧಿವಾಚಿ ||

ಇಂಥ ಭಾಷಾಶಾಸ್ತ್ರಜ್ಞರ ಸಂಪರ್ಕವು ಮೈತ್ರಿಯ ನೆಲೆಗಟ್ಟು.

ಅಷ್ಟೇ ಅಲ್ಲ. ಭಾಷೆ ತಿಳಿಯದಿದ್ದವರ ಮಾತು, ಕತ್ತೆ ಪುಸ್ತಕದ ಹೊರೆ ಹೊತ್ತಹಾಗೆ. ಕತ್ತೆಗೆ ಸ್ವತಃ ತಾನೇ ಹೊತ್ತ ಪುಸ್ತಕದ ಕಿಂಚಿತ್ ಜ್ಞಾನವೂ ಕೂಡ ಇರದಂತೆ, ಇಂಥ ಅಜ್ಞಾನಿಗೂ ಕೂಡ ಭಾಷೆಯ

* Sesame and Lilies.

ನಿಜವಾದ ಸೌಂದರ್ಯವೇನಿದೆಯೆಂಬುದು ಅರ್ಥವಾಗದು. ಇಂಥವನು ಕಣ್ಣಿದ್ದು ಕುರುಡ; ಕಿವಿಯಿದ್ದು ಕಿವುಡ. ಯಾವ ರೀತಿ ಹೆಂಡತಿಯು ತನ್ನ ಸೌಂದರ್ಯವನ್ನೆಲ್ಲ ತನ್ನ ವಲ್ಲಭನ ಪಾದತಲದಲ್ಲಿ ಅರ್ಪಿಸುತ್ತಾಳೋ, ಹಾಗೆಯೇ ಶಬ್ದಜ್ಞಾನಿಗೆ ಭಾಷಾವನಿತೆ ತನ್ನ ಸೌಂದರ್ಯವನ್ನೆಲ್ಲ ಪ್ರದರ್ಶಿಸುತ್ತಾಳೆ:—

ಉತ ತ್ವಃ ಪಶ್ಯನ್ ನ ದದರ್ಶ ವಾಚನ್
ಉತ ತ್ವಃ ಶೃಣ್ವನ್ ನ ಶೃಣೋತಿಏನಾಮ್ ।
ಉತೋ ತು ಅಸ್ಮೈ ತನ್ವಂ ವಿಸಸ್ರೇ
ಜಾಯೇವ ಪತ್ಯಃ ಉಶತೀ ಸುವಾಸಾಃ ॥

ಇಂಥ ಅಜ್ಞಾನಿಗಳ ಅಭ್ಯಾಸವೆಲ್ಲ ತಿರುಳನ್ನು ಕಾಣದೆ ಬರಿಯ ಸಿಗುರನ್ನು ಮೆಯ್ದಂತೆ. ಅಗ್ನಿಯಿಲ್ಲದ ಕಾಷ್ಠದಂತೆ ಜಾಜ್ವಲ್ಯಮಾನವಾಗದು.

ಅನಗ್ನಾವಿವ ಶುಷ್ಕೈಧೋ ನತಜ್ವಲತಿ ಕರ್ಹಿಚಿತ್–

ಇದೇ ಮಾತಿನ ಧ್ವನಿಯನ್ನೇ ನಾವು ರಸ್ಕಿನ್ ಅವರ ಈ ಕೆಳಗಿನ ಅವತರಣಿಕೆಯಲ್ಲೂ ಕಾಣುತ್ತೇವೆ:—

"You might read all the books in the British Museum and remain an utterly 'illiterate' man... The entire difference between education and non-education consists in *accuracy*."*

ಇದೂ ಅಲ್ಲದೆ, ಇನ್ನೂ ಒಂದು ಕಾರಣದ ಸಲುವಾಗಿ ಭಾಷೆಯ ತಿರುಳನ್ನು ಅರಿತಿರಬೇಕೆಂದು ಪತಂಜಲಿಗಳು ಹೇಳುತ್ತಾರೆ. ಅದೆಂದರೆ, ಮನುಷ್ಯನು ಸರಿಯಾದ ರೀತಿ–ನೀತಿಗಳನ್ನು ಅರಿತಿರಬೇಕೆಂಬ ದೃಷ್ಟಿಯಿಂದ. ಈ ರೀತಿಗಳನ್ನು ಅರಿಯದಿದ್ದ ಮನುಷ್ಯನು ಸ್ತ್ರೀ-ಶೂದ್ರ ಸಮಾನನು.

ಉದಾಹರಣೆಗೆ, ಪ್ರಾಚೀನ ಕಾಲದಲ್ಲಿ ಒಬ್ಬರು ಮತ್ತೊಬ್ಬರನ್ನು ಅಭಿವಂದಿಸುವಾಗ ಒಂದು ಕ್ರಮವಿತ್ತು. ಪುರುಷರು ಪುರುಷರನ್ನು ಅಭಿವಂದಿಸುವಾಗ **ಮೊದಲು** ತಮ್ಮ ಹೆಸರನ್ನು ಹೇಳಿಯೇ ಅಭಿವಂದಿಸುವ ಕ್ರಮವಿತ್ತು. ಅಂದರೆ, "**ದೇವದತ್ತೋಽಹಂ** ಅಭಿವಾದಯೇ" ಇತ್ಯಾದಿ. ಅದೇ, ಸ್ತ್ರೀಯರು ಮತ್ತು ಪ್ರವಾಸದಿಂದ ತಿರುಗಿ ಬಂದ ಪುರುಷರು ನಮಸ್ಕಾರ ಮಾಡುವಾಗ ಈ ಕ್ರಮವಿಲ್ಲ. ಅಲ್ಲಿ ತಮ್ಮ ಹೆಸರನ್ನು **ಮೊದಲು** ಹೇಳದೆ, 'ಅಯಮ್ ಅಹಮ್' ಎಂದು ಪ್ರಯೋಗಿಸಬೇಕು. ಆದ್ದರಿಂದ ಈ ರೂಪವು "ದೇವದತ್ತೋಽಹಂ ಅಭಿವಾದಯೇ" ಎಂದಾಗದೇ, "**ಅಯಮ್ ಅಹಮ್** ದೇವದತ್ತೋ ಅಭಿವಾದಯೇ" ಎಂದಾಗುತ್ತದೆ. ಈ ವಿವರಗಳು ಗೊತ್ತಿಲ್ಲದೆ ಇದ್ದವರಿಗೆ ನಮಸ್ಕಾರ ಮಾಡಲೇಬಾರದಾಗಿ ಮನುಸ್ಮೃತಿಯು ಹೇಳುತ್ತದೆ:—

"ಯೋ ನ ವೇತ್ತಿ ಅಭಿವಾದಸ್ಯ ವಿಪ್ರಃ ಪ್ರತ್ಯಭಿವಾದನಮ್,
ನ ಅಭಿವಾದ್ಯಃ ಸಃ ವಿದುಷಾ ಯಥಾ ಶೂದ್ರಃ ತಥೈವ ಸಃ".†

* Sesame and Lilies. † ಮನುಸ್ಮೃತಿ XI 119.

ಆದ್ದರಿಂದ, ಸ್ತ್ರೀ–ಶೂದ್ರರ ಹಾಗೆ ಮನ್ನಣೆಯನ್ನು ಕಳೆದುಕೊಂಡು ಬಾಳಬಾರದೆಂದಿದ್ದರೆ, ಭಾಷೆಯ ಶಾಸ್ತ್ರವನ್ನು ಅರಿತಿರಬೇಕು. **ಅಭಿವಾದೆ ಸ್ತ್ರೀ ವನ್ ಮಾ ಭೂವು ಇತಿ ಅಧ್ಯೇಯಂ ವ್ಯಾಕರಣಮ್.**

ವ್ಯಾಕರಣ ಇಲ್ಲವೆ ಭಾಷೆಯ ಶಾಸ್ತ್ರಕ್ಕೆ ಇಷ್ಟು ಮಹತ್ವವು ಬಂದದ್ದರಿಂದಲೇ ಸಂಸ್ಕೃತದಲ್ಲಿ ಒಂದು ಮಹತ್ವದ ಗಾದೆಯ ಮಾತೇ ಪ್ರಾರಂಭವಾಯಿತು. ಆಂಗ್ಲ ಕಾರ್ಲ್ಲಾಯಲನು ಹಿಂದುಸ್ಥಾನದ ಸಾಮ್ರಾಜ್ಯದ ಕಿಂತ ಷೇಕ್ಸಪಿಯರ ಮಹಾಕವಿಗೆ ತಾನು ಹೆಚ್ಚಿನ ಮನ್ನಣೆ ಕೊಡುತ್ತಿರುವುದಾಗಿ ಹೇಳಿದ ಹಾಗೆ, ಸಂಸ್ಕೃತ ಶಾಸ್ತ್ರಜ್ಞರಿಗೂ ಇರುವ ಆಶೆಯೆಂದರೆ ಒಂದೇ— **ಮಹಾಭಾಷ್ಯಂ ವಾ ಪಠನೀಯಂ ಮಹಾರಾಜ್ಯಂ ವಾ ಪಾಲನೀಯಮ್.** ಮನುಷ್ಯಜನ್ಮವು ಸಾರ್ಥಕವಾಗಬೇಕಾದರೆ, **ಮಹಾರಾಜ್ಯವನ್ನಾದರೂ** ರಕ್ಷಿಸಬೇಕು ಇಲ್ಲವೇ ಪತಂಜಲಿ ಮಹರ್ಷಿಗಳು ಬರೆದ ವ್ಯಾಕರಣಗ್ರಂಥವಾದ **ಮಹಾಭಾಷ್ಯ**ವನ್ನಾದರೂ ಪಠಿಸಬೇಕು. ಎರಡೂ ಕೃತಿಗಳ ಬೆಲೆ ಅಷ್ಟೇ ಎಂದು ಅವರ ನಂಬುಗೆ.

ಒಬ್ಬ ತಂದೆಯಂತೂ ತನ್ನ ಮಗನಿಗೆ "ಏನು ಕಲಿಯದಿದ್ದರೂ ವ್ಯಾಕರಣವನ್ನಾದರೂ ಕಲಿ" ಎಂದು ಉಪದೇಶಿಸುತ್ತಾನೆ. ಯಾಕಂದರೆ, ಸರಿಯಾದ ವ್ಯಾಕರಣಜ್ಞಾನವು ಎಲ್ಲ ನಡೆವಳಿಕೆಯ ಮೂಲ ಮಾತು. ಸರಿಯಾದ ಶಬ್ದಜ್ಞಾನವಿಲ್ಲದೆ ಏನೇನೋ ಅರ್ಥವಾಗಬಹುದು. ಈ ಉಪದೇಶವನ್ನು ಆ ತಂದೆಯ ಬಾಯಿಂದಲೇ ಕೇಳೋಣ:—

ಯದ್ಯಪಿ ಬಹುನಾಧೀಷೇ ಪಠಪುತ್ರ ತಥಾಪಿ ವ್ಯಾಕರಣಮ್.

ಯಾಕಂದರೆ,

ಸ್ವಗಣಃ ಶ್ವಗಣೋ ಮಾಭೂತ್, ಸಕಲಂ ಶಕಲಂ, ಸಕೃತ್ ಶಕೃತ್.

ಸ್ವ–ಗಣ ಅಂದರೆ "ನಮ್ಮ ಜನ" ಎಂದು ಅಭಿಮಾನದಿಂದ ಹೇಳಿಕೊಳ್ಳುವಂಥ ಮಾತು ವ್ಯಾಕರಣಸಂಸ್ಕಾರ ವಿಲ್ಲದ ನಾಲಗೆಯಲ್ಲಿ ಶ್ವ–ಗಣ ಅಂದರೆ "ನಾಯಿಯ ವರ್ಗ" ಎಂದು ಅರ್ಥವಾದರೆ ಏನು ಗತಿ! ಆದ್ದರಿಂದಲೇ,— ಯದ್ಯಪಿ ಬಹುನಾಧೀಷೇ ಪಠಪುತ್ರ ತಥಾಪಿ ವ್ಯಾಕರಣಮ್.—

ಈ ವ್ಯಾಕರಣದ ಮಹತ್ವದ ಬಗ್ಗೆ ಸಂಸ್ಕೃತದಲ್ಲಿ ಇನ್ನೂ ಒಂದು ಕಥೆ ಹೇಳುತ್ತಾರೆ:—ಒಂದು ಸಲ ಹೀಗಾಯಿತಂತೆ. ಒಬ್ಬ ವ್ಯಾಕರಣಜ್ಞಾನವಿಲ್ಲದ ಮೂರ್ಖನು ತನ್ನ ಅನೇಕ ಮಿತ್ರರನ್ನು ಭೋಜನಕ್ಕಾಗಿ ಆಮಂತ್ರಿಸಿದ್ದನಂತೆ. ಈ ಮೂರ್ಖನ ಮಿತ್ರರೆಲ್ಲರೂ ಒಳ್ಳೆಯ ವೈಯಾಕರಣಿಗಳು—ಭಾಷೆಯ ಶಾಸ್ತ್ರವನ್ನು ಬಲ್ಲವರು. ಅಷ್ಟೇ ಸರಿಯಾಗಿ ವ್ಯಾಕರಣವನ್ನು ಬಲ್ಲ ಈ ಮೂರ್ಖನ ಹೆಂಡತಿಗೂ ಕೂಡ ಒಂದು ತರಹದ ಎದೆಗುದಿ—ಎಲ್ಲಿ ಈ ಪಂಡಿತರೆದುರು ತನ್ನ ಗಂಡನ ಮುಖಭಂಗವಾಗುತ್ತದೋ ಎಂದು! ಅಂತೂ, ಅವಳು ಹಾಗೂ ಹೀಗೂ ಮಾಡಿ ಊಟವನ್ನೆಲ್ಲ ಸಾಗಿಸಿದಳಂತೆ. ಆದರೆ, ಕೊನೆಯ ತುತ್ತಿನಲ್ಲಿ ಹರಳು ಬರುವುದಿತ್ತು. ಕೊನೆಯ ಅನ್ನವನ್ನು ಉಣ್ಣುವಾಗ ಈ ಮೂರ್ಖ ಗಂಡನು ತನ್ನ ಹೆಂಡತಿಗೆ "ದಧಿಮಾನಯ" ಅಂದರೆ "(ಅನ್ನಕ್ಕಾಗಿ) ಮೊಸರು ತೆಗೆದುಕೊಂಡು ಬಾ" ಎಂದು ಹೇಳಿದನಂತೆ. ಇದನ್ನು ಕಂಡ ಇವನ ಮಿತ್ರರೆಲ್ಲರು ಘೊಳ್ಳೆಂದು ನಕ್ಕರಂತೆ. ಯಾಕಂದರೆ, ದಧಿ ಶಬ್ದದ ದ್ವಿತೀಯಾ ರೂಪವು 'ದಧಿ' ಎಂದೇ ಉಳಿಯುತ್ತದೆಯೇ ಹೊರತು 'ದಧಿಮ್' ಎಂದಾಗದು. ಆದ್ದರಿಂದ ಸರಿಯಾದ ವಾಕ್ಯ 'ದಧಿ ಆನಯ' ಎಂದು ಬೇಕಿತ್ತು. ಇದನ್ನು ಕಂಡ ಮೂರ್ಖನ ಹೆಂಡತಿಗೆ ಬಹಳ ಕೆಡಕೆನಿಸಿತು. ಆದರೂ ವ್ಯಾಕರಣವನ್ನು ಬಲ್ಲ ಅವಳು ಈ ಮಿತ್ರರಿಗೆ ಹಣಿಯುವಂತಿರಲಿಲ್ಲ. ಅವಳು ಅದರಲ್ಲಿಯೇ ಒಂದು ಯುಕ್ತಿಯನ್ನು ಹುಡುಕಿದಳು. ತನ್ನ ಗಂಡನು "ದಧಿಮಾನಯ" ಎಂದು ಮೊಸರು ತರಲು ಹೇಳಿದ್ದರೂ, ಅವಳು ಮೊಸರನ್ನು ತರಲೇ ಇಲ್ಲ.

ಉಳಿದ ಪಂಡಿತರೆಲ್ಲರಿಗೂ ಮೊಸರು ಬಡಿಸಿದರೂ, ಸ್ವತಃ ತನ್ನ ಗಂಡನಿಗೇ ಬಡಿಸಲಿಲ್ಲ. ಇದನ್ನು ಕಂಡ ಆ ಪಂಡಿತರಿಗೆ ಆಶ್ಚರ್ಯವಾಯಿತು. ಅವರು ಹೀಗೇಕೆ ಎಂದು ಆ ಸ್ತ್ರೀಯಳನ್ನು ಪ್ರಶ್ನಿಸಿದರಂತೆ. ಆಗ ಅವಳು "ಏನು ನಿಮ್ಮ ಪಾಂಡಿತ್ಯ ! ನಮ್ಮ ಯಜಮಾನರು 'ದಧಿಮಾನಯ' ಎಂದಾಕ್ಷಣಕ್ಕೆ ಬರಿಯ ನಕ್ಕುಬಿಟ್ಟಿರಿ. ಅವರಿಗೆ ನಿಜವಾಗಿಯೂ ಮೊಸರು ಬೇಕಾಗಿರಲಿಲ್ಲ. ಅಂತಲೇ 'ದಧಿಮ್ ಆನಯ' ಎಂಬರ್ಥದಲ್ಲಿ ಅವರು ನುಡಿದಿರದೆ, "ದಧಿ ಮಾ ಆನಯ" ಅಂದರೆ 'ನನಗೆ ಮೊಸರು ಬೇಡ' ಎಂದು ಹೇಳಿದರು. ಇದನ್ನು ತಿಳಿಯದೆ ಹೋಗಿ ನೀವು ಸುಮ್ಮನೆ ಕಳಕಳಿಸಿದಿರಿ" ಎಂದು ಹೇಳಿದಳಂತೆ. ಗಂಡನೇನೆ ಅಂದಿರಲಿ ಬಿಟ್ಟಿರಲಿ; ವ್ಯಾಕರಣಜ್ಞಾನವಿಲ್ಲದ ಮೂಲಕ, ಬಡಪ್ರಾಣಿ ಮಾತ್ರ ಅನ್ನಕ್ಕೆ ಮೊಸರಿಲ್ಲದೆ ಹೋಗಬೇಕಾಯಿತು !!

ಅಂತೂ ಏನೇ ಇರಲಿ; ಭಾಷೆಯ ಆಂತರ್ಯವನ್ನರಿತುಕೊಂಡು ಅದನ್ನು ಸರಿಯಾಗಿ ಉಪಯೋಗಿಸುವವನಿಗೆ ಅಪಾರ್ಥ ಇಲ್ಲವೆ ಅವಮಾನಗಳ ಹೆದರಿಕೆಯಿಲ್ಲ. ಅಧ್ಯಾಪನವನ್ನೇ ಅವಲಂಬಿಸಿರಬೇಕಾದಂಥ ಬ್ರಾಹ್ಮಣನಿಗಂತೂ ಪ್ರಾಚೀನ ಕಾಲದಲ್ಲಿ ಇದು ತೀರ ಆವಶ್ಯಕವಾಗಿತ್ತಂತೆ—

ಅಧ್ಯಾಪನಂ ಬ್ರಾಹ್ಮಣಸ್ಯ ವೃತ್ತಿಃ—ನ ಚ ಅಶಬ್ದಜ್ಞಂ ತಮ್ ಉಪಶ್ಲಿಷ್ಯಂತಿ ಶಿಷ್ಯಾಃ,—

ಶಬ್ದಜ್ಞಾನವಿಲ್ಲದ ಯಾವ ಗುರುವನ್ನೂ ಶಿಷ್ಯರು ಆಶ್ರಯಿಸಲಾರರು.

ಇದೂ ಅಲ್ಲದೆ, ಪ್ರಾಚೀನ ವ್ಯಾಕರಣಗ್ರಂಥಗಳ ಅಭ್ಯಾಸದಿಂದ ಆ ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಅಂಶಗಳನ್ನೂ ಎಷ್ಟೋ ಮಟ್ಟಿಗೆ ಕಾಣಬಹುದಾಗಿದೆ. ಉದಾಹರಣೆಗೆ, ಪಾಣಿನಿ ವ್ಯಾಕರಣದಲ್ಲಿ ತೀರ ಸಮೀಪದ ಭೂತಕಾಲದ ದೃಷ್ಟಾಂತವಾಗಿ ಹೇಳಿದ — ಅರುಣದ್ ಯವನಃ ಸಾಕೇತಮ್; ಮತ್ತು ಅರುಣದ್ ಯವನಃ ಮಾಧ್ಯಮಿಕಾನ್ — ಎಂಬ ಪ್ರಯೋಗಗಳು ಆ ಕಾಲದ ರಾಜಕೀಯ ಪರಿಸ್ಥಿತಿಯನ್ನು ವಿವರಿಸುತ್ತಿವೆಯೆಂದು ಪಂಡಿತರ ಅಭಿಪ್ರಾಯ.* ಕೇಶಿರಾಜನ ಶಬ್ದಮಣಿದರ್ಪಣದಿಂದ ಕಂಡುಬರುವ ಸಾಂಸ್ಕೃತಿಕ ಅಂಶವನ್ನು ಈ ಗ್ರಂಥದಲ್ಲಿ ಅನ್ಯತ್ರ ವಿವರಿಸಲಾಗಿದೆ. (ಪ್ರಕರಣ ೫).

ಡಾ॥ ತಾರಾಪೂರವಾಲಾ ಅವರಂತೂ ಭಾಷೆಯ ಈ ಅಭ್ಯಾಸವು ಇಡೀ ಮಾನವ ವರ್ಗದ ಐಕ್ಯತೆಯನ್ನೇ ತಮ್ಮಲ್ಲಿ ಬಿಂಬಿಸುತ್ತಿದೆಯೆಂದು ಹೇಳಿದ್ದಾರೆ :—

> "Linguistics is a subject of absorbing interest. The science of Linguistics has taught me the essential unity of humanity."†

ಕೇಶಿರಾಜನು ಹೇಳಿದ ಪ್ರಕಾರ "ವ್ಯಾಕರಣದಿಂದೆ ಪದಮ್, ಪದದಿಂ ಅರ್ಥಾಲೋಕಮ್, ಅರ್ಥಾಲೋಕದಿಂ ತತ್ತ್ವಜ್ಞಾನಂ, ತತ್ತ್ವಜ್ಞಾನದಿಂ ಆಕಾಂಕ್ಷಿಪ ಮುಕ್ತಿಯಕ್ಕುಂ" ಎಂಬುದು ಬಹುಮಟ್ಟಿಗೆ ಅನಾಗತ ಸಂಬಂಧವೆಂದು ಹೇಳಬಹುದಾದರೂ, ಮೇಲೆ ವಿವರಿಸಿದ ಅನೇಕ ಪ್ರಯೋಜನಗಳು ವ್ಯಾಕರಣ ಇಲ್ಲವೆ ಭಾಷಾಶಾಸ್ತ್ರದ ಅಭ್ಯಾಸಕ್ಕೆ ಸುಲಭವಾದ ಕಾರಣಗಳಾಗಿವೆ. ನಮ್ಮ ನಡೆಯಂತೆ ನುಡಿಯನ್ನು ಕೂಡ ಶುಚಿಯಾಗಿಟ್ಟುಕೊಂಡು, ಅನರ್ಥ ಅಪಾರ್ಥಗಳಿಗೆ ಎಡೆ ಕೊಡದೆ, ಇಡೀ ಮಾನವ್ಯದ ಐಕ್ಯತೆಯನ್ನೇ ನಾವು ಈ ಶಾಸ್ತ್ರದ ಸಹಾಯದಿಂದ ಸಾಧಿಸುವಂತಿದ್ದರೆ, ಅದೇನೂ ಕಡಿಮೆಯ ಮಾತಲ್ಲ.

---

* The Age of Patanjali. † P. T. O C 1931.

ಎರಡನೆಯ ಪ್ರಕರಣ

ಭಾಷೆಯ ವರ್ಗೀಕರಣ ಮತ್ತು ದ್ರಾವಿಡ ವರ್ಗದ ಭಾಷೆಗಳು

ಭಾಷೆಯು ಯಾವ ರೀತಿ ಹುಟ್ಟಿತೆಂಬುದನ್ನೂ, ಅದರ ವೈವಿಧ್ಯತೆ, ವ್ಯತ್ಯಾಸ—ಮೊದಲಾದವುಗಳನ್ನೂ ನಾವು ಹಿಂದಿನ ಪ್ರಕರಣದಲ್ಲಿ ನೋಡಿದೆವು.

ಪ್ರಸ್ತುತ, ಪ್ರಪಂಚದ ಈ ಎಲ್ಲ ಭಾಷೆಗಳನ್ನೂ ಅಭ್ಯಾಸದ ಅನುಕೂಲತೆಗಾಗಿಯೂ, ಮತ್ತು ಶಾಸ್ತ್ರೀಯ ದೃಷ್ಟಿಯಿಂದಲೂ ಯಾವ ರೀತಿಯಾದರೂ ವರ್ಗೀಕರಿಸಲಿಕ್ಕೆ ಬರುತ್ತಿದೆಯೇ, ಹಾಗೆ ಬರುತ್ತಿದ್ದರೆ ಅದರಲ್ಲಿ ನಮ್ಮ ದ್ರಾವಿಡ ಭಾಷೆಗಳ ಸ್ಥಾನವೇನು ? ಅವಕ್ಕೂ ಸಂಸ್ಕೃತಕ್ಕೂ ಇರುವ ಸಂಬಂಧವೇನು ?—ಈ ದ್ರಾವಿಡ ವರ್ಗದ ಭಾಷೆಗಳು ಯಾವು ? ಅವುಗಳ ಸಂಕ್ಷಿಪ್ತ ಇತಿಹಾಸವೇನೆಂಬುದನ್ನು ನೋಡೋಣ.

ಪ್ರಪಂಚದ ಈ ಎಲ್ಲ ಭಾಷೆಗಳನ್ನೂ ಹಿಂದಿನ ಭಾಷಾಶಾಸ್ತ್ರಜ್ಞರು ಜಾನಾಂಗಿಕ ಸಂಬಂಧಗಳ ಮೇಲಿಂದ **ಮೂರು** ವಿಧವಾಗಿ ವಿಂಗಡಿಸಿದರು. ಅವುಗಳೆಂದರೆ, (೧) ಆರ್ಯ ಇಲ್ಲವೆ ಇಂಡೋ-ಯುರೋಪಿಯನ್ ಭಾಷೆಗಳು. (೨) ಟುರಾನಿಯನ್ ಇಲ್ಲವೆ ಸಿದಿಯನ್ ಭಾಷೆಗಳು. (೩) ಮತ್ತು ಸೆಮಿಟಿಕ್ ಭಾಷೆಗಳು.

ಈ ವರ್ಗೀಕರಣದ ಮೂಲತತ್ವವೆಂದರೆ—ಈ ಪ್ರಪಂಚದಲ್ಲಿ ವಾಸಿಸುವ ಜನರೆಲ್ಲ ಮೂಲತಃ ಕೇವಲ **ಒಂದೇ** ಬುಡಕಟ್ಟಿನವರಾಗಿರದಿದ್ದರೂ, ಪ್ರಾಮುಖ್ಯವಾಗಿ ನಾಲ್ಕಾರು ಮೂಲ ಪಂಗಡಗಳಿಗೆ ಸೇರಿದವರು. ಇಂದು ಅವರು ಇಡೀ ಜಗತ್ತಿನ ತುಂಬೆಲ್ಲ ಚದರಿ, ಗುರುತಿಸಲಿಕ್ಕೆ ಬಾರದಷ್ಟು ಭಿನ್ನಭಿನ್ನರಾಗಿದ್ದರೂ, ಮೂಲತಃ ಅವರು ಈ ಬುಡ-ಕಟ್ಟುಗಳಲ್ಲಿ ಒಂದಿಲ್ಲ ಒಂದಕ್ಕೆ ಸೇರಿದವರು. ಉದಾಹರಣೆಗೆ, ಇಂದಿನ ಉತ್ತರ ಭಾರತೀಯರಿಗೂ ಮತ್ತು ಇಂಗ್ಲಂಡದ ಆಂಗ್ಲರಿಗೂ ಇಂದು ಯಾವ ಅಭಿವ್ಯಕ್ತ ಸಂಬಂಧವು ಕಾಣದಿದ್ದರೂ, ಒಂದು ಕಾಲಕ್ಕೆ ಅವರೆಲ್ಲ 'ಆರ್ಯ' ಎಂಬ ವರ್ಗಕ್ಕೇ ಸೇರಿದವರು. ಈ ಆರ್ಯರು ಮೂಲತಃ 'ಏಶಿಯಾ ಮೈನರ್' ಭಾಗದಲ್ಲಿ ವಾಸಿಸುತ್ತಿದ್ದರೆಂದು ಹಲವರೂ, 'ಆರ್ಕ್ಟಿಕ್' ಪ್ರದೇಶಗಳಲ್ಲಿ (ಉತ್ತರ ವಲಯಗಳು) ವಾಸಿಸುತ್ತಿದ್ದರೆಂದು ಮತ್ತೆ ಹಲವರೂ ಹೇಳುತ್ತಾರೆ. ಅನಂತರ, ಇವರಲ್ಲಿ ಹಲವರು ದಕ್ಷಿಣ ಮಾರ್ಗವಾಗಿ ಭಾರತಕ್ಕೂ, ಮತ್ತೆ ಹಲವರು ಪಶ್ಚಿಮ ಮಾರ್ಗವಾಗಿ ಜರ್ಮನಿ, ಇಂಗ್ಲಂಡ್ ಮೊದಲಾದ ಪ್ರದೇಶಗಳಿಗೂ ಹೋದರೆಂದು ಅಭಿಪ್ರಾಯ. ಆದ್ದರಿಂದ, ಈ ಆರ್ಯ ಜನಾಂಗಕ್ಕೆ ಸೇರಿದ ಜನರೆಲ್ಲರೂ ಆಡುವ ಭಾಷೆ 'ಆರ್ಯ' ವರ್ಗದವು; ಸಿದಿಯನ್ ವರ್ಗಕ್ಕೆ ಸೇರಿದವರು ಆಡುವುದು ಸಿದಿಯನ್; ಸೆಮಿಟಿಕ್ ಜನಾಂಗದವರದು 'ಸೆಮಿಟಿಕ್' ವರ್ಗದ ಭಾಷೆ. ಆರ್ಯ ವರ್ಗದಲ್ಲಿ 'ಇಂಡಿಯನ್'ರು, ಮತ್ತು ಯುರೋಪಿಯರು ಪ್ರಮುಖರಾದದ್ದರಿಂದ ಈ ವರ್ಗಕ್ಕೆ 'ಆರ್ಯ' ಇಲ್ಲವೆ 'ಇಂಡೋ-ಯುರೋಪಿಯನ್'ವೆಂದೂ ಕರೆದರು. ಅರ್ಥಾತ್—ಆರ್ಯ ಜನಾಂಗ, ಸಿದಿಯನ್ ಜನಾಂಗ ಈ ಮೊದಲಾಗಿ **ಜನಾಂಗದ ಗುಂಪುಗಳ ಮೇಲಿಂದ ಆ ಆ ರೀತಿಯಾಗಿ ಭಾಷೆಗಳನ್ನು ವಿಂಗಡಿಸಿದರು**

ಹೀಗಾಗಿ, ಈ ಭಾಷಾಶಾಸ್ತ್ರಜ್ಞರ ಪ್ರಕಾರ, ಆರ್ಯ, ಸಿದಿಯನ್, ಮತ್ತು ಸೆಮಿಟಿಕ್—ಎಂದು ಮೂರು ವಿಧದ ಭಾಷೆಯ ವರ್ಗೀಕರಣವಾಯಿತು.

ಆದರೆ, ಇಂದಿನ ಭಾಷಾಶಾಸ್ತ್ರಜ್ಞರು ಈ ವಿಧದ ಭಾಷೆಯ ವರ್ಗೀಕರಣವನ್ನು ಒಪ್ಪುತ್ತಿಲ್ಲ. ಅವರು ಇಂಥ ವರ್ಗೀಕರಣದ ಬೇರೆ ತತ್ವವನ್ನೇ ಸೂಚಿಸುತ್ತಿದ್ದಾರೆ. ಯಾಕಂದರೆ, ಅವರ ಪ್ರಕಾರ, ಈ ಮೇಲಿನ ವರ್ಗೀಕರಣದಲ್ಲಿ ಎರಡು ವಿಧದ ಪ್ರಮುಖ ತಪ್ಪುಗಳಿವೆ.

ಮೊದಲನೆಯದಾಗಿ, ಜನಾಂಗಿಕ ಐಕ್ಯದ ಮೇಲಿಂದ ಭಾಷೆಯ ವರ್ಗೀಕರಣವನ್ನು ಮಾಡುವುದು ಸುತರಾಂ ಸರಿಯಲ್ಲ. ಯಾಕಂದರೆ, ಈ ತತ್ವದಲ್ಲಿರುವ ಒಂದೇ ಜನಾಂಗದ ಜನತೆ ಒಂದೇ ಭಾಷೆಯನ್ನಾಡುತ್ತಿದ್ದಾರೆಂಬ ಗ್ರಹಿಕೆ ಎಂದಿಗೂ ಸರಿಯಾದದ್ದಲ್ಲ. ಇಂದಿನ ನಮ್ಮ ವ್ಯವಹಾರದಲ್ಲೇ, ಒಂದೇ ಜನಾಂಗಕ್ಕೆ ಸೇರಿದ ಜನ ತಾವು ವಾಸಿಸುವ ಬೇರೆ ಬೇರೆ ಪ್ರದೇಶಗಳಲ್ಲಿಯ ಬೇರೆ ಬೇರೆ ಭಾಷೆಗಳನ್ನು ಆಡುತ್ತಿರುವುದನ್ನು ಕಂಡಿದ್ದೇವೆ. ಈ ರೀತಿ, ಕಾರ್ನವಾಲದಲ್ಲಿ ವಾಸಿಸುತ್ತಿರುವ 'ಕೆಲ್ಟರು' ಇಂಗ್ಲಿಷ್ ಭಾಷೆಯನ್ನೇ ಆಡುತ್ತಿದ್ದಾರೆ. ಆರ್ಯ ವರ್ಗಕ್ಕೆ ಸೇರಿದ್ದ ದಕ್ಷಿಣ ಹಿಂದುಸ್ಥಾನದ ಅನೇಕ ಬ್ರಾಹ್ಮಣರು ಆರ್ಯ ವರ್ಗದ ಸಂಸ್ಕೃತ ಇಲ್ಲವೆ, ಸಂಸ್ಕೃತಜನ್ಯವಾದ ಯಾವ ಭಾಷೆಯನ್ನೂ ಆಡದೆ, ತಾವು ಈಗ ನೆಲಸಿರುವ ಪ್ರದೇಶಗಳ ಕನ್ನಡ, ತೆಲುಗು ಇಲ್ಲವೆ ತಮಿಳು ಭಾಷೆಗಳನ್ನಾಡುತ್ತಿದ್ದಾರೆ ಈ ಸಂದರ್ಭದಲ್ಲಿ, ನಾವು ವಿವರಿಸಿದ ಮೇಲಿನ ತತ್ವದ ಪ್ರಕಾರ, ಆರ್ಯ ಜನಾಂಗಕ್ಕೆ ಸೇರಿದ ಈ ಜನರು ಆಡುವ **ಕನ್ನಡ ಭಾಷೆಯು** ಆರ್ಯ ವರ್ಗಕ್ಕೆ ಸೇರಬೇಕಾಯಿತು. ಆದರೆ, ವಸ್ತುಸ್ಥಿತಿಯು ಹಾಗಿಲ್ಲ. ಇದರಂತೆ, 'ಉರಿಯಾ' ಜನರೂ, 'ಬೆಡಾಯಿನ್' ಅರಬರೂ, ನಮ್ಮ ಹಿಂದುಸ್ಥಾನದ ಮಾರ್ವಾಡಿಗಳೂ ತಾವು ನೆಲಸಿ ನಿಂತ ಪ್ರಾಂತಗಳ ಭಿನ್ನಭಿನ್ನವಾದ ಭಾಷೆಯನ್ನಾಡುತ್ತಿರುವುದೇ ಮೇಲಿನ ತತ್ವವು ಅಸಮಂಜಸವೆಂದು ಸಾರುತ್ತಿದೆ. ನಿಜವಾಗಿಯೂ, ಭಾಷೆಯು ಸಾಮಾಜಿಕ ಸಂಬಂಧದ ದ್ಯೋತಕವಾಗಿದೆಯೇ ಹೊರತು, ಜನಾಂಗಿಕ ಐಕ್ಯದ ಗುರುತಾಗಲಾರದು. ("Language is test of social contact and not of racial kinship"*). ಜನಾಂಗಿಕ ಐಕ್ಯವನ್ನು ಪ್ರಸ್ಥಾಪಿಸಿದ ಮೇಲೆ, ಭಾಷೆಯು ಪೂರಕ ಪ್ರಮಾಣವಾಗಬಹುದೇ ಹೊರತು, ಅದೇ ನಿರ್ಣಾಯಕವಾಗಲಾರದು. ಆದ್ದರಿಂದ, ಮ್ಯಾಕ್ಸಮುಲ್ಲರ್ ಅವರು ಹೇಳಿದಂತೆ ಭಾಷೆ ಮತ್ತು ಜನಾಂಗಗಳನ್ನು ಹೊಂದಿಸಬಯಸುವ ಈ ಪ್ರಯತ್ನಗಳೆಲ್ಲ ವಿಫಲವಾಗಲೇಬೇಕು.— "Any attempt at squaring the classification of races and tongues must necessarily fail."

ಎರಡನೆಯದಾಗಿ, ಮೇಲಿನ ವರ್ಗೀಕರಣದಲ್ಲಿ ಇನ್ನೂ ಒಂದು ದೋಷವಿದೆ. ಅದೆಂದರೆ, ಯಾವ ವರ್ಗೀಕರಣವೂ ಸಂಪೂರ್ಣ ಯಶಸ್ವಿಯಾಗಬೇಕಾದರೆ ಸರ್ವಗ್ರಾಹಿಯೂ, ನಿರ್ದುಷ್ಟವೂ ಆಗಿರುವುದು ಅತ್ಯವಶ್ಯಕ.

ಆ ರೀತಿ ನೋಡಿದರೆ, ಮೇಲಿನ ವರ್ಗೀಕರಣದಲ್ಲಿ ಅಮೇರಿಕೆ ಇಲ್ಲವೆ ಆಫ್ರಿಕಾ ಖಂಡಗಳ ಅನೇಕ ಭಾಷೆಗಳಾಗಲೀ, ಇಲ್ಲವೆ 'ಚೀನೀ' ಭಾಷೆಯಾಗಲೀ, ಸಮಾವೇಶವಾಗಿಲ್ಲ. ಆದ್ದರಿಂದ, ಮೇಲಿನ ವರ್ಗೀಕರಣವು ಶಾಸ್ತ್ರದೃಷ್ಟಿಯಿಂದ ನಿರ್ದುಷ್ಟವೂ ಆಗಿಲ್ಲ; ಸರ್ವಗ್ರಾಹಿಯೂ ಆಗಿಲ್ಲ.

ಅಂತಲೇ, ಆಧುನಿಕ ಭಾಷಾಶಾಸ್ತ್ರಜ್ಞರು ಈ ವರ್ಗೀಕರಣಕ್ಕಾಗಿ ಬೇರೆ ತತ್ವವನ್ನೇ ಸೂಚಿಸುತ್ತಿದ್ದಾರೆ. ಅವರ ಪ್ರಕಾರ ಯಾವುದೇ ಭಾಷೆಯ ವರ್ಗೀಕರಣದ ಮಾನದಂಡವು ಆ ಭಾಷೆಯ **ವ್ಯಾಕರಣವಾಗಿರಬೇಕೇ**

* H. K. L.

ವಿನಾ, ಬೇರಾವುದೂ ಸಲ್ಲದು. ಯಾಕೆಂದರೆ, ಅವರ ಪ್ರಕಾರ ಯಾವುದೇ ಭಾಷೆಯಲ್ಲಿ ನಿರಂತರವಾಗಿ ಉಳಿಯುವುದು ಆ ಭಾಷೆಯ ವ್ಯಾಕರಣವೇ ಹೊರತು, ಕೋಶವಾಗಲೀ, ಮತ್ತಾವುದಾಗಲೀ ಆಗದು. ನಾವು ಮುಂದಿನ ಪ್ರಕರಣಗಳಲ್ಲಿ ನೋಡುವಂತೆ, ಒಂದು ಭಾಷೆಯು ಕಾಲಕಾಲಕ್ಕೆ ಗುರುತಿಸಲಾರದಷ್ಟು ವ್ಯತ್ಯಾಸವನ್ನು ಹೊಂದಬಹುದು. ಆದರೆ, ಆ ಭಾಷೆಯ ವ್ಯಾಕರಣವು ಮಾತ್ರ ಮಾರ್ಪಡುವುದು ತೀರ ಕಡಿಮೆ; ಅದೂ ಏನಾದರೂ ಆದರೆ, ಅಲ್ಲಲ್ಲಿ ಮಾತ್ರ. ಅಂತಲೇ, ಈ ಬಗ್ಗೆ Gustave Oppert—ಎಂಬವರು ಹೇಳಿದ ಮಾತುಗಳು ಮನನೀಯವಾಗಿವೆ. Oppert ಅವರು ಹೇಳುವುದೇನಂದರೆ :—

> "A language can adopt and create as many words as it pleases, without changing its character; *but it can not alter its grammar, i s syntex, without becoming another; for grammar represents the innate mode of thought, over which the individual person or nation has no real control.*"

ಆದ್ದರಿಂದ, ಭಾಷೆಯಲ್ಲಿ ನಿರಂತರವೂ ಮತ್ತು ಸುನಿಶ್ಚಿತವೂ ಆದದ್ದು ಆ ಭಾಷೆಯ ಕೋಶವಲ್ಲ; ವ್ಯಾಕರಣ; ವಾಕ್ಯರಚನಾಕ್ರಮ. ಈ ಬಗ್ಗೆ ಬಿ. ಸಿ. ಮುಜುಮದಾರ ಎಂಬ ಆಧುನಿಕ ಭಾರತೀಯ ಭಾಷಾತತ್ವಜ್ಞರು ಕೂಡ ಬರೆಯುವುದೇನಂದರೆ :—

> "It is by grammar principally; and not by vocabulary, that the character of a speech is to be judged."

ಆದ್ದರಿಂದ, ಈ ತತ್ವದ ಪ್ರಕಾರ ಆಧುನಿಕ ಭಾಷಾತತ್ವಜ್ಞರು ಪ್ರಪಂಚದ ಎಲ್ಲ ಭಾಷೆಗಳನ್ನೂ **ಐದು** ವಿಧವಾಗಿ ವರ್ಗೀಕರಿಸಿದ್ದಾರೆ :—

(೧) **Isolative** 'ಪ್ರತ್ಯೇಕ' — ಚೀನೀ — ಮೊದಲಾದುವು ಈ ಭಾಷಾವರ್ಗಕ್ಕೆ ಸೇರಿದುವು. (೨) Agglutinative; 'ಸಮುಚ್ಚಾಯಕ' ಕನ್ನಡ ಮೊದಲಾದ ದ್ರಾವಿಡ ವರ್ಗದ ಭಾಷೆಗಳು ಈ ವರ್ಗಕ್ಕೆ ಸೇರಿದುವು. (೩) Inflectional—ಪ್ರಾತ್ಯಯಿಕ—ಸಂಸ್ಕೃತ ಮೊದಲಾದ ಆರ್ಯವರ್ಗದ ಭಾಷೆಗಳು ಇದಕ್ಕೆ ಸೇರಿದುವು. (೪) Poly-synthetic—'ಬಹುಪದಯುಕ್ತ'— (೫) Incorporating—'ಅಂತರ್ಗಮಕ' —'ಬಾಸ್ಕ್' ಮೊದಲಾದುವು ಈ ವರ್ಗಕ್ಕೆ ಸೇರಿದುವು ....

ಕನ್ನಡ ಮೊದಲಾದ ದ್ರಾವಿಡ ವರ್ಗದ ಭಾಷೆಗಳು ಯಾವ ವರ್ಗಕ್ಕೆ ಸೇರಿದುವೆಂಬುದನ್ನು ವಿಚಾರಿಸುವ ಮೊದಲು, ಈ ಮೇಲಿನ ಪದಗಳ ಅರ್ಥವೇನು ? ಸ್ವಲ್ಪ ನೋಡೋಣ :—

ಈ ಪದಗಳಲ್ಲಿ 'Isolative' ಅಥವಾ 'ಪ್ರತ್ಯೇಕ ಪದ' ಭಾಷೆಗಳೆಂದರೆ, ಪದಗಳ ಸ್ಥಾನಬಲದಿಂದಲೇ ಅರ್ಥವ್ಯಕ್ತಿಯನ್ನು ಕೊಡುತ್ತಿರುವ ಭಾಷೆಗಳು. ಈ ಭಾಷೆಗಳು ಅರ್ಥ–ವ್ಯಕ್ತಿಗಾಗಿ ಪ್ರತ್ಯಯಗಳ ಮೇಲೆ ಅವಲಂಬಿಸಬೇಕಾಗಿಲ್ಲ. ಪ್ರತಿಯೊಂದು ವಾಕ್ಯದಲ್ಲಿಯ ಪದಗಳ ಸ್ಥಾನವೇ ಆ ಆ ವಾಕ್ಯಗಳ ಅರ್ಥವನ್ನು ಸೂಚಿಸುತ್ತಿದೆ. ಅಂದರೆ, ಕನ್ನಡದಲ್ಲಿಯ ಒಂದು ಉದಾಹರಣೆಯನ್ನೇ ತೆಗೆದುಕೊಳ್ಳೋಣ: ಸದ್ಯ, 'ಕೊಡಲಿ, ಕಡಿದ, ರಾಮ, ಗಿಡ'—ಎಂದು ಮೊದಲಾಗಿ ಒಂದು ಶಬ್ದಗಳ ಗುಂಪನ್ನು ನಮಗೆ ಕೊಟ್ಟರೆ, ಈ ಗುಂಪನ್ನು ನಾವು ಯಾವ ರೀತಿ ಏರ್ಪಡಿಸಿದರೂ ನಮಗೆ ಸುಸ್ಪಷ್ಟವಾದ ಅರ್ಥವಾಗದು. ನಾವು 'ರಾಮ ಗಿಡ ಕೊಡಲಿ ಕಡಿದ'—ಎಂದು ಹೇಳಿಕೊಂಡರೂ, ಕಾರಕವಿಧಾನವಿಲ್ಲದ್ದರ ಮೂಲಕ ಸ್ಪಷ್ಟವಾದ ಅರ್ಥವು ನಮಗೆ ದೊರೆಯದು. ಇದನ್ನೇ 'ರಾಮ–**ನು** ಕೊಡಲಿ–**ಯಿಂದ** ಗಿಡ–**ವನ್ನು** ಕಡಿದ–**ನು**'—ಎಂದು ಕರಣ ಮತ್ತು ಕರ್ಮಗಳನ್ನು ಕೂಡಿಸಿ ಹೇಳಿದಾಗ ಮಾತ್ರ ಅರ್ಥವು ಸ್ಪಷ್ಟವಾಗುತ್ತದೆ. ಈ ರೀತಿ,

ಅರ್ಥ-ವ್ಯಕ್ತಿಗಾಗಿ ಪ್ರತ್ಯಯಗಳನ್ನು ಅವಲಂಬಿಸುವುದು 'ಪ್ರಾತ್ಯಯಿಕ' ಭಾಷೆಗಳ ಲಕ್ಷಣ. ಆದರೆ, ನಾವು ಈ ಮೊದಲೇ ವಿವರಿಸಿದಂತೆ, 'ಪ್ರತ್ಯೇಕ-ಪದ-ಭಾಷೆ'ಗಳಲ್ಲಿ ಇಂಥ ಪ್ರತ್ಯಯಗಳ ಆವಶ್ಯಕತೆಯಿಲ್ಲ. **ಪ್ರತಿಯೊಂದು ಪದವೂ ತನ್ನ ಸ್ಥಾನಬಲದಿಂದಲೇ ಅರ್ಥವನ್ನು ಸ್ಪಷ್ಟಗೊಳಿಸುತ್ತದೆ.**

ಈ ವರ್ಗದ ಭಾಷೆಗಳಿಗೆ 'ಚೀನೀ' ಭಾಷೆಯು ಒಳ್ಳೇ ದೃಷ್ಟಾಂತವಾಗಿದೆ. 'ಚೀನೀ' ಭಾಷೆಯಲ್ಲಿ ಪ್ರತಿಯೊಂದು ಪದದ ಸ್ಥಾನ ಮತ್ತು ಉಚ್ಚಾರಗಳ ರೀತಿಗಳೇ ಅರ್ಥವನ್ನು ತಿಳಿಸುತ್ತವೆ.

ಮುಂದಿನ ವಿಷಯಗ್ರಹಣದ ಸ್ಪಷ್ಟತೆಗಾಗಿ ಇಲ್ಲಿ ಈ ಚೀನೀ ಭಾಷೆಯ ಬಗ್ಗೆ ಕೆಲವು ಮಾತುಗಳನ್ನು ನೋಡೋಣ:—

ಪದಗಳ ಸ್ಥಾನ-ಬಲ; ಏಕಾಕ್ಷರತ್ವ; ಮತ್ತು 'ಧ್ವನಿ'ಗಳು (ಸ್ವರಾಘಾತ accent) 'ಚೀನೀ' ಭಾಷೆಯ ವೈಶಿಷ್ಟ್ಯಗಳಾಗಿವೆ. ಚೀನೀ ಭಾಷೆಯಲ್ಲಿ ಏಕಾಕ್ಷರಗಳಲ್ಲದೆ ಹೆಚ್ಚಿನ ವರ್ಣಗಳುಳ್ಳ ಪದಗಳೇ ಇಲ್ಲ; ಎರಡನೆಯದಾಗಿ ಈ ಪ್ರತಿಯೊಂದು ಪದಕ್ಕೂ ಅನೇಕ ರೀತಿಯ ಧ್ವನಿ ಇಲ್ಲವೆ 'ಸೊಲ್ಲು' (accent) ಗಳಿವೆ. ಉದಾಹರಣೆಗೆ '*wang*' ಎಂಬ ಪದವನ್ನು **ಒಂದು ರೀತಿಯಾಗಿ ಉಚ್ಚರಿಸಿದರೆ** 'ಅರಸು' ಎಂದು ಅರ್ಥವಾಗುತ್ತದೆ; ಅದೇ ಅದನ್ನು ಬೇರೊಂದು ರೀತಿಯಾಗಿ ಉಚ್ಚರಿಸಿದರೆ 'ಅರಸ-ನಾಗು' ಎಂದು ಅರ್ಥ ವಾಗುತ್ತದೆ. ಒಂದು ಧ್ವನಿಯಲ್ಲಿ 'tsung' ಅಂದರೆ 'ಅನುಸರಿಸು'; ಬೇರೊಂದು ರೀತಿಯಲ್ಲಿ 'ಅನುಸರಿಸು ವವ-ಹಿಂದಾಳು'; ಇನ್ನೊಂದು ಧ್ವನಿಯಲ್ಲಿ 'ಹೆಜ್ಜೆಗಳು'. ಅದರಂತೆ, ಒಂದು ರೀತಿಯಲ್ಲಿ 'tshi' ಅಂದರೆ 'ಹೆಂಡತಿ'; ಮತ್ತೊಂದು ರೀತಿಯಲ್ಲಿ 'ಮದುವೆಯಾಗು'. 'haó' ಅಂದರೆ ಒಳ್ಳೆಯದು'; 'hao′' 'ಪ್ರೀತಿ-ಪ್ರಣಯ'. ಅಷ್ಟೇ ಏಕೆ? ಒಂದು ಧ್ವನಿಯಲ್ಲಿ 'sheu' ಅಂದರೆ 'ದೊರಕಿಸು';—ಮತ್ತೊಂದು ಧ್ವನಿಯಲ್ಲಿ 'ಕೊಡು'. ಎರಡೂ ವಿರುದ್ಧಾರ್ಥಗಳು! ಒಂದು ಧ್ವನಿಯಲ್ಲಿ 'mai' ಅಂದರೆ 'ಕೊಳ್ಳು'; ಮತ್ತೊಂದರಲ್ಲಿ 'ಮಾರು'. 'na' ಸಾವಕಾಶವಾಗಿ ಅಂದರೆ 'ಮೂರ್ಖ' ಜೋರಾಗಿ ಅಂದರೆ 'ಮೋಸಗೊಳಿಸು'.

ಇದರಂತೆ, ಪದಗಳ ಸ್ಥಾನದಿಂದಲೇ ಅರ್ಥವನ್ನು ಕೂಡ ಊಹಿಸಿಕೊಳ್ಳಬೇಕು. ಉದಾಹರಣೆಗೆ, 'ta kuok' ಅಂದರೆ 'ದೊಡ್ಡ ರಾಷ್ಟ್ರ'; ಅದೇ 'kuok ta' ಅಂದರೆ, 'ರಾಷ್ಟ್ರವು ದೊಡ್ಡದಾಗಿದೆ' ಎಂಬ ವಾಕ್ಯ. 'tsi· niu' ಅಂದರೆ 'ಹುಡುಗರು ಮತ್ತು ಹುಡುಗೆಯರು'; 'niu tsi·' ಅಂದರೆ 'ಹೆಣ್ಣು-**ಕೂಸು**' ಇತ್ಯಾದಿ.

ಸಾರಾಂಶವೇನೆಂದರೆ, 'Isolative' ವರ್ಗದ ಭಾಷೆಯಾದ 'ಚೀನೀ'-ಮೊದಲಾದ ಭಾಷೆಗಳಲ್ಲಿ ಪ್ರತಿಯೊಂದು ಪದದ ಸ್ಥಾನವೂ ಮತ್ತು ಧ್ವನಿಯೂ ವಾಕ್ಯದಲ್ಲಿಯ ಆ ಆ ಪದಗಳ ಅರ್ಥವನ್ನು ಸೂಚಿಸುತ್ತವೆ.

ಈ ಮುಂದಿನ 'agglutinative' ಮತ್ತು 'inflexional' ವರ್ಗಗಳು ಮೂಲತಃ ಹೆಚ್ಚುಕಡಿಮೆ ಒಂದೇ ಸ್ವರೂಪದವು. ಇವೆರಡರಲ್ಲಿಯೂ ಪ್ರತ್ಯಯಗಳಿಗೇ ಪ್ರಾಧಾನ್ಯತೆಯಿದೆ. ಈ ಪ್ರತ್ಯಯಗಳ ಮೂಲಕ ವಾಗಿಯೇ, ವಾಕ್ಯದಲ್ಲಿಯ ಪದಗಳ ಸಂಬಂಧವನ್ನು ಅರಿತುಕೊಳ್ಳಬೇಕು. ಈ ಭಾಷೆಗಳಲ್ಲಿಯ ಪ್ರತ್ಯಯಗಳು ಕೂಡ, ಮೂಲತಃ ಪ್ರತ್ಯೇಕ ಶಬ್ದಗಳೇ ಆಗಿದ್ದವು. ಅನಂತರ ಇವು ಬೇರೆ ಪದಗಳಿಗೆ 'ಅಂಟಿ' (glue) ಪ್ರತ್ಯಯ ಸ್ವರೂಪವನ್ನು ಪಡೆದವು.

ಈ ಎರಡೂ ವರ್ಗಗಳಲ್ಲಿಯ ವ್ಯತ್ಯಾಸವೆಂದರೆ, 'agglutinative' ವರ್ಗದಲ್ಲಿ **ಈ ಪ್ರತ್ಯಯಗಳು ಒಂದು ಕಾಲಕ್ಕೆ ಪ್ರತ್ಯೇಕ ಶಬ್ದಗಳೇ ಆಗಿದ್ದುವೆಂಬುದನ್ನು ಇಂದಿಗೂ ಗುರುತಿಸಲು ಕೂಡ ಬರುವಂತಿದೆ; ಆದರೆ '*inflexional*' ವರ್ಗವು ಮಾತ್ರ ಇದಕ್ಕೂ ಒಂದು ಹೆಜ್ಜೆ ಮುಂದೆ ಹೋದದ್ದರಿಂದ ಅವುಗಳ ಮೂಲಸ್ವರೂಪವನ್ನು ಕಾಣದಂತಿದೆ**

ಉದಾಹರಣೆಗೆ, ಈ ಎರಡೂ ವರ್ಗಗಳ ಪ್ರಾತಿನಿಧಿಕ ಭಾಷೆಗಳಾದ ಕನ್ನಡ ಮತ್ತು ಸಂಸ್ಕೃತಗಳನ್ನೇ ತೆಗೆದುಕೊಳ್ಳೋಣ. Inflexion ವರ್ಗದ ಸಂಸ್ಕೃತದಲ್ಲಿ ಈ ಪ್ರತ್ಯಯಗಳ ಮೂಲಸ್ವರೂಪವನ್ನು ಕೂಡ ಇಂದು ಗುರುತಿಸಲು ಬರುವಂತಿಲ್ಲ. ರಾಮೇಣ ಶಬ್ದದಲ್ಲಿಯ 'ಏಣ'ಕ್ಕಾಗಲೀ, 'ರಾಮಸ್ಯ' ಶಬ್ದದಲ್ಲಿಯ ಷಷ್ಠಿಗಾಗಲೀ ಸುಸ್ಪಷ್ಟವಾದ ನಿರುಕ್ತವು ಸಕೃದ್ದರ್ಶನಕ್ಕೆ ಕಾಣುವದಿಲ್ಲ.

ಆದರೆ, agglutinative ವರ್ಗದ ಕನ್ನಡ ಮೊದಲಾದ ಭಾಷೆಗಳಲ್ಲಿ ಮಾತ್ರ ಈ ಪ್ರತ್ಯಯಗಳ ಮೂಲಸ್ವರೂಪವು ಇನ್ನೂ ಎಷ್ಟೋ ಮಟ್ಟಿಗೆ ಸುಸ್ಪಷ್ಟವಿದೆ. ಕನ್ನಡ ಪ್ರತ್ಯಯಗಳನ್ನು ಇಂದಿಗೂ ಸ್ವತಂತ್ರ ಪದಗಳಾಗಿ ಉಪಯೋಗಿಸಬಹುದು. 'ರಾಮಂಗೆ' ಎನ್ನುವ ಚತುರ್ಥಿಯಲ್ಲಿಯ 'ಗೆ' ಪ್ರತ್ಯಯವು ಕೂಡ ಒಂದು ಕಾಲಕ್ಕೆ ಸ್ವತಂತ್ರ ಶಬ್ದವೇ ಆಗಿತ್ತು. ಅದು ಮೊದಲು 'ರಾಮಂ ಕೆಯ್' 'ರಾಮಂ ಕೆಯ್ ಪಣ್ ಕೊಟ್ಟಂ'—ಎಂದು ಮೊದಲಾಗಿ ಇತ್ತೆಂದು ಹೇಳುತ್ತಾರೆ. ಅಂದರೆ, 'ರಾಮನ ಕೈಯಲ್ಲಿ ಹಣ್ಣನ್ನು ಕೊಟ್ಟ'—ಎಂದು ಅರ್ಥ. ಈ 'ಕೆಯ್' ಪದವೇ ಅನಂತರ 'ಕೆ' ಎಂಬ ಪ್ರತ್ಯಯ ರೂಪವನ್ನು ಪಡೆದುಕೊಂಡಿದೆ ಎಂದು ಅಭಿಪ್ರಾಯ

ಕನ್ನಡದ ಉಳಿದ ಪ್ರತ್ಯಯಗಳ ಮಾತು ಇದಕ್ಕೂ ಹೆಚ್ಚು ಸ್ಪಷ್ಟವಿದೆ. ಪಂಚಮಿಯ ಅತ್ತಣಿಂ, ಇಂ,—ಮೊದಲಾದವುಗಳನ್ನೂ, ಸಪ್ತಮಿಯ 'ಅಲ್ಲಿ' 'ಒಳ್'— ಮೊದಲಾದವುಗಳನ್ನೂ — ಇಂದಿಗೂ ಸ್ವತಂತ್ರ ಶಬ್ದಗಳಾಗಿ ಉಪಯೋಗಿಸಬಹುದು. ಷಷ್ಠಿಯ 'ಅ' ಪ್ರತ್ಯಯವು ಕೂಡ 'ಅದು'—ಎಂಬುದರ ಸವಕಳಿ ರೂಪವೆಂದು ಹೇಳುತ್ತಾರೆ. ಇದೇ ಮಾತು ಕ್ರಿಯಾರೂಪಗಳಿಗೂ ಅನ್ವಯಿಸುತ್ತದೆ.

ಸಾರಾಂಶವೇನಂದರೆ, agglutinative ಮತ್ತು inflexional ವರ್ಗಗಳ ಕನ್ನಡ ಮತ್ತು ಸಂಸ್ಕೃತ ಗಳೆರಡರಲ್ಲೂ, ಅರ್ಥನಿರ್ಣಯದಲ್ಲಿ ಪ್ರತ್ಯಯಗಳಿಗೇ ಪ್ರಾಧಾನ್ಯತೆಯಿದ್ದರೂ, agglutinative ವರ್ಗಗಳಲ್ಲಿ ಇಂದಿಗೂ ಆ ಪ್ರತ್ಯಯಗಳು ಮೂಲತಃ ಸ್ವತಂತ್ರ ಶಬ್ದಗಳಾಗಿದ್ದುವೆಂಬುದನ್ನು ಕಾಣಬಹುದಾಗಿದೆ; ಆದರೆ 'inflexion' ವರ್ಗದಲ್ಲಿ ಮಾತ್ರ ಅವು ಗುರುತಿಸದಷ್ಟು ಒಳಸೇರಿ ಬಿಟ್ಟಿವೆ.

ಅವರು ಹೇಳಿದಂತೆ, agglutinativeದಲ್ಲಿ ನೆಲಗಟ್ಟಿನ **ಫರಸುಗಳು** ಇನ್ನೂ ಸ್ಪಷ್ಟವಾಗಿ ಕಾಣುವಂತಿವೆ; inflexionದಲ್ಲಿ ಅದೆಲ್ಲ 'ಸಿಮೆಂಟ concrete' ಆಗಿದೆ.

ವಿಜ್ಞಾನದ ಭಾಷೆಯಲ್ಲಿ ಹೇಳಬೇಕಾದರೆ, ಒಂದು ಬಹುಶಃ Physical mixture; ಮತ್ತೊಂದು ಹೆಚ್ಚುಕಡಿಮೆ Chemical compound.

'Incorporating' ವರ್ಗವು ಇದಕ್ಕೂ ಒಂದು ಹೆಜ್ಜೆ ಮುಂದು ಹೋಗಿದ್ದರೆ, 'Polysynthetic' ವರ್ಗದಲ್ಲಿ ಅನೇಕ ಪದಗಳು ಕೂಡಿಯೇ ಒಂದು ವಾಕ್ಯವನ್ನು ಹೇಳುತ್ತಿವೆ. Sweet ಅವರು ಹೇಳುವಂತೆ, —
"If inflexion is agglutination run mad incorporation is inflexion run madder still."

ಹಾಗಾದರೆ ದ್ರಾವಿಡ ಭಾಷೆಗಳು ಯಾವ ವರ್ಗಕ್ಕೆ ಸೇರಿದುವು?

ಮೇಲಿನ ಚರ್ಚೆಯಲ್ಲಿ, ಆನುಷಂಗಿಕವಾಗಿ ದ್ರಾವಿಡ ಭಾಷೆಗಳು 'ವ್ಯಾಕರಣ' ದೃಷ್ಟಿಯಿಂದ 'agglutinative' ವರ್ಗಕ್ಕೆ ಸೇರಿವವುಗಳೆಂಬುದನ್ನು ಸೋದಾಹರಣವಾಗಿ ನೋಡಿಯೇ ಇದ್ದೇವೆ.

ಈ ಹಿಂದಿನ ಭಾಷಾಶಾಸ್ತ್ರಜ್ಞರೆಲ್ಲರೂ ಪ್ರಪಂಚದ ಭಾಷೆಗಳನ್ನೆಲ್ಲ ಆರ್ಯ, ಸಿದಿಯನ್ ಮತ್ತು ಸೆಮಿಟಿಕ್ ಎಂಬ ತ್ರಿ–ವರ್ಗಕ್ಕೆ ಇಳಿಸಿದ್ದರೆಂಬುದನ್ನು ಈ ಮೊದಲೇ ನೋಡಿದ್ದೇವಷ್ಟೇ. ಆ ವರ್ಗೀಕರಣದ ಪ್ರಕಾರ ಅನೇಕ ಪಂಡಿತರು ದ್ರಾವಿಡ ಭಾಷೆಗಳನ್ನು ಆ ಈ ಗುಂಪುಗಳಿಗೆ ಸೇರಿಸಲು ಯತ್ನಿಸಿದರು.

ಸೆಲ್ಟಿಕ್ ಮತ್ತು ಟ್ಯುಟಾನಿಕ್ ಭಾಷೆಗಳಿಗೂ ದ್ರಾವಿಡ ಭಾಷಾಸ್ಕಂಧಕ್ಕೂ ಇರುವ ಹಲವು ಸಾಮ್ಯಗಳ ಮೂಲಕ ಡಾ. **ಪೋಪ್** ಅವರು ಎಲ್ಲ ದ್ರಾವಿಡ ಭಾಷೆಗಳನ್ನು **'ಆರ್ಯ'** ವರ್ಗಕ್ಕೆ ಸೇರಿಸಿದರು. ಡಾ. ಗೋವರ್, ಶೇಷಗಿರಿಶಾಸ್ತ್ರಿ ಮೊದಲಾದವರೂ ಈ ಅಭಿಪ್ರಾಯವನ್ನೇ ಅನುಮೋದಿಸಿದರು.

ಆದರೆ, ಡಾ. ಕಾಲ್ಡ್‌ವೆಲ್‌ರಿಗೆ ಮಾತ್ರ ಪೋಪ್ ಸಾಹೇಬರ ಅಭಿಪ್ರಾಯವು ಸರಿಯೆನಿಸಲಿಲ್ಲ. ಯಾಕೆಂದರೆ, ಅವರ ಪ್ರಕಾರ ಪೋಪ್ ಸಾಹೇಬರು ಸಂಬಂಧ ಹೇಳುವ 'ಸೆಲ್ಟಿಕ್' ವರ್ಗದ ಭಾಷೆಗಳೇ ಸ್ವತಃ ಸಿದಿಯನ್‌ದ ಸಮೀಪಕ್ಕೆ ಹೆಚ್ಚಾಗಿ ಇದ್ದುದರಿಂದ, ಅವರು ದ್ರಾವಿಡ ಭಾಷೆಗಳನ್ನೆಲ್ಲ 'ಸಿದಿಯನ್' ವರ್ಗಕ್ಕೆ ಸೇರಿಸಿದರು. "Of all the members of the Indo-European family the Celtic is that which appears to have most in common with the *Scythian group* and especially with the languages of the Finnish family."

ಡಾ. ಮ್ಯಾಕ್ಸ್‌ಮುಲ್ಲರ್ ಅವರು ಕೂಡ ದ್ರಾವಿಡ ಭಾಷೆಗಳನ್ನು 'ಸಿದಿಯನ್' ವರ್ಗಕ್ಕೇ ಸೇರಿಸಿದರು.–– ಆದರೆ, ಅದರ ಜೊತೆಗೆ ಈ ಭಾಷೆಗಳ agglutination ರೀತಿಯನ್ನೂ ಸೂಚಿಸಿದರು.

ಡಾ. ವಿಟ್ನೆ ಅವರೂ 'ಫಿನಿಶ್' ಸಂಬಂಧವನ್ನೇ ಹೇಳಿದರು:— "The Dravidian Languages have some peculiar phonetic elements, are richly polysyllabic of general agglutinative structure.*" ಇತ್ಯಾದಿಯಾಗಿ ಅವರು ಸಾರಿದರು.

ಈ ಎಲ್ಲ ಮಾತುಗಳಿಂದ ಸ್ಪಷ್ಟವಾಗುವ ಒಂದು ಅಭಿಪ್ರಾಯವೆಂದರೆ—ದ್ರಾವಿಡ ಭಾಷೆಗಳಲ್ಲೆಲ್ಲ agglutination ಎಂಬುದು ಮಹತ್ತ್ವದ ಅಂಶವಾಗಿದೆ. ಆದರೆ, ಮೇಲಿನ ತ್ರಿ–ವರ್ಗದಲ್ಲಿಯ ಲೋಪ-ದೋಷಗಳನ್ನು ನಾವು ಈ ಮೊದಲೇ ಕಂಡಿದ್ದೇವೆ. ಆದ್ದರಿಂದ, ನಾವು ದ್ರಾವಿಡ ಭಾಷೆಗಳು ಹಿಂದುಸ್ಥಾನದ ಹೊರಗಿನ ಯಾವ ಭಾಷಾವರ್ಗಕ್ಕೂ ಸೇರಿರದೆ ಸ್ವತಂತ್ರವಾದವುಗಳೆಂದೂ ಮತ್ತು agglutination ಲಕ್ಷಣಯುಕ್ತವಾದವುಗಳೆಂದೂ ಮಾತ್ರ ಹೇಳಿದರೆ ಸಾಕು.

ಡಾ. ಗ್ರಿಯರ್ಸನ್ ಅವರು ಹೇಳುವಂತೆ, ಇಂದಿನ ಪರಿಸ್ಥಿತಿಯಲ್ಲಿ ಈ ಭಾಷೆಗಳನ್ನು ಹೊರಗಿನ ಯಾವ ಭಾಷಾವರ್ಗಕ್ಕೂ ಸೇರಿಸುವ ಆವಶ್ಯಕತೆ ಇಲ್ಲ.

> "With regard to the Dravidian Languages, the attempt to connect them with other linguistic families outside India, is now generally recognised as a failure and we must still consider them as an isolated family."†

* H. K. L. † L. S. O. I. Vol IV, P. 282.

ದ್ರಾವಿಡ ಭಾಷೆಗಳ ವೈಶಿಷ್ಟ್ಯಗಳು

ಹಾಗಾದರೆ, ಉಳಿದ ಆರ್ಯ ವರ್ಗದ ಭಾಷೆಗಳಿಂದ ಭಿನ್ನವಾಗಿ, ದ್ರಾವಿಡ ಭಾಷೆಗಳ ವೈಶಿಷ್ಟ್ಯಗಳೇನಾದರೂ ಇವೆಯೋ ನೋಡೋಣ.

ಕೇಶಿರಾಜನು ತನ್ನ ವ್ಯಾಕರಣದ ಸಮಾಪ್ತಿ ಮಾಡುವಾಗ ಹೇಳಿದ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಕೆಲವಾದರೂ ಸಮಗ್ರ ದ್ರಾವಿಡ ಭಾಷಾಸ್ಕಂಧಕ್ಕೇ ಅನ್ವಯಿಸುತ್ತಿವೆಯೆಂದು ಹೇಳಬೇಕು. ಕೇಶಿರಾಜನ ಪ್ರಕಾರ ಕನ್ನಡದ ಅಸಾಧಾರಣ ಲಕ್ಷಣಗಳೆಂದರೆ:—

" ಗಮಕ ಸಮಾಸದಿಂ ಐಟಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ ।
ಸಮುಚಿತವಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ ।
ವಮಹಪಭೇದದಿಂ ವಿರಹಿತಾವ್ಯಯ ಸಂಸ್ಕೃತ ಲಿಂಗದಿಂ ಪದೋ- ।
ತ್ತಮ ಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ ॥" *

ಇವುಗಳಲ್ಲಿ ಹಲವಾದರೂ ಇಡೀ ದ್ರಾವಿಡ ಭಾಷೆಗಳ ವೈಶಿಷ್ಟ್ಯಗಳಾಗಿವೆ.

ಡಾ. ಕಾಲ್ಡ್‌ವೆಲ್ ಅವರ ಪ್ರಕಾರ ಈ ಕೆಳಗಿನ ಅಂಶಗಳು ದ್ರಾವಿಡ ಭಾಷಾವೈಶಿಷ್ಟ್ಯಗಳು — (೧) ನಿರ್ಜೀವ ಮತ್ತು ಬುದ್ಧಿಹೀನ ವಿಷಯಗಳನ್ನು ಸೂಚಿಸುವ ಪದಗಳೆಲ್ಲ ಈ ಭಾಷೆಗಳಲ್ಲಿ ನಪುಂಸಕವೇ ಆಗಿವೆ. (೨) ನಾಮಪದಗಳಿಗೆ ಪ್ರತ್ಯೇಕ ವಿಭಕ್ತಿಪ್ರತ್ಯಯಗಳಿರದೆ ಬೇರೆ ಬೇರೆ ಪದಗಳೇ ವಿಭಕ್ತಿಪ್ರತ್ಯಯಗಳಾಗಿವೆ. (೩) ವಿಶೇಷಣಗಳಿಗೆ ವಿಭಕ್ತಿಪ್ರತ್ಯಯ ಹತ್ತುವದಿಲ್ಲ (೪) ಕರ್ಮಣಿಪ್ರಯೋಗವಿಲ್ಲ. (೫) ಸಮುಚ್ಚಯವಾಚಕಗಳ ಬದಲು, ಹಲವು ವರ್ಣಗಳನ್ನೇ ಈ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. ಇತ್ಯಾದಿ.

ಈ ಕೆಳಗಿನವೂ ದ್ರಾವಿಡ ಭಾಷಾವೈಶಿಷ್ಟ್ಯಗಳಾಗಿವೆ.

೧. **ಶಬ್ದಾಂತ್ಯ ಸ್ವರ**:—ದ್ರಾವಿಡ ಭಾಷೆಗಳ ಶಬ್ದಗಳು ವ್ಯಂಜನಾಂತವಾಗಿರುವುದು ಕಡಿಮೆ. ಇದ್ದುಬಿದ್ದ ವ್ಯಂಜನಾಂತಗಳನ್ನು ಕೂಡ, ಎಂದಿನಿಂದಲೋ ಕವಿಗಳು ಸ್ವರಾಂತಗಳಾಗಿ ವ್ಯವಹರಿಸಲು ಹತ್ತಿದರು. ಅಂತಲೇ, ೧೩ನೆಯ ಶತಮಾನದಲ್ಲಿಯ ಕೇಶಿರಾಜನು ತನ್ನ ವ್ಯಾಕರಣದ ೪೮ನೆಯ ಸೂತ್ರದಲ್ಲಿ ನಿಜವಾಗಿಯೂ ವ್ಯಂಜನಾಂತಗಳಾಗಿರುವ ಶಬ್ದಗಳ ಒಂದು ಪಟ್ಟಿಯನ್ನೇ ಕೊಡಬೇಕಾಯಿತು.

" ಯರ ಲಣ ನಳ ಐಟ ವರ್ಣೋತ್ಕರಮೆ
ವಲಂ ಪದದ ಕಡೆಯೊಳ್ ಅಸ್ವರ ವಿಧಿಯಂ ಪಿರಿದುಂ ತಾಳ್ದುಗುಮ್ "

ಅಷ್ಟೇ ಅಲ್ಲದೆ, ಕೇಶಿರಾಜನ ಪ್ರಕಾರ ಕನ್ನಡದಲ್ಲಿ ಈ ಅಂಶವನ್ನು **ಅರಿತಿರುವವರೇ** ಸರಿಯಾಗಿ ಕಾವ್ಯಗಳನ್ನು ಗ್ರಥಿಸಬಲ್ಲರು.— **" ಇನಿವರ್ ಅಱಿವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್ "**. ಇಷ್ಟಾಗಿಯೂ ಕೂಡ, ಕೇಶಿರಾಜನು ಕರು, ತಣು, ಪುಟು — ಮೊದಲಾದುವು ಸ್ವರಾಂತವೆಂದೇ ಹೇಳಬೇಕಾಯಿತು.

ಆದ್ದರಿಂದ, ಈ ರೀತಿ ಸ್ವರಾಂತವಾಗಿರುವುದೂ, ಒಂದು ವೇಳೆ ಇರದಿದ್ದರೂ ಸ್ವರಾಂತವನ್ನಾಗಿ ಮಾಡಿಕೊಳ್ಳುವುದೂ, ದ್ರಾವಿಡ ಭಾಷೆಗಳ ವೈಶಿಷ್ಟ್ಯವಾಗಿದೆ. ಆದರೆ, ಅದೇ ಉಳಿದ ಭಾಷಾವರ್ಗಗಳಲ್ಲಿಯ

* ಶ. ಮ. ದ. ಪು. ೨೯೩

ಪದಗಳು ಹೇರಳವಾಗಿ ವ್ಯಂಜನಾಂತವಾಗಿರುವುದನ್ನು ಕಾಣುತ್ತೇವೆ. ಇಂಗ್ಲೀಷದ ಯಾವುದೇ ಶಬ್ದವನ್ನು ನೋಡಿದರೂ, ಅದು ವ್ಯಂಜನಾಂತವಾಗಿಯೇ ಹೆಚ್ಚಾಗಿ ಇರುತ್ತದೆ. ಉದಾ: ಕ್ಯಾಪ್, ಮ್ಯಾಚ್, ಕಾಲೇಜ್ ಇತ್ಯಾದಿ. ಈ ಶಬ್ದಗಳೆಲ್ಲ ಕನ್ನಡಕ್ಕೆ ಬರುವಾಗ **ಸ್ವರಾಂತಗಳಾಗಿ** ಕ್ಯಾಪು, ಕಾಲೇಜು—ಎಂದು ಮೊದಲಾಗಿ ಬರುತ್ತವೆ.

೨. ಎರಡನೆಯದಾಗಿ **ಸ್ವರಾನುರೂಪತೆಯೂ** ದ್ರಾವಿಡ ಭಾಷೆಗಳ ವೈಶಿಷ್ಟ್ಯವಾಗಿದೆ. ಇದಕ್ಕೆ ಇಂಗ್ಲೀಷಿನಲ್ಲಿ 'Vocalic harmony' ಎನ್ನುತ್ತಾರೆ. ಇದರ ಪ್ರಕಾರ ಒಂದು ಶಬ್ದದ ವ್ಯಾಕರಣಶುದ್ಧವಾದ ರೂಪವು ಏನೇ ಇರಲಿ; ಉಚ್ಚಾರಸೌಲಭ್ಯತೆಯ ದೃಷ್ಟಿಯಿಂದ ಆ ಶಬ್ದದಲ್ಲಿಯ ಮೊದಲ ಸ್ವರವು ಕೊನೆಯ ಸ್ವರದ ರೂಪವನ್ನೇ ಪಡೆಯುತ್ತದೆ. ಅಂತಲೇ, ಇದಕ್ಕೆ 'ಸ್ವರಾನುರೂಪ್ಯ' ಎಂದು ಹೆಸರು. ಉದಾಹರಣೆಗೆ, ವ್ಯಾಕರಣ ನಿಯಮಗಳ ಪ್ರಕಾರ 'ಮಾಡು' ಧಾತುವಿನ ವರ್ತಮಾನರೂಪ 'ಮಾಡುತ್ತೇನೆ' — ಎಂದಾಗುತ್ತದೆ. ಆದರೆ, ಅದೇ ರೂಪವು ಯಾವುದೋ ಕಾರಣದ ಮೂಲಕವಾಗಿ ಮಾಡು**ತ್ತೇ**—**ನಿ**— ಎಂದಾದಾಗ, ಈ ರೂಪವು ಬಹಳ ಕಾಲ ನಿಲ್ಲದು. ಯಾಕಂದರೆ, ನಾವು ಮೇಲೆ ವಿವರಿಸಿದ ತತ್ವದ ಪ್ರಕಾರ, ಕೊನೆಯ 'ನಿ' ಸ್ವರದ ರೂಪವನ್ನೇ ಹಿಂದಿನ 'ಏ' ಸ್ವರವೂ ಪಡೆಯುತ್ತದೆ. ಹೀಗಾಗಿ, ಮಾಡುತ್ತಏ—**ನಇ** (ತ್ತೀನಿ), ಹೋಗಿ 'ಮಾಡತ್ಈ—ನಇ(ಮಾಡ್ತೀನಿ)—ಎನ್ನುವ ರೂಪವು ಸಿದ್ಧವಾಯಿತು. ಅದರಂತೆಯೇ, 'ನಿಂತೀನಿ' 'ಬರತೀನಿ'—ಇತ್ಯಾದಿ. ಇದರಂತೆಯೇ ಉಳಿದ ದ್ರಾವಿಡ ಭಾಷೆಗಳಲ್ಲಿ, ಕಟ್ಟುಕು, ಕಟ್ಟುಲಾಕು; ಕಲುಗುಡುನು, ಕಲಿಗಿಟನಿ; ಎಂದು ಮೊದಲಾಗಿ ರೂಪಗಳಿವೆ. ಈ ಅಂಶವು ಎಲ್ಲ ಉರಲ್-ಅಲ್ಟಾಯಿಕ್ ಭಾಷೆಗಳಿಗೂ ಸಾಮಾನ್ಯವಾಗಿದೆ.

೩. ದ್ರಾವಿಡ ಭಾಷೆಗಳಲ್ಲಿ ಲಿಂಗ-ವಿವಕ್ಷೆಯು ಉಳಿದ ಆರ್ಯ ಭಾಷೆಗಳಂತೆ, ಅಸ್ಪಷ್ಟವಾಗಿರದೆ ಕ್ರಮಬದ್ಧವಾಗಿದೆ. ಈ ಭಾಷೆಗಳಲ್ಲಿ ಲಿಂಗವಿವಕ್ಷೆಯು ಯಾವುದೇ ಒಂದು ವಸ್ತುವು 'ಬುದ್ಧಿಶಕ್ತಿ' ಇದ್ದುದೇ? ಅಥವಾ 'ಇಲ್ಲದ್ದೇ'—ಎಂಬುದರ ಮೇಲೆ ಅವಲಂಬಿಸಿದೆ.

೪. ದ್ರಾವಿಡದಲ್ಲಿ ದ್ವಿ-ವಚನವಿಲ್ಲ.

ದ್ರಾವಿಡ ಭಾಷೆಗಳಲ್ಲಿ ಏಕವಚನ ಮತ್ತು ಬಹುವಚನಗಳಲ್ಲಿ ಬೇರೆ ಬೇರೆ ವಿಭಕ್ತಿಪ್ರತ್ಯಯಗಳಿಲ್ಲ. ಒಂದೇ ವಿಭಕ್ತಿ ಪ್ರತ್ಯಯಗಳ ಗುಂಪೇ ಏಕವಚನ ಮತ್ತು ಬಹುವಚನಗಳೆರಡಕ್ಕೂ ಸೇರುತ್ತದೆ. ಆದರೆ, ಆರ್ಯ ವರ್ಗದ ಸಂಸ್ಕೃತ ಭಾಷೆಯಲ್ಲಿ ಹೀಗಿಲ್ಲ. ಅಲ್ಲಿ ಏಕವಚನ ಮತ್ತು ಬಹುವಚನಗಳಿಗೆ ಬೇರೆ ಬೇರೆ ವಿಭಕ್ತಿಪ್ರತ್ಯಯಗಳ ಗುಂಪೇ ಇರುತ್ತವೆ. ಉದಾಹರಣೆಗೆ, 'ರಾಮ' ಶಬ್ದವನ್ನೇ ತೆಗೆದುಕೊಳ್ಳೋಣ. ಅದು ಸಂಸ್ಕೃತದಲ್ಲಿ ಪ್ರತ್ಯಯಗಳನ್ನು ಧರಿಸುವ ರೀತಿಯೆಂದರೆ—

ರಾಮ**ಃ**	ರಾ**ಮೌ**	ರಾ**ಮಾಃ**
ರಾಮ**ಮ್**	ರಾಮೌ	ರಾ**ಮಾನ್**
ರಾ**ಮೇಣ**	ರಾ**ಮಾಭ್ಯಾಂ**	ರಾ**ಮೈಃ**—ಇತ್ಯಾದಿ.

ಆದರೆ, ಅದೇ ಶಬ್ದವು ಕನ್ನಡದಲ್ಲಿ—

ರಾ**ಮಂ**	ರಾಮ**ರ್**
ರಾಮ**ನಮ್**	ರಾಮ**ರಮ್**
ರಾಮ**ನಿಂದ**	ರಾಮ**ರಿಂದ**
ರಾಮ**ನಿಗೆ**	ರಾಮ**ರಿಗೆ**—

ಎಂದು ಮೊದಲಾಗಿ ಏಕ ಮತ್ತು ಬಹುವಚನಗಳೆರಡರಲ್ಲೂ. 'ಮಮಿಂಕೆ ಅದದೊಳೆ'—ಎಂಬ ಒಂದೇ ವಿಧದ ಪ್ರತ್ಯಯಗಳನ್ನೇ ಪಡೆಯುತ್ತದೆ. **ಸಂಸ್ಕೃತದಿಂದ ಭಿನ್ನನಾದ** ಈ ವಿಭಕ್ತಿಪ್ರತ್ಯಯಗಳ ರೀತಿಯೂ ದ್ರಾವಿಡ ವರ್ಗದ ವೈಶಿಷ್ಟ್ಯವಾಗಿದೆ.

೬. ಸಂಖ್ಯಾವಾಚಕಗಳೂ ಕನ್ನಡದಲ್ಲಿ ಸಂಸ್ಕೃತದಿಂದ ಭಿನ್ನವಾಗಿದ್ದು, ನೂರು ಎಂಬ ಸಂಖ್ಯೆಯು ಮೊದಲು ಸಾಮಾನ್ಯವಾದ ಅನೇಕತ್ವವನ್ನು ಹೇಳುತ್ತಿದ್ದಿತು

೭. ಸರ್ವನಾಮಗಳಲ್ಲೂ ದ್ರಾವಿಡ ವರ್ಗದಲ್ಲಿ inclusive ಮತ್ತು exclusive ಎಂಬ ಎರಡು ಬಗೆಯ ಸರ್ವನಾಮಗಳಿದ್ದುದನ್ನು ಕಾಣುತ್ತೇವೆ. ಅಂದರೆ, ಒಂದರಲ್ಲಿ ಮಾತಾಡುವವರನ್ನು ಸೇರಿಸಿಯೂ ಮತ್ತೊಂದರಲ್ಲಿ ಅವರನ್ನು ಬಿಟ್ಟೂ ಹೇಳುವ ಪರಂಪರೆಯಿದೆ.

೮. ದ್ರಾವಿಡದ ಗುಣವಚನಗಳೂ **ಕೂಡ** ವಿಶಿಷ್ಟವಾಗಿದ್ದು, ಅವೂ ಕೂಡ ಕ್ರಿಯಾಪದಗಳಂತೆ ಆಖ್ಯಾತ-ಪ್ರತ್ಯಯಗಳನ್ನು ಪಡೆಯಬಹುದು. ಉದಾ: ಶೂರನೆಮ್; ಒಳ್ಳಿದನಯ್; ಪಂಡಿತರಿರ್—ಇತ್ಯಾದಿ. ಇದರಂತೆಯೇ ದ್ರಾವಿಡ ಗುಣವಚನಗಳು ಸಂಸ್ಕೃತದಲ್ಲಿಯಂತೆ, ವಿಶೇಷ್ಯದ ವಚನ ಮತ್ತು ವಿಭಕ್ತಿಗಳನ್ನು ಪಡೆಯಬೇಕೆಂಬ ನಿರ್ಬಂಧವಿಲ್ಲ. ಬರಿಯ ಲಿಂಗವು ವಿಶೇಷ್ಯದ ಅನುಸಾರಿಯಾಗಿದ್ದರೆ ತೀರಿತು; ಅದು ಕೂಡ, ಎಷ್ಟೋ ಸಲ ಅಧ್ಯಾಹೃತವಾಗಿರುತ್ತದೆಂದು ಸ್ವತಃ ವೈಯಾಕರಣಿಗಳೇ ಹೇಳುತ್ತಾರೆ. ಅಂದರೆ, ಈಗ ಸಂಸ್ಕೃತದ ಯಾವುದೇ ಗುಣವಚನವನ್ನು ತೆಗೆದುಕೊಳ್ಳೋಣ. ಉದಾಹರಣೆಗೆ, 'ಪಾವನ' ಗುಣ-ವಚನ. ಈ 'ಪಾವನ' ಗುಣವಚನವು ಯಾವ ವಿಶೇಷ್ಯವನ್ನು ವರ್ಣಿಸುತ್ತಿದೆಯೋ, ಅದರ ವಚನ ಮತ್ತು ವಿಭಕ್ತಿಗಳನ್ನು ಪಡೆಯಬೇಕು. ಅಂದರೆ, ಅದು ಪುಲ್ಲಿಂಗದ ಬಗ್ಗೆ ಹೇಳುತ್ತಿದ್ದರೆ, ಪುಲ್ಲಿಂಗದ ಪ್ರತ್ಯಯಗಳನ್ನೂ, ಸ್ತ್ರೀ ಇಲ್ಲವೆ ನಪುಂಸಕದ ಬಗ್ಗೆ ಹೇಳುತ್ತಿದ್ದರೆ, ಆ ಪ್ರತ್ಯಯಗಳನ್ನೂ ಪಡೆಯಬೇಕು. ಅಂದರೆ, 'ಪಾವನಃ ಅನಿಲಃ' ಎಂದೂ, 'ಅಹೋ! **ಪಾವ-ನೀ ಭಗವ-ತೀ** ಭಾಗೀರಥೀ'—ಎಂದೂ ಬೇರೆ ಬೇರೆಯಾಗಿ ಪುಂ-ಸ್ತ್ರೀ ರೂಪಗಳನ್ನು ಕಾಣುತ್ತೇವೆ. ಇದರಂತೆಯೇ, ಯಜ್ಞಗಳಲ್ಲಿ ಬರುವ 'ದೇವೀಃ, ಆಪಃ **ಶುದ್ಧಾಃ** ಸ್ಥ'; 'ದೇವ, ಆಜ್ಯ **ಶುದ್ಧಮ್** ಅಸಿ' ಎಂಬ ರೂಪಗಳನ್ನೂ ನೋಡಬಹುದು. ಒಟ್ಟು ವಿಶೇಷಣ ಲಿಂಗವು, ವಿಶೇಷ್ಯ ಲಿಂಗ ಮತ್ತು ವಚನ — ವಿಭಕ್ತಿಗಳಿಗೆ ಅನುಸಾರಿಯಾಗಿರಬೇಕು. ಸುವರ್ಣೇ**ನ** ಹಸ್ತೇ**ನ** ತಾಡಿತಮ್ – **ಇತ್ಯಾದಿ**.

ಆದರೆ, ದ್ರಾವಿಡ ಭಾಷೆಗಳಲ್ಲಿ ಮಾತ್ರ ಹೀಗಿಲ್ಲ. ಇಲ್ಲಿ ಗುಣವಚನಗಳಿಗೆ **ವಿಭಕ್ತಿ-ಪ್ರತ್ಯಯ**ಗಳು ಹತ್ತುವ ಆವಶ್ಯಕತೆಯಂತೂ ಇಲ್ಲವೇ ಇಲ್ಲ. 'ಸುಂದರನಾದ ರಾಮನಿಂದ ಹರಧನುವು ಮುರಿಯಲ್ಪಟ್ಟಿತು' ಎಂಬ ವಾಕ್ಯದಲ್ಲಿ 'ಸುಂದರ' ಎಂಬ ಗುಣವಚನವೂ ತೃತೀಯಾ ಪ್ರತ್ಯಯವನ್ನು ಪಡೆದು 'ಸುಂದರ**ನಿಂದ** ರಾಮನಿಂದ ಹರಧನುವು'—ಎಂದು ಆಗಬೇಕಾಗಿಲ್ಲ. ಅಷ್ಟೇ ಅಲ್ಲ; ಲಿಂಗ-ವಚನಗಳು ಕೂಡ ನಿರ್ದಿಷ್ಟ ವಾಗಿರುವ ಕಾರಣವಿಲ್ಲ. 'ಸುಂದರ ರಾಮ' 'ಸುಂದರ ಸೀತೆ' 'ಸುಂದರ ಮೃಗ' 'ಪೂತ ಗಿಡಗಳು' ಎಂದು ಹೇಳಬಹುದು. ಇಲ್ಲಿ ಸುಂದರ**ನಾದ** ರಾಮ, ಸುಂದರ**ಳಾದ** ಸೀತೆ' ಎಂದು ಮೊದಲಾಗಿ ಅಧ್ಯಾಹೃತ.

೯. **ಕ್ರಿಯಾಪದಗಳು** :—'ಕನ್ನಡದಲ್ಲಿ ಕ್ರಿಯಾಪದಗಳೇ ಇಲ್ಲ'—ಎನ್ನುವ ಚರ್ಚೆ ಸದ್ಯದ ಮಟ್ಟಿಗೆ ಬೇರೆ ಇರಲಿ; ದ್ರಾವಿಡ ಕ್ರಿಯಾಪದಗಳೂ ವಿಶಿಷ್ಟವಾಗಿವೆಯೆಂಬುದನ್ನು ನಾವು ಕಾಣುತ್ತೇವೆ.

(ಅ) ಕನ್ನಡದ ಅನೇಕ ಕ್ರಿಯಾಪದಗಳು, ಧಾತುಗಳೂ, ನಾಮಪದಗಳೂ ಎರಡೂ ಆಗಿವೆ. ಉದಾ: ಕಟ್ಟು; ತಪ್ಪು; ಮೆಟ್ಟು; ಇತ್ಯಾದಿ.

(ಆ) ಎರಡನೆಯದಾಗಿ, ಕನ್ನಡದ ಆಖ್ಯಾತ-ಪ್ರತ್ಯಯಗಳು ಕೇವಲ ಕ್ರಿಯಾರೂಪಗಳಿಗೆ ಮಾತ್ರ ಹತ್ತದೆ, ನಾಮಪದ, ಗುಣವಚನ, ಸರ್ವನಾಮಗಳಿಗೂ ಹತ್ತುತ್ತವೆ. ಉದಾ: ಕವಿಕೇಶವನೆಂ; ಸೇವಕನೆಂ; ಸೇವಕುಡುನು(ತೆ); ದೌಹಿತ್ರನೆಂ; ಶೂರನೆಂ; ಪೆರನೆನ್—ಇತ್ಯಾದಿ. ಅದೇ ಸಂಸ್ಕೃತ ವ್ಯಾಕರಣದಲ್ಲಿ ಇದು ಅಪದ್ಧ.

(ಇ) ದ್ರಾವಿಡ ಕ್ರಿಯಾರೂಪಗಳಲ್ಲಿ ಎರಡು ನಿಷೇಧರೂಪಗಳಿವೆ. ಅಲ್ಲ ಮತ್ತು ಇಲ್ಲ—ಎಂಬುವು. ಇವುಗಳಲ್ಲಿ **'ಅಲ್ಲ' ಎಂಬುದು ಅಸ್ತಿತ್ವವನ್ನೂ, ಇಲ್ಲ - ಎಂಬ ನಿಷೇಧವು ಗುಣವನ್ನೂ ನಿರಾಕರಿಸುತ್ತಿವೆ** ಉದಾ: 'ಅವನು ಶಾಮನ**ಲ್ಲ**' 'ಇವನು ಶಿವನ**ಲ್ಲ**' 'ಅವಳು ಪಾರ್ವತಿ**ಯಲ್ಲ**' — ಇತ್ಯಾದಿ. ಇವುಗಳಲ್ಲಿ, ವರ್ಣಿತವಾದ ಆ ವ್ಯಕ್ತಿಗಳು ಈ ಹೆಸರಿನವರಾಗಿರದೆ, ಬೇರೆ ಮತ್ತಾರೋ ಆಗಿದ್ದಾರೆಂಬ ಅಸ್ತಿತ್ವ ವಿಚಾರವಿದೆ. ಅದರಂತೆ, 'ಅವನು ಸುಂದರನಿಲ್ಲ' 'ಕೃಷ್ಣನು ಪಂಡಿತನಿಲ್ಲ' 'ರಾಧೆಯು ಜಾಣಳಿಲ್ಲ'— ಎಂದು ಮೊದಲಾದ ಪ್ರಯೋಗಗಳಲ್ಲಿ ಸೌಂದರ್ಯ, ಪಾಂಡಿತ್ಯ ಮತ್ತು ಜಾಣತನವೆಂಬ **ಗುಣಗಳು** ನಿರಾಕರಿಸಲ್ಪಟ್ಟಿವೆ

೧೦. ದ್ರಾವಿಡ ವರ್ಗಗಳಲ್ಲಿ ಸಾಮಾನ್ಯವಾಗಿ ಕರ್ಮಣಿ ಪ್ರಯೋಗಗಳಿಲ್ಲ. ಈ ಪ್ರಯೋಗಗಳು ಸಂಸ್ಕೃತದಲ್ಲಿ ಹೇರಳ.

೧೧. ದ್ರಾವಿಡದ ಸಂಬಂಧವಾಚಕ ಪದಗಳು ಸಂಬಂಧ ಮತ್ತು ವಯಸ್ಸು ಎರಡನ್ನೂ ಸೂಚಿಸುತ್ತಿವೆಯೇ ವಿನಾ, ಕೇವಲ ರಕ್ತಸಂಬಂಧವನ್ನು ಮಾತ್ರ ಹೇಳುವದಿಲ್ಲ. ಅಣ್ಣ, ತಮ್ಮ, (ಭ್ರಾತೃ), ಅಕ್ಕ, ತಂಗಿ– ಇತ್ಯಾದಿ.

೧೨. ವರ್ಣಮಾಲೆಯ ದೃಷ್ಟಿಯಿಂದಲೂ, ಸಂಸ್ಕೃತದಲ್ಲಿಲ್ಲದ 'ಱ ೞ ಳ ಎ ಒ' ಎಂಬ ಐದು ದೇಶ್ಯವರ್ಣಗಳು ದ್ರಾವಿಡ ಭಾಷೆಗಳಲ್ಲಿವೆ.

೧೩. ದ್ರಾವಿಡ ಭಾಷೆಗಳಲ್ಲಿ 'ಟವರ್ಗ' ಹೆಚ್ಚೆಂದು ಪಂಡಿತರ ಅಭಿಪ್ರಾಯ. ದ್ರಾವಿಡ ಭಾಷೆಗಳ ಈ ಲಕ್ಷಣದ ಬಗ್ಗೆ ನಾವು ಪ್ರಾಚೀನಕಾಲದಿಂದಲೂ ಉಲ್ಲೇಖಗಳನ್ನು ಕಾಣುತ್ತಿದ್ದೇವೆ. ೯ನೆಯ ಶತಮಾನದ ರಾಜಶೇಖರನು 'ಸಗರ್ವಂ **ಸರ್ವ ಕರ್ಣಾಟಾಃ ಟಂಕಾರೋತ್ಕ**ರ ಪಾಠಿನಃ'—ಎಂದು ಹೇಳುತ್ತಿದ್ದರೆ, ಹತ್ತನೆಯ ಶತಮಾನದ ಪಂಪನು ತನ್ನ ಭೀಮಸೇನನ ಪ್ರತಿಜ್ಞೆಯೆಂದರೆ 'ಟಾಠಡಾಢಣ' ವೆಂದು ಹೇಳುತ್ತಾನೆ ಪ್ರಾಕೃತ ವೈಯಾಕರಣಿಗಳು ಕೂಡ, ದಾಕ್ಷಿಣಾತ್ಯ ಭಾಷೆಗಳ ಈ 'ಟಕಾರ' ಬಾಹುಲ್ಯವನ್ನೇ ಘೋಷಿಸುತ್ತಿದ್ದಾರೆ. ಅವರ ಪ್ರಕಾರ—'ಡ-ಕಾರ ಬಹುಲಾ ಕೌಂತಲೀ'. ಇತ್ತೀಚಿನ ಮರಾಠಿ ನಾಟಕಕಾರರಾದ ಶ್ರೀ. ಗಡಕರಿಯವರು ಕೂಡ, ಕನ್ನಡದಲ್ಲಿ ಕಂಡುಬರುವ ಈ ಟ–ವರ್ಗ ಬಾಹುಲ್ಯವನ್ನು— ಸರಿಯೇ ಇರಲಿ; ತಪ್ಪೇ ಇರಲಿ;—ತಮ್ಮ ನಾಟಕದಲ್ಲಿ ಚೇಷ್ಟೆಮಾಡಿದ್ದಾರೆ. ಅವರ ಪ್ರಕಾರ ಕನ್ನಡ ಭಾಷೆಯು 'ರುಂಡು ಗುಂಡು'. ಕನ್ನಡೇತರರಿಗೆ ದ್ರಾವಿಡ ಭಾಷೆಗಳ ಈ ವೈಶಿಷ್ಟ್ಯವು ಸಕೃದ್ದರ್ಶನಕ್ಕೇ ಕಾಣುವಂತಿದೆ.

೧೪. ಉಚ್ಚಾರ ದೃಷ್ಟಿಯಿಂದಲೂ, ದ್ರಾವಿಡ ಭಾಷೆಗಳಲ್ಲಿ ಒಂದು ವೈಶಿಷ್ಟ್ಯವನ್ನು ಗಮನಿಸಬಹುದು. ಆರ್ಯ ವರ್ಗದ ಮರಾಠಿ ಮೊದಲಾದ ಭಾಷೆಗಳಲ್ಲಿಯಂತೆ, ದ್ರಾವಿಡ ಭಾಷೆಗಳಲ್ಲಿಯ ಅವಧಾರಣೆಯು (accent) ಶಬ್ದದ ದ್ವಿತೀಯ ಇಲ್ಲವೆ ತೃತೀಯ ವರ್ಣಗಳ ಮೇಲಿರದೆ, ಸಾಮಾನ್ಯವಾಗಿ

ಪ್ರಥಮ ವರ್ಣದ ಮೇಲೆಯೇ ಇರುತ್ತದೆ. ಉದಾ: ಕನ್ನಡದ ಪುಸ್ತಕ, ದಿವಸ, ಕಮಲ—ಇತ್ಯಾದಿ ಶಬ್ದಗಳು ಮರಾಠಿಯಲ್ಲಿ ಪುಸ್ತಕ, ದಿವಸ್, ಕಮಲ, ಕಾಗದ—ಎಂದು ಮೊದಲಾಗಿ ಆಗುತ್ತವೆ.

ಮೇಲೆ ವಿವರಿಸಿದ, ದ್ರಾವಿಡ ಭಾಷೆಗಳ ಈ ವೈಶಿಷ್ಟ್ಯಗಳ ಮೂಲಕ, ಈ ಭಾಷಾಸ್ಕಂಧವು ಪ್ರಪಂಚದ ಇತರ ಯಾವ ಭಾಷಾವರ್ಗಕ್ಕೂ ಸಂಬಂಧಿಸಿರದೆ, ಪ್ರತ್ಯೇಕವೇ ಆಗಿದೆಯೆಂದು ಹೇಳಬೇಕು.

ಕನ್ನಡವು ಸಂಸ್ಕೃತಜನ್ಯವೇ?

ದ್ರಾವಿಡ ಭಾಷೆಗಳಿಗೆ ಪ್ರಪಂಚದ ಉಳಿದ ಯಾವ ಭಾಷೆಗಳ ಸಂಬಂಧವನ್ನು ಹೇಳುವುದು ಸರಿಯಲ್ಲ ವೆಂದೂ ಅವನ್ನು ಒಂದು ಪ್ರತ್ಯೇಕ ವರ್ಗವಾಗಿಯೇ ಕಾಣಬೇಕೆಂದೂ ಈ ಮೊದಲೇ ನೋಡಿದ್ದೇವೆ. ಈಗ ತಾನೆ ನಾವು ವಿವರಿಸಿದ ಹದಿನಾಲ್ಕು ಅಸಾಧಾರಣ ಲಕ್ಷಣಗಳ ಮೂಲಕವಾಗಿಯೂ ಕನ್ನಡಾದಿ ಭಾಷೆಗಳು ಸಂಸ್ಕೃತದಿಂದ ಭಿನ್ನವಾಗಿವೆಯೆಂಬುದು ಸ್ಪಷ್ಟವೇ ಆಗಿದೆ. ಆದರೂ, ಅನೇಕ ಕೀರ್ತಿವಂತರಾದ ವಿದ್ವಾಂಸರು ಈ ಭಾಷೆಗಳು ಸಂಸ್ಕೃತಜನ್ಯವೆಂದು ಒಂದು ಕಾಲಕ್ಕೆ ಹೇಳಿದ್ದರಿಂದಲೂ, ಮತ್ತು ನಮ್ಮಲ್ಲಿಯೂ ಕೂಡ ಅನೇಕರಿಗೆ ಇನ್ನೂ ಈ ಸ್ಪಷ್ಟ ಕಲ್ಪನೆಯು ಬಾರದಿರುವದರಿಂದಲೂ, ಈ ಪ್ರಶ್ನೆಯನ್ನು ನಾವು ಪುನಃ ವಿಚಾರ ಮಾಡುವಂತಿದೆ.

ಕನ್ನಡ ಭಾಷೆಯು ಸಂಸ್ಕೃತಜನ್ಯವೆಂದು ಕರೆಯಲ್ಪಡಲು ಪ್ರಮುಖವಾದ ಕಾರಣವೆಂದರೆ, ಈ ಭಾಷೆಯ ಕೋಶದಲ್ಲಿ ಕಂಡುಬರುವ ಸಂಸ್ಕೃತ ಶಬ್ದಗಳ ಪ್ರಾಚುರ್ಯವೆಂದೇ ಹೇಳಬೇಕು. ನಿಜವಾಗಿಯೂ, ಇಂದಿಗೂ ಕೂಡ ನಾವು ಉಪಯೋಗಿಸುವ ಪದಗಳಲ್ಲಿ ಹೇರಳವಾದ ಸಂಸ್ಕೃತ ಮಿಶ್ರಣವಿದೆ. ಒಂದು ಕಾಲಕ್ಕಂತೂ, ಬಹುಶಃ ಸಂಸ್ಕೃತ ಹಿನ್ನೆಲೆಯಿಲ್ಲದೆ, ಕನ್ನಡ ಬಾರದಂತಿತ್ತು. ಇದಕ್ಕೆ ಸಹಾಯಕವಾಗಿ, ನಮ್ಮ ಪ್ರಾಚೀನ ಕವಿಗಳು "ಉಭಯ ಭಾಷಾವಿಶಾರದ"ರಿದ್ದದರಿಂದಲೂ, ಮತ್ತು ಹೆಚ್ಚುಕಡಿಮೆ ಅವರ ಒಲವು ಕೂಡ ಸಂಸ್ಕೃತದ ಕಡೆಗೇ ಸಾಕಷ್ಟಿದ್ದುದರಿಂದಲೂ, ಈ ಸಂಸ್ಕೃತ ಕಲ್ಪನೆಯು ಹೆಚ್ಚು ರೂಢವಾಗಲು ಕಾರಣವಾಯಿತು. ಇದರ ಜೊತೆಗೆ, ಆರ್ಯ ಸಂಸ್ಕೃತಿಯ ಪ್ರಭಾವದ ಮೂಲಕವಾಗಿ ಬ್ರಾಹ್ಮಣಾದಿ ವರ್ಗ, ಗಳಲ್ಲಿ, ಸಂಸ್ಕೃತ ಭಾಷೆಯ ಗೀರ್ವಾಣತ್ವದ ಕಲ್ಪನೆಯಿದ್ದುದರಿಂದಲೂ, ಸಂಸ್ಕೃತವು ತನ್ನ ರಾಜ್ಯವನ್ನೇ ನಡೆಸುವಂತಾಯಿತು. ಸ್ವಾಭಾವಿಕವಾಗಿ, ಇಂಥ ಬರೆಹಗಾರರ ಕೃತಿಗಳಲ್ಲಿ, ಸಂಸ್ಕೃತದ ಕಡೆಗೇ ಬೊಟ್ಟು ಮಾಡಿ ತೋರಿಸುವ ಉಲ್ಲೇಖಗಳೂ ಕಥೆಗಳೂ ಬರುವುದು ಸಹಜವಾಯಿತು. ಒಬ್ಬ ಭಗೀರಥನಾಗಲಿ ವಿಶ್ವಾಮಿತ್ರನಾಗಲಿ;--ಎಲ್ಲರೂ ಆ ವೈದಿಕ ಪರಂಪರೆಯವರೇ. ಮೊನ್ನೆಮೊನ್ನೆಯ ವರೆಗೂ ಉತ್ತರ ಕರ್ನಾಟಕದ ಹಲವು ಬ್ರಾಹ್ಮಣ ಮನೆತನಗಳಲ್ಲಿ ಊಟಕ್ಕೆ ಕುಳಿತಾಗಾದರೂ ಸಂಸ್ಕೃತದಲ್ಲಿಯೇ ಮಾತಾಡ ಬೇಕೆಂಬ ನಿರ್ಬಂಧವಿದ್ದುದನ್ನು ಕಂಡಿದ್ದೇವೆ ಹೀಗಾಗಿ, ಈ ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಕೋಶದ ಸಂಸ್ಕೃತ ಪದಗಳ ಬಾಹುಲ್ಯತೆಯ ಮೂಲಕ ಕನ್ನಡವು ಸಂಸ್ಕೃತಜನ್ಯವೆಂವೇ ಹೇಳುವಂತಾಗಿತ್ತು.

ಇದರ ಜೊತೆಗೆ, ಪ್ರಪಂಚದ ಪ್ರತಿಯೊಂದು ಶಬ್ದವೂ ಪರಮಾತ್ಮವಾಚಕವೇ ಎಂದು ಸಿದ್ಧಿಸಬಲ್ಲ 'ವಿಷ್ಣುಸಹಸ್ರನಾಮಾವಳಿ'ಯ ಪಾಂಡಿತ್ಯವೂ ಸೇರಿ, ಯಾವುದೇ ಶಬ್ದದ ನಿರುಕ್ತವನ್ನು ಸಂಸ್ಕೃತಕ್ಕೇ ಒಯ್ಯುತ್ತಿದ್ದಿತು. ತತ್ಪರಿಣಾಮವಾಗಿ, ಕನ್ನಡದಲ್ಲಿರುವ ದೇಶ್ಯಶಬ್ದಗಳ ಕಲ್ಪನೆ ಕೂಡ ಅಷ್ಟಾಗಿ ಉಳಿಯಲಿಲ್ಲ. ಯಾಕಂದರೆ, ಈ ವರ್ಗದ ಪಂಡಿತರ ಪ್ರಕಾರ 'ಹಾವು' ಎನ್ನುವ ಶುದ್ಧ ದ್ರಾವಿಡ ಶಬ್ದವೂ ಕೂಡ, ಸಂಸ್ಕೃತವೇ ಆಗಬಹುದಾಗಿತ್ತು. ನಿಜವಾಗಿಯೂ, ಹಲವು ಪಂಡಿತರು ಆ ರೀತಿ ಸಾಧಿಸಿದ್ದೂ ಉಂಟು.

ಅವರು ಈ 'ಹಾವು' 'ಪಾವು' 'ಪಾಂಬು' —ಶಬ್ದದ ನಿರುಕ್ತವನ್ನು ಸಂಸ್ಕೃತ ರೀತಿಯಲ್ಲಿಯೇ ಹೇಳುತ್ತಾರೆ. ಈ ಮಾತು ಕುಮಾರಿಲಭಟ್ಟನ ತಂತ್ರವಾರ್ತಿಕದಲ್ಲಿ ಈ ರೀತಿ ಬರುತ್ತದೆ:—"**ಸತ್ಯಮ್ ಪಾಪಃ** ಏವ ಅಸೌ-ಪಾವು" ಅಂದರೆ ಪಾಪಮಯವಾದ ಪ್ರಾಣಿ ಎಂದು ಅರ್ಥ. ಉಲ್ಲೂರ್ ಎಸ್. ಪರಮೇಶ್ವರ ಅಯ್ಯರ ಅವರು ಹೇಳುವಂತೆ, "ಲೀಲಾತಿಲಕ" ಗ್ರಂಥವಲ್ಲಿ "ಪಾಂಪು" (=ಪಾವು) ಮತ್ತು ವಯರು (=ಬಸಿರ್) ಶಬ್ದಗಳ ಬಗ್ಗೆ ಈ ರೀತಿ ಉಲ್ಲೇಖವಿದೆ. ಈ ಗ್ರಂಥವೂ "ಪಾವು" ಶಬ್ದದ ನಿರುಕ್ತವನ್ನು "ತಂತ್ರವಾರ್ತಿಕ"ದಲ್ಲಿಯಂತೇ ಸೂಚಿಸುತ್ತದೆ. ಪ್ರಾಣಿಗಳನ್ನು ಕೊಲ್ಲುವುದು "ಪಾಪಿ"ಯಾಗಲಾರದೇ?—ಈ "ಪಾವು" ಶಬ್ದದ ಪ್ರಕೃತಿಯೂ ಕೂಡ ಇದೇ ಆಗಿದೆ. – "ಪಾಂಪು ಇತಿ ಅಸ್ಯ **ಪಾಪಃ ಪ್ರಕೃತಿಃ–ಸರ್ಪೋದಂಶೇನ ಪ್ರಾಣಿನೋ ಹಂತಿ; ಸ ಕಥಂ ನ ಪಾಪಃ?**" ಹಾಗೆಯೇ, ಈ ಗ್ರಂಥದ ಪ್ರಕಾರ 'ಬಸಿರ್' ಶಬ್ದವು "ವಯರ್" "ವೈರ"ದಿಂದ ಬಂದುದು. ಯಾಕಂದರೆ, ಕೇವಲ ಗೇಣು ಹೊಟ್ಟೆಗಾಗಿ, ಇಷ್ಟು ತೊಂದರೆಪಟ್ಟು, ದುಃಖ-ಪರಿಭವಗಳನ್ನುಂಡು, ದಂಡನೆ-ಭರ್ತ್ಸನೆಗಳನ್ನು ಕಾಣಬೇಕಾದರೆ, "ಬಸಿರು" ವೈರಿಯೇ ಅಲ್ಲವೇ?—ಈ ನಿರುಕ್ತದ ವಿಷಯವನ್ನು "ಲೀಲಾತಿಲಕ"ಕಾರನ ಮಾತಿನಲ್ಲಿಯೇ ಕೇಳೋಣ: —

"ನನು ಸರ್ವಾಸಾಂ ಅಪಿ ಭಾಷಾಣಾಂ ಪ್ರಕೃತಿಃ ಊಹ್ಯಾ—**ಯಥಾ "ವಯರ್" ಇತಿ ಅಸ್ಯ** 'ವೈರೀ' ಇತಿ ಪ್ರಕೃತಿಃ–**ಉದರಂ ಹಿ ಶತ್ರುಃ–ಉದರಗತ ಕ್ಷುದ್‌ವಶಾತ್ ಖಲು ಪರದ್ರವ್ಯ ನೋಷಣಮ್** ಕ್ರಿಯತೇ—**ತೇನ ವಧ ಬಂಧಾದಿ ಪ್ರಾಪ್ತಃ –ತತಃ ಶತ್ರುಃ ಉದರಮ್**"—ಅಷ್ಟೇ ಅಲ್ಲ; ಈ ಗ್ರಂಥಕಾರನ ಪ್ರಕಾರ "ಕಮುಕು" ಶಬ್ದವು "ಕ್ರಮುಕ"ದಿಂದಲೂ, "ಕುಟೀರ" ಶಬ್ದವು "ಕುದುರೆ"ಯಿಂದಲೂ ಬಂದವೆಂದು ಅಭಿಪ್ರಾಯ. *

ಇದೇ ರೀತಿ ನಾಗವರ್ಮನಂತಹ ಅನೇಕ ಕನ್ನಡ ಆಲಂಕಾರಿಕರು ಕೂಡ ಪ್ರಪಂಚದ ನೂರುವರೆ ಪ್ರಮುಖ ಭಾಷೆಗಳಿಂದ ಉಳಿದ ದ್ರವಿಡಾದಿ ಭಾಷೆಗಳು ನಿಷ್ಪನ್ನವಾದುವೆಂದು ಹೇಳಿವರು.

ಈ ಎಲ್ಲದರ ಪರಿಣಾಮವಾಗಿ, ಒಂದು ಕಾಲಕ್ಕೆ ಈ ಸಂಸ್ಕೃತ ಕೋಲಾಹಲದ ಮೂಲಕವಾಗಿ, ಅನೇಕ ಶುದ್ಧ ಕನ್ನಡ ಪದಗಳೂ ತಮ್ಮ ಮೂಲ ಸ್ವರೂಪವನ್ನು ಮರೆಮಾಡಲು ಸಂಸ್ಕೃತದ ಕೃಷ್ಣಾಜಿನ ಕಮಂಡಲುಗಳನ್ನು ಧರಿಸಲು ಪ್ರಾರಂಭವಾಯಿತು. ಈ ಹಾವಳಿಗೇ ತುತ್ತಾಗಿ, ಧಾರವಾಡವು 'ತಂತುಪುರಿ' ಯಾಯಿತು; ಬಾಗಿಲುಕೋಟೆಯು "ದ್ವಾರದುರ್ಗ"ವಾಯಿತು; ಮುಳಬಾಗಿಲು 'ಕಂಟಕದ್ವಾರ'ವಾಯಿತು. ಹಲಕೆಲವು ಅನ್ಯದೇಶ್ಯಗಳೂ ಕೂಡ, ತಮ್ಮ 'ಸಾಹೇಬಕಿ'ಯನ್ನು ಬಿಟ್ಟು, ದೀಕ್ಷೆ ಪಡೆದು ಯಜ್ಞೋಪವೀತವನ್ನು ಧರಿಸಲು ಮುಂದಾದವು. ಉದಾಹರಣೆಗೆ, ಮಹಮ್ಮದೀಯ 'ಸುಲ್ತಾನ'ನು 'ಸುರ-ತ್ರಾಣ'ನಾದನು; ಐರೋಪ್ಯ Andersonನು 'ಇಂದ್ರಸೇನ'ನಾದನು. ಗೋಕಾಕರ ವಿಮರ್ಶಕ ವೈದ್ಯದ ಮೊದಲೇ ಈ 'ಇಂದ್ರಸೇನ'ನು ಪೇಶ್ವಾಯಿ ದಪ್ತರಗಳಲ್ಲಿ ದೊರಕುತ್ತಿದ್ದುದನ್ನು ಗಮನಿಸಬಹುದು.

ಸಾರಾಂಶವೇನೆಂದರೆ— ಇಂಥ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಧಾರ್ಮಿಕ ಪರಿಸರದಲ್ಲಿ ಕನ್ನಡವು ಸಂಸ್ಕೃತಜನ್ಯವೆಂದು ಕಲ್ಪನೆಯಾಗಿದ್ದರೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಅಂತಲೇ, ಈ ಜಾಡನ್ನೇ ಹಿಡಿದು ಪೋಪ್, ಕೋಲಬ್ರುಕ್, ಕ್ಯಾರೆ, ವಿಲ್ಕಿನ್ಸ್–ಮೊದಲಾದ ಐರೋಪ್ಯ ಪಂಡಿತರು ಕೂಡ ಈ ದ್ರಾವಿಡ ಭಾಷೆಗಳು ಸಂಸ್ಕೃತಜನ್ಯವೆಂದೇ ಹೇಳಿದರು.

* P. and T., O. C. IX, 1237

ಈ ಕಾರಣದ ಮೂಲಕವಾಗಿ ಕನ್ನಡ ವ್ಯಾಕರಣಗಳು ಕೂಡ ಸಂಸ್ಕೃತ ಜಾಡನ್ನೇ ಹಿಡಿಯಲು ಯತ್ನಿಸಿದುವು. ೧೭ನೆಯ ಶತಮಾನದಲ್ಲಿ ಸಹ ಭಟ್ಟಾಕಲಂಕನು 'ನ ಚ ಏಷಾ ಭಾಷಾ ಶಾಸ್ತ್ರಾನುಪಯೋಗಿನೀ'—ಎಂದು ಸಂಸ್ಕೃತ ಬೆಂಬಲಿಗರ ಕ್ಷಮೆ ಕೇಳಬೇಕಾಯಿತು. ಕವಿಗಳಲ್ಲಿ ಕೂಡ, ಅಲ್ಲಲ್ಲಿ ಆಂಡಯ್ಯ, ನಯಸೇನ, ಮಹಲಿಂಗ ರಂಗರಂಥವರು 'ಸಂಸ್ಕೃತದಲಿನ್ನೇನು?" ಎಂದು ಉದ್ಗಾರ ತೆಗೆದಿದ್ದರೂ, ಇತರರಿಗೆ ಸಂಸ್ಕೃತವನ್ನು ಬಿಡುವುದು ತೊಂದರೆಯದಾಯಿತು.

ತೆಲುಗಿನಲ್ಲೂ ಅಷ್ಟೇ; ವಿನ್ನಕೋಟ ಪೆದ್ದನ ಕವಿಯು ಹೇಳುವಂತೆ, ತೆಲುಗು ಕವಿಗಳೂ ಕೂಡ ಸಂಸ್ಕೃತ ವ್ಯಾಕರಣದ ರೀತಿಯನ್ನೇ ಅನುಸರಿಸಿದರು. ತೆಲುಗು ಸಾಹಿತ್ಯದ ಸುಪ್ರಸಿದ್ಧ ಶಾಸ್ತ್ರಜ್ಞನಾದ 'ಕೇತನ ಕವಿ'ಯು ಕೂಡ, **ಸಂಸ್ಕೃತವೇ ಈ ಎಲ್ಲ ದ್ರಾವಿಡ ಭಾಷೆಗಳ ಮಾತೃಭಾಷೆಯಾಗಿದೆಯೆಂದು ಸಾರಿದನು :—**

"ತಲ್ಲಿ ಸಂಸ್ಕೃತಂಬೆ ಎಲ್ಲ ಭಾಷಾಲಕುನು ದಾನನುಂಡಿ ಕೊಂತಗಾನ ಬಡಿಯೆ"—

ಎಂದು ಅವನ ಅಭಿಪ್ರಾಯ. ಅಂದರೆ, 'ಅಲ್ಲಿ ಎಲ್ಲ ಭಾಷೆಗಳಿಗೂ ಸಂಸ್ಕೃತವೇ **ಮಾತೃ-ಭಾಷೆ**ಯಾಗಿದೆ' ಎಂದು ಸಾರಾಂಶ.

ಬಾಲವ್ಯಾಕರಣಕಾರನೂ

"ಆಂಧ್ರಭಾಷಾವಿಕೃತಿ ತತ್ಸಮು, ತದ್ಭವ ವ್ಯತಿರಿಕ್ತಮ್–ಬಗುಭಾಷಾ ಅಚ್ಛಯನಂಬುದು"

ಎಂದು ಹೇಳಿದರೆ, ಇನ್ನೊಬ್ಬ ಶಾಸ್ತ್ರಜ್ಞನು,

"ಜನನಿ ಸಮಸ್ತ ಭಾಷಾಲಕು ಸಂಸ್ಕೃತ ಭಾಷಾ —ಧರಾತಲಂಬನಮ್"—

ಎಂದು ಸ್ಪಷ್ಟವಾಗಿ ಸಾರಿದನು.

ಹದಿನಾಲ್ಕನೆಯ ಶತಮಾನದಲ್ಲಿ ರಚಿತವಾದ "ಲೀಲಾತಿಲಕ" ಎಂಬ ಮಲಯಾಳಿ ವ್ಯಾಕರಣದ ಪ್ರಕಾರವೂ ಸಂಸ್ಕೃತವೇ ಮಲಯಾಳಿ ಭಾಷೆಯ ಮಾತೃಭಾಷೆ.

ಸಂಸ್ಕೃತ ಆಲಂಕಾರಿಕರಲ್ಲಿ ಕ್ರಿ. ಶ. ಏಳನೆಯ ಶತಮಾನದ ಕುಮಾರಿಲಭಟ್ಟನೂ ಕೂಡ ತನ್ನ "ತಂತ್ರವಾರ್ತಿಕ"ದಲ್ಲಿ ಈ ದಾಕ್ಷಿಣಾತ್ಯ ಭಾಷೆಗಳೆಲ್ಲ "ಮ್ಲೇಚ್ಛಭಾಷೆ"ಗಳೆಂದು ಹೇಳಿದನು. ಕ್ರಿ. ಶ. ೧೩ನೆಯ ಶತಮಾನದ 'ಶಾರದಾತನಯ'ನೆಂಬ ಗ್ರಂಥಕರ್ತನೂ ಕೂಡ, ತನ್ನ "ಭಾವಪ್ರಕಾಶನ"ದಲ್ಲಿ ಈ ದ್ರಾವಿಡ ಭಾಷೆಗಳೆಲ್ಲ "ಮ್ಲೇಚ್ಛಭಾಷೆ"ಗಳೆಂದೇ ಕರೆಯುತ್ತಾನೆ. ಅಷ್ಟೇ ಅಲ್ಲ; ಇವನಂತೂ ಈ ವರ್ಗದಲ್ಲಿ ಕನ್ನಡ ಭಾಷೆಯ ನಾಮನಿರ್ದೇಶವನ್ನು ಕೂಡ ಮಾಡುತ್ತಾನೆ. ಅವನ ಪ್ರಕಾರ—

ದ್ರಮಿಡಾಃ **ಕನ್ನಡಾಂಧ್ರಾಶ್ಚ** ಹೂಣಹಿಮ್ಮೀರ ಸಿಂಹಲಾಃ |

....

ಏತಾ ಭಾಷಾಶ್ಚ ಸರ್ವತ್ರ **ಮ್ಲೇಚ್ಛಭಾಷಾ ಇತಿ ಉದಾಹೃತಾಃ** ||

ಅಷ್ಟೇ ಅಲ್ಲ; ಈ ಆಲಂಕಾರಿಕರ ಪ್ರಕಾರ "ಮ್ಲೇಚ್ಛಭಾಷೆ" ಎಂದರೆ ಕೇವಲ 'ವಿದೇಶ' ಭಾಷೆಯೆಂದು ಮಾತ್ರ ಅರ್ಥವಲ್ಲ. ಸಂಸ್ಕೃತ ವೈಯಾಕರಣಿಗಳ ಪ್ರಕಾರ 'ಮ್ಲೇಚ್ಛಿತ' ಎಂದರೆ ಮೂಲತಃ "ಅಶುದ್ಧವಾದ

ಉಚ್ಚಾರ ('ಅವ್ಯಕ್ತಶಬ್ದೇ' – ಪಾಣಿನಿ)·ಅವರ ಪ್ರಕಾರ ಈ "ಮ್ಲೇಚ್ಛಭಾಷೆ"ಗಳೂ **ಕೂಡ** ಸಂಸ್ಕೃತ ಜನ್ಯವೇ!—"ಇಹತಾವತ್ ಸಂಸ್ಕೃತಮ್ ಅನಾದಿ; ಅನ್ಯದ್ ಆದಿಮತ್. ತಸ್ಯ ಸಂಸ್ಕೃತಾತ್ **ಪ್ರಭವಃ** ಸ್ಯಾತ್"—ಎಂದು "ಲೀಲಾತಿಲಕ". *

ಹೀಗಾಗಿ, ಈ ಎಲ್ಲ ದ್ರಾವಿಡ ಭಾಷೆಗಳೂ ಮತ್ತು ಕನ್ನಡವೂ ಸಂಸ್ಕೃತಜನ್ಯವೆಂದೇ ಕಲ್ಪಿತವಾದುವು.

ಆದರೆ, ನಿಜವಾಗಿ ನೋಡಿದರೆ ಈ ಅಭಿಪ್ರಾಯವು ಸ್ವಲ್ಪವೂ ಸರಿಯಲ್ಲ. ಯಾಕಂದರೆ, ಈ ವರೆಗೆ ಸಂಸ್ಕೃತ ಸಂಬಂಧವನ್ನು ಹೇಳಿದ ಶಾಸ್ತ್ರಜ್ಞರೆಲ್ಲ ಈ ಭಾಷೆಗಳಲ್ಲಿಯ **ಕೋಶಕ್ಕೇ** ಗಮನ ಕೊಟ್ಟಿದ್ದಾರೆಯೇ ವಿನಾ, ಅದರ ಪ್ರಮುಖ ಭಾಗವಾಗಿರಬೇಕಾದ **ವ್ಯಾಕರಣ ಇಲ್ಲವೆ ಭಾಷಾ**–ರೂಪಕ್ಕೆ ಎಳ್ಳಷ್ಟೂ ಲಕ್ಷ ಕೊಟ್ಟಿಲ್ಲ. ಯಾವುದೇ ಭಾಷೆಯ ವರ್ಗೀಕರಣದಲ್ಲಿ ಈ ವ್ಯಾಕರಣವೇ ಮೂಲತತ್ವವಾಗಿರಬೇಕೆಂದೂ ಮತ್ತು ಈ ದೃಷ್ಟಿಯಿಂದ ಕನ್ನಡ ಭಾಷೆಯು ಹದಿನಾಲ್ಕು ಪ್ರಮುಖ ವಿಭಾಗಗಳಲ್ಲಿ ಸಂಸ್ಕೃತದಿಂದ ತೀರ ಭಿನ್ನವಾಗಿದೆ ಯೆಂಬುದನ್ನೂ ನಾವು ಈ ಮೊದಲೇ ಕಂಡಿದ್ದೇವೆ. ಆದ್ದರಿಂದ ಭಾಷೆಯ ವರ್ಗೀಕರಣದ ಸರಿಯಾದ ತತ್ವವಾದ ವ್ಯಾಕರಣದ ದೃಷ್ಟಿಯಿಂದ ತನ್ನದೇ ಆದ ಅನೇಕ ವೈಶಿಷ್ಟ್ಯಗಳುಳ್ಳ ಕನ್ನಡವು ಸಂಸ್ಕೃತದಿಂದ ತೀರ ಭಿನ್ನವಾಗಿದೆಯೆಂದು ನಾವು ಹೇಳಲೇಬೇಕು.

ಎರಡನೆಯದಾಗಿ, **ಕೋಶದ** ದೃಷ್ಟಿಯಿಂದ ನೋಡಿದರೂ, ಕನ್ನಡವು ಸಂಸ್ಕೃತದಿಂದ ತೆಗೆದುಕೊಂಡ ಎರವು ಹೊರಗಿನ ವೇಷಭೂಷಣಗಳಿಗೂ, ತತ್ವಜ್ಞಾನ, ರಾಜಕಾರಣ, ಧರ್ಮ ಮತ್ತು ಶಾಸ್ತ್ರ - ಮೊದಲಾದ ಬಾಹ್ಯ ಅಂಗಗಳಿಗೆ ನಿಂತಿದೆಯೇ ಹೊರತು, ಯಾವುದೇ ಭಾಷೆಯ ಮೂಲಭೂತ ಶಬ್ದಗಳಾದ ದೇಹದ ಅಂಗ-ವಾಚಕಗಳಲ್ಲಾಗಲೀ; ಇಲ್ಲವೆ ಜೀವನಾವಶ್ಯಕ ವಿಷಯಗಳಲ್ಲಾಗಲೀ ಇಲ್ಲವೆಂಬುದು ಒಮ್ಮೆಲೇ ಕಂಡು ಬರುತ್ತದೆ. ದೇಹದ ಅಂಗಗಳನ್ನು ಹೇಳುವ ಶಬ್ದಗಳೂ ಮತ್ತು **ಜೀವನದ ಆವಶ್ಯಕ ವಿಷಯುಗಳನ್ನು** ಹೇಳುವ ಶಬ್ದಗಳೂ ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳಿಗೆ ಸಾಮಾನ್ಯವಾಗಿದ್ದು, ಸಂಸ್ಕೃತದಿಂದ ಭಿನ್ನವಾಗಿವೆಯೆಂಬುದು ಕೆಳಗಿನ ಪಟ್ಟಿಯಿಂದ ಸ್ವಯಂಸಿದ್ಧವಾಗುತ್ತದೆ.

ದೇಹದ ಭಾಗಗಳು

ಕನ್ನಡ	ತೆಲುಗು	ತಮಿಳು	ಸಂಸ್ಕೃತ
ತಲೆ	ತಲೆ	ತಲೈ	ಶಿರ
ಕೈ	ಚೆಯ್	—	ಹಸ್ತ
ಬಸಿರು	—	ವಯಿರ್	ಗರ್ಭ
ಕಣ್	ಕಣ್	ಕಣ್	ನೇತ್ರ
ಕಿವಿ	—	ಶೆವಿ	ಕರ್ಣ
ಕಾಲ್	ಕಾಲ್	ಕಾಲ್	ಪದ

* U. Parameshwara Iyer—P. T. O. C. Vol. IX, P. 1236.

ಸಂಬಂಧವಾಚಕಗಳು

ಅಪ್ಪ	—	ಅಪ್ಪನ್	ಪಿತೃ
ತಾಯ್	—	ಆಯಿ	ಮಾತೃ
ಮಗ	—	ಮಗನ್	ಸೂನು
ಮಗಳ್	—	ಮಗಳ್	ದುಹಿತೃ

ಜೀವನಾವಶ್ಯಕ ವಿಷಯಂಗಳು

ಆ	—	ಆ	ಗೋವು
ಸೊಲ್	—	ಶೊಲ್	ವದ *

ಅದೂ ಹೋಗಲಿ; ಸ್ವತಃ ದ್ರಾವಿಡ ಭಾಷೆಗಳಲ್ಲೇ ತೆಲುಗಿನಲ್ಲಿದ್ದಷ್ಟು ಸಂಸ್ಕೃತ ಶಬ್ದಗಳು ಕನ್ನಡದಲ್ಲಿಲ್ಲ; ಕನ್ನಡದಲ್ಲಿದ್ದಷ್ಟು ತಮಿಳಿನಲ್ಲಿಲ್ಲ. ನಾವು ತೀರ ಪ್ರಾಚೀನ ಸಾಹಿತ್ಯವನ್ನು ನೋಡಿದರಂತೂ, ಈ ಅಂಶವು ಇನ್ನೂ ಕಡಿಮೆಯಾಗುತ್ತಿರುವುದನ್ನೇ ಕಾಣುತ್ತೇವೆ. ತೆಲುಗು ಭಾಷೆಯ ಆದಿಕವಿಯಾದ ನನ್ನಯನು ಸಂಸ್ಕೃತಪಂಥದವನಾಗಿ, ನೂರಕ್ಕೆ ಎಪ್ಪತ್ತೈದರಷ್ಟು ಸಂಸ್ಕೃತ ಪದಗಳನ್ನು ಉಪಯೋಗಿಸಿದ್ದರೆ, ಅವನ ನಂತರ ಬಂದ ಅನೇಕ ಶೈವ ಕವಿಗಳು 'ದೇಸಿ' ಅಥವಾ 'ಜಾನು-ತೆಲುಗ'ನ್ನೇ ಉಪಯೋಗಿಸಲು ಹೆಣಗಿದರು. ಸೋಮನಾಥ ಕವಿಯಂತೂ, ಈ 'ಜಾನು-ತೆಲುಗು' ಭಾಷೆಯು ಸರ್ವ ಜನಗ್ರಾಹಿಯಾಗಿದೆಯೆಂದೂ, ಸಂಸ್ಕೃತವು ಕೇವಲ ಪಂಡಿತಗಮ್ಯಮಾತ್ರವಾಗಿದೆಯೆಂದೂ ಸಾರಿದನು. ತೆಲುಗು ತಿಕ್ಕಣ ಕವಿಯು ಕೂಡ 'ದೇಸಿ'ಯನ್ನೇ ಪೋಷಿಸಿದನು. ತೆಲುಗು 'ಶಬ್ದರತ್ನಾಕರ'ದ ಪ್ರಕಾರ, ೧೨,೩೩೭ ದೇಶ್ಯಶಬ್ದಗಳೂ, ೧೪,೮೧೪ ತತ್ಸಮಗಳೂ, ೨೦೧೦ ತದ್ಭವಗಳೂ ಇವೆ.

ತಮಿಳು ಭಾಷೆಯಲ್ಲಂತೂ, ಈ ಸಂಸ್ಕೃತವು ಇನ್ನೂ ಕಡಿಮೆಯಾಗುತ್ತದೆ. ತಮಿಳಿನ 'ಅತ್ತಿಶೂಡಿ' ಯಲ್ಲಿ ೨೦೨೦ ಶಬ್ದಗಳಲ್ಲಿ, ೧೫೬ ಶಬ್ದಗಳು ಮಾತ್ರ ಸಂಸ್ಕೃತ. ಉಳಿದುವೆಲ್ಲ ದೇಶ್ಯ. ಹಾಗೇ, 'ನರುಂಪೊಗೈ' ಗ್ರಂಥದಲ್ಲಿ ೬೦೦ ಶಬ್ದಗಳಲ್ಲಿ, ೨೪ ಮಾತ್ರ ಸಂಸ್ಕೃತ. ಇದೂ ಅಲ್ಲದೆ, ತಮಿಳರ ಪ್ರಕಾರ ಅವರ 'ಕಂಬ ರಾಮಾಯಣ'ವು 'ವಾಲ್ಮೀಕಿ ರಾಮಾಯಣ'ದಕಿಂತ ಉತ್ಕೃಷ್ಟವಾಗಿದೆಯಂತೆ! ಅವರ ಪುರಾಣಗಳಾದ 'ಕುರುಳ್' 'ಚಿಂತಾಮಣಿ'ಗಳಂತೂ ಸ್ವತಂತ್ರ ಕೃತಿಗಳೇ ಆಗಿವೆ.

ಒಟ್ಟಾರೆ, ಕನ್ನಡದ ಕೋಶದಲ್ಲಿ ಕಂಡುಬರುವ ಸಂಸ್ಕೃತ ಶಬ್ದಗಳ ಭೂಯಿಷ್ಠತೆಯ ಮೂಲಕ, ಕನ್ನಡ ಭಾಷೆಯು ಸಂಸ್ಕೃತಜನ್ಯವೆಂದು ಹೇಳುವುದು ಸರಿಯಲ್ಲ. ಕೋಶದಲ್ಲಿಯ ದೇಹದ ಅಂಗವಾಚಕಗಳು ಮತ್ತು ಜೀವನಾವಶ್ಯಕ ವಿಷಯವನ್ನು ಹೇಳುವ ಪದಗಳೆಲ್ಲ 'ದೇಶ್ಯ'ವೇ ಆಗಿದ್ದುದರ ಮೂಲಕವೂ, ಮತ್ತು ವರ್ಗೀಕರಣದ ಮೂಲತತ್ವವಾದ ವ್ಯಾಕರಣದ ದೃಷ್ಟಿಯಿಂದ ಕನ್ನಡವು ಸಂಸ್ಕೃತದಿಂದ ತೀರ ಭಿನ್ನವಾಗಿದ್ದುದರ ಮೂಲಕವೂ ಕನ್ನಡ ಭಾಷೆಯು ಸಂಸ್ಕೃತಜನ್ಯವಲ್ಲವೆಂದು ನಾವು ಸ್ಪಷ್ಟವಾಗಿ ಹೇಳಬೇಕು. ಕನ್ನಡವು ಸಂಸ್ಕೃತದಿಂದ ಸ್ವೀಕರಿಸಿದ ಎರವೆಲ್ಲವೂ ಅವಶ್ಯಕ ವಿಷಯಗಳಿಗೆ ಸಂಬಂಧಪಟ್ಟಿರದೆ, ಕೇವಲ ವಿಲಾಸ ಇಲ್ಲವೆ ಆಧ್ಯಾತ್ಮಕ್ಕೆ ಸಂಬಂಧಪಟ್ಟದ್ದಾಗಿವೆ. ("Luxuries or articles of finery than necessaries"). ನಿತ್ಯದ ಜೀವನ ಸಾಗಲು ಇವುಗಳ ಆವಶ್ಯಕತೆಯೇನೂ ಇಲ್ಲ. ಆರ್ಚ್ ಬಿಶಪ್ ಟ್ರೆಂಚ್ ಅವರು ಆಂಗ್ಲ

* ದ್ರಾವಿಡ ಭಾಷೆಗಳಲ್ಲಿಯ ಉಳಿದ ಸಾಮಾನ್ಯ ಪದಗಳಿಗಾಗಿ ಪರಿಶಿಷ್ಟ ನಾಲ್ಕು ನೋಡುವುದು.

ಭಾಷೆಯಲ್ಲಿಯ ಸ್ಯಾಕ್ಸನ್ ಮತ್ತು ಲ್ಯಾಟಿನ್‌ಗಳ ಸಂಬಂಧದ ಬಗ್ಗೆ ಹೇಳಿದ ಮಾತು ಈ ಕನ್ನಡ ಸಂಸ್ಕೃತಗಳ ಸಂಬಂಧಕ್ಕೂ ಅನ್ವಯಿಸುತ್ತದೆ : —

"All its joints, its whole articulation, its sinews, and its ligaments, the great body of articles, pronouns, conjunctions, prepositions, numerals... are exclusively Anglo-Saxon. The Latin may contribute its tale of bricks, yea of goodly and polished hewn stones to the spiritual building but the mortar, with all that holds and binds these together and constitutes them into a house is Anglo-Saxon, throughout." *

ಹೀಗಾಗಿ, ಕನ್ನಡ ಕೋಶದಲ್ಲಿ ಕಂಡುಬರುವ ಮೂಲಭೂತವಾದ ಕನ್ನಡ ಪದಗಳು ಮತ್ತು ವ್ಯಾಕರಣ ವಿಷಯಕವಾದ ಅಸಾಧಾರಣ ಲಕ್ಷಣಗಳ ಮೂಲಕ ಕನ್ನಡವು ಸಂಸ್ಕೃತಜನ್ಯವಲ್ಲವೆಂದೂ, ಅದು ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಸ್ವತಂತ್ರ ಭಾಷೆಯೆಂದೂ ಸುಸ್ಪಷ್ಟವಿದೆ

ಸಂಸ್ಕೃತದ ಮೇಲಾದ ದ್ರಾವಿಡ ಭಾಷೆಗಳ ಪ್ರಭಾವ

ಈ ರೀತಿ ದ್ರಾವಿಡ ಭಾಷೆಗಳು ಕೇವಲ ಸಂಸ್ಕೃತ ಭಿನ್ನವಾಗಿ, ಸ್ವತಂತ್ರವಾಗಿವೆಯಷ್ಟೇ ಅಲ್ಲದೆ, ತೀರ ಪ್ರಾಚೀನ ಕಾಲದಿಂದಲೂ ತಮ್ಮದೇ ಆದ ಒಂದು ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಪೋಷಿಸಿಕೊಂಡು ಬಂದಿವೆ. ಕ್ರಿಸ್ತ ಪೂರ್ವ ಎಷ್ಟೋ ಶತಮಾನಗಳ ಹಿಂದೆಯೇ, ಆರ್ಯರ ಸಂಪರ್ಕವು ಬರುವಕ್ಕಿಂತ ಮೊದಲು ಕೂಡ ದ್ರಾವಿಡರು ಬಹುಶಃ ಇಡೀ ಉತ್ತರ ಹಿಂದುಸ್ಥಾನವನ್ನೆಲ್ಲ ವ್ಯಾಪಿಸಿ ತಮ್ಮದೇ ಆದ ಸಂಸ್ಕೃತಿಯನ್ನು ಪ್ರಸ್ಥಾಪಿಸಿದ್ದರು. ದಕ್ಷಿಣದ ಅರಿಕೆಮೆಡುವಿನಿಂದ ಉತ್ತರದ ಮೊಹೆಂಜೊದಾರೊ ಹರಪ್ಪಗಳ ಉತ್ಖನನಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಅವಶೇಷಗಳು ಒಂದೇ ತರಹದವಾಗಿವೆಯೆಂದು ಪ್ರಾಚ್ಯವಸ್ತು ಸಂಶೋಧನ ಪರಿಷ್ಕಾರಾದ ಡಾ. ವೀಲರ್ ಅವರು ಹೇಳುತ್ತಾರೆ.

ತತ್ಪರಿಣಾಮವಾಗಿ, ತೀರ ಉಚ್ಚಮಟ್ಟದ ಸಂಸ್ಕೃತಿಯ ಹಂತವನ್ನು ಮುಟ್ಟಿದ್ದ ಈ ದ್ರಾವಿಡರ ಪ್ರಭಾವವು, ವಿಜಿಗೀಷುಗಳಾಗಿ ಬಂದ ಆರ್ಯರ ಮೇಲಾಗಿದ್ದರೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಹಿಂದುಸ್ಥಾನದ ಆರ್ಯರು ಇಲ್ಲವೆ ಈ ಸಂಸ್ಕೃತರ ಮೇಲಾದ ಈ ದ್ರಾವಿಡ ಪ್ರಭಾವವನ್ನು ನಾವು ಸ್ಥೂಲವಾಗಿ **ಎರಡು** ವಿಧವಾಗಿ ವಿಂಗಡಿಸಬಹುದು.

ಒಂದು—ಸಾಂಸ್ಕೃತಿಕ; **ಎರಡು**—ಭಾಷಾವಿಷಯಕ.

ಸಾಂಸ್ಕೃತಿಕ — ಪುರಾಣಕಾಲಗಳಲ್ಲಿ ವರ್ಣಿತವಾದ ಅನೇಕ ಐತಿಹ್ಯಗಳು ಬಹುಶಃ ಆ ಕಾಲದ ಮಾರ್ಪಾಡನ್ನೇ ತೋರಿಸುತ್ತಿರಬಹುದೆಂದು ಹಲವು ಪಂಡಿತರ ಅಭಿಪ್ರಾಯ. ರಾಮಾಯಣ ಮಹಾಗ್ರಂಥದಲ್ಲಿ ಐತಿಹಾಸಿಕತೆಯನ್ನು ಕಾಣುವ ಪಂಡಿತರು ರಾಮ–ರಾವಣರ ಯುದ್ಧವು ಬಹುಶಃ ಎರಡು ಸಂಸ್ಕೃತಿಗಳ ದ್ವಂದ್ವವೇ ಆಗಿತ್ತೆಂದು ಹೇಳುತ್ತಾರೆ. ಶಿವಭಕ್ತನಾದ ರಾವಣನೂ, ದಾಕ್ಷಿಣಾತ್ಯ ಹನುಮಂತನೂ, ಔತ್ತರೇಯರ ಕೂಡ ನಡೆದುಕೊಂಡ ರೀತಿಯನ್ನು ಬಹುಶಃ ಈ ಐತಿಹ್ಯವು ತೋರಿಸುತ್ತಿದೆ ಈ ರೀತಿಯ ಸಂಪರ್ಕ, ಸಂಘರ್ಷಣೆಗಳು ಬಹುಶಃ ಈ ಕಾಲದಕಿಂತ ಎಷ್ಟೋ ವರ್ಷ ಮೊದಲಿನಿಂದಲೂ ನಡೆದಿರಬಹುದು.

† R. Narainhachar H. K. L.

ಇವರಿಂದ ಆರ್ಯರ ಧಾರ್ಮಿಕ ಕಲ್ಪನೆಗಳೂ ಕೂಡ ಎಷ್ಟೋ ಮಾರ್ಪಾಟು ಹೊಂದಿದುವು. ಉದಾಹರಣೆಗೆ, ಋಗ್ವೇದವಲ್ಲಿ ಪುನರ್ಜನ್ಮದ ವಿಚಾರವು ಬರುತ್ತಿಲ್ಲ.* ಆದರೆ, ಈ ಪುನರ್ಜನ್ಮದ ವಿಚಾರವು ಇಂದಿನ ಹಿಂದುತ್ವದ ಮೂಲಭೂತವಾದ ತತ್ವವಾಗಿದೆಯಲ್ಲದೆ, ಜನಮನವನ್ನಂತೂ ಸೂರೆಗೊಂಡು ಬಿಟ್ಟಿದೆ. ನಮ್ಮ ಪ್ರಾರಬ್ಧ, ನಮ್ಮ ಕರ್ಮ, ನಮ್ಮ ಸಂಚಿತ,—ಇವುಗಳನ್ನು ಬಿಟ್ಟು ಇಂದಿನ ಹಿಂದುವು ಸಾಮಾನ್ಯವಾಗಿ ಮಾತಾಡಲಾರನು. ಆದ್ದರಿಂದ, ಇಂದಿನ ಈ ಹಿಂದುಗಳ ಪುನರ್ಜನ್ಮ ಕಲ್ಪನೆಯು 'ಅನಾ-ರ್ಯ' ದ್ರಾವಿಡರ (animism) ದ ಪ್ರಭಾವವಾಗಿರಬೇಕೆಂದು ಪಂಡಿತರು ಹೇಳುತ್ತಾರೆ. ಇದರಂತೆಯೇ, ಅನೇಕ ದ್ರಾವಿಡ ದೇವತೆಗಳೂ ಆರ್ಯ ಪ್ರಪಂಚಕ್ಕೆ ಸೇರಿಕೊಂಡುವು. ಪ್ರೊ. Przyluski ಅವರ ಪ್ರಕಾರ "ಲಿಂಗಪೂಜೆ"ಯೂ ಅನಾರ್ಯವಾದುದು. ಅದೂ ಬಹುಶಃ ದ್ರಾವಿಡವಾಗಿರಬೇಕು. '... The Phallic cults of which we know the importance in the ancient religions of Indo-China, are generally considered to have been derived from Indian Saivism. It is more probable that the Aryans have borrowed from the aborigines of India the cult of 'Linga' as well as the name of the idol."† ಶ್ರೀ. ಶಂ. ಬಾ. ಜೋಶಿ ಅವರ ಪ್ರಕಾರ ರುದ್ರ-ಶಿವನು ಮೊದಲು ದ್ರಾವಿಡರ ದೈವತನಾಗಿದ್ದನಂತೆ. ಅವನು 'ಸ್ತೇನಾನಾಂ ಪತಿ.' **ಕೇವಲ** ಅದ್ವೈತರಾದ ಶ್ರೀಮತ್ ಶಂಕರಾಚಾರ್ಯರು ಕೂಡ, ತಮ್ಮ ಭಾಷ್ಯಗಳಲ್ಲಿ ಪರಮಾತ್ಮನ ವರ್ಣನೆಯನ್ನು ಮಾಡುವಾಗ 'ಶಿವ'ನೆಂದು ಸಂಬೋಧಿಸದೆ, 'ಶ್ರೀಮನ್ನಾರಾಯಣಾತ್ಮಕ ಪರಮಾತ್ಮನೆಂದು' ಸಂಬೋಧಿಸುತ್ತಾರೆ. ಈ ಬಗ್ಗೆ ಶ್ರೀ. ಎಸ್. ಕೆ ಚಾತರ್ಜಿ ಅವರು ಬರೆಯುವದೇನಂದರೆ :—

> "Some of the cosmic notions seem to be Dravidian; Dravidian Gods were being added to the Aryan Pantheon, thus a new and composite creation resulted gradually from this sort of union."

ಆರ್ಯರ ಮೇಲಾಗಿದ್ದ, ದ್ರಾವಿಡರ ಸಾಂಸ್ಕೃತಿಕ ಇಲ್ಲವೆ ಧಾರ್ಮಿಕ ಪ್ರಭಾವವು ಈ ರೀತಿಯಾಗಿದ್ದರೆ, ಭಾಷಾದೃಷ್ಟಿಯಿಂದ ಅದು ಎರಡು ವಿಧವಾಗಿ ಪರಿಣಮಿಸಿತು. **ಒಂದು**—ಈ ದ್ರಾವಿಡ ಪ್ರಭಾವವೇ 'ಪ್ರಾಕೃತ' ಭಾಷೆಗಳ ನಿರ್ಮಾಣಕ್ಕೆ ಕಾರಣವಾಯಿತು; **ಎರಡು**—ಸ್ವತಃ ಸಂಸ್ಕೃತ ಭಾಷೆಯಲ್ಲಿ ಕೂಡ ಸಾಕಷ್ಟು ದ್ರಾವಿಡ ಪದಗಳು ಸೇರುವಂತಾಯಿತು. ಪತಂಜಲಿ ಮಹರ್ಷಿಗಳ ಭಾಷ್ಯವನ್ನು ನೋಡಿದವರಿಗೆ ಅವರು ಸಂಸ್ಕೃತದ ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಹೆಣಗಿದ ಪರಿಶ್ರಮವು ಕಂಡುಬರದಿರದು.

೧ **ಪ್ರಾಕೃತದ ಉಗಮ** —ಕೆ. ರಾಮಕೃಷ್ಣಯ್ಯನವರ ಪ್ರಕಾರ ಈ ಪ್ರಾಕೃತ ಭಾಷೆಗಳು ಪ್ರಾರಂಭವಾದದ್ದು ದ್ರಾವಿಡರ ಮೂಲಕವಾಗಿ. ಯಾಕಂದರೆ, ದ್ರಾವಿಡರಿಗೆ ಆರ್ಯರ ಸಂಪರ್ಕವು ಬಂದದ್ದರ ಮೂಲಕವಾಗಿ, ದ್ರಾವಿಡರು ಕೂಡ ಎಷ್ಟೋ ಆರ್ಯ ಶಬ್ದಗಳನ್ನು ಉಪಯೋಗಿಸುವುದು ಅನಿವಾರ್ಯವಾಯಿತು. ಆದರೆ, ದ್ರಾವಿಡ ಉಚ್ಚಾರ ಪದ್ಧತಿ ಮತ್ತು ಶರೀರಯಷ್ಟಿಯುಳ್ಳ ಈ ಜನರಿಗೆ ಇಂಥ ಪದಗಳನ್ನು ಉಚ್ಚರಿಸುವುದು ಸ್ವಾಭಾವಿಕವಾಗಿಯೇ ಸ್ವಲ್ಪ ಕ್ಲಿಷ್ಟವಾಯಿತು. ಇಂದಿನ ಇಂಗ್ಲಿಷ ಪರಿಣಾಮ ಕಾಲದಲ್ಲಿ ಅನೇಕ ಆಂಗ್ಲ ಪದಗಳು ನಮ್ಮ ಸೊಲ್ಲಿಗೇ ಅನುಗುಣವಾಗಿ ನಮ್ಮ ಭಾಷೆಗಳಲ್ಲಿ ಸೇರುತ್ತಿದ್ದುದನ್ನು ಇಂದಿಗೂ ನಾವು ಕಾಣುತ್ತೇವೆ. Man–ಮ್ಯಾನ್ ಆಗುತ್ತಾನೆ. Ball–ಬಾಲ್ ಆಗುತ್ತದೆ; Ration–ರೇಸನ್ ಆಗುತ್ತದೆ. ಇತ್ಯಾದಿ, ಇತ್ಯಾದಿ. ಇದು ನಮ್ಮ ಉಚ್ಚಾರಪದ್ಧತಿಯ ಅನಿವಾರ್ಯ ಪ್ರಭಾವ. ಇದರ ವಿರುದ್ಧವಾಗಿ

* K. Ramakrishnayya. † P. A. and P. D., P. 15.

ಆಂಗ್ಲರ ಬಾಯಲ್ಲೂ 'ಮಂಗಳೂರು' 'ಮ್ಯಾಂಗಳೂರ್' ಆಗಿಯೂ, 'ಬೆಂಗಳೂರು' 'ಬ್ಯಾಂಗಳೂರ್' ಆಗಿಯೂ, ವಿಜಯಪುರವು 'ಬಿಜ್‌ಪುರ್' ಆಗಿಯೂ, ಧಾರವಾಡ, ಚಿತ್ರಕಲ್‌ದುರ್ಗಗಳು 'ಡಾರ್‌ವಾರ್', '**ಚಿಟಲ್‌ಡ್ರುಗ್**' (!) ಗಳಾಗಿಯೂ ಪರಿಣಮಿಸಿದ್ದನ್ನು ಕಾಣಬಹುದು. ಇದೇ ರೀತಿಯಾಗಿ, ಆರ್ಯ ಶಬ್ದಗಳನ್ನು ಉಚ್ಚರಿಸುವಾಗಲೂ ಕೂಡ, ದ್ರಾವಿಡರು ಇಂಥ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಇದರ ಪರಿಣಾಮವೇ ಪ್ರಾಕೃತ ಭಾಷೆಗಳು. ಈ ರೀತಿ ಯಾವ ಯಾವ ದೇಶದಲ್ಲಿ ಈ ಆರ್ಯ ಭಾಷೆಯು ಇಂಥ ಮಾರ್ಪಾಟನ್ನು ಪಡೆಯಿತೋ, ಆ ಆ ದೇಶದ ಹೆಸರುಗಳನ್ನೇ ಅವಕ್ಕೆ ಇಡಲಾಯಿತು. ಮಾಗಧಿ, ಶೌರಸೇನಿ, ಪಾಂಚಾಲಿ, ಮಹಾರಾಷ್ಟ್ರಿ—ಇತ್ಯಾದಿ. ಈ ಬಗ್ಗೆ ಕೆ. ರಾಮಕೃಷ್ಣಯ್ಯನವರು ಬರೆಯುವ ದೇನಂದರೆ:—

> "It is to the close inter-mingling of these Aryan and Non-Aryan tribes in Northern India, speaking different languages and having different culture of their own, that we have to trace the origin of the Prakrits as well as the civilization of Ancient India."

ಈ ಪ್ರಾಕೃತ ಭಾಷೆಗಳ ಉಗಮದ ಬಗ್ಗೆ ಬರೆಯುವಾಗ ಪ್ರೊ. ವೂಲ್ನರ್ ಅವರೂ ಹೆಚ್ಚುಕಡಿಮೆ ಇದೇ ಅಭಿಪ್ರಾಯವನ್ನೇ ಸೂಚಿಸುತ್ತಾರೆ:—

> "Economy of effort, progressive refinement, especially in courts and cities, softening influence of a semi-tropical climate, *influence of the speech-habit of Non-Aryan peoples, who adopted the Aryan speech,—all these may have been at work.*"

ಡಾಕ್ಟರ್ ಭಂಡಾರಕರ ಅವರಂತೂ, ಈ ಅಭಿಪ್ರಾಯವನ್ನು ಇದಕ್ಕೂ ಸ್ಪಷ್ಟವಾಗಿಯೇ ಹೇಳುತ್ತಿದ್ದಾರೆ:—

> "The Prakrit words must be taken to represent the pronunciation of the corresponding Sanskrit words by an alien race. The vocal organs of the people of that race were unused to the utterance of Sanskrit words."

ತತ್ಪರಿಣಾಮವಾಗಿ, ಈ ಪ್ರಾಕೃತ ಭಾಷೆಗಳಲ್ಲಿ ಅನೇಕ ದೇಶ್ಯಪದಗಳೂ (ಮುಂದಿನ ಭಾಗ ನೋಡುವುದು), ದ್ರಾವಿಡ ವಿಶಿಷ್ಟವಾದ ಹಲವು ಪ್ರಕ್ರಿಯೆಗಳೂ, ಮತ್ತು ವರ್ಣಗಳೂ ಸೇರಿಕೊಂಡವು.

ಆದರೆ, ಇದಕ್ಕೂ ಹೆಚ್ಚೆಂದರೆ, ಸ್ವತಃ ಸಂಸ್ಕೃತದ ಮೇಲಾದ ದ್ರಾವಿಡ ಭಾಷೆಗಳ ಪರಿಣಾಮ. ಇದನ್ನು ಕೂಡ ನಾವು **ಎರಡು** ವಿಧವಾಗಿ ವಿಂಗಡಿಸಬಹುದು. **ಒಂದು—ಕೋಶವಿಷಯಕ; ಎರಡು—ವ್ಯಾಕರಣವಿಷಯಕ.**

ಕೋಶದ ದೃಷ್ಟಿಯಿಂದ, ಈ ಎರಡೂ ಜನಾಂಗಗಳ ಗಾಢವಾದ ಸಂಪರ್ಕವು ಬಂದಾಗ, ಅನೇಕ ದ್ರಾವಿಡ ಶಬ್ದಗಳು ಸಂಸ್ಕೃತಕ್ಕೆ ಹೋಗುವುದು ಅನಿವಾರ್ಯವಾಯಿತು. ಈ ರೀತಿಯಾಗಿ, ಗ್ರೀಕ ಭಾಷೆಯಿಂದ ಸಹ 'ಹೋರಾ' 'ದೀನಾರ'—ಮೊದಲಾದ ಪದಗಳನ್ನು ತೆಗೆದುಕೊಂಡ ಸಂಸ್ಕೃತವು ದ್ರಾವಿಡದಿಂದಲೂ ಅನೇಕ ಪದಗಳನ್ನು ತೆಗೆದುಕೊಂಡಿತು.

ಆದರೆ, ಈ ಪದಗಳಾವು ಎಂಬುದನ್ನು ಹೇಳುವುದು ಮಾತ್ರ ಕಠಿಣವಾಗಿದೆ. ಯಾಕೆಂದರೆ, ಅಷ್ಟರ ಮಟ್ಟಿಗೆ ಈ ದ್ರಾವಿಡ ಮತ್ತು ಸಂಸ್ಕೃತ ಭಾಷೆಗಳು ಹೊಂದಿಕೊಂಡು ಬಿಟ್ಟವೆ. ಹೀಗಾಗಿ ಯಾವುದೇ ಒಂದು ಪದವು ದ್ರಾವಿಡದಿಂದ ಸಂಸ್ಕೃತಕ್ಕೆ ಹೋಯಿತೆಂಬುದನ್ನು ನಿರ್ಧರಿಸುವುದು ಸ್ವಲ್ಪ ಕಷ್ಟಸಾಧ್ಯವೇ. ಈ ನಿರ್ಧಾರಕ್ಕಾಗಿ ಡಾ. ಕಾಲ್ಡ್‌ವೆಲ್‌ರವರು ಕೆಳಗಿನ ನಾಲ್ಕು ಮುಖ್ಯವಾದ ನಿಕಷಗಳನ್ನು ಸೂಚಿಸುತ್ತಾರೆ:—

೧. ಯಾವುದೇ ಒಂದು ಪದದ ವ್ಯುತ್ಪತ್ತಿಯನ್ನು ಸಂಸ್ಕೃತದಲ್ಲಿ ಹೇಳಲು ಬಾರದೆ, ದ್ರಾವಿಡದಲ್ಲಿ ಮಾತ್ರ ಅದರ ವ್ಯುತ್ಪತ್ತಿಯು ದೊರಕುವಂತಿದ್ದರೆ,

೨. ದ್ರಾವಿಡ ಭಾಷೆಗಳಲ್ಲಿ ಆ ಶಬ್ದವು ಮೂಲಭೂತ ಶಬ್ದವಾಗಿದ್ದು (basic-word), ಅದೇ ಅರ್ಥವನ್ನು ಸೂಚಿಸಲಿಕ್ಕೆ ಬೇರೆ ಬೇರೆ ಪದಗಳು ಸಂಸ್ಕೃತದಲ್ಲಿ ಉಪಲಬ್ಧವಿದ್ದರೆ,—ಉದಾ: ದ್ರಾವಿಡ ನೀರು; ಸಂಸ್ಕೃತ—ಪಯ, ವಾರಿ, ಉದಕ, ತೋಯ—ಇತ್ಯಾದಿ.

೩. ಮೂರನೆಯದಾಗಿ, ಆ ಶಬ್ದವು ಆರ್ಯವರ್ಗದ ಇತರ ಯಾವ ಭಾಷೆಗಳಲ್ಲೂ ದೊರಕದೆ, ದ್ರಾವಿಡ ವರ್ಗದಲ್ಲಿ ಮಾತ್ರ ಸಿಗುತ್ತಿದ್ದರೆ—ಉದಾ: ಕೇಯೂರ–ಕರವಾಲ—ಇತ್ಯಾದಿ.

೪. ದ್ರಾವಿಡ ವರ್ಗದಲ್ಲಿ ಆ ಶಬ್ದದ ಬೇರೆ ಬೇರೆ ಸಾಧಿತ ರೂಪಗಳಿರುತ್ತಿದ್ದರೆ, (analogous or derived forms).

ಈ ನಿಕಷಗಳಿಗೆ ಅನ್ವಯಿಸಿ ನೋಡಿದರೆ, ಡಾ. ಕಾಲ್ಡ್‌ವೆಲ್‌ರ ಪ್ರಕಾರ ಈ ಕೆಳಗಿನ ಶಬ್ದಗಳು ದ್ರಾವಿಡ ಭಾಷಾವರ್ಗದಿಂದ ಆರ್ಯ ವರ್ಗಕ್ಕೆ ಹೋದುವು.—

ಕುಟಿ—ಕೋಟೆ; ನೀರು; ಪಳ್ಳಿ; ಮೀನ (ಕೇತನ); ಏಡ; ಹೇರಂಬ (ನೋ–ಎರುಮೈ–ಎಮ್ಮೆ); ಅತ್ತ (ಅಂದರೆ ಕುಚ್ಚಿದ ಅನ್ನ–ಅಡು ಧಾತುವಿನಿಂದ ಸಾಧಿತವಾದದ್ದು); ಮುಕುಲ; ಕುಂತಲ (ಕೂದಲ; ಕೂಂದಲ್); ಕಾಕ(?); ಮಚಲ; ಉಲ್ಕ (ನೋ–ಉಲ್ಕಾಪಾತ ಉಳುಕು ಧಾತುವಿನಿಂದ ಬಂದುದು); ತಡಿತ್ ∠ ಸಿಡಿಲು; (ತುಳು–ತೆಡಿಲ್); ಶುಂಡಿ (ಕುಂಟಣಗಿತಿ) ∠ ಸೊಂಡಿ; ಖಲೀನ ∠ ಕಡಿಯಾಣ; ತಲ್ಪ ∠ ತೆಪ್ಪ; ಪ್ಸಾ ∠ ಪಸಿ, ಹಸಿ, ಹಸಿವು; ಇತ್ಯಾದಿ.

ಇದೂ ಅಲ್ಲದೆ, ಡಾ. ಕಾಲ್ಡ್‌ವೆಲ್ ಅವರು ಒಂದು ಉದ್ದವಾದ ಇಂಥ ದ್ರಾವಿಡ ಪದಗಳ ಪಟ್ಟಿಯನ್ನೇ ಕೊಡುತ್ತಾರೆ. ಪ್ರೊ. ಕೆ. ಬಿ. ಪಾಠಕ ಅವರ ಪ್ರಕಾರ ಲೌಕಿಕ ಸಂಸ್ಕೃತದಲ್ಲಿ ಕಾಣದೆ, ವೇದಗಳಲ್ಲಿ ಮಾತ್ರ ಕಂಡುಬರುವ 'ಮಟಚಿ' ಶಬ್ದವು ದ್ರಾವಿಡ–ಕನ್ನಡ. ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ 'ಮಟಚೀ ಹತೇಷು ಕುರುಷು' ಎಂಬುದನ್ನು ವ್ಯಾಖ್ಯಾನಕಾರರು "ರಕ್ತವರ್ಣಾಃ ಕ್ಷುದ್ರಪಕ್ಷಿವಿಶೇಷಾಃ" ಎಂದು ಹೇಳಿದರು. ಕ. ಜೇಕಬ್ ಅವರು ಈ ಶಬ್ದದ ಬಗ್ಗೆ "Looks like an importation from outside Aryavarta" ಎಂದು ಹೇಳಿದರು. ಈ ಹುಳುವನ್ನು ತೆಲುಗಿನಲ್ಲಿ 'ಮಿಡುಥ' ಎಂದೂ, ಮಲಯಾಳಿನಲ್ಲಿ 'ವಿಟ್ಟಲ್' ಇಲ್ಲವೆ 'ವೆಟ್ಟಲ್' ಎಂದೂ ತಮಿಳಿನಲ್ಲಿ 'ವೆಟ್ಟಕ್ಕಿಳಿ' ಎಂದೂ ಕರೆಯುತ್ತಾರೆ. ಕನ್ನಡ 'ಮಿಡಿ' ಅಂದರೆ 'ಜಿಗಿ' 'ಹಾರು' ಎನ್ನುವ ಧಾತುವು ಈ ಶಬ್ದದ ತೀರ ಸಮೀಪದ್ದೆಂದು ಸ್ಪಷ್ಟವೇ ಇದೆ.*

* K. B. P. in Ind. Ant. Aug. 1913.

ಪ್ರೊ. ಜೂಲ್ಸ್ ಬ್ಲಾಕ್ ಅವರು ಈ ಮಾತನ್ನು ಒಪ್ಪುವುದಿಲ್ಲ. ಅವರು ಈ ಬಗ್ಗೆ ಹೇಳುವದೇನಂದರೆ:— One has identified ಮಟಚಿ found in the ಛಾಂದೋಗ್ಯ ಉಪನಿಷತ್ with Kan, ಮಿಡಿಚೆ, grass

ಶ್ರೀ. ಎಸ್. ಕೆ. ಚಾಟರ್ಜಿ ಅವರ ಪ್ರಕಾರ, ಈ ಕೆಳಗಿನ ಶಬ್ದಗಳೂ ದ್ರಾವಿಡದಿಂದ ಸಂಸ್ಕೃತಕ್ಕೆ ಹೋದುವು. ಈ ಶಬ್ದಗಳೆಲ್ಲ ತೀರ ಪ್ರಾಚೀನ ಕಾಲಕ್ಕೇ ಸಂಸ್ಕೃತದಲ್ಲಿ ಸೇರಿಕೊಂಡವು. ಇವು ಋಗ್ವೇದದಲ್ಲೇ ಕಂಡುಬರುತ್ತವೆ; ಈ ಶಬ್ದಗಳೆಂದರೆ:—

ಅಣು; ಆರಣಿ; ಕಪಿ; ಕರ್ವುರ; ಕಾಲ; ಕುಟಿ (ಅಂದರೆ ಗುಡಿಸಲು); ಕುಂಡ, ನಾನಾ (∠ನಾಲ್ ∠ನಾಂಗು=ನಾಕು); ನೀಲ; ಪುಷ್ಪ; ಪೂಜನ; ಫಲ; ಬೀಜ; ರಾತ್ರಿ; ರೂಪ; ಕಲಾ (ಕಲಿ ಧಾತುವಿನಿಂದ) ಇತ್ಯಾದಿ.

ಈ ಮೇಲಿನ ಪಟ್ಟಿಯಿಂದಲೇ, ನಾವು ಶುದ್ಧ ಸಂಸ್ಕೃತವೆಂದು ತೀರ ದೃಢವಾಗಿ ನಂಬಿದ್ದ ಎಷ್ಟೋ ಪದಗಳು ಯಾವ ರೀತಿ ಮೂಲಸ್ಥಾನ ಮರೆಯುವಷ್ಟು ದೂರ ಹೋಗಿವೆಯೆಂಬುದನ್ನು ಕಾಣಬಹುದು. ಅದೂ ಅಲ್ಲದೆ, ಕನ್ನಡ 'ಹೆಣ' ಶಬ್ದಕ್ಕೆ ಸರಿಯಾದ ಸಂಸ್ಕೃತ ಶಬ್ದವು 'ಶವ' ಎಂಬುದಿದೆಯಷ್ಟೇ? ಈ ಪದದ ನಿರುಕ್ತವನ್ನು ಸಂಸ್ಕೃತದಲ್ಲಿ ಶವ್–ಅಂದರೆ 'ಹೋಗು' ಎಂಬ ಧಾತುವಿನಿಂದ 'ಹೋದುದು-ಸತ್ತುದು' ಎಂಬರ್ಥವಲ್ಲಿ ಹೇಳುತ್ತಾರೆ. ಆದರೆ, ಉಳಿದ ಹಲವು ಪಂಡಿತರ ಪ್ರಕಾರ ಈ ಪದವು 'ಮೃತಿಹೊಂದು'– ಎಂಬ ದ್ರಾವಿಡ ಧಾತುವಿನಿಂದಲೇ ಬಂದುದು. ಈ 'ಶವ' ಶಬ್ದವು ದ್ರಾವಿಡ 'ಸಾ'–ದಿಂದ ಬಂದುದೆಂದು ಹೇಳುತ್ತಾರೆ. ತಮಿಳು 'ಶಾ', ಮಲಯಾಳಮ್ 'ಚಾ', ಕನ್ನಡ 'ಸಾ–ಸಾಯ್, ಸಯ್'; ತುಳು 'ಸೆಯ್'– ಮೃತಿಹೊಂದು ಎಂಬ ದ್ರಾವಿಡ ಪದದಿಂದ ಈ ಪದವು ಬಂದಿತು. ಈ ಮೂಲರೂಪವು ನಷ್ಟವಾದಾಗ, ಹೆಣ್ಣುಮಕ್ಕಳ ಬಾಯಲ್ಲಿ ಈ ಪದವು 'ಶ್ರವ' ವಾದದ್ದನ್ನು ಕಾಣುತ್ತೇವೆ. ಇದರಂತೆಯೇ ಮಲಯಾನಿಲ– ಮೊದಲಾದವಲ್ಲಿ ಬರುವ 'ಮಲಯ' ಶಬ್ದ. ಇದು ದ್ರಾವಿಡ ಮಲೆ–ಮಲೈದಿಂದ ಬಂದುದು. ಇಂದಿಗೂ ಮಲೆನಾಡು, ಮಲೆ–ಪ, ಇತ್ಯಾದಿ ಪದಗಳಲ್ಲಿ ಇದರ ಸಮಾನರೂಪಗಳನ್ನು ಕಾಣಬಹುದು. ಸಂಸ್ಕೃತದಲ್ಲಿ 'ಅಟವಿ' ಶಬ್ದದ ವ್ಯುತ್ಪತ್ತಿಯನ್ನು ಅಟ್ ಅಂದರೆ ಅಡ್ಡಾಡು–ಎಂಬ ಧಾತುವಿನಿಂದ ಹೇಳುತ್ತಾರೆ. ಆದರೆ, ಅದು ನಿಜವಾಗಿ, 'ಅಡ' ಅಂದರೆ ಸಾಮೀಪ್ಯ ಎಂಬ ಪದದಿಂದ ಬಂದುದು. ಅಡ–ಅಡಿಸು–ಅಡಕಲ–ಮೊದಲಾದ ಪದಗಳಲ್ಲಿ ಸಾಧಿತ ರೂಪಗಳನ್ನು ಕಾಣಬಹುದು. ಸಂಸ್ಕೃತದಲ್ಲಿ 'ವರ್ತುಲ' ಎಂದು ಹೇಳಲು 'ವಲಯ' ಪದವನ್ನು ಉಪಯೋಗಿಸುತ್ತಾರಷ್ಟೇ? "ವಸುಧಾ**ವಲಯ** ವಿಲೀನವಿಶದ" ಇತ್ಯಾದಿ.

ಇದೇ ಮರಾಠಿಯಲ್ಲಿ 'ವಳಣ'–ವಾಗುತ್ತದೆ. ಆದರೆ ಈ ಪದವೂ ಕೂಡ ದ್ರಾವಿಡ 'ವಳೈ' ಕನ್ನಡ 'ಬಳೆ' ರೂಪದಿಂದ ಬಂದುದು. ಬಳೆ, ಬಳಸು, (=ಸುತ್ತು), ತಮಿಳು ಎಲಿವಳೈ (=ಇಲಿಯ ಹೋರು) —ಎನ್ನುವಲ್ಲಿ ಈ ಧಾತು–ಸಾಧಿತಗಳನ್ನು ಕಾಣಬಹುದು. ಬಂಗಾಲಿಯಲ್ಲಿ ಈ ಪದವು 'ಬಾಲಾ'—ಎಂದು ಆಗಿದೆ.

ಶ್ರೀ. ಬಿ. ಸಿ. ಮುಜುಮದಾರ ಅವರ ಪ್ರಕಾರ ಈ ಕೆಳಗಿನ ಶಬ್ದಗಳೂ ದ್ರಾವಿಡದಿಂದ ಸಂಸ್ಕೃತಕ್ಕೆ ಹೋದುವು. ಅವುಗಳಲ್ಲಿ ಮುಖ್ಯವಾದವುಗಳನ್ನು ನೋಡೋಣ.— **ಕಾಲ7 = ಕಾಳ7 = ಕಪ್ಪು.**

-hopper. The relation between Can. ಮಾ & ಸಂ. ಮ is not without analogy – but one is led to ask if a family of Dr. words expressing size is not entirely borrowed from Aryan ಸಂ. ಮಹಾ, Can. ಮಿಗೆ ತ. ಮಿಗೈ; Can. ಮಿಕ್ಕು etc. If it be so, then of the two languages, Aryan may be considerd as having the most prestige and very likely as being the least open to borrowing and all the more to the phonetic and morphological influence of a Dr. substratum (P. A. P D, 52). ಆದರೆ ಪ್ರೊ. ಬ್ಲಾಕ್ ಅವರು ಇಲ್ಲಿಯ ಧಾತುವು "ಮಿಗ" ಎಂಬುದಿದೆ ಯೆಂಬುದನ್ನು ಗಮನಿಸಲಿಲ್ಲ

ಈ ಸಂಸ್ಕೃತಪದವು ಸಂಸ್ಕೃತ 'ಕೃಷ್ಣ' ಪದದಿಂದ ಬಂದಿರಲಾರದು. ಇದು ದ್ರಾವಿಡ ಕರ್ (ಕರನಾಡು ಇ. ನೋಡುವುದು) ದಿಂದ ಬಂದುದು.

ಕುಟ– ತ. ಕುಡಿ (ಕುಡಿಸ್ಸೈ); ತೆ. ಗುಡಿಸೆ; ಕ. ಗುಡಿಸಲು; (ಗುಡಿಸೆ + ಇಲ್ ?); ಬಂಗಾಲಿ 'ಕುಡಿಯಾ' ಅಥವಾ 'ಕುಡೆ'.

ನಾರಿಕೇಳ (ಪಾಕ); — "ಈ ಪದವು ವೇದದಲ್ಲಿಲ್ಲ. ಕೇರಳ ಪ್ರಾಂತದಲ್ಲಿ ಇದನ್ನು 'ಕೇಲ್'– ಎಂದು ಕರೆಯುತ್ತಾರೆ. ಅನಂತರ, ಇದು ನಾಲ್ ಅಂದರೆ ಒಳ್ಳೆಯ (ಕ. ನಲ್ವಾಡು, ನಲ್–ನುಡಿ ಇ.) + ಕೇಲ್ ಕೂಡಿ 'ನಾಲ್ಕೇಲ್' ಎಂದಾಯಿತು. ಅನಂತರ ಈ ಶಬ್ದ ಮತ್ತು ಗಿಡ ಎರಡೂ ಕೂಡಿಯೇ ಕೇರಳದಿಂದ ಹಿಂದುಸ್ಥಾನಕ್ಕೆ ಹೋದುವು."

ತೋಯು: — ತೊಯ್ ಧಾತುವಿನಿಂದ. ತಿಪ್ಪೆರಾ ಭಾಗದ ಅನಾಗರಿಕ ಜನರು ಇಂದಿಗೂ ಇದೇ ಶಬ್ದವನ್ನೇ ನೀರಿಗಾಗಿ ಉಪಯೋಗಿಸುತ್ತಾರೆ. ಮಣಿಪುರದಲ್ಲಿ ಇದನ್ನೇ 'ತುಯಿ' ಎಂದು ಉಪಯೋಗಿಸುತ್ತಾರೆ.

ಮಾಮಾ — ಮರಾಠಿಯಲ್ಲೂ ಇದೆ. ಸಂಸ್ಕೃತ ಬ್ರಾಹ್ಮಣಸಾಹಿತ್ಯದಲ್ಲಿ ಮಾತುರ್–ಭ್ರಾತಾ ಎಂದಿದೆಯೇ ಹೊರತು ಈ ಪದವಿಲ್ಲ.

ಮಾಲಾ — ಕೇಶಿರಾಜಾದಿಗಳು ಕೂಡ ಇದು ಸಂಸ್ಕೃತವೆಂದು ನಂಬಿ ಈ ಪದಗಳು ಕನ್ನಡ ಲಿಂಗವಾಗಲು 'ಅ' ಇಲ್ಲವೆ 'ಎ'–ಅಂತ್ಯವನ್ನು ಪಡೆಯಬೇಕೆಂದು ಹೇಳಿದರು. ಆದರೆ ನಿಜವಾಗಿ 'ಮಾಲಾ' ಶಬ್ದವು ದ್ರಾವಿಡ ಮೂಲವುಳ್ಳುದು. ತಮಿಳಿನಲ್ಲಿ 'ಮಲೈ' ಎಂದರೆ 'ಸರ'–' 'ಮಣಿ—ಮೇಖಲೈ'. ಜನಭಾಷೆಯ ತಮಿಳಿನಲ್ಲಿ ಇಂದಿಗೂ 'ಮಾ'—ಎಂದರೆ ಹೂವು. ಈ ಬಗ್ಗೆ ಮುಜುಮದಾರ ಅವರು ಒಂದು ಒಳ್ಳೆಯ ಮಾತನ್ನು ಹೇಳುತ್ತಾರೆ: — "Because of this unorthodox origin the use of the word has been prohibited in Jaimini Grihyasutras."

ಮೀನ—ಮಿನ್ ಧಾತುವಿನಿಂದ ಬಂದುದು ಈ ಬಗ್ಗೆ ಮುಜುಮದಾರ ಅವರು ಹೇಳುವದೇನಂದರೆ:—

> " ಮೀನ್ as a word to signify 'fish' was unknown not only in Vedic, but also in very old Classical Sanskrit: but this 'Min' or fish, which was on the ensign of the 'Pandyas' and was the name of the Dravidian tribe 'ಮೀನವರ್' became synonym for 'ಮತ್ಸ್ಯ', and fish God as well; very likely when the Pandyas established some relation with the Northerners."

ಸಂಸ್ಕೃತ ಆಟೋಪ ಶಬ್ದವು ಎರಡು ಸಲ ಸ್ಥಾನವನ್ನು ಬದಲಿಸಿದೆ. ಅದು ಮೂಲತಃ ಸಂಸ್ಕೃತ ಡಂಭದಿಂದ ಬಂದುದು. ಈ ಡಂಭವು ದ್ರಾವಿಡದಲ್ಲಿ ಇ—ಟಂಪನ್ ಎಂದಾಯಿತು. ಇದೇ ಪುನಃ ಸಂಸ್ಕೃತಕ್ಕೆ ತಿರುಗಿ ಹೋಗಿ 'ಆಟೋಪಮ್' — ಎಂದಾಯಿತು.

ಹಿಂದುಸ್ಥಾನಿ 'ಘೋಡಾ' ಶಬ್ದವಿದೆಯಷ್ಟೆ; ಅದು ಸಂಸ್ಕೃತ ಘೋಟಕದಿಂದ ಬಂದಿತೆಂದು ಹೇಳುತ್ತಾರೆ. ಕನ್ನಡ ಕೇಶಿರಾಜನು ಕೂಡ ಈ ಪದವು ಸಂಸ್ಕೃತವೆಂದೇ ನಂಬಿ, ಇದು ಕನ್ನಡದಲ್ಲಿ ತದ್ಭವವಾಗು

ತ್ತದೆಂದು ಹೇಳುತ್ತಾನೆ. ಈ ರೀತಿ ಸಂ. ಘೋಟಾರೂಢವು ಕನ್ನಡದಲ್ಲಿ ಘೋಟಾಯಿಲವಾಗುತ್ತದೆ. ಆದರೆ ನಿಜವಾಗಿ ಈ ಘೋಟ—ಆರೂಢವು ಒಂದು ರೀತಿ ಅರಿ—ಸಮಾಸ. ಯಾಕಂದರೆ, ಇದರಲ್ಲಿಯ ಉತ್ತರ ಪದವು ಸಂಸ್ಕೃತವಾಗಿಯೂ, ಪೂರ್ವಪದವು ಕನ್ನಡವಾಗಿಯೂ ಇವೆ. ಆಧುನಿಕ ಭಾಷಾಶಾಸ್ತ್ರಜ್ಞರ ಪ್ರಕಾರ ಘೋಟಾ ಶಬ್ದವು ದ್ರಾವಿಡ. ಈ ಮೊದಲಿನ ಹೇಮಚಂದ್ರನು ಕೂಡ ಈ 'ಘೋಡಾ' ಶಬ್ದವು ಸಂಸ್ಕೃತವಲ್ಲವೆಂದೇ ಹೇಳಿದನು. ಇದರ ಸಮಾನ ರೂಪಗಳನ್ನು ಇಂದಿಗೂ, ತೆಲುಗು ಕನ್ನಡಗಳಲ್ಲಿ ಕಾಣಬಹುದು. ದ್ರಾವಿಡ ಕುದಿರೈ ಪದವೇ ಕುದುರೆ 7 ಗುರ್ರಮು 7 ಗುತ್ರಮು 7 ಘೋಟ 7 ಘೋಟಕ—ಎಂದಾಯಿತೆಂದು ಶಾಸ್ತ್ರಜ್ಞರ ಅಭಿಪ್ರಾಯ. ಗುತ್ರ ಶಬ್ದವು ಪೂರ್ವದ ಅಸೀರಿಯದಲ್ಲಿಯೂ ದೊರೆಯುತ್ತದೆ.

ಈ 'ಘೋಟಾ' 'ಘೋಡಾ' ಶಬ್ದದ ಬಗ್ಗೆ ಪ್ರೊ. ಜೂಲ್ಸ್ ಬ್ಲಾಃಕ್ ಅವರು ಬರೆದ ಮಾತುಗಳು ಭಾಷಾಶಾಸ್ತ್ರ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ತುಂಬಾ ಮನನೀಯವಾಗಿವೆ. ಅವರು ಈ ಬಗ್ಗೆ ಹೇಳುವದೇನಂದರೆ—

> "The Vedic name for horse 'ಅಶ್ವ', is no longer represented today in Indo—Aryan except on the confines of the Iranian world where, the corresponding word is still living. The word, which has replaced it in all other parts of the country occurs in the ಶ್ರೌತ ಸೂತ್ರ of ಆಪಸ್ತಂಭ— a text which appears to be of Southern origin under the form ಘೋಟಾ........The similarity of 'ghota' with some Dravidian forms with the same meaning has been long recognised : ತೆ. ಗುರ್ರಮು; ಕ. ಕುದುರೆ; ತ. ಕುದಿರೈ; ಕುಯ್ರ್; ಗೋಡಾ".*

ಪ್ರೊ. ಬ್ಲಾಃಕ್ ಅವರ ಪ್ರಕಾರ ಶಕ, ಕುಶ ಮತ್ತು ಹೂಣರು ಆರ್ಯಾವರ್ತದಲ್ಲಿ ಬಂದು ನೆಲೆಸಿದಂತೆ ದ್ರಾವಿಡರೂ ಹೊರಗಿನಿಂದ ಬಂದು ನೆಲೆಸಿದರು ಈ 'ಕುದುರೆ' ಪದ ಮತ್ತು 'ಪ್ರಾಣಿ'ಯು ಉತ್ತರಾಪಥಕ್ಕೆ ಸೇರಿದುವು. ಯಾಕಂದರೆ, ಎಂದಿನಿಂದಲೂ ದಕ್ಷಿಣ ಭಾರತಕ್ಕೆ ಕುದುರೆಗಳು ಬಂದುದು ಉತ್ತರಾಪಥದಿಂದಲೇ. ಕೇಶಿರಾಜನು ಕುರುಪಿಗೆ ದೃಷ್ಟಾಂತವಾಗಿ "ಟೊಪ್ಪಿಗೆಯ ಮಾನಿಸಂ"; "ತೊತ್ತುಳದ ರಾವುತಂ"; "**ಸಿಂಧುದೇಶದ ಕುದುರೆ**"—ಎಂದು ಹೇಳುತ್ತಾನೆ. ಇಂದಿಗೂ ಕಾಠೆವಾಡದ ಕುದುರೆಗಳು ನಮ್ಮಲ್ಲಿ ಪ್ರಸಿದ್ಧ. ಬ್ಲಾಃಕ್ ಅವರು ಹೇಳಿದಂತೆ—'Dravidian, the language of the Dekhan, therefore, would have been at first a language of North; and the horse, in fact, is in India an animal of the North: it has been discovered in a fossil state in Siwalik mountains; and the Vedas specially mention the horses of Sind and the Saraswati." †

ಇದರಂತೆ, ಸಂಸ್ಕೃತದ 'ಗಾರ್ದಭ' ಇಲ್ಲವೆ 'ರಾಸಭ' ಪದ. ಇದೂ ಕೂಡ ದ್ರಾವಿಡವಾಗಿರಬಹುದೆಂದು ಪ್ರೊ. ಬ್ಲಾಃಕ್ ಅವರು ಸೂಚಿಸುತ್ತಾರೆ.

> "The identity of R. V. ಗಾರ್ದಭ, Hindi ಗಾಧಾ, on the one hand, and Tel. ಗಾಡಿದೆ, Can. ಕತ್ತೆ, Tam. ಕಲುದೈ, — on the other hand is evident .... The ass is an animal of Asia; it is rare in India except in the Western regions."

---

* P. A. & P. D. 47. † P. A. & P. D. 49.

ಇನ್ನೂ ಹಲವು ಕಡೆಗೆ ಸಂಸ್ಕೃತ ಭಾಷೆಯು ನೇರವಾಗಿ ದ್ರಾವಿಡ ಪದಗಳನ್ನು ತನ್ನ ಕೋಶದಲ್ಲಿ ಸೇರಿಸಿಕೊಳ್ಳದೆ, "ತಪ್ಪು ಸಾಹಚರ್ಯದ" ಮೂಲಕವೋ ಅಥವಾ ಇನ್ನಾವ ಕಾರಣದಿಂದಲೋ ಹಲವು ದ್ರಾವಿಡ ಅಂಶಗಳನ್ನು ಸ್ವೀಕರಿಸಿದೆ.

ಉದಾಹರಣೆಗೆ, ಯಜುರ್ವೇದ ಕಾಲದಿಂದ ಧಾನ್ಯವಿಶೇಷದ ನಿರ್ದೇಶಕವಾಗಿ ಬರುವ "ಗೋಧೂಮಾಃ" ಪದಕ್ಕೆ ಸಂಸ್ಕೃತದಲ್ಲಿ ಸರಿಯಾದ ನಿರುಕ್ತವೇ ಇಲ್ಲ. ಈ ಪದವು ಶತಪಥಬ್ರಾಹ್ಮಣದಲ್ಲಿ ಏಕವಚನದಲ್ಲಿಯೂ ಬರುವುದುಂಟು. ಆದರೆ, ಇದರ ಸಂಸ್ಕೃತ ನಿರುಕ್ತದ ರೀತಿಯನ್ನು ತೆಗೆದುಕೊಂಡರೆ, ಗೋ-ಧೂಮಾಃ ಅಂದರೆ 'ಆಕಳ ಹೊಗೆ' ಎಂದು ಸೂಚಿಸುತ್ತದೆ. ಇದು ಅಸದ್ಧ. ಇದಕ್ಕೇನೂ ಅರ್ಥವಾಗುವಂತಿಲ್ಲ. ಇದರ ಆರ್ಯ ಮೂಲವನ್ನು ಸೂಚಿಸುವ "ಗಂದುಮ್"—ಎಂಬ ಪದವು ಇರಾಣಿ ಭಾಷೆಯಲ್ಲೇನೋ ಇದೆ. ಆದರೆ, ಈ ಪದದ ವಿಕೃತಿಯು ದ್ರಾವಿಡ ಪ್ರಭಾವವಾಗಿಯೇ ಆಗಿದೆಯೆಂದು ಹೇಳಬೇಕು.* ಕನ್ನಡ 'ಗೋದಿ' ಈ ಪದದ ತೀರ ಸಮೀಪದ್ದು. ಇದರಂತೆಯೇ, ಸಂಸ್ಕೃತದಲ್ಲಿ 'ಬೀಸಣಿಕೆ' ಎನ್ನುವ ಅರ್ಥದಲ್ಲಿರುವ "ವೀಜನ" ಮತ್ತು "ವ್ಯಜನ" ಎಂಬ ಎರಡು ರೂಪಗಳ ಕಾರಣವೆಂದರೆ ದ್ರಾವಿಡ ಭಾಷೆಗಳಲ್ಲಿರುವ (ಕ–ಬೀಸು; ತ–ವೀಚು; ತೆ–ವೀಚು-ವೀಸರು) ಪದಗಳೇ.

ಸಂಸ್ಕೃತದಲ್ಲಿರುವ ದ್ರಾವಿಡ ಪದಗಳ ಉದಾಹರಣೆಯಾಗಿ ಪ್ರೊ. ಬ್ಲಾಕ್ ಅವರು ಈ ಕೆಳಗಿನ ಶಬ್ದಗಳನ್ನೂ ಹೇಳುತ್ತಾರೆ.—

ಮಯೂರ; ಫಲ; ಮತ್ತು ಮುಖ.

ಇದರಲ್ಲಿ 'ಮುಖ' (ಸಂಸ್ಕೃತದ 'ಕಮಲಮುಖ' 'ಚಂದ್ರಮುಖ'—ಮೊದಲಾದ ಪ್ರಯೋಗಗಳು ತೀರ ಪರಿಚಿತ) ಶಬ್ದದ ಬಗ್ಗೆ ಹಲವು ಮಾತುಗಳನ್ನು ನೋಡೋಣ.

'ಮುಖ' ಶಬ್ದದ ಪರ್ಯಾಯ ಪದವಾಗಿ ವೇದದಲ್ಲಿ ಬರುವ 'ಆಸ್'–'ಆಸನ್'–'ಆಸ್ಯ' ಶಬ್ದವು ವಾಯವ್ಯ ಘಟ್ಟಗಳಲ್ಲಿಯ ಗುಡ್ಡಗಾಡು ಜನರನ್ನು ಬಿಟ್ಟರೆ, ಇತರತ್ರ ಎಲ್ಲಿಯೂ ಕಂಡುಬರುವದಿಲ್ಲ. ಋಗ್ವೇದ ಕಾಲದಲ್ಲಿಯೇ, ಇದರ ಜೊತೆಗೇ 'ಪ್ರತಿ ಆನಮ್' ಮತ್ತು 'ಮುಖ'—ಎಂಬ ಎರಡೂ ಪದಗಳ ಪ್ರಯೋಗವಿದೆ. ಋಗ್ವೇದದಲ್ಲಿ 'ಮುಖ' ಪದವು ಒಂದು ಮಂಡಲದ ಕರ್ತೃವಿನ ಬಗ್ಗೆಯೂ, (IV 39.6); VIII 43.10ರಲ್ಲಿ ಅಗ್ನಿಯ ಬಗ್ಗೆಯೂ; X 90.11ರಲ್ಲಿ ಪುರುಷನ ಬಗ್ಗೆಯೂ ಪ್ರಯುಕ್ತವಾಗಿದೆ. VI 75.15ರಲ್ಲಿ 'ಮುಖ' ಪದವು 'ಬಾಣದ ತುದಿ' ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. I 162.3ರಲ್ಲಿ "ಮುಖತಃ" ಎಂಬ ಪದವು "ಕಡಿವಾಣದಿಂದ" ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಅಂದರೆ, "ಮುಖ" ಪದವು "ಕುದುರೆಯ ಮುಖ" ಎಂಬರ್ಥದಲ್ಲಿ ಪ್ರಯುಕ್ತವಾಗುತ್ತಿತ್ತೆಂದು ಇದರಿಂದ ಸ್ಪಷ್ಟ.

ಹಾಗಾದರೆ, ಈ ಪದದ ವ್ಯುತ್ಪತ್ತಿಯೇನು?

ಪ್ರೊ. ಜೂಲ್ಸ್ ಬ್ಲಾಕ್ ಅವರ ಪ್ರಕಾರ ಈ ಪದವು ದ್ರಾವಿಡ 'ಮೂ' ಮೂಲವರ್ಣದಿಂದ ಬಂದುದು. ದ್ರಾವಿಡ ಭಾಷೆಗಳಲ್ಲೆಲ್ಲ "ಪುರೋಭಾಗ"—ಎಂದು ಹೇಳುವ ವರ್ಣಗಳಲ್ಲಿ ಈ 'ಮೂ'

* "Can not the deformation undergone by the word in India, be explained by the presence of a word with the same meaning in Dravidian, Can. ಗೋದಿ; Tam. ಕೋದಿ; ತೋದ....ಕೋದ್ಜ?" (P. A. & P. D. 53).

ವರ್ಣವು ಸಾಮಾನ್ಯವಾಗಿ ಇದ್ದುದನ್ನು ಕಾಣಬಹುದು. ಉದಾ: ಮೂ–ಗು; ಮುಂ–ದು; ಮೂ–ಲೆ; ಮುಂ–ಚೆ; ಮು-ದಲು; ಮು–ದ್ದಲು;—ಇತ್ಯಾದಿ.

ಈ ಬಗ್ಗೆ ಪ್ರೊ. ಬ್ಲಾಃಕ್ ಅವರು ಬರೆಯುವದೇನಂದರೆ—

"One will, therefore, be inclined to accept with slight modification, the identification already proposed by Dr. Gundert and Kittel of ಮುಖ— with the Dravidian words for nose. Can ಮೂಗು; along with ಮು; ತೆ—ಮುಃಕ್ಕು; ತ—ಮುಃಕ್ಕು;—ಕುಯ್—ಮುಂಗೇಲಿ—' * ಪುನಃ "....the probabilities would stand for ಮುಖ being a loan-word from Dravidian."†

ಇದರಂತೆ, ಆರ್ಯವರ್ಗದ ಮರಾಠಿಯಲ್ಲಿ ಕಂಡುಬರುವ "ತೋಂಡ" ಶಬ್ದವೂ ಕೂಡ (ಗುಜರಾಥಿ–ಬೆಂಗಾಲಿ–ತುಣ್ಡ–ಇತ್ಯಾದಿ) ದ್ರಾವಿಡ ಶಬ್ದವೇ. ಪಾಲಿ ಮತ್ತು ಸಂಸ್ಕೃತಗಳಲ್ಲಿ 'ತುಣ್ಡ' ಪದವು 'ಸೊಂಡಿಲು' ಎನ್ನುವ ಅರ್ಥದಲ್ಲಿ ಪ್ರಯುಕ್ತವಾಗಿದೆ. —ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ–ಇತ್ಯಾದಿ— ಪ್ರೊ. ಜೂಲ್ಸ್ ಬ್ಲಾಃಕ್ ಅವರ ಪ್ರಕಾರ—'It is evidently the same as Tam. ತುಣ್ಡಿ; (beak); Gondi ತುಡ್ಡಿ; (mouth, face.)" ‡

ಕೋಶದ ದೃಷ್ಟಿಯಿಂದ ದ್ರಾವಿಡ ಭಾಷಾವರ್ಗವು ಈ ಮೇಲಿನ ಪದಗಳನ್ನು ಸಂಸ್ಕೃತ ಭಾಷೆಗೆ ಸಲ್ಲಿಸಿದ್ದರೆ, ವ್ಯಾಕರಣ ದೃಷ್ಟಿಯಿಂದಲೂ ಪ್ರಭಾವವನ್ನು ಮಾಡದೆ ಇಲ್ಲ. ವೇದಕಾಲದಲ್ಲಿ ದೊರಕದ ಅನೇಕ ರೂಪಗಳು ಎಷ್ಟೋ ಸಲ ದ್ರಾವಿಡ ಪ್ರಭಾವದ ಮೂಲಕವಾಗಿಯೇ ಸಂಸ್ಕೃತದಲ್ಲಿ ಕಾಣುತ್ತವೆ.

ವರ್ಣಮಾಲೆಯ ದೃಷ್ಟಿಯಿಂದ, ದ್ರಾವಿಡದ ಜೀವಾಳವಾಗಿದ್ದು, ಸಂಸ್ಕೃತೇತರ ಆರ್ಯವರ್ಗದಲ್ಲಿ ಕಾಣದ ಈ ಕೆಳಗಿನ ಅಂಶಗಳ. ದ್ರಾವಿಡ ಪ್ರಭಾವವೆಂದೇ ಹೇಳಬೇಕು.

(i) ಉಳಿದ ಆರ್ಯ ಭಾಷೆಗಳಲ್ಲಿ 'ರ' ಇದ್ದಾಗ ಸಂಸ್ಕೃತವು ಉಪಯೋಗಿಸುತ್ತಿರುವ 'ಲ' ವರ್ಣ.

(ii) ಸಮಾಸಗಳಲ್ಲಿ ವರ್ಗ ಪ್ರಥಮ ವರ್ಣದ ಬದಲು ಮೃದುವಾದ ತೃತೀಯ ವರ್ಣಗಳು ಬರುವುದು.

(iii) ಚ 7 ಸ; ಮತ್ತು ಸ 7 ಹ ಮಾರ್ಪಾಡು.

೨. ಎರಡನೆಯದಾಗಿ, ಕನ್ನಡದ ಕ್ರಿಯಾಪದಗಳ ರೀತಿ. 'ಕನ್ನಡದಲ್ಲಿ ನ್ಯಾಯವಾಗಿ ಕ್ರಿಯಾ-ಪದಗಳೇ ಇಲ್ಲ.' ಅಂದರೆ, ಕನ್ನಡದ ಕ್ರಿಯಾರೂಪಗಳೆಲ್ಲ ಗುಣವಚನಗಳೇ ಆದುದನ್ನು ನಾವು ಕಾಣುತ್ತೇವೆ. ಆದರೆ, ಆರ್ಯವರ್ಗದ ಭಾಷೆಗಳಲ್ಲಿ ಮಾತ್ರ ಸಂಪೂರ್ಣ ಕ್ರಿಯಾರೂಪಗಳೇ ಇದ್ದುದನ್ನು ಕಾಣುತ್ತೇವೆ. ಇಂಗ್ಲಿಷದಲ್ಲಿ 'He goes' ಎಂದು ಆಗುತ್ತದೆಯೇ ಹೊರತು 'He having gone is' ಎಂದು ಗುಣ ಅಥವಾ ಸ್ಥಿತಿಯನ್ನು ಹೇಳುವದಿಲ್ಲ. ಅದೇ ಕನ್ನಡದಲ್ಲಿ 'ಅವನು ಪೋದಪನ್=ಪೋಗಿ ಇರ್ಪನ್'—ಎಂದು. ಆಗುತ್ತದೆ. ಹೀಗೆ, ಗುಣವಾಚಕಗಳ ರೀತಿಯಲ್ಲಿ ಕ್ರಿಯೆಯನ್ನು ಸೂಚಿಸುವುದು ದ್ರಾವಿಡವು ಸಂಸ್ಕೃತದ


* P. A. & P. D. 56. † ಅದೇ ಪುಟ 56.

‡ ಕಾಶ್ಮೀರಿಯಲ್ಲಿ 'ಮೂಃಕ್' ಅಂದರೆ 'ಮೊಂಡ ಸರಾಟು ಮೂಗು'.

ಮೇಲೆ ಮಾಡಿದ ಪ್ರಭಾವ. ಯಾಕಂದರೆ, ವೇದಕಾಲದ ಸಂಸ್ಕೃತದಲ್ಲಿ 'ಅವನು ಹೋದನು' ಎಂದು ಹೇಳಬೇಕಾದರೆ 'ಸೊ ಗಮತ್' 'ಸೊ ಗಚ್ಛತ್' 'ಜಗಾಮ'—ಎಂದು ಮೊದಲಾಗಿ ಬರುತ್ತದೆಯೇ ಹೊರತು, 'ಸಃ ಗತಃ'—ಎಂದು ಬರುವದಿಲ್ಲ. ಇದು ದ್ರಾವಿಡದ ರೀತಿ. ಕೆ. ರಾಮಕೃಷ್ಣಯ್ಯ ಅವರು ಹೇಳುವಂತೆ "For Dravidian, the verb has an adjectival force, *it being really a noun of agency with reference to the subject.*" ಇದರಂತೆಯೇ, ಭವಿಷ್ಯರೂಪದ 'ಕರಿಷ್ಯಾಮಿ'ಯ ಬದಲಾಗಿ 'ಕರ್ತಾಸ್ಮಿ' ಮೊದಲಾದುವನ್ನೂ ನೋಡುವುದು.

೩. ಕೆ. ರಾಮಕೃಷ್ಣಯ್ಯನವರ ಪ್ರಕಾರ ವೇದಕಾಲದ ಬರವಣಿಗೆಯಲ್ಲಿ ಬರುವ 'ತಾ-ವಂತ' ಎಂಬ ಜೋಡು ಪ್ರತ್ಯಯಗಳೂ ಕೂಡ ದ್ರಾವಿಡದ 'ದ ವನ್'ದ ದಾರಿಯನ್ನೇ ತೋರಿಸುತ್ತವೆ. ಸಂ ಕೃ—**ಕೃತವಂತ;** ತ-ಸೆಯ್-ಸೆಯ್ದ**ವನ್;** ಕ-ಗೆಯ್-ಗೆಯ್ದ**ವನ್**—ನೋಡುವುದು.

ಸಾರಾಂಶವೇನೆಂದರೆ ತೀರ ಪ್ರಾಚೀನ ಕಾಲದಿಂದಲೂ ತೀರ ಪ್ರಬಲವಾದ ಸಾಂಸ್ಕೃತಿಕ ಘಟಕವಾಗಿದ್ದ ದ್ರಾವಿಡರು ಆರ್ಯರ ಮೇಲೆ ಪ್ರಭಾವವನ್ನು ಮಾಡುವುದು ಅನಿವಾರ್ಯವಾಯಿತು. ತತ್ಪರಿಣಾಮವಾಗಿ, ಆರ್ಯರ ಸಾಂಸ್ಕೃತಿಕ ರೀತಿಗಳೂ, ಧಾರ್ಮಿಕ ಕಲ್ಪನೆಗಳೂ ಮಾರ್ಪಾಡು ಹೊಂದಿದವಲ್ಲದೆ, ಭಾಷಾದೃಷ್ಟಿಯಿಂದ 'ಪ್ರಾಕೃತಗಳು' ಪ್ರಾರಂಭವಾಗಿ, ಸಂಸ್ಕೃತ ಕೋಶವೂ ಕೂಡ ಅನೇಕ ದ್ರಾವಿಡ ಪದಗಳನ್ನು ಸ್ವೀಕರಿಸಿತು. ಇಷ್ಟು ಪ್ರಬಲವಾದ ಪ್ರಭಾವವು ಸ್ವಾಭಾವಿಕವಾಗಿಯೇ ವ್ಯಾಕರಣ ಪ್ರಕ್ರಿಯೆಗಳ ಮೇಲೆಯೂ ಪರಿಣಾಮವನ್ನು ಮಾಡದೆ ಹೋಗಲಿಲ್ಲ. ಸಂಸ್ಕೃತರ ಮೇಲಾದ ಈ ದ್ರಾವಿಡ ಪ್ರಭಾವವನ್ನು ರೇಖಾರೂಪವಾಗಿ ನಾವು ಈ ರೀತಿ ಕಾಣಿಸಬಹುದು.



ಪ್ರಾಕೃತಗಳಲ್ಲಿ ಕಂಡುಬರುವ ದೇಶ್ಯ ಪದಗಳು

ಕನ್ನಡದ ಪ್ರಭಾವ:—ಸ್ವತಃ ಪ್ರಾಕೃತ ಭಾಷೆಗಳ ಉಗಮವು ದ್ರಾವಿಡ ಭಾಷೆಗಳಿಂದಲೇ ಯಾವ ರೀತಿ ಆಯಿತೆಂಬುದನ್ನು ಈ ಮೊದಲೇ ವಿವರಿಸಿದ್ದೇವೆ. ಆದರೆ, ಈ ಪ್ರಕ್ರಿಯೆಯು ದಕ್ಷಿಣ ಹಿಂದುಸ್ಥಾನದ ನೆಲದ ಮೇಲೆಯೇ ನಡೆಯಿತೆಂದು ಹೇಳಲಿಕ್ಕಾಗದು. ಮಾಗಧಿ, ಶೌರಸೇನಿ—ಮೊದಲಾದವುಗಳೇ ಈ ಸಂಕ್ರಮಣ ಕಾಲವನ್ನು ಸೂಚಿಸುತ್ತಿವೆ. ಆದ್ದರಿಂದ ಸ್ವಾಭಾವಿಕವಾಗಿಯೇ ಈ ದೇಶ್ಯಜನರ ಪದಗಳು ಕೂಡ ಪ್ರಾಕೃತಗಳಲ್ಲಿ ಸೇರಿರುವುದು ಕ್ರಮಪ್ರಾಪ್ತವಾಗಿದೆ. ಹೇಮಚಂದ್ರನು ತನ್ನ ದೇಶಿನಾಮಮಾಲೆಯನ್ನು ಹೇಳಿದನು.

ಆದರೆ, ಪ್ರಸ್ತುತ ಈ ಪ್ರಾಕೃತಭಾಷೆಗಳಲ್ಲಿ ಸೇರಿದ **ಕನ್ನಡ** ಶಬ್ದಗಳಾವು ಎಂಬುದನ್ನು ನಾವು ಗಮನಿಸಬೇಕಾಗಿದೆ. ಪ್ರಾಕೃತ ಶಬ್ದಗಳನ್ನೆಲ್ಲ ತತ್ಸಮ, ತದ್ಭವ ಮತ್ತು ದೇಶ್ಯವೆಂದು- ಮೂರು ವಿಧವಾಗಿ ವಿಭಾಗಿಸುವ ಪರಂಪರೆಯಿದೆ. ಇವುಗಳಲ್ಲೂ ಕೂಡ ಪ್ರಾಕೃತ ವೈಯಾಕರಣಿಗಳು ಹೆಚ್ಚಾಗಿ ತದ್ಭವಗಳಿಗೇ ಪ್ರಾಶಸ್ತ್ಯವನ್ನು ಕೊಟ್ಟು, ಉಳಿದ ತತ್ಸಮಗಳನ್ನು-' ಶೇಷಮ್ ಸಂಸ್ಕೃತವತ್ ಸಿದ್ಧಮ್' (ಹೇಮಚಂದ್ರ) ಎಂದು ಹೇಳಿ ಮುಗಿಸಿದರು. ಆದರೆ, ಇಲ್ಲಿಯ ದೇಶ್ಯಶಬ್ದಗಳ ಗತಿಯೇನು? ಅವೂ ಕೂಡ ತುಂಬಾ ವಿಚಾರಣೀಯವಾಗಿವೆ. ಹೇಮಚಂದ್ರನು ತನ್ನ ದೇಶಿನಾಮಮಾಲೆಯಲ್ಲಿ ಈ ಶಬ್ದಗಳನ್ನು ಗ್ರಂಥಭಾಗದಲ್ಲೇ ಸೇರಿಸದೆ, ಬೇರೆಯಾಗಿ ಕೊಟ್ಟಿರುವನು. ಇಂಥ ದೇಶ್ಯ ಶಬ್ದಗಳಿಗೆ ಸಂಸ್ಕೃತದಲ್ಲಿ ಸ್ಥಾನವಿಲ್ಲದ್ದರಿಂದಲೂ, ಮತ್ತು ಪ್ರಾಂತಭೇದಗಳ ಮೂಲಕ ಇವು ಅನೇಕ ವಿಧವಾಗಿ ಇದ್ದುದರಿಂದಲೂ ಹೇಮಚಂದ್ರನು ಅಷ್ಟು ವಿವರವಾಗಿ ಇವುಗಳ ವಿಚಾರವನ್ನು ಮಾಡಲಿಲ್ಲ ಈ ಪ್ರಾಕೃತ ಶಬ್ದಗಳ ಅರ್ಥದ ಬಗ್ಗೆ ಧನಪಾಲನು ತನ್ನ 'ಪಾಇಯಲಚ್ಛಿ ನಾಮಮಾಲೆ'ಯಲ್ಲಿ (ಪ್ರಾಕೃತ ಕೋಶ) ಬರೆಯುವದೇನೆಂದರೆ:—

"ಕವ್ವೇಸು ಜೆ ರಸಡ್ಢಾ ಸದ್ದಾ ಬಹುಸೋ ಕಈಹಿ ಬಜ್ಜಂತಿ |
ತೆ ಇತ್ಥ ಮಎ ಯಾ ರಮಂತು ಹಿಯಎ ಸಹಿಯಯಾಣಮ್ ||

ಹೇಮಚಂದ್ರನ ನಾಮಮಾಲೆಯಲ್ಲಿಯ ಮರಾಠಿ ಅಂಶವನ್ನು ಡಾ. ಪಿ. ಎಲ್. ವೈದ್ಯ ಅವರು ಎತ್ತಿತೋರಿಸಿದರು. ಪಂಡಿತ ತೋಡರಮಲ್ಲ ಅವರು ಈ ದೇಶ್ಯ ಶಬ್ದಗಳಲ್ಲಿ ನೂರರಷ್ಟು ಶಬ್ದಗಳು ಪಂಜಾಬಿಯವೆಂದು ಹೇಳಿದರಂತೆ. ಆದರೆ, ಕನ್ನಡ ದೃಷ್ಟಿಯಿಂದ ನೋಡಿದರೆ ಕನ್ನಡ ಮತ್ತು ಪ್ರಾಕೃತಗಳು ಮೊದಲಿನಿಂದಲೂ ತೀರ **ನಿಕಟವಾದ ಸಂಬಂಧವುಳ್ಳವಾಗಿವೆ.**

ಪ್ರಾಕೃತವನ್ನು ರಾಜಭಾಷೆಯನ್ನಾಗಿಟ್ಟುಕೊಂಡ ಶಾತವಾಹನರು ಕ್ರಿ. ಪೂ. ೧ರಿಂದ, ಕ್ರಿ. ಶ. ೧ರ ವರೆಗೆ ಇಂದಿನ ಕನ್ನಡನಾಡಿನ ಬಹುಭಾಗವನ್ನು ಆಳಿದರು. ಚಂದ್ರವಳ್ಳಿ, ಬ್ರಹ್ಮಗಿರಿ, ಮತ್ತು ಬ್ರಹ್ಮಪುರಿ–ಮೊದಲಾದ ಉತ್ಖನನಗಳಲ್ಲಿ ಕಂಡುಬರುತ್ತಿರುವ ಅನೇಕ ಶಾತವಾಹನ ನಾಣ್ಯಗಳೇ ಇದಕ್ಕೆ ದೃಷ್ಟಾಂತವಾಗಿವೆ. ಪ್ರಾಕೃತಮರ್ಯಾದೆಯನ್ನೊಪ್ಪಿದ ಜೈನಮತವು ತೀರ ಪ್ರಚಲಿತವಾಗಿ ಇದ್ದದ್ದು ಗುಜರಾಥ ಮತ್ತು ಕರ್ನಾಟಕಗಳಲ್ಲಿ ಮಾತ್ರ. ಸುಪ್ರಸಿದ್ಧವಾದ ಕನ್ನಡದ ಶ್ರವಣಬೆಳ್ಗೊಳ, ಕಾರ್ಕಳಾದಿಗಳು ಇಂದಿಗೂ ಈ ಜೈನರ ಯಾತ್ರಾಸ್ಥಳಗಳು. ಕ್ರಿ. ಶ ೧ರಲ್ಲಿದ್ದ ಕೊಂಡಕುಂದಾಚಾರ್ಯರು ಪ್ರಾಕೃತ ಮತ್ತು ತಮಿಳಿನಲ್ಲಿ ಗ್ರಂಥಗಳನ್ನು ಬರೆದಿದ್ದರೆ, ಅನೇಕ ಅಚ್ಚಗನ್ನಡ ಕವಿಗಳು ಕನ್ನಡ ಮತ್ತು ಪ್ರಾಕೃತಗಳನ್ನು ಪೋಷಿಸಿದರು. ಕನ್ನಡ ಮಾತೃಭಾಷೆಯುಳ್ಳ ನೇಮಿಚಂದ್ರ, ದೇವಸೇನ—ಮೊದಲಾದ ಕವಿಗಳು ಅನೇಕ ಶೌರಸೇನಿ ಪ್ರಾಕೃತಗ್ರಂಥಗಳನ್ನು ರಚಿಸಿದರು. ವೆಗ್ಗಳವಾಗಿ ಅಪಭ್ರಂಶ ಗ್ರಂಥಗಳನ್ನು ಬರೆದ ಪುಷ್ಪದಂತನು ತನ್ನ ಅಪಭ್ರಂಶ ಮಹಾಪುರಾಣವನ್ನು ಕರ್ನಾಟಕದೊಳಗಿನ ಮಾನ್ಯಖೇಟ (ಮಳಖೇಡ) ದಲ್ಲಿ ಬರೆದನು. ಸುಪ್ರಸಿದ್ಧ ಪ್ರಾಕೃತ ವೈಯಾಕರಣಿಯಾದ ತ್ರಿವಿಕ್ರಮನು ಕನ್ನಡಿಗನು. ಕರ್ನಾಟಕದಲ್ಲಿ ಹೆಸರುವಾಸಿಯಾದ ನಂದಿಸಂಘದ ಅರ್ಹಣಂದಿಯು ಇವನ ಗುರುವು. ಆದ್ದರಿಂದ, ಸ್ವಾಭಾವಿಕವಾಗಿಯೇ, ಅನೇಕ ಕನ್ನಡ ಶಬ್ದಗಳು ಪ್ರಾಕೃತ ಕೋಶದಲ್ಲಿ ಸೇರಿಕೊಂಡಿದ್ದರೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಸುಪ್ರಸಿದ್ಧ ವಿದ್ವಾಂಸರಾದ ಡಾ. ಆ. ನೆ. ಉಪಾಧ್ಯೆ ಅವರು ತಮ್ಮ ಒಂದು ಲೇಖದಲ್ಲಿ ಪ್ರಾಕೃತಗಳಲ್ಲಿರುವ ಕನ್ನಡ ಶಬ್ದಗಳ ಬಗ್ಗೆ ಸುಂದರವಾಗಿ ವಿವೇಚಿಸಿದ್ದಾರೆ. ಅವರು ತೋರಿಸಿದ ಹಲವು ಶಬ್ದಗಳನ್ನು ಇಂದು ನಾವು **ಕೇವಲ** ಕನ್ನಡವೆಂದು ಒಪ್ಪಲು ಸಾಧ್ಯವಿಲ್ಲದಿದ್ದರೂ, ಅವರ ಲೇಖನದ ಮೂರುನಾಲ್ಕಾಂಶ ಭಾಗವನ್ನು ನಾವು ಒಪ್ಪಲೇಬೇಕು.

ಹಾಗಾದರೆ, ಮೊದಲು ನಾವು ಇಂದು ಕನ್ನಡ ಮೂಲವೆಂದು ಒಪ್ಪಲಾಗದ ಒಂದೆರಡು ಶಬ್ದಗಳನ್ನು ನೋಡಿ, ಆನಂತರ ಉಳಿದ ಕನ್ನಡ ಶಬ್ದಗಳನ್ನು ನೋಡೋಣ.

ಡಾ. ಉಪಾಧ್ಯೆಯವರ ಪ್ರಕಾರ '**ಅಪ್ಪೊ**', (ಪಿತಾ. ದೇ. ನಾ. ಮಾ. ೬); '**ಕಾರ**'–'ಕಾರಂ-ಕಟು' **ಕೊಂಡಿಓ; ಉಡ್ಡಣೋ** (ದೀಹ); **ತುಪ್ಪೋ** (ಸ್ನಿಗ್ಧ);—ಇತ್ಯಾದಿ ಶಬ್ದಗಳು ಕನ್ನಡದಿಂದ ಪ್ರಾಕೃತಕ್ಕೆ ಹೋದವೆಂದು ಅಭಿಪ್ರಾಯ *

ಆದರೆ, ನಿಜವಾಗಿ 'ಅಪ್ಪೊ' ಶಬ್ದವು ಕನ್ನಡ ಅಪ್ಪದಿಂದ ಪ್ರಾಕೃತಕ್ಕೆ ಹೋಯಿತೇ—? ವಿಚಾರ ಮಾಡಬೇಕು.

ಈ 'ಅಪ್ಪೊ' ಶಬ್ದದ ಬಗ್ಗೆ ಸಾಕಷ್ಟು ಚರ್ಚೆಯಿದೆ.

ಈ ಶಬ್ದವು ಹಲವರ ಪ್ರಕಾರ ಸಂಸ್ಕೃತ 'ಆತ್ಮಜ'ದಿಂದ ಬಂದಿತು. ಕನ್ನಡವಲ್ಲಿ ಮಗನಿಗೂ ಅಪ್ಪಯ್ಯನೆಂದು ಹೇಳುವದಿಲ್ಲವೇ? ಆ ರೀತಿ ಸಂ. ಆತ್ಮಜ 7 ಕ. ಅಪ್ಪಯ್ಯ=ತನ್ನಿಂದ ಅಂದರೆ ತಂದೆಯಿಂದ ಹುಟ್ಟಿದವನು 7 =ಅಪ್ಪ=ತಂದೆ—ಎಂದು ಈ ಪಂಡಿತರ ಅಭಿಪ್ರಾಯ.

ಆದರೆ, ಈ ಶಬ್ದವು ಕೇವಲ ಸಂಸ್ಕೃತ ದ್ರಾವಿಡಗಳಲ್ಲಿ ಮಾತ್ರವಲ್ಲದೆ, ಪ್ರಪಂಚದ ಇನ್ನೂ ಅನೇಕ ಇತರ ಭಾಷೆಗಳಲ್ಲಿ ಒಂದಿಲ್ಲ ಒಂದು ರೀತಿಯಲ್ಲಿ ಕಂಡುಬರುತ್ತದೆ.

ಸಂಸ್ಕೃತಜನ್ಯ ಮರಾಠಿಯಲ್ಲಿಯ 'ಅಪ್ಪಾ' 'ಅಬಾ'—ಪದಗಳು ಈ ಮೂಲದಿಂದಲೇ ಸಾಧಿಸಲ್ಪಟ್ಟವು. '**ಭೂತಿಯಾ**' ಉಪಭಾಷೆಯಲ್ಲೂ ತಂದೆಗೆ 'ಅಪ್ಪ' ಎಂದೂ, ಸಿಂಹಳಿಯಲ್ಲೂ 'ಅಪ್ಪ' ಎಂದೂ, ಭೋಟಿಯಾ ಭಾಷೆಯಲ್ಲೂ 'ಅಬಾ' ಎಂದೂ ಇವೆ. ಅಷ್ಟೇ ಅಲ್ಲ; ಇಂಗ್ಲಿಷ ಲ್ಯಾಟಿನ್‌ಗಳಲ್ಲಿ ಕೂಡ 'ಪಾ' 'Pater'—ಎಂದು 'ಪ' ವರ್ಣಯುಕ್ತ ಪದಗಳೇ ಇವೆಯೆಂಬುದನ್ನು ಗಮನಿಸಬೇಕು. ಹೀಗಾಗಿ, ಈ ಪದವು ಬೇರೆ ಬೇರೆ ಭಾಷಾವರ್ಗಕ್ಕೆ ಸೇರಿದ ಅನೇಕ ಭಾಷೆಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಸಿಗುತ್ತಿದ್ದರೆ, ಇದನ್ನು ಸಾಮಾನ್ಯ ಜಾನಾಂಗಿಕಪದವೆಂದು ಯಾಕೆ ಗ್ರಹಿಸಲಾಗದು? (Ethno-psychological feature).

ಡಾಕ್ಟರ್ ಯೆಸ್ಪರ್ಸನ್ ಅವರ ಪ್ರಕಾರ, 'ಪ' 'ಮ' ವರ್ಣಗಳು ಮಗುವು ಕಲಿಯುವ ಮೊಟ್ಟಮೊದಲಿನ ಪದಗಳು. ಶ್ರೀ. ಸಂಕರನ್ ಅವರೂ ಇದೇ ಅಭಿಪ್ರಾಯವನ್ನೇ ಅನುಮೋದಿಸುತ್ತಾರೆ. ಆದ್ದರಿಂದ ಈ ಪದಗಳು ಕನ್ನಡದಿಂದ ಪ್ರಾಕೃತಕ್ಕೆ ಹೋದವೆಂದು ಹೇಳುವುದಕ್ಕಿಂತ, ಒಂದು 'ಸಾಮಾನ್ಯ ಜಾನಾಂಗಿಕ' ಪದವೆಂದು ಹೇಳುವುದು ಹೆಚ್ಚು ಸೂಕ್ತವಾಗಿದೆ. ಡಾ. ಯೆಸ್ಪರ್ಸನ್ ಅವರ ಪ್ರಕಾರ — "All are agreed, however, that among the consonants the labials, P, B, and M are 'early sounds, if not the earlist."† ಆದ್ದರಿಂದ, ಈ ಪದವು ಸಂಸ್ಕೃತದಲ್ಲಿದ್ದಾಗ ಒಂದರ್ಥವುಳ್ಳದ್ದಾಗಿತ್ತೆಂದೂ, ಕನ್ನಡ ತದ್ಭವವಾದಾಗ 'ಅಪ್ಪ'ನ ಅರ್ಥ ಕೊಡುವಂತಾಯಿತೆಂದೂ ಹೇಳುವದಕ್ಕಿಂತ, ನಾವು ಈ ಮೊದಲೇ ವಿವರಿಸಿದಂತೆ, ಈ ಪದವು ಸಾಮಾನ್ಯ ಜಾನಾಂಗಿಕ ಲಕ್ಷಣವೆಂದು ಹೇಳುವುದೇ ಹೆಚ್ಚು ಸೂಕ್ತವೆನಿಸುತ್ತದೆ.

* 'ದೇಶಿ ಕೋಶಗಳಲ್ಲಿನ ಕನ್ನಡ ಶಬ್ದಗಳು' — ಡಾ. ಆ. ನೇ. ಉಪಾಧ್ಯೆ.

† Language, P. 105.

ಇದರಂತೆಯೇ, 'ಉಡ್ಡಣೋ' ಶಬ್ದವು.—ಉಡ್ಡಣೋ—ದೀಹ— ಕನ್ನಡ 'ಉದ್ದ' ಶಬ್ದವು ಊರ್ಧ್ವದಿಂದ ಬಂದಂತೆ (ಶ ನು. ದರ್ಪಣದಂತೆ ಉಚ್ಚದಿಂದಲ್ಲ.) ಇದೂ ಕೂಡ ಸಂಸ್ಕೃತದಿಂದಲೇ ಬಂದುದು

ಕಾರ —'ಕಾರಂ–ಕಟು'- ಇದು ಸ್ಪಷ್ಟವಾಗಿ ಸಂಸ್ಕೃತ ಕ್ಷಾರದಿಂದ ಬಂದುದು. ಡಾ. ಉಪಾಧ್ಯೆಯವರು ಕೂಡ ಈ ಮಾತನ್ನು ಒಪ್ಪುತ್ತಾರೆ;—'ಆದರೂ, ಸಂಸ್ಕೃತ ಕ್ಷಾರ ಶಬ್ದದಿಂದ ಇದರ ಉತ್ಪತ್ತಿಯಾಗಿರಬಹುದು.' (ಪು. ೭)

ಕುಂಡಿ ಓ ಕೊಂಡಿ ಓ – (ಗ್ರಾಮ ಭೋಕ್ತಾ)— ಈ ಬಗ್ಗೆ ಬರೆಯುವಾಗ ಡಾ. ಉಪಾಧ್ಯೆಯವರು ಇವು 'ಕನ್ನಡ ಗಾವುಂಡ, ಗೌಂಡ ಶಬ್ದಗಳನ್ನು ಹೋಲುವವು'— ಎಂದು ಸರಿಯಾಗಿಯೇ ಹೇಳುತ್ತಾರೆ ಈ ಪದದ ವಿಗ್ರಹವನ್ನು ಗ್ರಾಮ "ಉಣ್ಣುವವನು ಯಾವನೋ ಅವನು" ಗ್ರಾಮ+ಉಂಡ= ಗ್ರಾಮುಂಡ – ಎಂದು ಬಿಡಿಸಬೇಕು. ಪ್ರಾಚೀನ ಶಾಸನಗಳಲ್ಲೂ ಕೂಡ ಗಾವುಂಡ, ಗೌಂಡ, ದೇವಗೌಂಡ– ಎಂದು ಮೊದಲಾಗಿ ಬರುತ್ತದೆ.

ಕನ್ನಡ 'ತುಪ್ಪ' ಶಬ್ದದ ಸಮಾನಪದಗಳಾಗಿ ತಮಿಳಿನಲ್ಲಿ 'ತುಪ್ಪುಗ' 'ತುಪ್ಪು' ಎಂದಿದೆ. ಹಳಗನ್ನಡದಲ್ಲಿ ಈ ಪದವನ್ನು 'ಜಿಡ್ಡು' ಎನ್ನುವ ಅರ್ಥದಲ್ಲೂ ಉಪಯೋಗಿಸುತ್ತಾರೆ. 'ತುಪ್ಪೇರಿದ ದರ್ಪಣದೊಳ್ ಪಜ್ಜಳಿಪುದೇ ಪ್ರತಿಬಿಂಬಮ್' – ಇತ್ಯಾದಿ. ಇದೇ ಮುಂದು ಮರಾಠಿಯಲ್ಲಿ 'ತೂಪ'ವಾಯಿತೆಂದು ಅಭಿಪ್ರಾಯ. ಆದರೆ, ಹಲವು ಭಾಷಾಶಾಸ್ತ್ರಜ್ಞರ ಪ್ರಕಾರ ಈ ಪದವು ಮಾರ್ಗ್ಯ ಸಂಸ್ಕೃತದಲ್ಲಿ ಕಂಡು ಬರದಿದ್ದರೂ, ವೈದಿಕ ಸಾಹಿತ್ಯದಲ್ಲಿ ಇದ್ದಿತೆಂದು ಅಭಿಪ್ರಾಯ

ಆದರೆ ಮೇಲಿನ ಶಬ್ದಗಳ ಬಗ್ಗೆ ಭಿನ್ನಾಭಿಪ್ರಾಯವೇನೇ ಇರಲಿ; ಡಾ. ಉಪಾಧ್ಯೆಯವರು ಸೂಚಿಸಿದ ಉಳಿದ ಶಬ್ದಗಳೆಲ್ಲ ಕನ್ನಡದಿಂದಲೇ ಪ್ರಾಕೃತಕ್ಕೆ ಹೋದವುಗಳಾಗಿವೆ. ಇವುಗಳಲ್ಲಿ ಮುಖ್ಯವಾಗಿ ಈ ಕೆಳಗಿನ ಶಬ್ದಗಳನ್ನು ಹೇಳಬಹುದು. : – ಅಕ್ಕಾ; ಉಡು; ಉಮ್ಮಲ್ಲೊ (ಕ. ಉಮ್ಮಳ); ಉಲ್ಲೀ (ಚುಲ್ಲೀ ಉಲ್ಲೀ ಕನ್ನಡ ಒಲೆ ನೋಡುವುದು); ಊರೋ (ಕ. ಊರು); ಊಲೋ (ಕ. ಉರುಳು–ಗತಿಭಂಗ); ಎತ್ತೊಪ್ಪಮ್, ಇತ್ತೊಪಮ್ (ಕ. ಎಂತಪ್ಪ, ಇಂತಪ್ಪ); ಒಕ್ಕಿಅ (ಒಕ್ಕಿಅಂ ಉಷಿತಂ; ಕ. ಒಕ್ಕು); ಕಲೀ (ಶೂರ); ಕುರುಡ (ಇದು ಲಾಕ್ಷಣಿಕವಾಗಿ ಪ್ರಾಕೃತದಲ್ಲಿ 'ನಿರ್ದಯ' ಎಂಬರ್ಥದಲ್ಲಿ ಉಪಯೋಗಿಸಲ್ಪಡುತ್ತದೆ); ಕೂರ (ಕ. ಕೂಳು); ಕೊಟ್ಟ (ಕ. ಕೋಟೆ); ಕೋಣೋ (ಅಂದರೆ ಕೃಷ್ಣ ವರ್ಣಃ); ಕೋಲೋ — ಕುಲ್ಲ (ಕ. ಕೊರಳು, ಕೊಳ್ಳು); ಖಡ್ಡಂ (ಶ್ಮಶ್ರೂಃ ಕ. ಗಡ್ಡ—ಕಡ್ಡ); ಚಾಡೋ (ಕ ಚಾಡ, ಜೇಡಿ); ಚಿಕ್ಕ; ಣೇಸರೋ (ಕ. ನೇಸರ); ಣಂದೀ-(ಗೊ ವಾಚಕಃ–ಸ್ವರ್ಗದಲ್ಲಿಯ ಕಾಮಧೇನು.) ತ್ರಿವಿಕ್ರಮನು ಈ ಪದವನ್ನು ದೇಶಿ ಶಬ್ದಗಳ ಜೊತೆಗೆ ಸೇರಿಸುವನು. ಈ ನಂದಿಯು ದ್ರಾವಿಡರ ದೈವತವಾದ ಶಿವನ ವಾಹನ. "ಆದುದರಿಂದ ನಂದಿಯ ವಿಚಾರವೂ ದ್ರಾವಿಡವಾಗಿರಬಹುದು." "ಶಂಕರನಿಗೆ ಕನ್ನಡಿಗನೆಂಬ ಹೆಸರು ಇರುವುದೂ ಮನೋರಂಜಕವಾದ ಸಂಗತಿಯಾಗಿದೆ."

ಪಾವೋ :— ಸಂಸ್ಕೃತ ನಿರುಕ್ತಕಾರರು "ಪಾಪಃ ಏವ ಅಸೌ."—ಎಂದು ಯಾವ ರೀತಿ ವ್ಯುತ್ಪತ್ತಿಯನ್ನು ಹೇಳಲು ಹೆಣಗಿದರೆಂಬುದನ್ನು ಈ ಮೊದಲೇ ವಿವರಿಸಿದ್ದೇವೆ. ತ್ರಿವಿಕ್ರಮನು ಈ ಪದವನ್ನು ದೇಶ್ಯಕೋಶದಲ್ಲಿ ಸೇರಿಸಿದ್ದರೂ, ಇದರ ಮೂಲವನ್ನು ಮಾತ್ರ ಸಂಸ್ಕೃತದಲ್ಲೇ ಶೋಧಿಸಲಿಕ್ಕೆ ಯತ್ನಿಸಿದನು.

ಅವನ ಪ್ರಕಾರ ಪಾವು ಶಬ್ದವು "ಪ್ರಾಣಘಾತಕತ್ವಾತ್ಪಾಪಃ" ಆದರೆ, ದ್ರಾವಿಡ ಭಾಷೆಗಳಲ್ಲೆಲ್ಲ ದೊರೆಯುವ 'ಪಾಮ್ಬು' 'ಪಾಮು' ಮೊದಲಾದ ರೂಪಗಳ ಕಾರಣದಿಂದಲೂ, ಸಂಸ್ಕೃತದ ನಿರುಕ್ತವು ಹೆಚ್ಚು ಕಾಲ್ಪನಿಕವಾಗಿರುವುದರಿಂದಲೂ, ಮತ್ತು ದ್ರಾವಿಡ ಭಾಷೆಗಳಲ್ಲೆಲ್ಲ ಈ ಒಂದೇ ಪದವಿರುವ ಕಾರಣದ ಮೂಲಕವಾಗಿಯೂ, ಈ ಪದವು ದ್ರಾವಿಡವೆಂದೇ ಹೇಳಬೇಕು.

ಇದರಂತೆಯೇ, ಪಾಲೋ (ಜೀರ್ಣಃ-ಕ. ಪಾಳು); ಪುಲ್ಲೀ (ವ್ಯಾಘ್ರಃ-ಕ. ಹುಲಿ); ಪೊಚ್ಚಂ (ಸುಕುಮಾರ—ಕ. ಹೊಚ್ಚು ಹೊಸ); ಮಂಡೀ (ಕಟ್ಟಿಗೆಯ ಪಾತ್ರೆ; ಮುಚ್ಚಳ); ಮರುಲೋ (ಭೂತ ಪಿಶಾಚ—ಕ ಮರುಳು); ಮುದ್ದಿ (ಚುಂಬಿತ; ಕ ಮುದ್ದು -); ರೊಟ್ಟ (ತಂಡುಲಪಿಷ್ಟಂ—ಕ. ರೊಟ್ಟಿ); 'ಮಲೆಯಾಳ ಭಾಷೆಯಲ್ಲಿ ರೊಟ್ಟಿಯೆಂದರೆ ಅಕ್ಕಿಯ ಹಿಟ್ಟು ಸಕ್ಕರೆಯಿಂದ ಮಾಡಿದ ವಿಶಿಷ್ಟವಸ್ತುವು.' ವಿಲ್ಲಂ—(ಧವಲ - ಕನ್ನಡ ಬೆಳ್, ವೆಳ್ ಇ); ಸೂಲಾ (ವೇಶ್ಯಾ) ಕನ್ನಡ 'ಸೂಳೆ' ಶಬ್ದವನ್ನು ನೀಡುವುದು ಪ್ರೊ. ಕೃ. ಪಾ. ಕುಲಕರ್ಣಿ ಅವರ ಪ್ರಕಾರ ಮರಾಠಿಯ 'ಅಂಘೋಳ' (ಸ್ನಾನ) ಶಬ್ದವು ತೀರ ಪ್ರಾಚೀನ ಕಾಲದಲ್ಲಿ ಕನ್ನಡದಿಂದ ಅಪಭ್ರಂಶಕ್ಕೆ ಹೋಗಿ, ಅನಂತರ ಮರಾಠಿಗೆ ಹೋದುದು. ಅಂಘೋಳ ಅಂದರೆ ದೇಸಿನಾಮಮಾಲೆಯ ಪ್ರಕಾರ ಅಂಗ+ಹೋಳ=ಕತ್ತನ್ನು ಹೊರಳಿಸಿ ಭುಜದ ಮೇಲಿಂದ ಸ್ನಾನಮಾಡುವುದು. * ಹಾಗೆಯೇ ದೇಸಿನಾಮಮಾಲೆಯಲ್ಲಿಯ 'ಉಡಿದೋ'; ಮರಾಠಿ 'ಉಡೀದ'; ಕನ್ನಡ 'ಉರ್ದಿ'ನಿಂದ ಬಂದುದು

ಸಾರಾಂಶವೇನೆಂದರೆ— ಪ್ರಾಚೀನ ಕಾಲದಿಂದಲೂ ತೀರ ನಿಕಟವಾದ ಸಂಪರ್ಕವುಳ್ಳ ಕನ್ನಡ ಮತ್ತು ಪ್ರಾಕೃತ ಭಾಷೆಗಳು ಪರಸ್ಪರ ಪ್ರಭಾವಕ್ಕೊಳಗಾಗುವುದು ಅನಿವಾರ್ಯವಾಯಿತು ಆ ರೀತಿಯಾಗಿ, ಈ ಮೇಲೆ ವಿವರಿಸಿದ ಶಬ್ದಗಳೆಲ್ಲ ಕನ್ನಡದಿಂದ ಪ್ರಾಕೃತಕ್ಕೆ ಹೋದವುಗಳಾಗಿವೆ.

'ದ್ರಾವಿಡ' ಪದದ ವ್ಯುತ್ಪತ್ತಿ ಮತ್ತು ಪ್ರಾಚೀನತೆ

ದ್ರಾವಿಡ ಪದವು ಸಾಕಷ್ಟು ಪ್ರಾಚೀನವಾದುದು. ಈ ಪದದ ಉಲ್ಲೇಖವು ಮಹಾಭಾರತ, ಪರಾಶರ, ಮನುಸ್ಮೃತಿ ಮತ್ತು ಬೃಹತ್ಸಂಹಿತೆಗಳಲ್ಲಿ ಬರುತ್ತದೆ. ಏಳನೆಯ ಶತಮಾನದ ಕುಮಾರಿಲಭಟ್ಟನು ಆಂಧ್ರ-ದ್ರಾವಿಡ ಭಾಷೆಗಳ ಬಗ್ಗೆ ಹೇಳಿದರೆ, ಮನುಸ್ಮೃತಿಯು ಸಂಸ್ಕಾರ ನಷ್ಟವಾಗಿ 'ವೃಷಾಲ'ರಾಗಿದ್ದ ಪಂಗಡಗಳಲ್ಲಿ ದ್ರಾವಿಡರನ್ನು ಸೇರಿಸುತ್ತದೆ:— "ಸಂಸ್ಕಾರಹೀನತೆಯ ಮೂಲಕವೂ ಮತ್ತು ಬ್ರಾಹ್ಮಣರ ಸಂಪರ್ಕವಿರದ ಮೂಲಕವೂ ಈ ಕೆಳಗಿನ ಪಂಗಡಗಳು ವೃಷಾಲವಾದುವು—ಪೌಂಡ್ರಕ, ಓಡ್ರ, **ದ್ರಾವಿಡ**, ಕಾಂಬೋಜ, ಯವನ, ಶಕ, ಪಾರದ, ಪಾಹ್ಲವ, ಚೀನ, ಕಿರಾತ, ದರ್ದ ಮತ್ತು ಖಶ" X, 43-44. ಸತ್ಯವ್ರತನನ್ನು ಭಾಗವತ ಪುರಾಣದಲ್ಲಿ 'ದ್ರಾವಿಡ ಪ್ರಭು'ವೆಂದು ಸಂಬೋಧಿಸಲಾಗಿದೆ.

ಪೂರ್ವಕಾಲದಲ್ಲಿ ಈ ದ್ರಾವಿಡ ಪದವನ್ನು ದೇಶವಾಚಕವಾಗಿಯೂ, ಜಾತಿ-ಪಂಗಡವಾಚಕವಾಗಿಯೂ, ಅನಂತರ ಭಾಷಾ-ವಾಚಕವಾಗಿಯೂ ಮೂರು ವಿಧವಾಗಿ ಉಪಯೋಗಿಸಿದ್ದನ್ನು ಕಾಣುತ್ತೇವೆ.

* 'This shows that Kanarese loanwords were taken by the Prakrits, prior to the birth of Marathi,' R. S. M. K.

ದ್ರಾವಿಡ ಪದವು 'ದ್ರಮಿಳ' ಇಲ್ಲವೆ 'ದಮಿಳ' ಶಬ್ದದ ಸಂಸ್ಕೃತ ರೂಪವು. ಪಾಳಿ ಮಹಾವಂಶದಲ್ಲಿ ತಮಿಳರನ್ನು ದಮಿಳರೆಂದು ಕರೆಯಲಾಗಿದೆ.* ಬೃಹತ್ಸಂಹಿತೆಯಲ್ಲೂ ಬಹುಶಃ ದ್ರವಿಡ ಎಂದೇ ಇರಬೇಕು. ತಾರಾನಾಥನಲ್ಲಿ 'ದ್ರಮಿಳ' ಎಂದೇ ಬರುತ್ತದೆ. ವಿದೇಶೀಯರು ಡಾಮಿರಿಸ್, ಡ್ಯಾಮಿರಿಕಾ – ಎಂದು ಉಪಯೋಗಿಸಿದ್ದಾರೆ. ಬ್ರಹ್ಮಸೂತ್ರ ಭಾಷ್ಯಕಾರನೊಬ್ಬನು 'ದ್ರವಿಡ'ನಾಗಿದ್ದನು.

ಈ ದ್ರಾವಿಡ ಜನಾಂಗವು ಹಿಂದುಸ್ಥಾನವನ್ನು ಬಿಟ್ಟು ಇತರತ್ರ ಕಂಡುಬರುವದಿಲ್ಲ. ಹಲವರ ಪ್ರಕಾರ ಈ ದ್ರಾವಿಡರು ದಕ್ಷಿಣ ಹಿಂದುಸ್ಥಾನದ ಮೂಲನಿವಾಸಿಗಳು; ಆದರೆ, ಮತ್ತೆ ಹಲವರ ಪ್ರಕಾರ, ಒಂದು ಕಾಲಕ್ಕೆ ಹಿಂದೀ ಉಪಸಾಗರದಲ್ಲಿದ್ದು ಈಗ ಮುಳುಗಿ ಹೋದ 'ಲೆಮೂರಿಯಾ' ಎಂಬ ನಡುಗಡ್ಡೆಯಿಂದ ಇವರು ಬಂದವರು. ಇನ್ನೂ ಕೆಲವರು ಈ ದ್ರಾವಿಡರ ಮೂಲಪ್ರದೇಶವು 'ಏಶಿಯಾ ಮಾಯಿನರ್' ಪ್ರದೇಶವೆಂದೂ, ಇವರೂ ಕೂಡ ಆರ್ಯರ ಹಾಗೆ ವಾಯವ್ಯಮಾರ್ಗವಾಗಿ ಹಿಂದುಸ್ಥಾನದಲ್ಲಿ ಪ್ರವೇಶ ಮಾಡಿದರೆಂದೂ, ಅಂತಲೇ ಮೊಹೆಂಜೊದಾರೋ ಹರಪ್ಪ ಸಂಸ್ಕೃತಿಗಳಲ್ಲೂ, ಬೆಹಿಸ್ತನ್ ಲೇಖನಗಳಲ್ಲೂ ಈ ದ್ರಾವಿಡ ಅಂಶವನ್ನು ನಾವು ಕಾಣುತ್ತಿರುವದಾಗಿಯೂ ಹೇಳುತ್ತಾರೆ. ಇಂದು ದ್ರಾವಿಡ ಭಾಷೆಗಳನ್ನಾಡುವ ಜನರು ದಕ್ಷಿಣ ಹಿಂದುಸ್ಥಾನದ ತುಂಬೆಲ್ಲ ವ್ಯಾಪಿಸಿದ್ದಾರೆ.

ದ್ರಾವಿಡ ವರ್ಗದ ಭಾಷೆಗಳು ಅವುಗಳ ಸಂಕ್ಷಿಪ್ತ ಇತಿಹಾಸ:— ದ್ರಾವಿಡ ವರ್ಗದ ಭಾಷೆಗಳಲ್ಲಿ ಈ ಕೆಳಗಿನ ನಾಲ್ಕು ಭಾಷೆಗಳು ಪ್ರಮುಖವಾದವೂ ಉಳಿದವು ಉಪಭಾಷೆಗಳಾಗಿಯೂ ಇರುತ್ತವೆ. ಪ್ರಮುಖ ಭಾಷೆಗಳಲ್ಲಿ—ಕನ್ನಡ, ತಮಿಳು, ತೆಲುಗು, ಮಲಯಾಳಮ್ ಭಾಷೆಗಳನ್ನು, ಕ್ಷುಲ್ಲಕ ಭಾಷೆಗಳಲ್ಲಿ, ತುಳು, ಕೋಟ, ಬಡಗ, ಕೊಡಗು,—ಮೊದಲಾದವುಗಳನ್ನೂ ಹೇಳಬಹುದು. ಈ ಮೇಲಿನ ಉಪಭಾಷೆಗಳೂ ಹೆಚ್ಚು ಕನ್ನಡ ಭಾಷೆಯ ಸಮೀಪಕ್ಕೇ ಇರುತ್ತವೆ ಉತ್ತರ ಹಿಂದುಸ್ಥಾನದಲ್ಲಿರುವ ದ್ರಾವಿಡ ವರ್ಗದ ಉಪಭಾಷೆಗಳಲ್ಲಿ—ಓರಾಓನ್ ಅಥವಾ ಕುರುಖ್; ರಾಜಮಹಾಲಿ ಅಥವಾ ಮಾಲ್ಟೊ; ಖೋಂಡ್ ಅಥವಾ ಕುಯೀ; ಗೋಂಡಿ, ಬ್ರಾಹುಈ, ಕೋಲಾಮಿ, ನಾಯಿಕಿ ಮತ್ತು ಭಿಲ್ಲಿ ಭಾಷೆಗಳನ್ನು ಹೇಳಬಹುದು. ಕುಱುಂಬ, ಇರುಳ ಭಾಷೆಗಳು ದಕ್ಷಿಣ ದೇಶದವು.

ತಮಿಳು:—ದ್ರಾವಿಡ ವರ್ಗದ ಪ್ರಮುಖ ಭಾಷೆಗಳಲ್ಲೆಲ್ಲ ತಮಿಳ ಭಾಷೆಯೇ ತೀರ ಪ್ರಾಚೀನವೂ, ಹೆಚ್ಚು ವಿಪುಲವಾದ ಸಾಹಿತ್ಯವುಳ್ಳದೂ ಆಗಿದೆ. ತಮಿಳು ಪಂಡಿತರ ಪ್ರಕಾರ 'ತಮಿಳು' ಪದವು 'ಸವಿ' ಎನ್ನುವ ಅರ್ಥವನ್ನು ಕೊಡುತ್ತದೆಂದೂ, ಮತ್ತು ತಮ್ಮ ಭಾಷೆಯು ಸವಿಯಾಗಿರುವ ಮೂಲಕ ಈ ಹೆಸರು ಸರಿಯಾದ ಅನ್ವರ್ಥಕನಾಮವಾಗಿದೆಯೆಂದೂ ಅವರು ಹೇಳುತ್ತಾರೆ. ತಮಿಳು ಕೋಶಗಳಲ್ಲಿ ಈ ಪದದ ಅರ್ಥವನ್ನು ಸವಿ ಮತ್ತು ಕಾರುಣ್ಯ—ಎಂದು ಹೇಳುತ್ತಾರೆ. "ಇನಿಮೈಯುಮ್ ನೀರ್ಮೈಯುಮ್ ತಮಿೞ್ ಎನಲ್ ಆಗುಮ್"-(ಪಿಂಗಳಂದೈ). ಬಹುಶಃ ತಮಿಳು ಭಾಷೆಯಲ್ಲಿ 'ಹ' ವರ್ಣವು ಇಲ್ಲದ್ದರ ಮೂಲಕವೇ ಕನ್ನಡ ಮತ್ತು ತೆಲುಗರು ಈ ಭಾಷೆಯನ್ನು 'ಅ–ರವ' ಎಂದರೆ ಮಾಧುರ್ಯವಿಲ್ಲದ್ದು ಎಂದು ಕರೆದಿರಬೇಕು. ಕನ್ನಡ ಸರ್ವಜ್ಞಕವಿಯು ಹೇಳುವ—

ತಿಗುಳ ಜನಗೆಣೆಯಿಂದ ತಿಗುಣಿಯಾ ಕಡಿಲೇಸು—

ಎನ್ನುವಲ್ಲಿಯ ತಿಗುಳರೆಂದರೂ ಈ ತಮಿಳರೇ. ತಿಗುಳ ಎಂದರೆ 'ಒರಟು' 'ಹುಂಬ'—ಎಂಬರ್ಥ.

---

* H. K. L. P. 8

ಪರಂಪರೆಯ ಪ್ರಕಾರ ತಮಿಳು ಭಾಷೆಯ ಸಾಹಿತ್ಯವೆಲ್ಲ ಅಗಸ್ತ್ಯಋಷಿಯಿಂದಲೇ ಪ್ರಾರಂಭವಾಯಿತು. 'ಶಂಭುರಹಸ್ಯ'—ಎನ್ನುವ ಸಂಸ್ಕೃತ ಗ್ರಂಥದ ಪ್ರಕಾರ ಶಿವನ ಡಮರುವಿನ ಬಲಭಾಗದಿಂದ ಸಂಸ್ಕೃತವೂ, ಎಡಭಾಗದಿಂದ ತಮಿಳು ಭಾಷೆಯೂ ಹುಟ್ಟಿಕೊಂಡವು. ಸ್ವತಃ ಶಿವನೇ ಸಂಸ್ಕೃತವನ್ನು ಪಾಣಿನಿಗೂ, ತಮಿಳನ್ನು ಅಗಸ್ತ್ಯಋಷಿಗೂ ದಯಪಾಲಿಸಿದನು. ಅಂತಲೇ, ಆರ್ಷವಾದ ತಮಿಳು ಭಾಷೆಯು ಈ ಪಂಡಿತರ ಪ್ರಕಾರ ಅಪಭ್ರಂಶ ದೋಷಕ್ಕೆ ಗುರಿಯಾಗಲಾರದು 'ಶಂಭುರಹಸ್ಯ'ದಲ್ಲಿಯ ಶಿವನೇ ಹೇಳುವ ಹಾಗೆ—

ಮಾಮುದ್ದಿಶ್ಯ ತಪಶ್ಚಕ್ರೇ ಪುರಾಗಸ್ತ್ಯೋ ಮಹಾಮುನಿಃ
ಮಯಾ ಪ್ರದತ್ತವಿಜ್ಞಾನೋ ದ್ರಾವಿಡೀಂ ವ್ಯಾಕೃತಿಂ ವ್ಯಧಾತ್ ।
ನಾಪಭ್ರಂಶ ದೋಷೋಸ್ತಿ ದ್ರಾಮಿಡೀನಾಂ ಗಿರಾಂ ತತಃ
ಅನಾರ್ಷಂ ಆಂಧ್ರ ಕಾರ್ಣಾಟ ಗೌರ್ಜರಾದ್ಯಂ ಹಿ ಭಾಷಿತಂ ॥ *

ಆದರೆ, ಮತ್ತೆ ಕೆಲವರ ಪ್ರಕಾರ ಕಾಶಿಯ ಪಂಡಿತರ ಕೂಡ ನ್ಯಾಯವಾಡಿದ ಅಗಸ್ತ್ಯ ಮಹಾಮುನಿಯು 'ವಿಂಧ್ಯದ ಅನುಲ್ಲಂಘ್ಯ ಮಸ್ತಕವ ಮೆಟ್ಟಿ'—ದಕ್ಷಿಣಾಪಥಕ್ಕೆ ಬಂದು ತಮಿಳು ಭಾಷೆಯನ್ನು ಪ್ರಾರಂಭಿಸಿದನು. ಒಬ್ಬನೇ ವ್ಯಕ್ತಿ, — ಎಷ್ಟೇ ಮೇಧಾವಿಯಿರಲಿ; ಇಲ್ಲವೆ ಸಾಹಸಿಯಿರಲಿ — ಒಂದು ಭಾಷೆಯನ್ನು ನಿರ್ಮಿಸಲಾರನೆಂಬುದನ್ನು ನಾವು ಈ ಮೊದಲೇ ಅನೇಕ ಸಲ ನೋಡಿದ್ದೇವೆ. ಭಾಷೆ ಸಾಮಾಜಿಕ ಸಂಪರ್ಕದ ಆವಶ್ಯಕತೆಯಾಗಿದೆಯೇ ಹೊರತು, ಕೇವಲ ಒಬ್ಬ ವ್ಯಕ್ತಿಯ ನಿರ್ಮಾಣವಾಗಲೀ ಸ್ವಾಮ್ಯವನ್ನು ಪಡೆದಂತಹದಾಗಲೀ ಆಗಿರದು. ಅಷ್ಟೇ ಅಲ್ಲದೆ, ಸ್ವತಃ ತಮಿಳಿನಲ್ಲೇ ಇರುವ 'ಎಟುತ್ತು' (ಅಂದರೆ ವರ್ಣ) ಶುವಡಿ (ಅಂದರೆ ಪುಸ್ತಕ)—ಈ ದೇಶ್ಯಪದಗಳ ಉಪಲಬ್ಧತೆಯ ಮೂಲಕ ಅಗಸ್ತ್ಯಋಷಿಯು ಈ ತಮಿಳು ಭಾಷೆಯು ಅಭಿವೃದ್ಧಿ ಹೊಂದಲಿಕ್ಕೆ ಸಹಾಯ ಮಾಡಿದ ಆರ್ಯನಾಗಿದ್ದಾನೆಯೇ ಹೊರತು, ಸ್ವತಃ ತಮಿಳು ಭಾಷೆಯನ್ನು ನಿರ್ಮಾಣಮಾಡಿದವನಾಗಿಲ್ಲವೆಂಬುದು ಸ್ಪಷ್ಟವಿದೆ. ಭಾಷಾದೃಷ್ಟಿಯಿಂದ ತಮಿಳು ಮತ್ತು ಕನ್ನಡ ಭಾಷೆಗಳು ಹೆಚ್ಚು ಸಮೀಪದವಾಗಿವೆ.

ತೆಲುಗು ಭಾಷೆ:—ತೆಲುಗು ಭಾಷೆಯು ದ್ರಾವಿಡ ವರ್ಗದಲ್ಲೆಲ್ಲ ತೀರ ಮಧುರವಾದದ್ದೆಂದು ಹೇಳುತ್ತಾರೆ. ಯುರೋಪ್ಯರು ಈ ಭಾಷೆಯವರನ್ನು 'ಜೆಂಟೂ' ಎಂದು ಕರೆದರು. ಸಂಸ್ಕೃತರು ತೆಲುಗರನ್ನು ಆಂಧ್ರರೆಂದು ಕರೆಯುತ್ತಾರೆ. ಈ ಆಂಧ್ರ ಪದವು ತೀರ ಪ್ರಾಚೀನವಾಗಿದ್ದು, ಅದರ ಉಲ್ಲೇಖವು ಐತರೇಯ ಬ್ರಾಹ್ಮಣ, ರಾಮಾಯಣ ಮತ್ತು ಮಹಾಭಾರತಗಳಲ್ಲೂ, ಅಶೋಕ ಶಾಸನಗಳಲ್ಲೂ ಬರುತ್ತಿದೆ. ಕ್ರಿ. ಪೂ. ೩ನೆಯ ಶತಕದ ಪ್ಲಿನಿ ಎಂಬ ಲೇಖಕನು ಇವರನ್ನು Andarae ಎಂದು ಸಂಬೋಧಿಸಿದ್ದಾನೆ. ೭ನೆಯ ಶತಕದ ಚೀನೀ ಪ್ರವಾಸಿಯಾದ ಹ್ಯುಯೆನ್‌ತ್ಸಾಂಗನಲ್ಲೂ ಇವರ ಉಲ್ಲೇಖವಿದೆ.

'ತೆಲುಗು' ಪದದ ವ್ಯುತ್ಪತ್ತಿಯನ್ನು ಎರಡು ವಿಧವಾಗಿ ಹೇಳುತ್ತಾರೆ. ಹಲವರ ಪ್ರಕಾರ ತೆಲುಗು—ತೆನುಂಗು ತೆಲಿಂಗ ಪದವು 'ತ್ರಿ-ಲಿಂಗ' ಎಂಬ ಪದದಿಂದ (ಅಂದರೆ ಮೂರು ಲಿಂಗಗಳಿಂದ ಆವೃತವಾದ ಪ್ರದೇಶದಲ್ಲಿಯ ಭಾಷೆ ಎಂಬರ್ಥ) ಹುಟ್ಟಿತೆಂದು ಹೇಳುತ್ತಾರೆ. ಪರಂಪರೆಯ ಪ್ರಕಾರ ಶಿವನು ಲಿಂಗಸ್ವರೂಪನಾಗಿ, **ಕಾಲೇಶ್ವರ, ಶ್ರೀಶೈಲ ಮತ್ತು ಭೀಮೇಶ್ವರ** ಎಂಬ ಮೂರು ಸ್ಥಳಗಳಲ್ಲಿ ವ್ಯಾಪಿಸಿದನೆಂದು

* H. K. L.

ಹೇಳುತ್ತಾರೆ. ಇಂದಿಗೂ ತೆಲುಗು ದೇಶದ ಸೀಮೆಯು ಈ ಮೂರು ಲಿಂಗಗಳ ಪ್ರದೇಶವೇ ಆಗಿದೆ. ಶ್ರೀ ಬಿ ಸಿ. ಮುಜುಮುದಾರ ಮೊದಲಾದ ಪಂಡಿತರ ಪ್ರಕಾರ ತೆಲುಗು ಪದವು 'ತ್ರಿ ಕಲಿಂಗ' ಎಂಬ ಪದದಿಂದ ಬಂದಿತು. ಸ್ವತಃ ತೆಲುಗು ಪಂಡಿತರು ಈ ಪದವು 'ತೇನೆ' ಅಂದರೆ 'ಜೇನು' ಎನ್ನುವ ಪದದಿಂದ ಮಾಧುರ್ಯವುಳ್ಳ ಭಾಷೆ ಎಂಬರ್ಥದಲ್ಲಿ ಬಂದಿತೆಂದು ಹೇಳುತ್ತಾರೆ

ತಮಿಳರು ಅಗಸ್ತ್ಯಮೂಲವನ್ನು ಹೇಳಿದಂತೆ, ತೆಲುಗರೂ ಕಣ್ವಮಹರ್ಷಿಯು ತಮ್ಮ ಭಾಷೆಯ ಆದ್ಯ ಪ್ರವರ್ತಕನೆಂದು ಹೇಳುತ್ತಾರೆ. ಇದೂ ಅಲ್ಲದೆ, ಬ್ರಹಸ್ಪತಿ, ಹೇಮಚಂದ್ರ, ಪುಷ್ಪದಂತ, ರಾವಣ, ಗೌತಮ, ಧರ್ಮರಾಜರೂ ತೆಲುಗಿನಲ್ಲಿ ಬರೆದರಂತೆ! ಮಹಾಭಾರತವು ಮಾತ್ರ **ಆಂಧ್ರ,** ಕಾಂಬೋಜ, ಯವನ, ಚೀನರನ್ನು "ದುರ್ಧರ್ಮಿ"ಗಳನ್ನಾಗಿ ಮಾಡಿ, ಮ್ಲೇಚ್ಛವರ್ಗಕ್ಕೆ ಸೇರಿಸಿದೆ ಮಹಾಭಾರತ XII 207, 7559ರ ಪ್ರಕಾರ ಪಾಪಿಷ್ಠರು ಮಾತ್ರ ದಕ್ಷಿಣ ದೇಶದಲ್ಲಿ **ಆಂಧ್ರ,** ಪುಳಿಂದ, ಮತ್ತು ಶಬರ ಮನೆತನಗಳಲ್ಲಿ ಜನ್ಮವೆತ್ತುತ್ತಾರೆ.

ಕನ್ನಡವು ಭಾಷೆಯ ದೃಷ್ಟಿಯಿಂದ ತಮಿಳಿನ ಸಮೀಪದ್ದಾಗಿದ್ದರೂ, ಲಿಪಿದೃಷ್ಟಿಯಿಂದ ಕನ್ನಡ ತೆಲುಗುಗಳು ತೀರ ಸಮೀಪದ್ದಾಗಿವೆ.

ಮಲೆಯಾಳಮ್—ಮಲೆ+ಆಳಮ್‌ದಿಂದ ಸಿದ್ಧವಾಯಿತು. ಮಲೆಯಾಳಮ್ ಅಂದರೆ ತಪ್ಪಲು ಪ್ರದೇಶದ ಭೂಮಿ ಎಂಬರ್ಥ. ಇಡೀ ದ್ರಾವಿಡ ವರ್ಗದಲ್ಲಿ ಮಲೆಯಾಳಮ್‌ದಲ್ಲಿದ್ದಷ್ಟು ಸಂಸ್ಕೃತ ಪದಗಳು ಉಳಿದ ಯಾವ ಭಾಷೆಯಲ್ಲೂ ಇಲ್ಲ. ಡಾ. ಕಾಲ್ಡ್‌ವೆಲ್‌ರ ಪ್ರಕಾರ ತಮಿಳು ಮತ್ತು ಮಲೆಯಾಳಮ್‌ಗಳು ತೀರ ಸಮೀಪದವು. ಆದರೆ, ಕ್ರಿ. ಶ. ಹದಿನಾಲ್ಕನೆಯ ಶತಮಾನದ ಮಲೆಯಾಳಮ್ ವ್ಯಾಕರಣವಾದ "ಲೀಲಾತಿಲಕಮ್" ಎಂಬ ಗ್ರಂಥದಲ್ಲಿ ಮಲೆಯಾಳಮ್ ಭಾಷೆಯು ತಮಿಳಿನಕಿಂತ, ಕನ್ನಡ ತೆಲುಗುಗಳಿಗೆ ಹೆಚ್ಚು ಸಮೀಪದ್ದೆಂದು ಹೇಳಲಾಗಿದೆ.

ಕನ್ನಡ ಭಾಷೆ ಮತ್ತು ಪ್ರದೇಶದ ಪ್ರಾಚೀನತೆ—ಕನ್ನಡದ ಪ್ರಾಚೀನತೆಯ ಬಗ್ಗೆ ನೋಡುವಾಗ ಮೂರು ಮಾತುಗಳನ್ನು ನಾವು ಸ್ಪಷ್ಟವಾಗಿ ಲಕ್ಷದಲ್ಲಿಡಬೇಕು. **ಒಂದು ಕನ್ನಡ ಸಾಹಿತ್ಯದ ಪ್ರಾಚೀನತೆ**—ಇದಕ್ಕೆ ಆಧಾರ: ಉಪಲಬ್ಧವಾದ ಗ್ರಂಥಗಳು ಮತ್ತು ಅವುಗಳಲ್ಲಿಯ ಪ್ರಾಚೀನ ಗ್ರಂಥಗಳ ಉಲ್ಲೇಖಗಳು. ಈ ರೀತಿ **ಕನ್ನಡ ಸಾಹಿತ್ಯವು** ಸುಮಾರು ಕ್ರಿ ಶ. ೭ ರಿಂದಲೇ ಪ್ರಾರಂಭವಾಯಿತೆಂದು ಸ್ಪಷ್ಟವಾಗಿ ಹೇಳಬಹುದು. **ಎರಡನೆಯದಾಗಿ** ಕನ್ನಡ **ಭಾಷೆಯ** ಪ್ರಾಚೀನತೆ—ಸ್ವಾಭಾವಿಕವಾಗಿಯೇ, ಕನ್ನಡ ಸಾಹಿತ್ಯವು ಹುಟ್ಟಿಕೊಳ್ಳುವ ಮೊದಲೇ ಕನ್ನಡ ಭಾಷೆಯೊಂಬುದು ಇರಲೇಬೇಕು ಇದರ ಆಧಾರ ಶಾಸನಗಳು ಮತ್ತು ಗ್ರೀಕ್ ಸಂಸ್ಕೃತಾದಿ ಸಾಹಿತ್ಯಗಳಲ್ಲಿ ಕಂಡುಬರುವ ಕನ್ನಡ ಪದಗಳು. ಈ ರೀತಿ ಕನ್ನಡ ಭಾಷೆಯ ಅಸ್ತಿತ್ವವನ್ನು ಕ್ರಿ. ಶ. ೧ ರಿಂದಲೇ ನಾವು ಕಾಣಬಹುದು. **ಮೂರನೆಯದಾಗಿ ಕನ್ನಡ ನಾಡಿನ** ಪ್ರಾಚೀನತೆ–ಈಗ ಕನ್ನಡವೆಂದೆನ್ನಿಸಿಕೊಳ್ಳುವ ಭಾಗವು ಯಾವ ಕಾಲದಿಂದ ಅಸ್ತಿತ್ವದಲ್ಲಿದೆ? ಆಗ ಇದರ ಹೆಸರೇನು?—ಇತ್ಯಾದಿ ಆಗ ಇಲ್ಲಿಯ ಜನ ಶುದ್ಧವಾದ ಇಂದಿನಂಥ ಕನ್ನಡವನ್ನು ಆಡುತ್ತಿರಲಿ ಬಿಡಲಿ; ಆದರೆ ಈ **ಪ್ರದೇಶವು** ಮಾತ್ರ ಅಸ್ತಿತ್ವದಲ್ಲಿತ್ತೆಂದು ಸ್ಪಷ್ಟವಾಗಿ ಹೇಳಬಹುದು. ಹೀಗಾಗಿ, ಕನ್ನಡದ ಪ್ರಾಚೀನತೆಯ ಬಗ್ಗೆ ವಿಚಾರ ಮಾಡುವಾಗ **ನಾಡು-ನುಡಿ ಮತ್ತು ಸಾಹಿತ್ಯ**—ಎಂಬ ಈ ಮೂರೂ ಅಂಶಗಳಲ್ಲಿಯ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಳ್ಳುವುದು ತುಂಬಾ ಆವಶ್ಯಕವಾಗಿದೆ. ಯಾಕಂದರೆ, ನಾಡು ಪ್ರಾಚೀನತಮ; ನುಡಿ ಅದಕ್ಕೂ ಸ್ವಲ್ಪ ಈಚೆಯದು; ಸಾಹಿತ್ಯವು ಅದಕ್ಕೂ ಸ್ವಲ್ಪ ಈ ಕಡೆಯದು.

ಕನ್ನಡ ನಾಡಿನ ಪ್ರಾಚೀನತೆ:—ಕನ್ನಡನಾಡು ತೀರ ಪ್ರಾಚೀನ ಕಾಲದಿಂದಲೇ ಅಸ್ತಿತ್ವದಲ್ಲಿದೆ. ಈ ಪದದ ಉಲ್ಲೇಖವು ೬ನೆಯ ಶತಮಾನದ ವರಾಹಮಿಹಿರನ ಬೃಹತ್ಸಂಹಿತೆಯಲ್ಲೂ, ಅದಕ್ಕೂ ಪೂರ್ವದ ಸೋಮದೇವನ ಕಥಾಸರಿತ್ಸಾಗರದಲ್ಲೂ ಕಾಡುಬರುತ್ತದೆ. ಸು. ಕ್ರಿ. ಶ. ೭೭೦ ರಲ್ಲಿ ಆಳಿದ ಪಾಂಡ್ಯ ಅರಸನಾದ ಶಡೈಯನ್ ಪರಂತಕನ ವೆಳ್ವಿಕುಡಿ ಶಾಸನಗಳಲ್ಲಿ 'ಕರುನಾಡುಗನ್'—ಎಂದೂ, ಕ್ರಿ. ಶ. ಸು. ೯೦೦ ರಲ್ಲಿ ಆಗಿಹೋದ ಸಂಸ್ಕೃತ ರಾಜಶೇಖರನ 'ಕಾವ್ಯಮೀಮಾಂಸಾ' ಗ್ರಂಥದಲ್ಲೂ ಕರ್ನಾಟಕದ ಉಲ್ಲೇಖಗಳಿವೆ. ಕನ್ನಡಿಗರ ಪಠನ ರೀತಿಯ ಬಗ್ಗೆ ಹೇಳುವಾಗ, ರಾಜಶೇಖರನು 'ಕರ್ನಾಟರು' ಟಂಕಾರೋತ್ತರ ಪಾಠಿನರೆಂದು ವರ್ಣಿಸುತ್ತಾನೆ. ಅವನು ಹೇಳುವುದೆಂದರೆ:—

"ರಸಃ ಕೋಪ್ಯಸ್ತು ಕಾಪ್ಯಸ್ತು ರೀತಿಃ
ಸಗರ್ವಮ್ ಸರ್ವ ಕರ್ಣಾಟಾಃ ಟಂಕಾರೋತ್ತರ ಪಾಠಿನಃ"

ಮೇಲೆ ವಿವರಿಸಿದ ಕನ್ನಡನಾಡು ಮತ್ತು ಜನರ ಉಲ್ಲೇಖಗಳು ಹೆಚ್ಚುಕಡಿಮೆ ಅರ್ವಾಚೀನವಾದುವು. ಆದರೆ, ನಿಜವಾಗಿ ಈ ನಾಡು ಇದಕ್ಕೂ ತೀರ ಪುರಾತನವಾಗಿದ್ದುದೆಂಬುದನ್ನೂ ಮತ್ತು ಸುಸಂಸ್ಕೃತವಾಗಿದ್ದಿತೆಂಬುದನ್ನೂ ಇತ್ತೀಚಿನ ಅನೇಕ ಭೂಸಂಶೋಧನೆ ಮತ್ತು ಇತರ ಸಾಧನೆಗಳಿಂದ ಕಂಡುಕೊಳ್ಳುತ್ತೇವೆ.

ಕ್ರಿ. ಶ. **೨ನೆಯ ಶತಮಾನದ** ಸುಪ್ರಸಿದ್ಧ ತಮಿಳು ಪುರಾಣ ಕಾವ್ಯವಾದ 'ಶಿಲಪ್ಪದಿಗಾರಮ್'—ಎಂಬ ಗ್ರಂಥವಲ್ಲಿ ಕನ್ನಡರನ್ನು 'ಕರುನಾಡರ್' ಎಂದು ಸಂಬೋಧಿಸಲಾಗಿದೆ. 'ಮಿಲಲ' ಎಂಬ ಚೋಳ ರಾಜನು ಮೈಸೂರು ಸೈನ್ಯದ ಸಹಾಯದಿಂದ ಸಿಂಹಳ ದ್ವೀಪವನ್ನು ಜಯಿಸಿದನೆಂದು ಉಲ್ಲೇಖವಿದೆ ಕ್ರಿ. ಶ. **೨ನೆಯ ಶತಮಾನ**ದಲ್ಲಿ 'ಸೆಂಗುಟ್ಟವನ್' ಎಂಬ ಚೇರರಾಜನು ಉತ್ತರಕ್ಕೆ ಹೋಗುವಾಗ ನೀಲಗಿರಿಯಲ್ಲಿ ತಂಗಿ, ಅಲ್ಲಿಯ 'ಕನ್ನಡರು' ಪ್ರದರ್ಶಿಸಿದ ಕುಣಿತವನ್ನು ನೋಡಿ ಸಂತೋಷಪಟ್ಟಂತೆ 'ಶಿಲಿಪ್ಪದಿಗಾರಮ್' ಗ್ರಂಥದಲ್ಲಿ ಹೇಳಿದೆ.

ಅದರಂತೆಯೇ, ಕ್ರಿ. ಪೂ ೧ ರಿಂದ ಕ್ರಿ. ಶ. ೧ ರ ಮಧ್ಯಕಾಲವಲ್ಲಿ ರಚಿತವಾದುದೆಂದು ಹೇಳುವ 'ಮೃಚ್ಛಕಟಿಕ' ಎಂಬ ಸಂಸ್ಕೃತ ಸಾಮಾಜಿಕ ನಾಟಕವಲ್ಲಿ, ವೀರಕ ಮತ್ತು ಚಂದನಕರ ಸಂವಾದದಲ್ಲಿ "ಕರ್ಣಾಟ ಕಲಹಪ್ರಯೋಗಮ್ ಕರಿಷ್ಯಾಮಿ"—ಎಂದು ಬರುತ್ತದೆ. ಇದರಂತೆಯೇ, ಕ್ರಿ. ಪೂ. ೩ ರಿಂದ ಕ್ರಿ. ಶ. ೩ ರ ವರೆಗೆ ರಚಿತವಾಯಿತೆಂದು ಹೇಳಲ್ಪಡುವ ಮಹಾಭಾರತದ 'ಸಭಾ' ಮತ್ತು ಭೀಷ್ಮಪರ್ವಗಳಲ್ಲೂ ಕರ್ನಾಟಕದ ನಿರ್ದೇಶವಿದೆ. ಸಭಾಪರ್ವದಲ್ಲಿ ಜನಪದಗಳ ಬಗ್ಗೆ ಹೇಳುವಾಗ ಬರುವ ಉಲ್ಲೇಖವೆಂದರೆ:—

'**ಕರ್ಣಾಟಾಃ** ಕಾಂಸ್ಯಕುಟ್ಟಾಶ್ಚ ಪದ್ಮಜಾಲಾಃ ಸತೀನರಾಃ'*—ಇತ್ಯಾದಿ.

ಅದರಂತೆಯೇ ಭೀಷ್ಮಪರ್ವದಲ್ಲೂ **ಕೂಡ**—

'ಅಥಾಪರೇ ಜನಪದಾಃ ದಕ್ಷಿಣಾಃ ಭರತರ್ಷಭ,
ದ್ರವಿಡಾಃ ಕೇರಲಾಃ ಪ್ರಾಚ್ಯಾಃ ಮೂಷಿಕಾಃ ವನವಾಸಿಕಾಃ |
ಕರ್ಣಾಟಕಾಃ ಮಹಿಷಕಾಃ ವಿಕಲ್ಪಾ ಮೂಷಕಸ್ತಥಾ ||' †

ಎಂದು ಬರುತ್ತದೆ. ಇದರಂತೆಯೇ, ಮಹಾಭಾರತದ ೮-೪೪-೨೦೬ ರಲ್ಲಿ ಕಾರಸ್ಕರ, ಕಲಿಂಗ ಮತ್ತು ಮಾಹಿಷಕ ಜನಾಂಗಗಳು "ದುರ್ಧರ್ಮಿ"ಗಳೆಂದು ಹೇಳಲಾಗಿದೆ.

* ಸ. ಪ. ೭೮-೧೮. † ಭೀ. ಪ. ೯-೫೫.

ಮೇಲಿನ ಈ ಎರಡೂ ಭಾಗಗಳೂ ಪ್ರಕ್ಷಿಪ್ತವೆಂದು ಗ್ರಹಿಸಿದರೂ, ಕ್ರಿ. ಶ. ೧೭ರಲ್ಲಿ ರಚಿತವಾಯಿತೆಂದು ಹೇಳುವ ಶ್ರೀಮದ್ರಾಮಾಯಣದಲ್ಲಿ ಮಹಿಷಕ, ಋಷಿಕಗಳ ಉಲ್ಲೇಖವಿದೆ.

ಇನ್ನೂ ಅಲ್ಲದೆ, ಕ್ರಿ ಶ ೨೦೦ರಲ್ಲಿದ್ದ ಹಾಲರಾಜನ ಗಾಥಾಸಪ್ತಶತಿಯಲ್ಲಿ ಪೊಟ್ಟ-ಪಿಟ್ಟು-ಮೊದಲಾದ ಕನ್ನಡ ಪದಗಳು ಬರುತ್ತವೆಂದು ಹೇಳುತ್ತಾರೆ

ಸುಮಾರು ಕ್ರಿ. ಶ. ೧೫೦ ರಲ್ಲಿ ಭಾರತವನ್ನು ಸಂದರ್ಶಿಸಿದ 'ಪ್ಟೋಲೆಮಿ'ಯು ತನ್ನ ಪ್ರವಾಸ ಚರಿತ್ರೆಯಲ್ಲಿ ಕರ್ನಾಟಕದಲ್ಲಿಯ ಅನೇಕ ಪ್ರದೇಶಗಳ ನಿರ್ದೇಶವನ್ನು ಮಾಡಿದ್ದಾನೆ. ಅವನು Pounnataದ (ಪುನ್ನಾಟದ) ಬಗ್ಗೆ ಹೇಳಿ, ವರ್ಣಿಸುವ ಇತರ ಪ್ರದೇಶಗಳೆಂದರೆ,—Badiamaioi (ಅಂದರೆ ಬಾದಾಮಿ); Inde (ಇಂಡಿ); Modogoulla (ಮುದ್ಗಲ್ಲು); Petirgala (ಹತ್ತರಿಕಿಹಾಳು ?); ಬನವಾಸೆ; Pasage (ಪಲಸಿಗೆ); ಸಿರ್ ಮಲಗೆ (ಚಿಮ್ಮಲಿಗೆ) ಮತ್ತು ಗಡಹಿಂಗ್ಲಜ್.

ಇದರಂತೆಯೇ ಜೈನಪರಂಪರೆಯ ಪ್ರಕಾರ ಕ್ರಿ ಪೂ. ಸು. ೩೦೦ರಲ್ಲಿ ಆಗಿಹೋದ ಭದ್ರಬಾಹು ಮುನಿಗಳು ದ್ವಾದಶವರ್ಷಕ್ಷಾಮಪ್ರಸಂಗದಲ್ಲಿ ಕರ್ನಾಟಕಕ್ಕೆ ಬಂದು ಶ್ರವಣಬೆಳ್ಗೊಳದಲ್ಲಿ ಮುಡುಪಿದರೆಂದು ಐತಿಹ್ಯವಿದೆ.

ಕ್ರಿ. ಶ. ೧೮ ಮಾರ್ಕಂಡೇಯ ಪುರಾಣದಲ್ಲಿ 'ಕರ್ನಾಟ' ಎಂದು ಬರುತ್ತದೆ. (55—23)

ಕ್ರಿ. ಪೂ. ಮೂರರಲ್ಲಿ ಆಗಿಹೋದ ಅಶೋಕ ಚಕ್ರವರ್ತಿಯ ಅನೇಕ ಸಂದೇಶವಾಹಕರು ಕರ್ನಾಟಕದ ಸುಪ್ರಸಿದ್ಧ ಸ್ಥಳಗಳಾದ ಕೊಪ್ಪಳ, ಮಾಸ್ಕಿ ಮತ್ತು ಬ್ರಹ್ಮಗಿರಿಗಳಲ್ಲಿ ತಮ್ಮ ಸಂದೇಶಪ್ರಸಾರವನ್ನು ಮಾಡಿದ್ದರ ದ್ಯೋತಕವಾಗಿ ಇಂದಿಗೂ ನಾವು ಶಿಲಾಶಾಸನಗಳನ್ನು ಕಾಣಬಹುದಾಗಿದೆ.

ಇದೂ ಅಲ್ಲದೆ, ಛಾಂದೋಗ್ಯ ಉಪನಿಷತ್ತಿನಂಥ ಆರ್ಯಗ್ರಂಥಗಳಲ್ಲೂ ಕೂಡ ಕನ್ನಡ ಚಿನ್-ಚಂದ್ರ-ರೂಪಗಳೂ, ಮಟಚಿ (ಮಿಡಚಿ)—ಮೊದಲಾದ ಪದಗಳೂ ದೊರೆಯುತ್ತವೆಂದು ಪಂಡಿತರು ಹೇಳುತ್ತಾರೆ. ಈ ಬಗ್ಗೆ ಡಾ. ಭಂಡಾರಕರ ಅವರು ಬರೆಯುವದೇನಂದರೆ:—

> "Matachi is a Sanskritised form of the well-known *Canarese* word 'midiche', which is explained by Kittel's Dictionary as 'a grasshopper, a locust', and which is used in this sense to this day, in the Dharwar District."*

ಇದೂ ಅಲ್ಲದೆ, ಕ್ರಿ. ಶ. ೧೯೪೭ರಲ್ಲಿ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ಭೂಸಂಶೋಧನೆ ನಡೆಸಿದ ಡಾ ಮಾರ್ಟಿಮರ್ ವ್ಹೀಲರ್ ಅವರು, ಈ ಭಾಗದಲ್ಲಿ ಮೂರು ತರಹದ ಸಾಂಸ್ಕೃತಿಕ ಅವಶೇಷಗಳು ದೊರಕುತ್ತವೆಂದೂ, ಶೀರ ಪ್ರಾಚೀನ ಅವಶೇಷಗಳು Megalithic ಸಂಸ್ಕೃತಿಯ ಕಾಲಕ್ಕೆ ಸಂಬಂಧಪಟ್ಟವೆಂದೂ, ಎರಡನೆಯ ಬಗೆಯ ಅವಶೇಷಗಳು ಕ್ರಿ. ಪೂ. ೧ ರಿಂದ ಕ್ರಿ. ಶ. ೧೮ ವರೆಗೆ ಆಳಿದ ಶಾತವಾಹನರ ಕಾಲಕ್ಕೆ ಸಂಬಂಧಪಟ್ಟವೆಂದೂ ಅನಂತರದುವು ಈಚಿನವೆಂದೂ ಹೇಳುತ್ತಾರೆ.† ಆದರೆ, ಡಾ. ವ್ಹೀಲರ್ ಅವರು ಹೇಳುವ ಈ ಶಾತವಾಹನರು ಆಂಧ್ರರಾಗಿರದೆ, ಕನ್ನಡಿಗರಾಗಿದ್ದರೆಂಬುದನ್ನು ಲಕ್ಷ್ಯದಲ್ಲಿಟ್ಟರೆ, ಕನ್ನಡ ನಾಡುನುಡಿ ಮತ್ತು ಸಂಸ್ಕೃತಿಗಳ ಪ್ರಾಚೀನತೆಯ ಅರಿವಾಗದಿರದು.

* ಶಂ. ಬಾ. ಜೋಶಿ, ಕ. ನೆ. ಪು ೫೬ † "Ancient India"

ಇದರಂತೆಯೇ, ಕೆಳಗಣ ಈಜಿಪ್ತದಲ್ಲಿ ದೊರೆತ ಕ್ರಿ ಶ. ೨ನೇ ಶ. ದ ಒಂದು ಗ್ರೀಕ್ ಪ್ರಹಸನದಲ್ಲಿ ದೊರೆಯುವ ವಿದೇಶೀಯ ಪದಗಳು ಕನ್ನಡದವೇ ಆಗಿವೆಯೆಂಬುದನ್ನು ಸನ್ಮಾನ್ಯ ಸಂಶೋಧಕರಾದ ಮ. ಗೋವಿಂದ ಪೈ ಅವರು ಸುಂದರವಾಗಿ ಪ್ರಸ್ಥಾಪಿಸಿದ್ದಾರೆ. ಕನ್ನಡಿಗರಿಗೂ ಮತ್ತು ಗ್ರೀಕರಿಗೂ ವ್ಯಾಪಾರದ ಮೂಲಕವಾಗಿ ಬಂದ ಸಂಪರ್ಕವನ್ನು ನಾವು ಅನೇಕ ವಿಧವಾಗಿ ಕಾಣುತ್ತೇವೆ. ಚಂದ್ರವಳ್ಳಿಯ ಉತ್ಖನನಗಳಲ್ಲಿ ಚೀನೀ ಬಾದಶಹನಾದ 'ಹನ್‌ವುತಿ'ಯ ನಾಣ್ಯಗಳಷ್ಟೇ ಅಲ್ಲದೆ, ಅನೇಕ ರೋಮೀಯ ನಾಣ್ಯಗಳೂ ಗ್ರೀಕ ಅವಶೇಷಗಳೂ ದೊರಕುತ್ತವೆ. ಇಲ್ಲಿ ದೊರೆಯುವ 'ರೌಲೆಟೆಡ್' ಎಂಬ ಪಾತ್ರಾವಿಶೇಷವು ರೋಮದಿಂದ ತರಿಸಿದುದಾಗಿದೆ. ಕನ್ನಡದಲ್ಲಿರುವ 'ದೀನಾರ' 'ದಮ್ಮ' ಮೊದಲಾದ ಪದಗಳೂ ಕೂಡ ಗ್ರೀಕ್ ಸಂಬಂಧವನ್ನೇ ಸೂಚಿಸುತ್ತವೆ. ಡಾ ವ್ಹೀಲರ್ ಅವರ ಪ್ರಕಾರ ದಕ್ಷಿಣ ಹಿಂದುಸ್ತಾನದ 'ಅರಿಕೆಮೆಡು' ಎಂಬ ಪ್ರದೇಶವಂತೂ ರೋಮೀಯರ ಸುಪ್ರಸಿದ್ಧ ವ್ಯಾಪಾರಸ್ಥಳವಾಗಿದ್ದಿತು *

ಶ್ರೀಮಾನ್ ರಾ. ಹ ದೇಶಪಾಂಡೆ ಅವರ ಪ್ರಕಾರವಂತೂ ದಶಾವತಾರಗಳಲ್ಲಿಯ ಅನೇಕ ಅವತಾರಗಳು ಕೂಡ ಕರ್ನಾಟಕವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದುವು. ಶ್ರೀ. ದೇಶಪಾಂಡೆ ಅವರ ಪ್ರಕಾರ ಮೊದಲಿನ ನಾಲ್ಕು ಅವತಾರಗಳಲ್ಲಿ ಕನ್ನಡ ಭೂಮಿಯ ವಿಷಯ ಬಂದಿರದಿದ್ದರೂ, ವಾಮನ ಅವತಾರದಿಂದ ಕನ್ನಡ ಭೂಮಿಯು ಕಣ್ಣೆದುರು ಬರುತ್ತಿರುವುದನ್ನು ಕಾಣಬಹುದು ಹದಿನೆಂಟು ಪುರಾಣಗಳಲ್ಲಿ ಸುಪ್ರಸಿದ್ಧವಾದ ವಾಮನಪುರಾಣದ ಪ್ರಕಾರ ಅತಿ ಬಲಾಢ್ಯನಾದ ಬಲಿಚಕ್ರವರ್ತಿಯನ್ನು ವಾಮನ ಮೂರ್ತಿಯು ಮೂರು ಪಾದ ಭೂಮಿ ಬೇಡಿ ಅವನನ್ನು ಪಾತಾಳಕ್ಕೆ ಒತ್ತಿದನೆಂದು ಹೇಳಿದೆಯಷ್ಟೇ! ಹಾಗಾದರೆ, ಬಲಿಚಕ್ರವರ್ತಿಯು ಅದುಮಲ್ಪಟ್ಟ ಈ ಪಾತಾಳವು ಯಾವುದು?.... ಶ್ರೀ ದೇಶಪಾಂಡೆ ಅವರ ಪ್ರಕಾರ ಇದು ಕನ್ನಡ ನಾಡನ್ನೊಳಗೊಂಡ ದಕ್ಷಿಣ ದೇಶವಾಗಿದ್ದಿತು. ಇದಕ್ಕೆ ಅವರು ಕೊಡುವ ಕಾರಣಗಳೆಂದರೆ:— "ನಾಗರು ವಾಸಿಸುವ ಕೆಳಗಿನ ರಾಜ್ಯಕ್ಕೆ ಪಾತಾಳಲೋಕವೆಂಬ ಸಂಜ್ಞೆಯಿರುವದರಿಂದಲೂ, ತೆಂಕಲಲ್ಲಿ ನಾಗರು ಪ್ರಬಲರಾದ್ದರಿಂದ ಕರ್ನಾಟಕದ ಒಂದು ಭಾಗಕ್ಕೆ ನಾಗರಖಂಡವೆಂಬ ಹೆಸರು ಬಿದ್ದಿರುವದರಿಂದಲೂ, ಮದ್ರಾಸದ ತೆಂಕಲಲ್ಲಿ ಮಹಾಬಲಿಪುರವೆಂಬ ಪುರಾತನ ಪಟ್ಟಣದ ಕುರುಹುಗಳಿರುವುದರಿಂದಲೂ, ಬಲಿ ಚಕ್ರವರ್ತಿಯ ಮತ್ತು ಅವನ ಮಗ ಬಾಣನ ವಂಶದವರು ಕರ್ನಾಟಕದ ಕೆಲ ಭಾಗವನ್ನೂ ತಮಿಳು ತೆಲುಗು ನಾಡುಗಳನ್ನೂ ಬಹುಕಾಲ ಆಳಿದರೆಂದು ಶಾಸನಗಳು ತಿಳಿಸುವುದರಿಂದಲೂ ಈ ದಕ್ಷಿಣ ದೇಶವೇ ವಾಮನ ಪುರಾಣದ ಪಾತಾಳಲೋಕವಾಗಿತ್ತೆಂದು ಧಾರಾಳವಾಗಿ ಹೇಳಬಹುದು "† ದೀಪಾವಳಿಯಲ್ಲಿ ಬಲಿಪ್ರತಿಪದೆಯಿದೆ. ಕರ್ನಾಟಕದಲ್ಲಿ ಆ ದಿನ ಬಲಿಯನ್ನುದ್ದೇಶಿಸಿ ಹಾಡುವ ಪರಂಪರೆ ಪುರಾತನಕಾಲದಿಂದಲೂ ಬಂದಿದೆ. "ಬಲ್ಲಾಳ ಬಲೀಂದ್ರ ರಾಜೇಕೆಲ್ಲಾ ಸಿರಿವಂತ್ಯಾರು!" ಬಲಿಚಕ್ರವರ್ತಿಯ ಮಗನಾದ ಬಾಣಾಸುರನೇ ಕೊನೆಯ ಪ್ರಬಲನಾದ 'ದೈತ್ಯ'ನಾಗಿದ್ದನು ಈ ವಾಮನಾವತಾರದ ಕಾಲವು ಸುಮಾರು ಕ್ರಿ ಪೂ. ೨೯೦೦ ಎಂದು ಪಂಡಿತರು ಹೇಳುತ್ತಾರೆ.

ವಾಮನಾವತಾರದ ನಂತರ ಪರಶುರಾಮಾವತಾರವು ಪ್ರಾರಂಭವಾಯಿತಷ್ಟೇ — ? ಈ ಕಾಲದಲ್ಲಿ "ದಸ್ಯುಗಳ ಕಾಟವು ಕಡಿಮೆಯಾದ್ದರಿಂದ ಅಧಿಕಾರಮದದಿಂದ ಮತ್ತರಾದ ಕ್ಷತ್ರಿಯರು ಬ್ರಾಹ್ಮಣರನ್ನು ಪೀಡಿಸತೊಡಗಿದರು." ಹೀಗೆ, ಬ್ರಾಹ್ಮಣರಿಗೆ ವಿಪತ್ತುಂಟಾದಾಗ, ಕ್ಷತ್ರಿಯರನ್ನು ಹತ್ತಿಕ್ಕಿ ಬ್ರಾಹ್ಮಣತ್ವದ ಪೌರುಷವನ್ನು ಪುನಃ ಮೆರೆದ ಪರಶುರಾಮನ ಕಾರ್ಯಕ್ಷೇತ್ರವಾದರೂ ಕರ್ನಾಟಕವೇ ಆಗಿದ್ದಿತು. ಅಂತಲೇ,

* Ancient India † ಕ. ಸಾ. ಪು ೧.

ಕೊಂಕಣ, ಗುಜರಾಥ, ಮತ್ತು ಕರ್ನಾಟಕಗಳಲ್ಲಿ ಪರಶುರಾಮನ ಮತ್ತು ಅವನ ತಾಯಿಯ ಗುಡಿಗಳಿದ್ದಷ್ಟು ಭಾರತದ ಉಳಿದ ಯಾವ ಭಾಗಗಳಲ್ಲೂ ಇರಲಿಕ್ಕಿಲ್ಲ. ಸವದತ್ತಿಯ ಎಲ್ಲಮ್ಮನ (ರೇಣುಕೆಯ) ಗುಡಿಯೂ, ಅದರ ಹತ್ತಿರದ ಜಮದಗ್ನಿ ಪರಶುರಾಮರ ಗುಡಿಗಳೂ ಸರ್ವಶ್ರುತವಷ್ಟೇ! ಅದರಂತೆಯೇ, ಮೈಸೂರು ಸಂಸ್ಥಾನದ ಶಿವಮೊಗ್ಗೆ ಜಿಲ್ಹೆಯ ಚಂದ್ರಗುತ್ತಿ ಎಂಬಲ್ಲಿಯ ಗುಡ್ಡದ ಮೇಲೂ ಒಂದು ರೇಣುಕಾದೇವಿಯ ಗುಡಿಯಿದೆ. ಇಲ್ಲಿಯೇ ಪರಶುರಾಮನು ತನ್ನ ತಂದೆಯ ಅಪ್ಪಣೆಯಂತೆ ತಾಯಿಯ ರುಂಡವನ್ನು ಕತ್ತರಿಸಿ, ಪ್ರಾರ್ಥನೆಯಿಂದ ಪುನಃ ಅವಳನ್ನು ಬದುಕಿಸಿಕೊಂಡನೆಂದು ಹೇಳುತ್ತಾರೆ. ಇದೇ ಸಂಸ್ಥಾನದ ಕಡೂರ ಜಿಲ್ಹಾ ಹಿರೇಮಗಳೂರಿಗೆ ಮೊದಲು ಭಾರ್ಗವಪುರಿ ಎಂದು ಕರೆಯುತ್ತಿದ್ದರಂತೆ. ಇಲ್ಲಿಯ ಗುಡಿಯಲ್ಲಿ ಪರಶುರಾಮನ ಮೂರ್ತಿಯನ್ನು ಪೂಜಿಸದೆ, ಅವನ ಕೊಡಲಿಯನ್ನೇ ಇಂದಿಗೂ ಪೂಜಿಸುತ್ತಾರಂತೆ. ಇಪ್ಪತ್ತೊಂದು ಸಲ ಸಮಗ್ರ ಭರತವರ್ಷವನ್ನು ಸುತ್ತಿ ಇಡೀ ದೇಶವನ್ನೇ ಕ್ಷತ್ರಿಯರಿಲ್ಲದಂತೆ ಮಾಡಿ, ಎಲ್ಲ ಭೂಮಿಯನ್ನೂ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಾಗ, ಈ ಅಧಿಕಾರದಿಂದ ಮತ್ತರಾದ ಬ್ರಾಹ್ಮಣರು "ನಮಗೆ ದಾನಕೊಟ್ಟ ದೇಶದಲ್ಲಿ ನೀನಿರುವುದು ಉಚಿತವಲ್ಲ" ಎಂದು ಹೀಯಾಳಿಸಲು, ಭಾರ್ಗವನು ಸಹ್ಯಾದ್ರಿ ಪರ್ವತವನ್ನು ದಾಟಿ ಹೋಗಿ ಸಮುದ್ರನಾಥನನ್ನು ಪ್ರಾರ್ಥಿಸಿ ಕೆಲ ಭೂಮಿಯನ್ನು ದೊರಕಿಸಿ ಬಾಳಿದನೆಂದು ಹೇಳುತ್ತಾರೆ. ಅಂತಲೇ, ಕುಲಾಬಾ, ಠಾಣೆ, ರತ್ನಾಗಿರಿ ಮತ್ತು ಉತ್ತರ ಮತ್ತು ದಕ್ಷಿಣ ಕನ್ನಡಜಿಲ್ಹೆಗಳನ್ನೊಳಗೊಂಡ ಪ್ರದೇಶಕ್ಕೆ "**ಪರಶುರಾಮ ಕ್ಷೇತ್ರ**"ವೆಂದು ಕರೆಯುತ್ತಾರೆ. ಇಲ್ಲಿಯ ಬ್ರಾಹ್ಮಣರು ದಿನದ ಸಂಕಲ್ಪಗಳಲ್ಲಿ 'ಪರಶುರಾಮ' ಕ್ಷೇತ್ರವೆಂದೇ ಉಚ್ಚರಿಸುತ್ತಾರೆ. ರತ್ನಾಗಿರಿ ಜಿಲ್ಹೆಯ **ಚಿಪಳೂಣ**ದಲ್ಲಿ ಇಂದಿಗೂ ಪರಶುರಾಮದೇವರ ಗುಡಿಯಿದೆ. ಈ ಗುಡಿಯು ಐತಿಹಾಸಿಕ ಕಾಲದಲ್ಲಿ ಕೂಡ ತೀರ ಸುಪ್ರಸಿದ್ಧವಾಗಿದ್ದು, ಮಹಾರಾಷ್ಟ್ರದ ಛತ್ರಪತಿ ಶಿವಾಜಿ ಮಹಾರಾಜರು ಈ ಗುಡಿಯ ಬಗ್ಗೆ ತುಂಬಾ ಆದರಭಾವನೆಯುಳ್ಳವರಾಗಿದ್ದರು. ಮಹಾರಾಷ್ಟ್ರದ ಇತಿಹಾಸಕಾರರು ಹೇಳುವಂತೆ—"ಪಟ್ಟಾಭಿಷೇಕವಾಗುವದಕ್ಕಿಂತ ಮೊದಲು (ಛತ್ರಪತಿ) ಶಿವಾಜಿ (ಮಹಾರಾಜರು) ಗಾಗಾಭಟ್ಟನ ಅಪ್ಪಣೆಯಂತೆ ಈ ದೇವಸ್ಥಾನಕ್ಕೆ ಹೋಗಿ, ತೀರ್ಥಪ್ರಸಾದ ತೆಗೆದುಕೊಂಡು ತಿರುಗಿ ಬಂದು ವ್ರತಬಂಧ ಮಾಡಿಸಿಕೊಂಡನು."* ಕ್ಷತ್ರಿಯರನ್ನೆಲ್ಲ ಸದೆದು ಕೆನ್ನೀರ್ಮುತ್ತಿದ ತಮ್ಮ ಪ್ರಚಂಡ ಪರಶುವನ್ನು ಭಾರ್ಗವದೇವರು ತೊಳೆಯಬೇಕೆಂದು ನೀರನ್ನರಸಿ ಕಳವಳಿಸಿ ಬಂದಾಗ, ಕನ್ನಡದ ಮಲಪ್ರಭೆ ಎದುರಿಗೆ ಕಂಡಿತಂತೆ. ಅದನ್ನು ಕಂಡಾಕ್ಷಣಕ್ಕೆ ಹರ್ಷನಿರ್ಭರರಾದ ಭಾರ್ಗವರು 'ಐ-ಹೊಳೆ!'—ಎಂದು ಉದ್ಗಾರ ತೆಗೆದ ಮಾತೇ ಆ ಊರ ಹೆಸರಾಗಿ 'ಐಹೊಳೆ' ಎಂದು ಪ್ರಸಿದ್ಧವಾಗಿದೆಯೆಂದು ಸ್ಥಲಪುರಾಣ.

ಮೇಲಿನ ವಿವರಣೆಗಳಲ್ಲಿ ದಂತಕಥೆಗಳ ಭಾಗ ಎಷ್ಟೋ ಮಟ್ಟಿಗೆ ಇರಬಹುದಾದರೂ, ಪರಶುರಾಮರ ಕಾರ್ಯಕ್ಷೇತ್ರವು ಬಹುಮಟ್ಟಿಗೆ ಕರ್ನಾಟಕವಾಗಿದ್ದಿತೆಂಬುದರಲ್ಲಿ ಏನೂ ಸಂದೇಹವಿಲ್ಲ. ಕ್ರಿಸ್ತಶಕ ಆರರಿಂದ ಕ್ರಿ. ಶ. ಹದಿನಾರರ ವರೆಗಿನ ಅನೇಕ ಶಾಸನಗಳಲ್ಲಿ ಪರಶುರಾಮನು ಕನ್ನಡ ಕಲಿಗಳ ಆದರ್ಶನಾಗಿ ನಿಂತಿದ್ದಾನೆ. ಕ್ರಿ. ಶ. ೫೨೨ರ ಶಾಸನದಲ್ಲಿ ಕನ್ನಡ ದುರ್ವಿನೀತನು ಶಸ್ತ್ರಕಲೆಯಲ್ಲಿ ಪರಶುರಾಮನಂತಿದ್ದನೆಂದು ಹೇಳಿದರೆ, ಕ್ರಿ. ಶ. ೬೯೩ರ ಶಾಸನದಲ್ಲಿ ಚಲುಕ್ಯ ವಿನಯಾದಿತ್ಯ ಸತ್ಯಾಶ್ರಯನು ಪರಶುರಾಮನಂತೆ ಇತರ ಅರಸರಿಗೆ ಅಂಕುಶದ ಹಾಗೆ ಶೋಭಿಸುತ್ತಿದ್ದನೆಂದು ವರ್ಣನೆಯಿದೆ. ಅದರಂತೆಯೇ ೨ನೆಯ ಶ್ರೀಪುರುಷ ಕೊಂಗುಣಿ ವರ್ಮನೂ ಮತ್ತು ಪೃಥ್ವಿಕೊಂಗುಣಿವರ್ಮನೂ ಜಮದಗ್ನಿಪುತ್ರನ ಹಾಗೆ ಪರಾಕ್ರಮಿಗಳೆಂದು ಹೇಳಿದೆ. ಕ್ರಿ. ಶ. ೧೨ರಲ್ಲಿಯ ಚೋಳದೇವನು ೨೧ ಸಲ ಕ್ಷತ್ರಿಯರನ್ನು ಕೊಂದಿಕ್ಕಿದ ಜಾಮದಗ್ನ್ಯನಂತೆ ಇದ್ದನೆಂದು

* ಕ. ಸಾ. ಪ. ಸ.

ಹೇಳಿದೆ ಕ್ರಿ. ಶ. ೧೧೧೨ರ ಒಂದು ಶಿಲಾಶಾಸನದಲ್ಲಿ "ಕ್ಷತ್ರಿಯರನ್ನು ಸಂಹಾರ ಮಾಡಮಾಡುತ್ತ ಪರಶುರಾಮನು ಕಿಷ್ಕಿಂಧೆಗೆ ಬಂದಾಗ ಅವನನ್ನು ಸಂಧಿಸಿದ ವೀರನೇ ಬಲಿವಂಶದ ಪೂರ್ವಜನು" ಎಂದು ಹೇಳಿದೆ. ಪರಶುರಾಮನ ಕ್ರೋಧಾಗ್ನಿಗೆ ತುತ್ತಾದ ಅರಸರಲ್ಲಿ ರಾಯಮುರಾರಿಯ ವಂಶವನ್ನು ಅಶ್ವತ್ಥಾಮನು ರಕ್ಷಿಸಿದನೆಂದು ಹೇಳಿದೆ. ಹೊಸಕೋಟ ತಾಲೂಕಿನ ಲಕ್ಕೊಂಡನಹಳ್ಳಿಯಲ್ಲಿ ಸ್ವತಃ ಪರಶುರಾಮನೇ ವೆಂಕಟರಮಣನ ವಿಗ್ರಹವನ್ನು ಸ್ಥಾಪಿಸಿದನೆಂದು ಸ್ಥಳಪುರಾಣ. ಹಾಗೆಯೇ ಉಡುಪಿಯ ಆಗ್ನೇಯಕ್ಕೆ ಎಂಟು ಮೈಲು ದೂರದಲ್ಲಿರುವ ಕುಂಜರಗಿರಿಯಲ್ಲಿ ಸ್ವತಃ ಪರಶುರಾಮನೇ ತಾಯಿ ರೇಣುಕೆಯ ಗುಡಿಯನ್ನು ಕಟ್ಟಿದನೆಂದು ಹೇಳುತ್ತಾರೆ. ಈ ಹಳ್ಳಿಯಲ್ಲಿಯೇ ಇಂದಿಗೂ **ಪರಶುತೀರ್ಥ**, ಗದಾತೀರ್ಥ, ಧನುಷ್‌ತೀರ್ಥ ಮತ್ತು ಶರತೀರ್ಥಗಳಿವೆ ಚಿತ್ರದುರ್ಗ ಜಿಲ್ಹೆಯಲ್ಲಿ ಪರಶುರಾಮಪುರವೆಂದು ಒಂದು ಹಳ್ಳಿಯಿದೆ. ರಾವಬಹಾದ್ದೂರ ಬಾಂಬರ್ಡೆಕರ ಅವರ ಪ್ರಕಾರ ಹಿರೇಮಗಳೂರಿನ ಪ್ರಾಚೀನ ಹೆಸರು ಭಾರ್ಗವಪುರಿ ಎಂದೇ ಇದ್ದಿತು. ಪರಶುರಾಮನ ತಾಯಿಯಾದ ರೇಣುಕೆಯು ಚಂದ್ರಗುಪ್ತಿಯಲ್ಲಿ ಸತಿಹೋದಳೆಂದು ಆಖ್ಯಾಯಿಕೆ. ಮೈಸೂರಿನ ಚಂದ್ರದ್ರೋಣಪರ್ವತದಲ್ಲಿ ಇಂದಿಗೂ 'ಕೋಂಕಣಾದೇವಿ'ಯ ಗುಡಿಯಿದೆ. ಈ 'ಕೋಂಕಣಾ' ಅಥವಾ 'ಕುಂಕಣಾ' ಎಂಬುದು ರೇಣುಕೆಯ ಮತ್ತೊಂದು ಹೆಸರು.* ಸಾಂಗಲಿಯಲ್ಲಿ ಇಂದಿಗೂ ಕೂಡ 'ಕೆಂಗಾಬಾಯಿ'ಯ ನಿತ್ಯಪೂಜೆ ನಡೆಯುತ್ತದೆ ಕನ್ನಡ ಭೂಮಿಯಲ್ಲಿಯೇ ಜನ್ಮವೆತ್ತಿ, ತನ್ನ ಅಸಹಾಯ ಸಾಹಸವನ್ನು ಮೆರೆದ ಆ ಪರಶುರಾಮನ ಬಗ್ಗೆ ಇಷ್ಟು ಐತಿಹ್ಯಗಳೂ ಉಲ್ಲೇಖಗಳೂ ಕರ್ನಾಟಕದಲ್ಲಿ ಸಿಗುತ್ತಿದ್ದರೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಅಂತೂ ಕ್ರಿ. ಪೂ. ೨೪೮೦ ವರುಷಗಳ ಹಿಂದೆ ಆಗಿಹೋದ ಪರಶುರಾಮನ ಕಾಲದಲ್ಲೂ ಕನ್ನಡ ನೆಲವು ಅಸ್ತಿತ್ವದಲ್ಲಿದ್ದು ಮಹತ್ವದ ಘಟಕವಾಗಿದ್ದಿತೆಂಬುದನ್ನು ನಾವು ಕಾಣಬಹುದು.

ಭಾರ್ಗವರಾಮನ ಕಾಲದ ನಂತರ ದಾಶರಥಿರಾಮನ ಕಾಲದಲ್ಲೂ ಕೂಡ ಕರ್ನಾಟಕದ ಅನೇಕ ಪ್ರದೇಶಗಳೂ ಮತ್ತು ವ್ಯಕ್ತಿಗಳೂ ಯಾವ ರೀತಿ ಮಹತ್ವದ ಭಾಗವನ್ನು ವಹಿಸಿದ್ದರೆಂಬುದು ಸರ್ವಶ್ರುತವೇ ಇದೆ. ಸ್ವತಃ ಶ್ರೀರಾಮಚಂದ್ರನು ಉತ್ತರಾಪಥದಲ್ಲಿ ಜನಿಸಿದ್ದರೂ, ಅವನ ತಪಸ್ಸು ಮತ್ತು ಕ್ಷಾತ್ರಗಳು ದಕ್ಷಿಣಾಪಥದಲ್ಲೇ ಹೆಚ್ಚು ಅಭಿವ್ಯಕ್ತವಾದುವು. ಶ್ರೀರಾಮಚಂದ್ರನ ತಪಸ್ಸಿನ ವನವಾಸ-ಸ್ಥಾನವು ದಕ್ಷಿಣಾಪಥವಾಯಿತು. ಶ್ರೀರಾಮಚಂದ್ರನು 'ದೈತ್ಯ' ರಾವಣನ ಕೂಡ ಹೋರಾಡುವಾಗ ಅವನಿಗೆ ನೆರವಾದ ಸುಗ್ರೀವ ಹನುಮಂತರು ಕನ್ನಡ ನಾಡಿನವರೆಂದು ಹೇಳುತ್ತಾರೆ. ಹನುಮಂತನ ಭೂಮಿ ಇಂದಿನ ಹನುನು+ಅವರ=ಹೊನ್ನಾವರವೆಂದು ಹೇಳುತ್ತಾರೆ. ರಾವಣನು ಜನಸ್ಥಾನದಿಂದ ಲಂಕೆಗೆ ಸೀತಾದೇವಿಯನ್ನು ಅಪಹರಿಸಿಕೊಂಡು ಹೋಗುವಾಗ ಹಂಪಿಯ ಹತ್ತಿರ ಜಟಾಯುವು ಅವನನ್ನು ತಡೆಗಟ್ಟಿದನೆಂದೂ, ಚಿತ್ರದುರ್ಗ ಜಿಲ್ಹೆಯ ಜಟಂಗರಾಮೇಶ್ವರವೆಂಬ ಬೆಟ್ಟದ ಹತ್ತಿರವೇ ಈ ಜಟಾಯುವು ಕೆಡೆದುಬಿದ್ದನೆಂತಲೂ Epigraphia Carnatica, ಸಂಪುಟ ೧೧, ಪುಟ ೨೫೭ರಿಂದ ಕಂಡುಬರುತ್ತದೆ. ಇದೇ ರಾಮಾಯಣಕಾಲದ ಮೊದಲಿನಿಂದ ಕೂಡ ಗೋಕರ್ಣದ ಲಿಂಗವು ಸುಪ್ರಸಿದ್ಧವಾಗಿದ್ದಿತೆಂದು ಕಾಳಿದಾಸಾದಿ ಮಹಾಕವಿಗಳಿಂದಲೂ ಕಂಡು ಬರುತ್ತದೆ ಅಜವಿಲಾಪ ಸಂದರ್ಭದಲ್ಲಿ ಇಂದುಮತಿಯ ಮರಣಕಾರಣವನ್ನು ವಿವರಿಸುವಾಗ ಕಾಳಿದಾಸನು ನಾರದರು ಗೋಕರ್ಣದ ಉದ್ದಿಶ್ಯವಾಗಿ ಹೊರಟಾಗ ಅವರ ವೀಣೆಯ ಮಾಲೆಯು ಇಂದುಮತಿಯ ಮೇಲೆ ಬಿದ್ದಿತೆಂದು ವರ್ಣನೆಯಿದೆ

ಇದೂ ಅಲ್ಲದೆ, ಸ್ವತಃ ರಾವಣನೇ ಅತ್ಯುಗ್ರವಾದ ತಪಸ್ಸಿನಿಂದ ಈಶ್ವರನನ್ನು ಮೆಚ್ಚಿಸಿ ಆತ್ಮಲಿಂಗವನ್ನು ಸಂಪಾದಿಸಿಕೊಂಡು ಲಂಕೆಗೆ ಮರಳಿ ಹೋಗುತ್ತಿರುವಾಗ, ಗೋಕರ್ಣದ ಹತ್ತಿರವೇ ಸಂಧ್ಯಾಸಮಯವು

* चित्पावन — ना. गो. चापेकर (पृ. १२)

ಒದಗಲು ಅರ್ಘ್ಯಾದಿಗಳಿಗಾಗಿ ಇಲ್ಲಿಯೇ ನಿಂತು, ವಿನಾಯಕನ ಕೈಯಲ್ಲಿ ಕೊಟ್ಟ ಆತ್ಮಲಿಂಗವೇ ಸಿಡಿದು ಪಂಚಲಿಂಗಗಳಾದುವೆಂಬುದು ಸರ್ವವಿದಿತವಿದೆ. ಕನ್ನಡ ಭೂಮಿಯ ಈ ಗೋಕರ್ಣಕ್ಷೇತ್ರದ ಪ್ರಾಚೀನತೆ ಮತ್ತು ಪ್ರಸಿದ್ಧಿಗಳನ್ನು ವಿವರಿಸುವ ಅನೇಕ ಪ್ರಾಚೀನ ಉಲ್ಲೇಖಗಳು ನಮಗೆ ದೊರಕುತ್ತಿವೆ. ಉದಾಹರಣೆಗೆ ಈ ಕೆಳಗಿನ ಉಲ್ಲೇಖಗಳನ್ನು ನೋಡಬಹುದು —

"ತತಃ ಕ್ರೋಧೇನ ತೇನೈವ ದಶಗ್ರೀವಃ ಸಹಾನುಜಃ
ಅಗಚ್ಛದ್ ಆತ್ಮಸಿದ್ಧ್ಯಂ ಗೋಕರ್ಣಸ್ಯಾಶ್ರಮಂ ಶುಭಂ" ॥ *

"ನತ್ವಾ ಮೂಕಾಂಬಿಕಾಂ ದೇವೀಂ ನತ್ವಾ ಮುರ್ಡೇಶ್ವರಂ ಹರಂ ।
ಗುಣವಂತೇಶ್ವರಂ ನತ್ವಾ, ನತ್ವಾದೋರೇಶ್ವರಂ ತಥಾ ।
ಗೋಕರ್ಣಂ ಚ ತತೋಗತ್ವಾ ತಂ ಪ್ರಣಮ್ಯ ಮಹಾಬಲಂ" ॥ ‡

"ಅಥ ಗೋಕರ್ಣಮಾಸಾದ್ಯ ತ್ರಿಷುಲೋಕೇಷು ವಿಶ್ರುತಂ
ಸಮುದ್ರಮಧ್ಯೇ ರಾಜೇಂದ್ರ" †

"ತತೋ ಅಭಿವ್ರಜ್ಯ ಭಗವಾನ್ ಕೇರಳಾಂ ತ್ರಿಗರ್ತಕಾನ್—
ಗೋಕರ್ಣಾಖ್ಯಂ ಶಿವಕ್ಷೇತ್ರಂ ಸಾನ್ನಿಧ್ಯಂ" ॥ $

"ಗೋಕರ್ಣೇ ಭದ್ರಕರ್ಣೇ ಸ್ಯಾತ್" ॥ ×

"ಸೇತೌ ಚ ಪದ್ಮನಾಭೇ ಚ, ಗೋಕರ್ಣೇ ಪುರುಷೋತ್ತಮೇ-
ಉದನ್ವದ್ ಅಂಭಸಿ ಸ್ನಾನಂ ಸಾರ್ವಕಾಲಿಕಮೀಪ್ಸಿತಂ' ॥ +

ಇದೂ ಅಲ್ಲದೆ ಈ ಕಾಲದಲ್ಲಿ ಅನೇಕ ಮಹರ್ಷಿಗಳು ಕೂಡ ದಕ್ಷಿಣಾಪಥದಲ್ಲಿ ಇಲ್ಲಿಯೇ ವಾಸಿಸುತ್ತಿದ್ದರೆಂದು ಅನೇಕ ಐತಿಹ್ಯಗಳಿವೆ. ಈ ಕಥನಗಳ ಪ್ರಕಾರ ಚಂದ್ರಗುತ್ತಿಯಲ್ಲಿ ಜಮದಗ್ನಿ, ಮತಂಗರೂ; ಬೆಂಗಳೂರ ಜಿಲ್ಲೆಯ ತಮ್ಮಸಂದ್ರ (ಸ್ತಂಬೋದಧಿ) ದ ಹತ್ತರ ಅಗಸ್ತ್ಯಮಹರ್ಷಿಗಳೂ, ಬಾಗಿಲುಕೋಟೆಯ ಹತ್ತಿರದ ಗಲಗಲಿಯಲ್ಲಿ ಗಾಲವಋಷಿಗಳೂ (ಗಾಲವಕ್ಷೇತ್ರವೆಂದೂ ಈ ಪ್ರದೇಶಕ್ಕೆ ಕರೆಯುವದುಂಟು.) ಇರುತ್ತಿದ್ದರೆಂದು ಹೇಳುತ್ತಾರೆ.

ಇದರಂತೆಯೇ ಮಹಾಭಾರತ ಕಾಲದಲ್ಲೂ ಕೂಡ ಕರ್ನಾಟಕದ ಅನೇಕ ಪ್ರದೇಶಗಳು ಸುಪ್ರಸಿದ್ಧವಾಗಿದ್ದವು. ಪಾಂಡವರು ತಮ್ಮ ವನವಾಸದ ಅವಧಿಯು ಮುಗಿದ ಮೇಲೆ ಒಂದು ವರುಷ ಅಜ್ಞಾತವಾಸದಲ್ಲಿರಬೇಕಾಗಿತ್ತಷ್ಟೇ! ಆಗ ಅವರು ಆರಿಸಿದ ಸ್ಥಳವೆಂದರೆ ಮತ್ಸ್ಯಪುರ— ಇಂದಿನ ಹಾನಗಲ್ಲು. ಈ ಕಾಲದ ಚಂದ್ರಹಾಸನು ಪರಮ ವಿಷ್ಣುಭಕ್ತನೂ, ಕುಂತಳರಾಜ್ಯದ ಸಾರ್ವಭೌಮನೂ ಆಗಿದ್ದನು. ಇಂದಿಗೂ ಚಿತ್ರಕಲ್‌ದುರ್ಗದಲ್ಲಿ ಮಹಾಭಾರತಕಾಲದವೆಂದು ಹಿಡಿಂಬನ ಹಲ್ಲು, ರಥ—ಮೊದಲಾದ ಅನೇಕ ಅವಶೇಷಗಳನ್ನು ತೋರಿಸುತ್ತಾರೆ. ಶ್ರೀಮದ್ಭಾಗವತದಲ್ಲಿ ಭಗವನ್ ವೃಷಭನು ವಿರಕ್ತನಾಗಿ **ದಕ್ಷಿಣ ಕರ್ನಾಟಕದ ಸಂಚಾರ**ವನ್ನು ಮಾಡುವಾಗ ಕಾಳ್ಗಿಚ್ಚು ಅವನ ದೇಹವನ್ನು ದಹಿಸಿತೆಂದು ವರ್ಣಿಸಲಾಗಿದೆ:

* ವಾಲ್ಮೀಕಿ ರಾಮಾಯಣ ‡ ಆನಂದ ರಾಮಾಯಣ. † ಮಹಾಭಾರತ. $ ಭಾಗವತ
× ದೇವಿ ಭಾಗವತ. + ಸ್ಕಂದಪುರಾಣ

ಏಕದಾತು ಕಾಂಕಟಕರ್ಣಾಟಕಾದ್ದಕ್ಷಿಣ ಕರ್ಣಾಟಕಾನ್ ದೇಶಾನ್ ಯದೃಚ್ಛಯೋಪಗತಃ ಕುಟಚಾಚಲೋಪವನೇ ಆಸ್ಯಕೃತ್ ಆತ್ಮಕವಲ ಉನ್ಮಾದ ಇವ ಮುಕ್ತ ಮೂರ್ಧಜೋ ಅಸಂವೀತ ಏವ ವಿಚಚಾರ— ಇ. ಇದರ ಬಗ್ಗೆ ಬರೆದ ವಿಜಯಧ್ವಜ ಭಿಕ್ಷುಗಳ ಟೀಕೆಯ ಪ್ರಕಾರ 'ಸೊಲ್ಲಾಪುರ ವಿಜಾಪುರ ಜಿಲ್ಲೆಗಳ ಭಾಗವೇ ಕಾಂಕಟ ಕರ್ನಾಟಕವಾಗಿತ್ತೆಂದು ಅನುಮಾನ ಮಾಡಲಿಕ್ಕೆ ಅನುವು ದೊರೆಯುತ್ತದೆ.'*

ಒಟ್ಟಾರೆ, ಮೇಲೆ ವಿವರಿಸಿದ ಈ ಅವತಾರಗಳ ಕಥೆಗಳಲ್ಲಿ ಎಷ್ಟೋ ಸಲ ಕಾಲ್ಪನಿಕ ಅಂಶಗಳೂ, ಪ್ರದೇಶಾಭಿಮಾನವೂ ಕೂಡಿಕೊಂಡಿದ್ದರೂ, ಸ್ಥೂಲವಾಗಿ ಇಲ್ಲಿ ಬರುವ ಇತರ ವಿವರಗಳು ಮತ್ತು ಸಾಧ್ಯತೆಯ ಮೇಲಿಂದ, ಕನ್ನಡನಾಡು ಮೊದಲಿನ ಅವತಾರ ಕಾಲದಲ್ಲಿರದಿದ್ದರೂ ವಾಮನಾವತಾರದಿಂದ ಈಚೆ ಅನೇಕ ಅವತಾರಿಗಳ ಕಾರ್ಯಕ್ಷೇತ್ರವಾಗಿದ್ದಿತೆಂದು ನಾವು ಹೇಳಲೇಬೇಕು. **ಆದರೂ, ಇಲ್ಲಿ ನಾವು ಗಮನಿಸಬೇಕಾದ ಒಂದು ಮಾತೆಂದರೆ, ಕ್ರಿ. ಪೂರ್ವ ಎಷ್ಟೋ ವರ್ಷಗಳಿಂದಲೂ ಇಂದಿನ ಕನ್ನಡ ಭೂಮಿಯು ಅಸ್ತಿತ್ವದಲ್ಲಿದ್ದರೂ, ಕ್ರಿ. ಶ. ೨ರಿಂದ ಸ್ಪಷ್ಟವಾಗಿ ಕನ್ನಡ ನುಡಿ ಮತ್ತು ಪದಗಳು ನಮಗೆ ದೊರೆಯುತ್ತಿದ್ದರೂ, ಸುಮಾರು ಕ್ರಿ. ಶ. ೬–೭ರ ವರೆಗೆ ಅಖಂಡ ಜನಪದಸೂಚಕವಾದ "ಕರ್ನಾಟಕ" ಎಂಬ ಪದವು ಮಾತ್ರ ನಮ್ಮ ಕಣ್ಣಿಗೆ ಬೀಳುತ್ತಿಲ್ಲ** ಆದ್ದರಿಂದ ಕನ್ನಡನಾಡು ಎಷ್ಟೇ ಪ್ರಾಚೀನವಾಗಿದ್ದರೂ, ಕನ್ನಡರಲ್ಲಿ ಕರ್ನಾಟಕತ್ವದ ಕಲ್ಪನೆ ಮೂಡಿದ್ದು ಇತ್ತೀಚೆ ಮಾತ್ರ ಎಂದೇ ಹೇಳಬೇಕು.

ಕನ್ನಡ ಸಾಹಿತ್ಯದ ಪ್ರಾಚೀನತೆ

ಕನ್ನಡ ನಾಡು ಮತ್ತು ನುಡಿಗಳ ಪ್ರಾಚೀನತೆಯು ಕ್ರಿಸ್ತಪೂರ್ವ ಎಷ್ಟೇ ವರುಷಗಳ ವರೆಗೆ ಹೋಗಬಹುದಾದರೂ, ಕನ್ನಡ **ಸಾಹಿತ್ಯದ** ಪ್ರಾಚೀನತೆಯು ಮಾತ್ರ ಅಷ್ಟಿಲ್ಲ. ನಮಗೆ ಈಗ **ಉಪಲಬ್ಧವಿದ್ದ ಮೊಟ್ಟಮೊದಲಿನ** ಕನ್ನಡ ಗ್ರಂಥವೆಂದರೆ— ಕ್ರಿ. ಶಕ ೯ರಲ್ಲಿ ಗ್ರಥಿತವಾದ 'ಕವಿರಾಜಮಾರ್ಗ'—ಎಂಬ ಅಲಂಕಾರ ಗ್ರಂಥವು. ಇದನ್ನು ಕ್ರಿ. ಶ. ೯ರಲ್ಲಿ ಆಳಿದ ರಾಷ್ಟ್ರಕೂಟ ದೊರೆಯಾದ ಅಮೋಘವರ್ಷ ನೃಪತುಂಗನು ಬರೆದನೆಂದು ಹಲವರೂ, ಅಥವಾ ಈ 'ನೃಪತುಂಗದೇವಮಾರ್ಗಾನುಮತನಪ್ಪ' ಮತ್ತಾವನೇ ಸಭಾಸದನಾಗಲೀ ಬರೆದನೆಂದು ಬೇರೆ ಹಲವರೂ ಹೇಳುತ್ತಾರೆ. ಈ ಗ್ರಂಥದ ಕರ್ತೃವು ಯಾರೇ ಇರಲಿ; ಕ್ರಿ. ಶ. ೯ರ ಕಿಂತ ಮೊದಲು ಕನ್ನಡದಲ್ಲಿ ಗ್ರಂಥಗಳೇ ಇರಲಿಲ್ಲವೇ ?— ಇರುವುದೇ ಆದರೆ ಯಾಕೆ ಉಪಲಬ್ಧವಾಗಿಲ್ಲ?—ಇವುಗಳ ಅಸ್ತಿತ್ವದ ಆಧಾರವೇನು?—ಎಂಬ ಪ್ರಶ್ನೆಗಳನ್ನು ನಾವೀಗ ಎದರಿಸಬೇಕಾಗಿದೆ.

(೧) ಇನ್ನೂ ಗ್ರಂಥಗಳು ದೊರಕಿಲ್ಲವೆಂಬ ಒಂದು ಕಾರಣದಿಂದಲೇ, ಪ್ರಾಚೀನತರ ಗ್ರಂಥಗಳು ಇಲ್ಲವೆಂದು ಹೇಳುವುದು ಕೋಳಿಯು ಕೂಗಿಲ್ಲವೆಂದು ಬೆಳಕಾಗಿಲ್ಲವೆಂದು ಹೇಳಿದಂತೆಯೇ ಸೈ. ಯಾಕಂದರೆ ಇಂದಿಗೆ ಹತ್ತು ವರ್ಷಗಳ ಹಿಂದೆ, ಇಂದು ಉಪಲಬ್ಧವಾದ ಎಷ್ಟೋ ಗ್ರಂಥಗಳು ಕನ್ನಡದಲ್ಲಿ ದೊರಕಿರಲಿಲ್ಲ. ಅಂದಾಕ್ಷಣಕ್ಕೆ ಅವು ಇರದೇ ಹೋಗಿದ್ದವೇ ?—ಅಷ್ಟೇ ಅಲ್ಲದೆ, ಎಷ್ಟೋ ಗ್ರಂಥಕರ್ತರು ಸ್ವತಃ ತಾವೇ ಬರೆದುದಾಗಿ ಹೇಳಿದ ಎಷ್ಟೋ ಗ್ರಂಥಗಳು ಇನ್ನೂ ನಮಗೆ ದೊರಕಿಲ್ಲ. ಹಾಗಾದರೆ, ಅವರೇನು ಸುಮ್ಮನೇ ಜಂಭಕ್ಕಾಗಿ ಆ ಮಾತು ಹೇಳಿಕೊಂಡರೇ ಅಥವಾ ಅದರಲ್ಲಿ ಸತ್ಯಾಂಶವಿದೆಯೋ ? ಹತ್ತನೆಯ ಶತಮಾನದ ರನ್ನನು ತಾನು 'ಜಿನಮುನಿತನಯ'ವೆಂಬ ಗ್ರಂಥವನ್ನು ಬರೆದುದಾಗಿ ಹೇಳುತ್ತಾನೆ ಆದರೆ ಆ ಗ್ರಂಥವು ಎಲ್ಲಿದೆ ?—೧೩ನೆಯ ಶತಮಾನದ ಜನ್ನನು ಒಂದಲ್ಲ ಎರಡು ಸಲ 'ರನ್ನಂ ವೈಯಾಕರಣಂ; ಜನ್ನಂ ಮೇಣ್

* ಶ. ಸಾ. ಪು. ೧೧.

ಕವಿಗಳೊಳ್ ವೈಯಾಕರಣಂ' ಎಂದು ಹೇಳಿಕೊಳ್ಳುತ್ತಾನೆ. ಇದಕ್ಕೆ ಆಧಾರವೇನು? ಇದೇ ಶತಮಾನದ ಶಬ್ದಮಣಿದರ್ಪಣದ ಸಮಾಪ್ತಿವಾಕ್ಯಗಳಲ್ಲಿ ಕೇಶಿರಾಜನು 'ಪ್ರಬೋಧ ಚಂದ್ರೋದಯ' 'ಮಾಳವೀ ಮಾಧವ' ಮೊದಲಾದ ಗ್ರಂಥಗಳನ್ನು ಬರೆದಂತೆ ಹೇಳಿದೆ ಹಾಗಾದರೆ, ಈ ಗ್ರಂಥಗಳೆಲ್ಲಿ? ಅದೂ ಅಲ್ಲದೆ, ಸ್ವತಃ ಕೇಶಿರಾಜನೇ ತನ್ನ ವ್ಯಾಕರಣದಲ್ಲಿ ಹಲವು ಕವಿಗಳ ಪ್ರಯೋಗವಾಕ್ಯಗಳನ್ನು ಹೇಳುತ್ತಿದ್ದಾನಲ್ಲಾ—ಆ ಕವಿಗಳೆಲ್ಲಿ? ಅವರ ಗ್ರಂಥಗಳೆಲ್ಲಿ? ಗುಣವರ್ಮನ ಹರಿವಂಶ—ನಯಸೇನನ ದೀರ್ಘೋಕ್ತಿ ಇವುಗಳ ಪೂರ್ವಾಪರವೇನು? ರೇವಾಕೋಟ್ಯಾಚಾರ್ಯನ 'ವೊಡ್ಡಾರಾಧನ'ದ ವಿಷಯ ಹತ್ತು ವರುಷಗಳ ಹಿಂದೆ ಯಾರಿಗೆ ಗೊತ್ತಿತ್ತು? ಆದ್ದರಿಂದ ಕೇವಲ ಗ್ರಂಥಗಳು ಉಪಲಬ್ಧವಿಲ್ಲವೆಂಬುದರ ಮೇಲಿಂದಲೇ ಕನ್ನಡ ಸಾಹಿತ್ಯವು ೯ನೆಯ ಶ. ದ ಮೊದಲು ಇರಲಿಲ್ಲವೆಂದು ಹೇಳುವುದು ಸರಿಯಾಗದು. ಕ್ರಿ. ಶ ೭೦೦ರಿಂದ ೧೦೦೦ರ ವರೆಗೆ ಕರ್ನಾಟಕವು ಕಂಡುಂಡ ಅನೇಕ ರಾಜಕೀಯ ಮತ್ತು ಧಾರ್ಮಿಕ ವಿಪ್ಲವಗಳ ಮೂಲಕ ಇವುಗಳಲ್ಲಿಯ ಅನೇಕ ಗ್ರಂಥಗಳು ಇಂದಿಗೂ ಉಪಲಬ್ಧವಾಗಿರದಿದ್ದರೆ, ಆಶ್ಚರ್ಯದ ಮಾತೇನೂ ಅಲ್ಲ.

(೨) ಅದೂ ಹೋಗಲಿ; ಸ್ವತಃ ಕವಿರಾಜಮಾರ್ಗ ಗ್ರಂಥವನ್ನು ನೋಡಿದವರಾರೂ, ಅದಕ್ಕೂ ಪ್ರಾಚೀನವಾದ ಸಾಹಿತ್ಯವು ಇರಲೇಬೇಕೆಂದು ಕಂಡುಕೊಳ್ಳುವಂತಿದೆ. **ಸ್ವತಃ ಕವಿರಾಜಮಾರ್ಗದಲ್ಲೇ ಅದಕ್ಕೂ ಪೂರ್ವದ ಸಾಹಿತ್ಯದ ಬಗ್ಗೆ ಸಾಕಷ್ಟು ಉಲ್ಲೇಖಗಳಿವೆ.** ಅವನ್ನು ಈ ರೀತಿ ಸಂಗ್ರಹಿಸಬಹುದು:—

(i) ಸ್ವತಃ ಕವಿರಾಜಮಾರ್ಗವು ಶಾಸ್ತ್ರಗ್ರಂಥ, ಕಲೆ ಯಾವಾಗಲೂ ಮೊದಲು, ಅನಂತರ ಅದರ ಶಾಸ್ತ್ರ. ಆದ್ದರಿಂದ ಈ ಶಾಸ್ತ್ರಗ್ರಂಥದ ಮೊದಲು ಇದರ ಕಲೆ ಇಲ್ಲವೆ ಸಾಹಿತ್ಯವಿರಲೇಬೇಕು.

(ii) ಕವಿರಾಜಮಾರ್ಗದಲ್ಲಿ ಬರುವ ದೃಷ್ಟಾಂತಗಳು ಬಹುಶಃ ಇತರ ಕವಿಗಳಿಂದ ತೆಗೆದುಕೊಂಡವಾಗಿರಬೇಕು

(iii) ಸ್ವತಃ ಕವಿರಾಜಮಾರ್ಗಕಾರನೇ ಹೇರಳವಾಗಿ ಉಪಯೋಗಿಸುವ 'ಪಟಗನ್ನಡ' 'ಪ್ರಾಚೀನ ಮಾರ್ಗ' ಮೊದಲಾದ ಪದಗಳೂ ಈ ಪ್ರಾಚೀನತೆಯನ್ನೇ ಹೇಳುತ್ತವೆ.

(iv) ಮತ್ತು ಕೊನೆಯದಾಗಿ, ಸ್ವತಃ ಗ್ರಂಥಕರ್ತನೇ ಹೇಳುವ ಹಲವು ಪ್ರಾಚೀನ ಕವಿಗಳ ಹೆಸರುಗಳು.

ಈ ಮೇಲಿನ ಕಾರಣಗಳ ಮೂಲಕ ಕವಿರಾಜಮಾರ್ಗದಕಿಂತ ಮೊದಲು ತುಂಬಾ ಉಜ್ವಲವಾದ ಕನ್ನಡ ಸಾಹಿತ್ಯವು ಇದ್ದಿತೆಂದು ನಾವು ಸ್ಪಷ್ಟವಾಗಿ ಊಹಿಸಬಹುದಾಗಿದೆ. ಭಾರತದ ಇತರ ಸಾಹಿತ್ಯಗಳಲ್ಲಿಯಂತೆ, ಕನ್ನಡದಲ್ಲೂ ಒಂದು ಬೌದ್ಧಯುಗವು ಇದ್ದಿತಲ್ಲದೆ, ಪ್ರಾಚೀನ ಕನ್ನಡ ಸಾಹಿತ್ಯದ ರೂಪವನ್ನು ಕಂಡುಕೊಳ್ಳಲಿಕ್ಕೆ ಇಂದು ಕ್ರಿ ಶ ೯ರ ಮೊದಲು ಉಪಲಬ್ಧವಿದ್ದ ಅನೇಕ ಶಾಸನಗಳೇ ದೃಷ್ಟಾಂತವಾಗಿವೆ.

ಹಾಗಾದರೆ, ಮೇಲೆ ಸ್ಥೂಲವಾಗಿ ಹೇಳಿದ ನಾಲ್ಕು ಕಾರಣಗಳನ್ನು ಸ್ವಲ್ಪ ವಿವರವಾಗಿ ನೋಡೋಣ.

೧. 'ಕವಿರಾಜಮಾರ್ಗ'ವು ಲೇಖಕನು ಅನ್ಯ ಕವಿಗಳಿಗೆ ರಸ–ಅಲಂಕಾರ ಮತ್ತು ಪದಪ್ರಯೋಗಗಳ ದೃಷ್ಟಿಯಿಂದ **ರಾಜಮಾರ್ಗವನ್ನು** ಹಾಕಿಕೊಡಬೇಕೆಂದು ಯತ್ನಿಸಿದ ಒಂದು ಶಾಸ್ತ್ರಗ್ರಂಥ ಯಾವುದೇ **ಶಾಸ್ತ್ರವು** ನಿರ್ಮಾಣವಾಗಬೇಕಾದರೆ, ಅದರ ಕಲೆಯು ಮೊದಲು ಬಂದಿರಬೇಕೆಂಬುದು ನಾವು ಜೀವನದಲ್ಲಿ

ಕಂಡುಂಡ ಅನುಭವ. ಮೊದಲು ಅಡಿಗೆ-ಅನಂತರ **ಸೂಪಶಾಸ್ತ್ರ;** ಮೊದಲು ಊಟ, ಅನಂತರ **ಆಹಾರಶಾಸ್ತ್ರ;** ಮೊದಲು ಧ್ವನಿ, ಅನಂತರ **ಸಂಗೀತಶಾಸ್ತ್ರ;** ಮೊದಲು ಭಾಷೆ, ಅನಂತರ **ಭಾಷಾಶಾಸ್ತ್ರ**—ವ್ಯಾಕರಣ; **ಮೊದಲು ಕಾವ್ಯ—ಅನಂತರ ಕಾವ್ಯಶಾಸ್ತ್ರ—ಅಲಂಕಾರ;** ಆದ್ದರಿಂದ ಕನ್ನಡದಲ್ಲಿ ಕವಿಗಳಿದ್ದ ಹೊರತು ಕವಿಗಳ ರಾಜಮಾರ್ಗವು ಉಂಟಾಗಲಾರದು. ನಾಲ್ಕು ಜನ ಹಾಯ್ದಾಗಲಲ್ಲವೇ ದಾರಿ ಬೀಳುವುದು? ಆ ರೀತಿ, ಕವಿರಾಜಮಾರ್ಗವು **ಶಾಸ್ತ್ರಗ್ರಂಥ**ವಾಗಿದೆಯೆಂಬ ಒಂದು ಕಾರಣದಿಂದೇ ನಾವು ಅದಕ್ಕೂ ಪ್ರಾಚೀನವಾದ ಸಾಹಿತ್ಯವು ಕನ್ನಡದಲ್ಲಿ ಇರಲೇಬೇಕೆಂದು ನಿರ್ವಿವಾದವಾಗಿ ಹೇಳಬಹುದಾಗಿದೆ.

೨. ಅದೂ ಅಲ್ಲದೆ, ಈ ಗ್ರಂಥದಲ್ಲಿ ಬಂದಿರುವ ಅನೇಕ ದೃಷ್ಟಾಂತಗಳು ಇದಕ್ಕೂ ಪ್ರಾಚೀನವಾದ ಗ್ರಂಥಗಳಿಂದ ತೆಗೆದುಕೊಳ್ಳಲ್ಪಟ್ಟವಾಗಿದ್ದು, ಅವುಗಳ ಆಕರಗಳು ಇಂದು ನಮಗೆ ದೊರಕುವಂತಿಲ್ಲ.

ಉದಾಹರಣೆಗೆ, ಬಹುಶಃ ರಾಮಾಯಣದ ಒಂದು ಕಥಾಸಂದರ್ಭದಲ್ಲಿ ಕವಿಯು—

'ಪತ್ತಿ ಪ್ರಮಾದ ಫಲಕಮಂ'—ಎಂದು

ದೃಷ್ಟಾಂತವಾಗಿ ಹೇಳಿದ್ದಾನೆ. ಮತ್ತೊಂದು ಕಡೆಗೆ, ರಾಮಾಯಣದ ಯಾವುದೋ ಒಂದು ಸನ್ನಿವೇಶದಲ್ಲಿ ರಾವಣನು ರಾಮ-ಲಕ್ಷ್ಮಣರನ್ನು ತಾಗಿದ ವಿಷಯವನ್ನು ಈ ರೀತಿ ವರ್ಣಿಸುತ್ತಾನೆ.

—'ಪರಿದೆಯ್ದಿ ತಾಗಿದಮ್ ಭಾಸುರತರ
ರಘುಕುಲಲಲಾಮನೊಳ್ ಲಕ್ಷ್ಮಣನೊಳ್–
ಪರಿಕೋಪವಶಭ್ರಮಣೋದ್ಧುರರಕ್ತಕಠೋರ-
ಲೋಚನಮ್ ದಶವದನಮ್?' ಇತ್ಯಾದಿ.

ಇದರಂತೆಯೇ "ಶಶಧರ ಬಿಂಬಾನನೆಯಂ"—ಎಂದು ಮೊದಲಾದ ಪದ್ಯ.

ಈ ಕಾವ್ಯಭಾಗಗಳೆಲ್ಲವೂ ಕೇವಲ ದೃಷ್ಟಾಂತಕ್ಕಾಗಿ ನೃಪತುಂಗದೇವನಿಂದೇ ರಚಿಸಲ್ಪಟ್ಟು ಹಾಕಿದವುಗಳಾಗಿವೆಯೆನ್ನುವದಕ್ಕಿಂತ, ಯಾವುದೋ ಮೂಲಗ್ರಂಥದಿಂದ ತೆಗೆದುಕೊಳ್ಳಲ್ಪಟ್ಟವಾಗಿವೆಯೆಂದು ಹೇಳುವುದು ಹೆಚ್ಚು ಸೂಕ್ತವಾಗಿದೆ.

೩. ಸ್ವತಃ ಕವಿರಾಜಮಾರ್ಗಕಾರನೇ ಅನೇಕ ಸಲ 'ಪಳಗನ್ನಡ'—ಮೊದಲಾದ ಪ್ರಾಚೀನ ಕಾವ್ಯಸೂಚಕಗಳಾದ ಪದಗಳನ್ನು ಉಪಯೋಗಿಸುತ್ತಾನೆ. ಇಂಥ ಪ್ರಯೋಗಗಳಂತೂ ಈ ಕಾವ್ಯದಲ್ಲಿ ಹೇರಳವಾಗಿವೆ.

ಉದಾಹರಣೆಗೆ, ಉತ್ತರ ದಕ್ಷಿಣ ಮಾರ್ಗಗಳ ಬಗ್ಗೆ ಹೇಳುವಾಗ ಪುರಾಣಕವಿವಿದಿತವಾದ ವಿಭಾಗಗಳನ್ನು ಹೇಳುವುದಾಗಿ ಸಾರುತ್ತಾನೆ.

'ಅಂತುಮ್ ಭೇದಮಂ ಇನಿಸು ಅರ್ಪಂತು, ಉತ್ತರ ದಕ್ಷಿಣ ಉರು ಮಾರ್ಗದ್ವಯದಾ ಚಿಂತಿತ **ಪುರಾಣಕವಿವಿದಿತಾಂತರಮಂ** ಪೇಳ್ವೆಂ ಅಜೀವ ಮಾಳ್ಕೆಯೊಳೆನ್ನಾ' ಎಂದು ಹೇಳುತ್ತಾನೆ. (ಪು. ೪೩-೨೧).

ಖಂಡ ಪ್ರಾಸ ಯತಿಗಳ ಬಗ್ಗೆ ಹೇಳುವಾಗ ಸಹ ಪುನಃ ಅವನು ಹೇಳುವುದೆಂದರೆ—

'ದೋಸಮನೆ ಗುಣದವೋಲ್ ಉದ್ಭಾಸಿಸಿ, ಕನ್ನಡದೊಳ್ ಒಲ್ದು **ಪೂರ್ವಾಚಾರ್ಯರ್ ದೇಸಿಯೆನೆನಿಱಿಸಿ** ಖಂಡಪ್ರಾಸಮುಂ ಅತಿಶಯಮಿನೆಂದು ಯತಿಯುಂ ಮಿಕ್ಕರ್' ಎಂದು.

ಇದೂ ಅಲ್ಲದೆ, ಇನ್ನೂ ಈ ಕೆಳಗಿನ ಹಲವು ಪ್ರಯೋಗಗಳನ್ನೂ ನೋಡುವುದು—

'ದೊರಕೊಂಡಿರೆ ಸೊಗಯಿಸುಗುಂ **ಪುರಾಣಕಾವ್ಯ** ಪ್ರಯೋಗದೊಳ್'—

'ಇಂತುಂ **ಪುರಾಣಕವಿಗಳ ಸಂತತ**ಗತವಾರ್ಗ್ಗ ಗದಿತ ದೋಷಂಗಳುಮಂ **ಚಿಂತಿಸಿ**'

'—ಎಂದು ನುಡಿವ **ಪಟಿಗನ್ನಡವುಂ**'—

'**ಪುರಾಣಕವಿ ಪ್ರಭು ಪ್ರಯೋಗಾವಿಲ** ಸದ್ಗುಣಮಂ ಆಯ್ದು' (ಪು. ೬೨) ಇತ್ಯಾದಿ.

ಇಲ್ಲೆಲ್ಲ ನೃಪತುಂಗನು ಹೇಳಿದ ಪೂರ್ವಾಚಾರ್ಯರು ಕನ್ನಡರೇ. ಇದೂ ಅಲ್ಲದೆ, ಈ ಪ್ರಾಚೀನರ ಪ್ರಶಂಸೆಯನ್ನು ಅಷ್ಟೇ ಆರ್ದ್ರಹೃದಯದಿಂದ ಕವಿಯು ಮಾಡುತ್ತಿದ್ದಾನೆ. ಪುಟ ೯, ೯೨ರಲ್ಲಿ—

'**ಪರಮಾಚಾರ್ಯರ**ವೊಲ್ ಸೈತಿರಲ್ ಅರಿಯರ್; ಕನ್ನಡಕ್ಕೆ ನಾಡವರ್ ಒವಜರ್'

ಎಂದು ಹೇಳಿದರೆ, ಅನ್ಯತ್ರ ಪ್ರಾಚೀನ ಸಂಸ್ಕಾರವಳಿದು ತನ್ನ ಕಾಲದ ಕನ್ನಡವು ಕೆಡುತ್ತಿರುವ ರೀತಿಯನ್ನು ಬಹು ವಿಷಾದದಿಂದ ಕವಿಯು ವರ್ಣಿಸುತ್ತಿದ್ದಾನೆ—

'ನೆಲಸಿದ ಕಾವ್ಯಮ್ ಕಾವ್ಯಕ್ಕೆ ಲಕ್ಷಣಮ್ ಸತತಮ್
ಎಂದೆ, **ಪಟಿಗನ್ನಡಮುಂ ಪೂಱಗಿಡಿಸಿ ನುಡಿವರ್**
ಆಗಮುಬಲಹೀನರ್ ದೇಸಿಯಲ್ಲದೆಂದು ಅಱಿದಿರ್ದುಂ'

ಪುನಃ ಪುಟ ೭, ೩೨ರಲ್ಲಿ ಕನ್ನಡ ಸಾಹಿತ್ಯರೂಪಗಳ ಬಗ್ಗೆ ಹೇಳುವಾಗ—

'ಈಗಡಿನ ನೆಗಱ್ತೆಯ ಕಬ್ಬದೊಳ್ ಒಡಂಬಡಂ ಮಾಡಿದರ್ **ಪುರಾತನ ಕವಿಗಳ್**'

ಎಂದು ಹೇಳುತ್ತಾನೆ. ಇದೂ ಅಲ್ಲದೆ, ಇದೇ ಪದ್ಯದಲ್ಲಿ ಆ ಕಾಲದ ಸಾಹಿತ್ಯರೂಪಗಳಾದ ಬೆದಂಡೆ ಮತ್ತು ಚತ್ತಾಣಗಳ ಬಗ್ಗೆ ಹೇಳುತ್ತಾನೆ —

ನುಡಿಗೆಲ್ಲಂ ಸಲ್ಲದ ಕ-
ನ್ನಡದೊಳ್ **ಚತ್ತಾಣಂ ಬೆದಂಡೆಯುಮ್** ಎಂದೀ-
ಗಡಿನ ನೆಗಱ್ತೆಯ ಕಬ್ಬದೊಳ್— ಇತ್ಯಾದಿ.

೪. ಕೊನೆಯದಾಗಿ, ನೃಪತುಂಗನು ಅನೇಕ ಪದ್ಯಗಳಲ್ಲಿ ತನಗೆ ವಂದ್ಯರಾದ ಪ್ರಾಚೀನ ಸೂರಿಗಳ ಬಗ್ಗೆಯೂ ಹೇಳಿಕೊಳ್ಳುತ್ತಾನೆ

ಪರಮಾಲಂಕಾರೋಚಿತ ವಿರಚನೆಗಳ್ ನೆಗೞ್ದುಮ್
ಆರ ವದನೋದರದೊಳ್; ನೆರಮ್ ಅಕ್ಕೆ ಆ **ಪರಮ**
ಕವೀಶ್ವರರ್ ಎಮಗೆ ಈ ಕೃತಿಯೊಳ್—

ಇಲ್ಲಿ ಉಕ್ತರಾದ **ಪರಮ ಕವೀಶ್ವರರು** ಸಂಸ್ಕೃತದವರೆಂದು ಆಕ್ಷೇಪವೆತ್ತಬಹುದಾದರೂ, ಈ ಮುಂದಿನ ಕೆಲವು ಪದ್ಯಗಳಲ್ಲಿ ಶುದ್ಧ ಕನ್ನಡರಾಗಿರುವ ಪೂರ್ವಸೂರಿಗಳ ಬಗ್ಗೆ ಹೇಳುತ್ತಿದ್ದಾನೆ. ಸಂಸ್ಕೃತದ ಪ್ರಾಚೀನ ಕವಿಗಳಾದ 'ಪ್ರಣುತ ಗುಣಸೂರಿ, ನಾರಾಯಣ, ಭಾರವಿ, ಕಾಳಿದಾಸ, ಮಾಘಾ'ದಿಗಳನ್ನು ಹೇಳಿ, ಅನಂತರ ಕನ್ನಡದ ಚಿರಂತನಾಚಾರ್ಯರ್ಕಳನ್ನು ಈ ರೀತಿ ವಿವರಿಸುತ್ತಾನೆ:—

ಕಾವ್ಯಪ್ರಪಂಚದಲ್ಲಿಯ ಪೂರ್ವಾಚಾರ್ಯರೆಂದರೆ -

ಪರಮ ಶ್ರೀವಿಜಯ, ಕವೀಶ್ವರ, ಪಂಡಿತ,
ಚಂದ್ರ, ಲೋಕಪಾಲಾದಿಗಳ್ ಆ ನಿರತಿಶಯ
ವಸ್ತುವಿಸ್ತರ ವಿರಚನೆ ಲಕ್ಷ್ಯಮ್ ತದ್ ಆದ್ಯಕಾವ್ಯಕ್ಕೆಂದುಮ್ (೧-೩೩)

ಅಷ್ಟೇ ಅಲ್ಲದೆ, ಇಂದು ಅನುಪಲಬ್ಧವಾದ ಕನ್ನಡ **ಗದ್ಯಸಾಹಿತ್ಯವು** ಕೂಡ ನೃಪತುಂಗನ ಕಾಲದಲ್ಲಿ ವಿಪುಲವಾಗಿ ಬಳೆದುಕೊಂಡಿತ್ತು. ಇತ್ತೀಚೆ ದೊರೆತು ೧೧ನೆಯ ಶತಕದ್ದೆಂದು ಹೇಳಲ್ಪಡುವ ವೊಡ್ಡಾರಾಧಣವು ಇದೇ ಮಾತನ್ನೇ ಸಮರ್ಥಿಸುತ್ತದೆ. ಹದಿನೇಳನೆಯ ಶತಮಾನದ ವೈಯಾಕರಣಿಯಾದ ಭಟ್ಟಾಕಲಂಕ ದೇವನು ಕೂಡ ಕನ್ನಡ ಸಾಹಿತ್ಯದಲ್ಲಿಯ ಈ ಕಾವ್ಯನಾಟಕಾದಿ ಪ್ರಾಚುರ್ಯವನ್ನೇ ತನ್ನ ಶಬ್ದಾನುಶಾಸನದಲ್ಲಿ ವಿವರಿಸುತ್ತಿದ್ದಾನೆ—

'ನ ಚ ಏಷಾ ಭಾಷಾಶಾಸ್ತ್ರಾನುಪಯೋಗಿನೀ, ತತ್ತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನಸ್ಯ ಷಣ್ಣವತಿ ಸಹಸ್ರಪ್ರಮಿತಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯ, ಅನ್ಯೇಷಾಂ ಚ ಶಬ್ದಾಗಮ ಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾ ಕಾವ್ಯ**ನಾಟಕಾ**ಲಂಕಾರ ಕಲಾಶಾಸ್ತ್ರ ವಿಷಯಾಣಾಂ.... ಉಪಲಬ್ಧಮಾನತ್ವಾತ್ '—ಇ. ಹಾಗಾದರೆ, ಈ ಕಾವ್ಯ**ನಾಟಕ**ಗಳು ಇಂದು ಎಷ್ಟು? ಉಪಲಬ್ಧವಿದ್ದ ಗದ್ಯಗ್ರಂಥಗಳ ಬಗ್ಗೆ ಹೇಳಿದಾಗ ನಾವು ಒಪ್ಪಲೇಬೇಕು. ಈ ಬಗ್ಗೆ ನೃಪತುಂಗದೇವನು ಹೇಳುವುದೇನಂದರೆ -

ಮಿಗೆ ಕನ್ನಡಗಬ್ಬಂಗಳೊಳ್-
ಅಗಣಿತಗುಣ ಗದ್ಯಪದ್ಯಸಮ್ಮಿಶ್ರಿತಮುಮ್ ।
ನಿಗದಿಸುವರ್ **ಗದ್ಯಕಥಾ**
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ ॥

ಅಂದರೆ, ಕೆಲಮಟ್ಟಿನ ಪದ್ಯ ಮತ್ತು ಗದ್ಯ ಸಮ್ಮಿಶ್ರಿತವಾದ ಕೃತಿಯನ್ನು ಚಿರಂತನಾಚಾರ್ಯರು **ಗದ್ಯಕಥೆ**ಯೆಂದು ವ್ಯಾಖ್ಯಾನಿಸುವರೆಂದು ಅಭಿಪ್ರಾಯ. ಈ ರೀತಿ ಕನ್ನಡದಲ್ಲಿ ಕ್ರಿ. ಶ. ೯ರಲ್ಲೇ ಗದ್ಯಕಥಾಸಾಹಿತ್ಯವೆಂಬುದು ವಿಪುಲವಾಗಿ ಇದ್ದಿತಲ್ಲದೆ, ಅನೇಕ ಪ್ರಭಾವಶಾಲಿಗಳಾದ ಲೇಖಕರು ಈಗಾಗಲೇ ಗದ್ಯಾಶ್ರಮ ಗುರುತಾಪ್ರತೀತಿಯನ್ನು ಕೈಕೊಂಡಿದ್ದರು. ಈ ರೀತಿ ೯ನೆಯ ಶತಮಾನದ ಮೊದಲಿಗೇ ಸುಪ್ರಸಿದ್ಧ ಗದ್ಯಗ್ರಂಥಕರ್ತರೆಂದು ಗಣ್ಯರಾದವರನ್ನೂ ಕೂಡ ನೃಪತುಂಗನು ವರ್ಣಿಸುತ್ತಿದ್ದಾನೆ. ಅವರೆಂದರೆ—

ವಿಮಳೋದಯ, ನಾಗಾರ್ಜುನ,
ಸಮೇತ ಜಯಬಂಧು ದುರ್ವಿನೀತಾದಿಗಳ್ ಈ
ಕ್ರಮದೊಳ್ ನೆಗಳ್ಚಿ **ಗದ್ಯಾ**-
ಶ್ರಮ ಗುರುತಾಪ್ರತೀತಿಯಂ ಕೆಯ್ಕೊಂಡರ್ ॥ (ಪುಟ ೬ ೨೯)

ಹಾಗಾದರೆ, ಈ ವಿಮಲೋದಯಾದಿಗಳು ಯಾರು ?

ಆದ್ದರಿಂದ, ಕ್ರಿ. ಶ. ೯ನೆಯ ಶತಮಾನದ ಪೂರ್ವದಲ್ಲೇ

೧. ಬರುವ ಶಾಸನಗಳಲ್ಲಿಯ ಶುದ್ಧ ಕಾವ್ಯಶೈಲಿಯ ಮೂಲಕವಾಗಿಯೂ,

೨. ಭಾರತದ ಇತರ ಸಾಹಿತ್ಯಗಳಲ್ಲಿಯಂತೆ ಕನ್ನಡದಲ್ಲೂ ಒಂದು ಬೌದ್ಧಯುಗವು ಇರಬಹುದಾದ್ದರಿಂದಲೂ,

೩. ಇನ್ನೂ ಇತ್ತೀಚಿನ ವರೆಗೆ ಅನೇಕ ಪ್ರಾಚೀನ ಗ್ರಂಥಗಳು ದೊರಕುತ್ತಿರುವುದರಿಂದಲೂ,

೪. ೯ನೆಯ ಶತಮಾನದ ಕವಿರಾಜಮಾರ್ಗವು ಸ್ವತಃ ಶಾಸ್ತ್ರಗ್ರಂಥವಾಗಿರುವುದರಿಂದಲೂ,

೫. ಆ ಗ್ರಂಥದಲ್ಲೂ ಪ್ರಾಚೀನ ರಾಮಾಯಣಾದಿ ಗ್ರಂಥಗಳ ದೃಷ್ಟಾಂತಗಳು ದೊರಕುತ್ತಿರುವುದರಿಂದಲೂ,

೬. ಅಲ್ಲಲ್ಲಿ ಕವಿಯೇ ಅನೇಕ ಸಲ ‘ಪಟಿಗನ್ನಡ’ ‘ಪ್ರಾಚೀನ ಮಾರ್ಗ’ ಮೊದಲಾದ ಪ್ರಯೋಗಗಳನ್ನು ಹೇಳುತ್ತಿರುವುದರಿಂದಲೂ,

೭. ತನ್ನ ಕಾಲದಲ್ಲಿಯ ಬೆದಂಡೆ, ಚೆತ್ತಾಣ ಮೊದಲಾದ ಹಲವು ಇಂದಿಗೆ ಉಪಲಬ್ಧವಿಲ್ಲದ ಸಾಹಿತ್ಯರೂಪಗಳನ್ನು ಹೇಳುತ್ತಿರುವುದರಿಂದಲೂ,

೮. ಮತ್ತು ಕೊನೆಯದಾಗಿ, ಗದ್ಯಸಾಹಿತ್ಯವೆಂಬುದೊಂದು ತನ್ನ ಕಾಲದಲ್ಲೇ ಇದ್ದಿತೆಂಬುದಕ್ಕೆ ಸಾಕ್ಷ್ಯವಾಗಿ—‘ನಿಗದಿಸುವರ್ ಗದ್ಯಕಥಾಪ್ರಗೀತಿಯಿಂ’, ‘....ಈ ಕ್ರಮದೊಳ್ ನೆಗಟ್ಚಿ **ಗದ್ಯಾಶ್ರಮುಗುರುತಾಪ್ರತೀತಿಯಂ** ಕೆಯ್ಕೊಂಡರ್’—ಎಂದು ಮೊದಲಾಗಿ ಹೇಳುವುದರಿಂದಲೂ, ಕ್ರಿಸ್ತಶಕ ೯ಕ್ಕೂ ಮೊದಲು ಕನ್ನಡದಲ್ಲಿ ತುಂಬಾ ಹುಲುಸಾದ ಸಾಹಿತ್ಯವಿದ್ದಿತೆಂದು ನಿರ್ವಿವಾದವಾಗಿ ಹೇಳಬಹುದಾಗಿದೆ.

‘ಕನ್ನಡ’ವೆಂದರೇನು ?

ಕನ್ನಡ ಪದದ ವ್ಯುತ್ಪತ್ತಿ :—ಈ ವರೆಗೆ ನಾವು ಕನ್ನಡ ನಾಡು-ನುಡಿ ಮತ್ತು ಸಾಹಿತ್ಯಗಳ ಪ್ರಾಚೀನತೆಯನ್ನು ಕೆಲಮಟ್ಟಿನ ವಿವರದಲ್ಲಿ ನೋಡಿದೆವು. ಕನ್ನಡದ ಈ ಪ್ರಾಚೀನತೆಯ ಚರ್ಚೆಯನ್ನು ಇಷ್ಟೊಂದು ವಿವರಿಸಿದ ಮೇಲೆ—‘ಕನ್ನಡವೆಂದರೇನು? ಅದರ ವ್ಯುತ್ಪತ್ತಿ ಹೇಗೆ?’—ಎಂದು ಕೇಳುವುದು ನಿಜವಾಗಿಯೂ ಸೋಜಿಗದ ಮಾತಾಗಿ ಕಾಣಿಸುತ್ತದೆ. ಇಡೀ ರಾಮಾಯಣವನ್ನೆಲ್ಲ ಕೇಳಿ, ಕೊನೆಗೆ ಸೀತಾದೇವಿ ರಾಮಚಂದ್ರನಿಗೆ ಏನಾಗಬೇಕೆಂದು ಗ್ರಾಮ್ಯರು ಕೇಳಿದ ಹಾಗೆಯೇ ಈ ಪ್ರಶ್ನೆಯಿದೆ. ಆದರೂ, ಈ ವರೆಗೆ ಈ ಪ್ರಶ್ನೆಯ ಬಗ್ಗೆ ನಡೆದ **ಚರ್ಚೆಯ** ದೃಷ್ಟಿಯಿಂದ ವಿಚಾರ ಮಾಡಿದರೆ, ಇದರಲ್ಲಿ ಆಶ್ಚರ್ಯವೇನೂ ಕಾಣುವದಿಲ್ಲ. ಹಿಂದಿನ ರಾಜಶೇಖರಾದಿಗಳು ಹೋಗಲಿ; ಡಾ. ಕಾಲ್ಡ್ವೆಲ್, ಗುಂಡರ್ಟ ಮೊದಲಾದವರು ಪ್ರಾರಂಭಿಸಿದ ಸ್ಥಾನದಿಂದ ಇನ್ನೂ ಬಹಳ ದೂರದ ನಿಶ್ಚಿತ ಸ್ಥಾನವನ್ನು ನಾವು ಮುಟ್ಟಿಲ್ಲ ಎಂದೇ ಹೇಳಬೇಕು ಇಡೀ ಕನ್ನಡ ಭಾಷಾಶಾಸ್ತ್ರ ಪ್ರಪಂಚದಲ್ಲಿ ಈ ಪ್ರಶ್ನೆಯು ಕೆರಳಿಸಿದಷ್ಟು ಕುತೂಹಲ, ಚರ್ಚೆ, ಆವೇಶ ಮತ್ತು ದೂಳಿಗಳನ್ನು ಮತ್ತಾವ ಪ್ರಶ್ನೆಯೂ ಎಬ್ಬಿಸಿಲ್ಲ ಈ ಪ್ರಶ್ನೆಯ ಚರ್ಚೆಯು ಒಂದು ಕಾಲಕ್ಕೆ ಪಂಡಿತರ ಅಭ್ಯಾಸಕ್ಕೆ ಅನುವಾಯಿತು; ಕವಿಗಳಿಗೆ ಕಾವ್ಯವಸ್ತುವಾಯಿತು; ನಾಟಕಕಾರರಿಗೆ ವಿಡಂಬನ ವಸ್ತುವಾಯಿತು; ‘ಕೈ-ಬಾಯ್’ ಸಾಮರ್ಥ್ಯವಿದ್ದವರಿಗೆ ತಮ್ಮ ತಮ್ಮ ಬಲವನ್ನೂ

ಪ್ರದರ್ಶಿಸಲಿಕ್ಕೆ ಅವಸರವೊದಗಿತು ದಿವಂಗತ ಪ್ರಿನ್ಸಿಪಲ್ ಬಿ. ಎಂ. ಶ್ರೀ ಅವರು ಈ 'ಕನ್ನಡದ ಬಿಡುಗಡೆ' ಗಾಗಿ ಹಾತೊರೆದ ಪ್ರಯತ್ನವೆಲ್ಲವೂ 'ಣತ್ವೋದ್ಧರಣ' 'ಮಹಾಕ್ಷುದ್ರಕಾವ್ಯ'ದ ಕಾವ್ಯವಸ್ತುವಾಯಿತು. ಈ ಪ್ರಶ್ನೆಯ ಚರ್ಚೆಯಲ್ಲಿ ಭಾಗವಹಿಸಿದ ಹಲವಾರು ಪಂಡಿತರ ಆವೇಶ-ರಭಸಗಳನ್ನು ಕಂಡು ಮಹಾಕವಿ ಪುರುಷಸಂಸ್ಪತಿ ಜಿ. ಪಿ ರಾಜರತ್ನಮ್ ಅವರು 'ಕರ್ಣ–ನಾಟಕ ಪುರಾಣ'ವನ್ನು ಗ್ರಥಿಸಿ ಕರ್ನಾ(ರ್ಣಾ)ಟಕ ಪದಗಳಲ್ಲಿ ಯಾವುದು ಯುಕ್ತ? 'ನ'ಕಾರವು ಯುಕ್ತವೇ? ಇಲ್ಲವೆ, ಮೂರ್ಧನ್ಯಘಟಿತ 'ಣ'ಕಾರವು ಯುಕ್ತವೇ? ಎಂಬುದನ್ನು ತನ್ಮಮೇ ಆದ ಅದ್ಭುತ ಕಟುಕಿಯ ರೀತಿಯಲ್ಲಿ ವ್ಯಂಗ್ಯವಾಗಿ ಚಿತ್ರಿಸಿದರು.

ಇದೇ ಪ್ರಶ್ನೆಯ ಈ ರಭಸ–ಗೊಂದಲಗಳಿಗಾಗಿ ಬೆರಗಾಗಿ **ನಿಬಂಧನಕಾರರಾದ** ಕ್ರಾಂತಿಪ್ರಿಯರು ತಮ್ಮ 'ಇಂದಿನ ಕರ್ನಾಟಕ'ದಲ್ಲಿ ಮೈಸೂರಲ್ಲಿ ಚಿಲ್ಲರೆ ಖಾದ್ಯವಾದ 'ಬೋಂಡ'ವನ್ನು ಯಾವ ರೀತಿ ಸಂಬೋಧಿಸಬೇಕು?–ಬೋನ್ಡ–ಎಂದೇ?—ಇಲ್ಲವೇ ಬೋಣ್ಡ–ಎಂದೇ?–ಎಂದು **ಕಹಿಯಾಗಿ** ಕೇಳಿದರು.

ಮಂಗನ ಮಲ್ಲಿನಾಥತನದ ಶ್ರೀರಂಗರು ತಮ್ಮದೇ ಆದ ದೃಷ್ಟಿಯಿಂದ 'ಕರ್ಣಾಟ' ಎಂದರೆ 'ಕಪಿಗಳ ನಾಡು' 'ಹನುಮನುದಿಸಿದ ನಾಡು' ಎಂಬ ಸುಪ್ರಸಿದ್ಧವಾದ ಹಾಡಿನ ಮಾತೇ ಇದಕ್ಕೆ ಆಧಾರ– ಎಂದು ಮೊದಲಾಗಿ 'ಮಂಗ–ಪಂಥ'ವನ್ನು ವಿನೋದಪೂರ್ವಕವಾಗಿ ಪ್ರಸ್ತಾಪಿಸಿದರು. ಸುಪ್ರಸಿದ್ಧ ಪಂಡಿತರೂ, ನಾಟಕಕಾರರೂ ಆದ ಪ್ರಿನ್ಸಿಪಲ್ ವಿ. ಕೃ. ಗೋಕಾಕ ಅವರು ಇದನ್ನೇ ನಾಟ್ಯವಸ್ತುವನ್ನಾಗಿ ಮಾರ್ಪಡಿಸಿಕೊಂಡು ತಮ್ಮ ಅದ್ಭುತ ವ್ಯಂಗ್ಯನಾಟಕವಾದ 'ವಿಮರ್ಶಕ ವೈದ್ಯ'ದಲ್ಲಿ ಊಹಾಪೋಹರಾಯರನ್ನು ಸೃಷ್ಟಿಸಿದರು — ಸರಿಯಾಗಿ ಮಧ್ಯಾಹ್ನದ ಸಮಯಕ್ಕೆ, ಎದ್ದು ಕೂತಂಥ ಜನರ ಕಣ್ಣು ಕೂಡ ತಾವಾಗಿಯೇ ಮುಚ್ಚುತ್ತಿರುವಾಗ, ಸರಿಯಾಗಿ ಮುಂಬಯಿ ಕೇಂದ್ರದಿಂದ ಶ್ರೀಮಾನ್ ಊಹಾಪೋಹರಾಯರ 'ಉತ್ಪತ್ತಿಶಾಸ್ತ್ರ'ದ ಪ್ರಚಂಡ ಭಾಷಣವು ಪ್ರಾರಂಭವಾಗುತ್ತದೆ. "ಕರುನಾಡು—ಕರ್–ನಾಡು"ಇತ್ಯಾದಿ.

ಈ ಕುರುಕುರು ಸಪ್ಪಳವನ್ನು ಕೇಳಿ, ರೇಗಿಗೆದ್ದ ವಿಮರ್ಶಕ ವೈದ್ಯ ದಿನಕರನು ಕಿರುಚಿ ಕೇಳುತ್ತಾನೆ— "ಇದೇನು ವ್ಯುತ್ಪತ್ತಿಶಾಸ್ತ್ರವೋ? ಉತ್ಪತ್ತಿಶಾಸ್ತ್ರವೋ?"—ಎಂದು.

ಹೀಗಾಗಿ, ಈ ಪ್ರಶ್ನೆಯ ಇಂದಿನ ಸ್ಥಿತಿ, ಈ ರೀತಿ ಕಾವ್ಯಗಳ ವಸ್ತುವಾಗುವಂತಾಗಿದೆಯೇ ಹೊರತು, 'ಬಿಡುಗಡೆ' ಮಾತ್ರ ಇನ್ನೂ ಬಂದಿಲ್ಲ. ಕನ್ನಡದ ಸುಪ್ರಸಿದ್ಧ ವರಕವಿಗಳಾದ ಬೇಂದ್ರೆ ದತ್ತರಾಯರು ತಮ್ಮ ಮೊನ್ನೆಮೊನ್ನಿನ ಒಂದು ಅಣಕ–ಗಂಭೀರ ಪ್ರಬಂಧದಲ್ಲಿ ಬಂದು ಮುಟ್ಟಿನ ಮುಟ್ಟವೆಂದರೆ— '**ಕಂ ಅಂದರೇನು? ಹಾಗಾದರೆ—ಕಿಂ—ಎಂದು**' ಮಾತ್ರ.

ಈ ರೀತಿಯಾಗಿ, ಈ 'ಕನ್ನಡ' ಪದದ ಅರ್ಥವೇನು? ಅದರ ನಿರುಕ್ತ ಹೇಗೆ? ಎಂಬ ಬಗ್ಗೆ ಇನ್ನೂ ನಿಶ್ಚಿತವಾದ ಮತ್ತು ಸರ್ವಜನಗ್ರಾಹ್ಯವಾದ ಅಭಿಪ್ರಾಯವು ಬರಲಿಲ್ಲವೆಂದೇ ಹೇಳಬೇಕಾಗಿದೆ. ಹೀಗಾಗಿ, ಈ ವಿಷಯವು, **ಶ್ರೀ. ರಾಜರತ್ನಮ್ ಅವರಿಗೆ 'ಕಾವ್ಯ-ವಸ್ತುವಾಯಿತು'; ಕ್ರಾಂತಿಪ್ರಿಯರಿಗೆ 'ನಿಬಂಧನ–ಸಾಮಗ್ರಿಯಾಯಿತು'; ಶ್ರೀರಂಗರಿಗೆ 'ಮಂಗನ ಮಲ್ಲಿನಾಥ'ದ ವಿಷಯವಾಯಿತು; ವಿನಾಯಕರಿಗೆ 'ವ್ಯಂಗ್ಯ-ನಾಟಕ'ದ ಆಧಾರವಾಯಿತು; ವರಕವಿ ಬೇಂದ್ರೆ ಅವರಿಗೆ ಅಣಕಗಂಭೀರ ಪ್ರಬಂಧದ ವಸ್ತುವಾಗಿ ಪೂರ್ವಪದದ 'ಕಂ–ಅಂದರೆ–ಕಿಂ' ಎಂದು ಮಾತ್ರವಾಯಿತು.** ಇದನ್ನು ನೋಡಿದಾಗ, ಪರಭಾಷೆಯವರು 'ಕನ್ನಡ'ವೆಂದರೆ ಇಟ್ಟುಕೊಂಡ ಅರ್ಥವು ಗಮನಕ್ಕೆ ಬಾರದಿರದು. ಮರಾಠಿಯಲ್ಲಿ 'ಕಾನಡಿ' ಎಂದರೆ 'ತಿಳಿಯದುದು' 'ಅರ್ಥವಾಗದ್ದು' ಎಂದು ಅರ್ಥ. 'ತೇ ಕಾಯ್ ಬುವಾ ಕಾನಡೀ ಆಹೇ' ಅಂದರೆ 'ಅದು ನಮಗೆ ಅರ್ಥವಾಗದ ಮಾತು' ಎಂದರ್ಥ. ಇದೇ ಅರ್ಥದಲ್ಲೇ

ಶ್ರೀ. ಜ್ಞಾನೇಶ್ವರರು ಕೂಡ—'ಹೇ ಪರಿಸತಾಂವರೀ ಕಾನಡೇ ತರಿಜಾಣ ಪಾಂ ಪಾರ್ಥ ಉಫಡೇ'—ಎಂದು ಈ ಅರ್ಥದಲ್ಲೇ ಉಪಯೋಗಿಸಿದ್ದಾರೆ.* ತಮಿಳಿನಲ್ಲಿಯಂತೂ 'ರಂಬ ಕರ್ಣಾಟ ಮಾಯಿದಿ' ಅಂದರೆ 'ತುಂಬಾ ಅಸ್ತವ್ಯಸ್ತ ತಾರಗಬೀರಗ'ವಾದದ್ದು ಎಂದು ಅರ್ಥವಂತೆ!

ಹಾಗಾದರೆ, ಪುನಃ ಅದೇ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ— ಕನ್ನಡವೆಂದರೇನು? ಈ ಪದದ ವ್ಯುತ್ಪತ್ತಿ ಹೇಗೆ?—

ಮೇಲೆ ವಿವರಿಸಿದ ಮಾತುಗಳ ವಿನೋದವೇನೇ ಇರಲಿ, ಈ ವಿಷಯದಲ್ಲಿ ಅನೇಕ ಪಂಡಿತರು, ಮೇಧಾವಿಗಳು ಮತ್ತು ಬಹುಶ್ರುತರು ಕೃಷಿ ಮಾಡಿದರು; ಮಾಡುತ್ತಿದ್ದಾರೆ. ಈ ರೀತಿ ಕನ್ನಡಿಗರಿಗೆ ತಮ್ಮದೇ ಆದ 'ಕನ್ನಡದ ನೆಲೆ'ಯನ್ನು ತಿಳಿಸಿಕೊಡಲು ಹೆಣಗುತ್ತಿರುವ ಈ ಪ್ರತಿಭಾವಂತರೆಲ್ಲರೂ ವಂದ್ಯರು; ಜನತೆಯ ಕೃತಜ್ಞತೆಗೆ ಪಾತ್ರರು. ಅವರು ಗೈದ ಸೇವೆಯ ಕೊನೆ ಏನೇ ಆಗಲಿ; ಅವರು ವ್ಯಯಿಸಿದ ಶ್ರಮಕ್ಕಾಗಿ ನಾವೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕು. ಹಾಗಾದರೆ, ಈ ಪ್ರಶ್ನೆಯ ಬಗ್ಗೆ ಇರುವ ಚರ್ಚೆ ಏನು? ಅದರ ದಾರಿ ಎಂತು? ಸ್ವಲ್ಪದರಲ್ಲಿಯೇ ನೋಡೋಣ

ಮೊದಲನೆಯದಾಗಿ, 'ಕನ್ನಡ'–ವೆಂದರೇನು? ಈ ಪದವನ್ನು ನಾವೇ ಹಲವಾರು ರೀತಿಯಲ್ಲಿ ಪ್ರಯೋಗಿಸುತ್ತಿದ್ದೇವೆ. 'ನಾನು ಈ ಪುಸ್ತಕವನ್ನು **ಕನ್ನಡದಲ್ಲಿ** ಬರೆಯುತ್ತಿದ್ದೇನೆ' — ಎಂದಾಗ 'ಕನ್ನಡ' ಪದವು **ಭಾಷೆಯನ್ನು ನಿರ್ದೇಶಿಸುತ್ತಿದೆ.** 'ಇವರು ಕನ್ನಡರು; ಇವರು ಮರಾಠರು'—ಎಂದು ಮೊದಲಾಗಿ ಹೇಳಿದಾಗ ಇದೇ 'ಕನ್ನಡ' ಪದವು **'ಜನಾಂಗ–ಜನಪದ' ಸೂಚಕವಾಗುತ್ತಿದೆ.** ಇದರಂತೆಯೇ, ಅನೇಕ ಸಲ ಈ ಪದವು 'ಕನ್ನಡದೊಳ್' ಎಂದು ಮೊದಲಾಗಿ **ದೇಶವಾಚಕವಾಗಿ** ಪ್ರಾಚೀನ ಕವಿಗಳಿಂದ ಪ್ರಯುಕ್ತವಾದದ್ದನ್ನು ಕಾಣುತ್ತೇವೆ. ಉದಾಹರಣೆಗೆ, ೯ನೆಯ ಶತಮಾನದ ನೃಪತುಂಗದೇವನು ತನ್ನ 'ಕವಿರಾಜಮಾರ್ಗ'ದಲ್ಲಿ ಕನ್ನಡನಾಡಿನ ವರ್ಣನೆಯನ್ನು ಮಾಡುವಾಗ— 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ **ಕನ್ನಡದೊಳ್** ಭಾವಿಸಿದ ಜನಪದಂ' ಎಂದೂ, 'ಅದರೊಳಗಂ ಕಿಸುವೊಳಲ್, ಆ ವಿದಿತ ಮಹಾಕೊಪಣನಗರದಾ ಸದಭಿಸ್ತುತಮಪ್ಪ ಒಕ್ಕುಂದದ ನಡುವಣ ನಾಡೆ ನಾಡೆ **ಕನ್ನಡದ ತಿರುಳ್**' ಎಂದೂ ದೇಶವಾಚಕವಾಗಿ ಹೇಳುತ್ತಾನೆ. ಇದರಂತೆಯೇ, ೧೨೩೫ರಲ್ಲಿಯ ಆಂಡಯ್ಯನು '**ಕನ್ನಡಮೆನಿಪ್ಪಾನಾಡು ಚೆಲ್ವಾಯಿತು**' ಎಂದೂ, ೧೩ನೆಯ ಶತಕದ ಕೇಶಿರಾಜಾದಿಗಳು ತದ್ಧಿತ ಪ್ರತ್ಯಯ ಸಂದರ್ಭದಲ್ಲಿ ಕನ್ನಡಿಗ ಪದವು ಈ ದೇಶವಾಚಕವನ್ನೇ ಸೂಚಿಸುವಂತೆಯೂ ಹೇಳುತ್ತಾರೆ. ಶ್ರೀ. ಡಿ. ವಿ. ಗುಂಡಪ್ಪನವರ ಪ್ರಕಾರ 'ಕನ್ನಡ' ಪದವು 'ಕುಲ'ವಾಚಕವಾಗಿಯೂ ಇದೆ ಯಾಕೆಂದರೆ, ಶ್ರೀಚೆನ್ನಬಸವೇಶ್ವರರು ತೆಂಕಣನಾಡಿನ ಕುಲಗಳನ್ನು ಹೇಳುವಾಗ—'**ಕನ್ನಡ,** ಕಮ್ಮೆ, ವಾಣಿಜ್ಯ, ತಿಗುಳ' ಎಂದು ಹೇಳುತ್ತಾರೆ. ಶ್ರೀ. ನಿಜಗುಣಶಿವಯೋಗಿಗಳು 'ವಿವೇಕಚಿಂತಾಮಣಿ'ಯಲ್ಲಿ '**ಕನ್ನಡ,** ಕಮ್ಮೆ, ತೆಲುಗ, ತಿಗುಳ' ಎಂದು ಹೇಳುತ್ತಾರೆ. ೧೩ನೆಯ ಶತಕದ ಚೌಂಡರಸು ತಾನು 'ಕನ್ನಡಿಗ **ಕುಲ**'ದವನೆಂದು ಹೇಳಿಕೊಳ್ಳುತ್ತಾನೆ. ವಿಜಯನಗರದ ಅಮಾತ್ಯ ಲಕ್ಷ್ಮೀಧರನೂ 'ಕನ್ನಡಿಗ ಕುಲದವನೇ'. ಶ್ರೀವಿದ್ಯಾರಣ್ಯರು 'ಕನ್ನಡ' ಕುಲದವರು. ಈಗಲೂ ಮಹಾರಾಷ್ಟ್ರದಲ್ಲಿ 'ಕಾನಡೆ' ಮನೆತನಗಳಿವೆ.

---

* ಶಂ. ಬಾ. ಜೋಶಿ, ಕ. ನೆ.

ಆದ್ದರಿಂದ, ಕನ್ನಡವೆಂದರೆ ಭಾಷೆ, ಜನ, 'ದೇಶ' ಮತ್ತು ಕುಲ ಎಂಬ ನಾಲ್ಕು ವಿಷಯಗಳನ್ನೂ ಸೂಚಿಸುವಂತಾಯಿತು. ಅಂದಮೇಲೆ ನಿಜವಾಗಿ ಈ ಪದದ ಅರ್ಥವೇನು? ಅದು ಭಾಷೆಯೇ? ಜನವೇ? ನಾಡೇ?—ಯಾವುದು?—ವಿಚಾರ ಮಾಡಬೇಕು. ಇದರ ಇತ್ಯರ್ಥವಾಗಬೇಕಾದರೆ, ನಾವು ಕನ್ನಡ ಪದದ ನಿರುಕ್ತವನ್ನು ಅರಿತುಕೊಳ್ಳಬೇಕು.

'ಕನ್ನಡ'ದ ವ್ಯುತ್ಪತ್ತಿ

'ಕನ್ನಡ' ಇಲ್ಲವೆ 'ಕರ್ನಾ(ರ್ಣಾ)ಟಕ'—ಈ ಪದಗಳ ವ್ಯುತ್ಪತ್ತಿ ಎಂತು?—ಎಂದು ವಿಚಾರಿಸಿದರೆ, ಇದರಲ್ಲಿ ಮೂಲತಃ **ಎರಡು** ಪಂಗಡಗಳಿವೆ.

ಹಲವರ ಪ್ರಕಾರ 'ಕನ್ನಡ' ಪದವು **ಸಂಸ್ಕೃತ 'ಕರ್ಣಾ(ರ್ನಾ)ಟಕ' ಪದದ ತದ್ಭವವೆಂತಲೂ, ಈ 'ಕರ್ಣಾ(ರ್ನಾ)ಟಕ' ಪದದ ವ್ಯುತ್ಪತ್ತಿಯೇ ಮುಖ್ಯವಾದುದೆಂತಲೂ ಹೇಳುತ್ತಾರೆ.** ಆದ್ದರಿಂದ, ಇವರ ಪ್ರಕಾರ 'ಕರ್ನಾಟಕ' ಪದದಿಂದ ಕನ್ನಡವು ಹುಟ್ಟಿಕೊಂಡಿತು. ೧೩ನೆಯ ಶತಮಾನದ ಕೇಶಿರಾಜನು ಕೂಡ, ತನ್ನ ತದ್ಭವ ಪ್ರಕರಣದಲ್ಲಿ 'ಕರ್ಣಾಟಕ' ಪದದಿಂದಲೇ 'ಕನ್ನಡ'ವು ಹುಟ್ಟಿಕೊಂಡಿತೆಂದು ಹೇಳುತ್ತಾನೆ.

ಹಾಗಾದರೆ, ಈ 'ಕರ್ಣಾಟಕ'ದ ನಿರುಕ್ತವಾದರೂ ಏನು?—ಇದನ್ನೂ ಕೂಡ, ಅನೇಕ ವಿಧವಾಗಿ ಪಂಡಿತರು ವಿವರಿಸುತ್ತಾರೆ.

ಕ(ರ್ಣಾ)ರ್ನಾಟಕ

೧. ಹಲವರ ಪ್ರಕಾರ 'ತುಂಬಾ ಪ್ರಸಿದ್ಧವಾದ ನಾಡು'—ಎಂಬರ್ಥದಲ್ಲಿ ಈ 'ಕರ್ಣಾಟಕ' ಪದವು ಸಿದ್ಧವಾಯಿತು. 'ಶಬ್ದರತ್ನಾವಲಿ'ಯ ಪ್ರಕಾರ—

   'ಕರ್ಣೇಷು ಅಟತಿ, **ಪ್ರಭೂತಯಶಸ್ವಿನಃ ಏತದ್ದೇಶಸ್ಥಃ ರಾಜ್ಞಃ**–ಗುಣಾದಿಕೀರ್ತನೇನ ಸರ್ವೇಷಾಂ ಕರ್ಣೇಷು ಭ್ರಮತೀತಿ — ಕರ್ಣ + ಅಟ್ + ಅಚ್—ಸ್ವನಾಮ ಖ್ಯಾತದೇಶ ವಿಶೇಷಃ' — ಎಂದು ಅರ್ಥ.

೨. ಕ್ರಿ. ಶ. ೧೩೫೯ರ ಕೇಶವವರ್ಣಿ ಎಂಬ ಜೈನಪಂಡಿತನ ಪ್ರಕಾರ ಭೇದನಾರ್ಥಕ ಕರ್ಣ ಧಾತುವಿನಿಂದ ಈ ಪದವು ಹುಟ್ಟಿತು. ಅಂದರೆ ದಿವ್ಯಭಾಷೆಯಾದ ಸಂಸ್ಕೃತದಿಂದ ಬೇರೆಯಾಗಿ ವ್ಯವಹಾರದಲ್ಲಿರುವ ಭಾಷೆಯಾದ ಕಾರಣ 'ಕರ್ಣಾಟ'—ಎಂಬ ಹೆಸರು ಬಂದಿತೆಂದು ಇವನ ಅಭಿಪ್ರಾಯ.*

೩. ಕ್ರಿಸ್ತಶಕ ಸುಮಾರು ೧೭೦೦ರಲ್ಲಿ ಇದ್ದಿರಬಹುದಾದ 'ವಿಶ್ವಗುಣಾದರ್ಶ'ದ ಕರ್ತೃ ವೆಂಕಟಾಧ್ವರಿಯ ಪ್ರಕಾರ ಮೇಲಿನ ಮೊದಲನೆಯ ಅಭಿಪ್ರಾಯದಂತೆಯೇ, **ಸುಪ್ರಸಿದ್ಧವಾದ** ನಾಡು ಎಂದರ್ಥ—

   'ಕರ್ಣಾಟ ದೇಶೋಯಃ ಪೂರ್ವಂ ಕರ್ಣದೇಶಮಭೂಯತ್ ।
   ಸಏಷ ಸಾಂಪ್ರತಂ ಪಶ್ಯ ಚಕ್ಷುಷೋ ಭೂಷಣಾಯತೇ ॥

* ಈ ಅಭಿಪ್ರಾಯ ಸಂಗ್ರಹಕ್ಕಾಗಿ ಶ್ರೀ ಶಂ. ಬಾ. ಜೋಶಿ ಅವರ 'ಕನ್ನಡದ ನೆಲೆ' ಪುಟ ೫೩ರಿಂದ ನೋಡುವುದು.

ಆದರೆ, ಮೇಲಿನ ಅಭಿಪ್ರಾಯಗಳೆಲ್ಲವೂ ಕೇವಲ ಕವಿಕಲ್ಪನೆಗಳೆಂದು ಹೇಳಿ, ಪ್ರಾ. ವಿ. ವಿ. ರಾ. ಬ. ಆರ್. ನರಸಿಂಹಾಚಾರ್ಯ ಅವರು 'ಕನ್ನಡ'ವೇ ಮೂಲಪದವೆಂದು ಸೂಚಿಸುತ್ತಾರೆ. ಯಾಕಂದರೆ, 'ಕರ್ಣಾಟ'ವು ಸುಪ್ರಸಿದ್ಧವಾಗಿ 'ಕರ್ಣಗಳಲ್ಲಿ ಅಟನ' ಮಾಡುವವರೆಗಾದರೂ, ಈ ದೇಶಕ್ಕೆ ಇದ್ದ ಹೆಸರು ಯಾವುದು? ಎಂಬ ಪ್ರಶ್ನೆಗೆ ಇದರಿಂದ ಸಮಾಧಾನವಿಲ್ಲ.

೪. ಈ 'ಕರ್ಣಾಟ'ದ ಬಗ್ಗೆಯೇ, ಇನ್ನೂ ಒಂದು ಅಭಿಪ್ರಾಯವೆಂದರೆ 'ಇದು ಕರ್ಣನ ಅಟನದ ಪ್ರದೇಶ. ಕರ್ಣನು ವನವಿಹಾರಕ್ಕಾಗಿ, ಆಟ-ಬೇಟೆಗಳಿಗಾಗಿ ಈ ಕಾಡಿಗೆ ಬರುತ್ತಿದ್ದನಂತೆ!'

೫. ಇದರಂತೆಯೇ, ಸ್ಕಂದಪುರಾಣದಲ್ಲೂ ಕೂಡ, ಈ ನಾಡಿನಲ್ಲಿ 'ಕರ್ಣಾಟ' ಎಂಬ ರಾಕ್ಷಸನಿದ್ದು, ಅವನು ಬ್ರಾಹ್ಮಣರನ್ನು ಪೀಡಿಸಿ, ಕೊನೆಗೆ ನಷ್ಟಹೊಂದಿದನು—ಎಂದು ವೊದಲಾಗಿದ್ದುದರಿಂದ ಈ 'ಕರ್ಣಾಟ' ರಾಕ್ಷಸನಿಂದ ಈ ನಾಡಿಗೆ ಹೆಸರು ಬಂದಿತೆಂದು ಅಭಿಪ್ರಾಯ.

ಆದರೆ, ಈ ಅಭಿಪ್ರಾಯವನ್ನು ನಂಬಬೇಕೆಂದರೆ, **ಎರಡು** ಪ್ರಶ್ನೆಗಳು ನಮ್ಮನ್ನು ಬಾಧಿಸುತ್ತವೆ. ಒಂದು—ಕೇವಲ ಒಬ್ಬ ವ್ಯಕ್ತಿಯ ಇಲ್ಲವೆ ಒಬ್ಬ ರಾಕ್ಷಸನ ಹೆಸರಿನಿಂದ ಈ ರೀತಿ ಒಂದು ಇಡೀ ನಾಡಿಗೇ ಹೆಸರು ಬರಬಹುದೇ?—ಹಾಗೆ ಬರುವುದೇ ಆದರೆ, ಈ 'ಕರ್ಣಾಟ' ರಾಕ್ಷಸನು ಅಷ್ಟರಮಟ್ಟಿಗೆ ಸು ಇಲ್ಲವೆ ಕು—ಪ್ರಸಿದ್ಧನಾಗಿದ್ದನೇ? – ಸ್ಕಂದಪುರಾಣವನ್ನು ಬಿಟ್ಟು ಉಳಿದ ಯಾವ ಕಡೆಗೆ ಇಷ್ಟು ದೊಡ್ಡ ರಾಕ್ಷಸನ ವರ್ಣನೆಯಿದೆ? ಇತ್ಯಾದಿ. ಎರಡನೆಯದಾಗಿ, 'ಕರ್ಣಾಟ'ನಿಗೇ ಒಂದು ನಾಡು ಹೋಗುವುದಿದ್ದರೆ, 'ರಾವಣಾದಿ' ಅಗ್ರೇಸರರ ಗತಿ ಏನು? –

೬. ಆದ್ದರಿಂದ, ಮಹಾರಾಷ್ಟ್ರದ ಸುಪ್ರಸಿದ್ಧ ಸಂಶೋಧಕರಾದ ಶ್ರೀ. ರಾಜವಾಡೆ ಅವರು ಹೆಚ್ಚು ಕಡಿಮೆ ಇದೇ ಕಲ್ಪನೆಯನ್ನೇ ಇಟ್ಟುಕೊಂಡರೂ, ಈ ಸಮಾಸದಲ್ಲಿಯ ಆದಿಪದಕ್ಕೆ ಬೇರೆ ಅರ್ಥವನ್ನು ಹಚ್ಚಿದರು. ಅವರ ಪ್ರಕಾರ "ಕರ್ಣಾಟವೆಂದರೆ 'ಕರಣರು' ಮತ್ತು 'ನಾಟರು' ಕೂಡಿದ ಜನಾಂಗ"—ಎಂದು ಅರ್ಥ. ಯಾಕಂದರೆ, ಮನುವು ತನ್ನ ಕಾಲದ ವ್ರಾತ್ಯಕ್ಷತ್ರಿಯರ ಸಂಗಡಗಳನ್ನು ವಿವರಿಸುವಾಗ, ಈ ರೀತಿ ಹೇಳುತ್ತಾನೆ: —

ಝುಲ್ಲೋ ಮಲ್ಲಶ್ಚ ರಾಜನ್ಯಾತ್ ವ್ರಾತ್ಯಾನ್ನಿಚ್ಛಿವಿರೇವ ಚ |
ನಟಶ್ಚ ಕರಣಶ್ಚೈವ ಖಸೋ ದ್ರವಿಡ ಏವ ಚ ||

ಈ ಜನಾಂಗಗಳ ಉಲ್ಲೇಖವು 'ಯಮ' 'ಪಿತಾಮಹ' ಮತ್ತು 'ಮತ್ಸ್ಯಪುರಾಣ'ಗಳಲ್ಲೂ ಬರುತ್ತದೆ ಆದ್ದರಿಂದ ಕರ್ಣ ಇಲ್ಲವೆ ಕರಣ+ನಟ, ಕೂಡಿ 'ಕರ್ಣಾಟ'ವಾಯಿತೆಂಬ ಈ ಅಭಿಪ್ರಾಯ. ಹಾಗಾದರೆ, ಈ 'ಕರಣ' ಅಂದರಾದರೂ ಏನು? ಏನು ಕಿವಿಯುಳ್ಳವರೆಂದು ಅರ್ಥವೇ? ಈ ಪ್ರಶ್ನೆಯ ಉತ್ತರಕ್ಕಾಗಿ ನಾವು ಪುನಃ ಶ್ರೀ. ಶಂ. ಬಾ. ಜೋಶಿ ಅವರ ದಾರಿ ಕಾಯಬೇಕು.

ಆದರೆ, ಇನ್ನೂ ಹಲವು ಆಧುನಿಕ ಭಾಷಾಶಾಸ್ತ್ರಜ್ಞರ ಪ್ರಕಾರ ಈ ರೀತಿ ಸಂಸ್ಕೃತ 'ಕರ್ಣಾಟ'ದಿಂದ 'ಕನ್ನಡ' ಪದವು ಹುಟ್ಟಿತೆನ್ನುವುದು ಸರಿಯೆನಿಸದ್ದರ ಮೂಲಕ, ಅವರು ದೇಶ್ಯ 'ಕನ್ನಡ'ದಿಂದಲೇ ಸಂಸ್ಕೃತ 'ಕರ್ಣಾಟ'ವು ಬಂದಿರಬೇಕೆಂದು ಸಾರುತ್ತಾರೆ. ಈ ಸಂಗಡದವರ ಅಭಿಪ್ರಾಯಗಳನ್ನೂ ನಾವು ಸ್ಥೂಲವಾಗಿ ಈ ರೀತಿ ಶೇಖರಿಸಬಹುದು.

ಕನ್ನಡ ಮೂಲ ಅದರ ವ್ಯುತ್ಪತ್ತಿ

ಈ ಪಂಡಿತರ ಪ್ರಕಾರ 'ಕನ್ನಡ' ಸಮಸ್ತಪದದಲ್ಲಿಯ 'ನಡ' ಇಲ್ಲವೆ 'ನಾಡು' ಎಂಬುದೇನೋ ಸರ್ವಗ್ರಾಹ್ಯ. ಆದರೆ, ಈ ಸಮಾಸದ ಪೂರ್ವಪದದ ಬಗ್ಗೆ ಐಕ್ಯಮತ್ಯವಿಲ್ಲ. ಯಾಕಂದರೆ, ಈ ಪದಕ್ಕೆ ಬೇರೆ ಬೇರೆ ರೂಪಗಳನ್ನು ಹೇಳಲು ಸಾಧ್ಯವಿದೆಯೆಂದು ಇವರ ಅಭಿಪ್ರಾಯ.

೧. **ಕರ್ + ನಾಡು—ಡಾ. ಗುಂಡರ್ಟ್ ಮತ್ತು ಡಾ ಕಾಲ್ಡ್‌ವೆಲ್**—ಅವರ ಪ್ರಕಾರ 'ಕನ್ನಡ' ಪದವು ಕರ್+ನಾಡು ಅಂದರೆ, 'ಕರಿಯ ನಾಡಿನ ಭೂಮಿ' ಎಂಬರ್ಥದಿಂದ ಬಂದಿತು. ಯಾಕಂದರೆ, ಕನ್ನಡ ನಾಡಿನ ಬಹುಭೂಮಿಯು ಡಾ. ಕಾಲ್ಡ್‌ವೆಲ್ ಅವರ ಪ್ರಕಾರ ಕರಿದಾಗಿದ್ದು, 'ಹತ್ತಿಯ ಬೆಳಿಗೆ' ತುಂಬಾ ಅನುಕೂಲವಾದದ್ದಾಗಿದೆ. ಡಾಕ್ಟರ್ ಕಾಲ್ಡ್‌ವೆಲ್ ಅವರು ಈ ಬಗ್ಗೆ ಬರೆದ ಮಾತುಗಳು ಮನನೀಯವಾಗಿವೆ. ಅವರು ಹೇಳುವುದೇನಂದರೆ :—

> "Karnataka is regarded as a Sanskrit word by native Pandits, but I agree with Dr. Gundert in preferring to derive it from the Dravidian words as ಕರ್ black—ನಾಡು—a country—that is the black country — a term very suitable to designate the black-cotton-soil as it is called of the plateau of the Southern Deccan."

ಆದರೆ, ಈ ನಿರುಕ್ತಕ್ಕಿರುವ ಆಕ್ಷೇಪವೆಂದರೆ, ಕರಿ-ನಾಡಿನಲ್ಲಿರುವ ಎಷ್ಟು ನೆಲವಾದರೂ 'ಕರಿದಾಗಿದೆ?' ಇದರಿಂದಲೇ ಈ ನಾಡಿಗೆ ಹೆಸರು ಬರಬೇಕಾಗಿದ್ದರೆ, ಸಂಪೂರ್ಣ ಮೈಸೂರು ಪ್ರಾಂತ. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಹೆಗಳು ಮತ್ತು ಧಾರವಾಡ ಜಿಲ್ಹೆಯ ಬಹುಭಾಗಗಳ ಅವಸ್ಥೆ ಏನು? ಇಲ್ಲಿ ಎಲ್ಲ ಕಡೆಗೂ ನಾವು ಕಾಣುವುದು **ಕರೆಯು ನೆಲವನ್ನಲ್ಲ; ಕೆಂಪು ನೆಲ** ಇಲ್ಲವೆ 'ಮಸಾರಿ' ಭೂಮಿ. ಈ ರೀತಿ ಪದಸಿದ್ಧಿಯಾಗುವುದೇ ಆದರೆ, ಕರ್ನಾಟಕವು 'ಕೆನ್ನಾಡು' ಆಗಬೇಕೇ ವಿನಾ ಕರಿನಾಡಾಗಲಾರದು. ಮೇಲಾಗಿ, ಈ ನೆಲಕ್ಕೂ 'ಎರೆನೆಲ' ಎನ್ನುತ್ತಾರೆಯೇ ವಿನಾ 'ಕರಿನೆಲ' ಎನ್ನರು.

೨. **ಕರು+ನಾಡು**—ಕಾಲ್ಡ್‌ವೆಲ್‌ರ ಮೇಲಿನ ಅಭಿಪ್ರಾಯವು ಸಮ್ಮತವಾಗದ ಶ್ರೀ. ಹತ್ತಂಗಡಿ ನಾರಾಯಣರಾವ್ ಅವರು ಇಡೀ ಕರ್ನಾಟಕವು ಸಮುದ್ರದ ಮಟ್ಟಕ್ಕಿಂತ ತುಂಬಾ ಎತ್ತರದಲ್ಲಿದ್ದು ತಪ್ಪಲುಭೂಮಿಯಾದದ್ದರ ಮೂಲಕ ಇವನ್ನು 'ಕರಿ + ನಾಡು' ಎಂದು ಬಿಡಿಸದೆ 'ಕರು + ನಾಡು' 'ತಪ್ಪಲುಭೂಮಿ'—ಎಂದು ಬಿಡಿಸಬೇಕೆಂದು ಸೂಚಿಸಿದರು.

ಆದರೆ, ಈ ಅಭಿಪ್ರಾಯಕ್ಕೂ ಕೂಡ ಮೇಲಿನ ಆಕ್ಷೇಪವೇ ಅಂಟಿಕೊಳ್ಳುತ್ತದೆ ನಾವು ಕರುನಾಡು ಎಂದು ಕರೆದಿವೇನೋ ನಿಜ; ಆದರೆ, ಕನ್ನಡದಲ್ಲಿ ಈ ರೀತಿ 'ಕರು-ನಾಡಾಗಿರದೆ'—ತಪ್ಪಲುಪ್ರದೇಶವಾಗಿರದೆ ಇರುವ ಬಯಲುಸೀಮೆಯ ಗತಿಯೇನು? ಅದೂ ಅಲ್ಲದೆ, ಈ 'ಕರು–ನಾಡು' ಪದವು ತಪ್ಪಿಯಾದರೂ ಒಂದು ಸಲವೂ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಇದು ತಮಿಳರು ನಮ್ಮ ಶಬ್ದವನ್ನು ಉಚ್ಚರಿಸುವ ರೀತಿ. ಆದ್ದರಿಂದ, ಕೇವಲ ತಮಿಳರೊಬ್ಬರಲ್ಲೇ ಸಿಗುವ ಈ ಪದದ ರೂಪವನ್ನು ಹಿಡಿದು ನಿರುಕ್ತವನ್ನು ಹೇಳುವುದು ಸರಿಯಾದೀತೇ?—ವಿಚಾರಿಸುವುದು. ಇದರ ಬಗ್ಗೆ ಡಾ ಎಂ. ಎಚ್. ಕೃಷ್ಣ ಅವರು ಬರೆಯುವುದೇನಂದರೆ—

"Tamil tradition appears to spell the word as 'ಕರುನಾಡು'... No instance has been found of the use of this form by Kannada people themselves"—*

ಅಂತಲೇ, ಸ್ವತಃ ಹತ್ತಂಗಡಿ ಅವರೇ ಈ ಅಭಿಪ್ರಾಯವನ್ನು ಹೆಚ್ಚು ಮುಂದುವರಿಸಲಿಲ್ಲ.

೩. **ಕರು + ನಾಡು = ಮಹಾರಾಷ್ಟ್ರ** — ಗೋವಿಂದ ಪೈ–ರಾ. ಹ. ದೇಶಪಾಂಡೆ ಇತ್ಯಾದಿ— ಮೂರನೆಯದಾಗಿ, ಕನ್ನಡ ನಾಡಿನ ಸನ್ಮಾನ್ಯ ವಿದ್ವಾಂಸರೂ, ಸುಪ್ರಸಿದ್ಧ ಕವಿಗಳೂ ಆದ ಶ್ರೀ. ಗೋವಿಂದ ಪೈ ಅವರು ಮೇಲಿನ ನಿರುಕ್ತವನ್ನೇ ಹೇಳುತ್ತಿದ್ದರೂ, ಅರ್ಥವನ್ನು ಬೇರೆಯಾಗಿ ಕೊಡುತ್ತಿದ್ದಾರೆ. ಅವರ ಪ್ರಕಾರ, 'ಕರ್ನಾಡು' – 'ಕನ್ನಡ' ಎಂದರೆ, — ಕರಂ – ಕರು – ಕಡು ಎಂದರೆ ವಿಸ್ತೀರ್ಣವಾದ ಮಹಾ ರಾಷ್ಟ್ರವೆಂದರ್ಥ. ಚಾಲುಕ್ಯ ಪುಲಿಕೇಶಿಯು 'ತ್ರಯಾಣಾಂ ಮಹಾರಾಷ್ಟ್ರಾಣಾಂ' ಅಧಿಪತಿಯಾಗಿದ್ದುದು ಈ ಅರ್ಥದಲ್ಲೇ. ಹ್ಯುಯೆನ್‌ತ್ಸಾಂಗನೂ ಇದೇ ಮಾತನ್ನೇ ಹೇಳುತ್ತಾನೆ. ಆದ್ದರಿಂದ, ಕರ್ನಾಡು = ಕರು (ಮಹಾ) + ನಾಡು (= ರಾಷ್ಟ್ರ) — ಆದ್ದರಿಂದ, ಕರ್ನಾಡು = ಮಹಾರಾಷ್ಟ್ರ. ಇದೇ ಅಭಿಪ್ರಾಯವನ್ನೇ ಶ್ರೀ. ರಾ. ಹ. ದೇಶಪಾಂಡೆ ಅವರು "ಕರ್ನಾಟಕ ಸಾಮ್ರಾಜ್ಯ"ದಲ್ಲೂ (೧೯೨೬), ಮಿ. ಮಾಸ್ಟರ್, I. C S. ಅವರೂ (೧೯೨೮) ಹೆಚ್ಚುಕಡಿಮೆ ಸೂಚಿಸಿದರು.

ಆದರೆ, ಈ ಅಭಿಪ್ರಾಯವನ್ನೂ ಶ್ರೀ. ಶಂ. ಬಾ. ಜೋಶಿ ಅವರು ಒಪ್ಪುತ್ತಿಲ್ಲ. ಶ್ರೀ ಹತ್ತಂಗಡಿ ಅವರ ಅಭಿಪ್ರಾಯದ ಬಗ್ಗೆ ಕಂಡುಬಂದ ಆಕ್ಷೇಪಗಳೇ ಇಲ್ಲಿಯೂ ಕಂಡುಬರುತ್ತವೆ. ಯಾಕಂದರೆ, ಈ ಕರು – ನಾಡು ಎನ್ನುವ ಪದವೇ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವದಿಲ್ಲ. ಅದು ಕನ್ನಡದ ತಮಿಳ ರೂಪ ಅಷ್ಟೇ. "ಸುಮಾರು ೧೫೦೦ ವರುಷಗಳ ಕನ್ನಡ ಸಾಹಿತ್ಯದಲ್ಲಿ ಎಲ್ಲಿ ಒಂದೆಡೆಗಾದರೂ 'ಕರು–ನಾಡು' ಬಂದಿದ್ದರೆ ಆಣೆ"—ಎಂದು ಶಂ. ಬಾ. ಜೋಶಿ ಅವರ ಅಭಿಪ್ರಾಯ. ಅಲ್ಲದೇ, ಸ್ವತಃ ತಮಿಳಿನಲ್ಲೂ ಕೂಡ ಇದರ ಜೊತೆಗೇ 'ಕನ್ನಾಡು' 'ಕನ್ನಡ' ಪದಗಳಿವೆ ಶ್ರೀ ಹತ್ತಂಗಡಿಯವರು ಸೂಚಿಸಿದಂತೆ, ಇವಾದರೂ ಸಂಸ್ಕೃತ 'ಕರ್ಣಾಟ'ದ ರೂಪಾಂತರಗಳೇ!

೪. **ಕಮ್ಮಿತು + ನಾಡು=ಕನ್ನಡು** ದಿವಂಗತ ಆರ್. ನರಸಿಂಹಾಚಾರ್ಯರ ಪ್ರಕಾರ ತಮಿಳು, ಮತ್ತು ತೆಲುಗು ಜನರು ತಮ್ಮ ಭಾಷೆಗಳನ್ನು 'ಮಾಧುರ್ಯ' ಎನ್ನುವ ಮೂಲದಿಂದ (ತೆಲುಗು, ತೇನೆ– ಜೇನು ಇ.) ಸೃಷ್ಟಿಸಿಕೊಂಡಂತೆ, ಕನ್ನಡವನ್ನೂ ಮಾಧುರ್ಯ ಮತ್ತು ಪರಿಮಳವಾಚಕವಾದ 'ಕಮ್ಮಿತು' ಪದದಿಂದ ಸಾಧಿಸಿಕೊಳ್ಳಬೇಕು. ಆದ್ದರಿಂದ ಕಮ್ಮಿತು+ ನಾಡು = ಕನ್ನಾಡು = ಪರಿಮಳಯುಕ್ತವಾದ ಭೂಮಿ. ಶ್ರೀ. ಆಚಾರ್ಯರ ಪ್ರಕಾರ 'ಕನ್ನಡ ದೇಶವು ಗಂಧದ ಮರದ ಕಾಡುಗಳಿಗೂ, ಪದ್ಮಾಕರಗಳಿಗೂ ಪ್ರಸಿದ್ಧಿಯನ್ನು ಪಡೆದಿರುವುದರಿಂದ ಈ ವಿಶೇಷಣವು ಅದಕ್ಕೆ ಅನುರೂಪವಾದುದು—'

ಆದರೆ, ಈ ಮಾತಿನಲ್ಲಿ ಶಾಸ್ತ್ರದಕಿಂತ ಅಭಿಮಾನವೇ ಹೆಚ್ಚಾಗಿದೆಯೆಂದು ಹೇಳಬೇಕು. ತೆಲುಗು ತಮಿಳರು ಹಾಗೆ ಹೇಳಿದರೆಂದು ಕನ್ನಡರೂ ಹಾಗೆ ಹೇಳಿಕೊಳ್ಳುವುದು ಎಷ್ಟರಮಟ್ಟಿಗೆ ಸೂಕ್ತ?—ಅದೂ ಹೋಗಲಿ; ಇನ್ನೂ ಉಳಿದ ಅನೇಕ ಭಾಷಾಶಾಸ್ತ್ರಜ್ಞರೇ ತೆಲುಗು ಪದವು ತ್ರಿ–ಕಲಿಂಗ-ತ್ರಿಲಿಂಗ–ತೆಲುಗವಾಗಿ ಬಂದಿದೆಯೆಂದು ಹೇಳುತ್ತಾರಲ್ಲ? ಇದರ ಸಮರ್ಥನೆ ಹೇಗೆ? ಆದ್ದರಿಂದ ಈ ನಿರುಕ್ತವೂ ಶಾಸ್ತ್ರೀಯವಾಗದು.

* ಶಂ. ಬಾ. ಜೋಶಿ—ಕ. ನೆ ೭೩

೫. ಕನ್ (= ಕಾಣು; ಒಡಮೂಡು) + ಅಳ್ = ಕನ್ನಳ್ 7 ಕನ್ನಡ — ಬೇಂದ್ರೆ,- ಬೆಟಗೇರಿ— ಶ್ರೀ. ಬೇಂದ್ರೆ ಮತ್ತು ಬೆಟಗೇರಿ ಅವರು " ಮನೋಭಾವವನ್ನು ಯಶಸ್ವಿಯಾಗಿ ಒಡಮೂಡಿಸಿ (ಕನ್) ತೋರಿಸುವ " ಭಾಷೆ ಕನ್ + ಅಳ್ = ಕನ್ನಡ- ಎಂದು ಸೂಚಿಸಿದರು.

ಈ ಅಭಿಪ್ರಾಯವೂ ಒಪ್ಪಿತವಾಗದು. ಯಾಕಂದರೆ, ಮೊದಲನೆಯದಾಗಿ ' ನುಡಿಯಿಂದ ನಾಡಿಗೆ ಹೆಸರು ಬಂದಿತೆಂಬ ಅಪಸಿದ್ಧಾಂತ' ಮತ್ತು ಎರಡನೆಯದಾಗಿ ಕನ್ನಡದಲ್ಲಿ 'ಡ'ಕಾರವು 'ಳ'ಕಾರವಾಗಬಹುದೇ ವಿನಾ ತದ್ವಿರುದ್ಧ ಜರುಗುತ್ತಿಲ್ಲ.

೬. ಕರ್+ನಾಟ+ಅಕಂ — ಬಿ. ಎಂ. ಶ್ರೀ —ದಿವಂಗತ ಪ್ರಿ ಬಿ. ಎಂ. ಶ್ರೀ ಅವರ ಪ್ರಕಾರ 'ಕರ್ನಾಟಕ' ಪದವೇ ಮೂಲ. ಅದರ ವಿಗ್ರಹವೆಂದರೆ, ಕರ್+ನಾಟ+ಅಕಂ (ಅಂದರೆ ಒಳಗೊಂಡದ್ದು ಪ್ರದೇಶ) ಅಂದರೆ, ಒಟ್ಟಾರೆ, ' ಕರಿಯ ನಾಡನ್ನು ಒಳಗೊಂಡ ಪ್ರದೇಶ' ಎಂದರ್ಥ ಆದರೆ, ಇಲ್ಲೂ **ಎರಡು** ಆಕ್ಷೇಪಗಳು.

ಮೊದಲನೆಯದಾಗಿ, ನಾಡು+ಅಕಂ ಎಂಬ **ನಾಡಿನ ಪ್ರದೇಶ** ಎಂಬ ದ್ವಿರುಕ್ತಿಯು ಹೆಸರಿಡುವ ಪ್ರಾರಂಭದಲ್ಲೇ ಆಗದು. ಎರಡನೆಯದಾಗಿ, ಇದು ನಾವು ಮೇಲೆ ವಿವರಿಸಿದ ಡಾ. ಕಾಲ್ಡ್ವೆಲ್ಲರ ಅಭಿಪ್ರಾಯದ ಪ್ರತಿರೂಪ! ಆದ್ದರಿಂದ ಅಲ್ಲಿಯ ಆಕ್ಷೇಪಗಳೆಲ್ಲವೂ ಇಲ್ಲಿಯೂ ಅನ್ವಯಿಸುತ್ತವೆ.

೭. ಕಣ್+ನೀರ್ 7 ಕಣ್ಣೀರ್ 7 ಕಣ್ಣರ್— ಫಾದರ್ ಹೆರ್‍ಯಾಸ್ — ಮೊಹೆಂಜೊದಾರೊ ಮತ್ತು ಹರಪ್ಪಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಅವಶೇಷಗಳು ಮತ್ತು ಚಿತ್ರಲಿಪಿಗಳ ಮೇಲಿಂದ, ಫಾದರ್ ಹೆರ್‍ಯಾಸ್ ಅವರು ' ಕನ್ನಡರ' ಮೂಲರೂಪವು ' ಕಣ್ನಿರ್ ' ' ಕಣ್ಣರ್ ' ಎಂದು ಇದ್ದಿತೆಂದೂ, ಅದನ್ನೇ ಮೊಹೆಂಜೊದಾರೊ ಚಿತ್ರಲಿಪಿಯಲ್ಲಿ |Δ| ಈ ರೀತಿ ಸೂಚಿಸಿದರೆಂದೂ ಹೇಳುತ್ತಾರೆ.

"The sign used to mention them is a symbol to denote an eye...... Therefore, in the Proto-Dravidian language of Mohenjo-Daro, it will read Kan, eye or to see— Therefore it will read Kannan, one who sees... thus the complete sign will read Kananir — 'people who have eyes'... The ancient word Kannadigas by which the people of modern Karnataka are mentioned, seems to be a Sanskrit modification of 'Kananir.' "*

೮. ಕನ್ (ಣ್)+ಅಡಿಗರ್ — 'ಅಡಿಯಲ್ಲಿ ಕಣ್ಣುಳ್ಳವರು ಯಾರೋ ಅವರು'— ರೆವರೆಂಡ್ ಚೆನ್ನಪ್ಪನವರು ಉತ್ತಂಗಿ—ಕಲಬುರ್ಗಿಯಲ್ಲಿ ನೆರೆವ ಅಖಿಲ ಕರ್ನಾಟಕ ೩೨ನೆಯ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಪೀಠದಿಂದ ಅಪ್ಪಣೆ ಕೊಡಿಸುವಾಗ್ಗೆ, ಸಮ್ಮೇಲನಾಧ್ಯಕ್ಷರಾದ ರೆವರಂಡ ಉತ್ತಂಗಿ ಚೆನ್ನಪ್ಪನವರು ' ಕನ್ನಡ' ' ಕನ್ನಡಿಗ' ಪದಗಳು ' ಅಡಿಯಲ್ಲಿ ಕಣ್ಣುಳ್ಳವನು ಯಾವನೋ ಅವನು' ಎಂಬರ್ಥದಿಂದ ಸಿದ್ಧಿಸಿದವೆಂದು ಅಪ್ಪಣೆ ಕೊಡಿಸಿದರು.

ಅಂತೂ ಮೇಲಿನ ವಿವರಣೆಗಳನ್ನೆಲ್ಲ ನೋಡಿದಾಗ, ನಾವು ಮೂಲವೆಂದು ಹಿಡಿದ ಶಬ್ದವಾದರೂ ಯಾವುದು ನಾವು ಪುನಃ ನಿರ್ಧಾರ ಮಾಡಿಕೊಳ್ಳಬೇಕಾಗುತ್ತದೆ ಯಾಕಂದರೆ, ಈ ಮೂಲವು ಕನ್ನಡ,

* J. K. H. S.

ಕರ್ಣಾಟ, ಕರ್ನಾಟ, ಕರ್ಣ್‌ನಿರ್, ಕನ್ನಡಿಗ ಎಂದು ಮೊದಲಾಗಿ ಹೊಯ್ದಾಡುತ್ತಿರುವುದನ್ನು ಕಾಣುತ್ತೇವೆ. ಇಷ್ಟೇ; ನಾವು ಇನ್ನೂ ಇಂದಿನ Canareseದ ವರೆಗೆ ಮಾತ್ರ ಬರಲಿಲ್ಲ ಯಾಕಂದರೆ, 'ಕನ್ನಡ'ವನ್ನು ಈ ರೀತಿ ಜೇರೆ ಬೇರೆ ವಿಧವಾಗಿ ಬರೆಯುವುದು ಇಂದು ನಿನ್ನೆಯದಾಗಿರದೆ, ಸಾಕಷ್ಟು ಪ್ರಾಚೀನವಾಗಿದೆ.

ಡಾ. ಬಿ. ಎ. ಸಾಲೆತೊರೆ ಅವರು ಸುಂದರವಾಗಿ ಸಂಗ್ರಹಿಸಿದ ಪ್ರಕಾರ ಈ ನಮ್ಮ ನಾಡು ಮತ್ತು ಭಾಷೆಗಳು ಕಾಲಕಾಲಕ್ಕೆ ಯಾವ ರೀತಿ ಕರೆಯಲ್ಪಟ್ಟವೆಂಬುದನ್ನು ಅವರ ಬಾಯಿಂದಲೇ ಕೇಳೋಣ—

> " ಕನ್ನಡ ಭಾಷೆಯ ಹೆಸರನ್ನು ಕ್ರಿ ಶ. ೧೫೧೬ ರಲ್ಲಿ Canari ೧೫೨೦ರಲ್ಲಿ Canarim, ೧೫೫೨ರಲ್ಲಿ Canarij, ೧೬೧೫ರಲ್ಲಿ Canarin, ೧೬೫೪ರಲ್ಲಿ Cannarv ಎಂದೂ ನಡುನಡುವೆ, ಎಷ್ಟೋ ಬಾರಿ, Carnatic, Carnate, Karnat ಎಂದು ಮುಂತಾಗಿ ಬರೆಯುತ್ತಿದ್ದುದು ಕಂಡುಬರುತ್ತದೆ. "

ಈ ಅಪಸವ್ಯವನ್ನೆಲ್ಲ ಕಂಡು ಜುಗುಪ್ಸೆಪಟ್ಟುಕೊಂಡ ಕೌಂಟೊ ಎಂಬ ಐರೋಪ್ಯ ಪ್ರವಾಸಿಕನು ಕ್ರಿ. ಶ. ೧೬೧೪ ರಲ್ಲಿ ತನ್ನದೇ ಆದ ಒಂದು ಹೊಸ ರೂಪವನ್ನು ಸೂಚಿಸಿದನು

"Its proper name ' Charnathaca' which from corrruption to coruption has come to be called Canara" ಎಂದು ' ಚರ್ನಾಥಕ ' ಸರಿಯಾದ ರೂಪವೆಂದು ಸೂಚಿಸಿದನು! ಸರಿ; 'ಕನ್ನಡದ' ವ್ಯುತ್ಪತ್ತಿಯನ್ನು ನಾವು ಪುನಃ ನೋಡಬೇಕೆಂದರೆ, ಮೊದಲು ಎಲ್ಲಿ ಪ್ರಾರಂಭಿಸಿದ್ದೆವೋ ಹೆಚ್ಚುಕಡಿಮೆ ಅದೇ ಮಟ್ಟದಲ್ಲೇ ಇಂದಿಗೂ ಇದ್ದೇವೆ.

೯. ಹಲಕೆಲವು ಪಂಡಿತರು ಕನ್ನಡದ ನಿರುಕ್ತದ ಸೂಚನೆ ಅಮೇರಿಕಾದೇಶದ Canadaದಲ್ಲಿ ಏನಾದರೂ ಸಿಗುತ್ತದೆಯೋ ಎಂದು ನೋಡಿದ್ದೂ ಉಂಟು. ಆದರೆ, ಇಂಥ ಪ್ರಯತ್ನಗಳೆಲ್ಲ ವಿಫಲವಾಗಲೇಬೇಕಾದಂತೆ, ಈ ಪ್ರಯತ್ನವಾದರೂ ಸಿದ್ಧಿಯನ್ನು ದೊರಕಿಸದೆ ಹೋಯಿತು. ಯಾಕಂದರೆ, ಈ ರೀತಿ, ಅನೇಕ ಕನ್ನಡ ಪದಗಳು ಪಾಶ್ಚಿಮಾತ್ಯ ವೇಷಭೂಷಣಗಳನ್ನು ಧರಿಸಿದಾಗಾದರೂ, ಗುರುತು ಸಿಕ್ಕುತ್ತವೆಯೇ? ಎಂದು ಅನೇಕ ಪಂಡಿತರು ಸಂಶೋಧನೆ ಮಾಡಿದ್ದಾರೆ.

ಉದಾಹರಣೆಗೆ, 'ಧಾರವಾಡ' ಊರನ್ನೇ ತೆಗೆದುಕೊಳ್ಳೋಣ. ' ಧಾರವಾಡ 'ವೆಂದರೇನು ? ಅದರ ನಿರುಕ್ತ ಹೇಗೆ? ಎಂದು ವಿಚಾರಮಾಡುತ್ತ ಹಲವು ಆಂಗ್ಲ ಪಂಡಿತರು ಶುದ್ಧ ಕನ್ನಡದ, —ಹಾಲುಗೆರೆ ದೊಡ್ಡ ಪೇಟೆಯ—ಧಾರವಾಡವನ್ನು ಪರ್ಶಿಯಾದೇಶಕ್ಕೆ ಒಯ್ದು ಮುಟ್ಟಿಸಿದರು! ಹೀಗಾಗಿ, ನಮ್ಮ ಅವಲಕ್ಕಿ ಪೇಡೆಗಳ ಧಾರವಾಡವು ಪರ್ಶಿಯನ್ ರೂಪವನ್ನು ಪಡೆದುದೆಂದು ಹೇಳಲಾಯಿತು! .... ಯಾಕಂದರೆ, ಈ ಧಾರವಾಡದ ಉಚ್ಚಾರವು ಇಂಗ್ಲಿಷದಲ್ಲಿ 'ಧಾರವಾರ್' ಎಂದು ಆಗುತ್ತದಷ್ಟೇ ?— ಈ 'ಧಾರ-ವಾರ್'ದಲ್ಲಿಯ ಪೂರ್ವಪದವಾದ 'ಧಾರ'ದ ಅರ್ಥವನ್ನು 'ಧಾರಾ' 'ಮಳೆ' ಎಂದು ಮೊದಲಾಗೇನೋ ಹೇಳಬಹುದು. ಆದರೆ, ' ವಾರ್ ' ಅಂದರೇನು ? ಇಂಗ್ಲಿಷದಲ್ಲಿ ' ಯುದ್ಧ ' ಎಂದು ಮಾತ್ರವಾಗುತ್ತದೆ. ' ಮಳೆಯ ಯುದ್ಧ ' ವಾಗದು. ಹಾಗಾದರೆ, 'ವಾರ್' ಅಂದರೇನು ? ಕನ್ನಡದಲ್ಲಿ 'ಬ'—'ವ' ಆಗಬಹುದಷ್ಟೇ ? ಹಾಗಾವರೆ; 'ವಾರ್'–'ಬಾರ್'- ಏಕಾಗಿರಬಾರದು ? ಈ 'ಬಾರ್' ಅಂದರೆ ಪರ್ಶಿಯನ್ ಭಾಷೆಯಲ್ಲಿ 'ಸ್ಥಳ' 'ಪ್ರದೇಶ'— ಎಂಬ ಅರ್ಥ. ಹಿಂದುಸ್ಥಾನದಲ್ಲಿ ಈ ರೀತಿ ಸಾಧಿತವಾದ ಅನೇಕ ರೂಪಗಳೂ ಇವೆ. ಇವೆಲ್ಲ ಪರ್ಶಿಯನ್

ಪ್ರಭಾವಕ್ಕೆ ಒಳಗಾಗಿ, ಈ ರೀತಿ ರೂಪವನ್ನು ಪಡೆದಂತೆ 'ಧಾರಬಾರ್'ವೂ ಯಾಕೆ ಪಡೆದಿರಬಾರದು? 'ಮಲಬಾರ್'—'ಮಲೆ-ಬಾರ್' ಆದಂತೆ, 'ಮಾರವಾಡ'ವು 'ಮಾರ-ಬಾರ್' ಆದಂತೆ, ಕಾಠೇವಾಡ—ಕಾಠಿಯ-ಬಾರ್ ಆದಂತೆ, ಮೇ-ಬಾರ್-ಝಾಂಝಿಬಾರ್ – ಮೊದಲಾಗಿ, 'ಧಾರ-ಬಾರ್'ವೂ 'ಧಾರಾ=ಮಳೆಯ; ಬಾರ್=ಪ್ರದೇಶ' ಅಂದರೆ, 'ಮಳೆಯ ಪ್ರದೇಶ' ಎಂದು ಏಕಾಗಿರಬಾರದು? ಈ ರೀತಿ 'ಧಾರವಾಡ'ದ ನಿರುಕ್ತವನ್ನು ಒಂದು ಸಲ ಹಲವು ಪಂಡಿತರು ತೀರ ಗಂಭೀರವಾಗಿಯೇ ಸೂಚಿಸಿದರು. ಉದಾಹರಣೆಗೆ, ಈ ಕೆಳಗಿನ ಟಿಪ್ಪಣಿಯನ್ನು ನೋಡಬಹುದು—

> "Dharwar, on the analogy of Mal-bar, Marwar, Zinzi-bar, Kathiawar, is 'Dhar-bar', 'Bar' in Persian or Arabic meaning country or continent. According to Dr. Caldwell, this is not correct as it may be 'ಧಾರವಾರ್', ವಾರ್ in Sanskrit meaning 'district'. Dr. Eggeling says that in an inscription of 7th A. D., the term occurs as 'ಧಾರಾವರ್ಷ'; according to Dr. Trump 'war' of modern Dharwar must have had different origin as ವರ್ಷ in Prakrit becomes ವರಿಸೋ or ವರಖೀ not 'war'.—" *

ಇದೇ ರೀತಿ ಒಂದು ಕಾಲಕ್ಕೆ 'ಕನ್ನಡ'ದ ವ್ಯುತ್ಪತ್ತಿಯೂ 'Canada'ದ ಮಾರ್ಗವಾಗಿ ಸುತ್ತಿ ಬಂದಿತು. ಆದರೆ ಈ ಪ್ರಯತ್ನದ ಫಲವು ಮಾತ್ರ 'Ca Nada' ಅಂದರೆ 'ನಮ್ಮಲ್ಲೇನೂ ಇಲ್ಲ' ಎಂದೇ ಬಂದಿತು. ಈ ಬಗ್ಗೆ ಮಾನ್ಯ ಲುಯಿ ರಾಯಿಸ್ ಅವರು ಬರೆಯುವದೇನಂದರೆ –

> "Mr. C. P. Brown has tried to discover a clue to the derivation of Kannada from the name of *Canada*, the British Dominion in North America, which according to him is a word unknown to the aborigines But, the results *are somewhat blank*, for he professes to have found that it means 'Ca Nada' —we have nothing."

೧೮. ಹೀಗಾಗಿ, ಈ 'ಕನ್ನಡ' ಪದದ ನಿರುಕ್ತದ ಬಗ್ಗೆ ಈ ಮೇಲಿನಂತೆ ಅನೇಕ ಅಭಿಪ್ರಾಯಗಳು ಇದ್ದರೂ, ಇನ್ನೂ ಯಾವ ಅಭಿಪ್ರಾಯವೂ ಸರ್ವಪಂಡಿತ ಮಾನ್ಯತೆಯನ್ನು ಪಡೆದೇ ಇಲ್ಲವೆಂದು ಹೇಳಬೇಕು. ಈಗ ಸದ್ಯದ ಮಟ್ಟಿಗೆ, ನಾವು ಸನ್ಮಾನ್ಯ ಸಂಶೋಧಕರಾದ ಶ್ರೀ. ಶಂ. ಬಾ. ಜೋಶಿ ಅವರು ಹೇಳಿದ 'ಜನಾಂಗ'ವಾಚಕವಾದ ನಿರುಕ್ತವೇ ಸರಿಯೆಂದು ಒಪ್ಪಿಕೊಳ್ಳಬೇಕು. ಇನ್ನೂ ಈ ಮಾರ್ಗದಲ್ಲಿ ಹೆಚ್ಚಿನ ಕೃಷಿ ಬೇಕಾಗಿದೆಯಾದರೂ, ಶ್ರೀ. ಶಂ. ಬಾ. ಜೋಶಿ ಅವರ ಅಭಿಪ್ರಾಯವೇ ಇಂದಿಗೂ ಈ ವಿಷಯದಲ್ಲಿ ಕೊನೆಯ ಮಾತಾಗಿದೆ.

ಶ್ರೀ. ಶಂ. ಬಾ. ಜೋಶಿ ಅವರ ಪ್ರಕಾರ, ಮೇಲಿನ ಎಲ್ಲ ವಿವರಣೆಗಳಲ್ಲಿಯೂ ಇರುವ ಸಾಮಾನ್ಯ ದೋಷವೆಂದರೆ, ನಾವು ನಮ್ಮ ಹಿಂದಿನ ಸಂಸ್ಕಾರ ಮತ್ತು ಪರಂಪರೆಗಳನ್ನು ಬಿಟ್ಟುದು. ಎಷ್ಟೋ ಸಾವಿರ ವರುಷಗಳಿಂದ ನಡೆದುಬಂದ ಈ ಕನ್ನಡದ ಉಲ್ಲೇಖವು ಎಲ್ಲಿಯಾದರೂ ದೊರಕಲೇಬೇಕು. ಇವರಿಗೆ

---

* Cald, P. 25.

ಆರ್ಯರ ಸಂಪರ್ಕವು ಬಂದಾಗ, ಇತಿಹಾಸ ಮತ್ತು ಉಲ್ಲೇಖಪ್ರಿಯರಾದ ಆರ್ಯರು ಒಂದಿಲ್ಲೊಂದು ರೀತಿಯಿಂದ ಇವರ ವರ್ಣನೆಯನ್ನು ಮಾಡಿರಲೇಬೇಕು. ನಮ್ಮ ಸ್ಮೃತಿ–ಪುರಾಣಗಳಲ್ಲಿಯ ಬಹುಮಾತು ಬರಿಯ ' ಕಥೆ 'ಯಾಗಿರಬಹುದಾದರೂ, ಅವುಗಳಲ್ಲಿ ಸತ್ಯಾಂಶವಿಲ್ಲದೆ ಇಲ್ಲ. ಶ್ರೀ. ಶಂ. ಬಾ. ಜೋಶಿ ಅವರೇ ಹೇಳುವಂತೆ–" ಇವುಗಳಲ್ಲಿ ಯಾವುದಕ್ಕೂ ಕರ್ಣಾಟದ **ಪ್ರಾಚೀನ ಸಾಂಸ್ಕೃತಿಕ ಪರಂಪರೆ, ಇತಿಹಾಸಗಳ ಬೆಂಬಲವಿಲ್ಲ. ಸ್ಮೃತಿ ಮತ್ತು ಪುರಾಣಗಳಲ್ಲಿ ಬಂದಿರುವ ಉಲ್ಲೇಖಗಳನ್ನು ಕೇವಲ ದುರ್ಲಕ್ಷಿಸಿದರೆ ನಡೆಯುದು** "* ಆದ್ದರಿಂದ, ಕನ್ನಡ–ಕನ್ನಾಡೆಂದರೆ–'ಕಣ್ಣರ' ನಾಡು. ಈ ಕನ್ನಡರೇ ' ಕಳಭ್ರರು ' ' ಕಳವರು ' ' ಕಳ್ಳರು. ' ಇವರು ಪ್ರಾಚೀನಕಾಲದಲ್ಲಿ ಹಿಂದುಸ್ಥಾನದ ಎಷ್ಟೋ ಭಾಗಗಳನ್ನು ವ್ಯಾಪಿಸಿದ್ದರಿಂದ ಅಲ್ಲಲ್ಲಿ ಇಂದಿಗೂ ' ಕನ್ನಾಡಿನ ' ಅಂಶವನ್ನು ನಾವು ಕಾಣುತ್ತಿದ್ದೇವೆ.

---

* ಶಂ. ಬಾ. ಜೋಶಿ—ಕನ್ನಡದ ನೆಲೆ, ಪುಟ ೯೦.

ಮೂರನೆಯ ಪ್ರಕರಣ

ಕನ್ನಡ ವರ್ಣಮಾಲೆ— ಉತ್ಪತ್ತಿ, ಬೆಳವಣಿಗೆ ಮತ್ತು ಸಂಸ್ಕರಣ

ಯಾವುದೇ ಭಾಷೆಗೆ **ಎರಡು** ರೀತಿಯ ಸ್ಪಷ್ಟವಾದ ಅಭಿವ್ಯಕ್ತಿಯಿರುತ್ತವೆ. **ಒಂದು** ಯಾವುದೇ ವಿಚಾರವನ್ನು **ಬಾಯಿಮಾತಿನಿಂದ** ವ್ಯಕ್ತಪಡಿಸುವುದು. **ಎರಡು**- ಅದನ್ನೇ ಬರೆದು **ಕಣ್ಣಿಗೆ ಗೋಚರವಾಗುವಂತೆ** ಮಾಡುವುದು. ಅಂತಲೇ, ಮೊದಲಿನದಕ್ಕೆ **'ಶಾಬ್ದ'** ವೆಂದೂ, ಎರಡನೆಯದಕ್ಕೆ, ಗೋಚರವಾಗುವುದಕ್ಕೆ, **ಚಾಕ್ಷುಷ**-ಎಂದೂ ಕರೆಯುತ್ತಾರೆ. ಸ್ವಾಭಾವಿಕವಾಗಿಯೇ, ಇವೆರಡರಲ್ಲೂ ವ್ಯತ್ಯಾಸವಿದ್ದೇ ಇರುತ್ತದೆ. ಭಾಷೆಯ **ಶಾಬ್ದರೂಪವು** ಸಕೃದ್ದರ್ಶನಕ್ಕೆ ಹೆಚ್ಚು ಪರಿಣಾಮಕಾರಿಯಾಗಿದ್ದರೂ, ಅದರ **ವ್ಯಾಪ್ತಿ** ಮತ್ತು **ಅಸ್ತಿತ್ವಗಳು ಪರಿಮಿತವಾಗಿರುತ್ತವೆ.** 'ಕು-ದು-ರೆ' ಎಂದು ನಾನು ಬಾಯಿಂದ ಅಂದಾಕ್ಷಣಕ್ಕೇ, ಎರಡನೆಯ ವರ್ಣದ 'ದು' ಬರುವುದರಲ್ಲಿಯೇ, ಮೊದಲನೆಯ ವರ್ಣ ಅನಂತದಲ್ಲಿ ಲೀನವಾಗಿರುತ್ತದೆ. ಹೀಗಾಗಿ, ನಾನು ಬಾಯಿಂದ ಹೇಳಿದ ಆ ಶಬ್ದವು, ಆ **ಸಮಯಕ್ಕೆ, ಆ ಸಮಕ್ಷದಲ್ಲಿ** ಇದ್ದವರಿಗೆ ಮಾತ್ರ ವೇದ್ಯವಾಗುತ್ತದೆ. ಮಾತುಗಾರನನ್ನು ಬಿಟ್ಟು **ಬೇರೆಡೆಗೆ** ಇದ್ದ ಜನರಿಗಾಗಲೀ, ಇಲ್ಲವೇ ಅವನ ಸಮಕ್ಷದಲ್ಲಿಯೇ ಇದ್ದ ಜನರಿಗೂ ಕೂಡ, ಆ ಶಬ್ದೋಚ್ಚರಣೆ ನಡೆದುಹೋದ ಮರುಕ್ಷಣವೇ ಆಗಲೀ ಆ ಶಬ್ದದ ಪ್ರಾತ್ಯಕ್ಷಿಕತೆ ಇರುವದಿಲ್ಲ. ಹೀಗಾಗಿ, ಭಾಷೆಯ ಶಾಬ್ದರೂಪವು ತೀರ ಪರಿಮಿತವಾಗಿರುತ್ತದೆ· ಅದೇ ಚಾಕ್ಷುಷ ರೂಪವು ಕಣ್ಣಿಗೆ ಗೋಚರವಾದುದಾಗಿರುವದರಿಂದ, ಅದನ್ನು ಎಲ್ಲಿದ್ದವರೂ, ಯಾವ ಕಾಲದಲ್ಲಿಯೂ ನೋಡಬಹುದು.—ಇಷ್ಟೇ ಆ ಅಕ್ಷರ ಉಳಿಯಬೇಕು ಮಾತ್ರ. ಹೀಗಾಗಿ, ಚಾಕ್ಷುಷದ ವ್ಯಾಪ್ತಿ ಮತ್ತು ಅಸ್ತಿತ್ವಗಳು ಹೆಚ್ಚು ವ್ಯಾಪಕವೂ ಚಿರಸ್ಥಾಯಿಯೂ ಆಗಿವೆ. 'ಅದರೆ, ಶಾಬ್ದಕ್ಕೆ ಒಂದು ರೂಪ ಮಾತ್ರವಿದ್ದರೆ, ಚಾಕ್ಷುಷಕ್ಕೆ ಮಾತ್ರ ಭಾಷಾವ್ಯತ್ಯಾಸವಿದ್ದಂತೆ ಭಿನ್ನ ಭಿನ್ನ ರೂಪಗಳಿರುತ್ತವೆ. ಅಂತಲೇ, ಕೇಶಿರಾಜನು--

> ವ್ಯವಹರಿಪುವೆರಡು ರೂಪಿಂ
> ದವಕ್ಕರಂ **ಶ್ರಾವಣಂ** ಸ್ವನೈಕಾಕಾರಂ ।
> ವಿವಿಧಾಕಾರಂ **ಲಿಪಿಭೇ—**
> **-ದ ವೃತ್ತಿಯಿಂ ಚಾಕ್ಷುಷಂ** ಪುರಾತನ ಮತದಿಂ ॥

ಎಂದು ಹೇಳಿದುದು. ಭಾಷಾವ್ಯತ್ಯಾಸವಾಗುತ್ತಿದ್ದಾಗ, ಚಾಕ್ಷುಷವು, ಆ ಭಾಷಾವ್ಯತ್ಯಾಸದ ಮಾರ್ಗವನ್ನು ಗುರುತಿಸುವಲ್ಲಿ ತುಂಬಾ ಸಹಾಯಕವಾಗುತ್ತದೆ.

ಹಾಗಾದರೆ, ಭಾಷೆಯ ಈ ಚಾಕ್ಷುಷ ಸ್ವರೂಪವು--ಅಂದರೆ ಲಿಪಿಯು— ಯಾವ ರೀತಿ ಭಾರತದಲ್ಲಿ ಪ್ರಾರಂಭವಾಯಿತು ? ಕನ್ನಡದಲ್ಲಿಯ ಅದರ ಪ್ರಾರಂಭವು ಹೇಗೆ ?—ಅದರ ಮೂಲ ಸ್ವರೂಪವು ಯಾವ

ರೀತಿ ಇತ್ತು ?— ಅದರಲ್ಲಾದ ಬದಲಾವಣೆಗಳಾವು ? ಮತ್ತು ಯಾಕೆ ? - ಕನ್ನಡ ಮತ್ತು ಇತರ ದ್ರಾವಿಡ ವರ್ಗಗಳಲ್ಲಿರುವ ಈ ಕ್ರಮ ಯಾವುದು ? ಈ ರೀತಿ ಕನ್ನಡದಲ್ಲಿದ್ದ ಅಕ್ಷರಗಳಾದರೂ ಎಷ್ಟು ? ಈಗ ಕನ್ನಡ ದಲ್ಲಿದ್ದ ವರ್ಣಗಳೆಲ್ಲ ನಮ್ಮ ಭಾಷೆಗೆ ಆವಶ್ಯಕವೇ ?—ಇನ್ನೂ ನಾವು ಕನ್ನಡ ಲಿಪಿಯನ್ನು 'ಸುಧಾರಿಸ' ಬಹುದೋ ಹೇಗೆ— ? ಎಂಬ ಈ ಮೊದಲಾದ ಪ್ರಶ್ನೆಗಳನ್ನು ನಾವು ಈಗ ವಿಚಾರ ಮಾಡಬೇಕಾಗಿದೆ.

ಭಾರತದಲ್ಲಿ ಲಿಪಿಯ ಪ್ರಾರಂಭ— ಭರತಖಂಡದ ಭಾಷೆಗಳಿಗಾಗಿ ಲಿಪಿಯನ್ನು ಇಲ್ಲಿಯೇ ನಿರ್ಮಿಸಿಕೊಂಡರೇ ? ಇಲ್ಲವೇ ಹೊರಗಿನಿಂದ ಆಮದುವಾಗಿ ಅದನ್ನು ಸ್ವೀಕರಿಸಿದರೇ ?— ಎಂಬ ವಿಷಯವಾಗಿ ಪಂಡಿತರಲ್ಲಿ ಐಕಮತ್ಯವಿಲ್ಲ. ಬರ್ನೆಲ್, ಬುಲ್ಹರ್, ವೀಬರ್, ಮ್ಯಾಕ್ಸಮುಲರ್—ಮೊದಲಾದ ಪಂಡಿತರು ಭರತಖಂಡಕ್ಕೆ ಲಿಪಿಯು ಅನ್ಯದೇಶದಿಂದ ಬಂದಿತೆಂದು ಹೇಳುತ್ತಾರೆ.* ಆದರೆ, ಸರ್ ಕನಿಂಗ್ಹ್ಯಾಮ್, ಲಾಸೆನ್, ಮೊದಲಾದ ಪಂಡಿತರ ಪ್ರಕಾರ ಭಾರತೀಯರೇ ತಮ್ಮ ಲಿಪಿಯನ್ನು ಸೃಷ್ಟಿಸಿಕೊಂಡರು† ಆದ್ದರಿಂದ ಮೊದಲನೇ ವರ್ಗದ ಪಂಡಿತರ ಪ್ರಕಾರ ಭರತಖಂಡದ ಲಿಪಿಗಳೆಲ್ಲ, ವಾಣಿಜ್ಯ-ವ್ಯವಹಾರಗಳ ಮೂಲಕ ಸಂಪರ್ಕಬಂದ ಫೊನಿಷಿಯನ್‌ರ ಮೂಲಕ **ಕ್ರಿ. ಪೂ. ಸು. ೮ನೆಯ** ಶತಮಾನದಲ್ಲಿ ಪ್ರಾರಂಭ ವಾದುವೆಂದು ಹೇಳುತ್ತಾರೆ. ಇನ್ನೂ ಹಲವರ ಪ್ರಕಾರ, **ಕ್ರಿ. ಪೂ ೫೦೦ ರಿಂದ** ಅಂದರೆ ಡೇರಿಯಸ್‌ನ ದಿಗ್ವಿಜಯ ಕಾಲದಿಂದ ಭಾರತೀಯ ಲಿಪಿ ಪ್ರಾರಂಭವಾಯಿತೆಂದು ಹೇಳುತ್ತಾರೆ. ಆಲಫ್ರೆಡ್ ಮುಲ್ಲರ್ ಮೊದಲಾದ ವಿದ್ವಾಂಸರು ಗ್ರೀಸ್ ರಾಜನಾದ ಅಲೆಕ್ಝಾಂಡರನ ದಿಗ್ವಿಜಯದಿಂದಲೇ, ಅಂದರೆ **ಕ್ರಿ. ಪೂ. ೩೨೫** ರಿಂದ ಮಾತ್ರ ಇಲ್ಲಿಯ ಲಿಪಿಗಳು ಪ್ರಾರಂಭವಾದವೆಂದು ಹೇಳುತ್ತಾರೆ. ಇನ್ನೂ ಹಲವರಂತೂ, ಅಶೋಕ ಚಕ್ರವರ್ತಿಯ ಕಾಲದ ಮೊದಲು—ಅಂದರೆ ಕ್ರಿ. ಪೂ. **೨೫೦ರ ಮೊದಲು**—ಭರತಖಂಡದಲ್ಲಿ ಲಿಪಿಯೇ ಹುಟ್ಟಿರಲಿಲ್ಲವೆಂದು ಹೇಳುತ್ತಾರೆ‡ ಅಂತೂ, ತೀರ ಕೊನೆಯ ಅಭಿಪ್ರಾಯವೆಂದರೆ, ಭಾರತೀಯ ಲಿಪಿಗಳೆಲ್ಲ ಹೆಚ್ಚು ಕಡಿಮೆ ಕ್ರಿ. ಪೂ. **೮೫೦ರಿಂದ** ಪ್ರಾರಂಭವಾದುವು.

ಈ ಅಭಿಪ್ರಾಯವು ಎಷ್ಟರ ಮಟ್ಟಿಗೆ ನಿಜವಾದುದು ?— ಎಂದು ವಿಚಾರಿಸಿದರೆ, ಮೇಲೆ ಹೇಳಿದ ಪಾಶ್ಚಿಮಾತ್ಯ ಪಂಡಿತರೆಲ್ಲ, ಲಿಪಿಯ ವಿಷಯವಾಗಿ ಇರುವ ಪೌರ್ವಾತ್ಯ ಐತಿಹ್ಯಗಳನ್ನಾಗಲೀ, ಉಲ್ಲೇಖ ಗಳನ್ನಾಗಲೀ ಗಮನದಲ್ಲೇ ತೆಗೆದುಕೊಂಡಂತೆ ಕಾಣುವದಿಲ್ಲ. ಈ ಐತಿಹ್ಯ ಮತ್ತು ಉಲ್ಲೇಖಗಳನ್ನೂ ನಾವು ಕಡೆಗಣಿಸಿ ಸಾಗುವಂತಿಲ್ಲ.

ಪಾಣಿನಿಯ ಪ್ರಕಾರ ವರ್ಣಗಳೆಲ್ಲ ಪರಮಾತ್ಮನ ಡಮರುಗದಿಂದಲೇ ಹೊರಟವಂತೆ.

ಆಹ್ನಿಕ ಇಲ್ಲವೆ ಜ್ಯೋತಿಸ್ತತ್ವದ ಪ್ರಕಾರ **ಲಿಪಿಗಳೆಲ್ಲ ಬ್ರಹ್ಮನಿಂದಲೇ ನಿರ್ಮಿತವಾದುವೆಂದು ಹೇಳಿದೆ.**

ಷಾಣ್ಮಾಸಿಕೇತು ಸಮಯೇ ಭ್ರಾನ್ತಿಸ್ಸಂಜಾಯತೇ ಯತಃ |
ಧಾತ್ರಾऽಕ್ಷರಾಣಿ ಸೃಷ್ಟಾನಿ ಪತ್ರಾರೂಢಾನ್ಯತಃ ಪುರಾ || +

* 'Indian alphabet is derived directly from the oldest Phoenician'—Weber.

† 'The Indian Pali or Brahmi alphabet, is an Indian invention'—Cunningham.
'According to Lassen, Dawson and Thomas, its origin was indigenous, that is, it was invented by the people of India.' (Buhler).

‡ "ಕರ್ನಾಟಕ ಭಾಷಾಲಿಪಿ"—ಟಿ. ನಂಜುಂಡಶಾಸ್ತ್ರಿ (೧ ೨೦).

+ ಅದೇ.

ನಾರದಸ್ಮೃತಿಯು ಕೂಡ 'ನಾಕರಿಷ್ಯದ್ ಯದಿ ಬ್ರಹ್ಮಾಲಿಖಿತಂ ಚಕ್ಷುರುತ್ತಮಂ'—ಎಂದು ಹೇಳುತ್ತದೆ. ಯಾಜ್ಞವಲ್ಕ್ಯ ಸ್ಮೃತಿಯಲ್ಲಿಯೂ 'ಕೃತ್ವಾ ಲೇಖ್ಯಂ ತು ಕಾರಯೇತ್' ಎಂದು ಹೇಳಿದೆ. ವಾತ್ಸ್ಯಾಯನನ ಕಾಮಸೂತ್ರದ ಪ್ರಕಾರ ೬೪ ಕಲೆಗಳಲ್ಲಿ **ಪುಸ್ತಕ ವಾಚನವೂ** ಒಂದಾಗಿದೆಯಲ್ಲದೆ, ಮನೆಯಲ್ಲಿ ಅವಶ್ಯವಾಗಿ ಇರಬೇಕಾದ ಪದಾರ್ಥಗಳಲ್ಲಿ ಪುಸ್ತಕವೂ ಒಂದಾಗಿದೆ. ಗೃಹಸಾಮಗ್ರೀಷು —ಯಃ ಕಶ್ಚಿತ್ ಪುಸ್ತಕಃ.— ಲಿಪಿಯಿರದೆ 'ಪುಸ್ತಕ'ವಾಗದೆಂಬುದು ವಿದಿತವೇ. ವ್ಯಾಸಮಹರ್ಷಿಗಳು ಹೇಳಿದಂತೆ ಗಣಪತಿಯು ಮಹಾಭಾರತವನ್ನು ಬರೆದನೆಂದು ಉಲ್ಲೇಖವಿದೆ. ಕೌಟಲೀಯ ಅರ್ಥಶಾಸ್ತ್ರದಲ್ಲಿ 'ವೃತ್ತ ಚೌಲಕರ್ಮಾ **ಲಿಪಿಂ ಸಂಖ್ಯಾನಂ** ಚ ಉಪಯುಂಜೀತ' ಎಂದೂ, '**ಲೇಖವಾಚನ ಸಮರ್ಥೋ** ಲೇಖಕಃ ಸ್ಯಾತ್' ಎಂದೂ ಉಲ್ಲೇಖಗಳಿವೆ. ಚಾಣಕ್ಯನೀತಿಯಲ್ಲಂತೂ, -

ಪುಸ್ತಕಸ್ಥಾ ತು ಯಾ ವಿದ್ಯಾ
ಪರಹಸ್ತಂ ಗತಂ ಧನಂ
ಕಾರ್ಯಕಾಲೇ ತು ಸಂಪ್ರಾಪ್ತೇ
ನ ಸಾ ವಿದ್ಯಾ ನ ತದ್ಧನಂ—

ಎಂದು ಹೇಳಿದೆ. ಪಾಣಿನೀಯ ಶಿಕ್ಷೆಯಲ್ಲಿ ಈ ಕೆಳಗಿನ ಆರು ಜನರು 'ಪಾಠಕಾಧಮ'ರೆಂದು ಹೇಳಿದೆ.

ಗೀತೀ, ಶೀಘ್ರೀ, ಶಿರಃಕಂಪೀ **ತಥಾ ಲಿಖಿತಪಾಠಕಃ,**
ಅನರ್ಥಜ್ಞೋ ಅಲ್ಪಕಂಠಶ್ಚ ಷಡೇತೇ ಪಾಠಕಾಧಮಾಃ ||

ಗ್ರೀಸ್ ದೇಶದ ರಾಜನಾದ ಅಲೆಕ್ಝಾಂಡರನ ಸೇನಾಪತಿಯಾದ ನಿಯಾರ್ಕಸ್ ಎಂಬವನು (ಕ್ರಿ. ಪೂ. ೩೨೬) ಭಾರತೀಯರ ಲೇಖನವಸ್ತುವಿನ ಬಗ್ಗೆ ಹೇಳುತ್ತಾನೆ. ಅನೇಕ ಪುರಾಣಗಳಲ್ಲಂತೂ 'ಮಶಿ' 'ಮಶಿಕೂಪ'ಗಳ ವರ್ಣನೆ ಬರುತ್ತದೆ. ಈ ಬಗ್ಗೆ ಶ್ರೀ. ರಾಮರಾವ್ ಎನ್ನುವವರು 'ಆಂಧ್ರ ಹಿಸ್ಟಾರಿಕಲ್ ಕ್ವಾರ್ಟರ್ಲಿ'ಯಲ್ಲಿ ಈ ರೀತಿ ಬರೆಯುತ್ತಾರೆ:—

"Ink was extensively used in Ancient India for writing purposes. It was known as **ಮಶಿ** and the Puranas frequently mention **ಮಶಿಪಾತ್ರ, ಮಶಿಭಾಂಡ,** and **ಮಶಿಕೂಪ.** Nearchus of *the 4th century* *B. C.* refers to the practice of the Hindus of writing on bark leaves and cloth with ink."

ಸೆಲ್ಯೂಕಸ್ ದೊರೆಯ ರಾಯಭಾರಿಯಾದ ಮೆಗ್ಯಾಸ್ಥಿನೀಸನು (ಕ್ರಿ. ಪೂ. ೩೦೬) "ಭರತಖಂಡದವರು ಜಾತಕಗಳನ್ನೂ ಪಂಚಾಂಗಗಳನ್ನೂ ಗುಣಿಸಿ **ಬರೆಯುತ್ತಿದ್ದರೆಂದೂ,** ಯುಗಾದಿಯ ದಿನಗಳಲ್ಲಿ ಜನರಿಗೆ ಪಂಚಾಂಗವನ್ನು ಓದಿ ಅದರ ಫಲವನ್ನು ತಿಳಿಸುತ್ತಿದ್ದರೆಂದೂ ಹೇಳುತ್ತಾನೆ."‡ ಐತರೇಯ ಬ್ರಾಹ್ಮಣದಲ್ಲಿ 'ಓಂ' ವರ್ಣವು ಅ, ಉ, ಮತ್ತು ಮಕಾರಗಳು ಸೇರಿ ನಿಷ್ಪನ್ನವಾಗಿದೆಯೆಂದು ಹೇಳಲಾಗಿದೆ. ಬುದ್ಧನ ಚರಿತರೂಪವಾದ 'ಲಲಿತವಿಸ್ತರ' ಎಂಬ ಗ್ರಂಥದಲ್ಲಿ ಅರವತ್ತುನಾಲ್ಕು ಲಿಪಿಗಳ ಹೆಸರುಗಳಿವೆ. ಜೈನ 'ಭಗವತೀ' ಸೂತ್ರದಲ್ಲಿ "ಣಮೋ ಬಂಭೀ ಏ ಲಿವಿ ಏ" ಅಂದರೆ "ನಮಃ ಬ್ರಾಹ್ಮೈ ಲಿಪ್ಯೈ"—ಎಂದಿದೆ. ಮಹಾವಗ್ಗದಲ್ಲಿ ಸಿದ್ಧಾರ್ಥನು ವಿದ್ಯಾರ್ಥಿಯಾಗಿ ಚಂದನಫಲಕವನ್ನೂ, ಸುವರ್ಣ ಶಲಾಕೆಯನ್ನೂ ಹಿಡಿದು ಲಿಪಿಶಾಲೆಗೆ ಹೋಗುತ್ತಿದ್ದ ವರ್ಣನೆಯಿದೆ.

‡ 'ಕರ್ನಾಟ ಭಾಷಾಲಿಪಿ' ಪುಟ ೧೨.

ಮೇಲೆ ಹೇರಳವಾಗಿ ಕೊಟ್ಟ ದೃಷ್ಟಾಂತಗಳ ಮೇಲಿಂದ 'ಲಿಪಿಯ' ವಿಷಯವು ಭಾರತೀಯರಿಗೆ ಗೊತ್ತಿತ್ತೆಂದೂ ಮತ್ತು ಅದು ಸಾಕಷ್ಟು ಪ್ರಾಚೀನವಾಗಿದೆಯೆಂದೂ ಕಂಡುಬಂದಿರಲಿಕ್ಕೆ ಸಾಕು.

ಹಿಂದಿನ ಕಾಲದಲ್ಲಿ, ಈ ವರ್ಣಗಳನ್ನು ಭೂರ್ಜ, ತಾಳ, ತಾಮ್ರ, ಚಂದನ, ಇಲ್ಲವೆ ರಾಜಶಾಸನಗಳ ವಿಷಯದಲ್ಲಿ ಸುವರ್ಣಪತ್ರಗಳ ಮೇಲೆ ಬರೆಯುತ್ತಿದ್ದರು. ಶಿಲಾ-ಲಿಪಿಗಳಂತೂ ಸ್ಪಷ್ಟವೇ. ಬರೆಯುವ ಸಾಧನಗಳಾಗಿ ಗಣಿಕೆ, ಲೋಹಕಂಠ, ಬಳಪ, ಲಾಳದ ಕಡ್ಡಿ, ಇಲ್ಲವೆ ಟಂಕಗಳನ್ನು ಉಪಯೋಗಿಸುತ್ತಿದ್ದರು. ಪಕ್ಷಿಗಳ ಗರಿಯಿಂದ ಬರೆಯುವುದು ಮಹಮದೀಯ ಕಾಲಕ್ಕೆ ಪ್ರಾರಂಭವಾಯಿತು. ಮಸಿಗಾಗಿಯೂ ಒಂದು ಕ್ರಮವಿತ್ತು. ಡಾ. ಬುಹಲರ್ ಅವರು ಹೇಳುವಂತೆ ಈ ಮಶಿಯನ್ನು ಹೀಗೆ ಸಿದ್ಧಿಸುತ್ತಿದ್ದರು—

"Ink composed of charcoal made from almonds boiled in cow's urine."

ಕಾಗದವು ಭರತಖಂಡಕ್ಕೆ ಬಂದದ್ದು 'ಅರಬ್ಬೀ' 'ಕಾಗಜ್'ದಿಂದ.

ಕನ್ನಡ ಲಿಪಿಯ ಪ್ರಾರಂಭ:—ಭಾರತೀಯ ಲಿಪಿಯು ಈ ರೀತಿ ಪ್ರಾರಂಭವಾಗಿದ್ದರೆ, ಕನ್ನಡ ಲಿಪಿಯು ಪ್ರಾರಂಭವಾದ ರೀತಿ ಹೇಗೆ? ಎಲ್ಲ ದ್ರಾವಿಡ ವರ್ಣಮಾಲೆಯೂ, ಸಂಸ್ಕೃತದ ನಾಗರಿಯಂತೆ ಅಶೋಕನ ಬ್ರಾಹ್ಮಿಲಿಪಿಯ ಪ್ರಭೇದದ ಮೂಲಕ, 'ಗವಿ'ಯ ಮಾರ್ಗವಾಗಿಯೇ ನಿಷ್ಪನ್ನವಾದುದೆಂದು ಇಂದು ಎಲ್ಲ ವಿದ್ವಾಂಸರೂ ಒಪ್ಪಿದ್ದಾರೆ. ಆ ರೀತಿ, ಕನ್ನಡವಾದರೂ, ಈ ಅಶೋಕ ಲಿಪಿಯಿಂದಲೇ ಪ್ರಾರಂಭವಾಯಿತು.

ಆದರೆ, ಲಿಪಿಯ ದೃಷ್ಟಿಯಿಂದ ಕನ್ನಡ ಮತ್ತು ತೆಲುಗುಗಳಿಗಿದ್ದಷ್ಟು ಸಾಮ್ಯವು ಕನ್ನಡ ಮತ್ತು ತಮಿಳುಗಳಿಗಿಲ್ಲ. ಕನ್ನಡ ಮತ್ತು ತೆಲುಗು ವರ್ಣಮಾಲೆಗಳು ಇಂದಿಗೂ ಹೆಚ್ಚುಕಡಿಮೆ ಒಂದೇ ಆಗಿವೆ. ಈ ಎರಡೂ ಭಾಷೆಗಳಲ್ಲಿಯ ಕ ಮತ್ತು ತ ವರ್ಣಗಳಂತೂ ತೀರ ಸಮೀಪದಲ್ಲಿವೆ. ಈ ಸಾಮ್ಯವು ಇಂದಿನಕಿಂತ, ಹಿಂದು ಒಂದು ಕಾಲಕ್ಕೆ ತೀರ ಹೆಚ್ಚಾಗಿತ್ತೆಂದು ಹೇಳುತ್ತಾರೆ. ಕಿ. **ಶ. ೧೩೦೦ರ ವರೆಗಂತೂ ಕನ್ನಡ ಮತ್ತು ತೆಲುಗು ಅಕ್ಷರಗಳು ಒಂದೇ ಬಗೆಯಾಗಿದ್ದವು.** ಆದರೆ, ಕ್ರಿ. ಶ. ೧೩೦೦ರ ಈಚೆ ಮಾತ್ರ ನಿಧಾನವಾಗಿ ನಾವು ಈ ಎರಡೂ ವರ್ಣಮಾಲೆಗಳಲ್ಲಿ ವ್ಯತ್ಯಾಸವನ್ನು ಕಾಣಲಾರಂಭಿಸುತ್ತೇವೆ. ತಮಿಳಿನ ವರ್ಣಮಾಲೆಯು 'ವತ್ತೆಲುಟ್ಟುವಿ'ನಿಂದ ಪ್ರಾರಂಭವಾಯಿತೆಂದು ಹೇಳುತ್ತಾರೆ. ಧ್ವನಿಯ ಅಭಿವ್ಯಕ್ತಿಯ ದೃಷ್ಟಿಯಿಂದ ಕನ್ನಡ ಮತ್ತು ತೆಲುಗು ವರ್ಣಮಾಲೆಗಳು ಹೆಚ್ಚು ಕಡಿಮೆ ಸಂಸ್ಕೃತ ವರ್ಣಮಾಲೆಯನ್ನೇ ಆದರ್ಶವನ್ನಾಗಿ ಇಟ್ಟುಕೊಂಡಿದ್ದರಿಂದ ಇವುಗಳಲ್ಲಿಯ ಸ್ವರಾಭಿವ್ಯಕ್ತಿಯು ತುಂಬಾ ಪರಿಪೂರ್ಣವಾಗಿದೆ. ಆದರೆ, ತಮಿಳಿನಲ್ಲಿ ಮಾತ್ರ ಎಷ್ಟೋ ಉಚ್ಚಾರಗಳನ್ನು ಹೇಳಲಿಕ್ಕೆ ಒಂದೇ ವರ್ಣವನ್ನೇ ಉಪಯೋಗಿಸಿ, ಅದರ ಸ್ಥಾನದ ಬಲದಿಂದ ಉಚ್ಚಾರ ಭೇದವನ್ನು ನಿರ್ಣಯಿಸಬೇಕಾಗುತ್ತದೆ. ಉದಾಹರಣೆಗೆ, ತಮಿಳಿನಲ್ಲಿ ಪ್ರತ್ಯೇಕವಾದ ವರ್ಗ ತೃತೀಯವರ್ಣವಿಲ್ಲ. ಯಾವುದೇ ವರ್ಗೀಯ ವ್ಯಂಜನವು ಶಬ್ದದ ಆದಿಯಲ್ಲಿದ್ದಾಗ, ಪ್ರಥಮವರ್ಣದ ಉಚ್ಚಾರವನ್ನೂ, ಮಧ್ಯದಲ್ಲಿದ್ದಾಗ ತೃತೀಯವರ್ಣದ ಉಚ್ಚಾರವನ್ನೂ ಅಲ್ಲಿ ಪಡೆಯುವುದು ವಾಡಿಕೆ. ಹೀಗಾಗಿ, 'ಮಹಾತ್ಮಾ ಕಾಂದಿ' ಎಂದು ಬರೆದರೂ, ಉಚ್ಚಾರವು 'ಗಾಂಧಿ' ಎಂದೇ. ಅಲ್ಲದೆ, ತಮಿಳಿನಲ್ಲಿ ಮಹಾಪ್ರಾಣಗಳಂತೂ ಇಲ್ಲವೇ ಇಲ್ಲ. ಆದರೆ, ಕಂ - ತೆಲುಗು ವರ್ಣಮಾಲೆಯಲ್ಲಿ ಎಲ್ಲ ವಿಚಾರಗಳೂ ಸ್ಪಷ್ಟವಾಗಿವೆ.

ಈ ಬಗ್ಗೆ ಶ್ರೀ ಆರ್ ನರಸಿಂಹಾಚಾರ್ಯರು ವ್ಯಕ್ತಪಡಿಸಿದ ಅಭಿಪ್ರಾಯವು ನಿಜವಾಗಿಯೂ ಮನನೀಯವಾಗಿದೆ.—

"But the Tamil alphabet is a very imperfect system for expressing the Tamil sounds. and this is due, according to some Scholars, to its not being adapted from a Sanskrit proto-type." *

ಈ ಎಲ್ಲ ದ್ರಾವಿಡ ಲಿಪಿಗಳು ಮೂಲತಃ 'ಅಶೋಕಲಿಪಿ'ಯಿಂದಲೇ ಪ್ರಾರಂಭವಾದುವೆಂಬುದನ್ನು ಗಮನಿಸುವ ಮೊದಲು ದ್ರಾವಿಡ ಭಾಷಾವರ್ಗಕ್ಕೇ ಸೇರಿದ ಕನ್ನಡ ಮತ್ತು ತಮಿಳು ವರ್ಣಮಾಲೆಯಲ್ಲಿರುವ ಮುಖ್ಯವಾದ ವ್ಯತ್ಯಾಸಗಳೇನೆಂಬುದನ್ನು ನೋಡೋಣ.—

ಕಂದಮಿಳುವರ್ಣಮಾಲೆಯ ವ್ಯತ್ಯಾಸ—

ಕಂದಮಿಳುಗಳೆರಡರಲ್ಲೂ ಈ ಕೆಳಗಿನ ಸಾಮ್ಯಗಳಿವೆ.

(i) ಹ್ರಸ್ವ ಎ ಮತ್ತು ಒ ಎರಡರಲ್ಲೂ ಇವೆ. ಹಾಗೇ ೞ, ಳ, ಮತ್ತು ಱ.

(ii) ಋ ೠ ಗಳು ಎರಡರಲ್ಲೂ ಕ್ವಚಿತ್‌ಪ್ರಯುಕ್ತ.

(iii) 'ಹ'ಕಾರ ಕಡಿಮೆ.

ವ್ಯತ್ಯಾಸಗಳೆಂದರೆ—

(i) ತಮಿಳಿನಲ್ಲಿ 'ಹ'ಕಾರಯುಕ್ತ ಶಬ್ದಗಳೇ ಇಲ್ಲ; ಕನ್ನಡದಲ್ಲಿ ಇದ್ದರೂ ಉಪಯೋಗ ಮಾಡುವುದು ಕಡಿಮೆ.

(ii) ತಮಿಳಿನಲ್ಲಿ ಒಂದೇ ವರ್ಣವೇ ಮೃದು ಮತ್ತು ಕರ್ಕಶ ವ್ಯಂಜನಗಳೆರಡನ್ನೂ ಸೂಚಿಸುತ್ತದೆ.

(iii) 'ನ' ಉಚ್ಚಾರಕ್ಕಾಗಿ ಎರಡು ವರ್ಣಗಳು ತಮಿಳಿನಲ್ಲಿವೆ; ಹಾಗೆ ಕನ್ನಡದಲ್ಲಿಲ್ಲ.

(iv) ಸಂಸ್ಕೃತದಲ್ಲಿಯ ವಿಸರ್ಗದ ಹಾಗೆ ಹೆಚ್ಚು ಕಡಿಮೆಯಾಗಿದ್ದ 'ಆಯ್ದಮ್' ಎಂಬ ಈ ವರ್ಣ ஃ ಕನ್ನಡದಲ್ಲಿಲ್ಲ.

(v) ಕನ್ನಡದಲ್ಲಿ 'ನಿಸರ್ಗವಾಗಿ ವಿಸರ್ಗವಿಲ್ಲ'.

(vi) ತಮಿಳಿನಲ್ಲಿ ಯಾವ ಪದವೂ 'ರ'ಕಾರದಿಂದ ಪ್ರಾರಂಭವಾಗುವಂತಿಲ್ಲ. ಉದಾ: ಅರರ್ಶ; ಇರಾಮ್ರ, ಉಲೋಕಂ. ಇ.

ಈ ವ್ಯತ್ಯಾಸಗಳ ಮುಖ್ಯವಾದ ಕಾರಣವೆಂದರೆ, ನಾವು ಈ ಮೊದಲೇ ಹೇಳಿದಂತೆ, ಕನ್ನಡ ಮತ್ತು ತೆಲುಗು ವರ್ಣಮಾಲೆಗಳು ಸಂಸ್ಕೃತ ವರ್ಣಮಾಲೆಯನ್ನು ಆದರ್ಶವಾಗಿ ಸ್ವೀಕರಿಸಿ, ಆ ರೀತಿ ತಮ್ಮ ವರ್ಣಗಳನ್ನು ಯೋಜಿಸಿಕೊಂಡವು; ತಮಿಳು ಮಾತ್ರ ಮೂಲತಃ ಅದೇ ಬುಡಕಟ್ಟಿನದಾದರೂ, ತನ್ನ ವ್ಯಾಕರಣವನ್ನು ಪ್ರತ್ಯೇಕವಾಗಿ ನಿರ್ಮಿಸಿಕೊಂಡಂತೆ ವರ್ಣಮಾಲೆಯನ್ನೂ ಪ್ರತ್ಯೇಕವಾಗಿಯೇ ಏರ್ಪಡಿಸಿಕೊಂಡಿತು. ಆದರೆ, ಅದೇನೇ ಇದ್ದರೂ, ಈ ಅಕ್ಷರಗಳೆಲ್ಲ ಮೂಲತಃ ಅಶೋಕನ ಬ್ರಾಹ್ಮಿಲಿಪಿಯಿಂದ ಬಂದುವೆಂಬುದನ್ನು ಮಾತ್ರ ನಾವು ಮರೆಯಕೂಡದು. ಕನ್ನಡ ಮತ್ತು ತೆಲುಗು ಲಿಪಿಗಳು ಹೆಚ್ಚು ಕಡಿಮೆ ಒಂದೇ ಆಗಿದ್ದು, ಕ್ರಿ. ಶ. ೧೪ರ

* H. K. L. P. 50

ಮೊದಲಂತೂ ಎರಡನ್ನೂ ಬೇರೆ ಬೇರೆಯಾಗಿ ಗುರುತಿಸಲು ಸಹ ಸಾಧ್ಯವಿಲ್ಲ. ಹಳಗನ್ನಡ ಲಿಪಿಯು ಕ್ರಿ. ಶ. ೧೪ರ ವರೆಗೆ ಪ್ರಚಾರದಲ್ಲಿದ್ದು, ಈ ಕಾಲದ ವರ್ಣಗಳು ಪೂರ್ವದಂತೆ ಚೌಕವಾಗಿಯೂ, ಕೋಣಾಕಾರವಾಗಿಯೂ ಇರದೆ, ಗುಂಡಗೆ ಅಂದವಾಗಿರುತ್ತವೆ. ೧೪ರಿಂದ ಈಚೆ ಇಂದಿನ ಲಿಪಿಯ ಛಾಯೆಯು ನಿಧಾನವಾಗಿ ಕಂಡುಬರುತ್ತಿದೆ.

ದ್ರಾವಿಡ ಭಾಷೆಗಳ ವರ್ಣಮಾಲೆಯೆಲ್ಲ ಅಶೋಕಲಿಪಿಯಿಂದ ಬಂದುದು

ದ್ರಾವಿಡ ಭಾಷೆಗಳ—ಅಷ್ಟೇ ಏಕೆ ಇಂದಿನ ನಾಗರಿಯ— ವರ್ಣಗಳೆಲ್ಲ ಮೂಲತಃ ಅಶೋಕ ಲಿಪಿಯಿಂದಲೇ ಯಾವ ರೀತಿ ನಿಷ್ಪನ್ನವಾದುವೆಂಬುದನ್ನು ಹಲವು ವರ್ಣಗಳ ದೃಷ್ಟಾಂತಗಳಿಂದ ಸ್ಪಷ್ಟ ಮಾಡಬಹುದು

ಉದಾಹರಣೆಗೆ, ಈ ವರ್ಗದ ' ಕ ' ವರ್ಣವನ್ನೇ ತೆಗೆದುಕೊಳ್ಳೋಣ :—

ಈ 'ಕ' ವರ್ಣವನ್ನು ಮೂಲತಃ ಅಶೋಕಲಿಪಿಯಲ್ಲಿ ಬರಿಯ ಲ್ಯಾಟಿನ್ ಶಿಲುಬೆಯ ಹಾಗೆ, ಹೀಗೆ "†" ಬರೆಯುತ್ತಿದ್ದರು. ಅನಂತರ ಇದೇ ' ಗವಿಲಿಪಿ 'ಯಲ್ಲಿ ಹೆಚ್ಚುಕಡಿಮೆ ಈಗಿನ ಇಂಗ್ಲಿಷದ ' 𝓕 'ದ ಹಾಗಾಗಿ, ಮೇಲೆರಡು ಕೊಂಬುಗಳನ್ನು ಪಡೆಯಿತು. ಅನಂತರ ' ವತ್ತೆಲುಟ್ಟು 'ವಿನಲ್ಲಿ ಆ ಕೊಂಬುಗಳನ್ನು ಕಳೆದುಕೊಂಡು ಹೆಚ್ಚುಕಡಿಮೆ ' 𝓕 ' ಹೀಗಾಯಿತು. ವತ್ತೆಲುಟ್ಟುವಿನಲ್ಲಿ, ' ꟻ ' ಈ ರೀತಿ ಆಯಿತು. ಇದರಿಂದಲೇ ಅನಂತರ ತಮಿಳು ಕ; ನಾಗರಿ क; ಹಳಗನ್ನಡ ' ಗ್ಯಾಸಿನ ದೀಪ ' T; ಮತ್ತು ತೆಲುಗು ' S — ಬಂದುವು. ಹೀಗಾಗಿ, ಕೇವಲ ಒಂದು—' ಅಶೋಕಲಿಪಿ 'ಯ ಲ್ಯಾಟಿನ್ ಶಿಲುಬೆಯಿಂದ ಕನ್ನಡದ ವರೆಗಿನ ವರ್ಣಗಳು ಸಿದ್ಧಿಸಿಕೊಂಡವು. ಕಂದಮಿಳುಗಳನ್ನು ತಾಳೆಯೋಲೆಯ ಮೇಲೆ ಬರೆಯಬೇಕಾದ್ದರಿಂದ, ವರ್ಣಗಳು ಅವಶ್ಯಕವಾಗಿ ' ದುಂಡಾಗಿಯೂ ' ' ಸುಂದರವಾಗಿಯೂ ' ಎದ್ದುಬರಲು ಪ್ರಾರಂಭಿಸಿದವು.

ಇದರಂತೆಯೇ ' ಯ ' ವರ್ಣ ಮತ್ತು ಒತ್ತುಗಳು.

ಹೀಗಾಗಿ, ಇಂದು ತೀರ ಭಿನ್ನವಾಗಿ ಕಂಡುಬರುತ್ತಿರುವ ಈ ವರ್ಣಗಳೆಲ್ಲ ಒಂದು ಕಾಲಕ್ಕೆ ಸಾಮಾನ್ಯವಾದ ಉಗಮದಿಂದ ಪ್ರಾರಂಭವಾದುವೆಂಬುದನ್ನು ಕಾಣುತ್ತೇವೆ. ಆದರೆ ಇಂದು ಮಾತ್ರ ಕನ್ನಡದಂತೆ ತಮಿಳು ವರ್ಣಗಳಿಲ್ಲ; ಕನ್ನಡದಲ್ಲಿದ್ದಷ್ಟು ವರ್ಣಗಳು ತಮಿಳಿನಲ್ಲಿಲ್ಲ. ಹಾಗಾದರೆ, ಕನ್ನಡದಲ್ಲಿರುವ ವರ್ಣಗಳಾದರೂ ಎಷ್ಟು? —ಅರ್ಥಾತ್ ಕನ್ನಡ ಶುದ್ಧಗೆ ಎಷ್ಟು ?— ಇದರ ಬಗ್ಗೆ ಆಧುನಿಕರ ಅಭಿಪ್ರಾಯ ವೇನು ನೋಡೋಣ: –

ಕನ್ನಡ ಶುದ್ಧಗೆ ಎಷ್ಟು?

ಯಾವುದೇ ಭಾಷೆಯ ವ್ಯಾಕರಣದ ಅಭ್ಯಾಸಕ್ಕೆ, ಆ ಭಾಷೆಯ ' ಅಕ್ಷರ 'ಜ್ಞಾನವು ತೀರ ಆವಶ್ಯಕವಾಗಿದೆ. " ಉಚ್ಚರಿಸಲು ಸಾಧ್ಯವಿದ್ದು, ಬರೆಹದಲ್ಲಿ ಒಡಮೂಡಿಸಬಹುದಾದ ' ಧ್ವನಿಗಳು ' ಮಾತ್ರ ವರ್ಣ ಇಲ್ಲವೆ ಅಕ್ಷರಗಳಾಗಬಲ್ಲವು. ಈ ರೀತಿ ' ಬರೆಪಂ ಬೊಕ್ಕು ಉಚ್ಚರಿಸಲ್ ಬಾರದುವು ಅಕ್ಕರಮ್ ಅಲ್ತು; ಅವು ಘನಸ್ವನಾದಿ ಧ್ವನಿಗಳ್."

ಕೇವಲ ಸಂಸ್ಕೃತ ವರ್ಣಮಾಲೆಯನ್ನೇ ಮುಖ್ಯವಾಗಿ ಗಮನಿಸಿದ ಕೇಶಿರಾಜನಿಗೆ, ಹಲಕೆಲವು ಕನ್ನಡದ ವಿಶಿಷ್ಟ ವರ್ಣಗಳು ಕಂಡುಬಂದರೂ, ಕನ್ನಡದ ಈ ಶುದ್ಧಗೆಯ ಸಮಸ್ಯೆ ಅಷ್ಟು ಮಹತ್ವದ್ದೆನಿಸಲಿಲ್ಲ. ಅಂತಲೇ, ಅವನು ನೇರವಾಗಿ " ವರ್ಣಂಗಳ ಪಾಠಕ್ರಮಮ್ ಅರ್ಣವವೃತ ಧಾತ್ರಿಯೊಳ್ ಪ್ರಸಿದ್ಧಮ್

ನಿಜದಿಂ; ವರ್ಣಂಗಳ್ ‘ಅ’ಕಾರಾದಿ ಆಪೂರ್ಣತೆಯಂ ಪಡೆವುವು ಆ ‘ಳ’ಕಾರಂ ಬರೆಗಂ”*—ಎಂದು ಈ ಶುದ್ಧಗೆಯ ವಿಷಯವನ್ನು ಪ್ರಾರಂಭಿಸಿಬಿಟ್ಟನು. ಹದಿನೇಳನೆಯ ಶತಮಾನದ ಭಟ್ಟಾಕಲಂಕನು ಕೂಡ **‘ಸಿದ್ಧಾ ಹಿ ಶುದ್ಧಕಾಃ’**—ಎಂದೇ ಪ್ರಾರಂಭಿಸಿದನು. ಅದರೆ, ಆಧುನಿಕ ಭಾಷಾಶಾಸ್ತ್ರಜ್ಞರ ಪ್ರಕಾರ ಈ ವೈಯಾಕರಣಿಗಳು ಹೇಳಿದ ‘ಶುದ್ಧಗೆ’ ಇಂದು ಅಷ್ಟು ಸಮ್ಮತವಿಲ್ಲ. ಅವರು ಹೇಳಿದ ವರ್ಣಮಾಲೆಯ ಸಂಖ್ಯೆಯು ಇಂದಿನ ಕನ್ನಡಕ್ಕೆ ಹೆಚ್ಚಿನದಾಗಿದೆ.

ಹಾಗಾದರೆ, ಪ್ರಾಚೀನ ಮತ್ತು ಅರ್ವಾಚೀನ ಭಾಷಾವೇತ್ತರ ಈ ಅಭಿಪ್ರಾಯಗಳಲ್ಲಿಯ ವ್ಯತ್ಯಾಸ ವೇನು? ವಿಚಾರ ಮಾಡುವಾ.

ಈ ವಿಷಯವಾಗಿ ಹಲವು ಹೆಚ್ಚಿನ ಮಾತುಗಳನ್ನು ಹೇಳಿದ ಕೇಶಿರಾಜನ ಪ್ರಕಾರ, ಕನ್ನಡದಲ್ಲಿ ೪೭ ವರ್ಣಗಳಿವೆ. ಇದನ್ನು ಅವನು ಹೇಳುವ ರೀತಿಯೆಂದರೆ, —ಸಂಸ್ಕೃತದಲ್ಲಿಯಂತೂ **ಹದಿನಾಲ್ಕು** ಸ್ವರಗಳೂ; **ಇಪ್ಪತ್ತೈದು** ವರ್ಗೀಯ ವ್ಯಂಜನಗಳೂ; **ಒಂಬತ್ತು** ಅವರ್ಗೀಯಗಳೂ; **ನಾಲ್ಕು** ಯೋಗವಾಹ ಗಳೂ (×ಕ, ಟಿ, ಬಿಂದು ಮತ್ತು ವಿಸರ್ಗ); ಕೂಡಿ **ಐವತ್ತೆರಡು ವರ್ಣ**ಗಳಿವೆಯಷ್ಟೇ— ಈ ಸಂಸ್ಕೃತದ ೫೨ ವರ್ಣಗಳಲ್ಲಿ, ಹಲವು ವರ್ಣಗಳು ಕನ್ನಡದಲ್ಲಿಲ್ಲ; ಇನ್ನೂ ಹಲವು ನೈಜವಾಗಿ ಕನ್ನಡದಲ್ಲಿದ್ದುವು ಇದರಲ್ಲಿ ಸೇರಬೇಕು. ಹೀಗಾಗಿ, ಕನ್ನಡದಲ್ಲಿ ಒಟ್ಟು ೪೭ ವರ್ಣಗಳಿವೆ. ಈ ಬಗ್ಗೆ ಕೇಶಿರಾಜನು ಹೇಳುವದೊಂದರೆ—

ತಿಳಿ ದೇಶೀಯಮಂ ಐದಂ;—
ಕಳೆ ನೀಂ ಋ ಲೃ ವರ್ಣ ಶ ಷ ವಿಸರ್ಗ ×ಕ ಟಿ ।
ಕ್ಷಳನಂ; **ನಾಲ್ವತ್ತೇಳಾ—**
ಯ್ತಾಳೆ ಶುದ್ಧಗೆ ಅಚ್ಚಗಂನಡಕ್ಕೀಕ್ರಮದಿಂ ॥ †

ಅಂದರೆ, ಈ ಮೇಲಿನ ೫೨ ವರ್ಣಗಳಲ್ಲಿ, **ಐದು** ದೇಶ್ಯವರ್ಣಗಳನ್ನು ‘ತಿಳಿ’-ಅಂದರೆ ಕೂಡಿಸಬೇಕು ಈ **ದೇಶ್ಯವರ್ಣ**ಗಳೆಂದರೆ ಸಂಸ್ಕೃತದಲ್ಲಿರದೆ ಕೇವಲ ಕನ್ನಡದಲ್ಲಿ ಮಾತ್ರ ಇದ್ದುವು. ಇವು ಯಾವುವೆಂಬುದನ್ನೂ ಕೇಶಿರಾಜನು ತನ್ನ ಶ. ಮ. ದರ್ಪಣದ ೧೮ ಮತ್ತು ೧೯ನೆಯ ಸೂತ್ರಗಳಲ್ಲಿ ಹೇಳುತ್ತಾನೆ. ಅವೆಂದರೆ, ‘ಅತಿಪೀಡನದಿಂ ರೇಫಾಶ್ರಿತಮಾದ **ಱಕಾರ**’ ‘ಡಕಾರಾಶ್ರಿತಮಾದ ೞ’; ‘ಅಂಗೀಕೃತ ಲತ್ವಕ್ಕೆ ಬೆಟ್ಟತೆನಿಸಿದ **ಕುಳ**’; ಮತ್ತು ಇವು ‘ದೇಶೀಯಮೆನಿಪುವು ಹ್ರಸ್ವವೆನಿಸಿದ ಎ, ಒ, ಸಹಿತಂ’. ಹೀಗಾಗಿ, ಈ ‘ಱ, ೞ, ಳ, ಮತ್ತು ಎ. ಒ,’ ಎಂದು **ಐದು** ವರ್ಣಗಳು ದೇಶೀಯಗಳು. ಆದ್ದರಿಂದ, ೫೨ + ೫ = ೫೭.

ಆದರೆ, ಈ ೫೭ ವರ್ಣಗಳಲ್ಲಿ ಕನ್ನಡ ಭಾಷೆಗೆ ಬೇಕಾಗದಿದ್ದ ಇನ್ನೂ **ಹತ್ತು** ವರ್ಣಗಳು ಸೇರಿಕೊಂಡಿವೆ. ಅವು ಸಂಸ್ಕೃತ ಭಾಷೆಗೇನೋ ಆವಶ್ಯಕ; ಆದರೆ ಕನ್ನಡಕ್ಕೆ ಬೇಕಿಲ್ಲ. ಅವೆಂದರೆ, “ಋ, ೠ, ಲೃ ಲೄ, ಶ, ಷ, ವಿಸರ್ಗ, ×ಕ, ಟಿ ಮತ್ತು ಕ್ಷಳ”. ಆದ್ದರಿಂದ, ೫೭ ಉಣೆ ೧೦=೪೭ ಕನ್ನಡದಲ್ಲಿ ‘ನಿಸರ್ಗಮಾಗಿ ವಿಸರ್ಗವಿಲ್ಲ’. ಆದರೆ, ಕೇಶಿರಾಜನು ಹೇಳಿದ ಈ ೪೭ ವರ್ಣಗಳು ಕೂಡ, ಆಧುನಿಕರ ಪ್ರಕಾರ ಕನ್ನಡ ವರ್ಣಮಾಲೆಗೆ ಆವಶ್ಯಕವಿಲ್ಲ. ಇದರಲ್ಲಿಯ ಎಷ್ಟೋ ವರ್ಣಗಳನ್ನು ನಾವು ಬಿಡಬಹುದು. ಆದ್ದರಿಂದ ಆಧುನಿಕರ ಪ್ರಕಾರ ಕನ್ನಡದಲ್ಲಿ **೩೨** ಮತ್ತು ಶುದ್ಧಾಕ್ಷರಗಳಿವೆ.

---

* **ಶ. ಮ. ದ. ಸೂ. ೪.** † **ಅದೇ ಸೂ ೭೧**

ಯಾಕಂದರೆ, ಮೇಲೆ ವಿವರಿಸಿದ ೪೭ ವರ್ಣಗಳಲ್ಲಿ, ಇಂದಿನ ಕನ್ನಡಕ್ಕೆ—

೧. ‘ಱ, ೞ’ ವರ್ಣಗಳು ಬೇಕಿಲ್ಲ.
೨. ಅನುಸ್ವಾರವೂ ಅಗತ್ಯವಿಲ್ಲ.
೩. ಸಂಧ್ಯಕ್ಷರಗಳಿಗೆ ವಿಕಲ್ಪವಿದೆ.
ಮತ್ತು ೪. ಮಹಾಪ್ರಾಣಗಳಂತೂ ಇಲ್ಲವೇ ಇಲ್ಲ.

ಹೀಗಾಗಿ, ಮೇಲಿನ ಈ ವರ್ಗದ, ೨ + ೧ + ೨ + ೧೦ = ೧೫ ವರ್ಣಗಳನ್ನು ಕಳೆದರೆ, ಕನ್ನಡದಲ್ಲಿ **೩೨ ವರ್ಣಗಳು** ಮಾತ್ರ.

೧. **ಱ, ೞ, ವರ್ಣಗಳು**—ಹದಿಮೂರನೆಯ ಶತಮಾನದ ಕೇಶಿರಾಜನು ಈ ವರ್ಣಗಳು ಕನ್ನಡ ವಿಶಿಷ್ಟವಾಗಿವೆಯೆಂದು ಹೇಳಿದನಲ್ಲದೆ, ಇವು ಹುಟ್ಟುವ ಕ್ರಮವನ್ನೂ, ಇವುಗಳ ಪ್ರಾಸ, ಯಮಕ ಮತ್ತು ವರ್ಣಾವೃತ್ತಿಗಳ ಬಗೆಯನ್ನೂ ಹೇಳಿದನು.

ಹಳಗನ್ನಡದಲ್ಲೇನೋ ಈ ವರ್ಣಗಳಿಗೆ ತುಂಬಾ ಮಹತ್ವವಿದ್ದಿತು. ಯಾಕಂದರೆ, ಇವುಗಳ ಭೇದದಿಂದ ಎಷ್ಟೋ ಅರ್ಥಭೇದವೇ ಆಗುತ್ತಿತ್ತು. ಉದಾಹರಣೆಗೆ, ‘ಅರಿ’ ಎಂದರೆ ‘ಕತ್ತರಿಸು’ ಎಂದು ಅರ್ಥವಾದರೆ, ‘ಅಱಿ’ ಎಂದರೆ ‘ತಿಳಿ’ ಎಂದರ್ಥವಾಗುತ್ತದೆ. ‘ಕರೆ’ ಎಂದರೆ ಕಡಲತೀರ ಎಂದಾದರೆ, ‘ಕಱೆ’ ಎಂದರೆ ‘ಕುಂದು, ಕಲಂಕ’ ಎಂದಾಗುತ್ತದೆ. ಆದರಂತೆ, ‘ಬಾಳೆ’ ಎಂದರೆ ಮೀನ; ‘ಬಾೞೆ’ ಎಂದರೆ ‘ಬಾಳೆಯ ಹಣ್ಣು’; ‘ಆಳ್’ ಎಂದರೆ ಸೇವಕ; ‘ಆೞ್’ ಎಂದರೆ ಮುಳುಗು—ಇತ್ಯಾದಿ.

ಆದರೆ, ಕ್ರಿ. ಶ. ೧೨೬೦ರ ಸುಮಾರಿಗೇ, ಕೇಶಿರಾಜನು ಈ ವರ್ಣಗಳ ಬಗ್ಗೆ ಕೊಡುವ ವಿಸ್ತೃತವಾದ ವಿವರಣೆಯನ್ನು ನೋಡಿದರೆ, ಈ ಕಾಲಕ್ಕೇ ಈ ವರ್ಣಗಳ ಉಪಯೋಗದ ಬಗ್ಗೆ ಸಾಕಷ್ಟು ಗೊಂದಲವುಂಟಾದಂತೆ ಕಂಡುಬರುತ್ತದೆ. ಇವುಗಳ ಪ್ರಾಸ, ಯಮಕಗಳ ವಿಷಯ ಕೆಲಮಟ್ಟಿಗೆ ಅನಿರ್ಬಂಧವಾಗಹತ್ತಿದಂತೆ ಕಾಣುತ್ತದೆ.

ಹೆಚ್ಚುಕಡಿಮೆ ಇದೇ ಕಾಲದ ಹರಿಹರನು ಈ ಅಭಿಪ್ರಾಯವನ್ನು ಸ್ಪಷ್ಟವಾಗಿಯೇ ಹೇಳುತ್ತಾನೆ—

ನೋಡುವೊಡೊಂದಕ್ಕರಮುದು
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ ।
ಕೂಡೆಕವಿತತಿ ವಿಚಾರಿಸ-
-ಬೇಡದಱಿಂ ರಳಕುಳಕ್ಷಳಂಗಳನಿದಱೊಳ್ ॥

ಈ ಪ್ರಕಾರ, ಈ ವರ್ಣಗಳ ಉಚ್ಚಾರ**ಪ್ರಭೇದವು** ಹೆಚ್ಚುಕಡಿಮೆ ಈ ಕಾಲಕ್ಕೇ ಮಾಯವಾಗುತ್ತಿದ್ದಂತೆ ಕಾಣುತ್ತದೆ. ೧೬ನೆಯ ಶತಮಾನದ ರತ್ನಾಕರವರ್ಣಿಯಂತೂ, ಈ ‘ಱ ೞ’ಕುಳಗಳ ಬಂಧನವು ಕೇವಲ ವಸ್ತುಕ ಕಾವ್ಯಗಳಿಗೆ ಮಾತ್ರ ಇದೆಯೆಂದೂ, ವರ್ಣಕಕ್ಕೆ ಇವಿಲ್ಲದೆ ಕೂಡ ನಡೆಯುವದೆಂದೂ ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳಿದನು:—

‘ರಳ ಕುಳ ಶಿಥಿಲ ಸಮಾಸ ಮುಂತಾದವ-
-ರೊಳಗಿಲ್ಲಿ ಕೆಲವುಳ್ಳುರುಂಟು;
ಕೆಲವಿಲ್ಲಾದರು ಇಲ್ಲವೇಕೆಂದರವರ ಕೋ-
-ಟಲೆಯೇಕೆ ಹಾಡುಗಬ್ಬದೊಳು?’

ಅಲ್ಲದೆ, ಇದಕ್ಕೂ ಹೆಚ್ಚು ಸ್ಪಷ್ಟವಾಗಿ, ಇನ್ನೊಂದೆಡೆಯಲ್ಲಿ **"ಸಕಲ ಲಕ್ಷಣವು ವಸ್ತುಕಕೆ; ವರ್ಣಕಕಿಷ್ಟು ವಿಕಳವಾದರು ದೋಷವಿಲ್ಲ"** ಎಂದು ಅವನು ಹೇಳುತ್ತಾನೆ. ಆದರೆ, ಭಟ್ಟಾಕಲಂಕನು ಮಾತ್ರ ಇನ್ನೂ 'ೞ' ಕಾರವು ಲಿಪಿಯಲ್ಲಿ ಇದ್ದುದನ್ನು ಹೆಚ್ಚುಕಡಿಮೆ ಈ ಕಾಲಕ್ಕೇ ಹೇಳುತ್ತಾನೆ—" ಕನ್ನಡಿಗರ್ ೞಕಾರಮಂ ಒಡಂಬಟ್ಟರ್ "

ಇಂದಿನ ಕನ್ನಡದಲ್ಲಿಯಂತೂ, ನಾವು ಈ ಉಚ್ಚಾರ ಇಲ್ಲವೆ ಲಿಪಿ ಭೇದಗಳನ್ನು ಇಟ್ಟುಕೊಂಡೇ ಇಲ್ಲ. ಆದ್ದರಿಂದ, ಇಂದಿನ ವರ್ಣಮಾಲೆಯಲ್ಲಿ ಈ ಎರಡೂ ವರ್ಣಗಳನ್ನು ನಾವು ಬಿಡಬಹುದು.

೨. **ಅನುಸ್ವಾರ** :— ವಿಸರ್ಗದಂತೆ, ಅನುಸ್ವಾರವೂ ಕನ್ನಡಕ್ಕೆ ತೀರ ಅಗತ್ಯವೇನೂ ಇಲ್ಲ. ಯಾಕಂದರೆ, ಈ ಅನುಸ್ವಾರವನ್ನೂ ಕೂಡ, ವರ್ಗಪಂಚಮದಿಂದ ಸ್ಪಷ್ಟಪಡಿಸಲಿಕ್ಕೆ ಬರುತ್ತದೆ. ಸ್ವತಃ ಕೇಶಿರಾಜನೇ 'ವರ್ಗದಂತ್ಯಂಗಳಂ ಅಂ ಅನುನಾಸಿಕಾಖ್ಯೆಯಂ ತಳೆದಿರ್ಕುಂ' ಎಂದು ಹೇಳಿ, ಇದಕ್ಕೆ ದೃಷ್ಟಾಂತವಾಗಿ, — ಬಿಂಕ 7 ಬಿಙ್ಕ; ಅಂಚೆ 7 ಅಞ್ಚೆ; ತೊಂಡು 7 ತೊಣ್ಡು; ಬಂದು 7 ಬನ್ದು; ಇ. ಇ ಹೇಳುತ್ತಾನೆ.

ಬಿಙ್ಕಂಬೆತ್ತಿಸೆವ ಅಞ್ಚೆಯ ಸಙ್ಕುಳಮಂ
ತೊಣ್ಡುಗೆಡೆವ ಶುಕಸಾರಿಕೆಯುಂ
ಸೋಙ್ಕೆ ಬಲವನ್ದು ತೀಡುವ ತೆಙ್ಕಣಗಾಳಿಯುಮ್
ಅದೇಂ ಮನಙ್ಗೊಳಿಸಿದುದೋ ! — *

ಆದ್ದರಿಂದ ಅನುಸ್ವಾರವನ್ನೂ ಇಂದಿನ ಕನ್ನಡ ವರ್ಣಮಾಲೆಯಿಂದ ಬಿಡಬಹುದು.

೩. **ಸಂಧ್ಯಕ್ಷರಗಳು**— ಈ ಸಂಧ್ಯಕ್ಷರಗಳೂ ಕನ್ನಡದಲ್ಲಿ ವಿಕಲ್ಪವಾಗಿವೆ. ಕೇಶಿರಾಜನೇನೋ ತನ್ನ ಶ. ಮ. ದರ್ಪಣದ ೧೦ನೆಯ ಸೂತ್ರದಲ್ಲಿ ತುಂಬಾ ಅಭಿಮಾನದಿಂದ—

ವರ ಸಂಧ್ಯಕ್ಷರದಂತಿರೆ ಗುರುದೀರ್ಘಂ
—ಗೂಢ ಸಂಧಿಯೆನೆ ತೋಳ್ ನಾಲ್ಕುಂ |
ಕರಮ್ ಎಸೆದಿರ್ಕುಂ ಪದ್ಮೋದರಂಗೆ—
ಚಕ್ರ ಅಸಿ ಶಂಖ ಶಾರ್ಙ್ಗಸಮೇತಂ || †

ಎಂದು ಹೇಳಿದರೂ, ಇದನ್ನು ವಿಕಲ್ಪವಾಗಿ ಬೇರೆ ರೀತಿಯಾಗಿ ಬರೆಯಲು ಬರುತ್ತದೆಂದು ಅನ್ಯತ್ರ ತಾನೇ ಹೇಳಿದ್ದಾನೆ. ಕೇಶಿರಾಜನ ಪ್ರಕಾರ ಈ ಸಂಧ್ಯಕ್ಷರಗಳಲ್ಲಿಯ 'ಐ' ಮತ್ತು 'ಔ'ಕಾರಗಳನ್ನು 'ಎಯ್' ಮತ್ತು 'ಅವ್' ಕಾರಗಳಾಗಿ ಬರೆಯಲು ಬರುತ್ತದೆ. ಈ ಪ್ರಕಾರ 'ಮೈ' ಇದ್ದುದನ್ನು 'ಮೆಯ್' ಎಂದೂ, 'ಕೌಂಗು' 'ಕೌಂಕುಳ್'ಗಳನ್ನು **ಕವುಂಗು ಕವುಂಕುಳ್** ಎಂದೂ ಬರೆಯಬಹುದು. ಆದ್ದರಿಂದ, ಇಂದಿನ ಕನ್ನಡ ಮಾಲೆಯಲ್ಲಿ ಈ ಎರಡೂ ವರ್ಣಗಳನ್ನೂ ಬಿಡಬಹುದು.

೪. ನಾಲ್ಕನೆಯದಾಗಿ, **ಮಹಾಪ್ರಾಣಗಳು**: — ವರ್ಗದ್ವಿತೀಯ ಮತ್ತು ಚತುರ್ಥ ವರ್ಣಗಳನ್ನು ನಾವು ಮಹಾಪ್ರಾಣಗಳೆಂದು ಕರೆಯುತ್ತೇವಷ್ಟೇ. ಇವಾದರೂ ಕನ್ನಡ ನುಡಿಯ ಅಭಿವ್ಯಕ್ತಿಗೆ ತೀರ ಆವಶ್ಯಕವಹುದೋ ಅಲ್ಲವೋ ಎಂಬ ಬಗ್ಗೆ ಸುಮಾರು ಕ್ರಿ. ಶ. ೧೦೦೦ದಲೇ ಸಂದೇಹವಿದ್ದಂತೆ ಕಾಣುತ್ತದೆ. ಯಾಕಂದರೆ, ಕ್ರಿ. ಶ. ೧೨ ರ ನಾಗವರ್ಮನು ತನ್ನ ಭಾಷಾಭೂಷಣದಲ್ಲಿ ಈ ಬಗ್ಗೆ ಗ್ರಥಿಸುವಾಗ-

* ಶ. ಮ. ದ. ಸೂ ೧೫ † ಅದೇ ಪು. ೧೪

'ನ ಅತ್ರ ಪ್ರಾಯೇಣ ವರ್ಗಾಣಾಂ
ದ್ವಿತೀಯ ಚತುರ್ಥಾಃ'

ಎಂದು ಹೇಳಿ, 'ಪ್ರಾಯೇಣೇತಿ ವಚನಾತ್ ಸಂಖ್ಯಾನುಕರಣಾದೌ' - ಎಂದು ಸ್ಪಷ್ಟೀಕರಿಸಿದನು. ಅಂದರೆ ನಾಗವರ್ಮನ ಪ್ರಕಾರ ಈ ಮಹಾಪ್ರಾಣಗಳು ಕೇವಲ **ಸಂಖ್ಯೆ ಮತ್ತು ಅನುಕರಣವಾಚಕಗಳಲ್ಲಿ ಮಾತ್ರ** ಇವೆಯೆಂದು ಹೇಳಿದ ಹಾಗಾಯಿತು.

ಆದರೆ, ನಾಗವರ್ಮನ ಈ ಗ್ರಂಥವನ್ನು ಆರ್ದ್ರಹೃದಯದಿಂದ ಅಭ್ಯಾಸ ಮಾಡಿದವನೂ, **'ಶಕ್ಯಾನುಷ್ಠಾನ ನಿಜೇಷ್ಟ ಸಿದ್ಧಿಗಳುಳ್ಳವನೂ'** ಆದ ಕೇಶಿರಾಜನು ತನ್ನ ಅಭ್ಯಾಸದಲ್ಲಿ ಕೇವಲ ಈ ಸಂಖ್ಯೆ ಮತ್ತು ಅನುಕರಣಗಳಲ್ಲಿ ಮಾತ್ರವಲ್ಲದೆ, ಇತರತ್ರ ಕೂಡ ಕಂಡುಬಂದ ಮಹಾಪ್ರಾಣಗಳನ್ನು ಕಲೆಹಾಕಿ, ಕನ್ನಡದಲ್ಲಿ ನಿಜೋಜ್ವಲವಾಗಿ ಹಲವು ಮಹಾಪ್ರಾಣಗಳಿವೆಯೆಂದು ಹೇಳಿದನು.

'ಅವಂ ಮಾರ್ಗವಿದರ್ ಸಂಖ್ಯೆಯೊಳಂ
ಭೋರ್ಗರೆವ ಅನುಕೃತಿಯೊಳಂ ಪ್ರಯೋಗಿಸುತಿರ್ಪರ್'

ಅಲ್ಲದೆ,

'ಒಳವು ಮಹಾಪ್ರಾಣಂಗಳ್ ವಿಳಸತ್ ಕರ್ಣಾಟ
—ಭಾಷೆಯೊಳ್ ಕೆಲವು ನಿಜೋಜ್ವಳವಾಗಿ' – ‡

ಎಂದು ಹೇಳಿದನು.

ಪ್ರಾಚೀನರು ಹೇಳಿದ ಈ ಮಹಾಪ್ರಾಣಗಳು ಕನ್ನಡದಲ್ಲಿ ಇವೆಯೇ ಇಲ್ಲವೆ ಎಂಬುದನ್ನು ನಿರ್ಧರಿಸುವ ಮೊದಲು ಇವರೆಲ್ಲರೂ **ಈ ವಿಷಯವಾಗಿ ತೀಕ್ಷ್ಣವಾಗಿ ವಿಚಾರಮಾಡಿದ್ದರೆಂಬುದನ್ನೂ, ಮತ್ತು ತಮ್ಮ ತಮ್ಮ ಅಭ್ಯಾಸದಲ್ಲಿ ಕಂಡ ವಿಷಯಗಳನ್ನು · ಶಾಸ್ತ್ರೀಯವಾಗಿ ಇಡಲು ಯತ್ನಿಸಿದರೆಂಬುದನ್ನೂ ನಾವೆಲ್ಲ ಒಪ್ಪಲೇ ಬೇಕು.**

ಕೇಶಿರಾಜಾದಿಗಳು ಈ ಮಹಾಪ್ರಾಣಗಳು ಕನ್ನಡದಲ್ಲಿ ಇವೆಯೆಂದು ಹೇಳಿದರಲ್ಲವೇ? ಆಧುನಿಕರ ಪ್ರಕಾರ ಈ ಮಹಾಪ್ರಾಣಗಳು ಕನ್ನಡದಲ್ಲಿಲ್ಲ. ಅದಕ್ಕೆ ಕಾರಣಗಳು ಮುಖ್ಯವಾಗಿ ಈ ಕೆಳಗಿನವು:—

೧. ಇದೇ ದ್ರಾವಿಡವರ್ಗಕ್ಕೇ ಸೇರಿ, ಇನ್ನೂ ಹಲವಾರು ಪ್ರಾಚೀನ ರೂಪಗಳನ್ನು ಇಟ್ಟುಕೊಂಡ ತಮಿಳಿನಲ್ಲಿ ಮಹಾಪ್ರಾಣಗಳಿಲ್ಲ;

೨. ಕೇಶಿರಾಜನು ಹೇಳಿದ **ಅನುಕರಣವಾಚಕಗಳ** ಮೇಲಿಂದ ಯಾವುದೇ ಭಾಷೆಯು ಶುದ್ಧಗೆಯನ್ನು ನಿಷ್ಕರ್ಷಿಸಲಾಗದು. ಯಾಕಂದರೆ, ಯಾವುದೇ ಅನುಕರಣವಾಚಕವಿದ್ದರೂ, ಅದು ಮೂಲದ ಸಮೀಪದ ಧ್ವನಿಯಾಗಿದೆಯೇ ಹೊರತು, ತದ್ವತ್ತಾಗಿ ಅದೇ ಆಗಲಾರದು.

೩. ಕೇಶಿರಾಜನು ಹೇಳಿದ ಸಂಖ್ಯೆಯ ಉದಾಹರಣೆಗಳೂ ಸರಿಯಾದುವಲ್ಲ; ಯಾಕಂದರೆ, ಶುದ್ಧ ಕನ್ನಡದ ಸಂಖ್ಯಾವಾಚಕಗಳಿದ್ದುದೇ ೯೯ ರ ವರೆಗೆ. ಈ ಸಂಖ್ಯೆಗಳಲ್ಲಿ ಎಲ್ಲಿಯೂ ಮಹಾಪ್ರಾಣಗಳು ಕಂಡುಬರುವದಿಲ್ಲ.

ಕೇಶಿರಾಜನು ಹೇಳಿದ ಸಂಖ್ಯೆಗಳ ಉದಾಹರಣೆಗಳಲ್ಲಿ - ಇಚ್ಛಾಸಿರ; ಎಣ್ಭಾಸಿರ–ಮೊದಲಾದುವೆಲ್ಲ, 'ಸಾಸಿರ' ಉತ್ತರಪದವಿದ್ದ ಸಮಸ್ತಪದಗಳು. ಈ 'ಸಾಸಿರ' ಸಂಖ್ಯಾವಾಚಕವು ಕನ್ನಡವಲ್ಲವೇ ಅಲ್ಲ;

‡ ಶ. ಮ. ದ. ಸೂ. ೧೪—೧೫

ಅದು ಸಂಸ್ಕೃತ 'ಸಹಸ್ರ'ದ ತದ್ಭವ. **ಆದ್ದರಿಂದ ಸಂಸ್ಕೃತದ ತದ್ಭವವಾದ ಸಂಖ್ಯೆ ಇದ್ದಾಗ ಮಾತ್ರ ಕನ್ನಡದಲ್ಲಿ ಮಹಾಪ್ರಾಣವು ಬರುತ್ತದೆಂದು ಹೇಳಿದ ಹಾಗಾಯಿತು.** ಹಾಗಾದರೆ, ಈ ಮಹಾಪ್ರಾಣವು ಸಂಸ್ಕೃತ ಶುದ್ಧಗೆಗೆ ಸೇರಿದ್ದೇ ವಿನಾ ಕನ್ನಡ ವರ್ಣಮಾಲೆಗೆ ಸೇರಿದ್ದಲ್ಲ ಎಂದ ಹಾಗಾಯಿತು.

೪. ಇದರಂತೆಯೇ ಕೇಶಿರಾಜನು "ಒಳವು ಮಹಾಪ್ರಾಣಂಗಳ್ ವಿಳಸತ್ಕರ್ಣಾಟ ಭಾಷೆಯೊಳ್ ಕೆಲವು ನಿಜೋಜ್ವಳಮಾಗಿ"—ಎಂದು ಹೇಳಿದ ಸೂತ್ರದ ದೃಷ್ಟಾಂತಗಳಾದರೂ ಸಮರ್ಪಕವಾದವುಗಳಲ್ಲ.

ಯಾಕಂದರೆ, ಅವನು ಹೇಳಿದ ದೆಖ್ಖಾಣ, ಅಖ್ಖಂಡ, ಠಾಣ, ಘೋಟುಗೆ, ಘೋಸ, ವೇಢೆಯ, ಕಂಭ—ಮೊದಲಾದ ಪದಗಳೆಲ್ಲ ಶುದ್ಧ ಕನ್ನಡವಾಗಿರದೆ, ಸಂಸ್ಕೃತದಿಂದ ರೂಪಾಂತರ ಹೊಂದಿದ ಪ್ರಾಕೃತ ಪದಗಳಾಗಿವೆ. ದೆಖ್ಖಾಣ (ಮರಾಠಿ 'ದೇಖಣೆ') ವೇಢೆಯ (ಮ. ವೇಢಾ ನೋಡುವುದು); ಸ್ಥಾನ 7 ಠಾಣ; ಘೋಷ 7 ಘೋಸ; ಸ್ತಂಭ 7 ಕಂಭ; ಭಾಂಡಾಗಾರ 7 ಭಂಡಾರ; ಭಾಷಾ 7 ಭಾಸೆ—ಇತ್ಯಾದಿ. ಆದ್ದರಿಂದ, ಇವಾದರೂ ಪ್ರಾಕೃತ ವರ್ಣಮಾಲೆಗೇ ಸೇರಬೇಕೇ ವಿನಾ ಕನ್ನಡದವಲ್ಲ.

ನಿಜ; ಆದರೆ, ಇವೇ ಮಾತು ಕೇಶಿರಾಜನು ಹೇಳಿದ ಇನ್ನೂ ಹಲವು ಇತರ ಶಬ್ದಗಳಿಗೆ ಅನ್ವಯಿಸುವದಿಲ್ಲ. ಉದಾ: ಝಳಕ, ಥಟ್ಟು; ಧಾಳಿ; ಭಂಗಾರ—ಇತ್ಯಾದಿ ಪದಗಳು. ಈ ಪದಗಳೆಲ್ಲ **ಪ್ರಾಕೃತವೆಂದು ನಾವು ಹೇಳಲಾರೆವು; ಇವು ಬಹುಮಟ್ಟಿಗೆ ಕನ್ನಡ ಪದಗಳು.** ಹಾಗಾದರೆ, ಈ ಪದಗಳು ಕನ್ನಡವಾಗಿದ್ದರೆ, ಕನ್ನಡ ವರ್ಣಮಾಲೆಯಲ್ಲಿ ಮಹಾಪ್ರಾಣಗಳಿವೆಯೆಂದು ಹೇಳಿದಂತಾಯಿತಲ್ಲಾ — ಇದಕ್ಕೆ ಪರಿಹಾರವೇನು ? — ಎಂದು ಕೇಳುವುದು ಸ್ವಾಭಾವಿಕವಾಗಿದೆ.

ನಿಜ; ಈ ಪ್ರಶ್ನೆಯೇನೋ ಸ್ವಲ್ಪ ತೊಡಕಿನದಾಗಿದೆ. ಆದರೆ, ಈ ಕನ್ನಡ ಶಬ್ದಗಳು ಕೂಡ ಮೂಲತಃ ಈ ರೂಪದಲ್ಲಿದ್ದಿಲ್ಲವೆಂಬುದನ್ನು ನಾವು ಗಮನಕ್ಕೆ ತಂದರೆ, ಈ ಸಮಸ್ಯೆಯ ಪರಿಹಾರವಾಗುತ್ತದೆ. ಯಾಕಂದರೆ, ಈ ಪದಗಳೆಲ್ಲ ಮೂಲತಃ ಜಳಕ, ತಟ್ಟು, ದಾಳಿ, ಬಂಗಾರ,—ಎಂದು ಮೊದಲಾಗಿ ಅಲ್ಪಪ್ರಾಣಗಳೇ ಆಗಿದ್ದುವು. ಇಲ್ಲಿ ಬಂದ ಮಹಾಪ್ರಾಣಗಳು, ಶಿಷ್ಟತೆ ಇಲ್ಲವೆ ಅಜ್ಞತೆಯ ಮೂಲಕ ಬಂದುವು. ಹಲವು ಸಲ ಶಿಷ್ಟರಾಗಬಯಸುವವರು ಈ ರೀತಿ ಮಹಾಪ್ರಾಣಗಳನ್ನು ಉಪಯೋಗಿಸುತ್ತಿರುವುದನ್ನು ನಮ್ಮ ನಿತ್ಯ ಜೀವನದಲ್ಲಿ ಕಂಡಿದ್ದೇವೆ. ಯಾರೋ ವಿನೋದಕ್ಕಾಗಿ 'ಯಾಲಕ್ಕಿ ಊಠ (ಊಟ) ಮಾಡಿದರು'—ಎಂದು ಹೇಳಿದ ಹಾಗೆ. ಇದರ ಜೊತೆಗೇ ಕೇಶಿರಾಜನು ಹೇಳದಿರುವ ಧೊರೆ, ಭತ್ತ—ಮೊದಲಾದ ಪ್ರಯೋಗಗಳನ್ನೂ ನಾವು ಸೇರಿಸಬಹುದು.

ಹೀಗಾಗಿ, ನಿಜವಾಗಿ ಕನ್ನಡದಲ್ಲಿ ಮಹಾಪ್ರಾಣಗಳಿಲ್ಲ. ಕನ್ನಡ ವರ್ಣಮಾಲೆಯಲ್ಲಿಯ ಈ ಹತ್ತು ಮಹಾಪ್ರಾಣಗಳೂ ಮಾಯವಾದವೆಂದರೆ, ಕನ್ನಡ ಶುದ್ಧಗೆಯಲ್ಲಿ ಉಳಿಯುವವು **೩೨ ವರ್ಣಗಳು ಮಾತ್ರ.** ಆದ್ದರಿಂದ, **ಆಧುನಿಕರ ಪ್ರಕಾರ ಕೇಶಿರಾಜನು ಹೇಳಿದಂತೆ ಕನ್ನಡದಲ್ಲಿ ೪೭ ವರ್ಣಗಳಿರದೆ, ೩೨ ಮಾತ್ರ ಇವೆ.** —'ಸಿದ್ಧಾಹಿ ಶುದ್ಧಕಾಃ'—

ಆದರೆ, ಈ ಮೇಲಿನ ಚರ್ಚೆಯಲ್ಲಿ ಒಂದು ಮಾತನ್ನು ಮಾತ್ರ ನಾವು ಗಮನದಲ್ಲಿಡಬೇಕು. ಅದೆಂದರೆ, **ಮೂಲತಃ ಮಾತ್ರ ಕನ್ನಡ ಶುದ್ಧಗೆಯು ೩೨ ಆಗಿದೆಯೆಂದೂ, ಇಷ್ಟು ಮಾತ್ರ ಇದ್ದರೆ**

ಕನ್ನಡ ನುಡಿಯು ಜೀವಾಳ ಅಭಿವ್ಯಕ್ತಿ ಪಡೆಯಬಹುದೆಂದೂ ಆಧುನಿಕರು ಹೇಳುತ್ತಿದ್ದರೆ, ಈ ಅಭಿಪ್ರಾಯವು ಸೂಕ್ತ ಅದನ್ನು ಬಿಟ್ಟು, **"ಇಂದಿನ ಕನ್ನಡಕ್ಕೆ ಈ ಮೂವತ್ತೆರಡೇ ವರ್ಣಗಳಾದರೆ ಸಾಕು; ಉಳಿದುವೆಲ್ಲ ಅನಾವಶ್ಯಕ"**—ಎಂದು ನಾವು **ಅವಧಾರಣೆ** ಕೊಟ್ಟು ಹೇಳುತ್ತಿದ್ದರೆ, ಪುನಃ ಭಿನ್ನಾಭಿಪ್ರಾಯಕ್ಕೆ ಎಡೆಯಿದೆ.

ಯಾಕೆಂದರೆ, ಇವರಲ್ಲಿಯ ಎಷ್ಟೋ ಅಂಶಗಳು ಸರ್ವಾದರಣೀಯವಾಗಲಾರವು.

ದ್ರಾವಿಡ ವರ್ಗಕ್ಕೇ ಸೇರಿದ ತೆಲುಗು ಭಾಷೆಯು ಸಂಸ್ಕೃತದಷ್ಟೇ ತನ್ನ ವರ್ಣಮಾಲೆಯನ್ನಿಟ್ಟುಕೊಂಡು, ಸಂಸ್ಕೃತದಲ್ಲಿಲ್ಲದ 'ಱ' ಎಂಬ ಹೆಚ್ಚಿನ ವರ್ಣವೊಂದನ್ನು ಸೇರಿಸಿಕೊಂಡಿದೆ. ತಮಿಳಿನಲ್ಲಿ ಮಾತ್ರ – ೧೨ ಸ್ವರಗಳೂ, ೧೦ ವ್ಯಂಜನಗಳೂ, ೧೦ ಅವರ್ಗೀಯಗಳೂ ಇವೆ. ತಮಿಳಿನಲ್ಲಿ ಯೋಗವಾಹಗಳಿಲ್ಲ. ಆದರೆ, ಅದರ ಪ್ರತಿಯಾಗಿ ಳ, ರ, ಮತ್ತು ನ—ವರ್ಣಗಳು ಎರಡು ಬಗೆಯಾಗಿವೆ. ಆದ್ದರಿಂದ ಕನ್ನಡದ ವರ್ಣಸಮಾಮ್ನಾಯವನ್ನು ಮಾಡುವಾಗ, ವಸ್ತುಸ್ಥಿತಿಯನ್ನು ಕುರಿತು ವಿಚಾರಿಸಬೇಕೇ ವಿನಾ, ಸಾದೃಶ್ಯದೃಷ್ಟಾಂತವು ಸರಿಹೋಗದು.

ಈ ದೃಷ್ಟಿಯಿಂದ ವಿಚಾರಿಸಿದರೆ—ನಾವು ಮೇಲೆ ವಿವರಿಸಿದ ಅಂಕಿಗಳು ಎಷ್ಟರಮಟ್ಟಿಗೆ ಸೂಕ್ತವೆಂಬುದನ್ನು ನೋಡೋಣ:—

ಸ್ವರಗಳಲ್ಲಿಯ ಋ, ೠ, ಌ, ೡ, ಗಳನ್ನೇನೋ ಬಿಡಬಹುದು. ಆದರೆ, ಐ, ಔ ಗಳೂ **ಈ** ವರ್ಗಕ್ಕೇ ಸೇರಬೇಕೇ?—ಕನ್ನಡದ ಕೇಶಿರಾಜನು ಕೈ, ಕೌಂಗುಗಳನ್ನು ಕೆಯ್, ಕವುಂಗು—ಎಂದು ಬರೆಯಬಹುದೆಂದು ಹೇಳಿದ್ದರೂ, ಇವೆರಡರಲ್ಲೂ **ಮುಖ್ಯ** ಮತ್ತು **ವೈಕಲ್ಪಿತ** ಪ್ರಯೋಗಗಳಾವು ಎಂಬುದನ್ನು ಗಮನಿಸಬೇಕು. ಐ, ಔ, ಗಳಿಗೆ 'ಎಯ್' 'ಅವ್'ಗಳು ಆದೇಶವೇ ಹೊರತು, ತದ್ವಿರುದ್ಧವಲ್ಲ. ಭಟ್ಟಾಕಳಂಕನು ಕೂಡ "ಐಸುಪ್ತಾರಾದಿಭ್ಯಃ" ಎಂದೇ ಹೇಳಿದನು. ಅಷ್ಟೇ ಅಲ್ಲ; ಈ ಬದಲಾವಣೆಯು ಕೈ, ಮೈ—ಮೊದಲಾದ ಶಬ್ದಗಳಿದ್ದಾಗ ಮಾತ್ರ ಸರಿಹೋದೀತು. ಆದರೆ, ಅದಕ್ಕೂ ಹೆಚ್ಚಿನ ವರ್ಣಗಳುಳ್ಳ "ಸೈಂಹಿಕೇಯ" ಮೊದಲಾದ ಪದಗಳಿದ್ದಾಗ - ಅವನ್ನು ಬರೆಯುವ ರೀತಿಯು ಎಷ್ಟು ತೊಂದರೆಯದಾಗುವುದೆಂಬುದನ್ನು ಗಮನಿಸಬೇಕು. "ಸೈಂಹಿಕೇಯ" ಪದವು "ಸಯ್ಮ್ಹಿಕೇಯ" ಎಂದಾಗಬೇಕಾಗುತ್ತದೆ. ಅಲ್ಲದೆ, 'ಔ' ಕಾರವು ಕಂಠೌಷ್ಠ್ಯ; 'ಅವ್' ವರ್ಣಗಳು ಕಂಠದಂತೌಷ್ಠ್ಯ. ಆದರೂ, ಅನುಕೂಲತೆಯ ದೃಷ್ಟಿಯಿಂದ ಈ ಮಾತನ್ನೂ ಒಪ್ಪಬಹುದು

ಅನುಸ್ವಾರ:—ಕೇಶಿರಾಜನೇನೋ ಈ ಬಗ್ಗೆ ವರ್ಗಪಂಚಮ ವರ್ಣವನ್ನು ಹೇಳಿ, ಬಿಜ್ಜಮ್ಬೆತ್ತೆಸೆವ—ಎಂಬುದನ್ನು ದೃಷ್ಟಾಂತವಾಗಿ ಹೇಳಿದನು. ಆದರೆ, ಸಾಮಾನ್ಯ ಬರವಣಿಗೆಯಲ್ಲಿ ನಾವು ಅನುಸ್ವಾರವನ್ನು ಒಡಂಬಟ್ಟುದನ್ನೇ ಕಾಣುತ್ತೇವೆ. ಇವು ಪ್ರಯೋಗರೂಢವಾದುವು.

ಮಹಾಪ್ರಾಣಗಳು:—ನಾವು ಮೇಲೆ ವಿವರಿಸಿದಂತೆ ಮಹಾಪ್ರಾಣಗಳು ಮೂಲತಃ ಕನ್ನಡ ವರ್ಣಮಾಲೆಗೆ ಸೇರಿದುವಲ್ಲವಾದರೂ, ಕನ್ನಡದ **ಇಂದಿನ ಸ್ಥಿತಿಯಲ್ಲಿ** ಮಹಾಪ್ರಾಣಗಳು ಇರಬೇಕೇ ಇರಬಾರದೇ? ಎಂಬುದು ಪ್ರಶ್ನೆ.

೧. ಪಾಶ್ಚಿಮಾತ್ಯ ದೇಶಗಳ ಸ್ಕಾಚ್ ಮೊದಲಾದ ಭಾಷೆಗಳಲ್ಲಿ ಬಯ್ಗುಳಕ್ಕಾದರೂ ಮಹಾಪ್ರಾಣಗಳು ಆವಶ್ಯಕ ಎಂದು ಹೇಳಲಾಗುತ್ತಿದೆ. ಅಂತಲೇ ಈ ಬಯ್ಗುಳಲ್ಲಿ ಇಂಗ್ಲಿಷಿನ 'Pig' ಎಂಬುದನ್ನು ಉಪಯೋಗಿಸಬೇಕಾದರೆ, "Phig" ಎಂದು ಉಪಯೋಗಿಸುತ್ತಾರಂತೆ.

೨. ಶುದ್ಧ **ಕನ್ನಡ ಕೋಶದ** ಅಭಿವ್ಯಕ್ತಿಗೆ ಮಹಾಪ್ರಾಣಗಳ ನೆರವು ಬೇಡಾಗಿದ್ದರೂ, ಕನ್ನಡದಲ್ಲಿ ಬಹುವಿಧವಾಗಿ, ಬಹುಮುಖವಾಗಿ ಸೇರಿದ ಸಂಸ್ಕೃತ ಶಬ್ದಗಳ ಗತಿಯೇನು? ಅವುಗಳನ್ನು ಸಂಪೂರ್ಣ ಬಹಿಷ್ಕರಿಸಿಯೇ ಬಿಡಬೇಕೇ? ಇಲ್ಲವೇ ಅವೆಲ್ಲಕ್ಕೂ ಕನ್ನಡದ ಶುದ್ಧಿಸಂಸ್ಕಾರವನ್ನು ಕೊಡುತ್ತ ಕುಳಿತುಕೊಳ್ಳಬೇಕೇ? ನಾವು ಈ ಮುಂದು ಕೋಶವಿಷಯಕವಾಗಿ ನೋಡುವಾಗ ಕಾಣುವಂತೆ ಭಾಷೆಯಲ್ಲಿ "ಮಡಿವಂತಿಕೆ" ಯೆಂಬುದು ಎಷ್ಟರಮಟ್ಟಿಗೂ ಸಾಧ್ಯವಾಗದು. ಈ ಮಾತು ವರ್ಣಸಮಾಮ್ನಾಯಕ್ಕೂ ಅನ್ವಯಿಸಬೇಕು.

೩. ಪ್ರೊ. ಜೂಲ್ಸ್ ಬ್ಲಾಃಕ್ ಮೊದಲಾದ ಹಲವು ಪಂಡಿತರ ಪ್ರಕಾರ ದ್ರಾವಿಡ ಭಾಷೆಗಳಲ್ಲಿ ಮೊದಲಿಗೂ ಒಂದು 'ಹ' ವರ್ಣವಿದೆ. ಯಾಕಂದರೆ, ಅವರ ಪ್ರಕಾರ, ಸಂಸ್ಕೃತಕ್ಕೆ ಹೋದ "ಘೋಟ" ಮತ್ತು "ಮುಖ" ಪದಗಳು ದ್ರಾವಿಡವೇ ಆಗಿದ್ದರೆ, ಈ ಪದಗಳಲ್ಲಿದ್ದ ಮಹಾಪ್ರಾಣವು ಸ್ಪಷ್ಟವೇ ಇದೆ. ಪ್ರೊ. ಬ್ಲಾಃಕ್ ಅವರ ಅಭಿಪ್ರಾಯವನ್ನು ಅವರ ಬಾಯಿಂದಲೇ ಕೇಳೋಣ:—

> "If it were certain that the **ಸಂಸ್ಕೃತ** word was borrowed from Dravidian, one could have rightly deduced at once a fourth observation, *more important than all the previous ones*. In that case, the most ancient Dravidian, in fact, would have had aspirate consonants, either a dialect in contact with Aryan, having developed aspirants in some cases or the aspirants having belonged to common Dravidian." **ಪುನಃ** "...one would be convinced that Dravidian had certainly, as the history of '**ಘೋಟ**' made us suspect, aspirate occlusive." *

೪. ಇದು ಮೀರಿ, ಸಂಸ್ಕೃತದ ಮಹಾಪ್ರಾಣಗಳನ್ನೆಲ್ಲ ಕನ್ನಡ ಅಲ್ಪಪ್ರಾಣಗಳನ್ನು ಮಾಡಿಕೊಳ್ಳುತ್ತ ಹೋದರೆ, ಹಲಕೆಲವು ಸಲ ಮೂಲಾರ್ಥ ಬಾಧೆಯುಂಟಾಗಿ, ಅಪಾರ್ಥವಾಗುವುದೂ ಉಂಟು. ಉದಾಹರಣೆಗೆ, ಮಹಾಪ್ರಾಣ ಸಹಿತವಾದ '**ಫಲಾಹಾರಿ**' ಎಂದರೆ 'ಹಣ್ಣು ತಿನ್ನುವವ'; ಅದೇ '**ಪಲಾಹಾರಿ**' ಎಂದರೆ 'ಮಾಂಸವನ್ನು ತಿನ್ನುವವ'. '**ಖಲರವ**' ಎಂದರೆ 'ದುಷ್ಟರ ಕೂಗು'; '**ಕಲರವ**' ಎಂದರೆ 'ಮನೋಹರವಾದ ಧ್ವನಿ'; 'ಭರ' ಎಂದರೆ 'ಅತಿಶಯ'; 'ಬರ' ಎಂದರೆ 'ಕ್ಷಾಮ' †

೫. ಪ್ರತಿಯೊಂದು ಉಚ್ಚಾರಕ್ಕೂ ಸಂಜ್ಞೆಯಿರದಿದ್ದ ಇಂಗ್ಲಿಷ್ ವರ್ಣಮಾಲೆಯೂ ಕೂಡ, ಸಂಸ್ಕೃತ ಶಬ್ದಗಳನ್ನು ಹೊಸದಾಗಿ ತೆಗೆದುಕೊಂಡಾಗ, ಅವುಗಳ ಉಚ್ಚಾರಕ್ಕಾಗಿ, ಹೊಸ ಹೊಸ ಚಿಹ್ನಗಳನ್ನು ಸೇರಿಸಿಕೊಂಡಿತು. ಉದಾ. 'ಆ'ಕಾರಾರ್ಥ ಸೂಚಕ $\bar{a}$; 'ಳ' ಸೂಚಕ ḷ ಇತ್ಯಾದಿ.

೬. ಇದು ಮೀರಿ, ನಾವು ತಮಿಳು ವರ್ಣಮಾಲೆಯ ಆದರ್ಶವನ್ನಿಟ್ಟುಕೊಳ್ಳುವುದೇ ಆದರೆ, ಅವರೂ ಕೂಡ ಈ ಹೊಸ ವರ್ಣಗಳ ಉಚ್ಚಾರಸೌಲಭ್ಯಕ್ಕಾಗಿ, ತಮ್ಮ ಮೂಲದ ವರ್ಣಮಾಲೆಯನ್ನು ಬಿಟ್ಟು, "ಗ್ರಂಥಲಿಪಿ" ಎಂಬ ಹೆಸರಿನಿಂದ ೫೨ ವರ್ಣಗಳುಳ್ಳ ಹೊಸ ವರ್ಣಮಾಲೆಯನ್ನು ನಿರ್ಮಿಸಿಕೊಂಡದ್ದನ್ನು ಗಮನಿಸಬೇಕು.

೭. ಅಷ್ಟೇ ಅಲ್ಲ; ಇತ್ತೀಚೆ ನಮ್ಮ ಭಾಷೆಗಳಲ್ಲಿ ಸೇರಿದ ಹಲವು ಇಂಗ್ಲಿಷ್ ಶಬ್ದಗಳ ಅಭಿವ್ಯಕ್ತಿಗೂ ಕೂಡ ನಾವು ಹೊಸ ಹೊಸ ಸಂಜ್ಞೆಗಳನ್ನು ಇಟ್ಟುಕೊಂಡದ್ದನ್ನು ನೋಡಬಹುದು.

* P. A. P. D. 57. † ಜ. ಕ. Vol 7; P. 393.

ಉದಾ: ಫಾ಼ದರ್; ಕಾ಼ಲೇಜ್; ಮ್ಯಾನ್ ಇತ್ಯಾದಿ.

೮. ಮತ್ತು ಶ್ರೀ. ಆರ್. ನರಸಿಂಹಾಚಾರ್ಯರ ಪ್ರಕಾರ ಈ ರೀತಿ ತುಂಬಾ ಸಮರ್ಪಕವಾದ ವರ್ಣಮಾಲೆಯನ್ನು ಇಟ್ಟುಕೊಳ್ಳುವಲ್ಲಿಯೇ ಕನ್ನಡ ಮತ್ತು ತೆಲುಗುಗಳ ಹಿರಿಮೆ ಇದೆ.

ಆದ್ದರಿಂದ, ಇಂದಿನ ಕನ್ನಡದ ವರ್ಣಸಮಾಮ್ನಾಯವನ್ನು ಮಾಡುವಾಗ ಈ ಮೇಲಿನ ಅಂಶಗಳನ್ನು ನಾವು ಗಮನಿಸುವುದು ಆವಶ್ಯಕವಾಗಿದೆ.

ಕನ್ನಡ ಲಿಪಿ ಸಂಸ್ಕರಣ:—ಅದೇನೇ ಇರಲಿ; ಕನ್ನಡದಲ್ಲಿ ೩೨ ಶುದ್ಧಾಕ್ಷರಗಳೆಂದು ನಾವು ಈ ಮೊದಲು ನಿರ್ಧರಿಸಿದ್ದೆವಷ್ಟೇ. ಆದರೆ, ಈ ೩೨ ವರ್ಣಗಳು ಕೂಡ ಕನ್ನಡಕ್ಕೆ ಸ್ವಲ್ಪ ಹೆಚ್ಚೇ ಎಂದು ಹಲವರ ಭಾವನೆ. ಯಾಕಂದರೆ, ಇವುಗಳ ಕಾಗುಣಿತಾದಿಗಳನ್ನು ಹಿಡಿದು ಒಟ್ಟು ಮೊತ್ತದ ಸಂಖ್ಯೆ ಪುನಃ ಬಳೆಯುತ್ತಲೇ ಇದೆ. ಅಂತಲೇ, ಕನ್ನಡ ಲಿಪಿಯ **ಮುದ್ರಣದಲ್ಲಿ** ಬೇಕಾದಷ್ಟು ವೇಗವು ಇನ್ನೂ ಸಾಧಿಸಿಲ್ಲ; ಕನ್ನಡದಲ್ಲಿ ಇನ್ನೂ Type-writer ಯಂತ್ರವು ಸಿದ್ಧವಾಗಿಲ್ಲ. ಹಿಂದುಸ್ಥಾನದಲ್ಲಿಯ ಅನೇಕ ಆಧುನಿಕ ಭಾಷೆಗಳು ಈ ಯಂತ್ರನಿರ್ಮಾಣವನ್ನು ಮಾಡಿಕೊಂಡು ಸೌಲಭ್ಯವನ್ನು ಪಡೆಯುತ್ತಿದ್ದಾಗ. ಕನ್ನಡದಲ್ಲಿ ಮಾತ್ರ ಈ ಯಂತ್ರಸೌಲಭ್ಯವು ಇರದಿರುವುದು ತುಂಬಾ ಕಷ್ಟದ ಮಾತಾಗಿದೆ. ಶೀಘ್ರಲಿಪಿ–ಲೇಖನವಂತೂ ಕನ್ನಡದಲ್ಲಿ ಇನ್ನೂ ಎಷ್ಟು ದೂರವೋ?....

ಹಾಗಾದರೆ, ಇವೆಲ್ಲವುಗಳ ಅಭಾವಕ್ಕೆ ಕಾರಣವಾದರೂ ಏನು?—ಎಂದು ವಿಚಾರಿಸಿದರೆ, ಇಂದಿನ ಕನ್ನಡ **ಲಿಪಿಯ ಸ್ವರೂಪದ ಅನಾನುಕೂಲತೆಯೇ ಪ್ರಬಲವಾದ ಕಾರಣವೆಂದು ಹೇಳಬೇಕಾಗುತ್ತದೆ.** ಯಾಕಂದರೆ, ಈಗ ಕನ್ನಡದಲ್ಲಿದ್ದ ಲಿಪಿಯು ಸುಂದರವೆಂದು ಪಾಶ್ಚಿಮಾತ್ಯರಿಂದ ಕೂಡ ಕರೆಯಲ್ಪಟ್ಟತಾದರೂ, ಅದರಲ್ಲಿರುವ ಹಲವು ನ್ಯೂನತೆಗಳನ್ನು ನಾವು ಗಮನಿಸದೆ ಸಾಗುವಂತಿಲ್ಲ. ಅವೆಂದರೆ,—

೧. ಕನ್ನಡದ ಕಾಗುಣಿತಗಳಲ್ಲಿ **ದೀರ್ಘವನ್ನು** ವಿವರಿಸುವಲ್ಲಿ ಅಂತಹ **ಏಕಸೂತ್ರತೆ** ಇಲ್ಲ; ಇದರಿಂದ ಈ ಲಿಪಿಯನ್ನು ಹೊಸದಾಗಿ ಕಲಿಯುವವರಿಗೂ, ಅಚ್ಚುಕೂಟದಲ್ಲಿ ಮೊಳೆ ಜೋಡಿಸುವವರಿಗೂ, ಎಷ್ಟೋ ತೊಂದರೆಯಾಗುತ್ತದೆ. ಇದನ್ನು ಕೂಡ ನಾವು ಬಹುಮಟ್ಟಿಗೆ ತಡೆಯಬಹುದು.

ಈಗ ಉದಾಹರಣೆಗಾಗಿ, ಕನ್ನಡದ 'ಕ' ಮತ್ತು 'ಗ' ವರ್ಣಗಳನ್ನೇ ತೆಗೆದುಕೊಳ್ಳೋಣ. ಈ ವರ್ಣಗಳ 'ಇ, ಈ'ಕಾರಗಳನ್ನು ಹೇಳಬೇಕಾದರೆ, ನೇರವಾಗಿ 'ಿ' ಮತ್ತು 'ೀ' ಸಂಜ್ಞೆಗಳನ್ನು ಸೇರಿಸಿ, 'ಕಿ' 'ಕೀ' 'ಗಿ' 'ಗೀ'—ಎಂದು ಹೇಳುತ್ತೇವೆ. ಅದೇ 'ಇ' ವರ್ಣದ ದೀರ್ಘವನ್ನೇ ಹೇಳಬೇಕಾದಾಗ, ಅಲ್ಲಿ ನಾವು ಇಟ್ಟುಕೊಳ್ಳುವ ರೂಪವು 'ಇೀ' ಅಲ್ಲ; 'ರ' ಬರೆದು, ಆದರ ಹೊಟ್ಟೆಯನ್ನು ಒಂದು ಭಲ್ಲೆಯಿಂದ ಸೀಳುವುದು. ಹೀಗಾಗಿ, ಕನ್ನಡದ 'ಇೀ'ಕಾರ 'ಈ' — ಎಂದಾಯಿತು. ಆದ್ದರಿಂದ. ಉಳಿದ ಎಲ್ಲ ವರ್ಣಗಳಲ್ಲೂ ಈ ಬಗ್ಗೆ ಏಕಸೂತ್ರತೆ ಇರುವಾಗ 'ಇ' ವರ್ಣವು ಮಾತ್ರ ಅಪವಾದವಾಗುವ ಕಾರಣವಿಲ್ಲ. ಅಂತಲೇ, ಅನೇಕರು ಈಗಾಗಲೇ 'ಈ' ವರ್ಣವನ್ನು 'ಇೀ' ಎಂದೂ, ಬರೆಯಲು ಪ್ರಾರಂಭಿಸಿದ್ದಾರೆ. ಈ ಲಿಪಿಸಂಸ್ಕರಣದ ಯಾವ ವಿಚಾರವೂ ಇಲ್ಲದ ಒಬ್ಬ ವ್ಯಾಪಾರಸ್ಥನ ಕೂಡ ತನ್ನ ಅಂಗಡಿಯ ಬಾಡಿಗೆಯ ಬಗ್ಗೆ 'ಹಲಗೆಯನ್ನು' ಹಚ್ಚುವಾಗ ಯಾವ ರೀತಿ ಹೆಚ್ಚುಕಡಿಮೆ ಇದೇ ಮಾರ್ಗವನ್ನೇ ಅನುಸರಿಸಿದ್ದನೆಂಬುದನ್ನು ಶ್ರೀ. ಎಸ್ ವಿ. ಶ್ರೀನಿವಾಸರಾಯರು ಹೀಗೆ ವಿವರಿಸುತ್ತಾರೆ. ಆ

ವ್ಯಾಪಾರಸ್ಥನು ಬರೆದ ಜಾಹೀರಾತೆಂದರೆ—"**ಇೀ ಮಳಿಗೆ ಬಾಡಿಗ್ಗೆ ದೊರೆಯುತ್ತೆ**" * ಈ ವ್ಯಾಪಾರಸ್ಥನು ಲಿಪಿಸಂಸ್ಕರಣದ ಯಾವ ತಾತ್ವಿಕ ವಿಚಾರವೂ ಇಲ್ಲದೆ, ಈ ಮಾರ್ಪಾಡನ್ನು ಮಾಡಿಕೊಂಡಿದ್ದನೆಂಬುದನ್ನು ನೆನೆದರೆ, ನಮ್ಮ ಲಿಪಿಯಲ್ಲಿಯ ಜಾಡ್ಯತೆಯನ್ನು ನಾವು ಎಷ್ಟರಮಟ್ಟಿಗೆ ಹೋಗಲಾಡಿಸಬಹುದೆಂಬುದು ವ್ಯಕ್ತವಾಗುತ್ತದೆ. ಇದರಿಂದ, ಲಿಪಿಸೌಂದರ್ಯಕ್ಕೆ ಬಾಧೆ ಬಾರದೆ, ಸೌಲಭ್ಯ ಮತ್ತು ಬರವಣಿಗೆಯ ಶೀಘ್ರತೆಗಳು ದೊರಕುತ್ತವೆ. ಹಾಗೆಯೇ, 'ಅ', ವರ್ಣವು 'ಆ' ಆಗಬೇಕಿಲ್ಲ; 'ಅೀ' ಇಲ್ಲವೆ 'ಅಾ' ಆಗಬಹುದು.

೨. **ಕನ್ನಡದ ಮಹಾಪ್ರಾಣಗಳು.**—ಈ ಮಹಾಪ್ರಾಣಗಳು ಶುದ್ಧಗೆಯಲ್ಲಿ ಕೊಟ್ಟಷ್ಟೇ ತೊಂದರೆಯನ್ನು—ಅಥವಾ ಅದಕ್ಕೂ ಹೆಚ್ಚು—ಮುದ್ರಣಕಾರನ ಅಚ್ಚುಕೂಟದಲ್ಲೂ ಕೊಡುತ್ತಿವೆ. **ಯಾಕಂದರೆ, ಈ ಮಹಾಪ್ರಾಣಗಳನ್ನು ಬರೆಯುವ ರೀತಿಯಲ್ಲಿಯೂ ಮತ್ತು ಇಂದಿನ ನಮ್ಮ ಲಿಪಿಯಲ್ಲಿಯೂ ಏಕಸೂತ್ರತೆ ಕಂಡುಬರುವದಿಲ್ಲ.** ಉದಾಹರಣೆಗೆ, 'ಡ' 'ಪ' 'ಬ' 'ದ'—ಮೊದಲಾದ ವರ್ಣಗಳಲ್ಲಿ ಈ ಮಹಾಪ್ರಾಣವನ್ನು ನಾವು ಕೆಳಗೊಂದು ಗೆರೆಯೆಳೆದು, 'ಢ' 'ಫ' 'ಭ' 'ಧ'—ಎಂದು ಮೊದಲಾಗಿ ತೋರಿಸಿದರೆ, ಉಳಿದ ವರ್ಣಗಳಲ್ಲೆಲ್ಲ ಸಾಮಾನ್ಯವಾಗಿ, ಈ ಬಗ್ಗೆ ಬೇರೆ **ಅಕ್ಷರಗಳನ್ನೇ** ಯೋಜಿಸಿಕೊಳ್ಳುತ್ತಿದ್ದೇವೆ. ಹೀಗಾಗಿ, 'ಕ' 'ಗ' 'ತ' 'ಚ' 'ಜ'—ಮೊದಲಾದ ವರ್ಣಗಳು ಅಲ್ಪಪ್ರಾಣಗಳಾದರೆ, ಈ ವರ್ಗದ ಮಹಾಪ್ರಾಣಗಳು 'ಖ' 'ಘ' 'ಥ' 'ಛ' 'ಝ'—ಎಂದು ಮೊದಲಾಗಿ ಬೇರೆ ಪ್ರತ್ಯೇಕವಾದ ಅಕ್ಷರಗಳೇ ಆಗುತ್ತಿವೆ. ಇವುಗಳನ್ನೂ ಕೂಡ, ಲಿಪಿಯ ಸ್ಪಷ್ಟತೆ ಮತ್ತು ಸೌಂದರ್ಯಗಳಿಗೆ ಬಾಧೆ ಬಾರದ ಹಾಗೆ ಕೆಳಗೆ ಒಂದು ಸಣ್ಣ ದಂಡವನ್ನು (|) ಸೇರಿಸಿ ಮಾಡಿಕೊಳ್ಳಬಹುದೇ? ವಿಚಾರಿಸಬೇಕು. ಹೀಗಾದರೆ, ಬಹುಶಃ 'ಕ' 'ಕ|' ಆದೀತು; ಗ, ಗ|; ತ—ತ|; ಚ ಅಂತೂ ಚ| ವೇ; ಜ ಕೂಡ ಹಾಗೆಯೇ ಸ್ಪಷ್ಟವಾಗಿ ಜ| ಆದೀತು.

೩. ಅದರಂತೆಯೇ, ಸಾಮಾನ್ಯವಾದ **ನಿತ್ಯದ ಬರವಣಿಗೆಯಲ್ಲೂ ಕೂಡ** ಸೌಂದರ್ಯವನ್ನು ಇಟ್ಟುಕೊಂಡು, **ಶೀಘ್ರತೆಯನ್ನು ಸಾಧಿಸುವುದು** ಅವಶ್ಯಕವಾಗಿದೆ. ಹಾಗಾದರೆ, ಈ ಶೀಘ್ರತೆಯನ್ನು ಯಾವ ರೀತಿ ಸಾಧಿಸಬಹುದು?–ಇದಕ್ಕಾಗಿ ಬಹುಶಃ ನಿತ್ಯವೂ ಹೇರಳವಾಗಿ ಬರೆಯುತ್ತಿರುವ ವರ್ಗವನ್ನು ನಾವು ಹಿಡಿದರೆ, ಕಾರ್ಯವು ಸುಲಭವಾದೀತು. ಯಾಕಂದರೆ, ನಿತ್ಯವೂ ಅನೇಕ ಕಾಗದಗಳನ್ನು ಬರೆಯಬೇಕಾದ ಈ ಜನವು **ಕೇವಲ ಲಿಪಿ-ಸಂಪ್ರದಾಯಕ್ಕೆ ಮಾರುಹೋಗದೆ,** ಅವಶ್ಯವಾಗಿ ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿರಲೇಬೇಕಾಗುತ್ತದೆ; ಮತ್ತು ಹಾಗೆ ಮಾಡಿಕೊಂಡೂ ಇರುತ್ತಾರೆ. ಆದ್ದರಿಂದ, ನಾವು ಈ ವರ್ಗಕ್ಕೆ ಸೇರಿದ, ಗ್ರಾಮಗಳ ಕುಲಕರಣಿ, ಗೌಡರು, ಕಚೇರಿಗಳ ಕಾರಕೂನರು, ವಕೀಲರು, 'ಲೇಖಕರು' ಈ ಮೊದಲಾದವರ ಬರವಣಿಗೆಯನ್ನು ನೋಡಿದರೆ, ಇಂಥ ಎಷ್ಟೋ ಸೂಕ್ಷ್ಮ ವ್ಯತ್ಯಾಸಗಳನ್ನು ಅವರು ಮಾಡಿಕೊಂಡದ್ದು ಗಮನಕ್ಕೆ ಬಾರದಿರದು. ವಕೀಲ ಕಾರಕೂನರು ಈ ರೀತಿ 'ಈ'ಕಾರವನ್ನು ಒಂದು ವಿಧವಾಗಿಯೂ ಇತರರೂ ಬೇರೆ ಬೇರೆ ರೂಪಗಳನ್ನು ಸಾಧಿಸಿಕೊಂಡದ್ದೂ, ಕಂಡು ಬರುತ್ತದೆ.

ಉದಾಹರಣೆಗೆ, 'ವ' ಮತ್ತು 'ಪ' ವರ್ಣಗಳನ್ನೇ ತೆಗೆದುಕೊಳ್ಳೋಣ. ಈ ವರ್ಣಗಳಲ್ಲಿಯ ಒಂದು ಮಣಿತವನ್ನು ತಪ್ಪಿಸಿ ಕೇವಲ 'ಏ' ಮತ್ತು 'ಪ' ಎಂದು ಅನೇಕರು ಬರೆಯುತ್ತಿದ್ದುದನ್ನು

---

* ಕ ನು ೧೦— —೪೪.

ಕಾಣುತ್ತೇವೆ. ಈ ರೀತಿಯ ವೇಳೆಯ ಉಳಿಯುವಿಕೆಯು ಪಕೃದ್ದರ್ಶನಕ್ಕೆ ಅಷ್ಟು ಮಹತ್ವದ್ದಾಗಿ ಕಾಣದಿದ್ದರೂ, ಇಂಥ ಹತ್ತಾರು ವರ್ಣಗಳನ್ನು ಬರೆದಾದ ಮೇಲೆ ಅದರ ಅರ್ಥವು ವ್ಯಕ್ತವಾಗುತ್ತದೆ. ಹೀಗಾಗಿ, ಇವನ್ನು ನಾವು 'ವ' 'ವಾ' 'ವಿ' 'ವೀ' 'ವು' 'ವೂ'– ಇತ್ಯಾದಿ ಬರೆಯಬಹುದು. ಹಾಗೇ 'ಪ' 'ಪಾ' 'ಪಿ' 'ಪೀ'—ಇತ್ಯಾದಿ. ಇದು ಒಪ್ಪಿತವಾದರೆ, 'ಮ' 'ಮಾ' 'ಮಿ' 'ಮೀ'—ಇತ್ಯಾದಿಯಾಗಿಯೂ ಮಾಡಿಕೊಳ್ಳಬಹುದು.

ಇದರಂತೆಯೇ, 'ಜ' ದ ಒಂದು ಮಣಿತವನ್ನು ಉಳಿಸಿಕೊಂಡೂ ಹಲವು ಜನರು ಬರೆಯುತ್ತಿದ್ದುದನ್ನು ನಾವು ಕಾಣುತ್ತೇವೆ. ಕನ್ನಡದ ಅರ್ಕಾವಳಿಯನ್ನಂತೂ ತಪ್ಪಿಸಿ, 'ರ' ಕಾರವನ್ನೇ ಉಪಯೋಗಿಸುತ್ತಿದ್ದುದೂ ಕಂಡುಬರುತ್ತದೆ. ಕರ್ನಾಟಕ; ಎನ್ನುವುದು ಕರ್ನಾಟಕ ಆದಂತೆ.

ಕನ್ನಡ ಲಿಪಿಯ ಬೆಳವಣಿಗೆಯನ್ನು ಗುರುತಿಸುವ ಕಾಲದಲ್ಲಿ, ತಾಳೆಯೋಲೆಯ ಮೇಲೆ ಕಂಠದಿಂದ ಬರೆಯುವ ಪರಂಪರೆಯ ಮೂಲಕ ಕನ್ನಡ ವರ್ಣಗಳು ಯಾವ ರೀತಿ ವರ್ತುಲವಾಗಿಯೂ, ಸುಂದರವಾಗಿಯೂ ಬಳೆಯುತ್ತ ಹೋದವೆಂಬುದನ್ನು ನಾವು ಈ ಮೊದಲೇ ಕಂಡಿದ್ದೇವೆ. **ಹಾಗೇ, ಪ್ರಕೃತ ಸ್ಥಿತಿಯಲ್ಲೂ ಕೂಡ, ಯಾವುದೇ ಲಿಪಿಯ ಆವಶ್ಯಕ ಅಂಶಗಳಾದ ಸೌಂದರ್ಯ, ಸ್ಪಷ್ಟತೆ ಮತ್ತು ಉಳಿತಾಯ ಇವುಗಳನ್ನು ಗಮನಿಸಿ ನಾವು ವೇಗವನ್ನು ಸಾಧಿಸಬಹುದಾಗಿದೆ.**

೫. **ಐದನೆಯದಾಗಿ,** ಬೆಳೆಯುತ್ತಿರುವ ಕನ್ನಡ ಕೋಶದ ಅಭಿವ್ಯಕ್ತಿಗಾಗಿ, ಹಿಂದು ಸಂಸ್ಕೃತ ವರ್ಣಮಾಲೆಯನ್ನು ಅನುಲಕ್ಷಿಸಿ ಹಲವು ಹೊಸ ಹೊಸ ವರ್ಣಗಳನ್ನು ಸೇರಿಸಿಕೊಂಡಂತೆ, ಇಂದಿಗೂ ಕೂಡ ಕನ್ನಡದ ಮೇಲಾದ ಇಂಗ್ಲಿಷ ಪ್ರಭಾವದ ಮೂಲಕ, ಅ-ನಿವಾರ್ಯವಾಗಿ ಹಲವು ಇಂಗ್ಲಿಷ ಉಚ್ಚಾರಗಳ ಅಭಿವ್ಯಕ್ತಿಯನ್ನೂ ಕನ್ನಡದಲ್ಲಿ ಇಟ್ಟುಕೊಳ್ಳಬೇಕಾಗಿದೆ. ನಾವು ಈ ಮೊದಲೇ ಹೇಳಿದ College, Can—ಮೊದಲಾದ ಪದಗಳು ಈ ವರ್ಗಕ್ಕೇ ಸೇರಿದುವು. ಈ ಬಗೆಯ ಉಚ್ಚಾರಗಳ ಸಂಜ್ಞೆಗಳನ್ನು ಕನ್ನಡದಲ್ಲಿ ಸ್ವತಂತ್ರವಾಗಿ ನಿರ್ಮಿಸಿಕೊಂಡು, ಅವುಗಳನ್ನು ತಮ್ಮ ಗ್ರಂಥಗಳಲ್ಲಿ ಉಪಯೋಗಿಸುತ್ತ ಬಂದಿದ್ದ ಕನ್ನಡ ಮತ್ತು ಆಂಗ್ಲ ಭಾಷೆಯ ಸುಪ್ರಸಿದ್ಧ ವಿದ್ವಾಂಸರಾದ ಪ್ರಿನ್ಸಿಪಾಲ ವಿ. ಕೃ. ಗೋಕಾಕ ಅವರು ಈ ಬಗ್ಗೆ ವ್ಯಕ್ತ ಮಾಡಿದ ಅಭಿಪ್ರಾಯಗಳು ತುಂಬಾ ಮನನೀಯವಾಗಿವೆ. ಶುಕ್ರವಾರ, ಅಕ್ಟೋಬರ ೨-೧೯೫೨ನೇ ಇಸ್ವಿಯ 'ಕನ್ನಡ ನುಡಿ' ವಾರಪತ್ರಿಕೆಯಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನಾವಿಲ್ಲಿ ಉದ್ಧರಿಸಬಹುದು:—

"ಒಂದು ವಿಷಯದಲ್ಲಿ ನನ್ನ ಸಲಹೆಯಿದೆ:

(ಅ) Ox, Gone,—ಮೊದಲಾದಲ್ಲಿಯ 'O' ಉಚ್ಚಾರವನ್ನು ಕನ್ನಡದಲ್ಲಿ ತರಬೇಕಾದರೆ, ಒಂದು ಸಂಜ್ಞೆ ಬೇಕಾಗಿದೆ. ಅದನ್ನು ಎರಡು ಟಮ್ಮುಗಳಿಂದ ಸಾಧಿಸಬೇಕೆಂದು ನನ್ನ ಸೂಚನೆ—ಉದಾ: ಆಃಕ್ಸ; ಗಾಃನ್.

(ಬ) ಅಲ್ಲದೆ, fox, fair—ಮೊದಲಾದವುಗಳಲ್ಲಿಯ 'f'ದ ಉಚ್ಚಾರಕ್ಕೂ ಈಗ ಚಿಹ್ನವಿಲ್ಲ. ಇದನ್ನು ವಿಸರ್ಗ ಚಿಹ್ನಗಳನ್ನು ಹಾಕಿ ಸಾಧಿಸಬಹುದು. ಉದಾ ಫಾಃಕ್ಸ; ಫೇಃರ್—ಇತ್ಯಾದಿ. ಇವೆರಡನ್ನೂ ನನ್ನ ಲೇಖಗಳಲ್ಲಿ ಈಗ ಬಳಕೆಗೆ ತರುತ್ತಿದ್ದೇನೆ."*

* ಕ. ನುಡಿ ಪು. ೪೭೦

ಶ್ರೀಯುತರು ಸೂಚಿಸಿದ ಈ ಸಂಜ್ಞೆಗಳನ್ನು ಉಪಯೋಗಿಸುವುದರಿಂದ '್ರ', ಈ ಸಂಜ್ಞೆಯಕಿಂತ ಹೆಚ್ಚಿಗೆ ಸ್ಥಳದ ಉಳಿತಾಯವಾಗುತ್ತಿದ್ದು, ಮುದ್ರಣದ ಅನುಕೂಲತೆಯೂ ಒದಗುತ್ತದೆ. ಇದೇ ಸಂದರ್ಭದಲ್ಲಿ ಪ್ರಿ. ಗೋಕಾಕರು ಈ ಹೊಸ ಲಿಪಿಯ ಪ್ರಚಾರಕ್ಕಾಗಿ ಸೂಚಿಸಿದ ವಿಚಾರಗಳೂ ಮನನೀಯವಾಗಿವೆ—

"(ಈ ತಿದ್ದುಪಾಡುಗಳ ಬಗ್ಗೆ) ಪ್ರಾರಂಭದಲ್ಲಿ ಕನ್ನಡನುಡಿ, ಪರಿಷತ್ಪತ್ರಿಕೆ, ಸಂಯುಕ್ತಕರ್ನಾಟಕ ಮೊದಲಾದ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರವಾಗಬೇಕು. ಹಾಗೆ ಪ್ರಾರಂಭದಲ್ಲಿ ಪತ್ರಿಕೆಗಳ ಲೇಖದಲ್ಲಿ ಮೊದಲು ಇದನ್ನು ಕಾರ್ಯರೂಪಕ್ಕೆ ತರಬಹುದು." ನಿಜವಾಗಿಯೂ, ಈ ಕಾರ್ಯದಲ್ಲಿ ಹೆಚ್ಚು ಪ್ರಚಾರದಲ್ಲಿದ್ದು, ವಿಶೇಷ ಪುಟಸಂಖ್ಯೆಗಳುಳ್ಳ ದಿನ-ಪತ್ರಿಕೆಗಳು ಮಾಡುವ ಕಾರ್ಯವು, ಉಳಿದ ನಿಯತಕಾಲಿಕಗಳಕಿಂತ ಹೆಚ್ಚು ಮಹತ್ವದ್ದೂ, ಶಕ್ತಿಯುತವಾದದ್ದೂ ಆಗಿದೆ.

ಈ ರೀತಿ, ಕನ್ನಡ ಲಿಪಿಯಲ್ಲಿ ಸುಧಾರಣೆ ಮಾಡುವ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತು ಕ್ರಿ. ಶ. ೧೯೩೬ರಲ್ಲಿ 'ಅಕ್ಷರ-ಸಂಸ್ಕರಣ ಸಮ್ಮೇಲನ'ವೊಂದನ್ನು ಏರ್ಪಡಿಸಿತು. ಈ ಸಮ್ಮೇಲನವು ಎಷ್ಟೋ ಹೊಸ ಸೂಚನೆಗಳನ್ನೂ ಮಾಡಿತು. ಅನಂತರ ಪುನಃ ಕ್ರಿ. ಶ. ೧೯೪೨ರಲ್ಲಿ "ಈ ತಿದ್ದುಪಾಟಿನ ವಿಷಯದಲ್ಲಿ ಆಸಕ್ತಿಯನ್ನುಳ್ಳ ಹಲವು ಮಹನೀಯರನ್ನು ಆಹ್ವಾನಿಸಿ ಪರಿಷತ್ತಿನಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀ. ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ವಿಚಾರವಿನಿಮಯ ಮಾಡಲಾಯಿತು."* ಆ ಪ್ರಕಾರ ಹಲವು ಮಹನೀಯರಿಂದ ಪರಿಷತ್ತು ಸೂಚಿಸಿದ ಮಾರ್ಪಾಡುಗಳ ಬಗ್ಗೆ ಬಂದ ಅಭಿಪ್ರಾಯಗಳನ್ನೂ ಕಾಲಕಾಲಕ್ಕೆ ಕನ್ನಡ ನುಡಿಯಲ್ಲಿ ಪ್ರಕಟಿಸಲಾಯಿತು. ಪರಿಷತ್ತು 'ಕನ್ನಡ ಲಿಪಿಯ ತಿದ್ದುಪಾಟು' ಎಂಬ ಹಸ್ತಪತ್ರಿಕೆಯಲ್ಲಿ ಸ್ಥೂಲವಾಗಿ ಈ ಕೆಳಗಿನ ಸೂಚನೆಗಳನ್ನು ಮಾಡಿತು:—

೧. ಹಲವು ಸ್ವರಚಿಹ್ನೆಗಳನ್ನು ಕಡಿಮೆ ಮಾಡಬಹುದು

೨. ಮಹಾಪ್ರಾಣವನ್ನು ಸೂಚಿಸಲು ಆ ವರ್ಣದ **ಪಕ್ಕದಲ್ಲಿ** ಒಂದು ಗೆರೆಯನ್ನು ಹಾಕಬಹುದು.

೩. ಒತ್ತಕ್ಷರಗಳನ್ನು, ಈಗಿನಂತೆ ಒಂದರ **ಕೆಳಗೆ** ಒಂದನ್ನು ಬರೆಯುವುದರಿಂದ (ಸಗ್ಗ; ಅಗ್ಗ; ಇತ್ಯಾದಿ), ಈ ಕೆಳಗಿನ ಒತ್ತಕ್ಷರದ ಸಂಜ್ಞೆಗಳೇ ಅನಾವಶ್ಯಕವಾಗಿ **ಒಂದು ಸಾಲಿನಷ್ಟು** ಸ್ಥಳವನ್ನು ಮುದ್ರಣದಲ್ಲಿ ವ್ಯಾಪಿಸಿಬಿಡುತ್ತವೆ ಆದ್ದರಿಂದ, **ಈ ಒತ್ತಕ್ಷರಗಳನ್ನು ಅರ್ಧಾಕ್ಷರಗಳನ್ನಾಗಿ ಮಾಡಿಕೊಂಡು, ಕೆಳಗೆ ಬರೆಯದೆ, ಎದುರಿಗೇ ಬರೆಯಬೇಕು** — ಇತ್ಯಾದಿ.

ಆದರೆ, ಪರಿಷತ್ತು ಮಾಡಿದ ಈ ಸೂಚನೆಗಳು ಎಷ್ಟೋ ಜನರಿಗೆ ಮನಸ್ಸು ಹಿಡಿಯಲಿಲ್ಲ. ಅದರ ಪ್ರತೀಕವಾಗಿ, 'ಮೈಸೂರು ದೇಶದ ವಿದ್ಯಾಶಾಲಾ ಪಂಡಿತ ಮಂಡಲದವರು' ಈ ಬಗ್ಗೆ ವ್ಯಕ್ತಮಾಡಿದ ಅಭಿಪ್ರಾಯಗಳನ್ನು ಗಮನಿಸಬಹುದು ಈ ಸೂಚನೆಗಳ ಬಗ್ಗೆ ಅವರು ಎತ್ತುವ ಆಕ್ಷೇಪಗಳೇನಂದರೆ—

೧. "(ಈ) ತಿದ್ದುಪಾಟುಗಳು ಕರ್ನಾಟಕ ದೇಶವಲ್ಲೆಲ್ಲಾ ಸಾವಿರಾರು ವರ್ಷಗಳಿಂದ ಶಾಸ್ತ್ರೀಯವಾದ ರೀತಿಯಲ್ಲಿ ಅಖಿಲ ಭಾರತೀಯ ಭಾಷಾಲಿಪಿಗಳ ಮಾದರಿಯಲ್ಲಿರುವ ಕನ್ನಡ ಲಿಪಿಯ **ಕ್ರಮವನ್ನೇ** ವ್ಯತ್ಯಾಸ ಮಾಡಿ, ಶಬ್ದಗಳ ಉಚ್ಚಾರಣಾನಿಯಮದ ಮತ್ತು ಅನುಸರಿಸಿದ ಬರವಣಿಗೆಯ ಕ್ರಮವನ್ನು ಬದಲಾಯಿಸಿ, **ಇಂದಿನ ವರೆಗೆ**

* ಕನ್ನಡ ನುಡಿ—೧೦ನೆಯ ಮಾರ್ಚ ೧೯೪೪, ಪು ೧೦೧,

ಅಚ್ಚಾಗಿರುವ ಪ್ರಾಚೀನ ಮತ್ತು ನವೀನ ಗ್ರಂಥಗಳನ್ನೆಲ್ಲಾ ಓದಲು ಕಷ್ಟಸಾಧ್ಯವನ್ನಾಗಿ ಮಾಡುವುದು."

೨. "(ಈ ತಿದ್ದುಪಾಟಿನ ಪ್ರಕಾರ) ಬಿಟ್ಟುಹೋಗುವ ಅಕ್ಷರಗಳಿಗೆ ಬದಲಾಗಿ, ಅವನ್ನು ಸೂಚಿಸುವ ಬೇರೆ ಚಿಹ್ನೆಗಳುಳ್ಳ ಮೊಳೆಗಳು **ಸಾವಿರಗಟ್ಟಳೆ** ಬೇಕಾಗುವವು. ಈಗ ಒಂದು ಪುಟದಲ್ಲಿ ಅಚ್ಚುಮಾಡಬಹುದಾದ ವಿಷಯವನ್ನು ಈ ಕ್ರಮದಂತೆ ಅಚ್ಚುಮಾಡಿಸಬೇಕಾದರೆ, ಮೂರು ಪುಟಗಳು ಬೇಕಾಗುವವು. ಇದನ್ನನುಸರಿಸಿ ಕಾಗದ, ಮಸಿ, ಮೊಳೆ ಮತ್ತು ಶ್ರಮ ಇವೆಲ್ಲವೂ ಹೆಚ್ಚುವವು."

(ನಿಜವಾಗಿಯೂ, ಈಗಿನ ಒತ್ತಕ್ಷರಗಳಿಂದ ವ್ಯಯವಾಗುತ್ತಿದ್ದ ಸ್ಥಳವನ್ನು ಉಳಿಸಹೋಗಿ, ಈ ಹೊಸ ಪದ್ಧತಿಯ ಪ್ರಕಾರ ಅದೇ ಸಾಲಿನಲ್ಲಿ ಒತ್ತಕ್ಷರಗಳನ್ನು ತೋರಿಸುವ ಈ ಮಾರ್ಪಾಡು ಎಷ್ಟರಮಟ್ಟಿಗೆ ಮಿತವ್ಯಯದ್ದಾಗಿದೆಯೆಂಬುದು ವಿಚಾರಣೀಯ.)

೩. "ಈ ರೀತಿ, ನೂತನ ಸಂಸ್ಕರಣವಾದರೆ, ಶಾಸ್ತ್ರೀಯ ರೀತಿಯಲ್ಲಿ ಭರತಭೂಮಿಯಲ್ಲಿ ಒಳೆದುಬಂದಿರುವ ಎಲ್ಲ ಭಾಷೆಗಳಿಗೂ ಸಾಮಾನ್ಯವಾಗಿರುವ ಲಿಪಿಕ್ರಮದ ಸಂಬಂಧವು ಕತ್ತರಿಸಿ ಹೋಗುವುದರಿಂದ, ಆಂತರಿಕವಾದ ಲಿಪಿಗಳ ಏಕತೆಯ ಸಂಸ್ಕೃತಿಗೆ ಭಂಗ ಬರುತ್ತದೆ."

೪. ಪರಿಷತ್ತಿನ ಸ್ವರಚಿಹ್ನೆಯ ಬಗ್ಗೆ ಇವರು ಹೇಳುವುದೆಂದರೆ— "ಎಲ್ಲಾ ಸ್ವರಗಳೂ, ಸ್ವರ ಚಿಹ್ನೆಗಳೂ ಇರಬೇಕು. ದೀರ್ಘಕ್ಕೆ ಒಂದೇ ಚಿಹ್ನೆಯಾದರೆ, ಅನಾನುಕೂಲವಾಗುತ್ತದೆ. ಅಶಾಸ್ತ್ರೀಯವೂ ಆಗುತ್ತದೆ; ಭ್ರಾಂತಿಜನಕವೂ ಆಗುತ್ತದೆ. ಆದುದರಿಂದ ಬದಲಾವಣೆಯು ಅನಾವಶ್ಯಕ."

೫. **ಮಹಾಪ್ರಾಣ**:—"ಮಹಾಪ್ರಾಣಕ್ಕೆ ಪಕ್ಕದಲ್ಲಿ ಒಂದು ಗೆರೆ ಪ್ರಯೋಜನವಿಲ್ಲ. ಸಂಶಯಜನಕವಾಗುತ್ತದೆ. ಅಂದ ಕೆಡುತ್ತದೆ. ಪದ್ಯವಿಭಾಗದಲ್ಲಿ ಭ್ರಾಂತಿಜನಕವಾಗುತ್ತದೆ. ಆದುದರಿಂದ ಈಗಿರುವಂತೆಯೇ ಲಿಪಿಯು ಇರಬೇಕು."

೬. "ಒತ್ತಕ್ಷರಗಳನ್ನು ಅರ್ಧಾಕ್ಷರಗಳನ್ನಾಗಿ ಮಾಡಿದರೆ **ಸ್ಥಳ ಬಹಳ ಹೆಚ್ಚಾಗುತ್ತದೆ.** ಓದಲು ಬಹು ಕಷ್ಟವಾಗುತ್ತದೆ. ಆದುದರಿಂದ ಈಗಿರುವಂತೆಯೇ ಇರಬೇಕು"— ಇತ್ಯಾದಿ. *

ಮೇಲೆ ವಿವರಿಸಿದ ಒತ್ತಕ್ಕರಗಳ ನಿರ್ದೇಶಕ್ಕಾಗಿ, ಮತ್ತೂ ಒಬ್ಬರು ಮೂಲ ವರ್ಣಗಳನ್ನೇ ಸ್ವಲ್ಪ ಸಣ್ಣ ಅಕ್ಷರಗಳಲ್ಲಿ, ಸ್ವಲ್ಪ ಮೇಲೋ ಕೆಳಗೋ ವ್ಯತ್ಯಾಸ ಕಾಣುವಂತೆ ಬರೆಯಬೇಕೆಂದು ಅಭಿಪ್ರಾಯ ವ್ಯಕ್ತಮಾಡಿದರು. ಅಂದರೆ, ಒಪ್ಪು–ಎಂಬುದನ್ನು ಒಪ್‌ಪು ಎಂದು ಈ ರೀತಿ ಬರೆಯಬೇಕೆಂದು ಅಭಿಪ್ರಾಯ. ಹಾಗೆಯೇ ಇರ್‌ದ; ಸಂಯುಕ್‌ತ—ಇತ್ಯಾದಿ. ಇನ್ನೂ ಹಲವರ ಪ್ರಕಾರ, **ಸಜಾತೀಯ ಸಂಯುಕ್ತಾಕ್ಷರಗಳನ್ನು** ಕೆಳಗೊಂದು ಟಿಮ್ಮು ಹಾಕಿ ತೋರಿಸಬೇಕೆಂದು ಸೂಚನೆ. ಅಂದರೆ, 'ಸಜ್ಜನ' ಶಬ್ದವನ್ನು ಇವರ ಪ್ರಕಾರ 'ಸಜ಼ನ' ಎಂದೂ 'ತದ್ದಿನ'ವನ್ನು 'ತದ಼ಿನ' ಎಂದೂ ಬರೆಯಬೇಕೆಂದು ಅಭಿಪ್ರಾಯ. "ಹೀಗೆ ಮಾಡುವುದರಿಂದ ತಿದ್ದಿದ ಲಿಪಿಯನ್ನು ಬರೆಯುವುದಕ್ಕೆ ಕಾಲವಿಳಂಬವಾಗುವುದಿಲ್ಲ ಮತ್ತು ಜಾಗವೂ

* ಕನ್ನಡ ನುಡಿ—೬ನೆಯ ಅಕ್ಟೋಬರ ೧೯೪೨.

ಉಳಿತಾಯವಾಗುತ್ತದೆ ".* ಇದೂ ಒಂದು ಒಳ್ಳೆಯ ಸೂಚನೆ. ಇನ್ನೂ ಒಬ್ಬರು ಸಜಾತೀಯ ದ್ವಿತ್ವಗಳಿದ್ದಾಗ 'ಪಕ್ಕದಲ್ಲಿ ಒಂದು ಓರೆಯಾದ ಗೆರೆಯಿದ್ದರೆ ಬರೆಯುವವರಿಗೆ ಬಹು ಸುಲಭ'ವೆಂದು ಸೂಚಿಸಿದರು.† ಮತ್ತೂ ಒಬ್ಬರು ಪರಿಷತ್ತಿನ ಉದ್ದೇಶಗಳನ್ನೂ, ಅಚ್ಚುಕೂಟದವರ ಅನುಕೂಲತೆಯನ್ನೂ ಗಮನಿಸಿ ಈ ಕೆಳಗಿನಂತೆ ಲಿಪಿಕ್ರಮುವನ್ನು ಸೂಚಿಸಿದರು :—

ಸ್ವರಗಳು	—	ಅ, ಅೀ	—	ಇತ್ಯಾದಿ	೧೧
ವರ್ಗೀಯ ವ್ಯಂಜನಗಳು	—	ಕ, ಕ	—	ಇತ್ಯಾದಿ	೧೪
ಅವರ್ಗೀಯ ವ್ಯಂಜನಗಳು	—	ಯ, ರ	—	ಇತ್ಯಾದಿ	೯
ಗುಣಿತಾಕ್ಷರಗಳು	—	ಕ, ಕೀ	—	ಇತ್ಯಾದಿ	೭
ಒತ್ತುಗಳು	—	ಕ ಕ	—	ಇತ್ಯಾದಿ	೩೨
				ಒಟ್ಟು	೭೩

ಈ ಕ್ರಮದಿಂದ ಒಟ್ಟು ಅಚ್ಚಿನ ಮೊಳೆಗಳು ೭೩ ಕ್ಕಿಳಿದು (ಸದ್ಯ, ಅವು ಸುಮಾರು ೩೫೦ ಆದರೂ ಬೇಕು) ಮೊಳೆಗಳ ಮಿತವ್ಯಯವೂ, ಸೌಲಭ್ಯವೂ ಒದಗುವದು.

ಇದಾದನಂತರ ಪುನಃ, ಕ್ರಿಸ್ತಶಕ ೧೯೪೪ರ ಫೆಬ್ರುವರಿ ತಿಂಗಳದಲ್ಲಿ ಮಂಗಳೂರಲ್ಲಿ ಸೇರಿದ 'ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಲನದ' ಅಂಗವಾಗಿ ಈ ಕನ್ನಡ ಲಿಪಿಸಂಸ್ಕರಣದ ವಿಷಯವನ್ನು ಕುರಿತು ಸಮಾಲೋಚನೆ ನಡೆಯಿತು. ಆಗ ಪತ್ರಿಕಾವ್ಯವಸಾಯದ ದೃಷ್ಟಿಯಿಂದ ಕನ್ನಡವಲ್ಲಿ ಒದಗಿದ ಈ ಕೊರತೆಯ ಬಗ್ಗೆ ಮೈಸೂರು ಸಂಸ್ಥಾನದ ಅಕ್ಷರಪ್ರಚಾರ ಸಂಸ್ಥೆಯ ಶ್ರೀ. ಶ್ರೀನಿವಾಸರಾಯರು ಹೇಳಿದ ಮಾತುಗಳು ತುಂಬಾ ಸಮಂಜಸವಾಗಿವೆ.

"ವೃತ್ತಪತ್ರಿಕೆಗಳು ನಮ್ಮ ಜನಜೀವನದಲ್ಲಿ ಬಹು ಮುಖ್ಯ ಸ್ಥಾನವನ್ನು ಪಡೆದಿವೆ. ಅವು ಜನತೆಯ ಶಿಕ್ಷಣದ ದೊಡ್ಡ ಸಾಧನವಾಗಿವೆ. ಇನ್ನು ಮುಂದೆ **ಲಕ್ಷಗಟ್ಟಲೆ** ಪತ್ರಿಕೆಗಳು ಅಚ್ಚಾಗಬೇಕಾಗುತ್ತವೆ. ಈಗ ಬಳಕೆಯಲ್ಲಿರುವ ಲಿಪಿಗೆ ಸು. ೩೨೦ ಮೊಳೆಗಳು ಬೇಕಾಗಿರುತ್ತವೆ. ಇಷ್ಟು ಮೊಳೆಗಳನ್ನು ಜೋಡಿಸಿ, ಅಚ್ಚುಮಾಡಲು ಕಾಲ ಬಹಳ ಹಿಡಿಯುತ್ತವಲ್ಲದೆ, ಇವಕ್ಕಾಗಿ ತಗಲುವ ಖರ್ಚೂ ಅತಿಯಾಗಿದೆ. ಲಿನೋಟೈಪ ಮುಂತಾದ ಯಂತ್ರ ಸೌಕರ್ಯಗಳಿಗೆ ಈಗಿನ ಲಿಪಿಹೊಂದುವದಿಲ್ಲ . ಕನ್ನಡ ಟೈಪರೈಟರಿಗೆ ಈಗಿನ ಲಿಪಿಯ ಅಕ್ಷರಗಳೂ, ಅವುಗಳ ಕಾಗುಣಿತ ಮತ್ತು ಒತ್ತುಗಳೂ ಬಹು ಹೆಚ್ಚು. ಇವುಗಳನ್ನೆಲ್ಲ ಇಟ್ಟುಕೊಂಡು ಯಂತ್ರವನ್ನು ತಯಾರಿಸಿದಲ್ಲಿ **'ಡೆಡ್ ಕೀ'**—ಅಂದರೆ ಹೆಚ್ಚು ಉಪಯೋಗಕ್ಕೆ ಬಾರದೆ ಇರುವ ಮೊಳೆಗಳು –ಬಹಳ ಇರಬೇಕಾಗುತ್ತವೆ. ಆಗ ಟೈಪು ಹೊಡೆಯುವವರಿಗೆ ಅವಶ್ಯಕವಾದ ವೇಗ ಸಾಧಿಸುವದಿಲ್ಲ "

ಶ್ರೀ. ಶ್ರೀನಿವಾಸರಾಯರ ಪ್ರಕಾರ "ಯಾವ ದೇಶದಲ್ಲಿ ದೊಡ್ಡದಾಗಿ ಜನತೆಯಲ್ಲಿ ಅಕ್ಷರ ಪ್ರಚಾರ ಮಾಡಿ ದೇಶದ ಜನವೆಲ್ಲ ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಚಳುವಳಿ ನಡೆಯಿತೋ ಅಲ್ಲೆಲ್ಲ ಲಿಪಿ ಸುಧಾರಣೆಯನ್ನು ಮೊದಲು ನಡೆಸಿದ್ದಾರೆ." ತುರ್ಕಸ್ಥಾನದಲ್ಲಿ ತಮ್ಮ ಹಿಂದಿನ ಲಿಪಿಯನ್ನು ತ್ಯಜಿಸಿ ರೋಮನ್

* ಕನ್ನಡ ನುಡಿ—೬ನೆಯ ನವಂಬರ ೧೯೪೨. † ಅದೇ ೨೭—೧೧—೧೯೪೨.

ಲಿಪಿಯನ್ನು ಬಳಕೆಗೆ ತಂದರು. ಚೀನ ದೇಶದಲ್ಲಿ ಬಳಕೆಯಲ್ಲಿದ್ದ ಲಿಪಿಯನ್ನು ಸುಧಾರಿಸಿದರು. ಕನ್ನಡವೂ ಕೂಡ ಆ ರೀತಿ ಕಾಲಕಾಲಕ್ಕೆ ಬದಲಾಗುತ್ತಲೇ ನಡೆದಿದೆ ಎಂಬುದು—ಯಾವ 'ಶಾಸನ' ಬಲ್ಲವರಿಗೂ ಕಂಡುಬರಬಹುದು. ಆದ್ದರಿಂದ ಈ ವಿಚಾರ-ಸಂಕಿರಣದಲ್ಲಿ ಈ ಕೆಳಗಿನ ಮಾರ್ಪಾಟುಗಳನ್ನು ಕನ್ನಡ ಲಿಪಿಯಲ್ಲಿ ಮಾಡಬೇಕಾಗಿ ತೀರ್ಮಾನವಾಯಿತು.

೧. **ದೀರ್ಘಸ್ವರಕ್ಕೆ** ಬೇರೆ ಅಕ್ಷರಗಳ ಬದಲು, ಹ್ರಸ್ವಗಳ ಮುಂದೆ ದೀರ್ಘದ ಸಲುವಾಗಿ ಒಂದೇ ತೆರನಾದ ಸಂಜ್ಞೆಯನ್ನು ಉಪಯೋಗಿಸುವುದು.

೨. ಅಲ್ಪಪ್ರಾಣದ ಪಕ್ಕದಲ್ಲಿ, ಒಂದು ಗೆರೆ ಹಾಕುವುದರ ಮೂಲಕ **ಮಹಾಪ್ರಾಣವನ್ನು** ಗುರುತಿಸುವುದು.

(ಈ ವಿಚಾರದಲ್ಲಿ, ಅಲ್ಪಪ್ರಾಣಗಳ ಕೆಳಭಾಗಕ್ಕೇ ಈ ಸಂಜ್ಞೆಯನ್ನು ಇಟ್ಟುಕೊಳ್ಳುವುದು ಹೆಚ್ಚು ಸೂಕ್ತವೆಂದು ಕಾಣುತ್ತದೆ.— ಕ, ಕ।; ಚ, ಚ। — ಇ.)

೩. **ಸಂಯುಕ್ತಾಕ್ಷರದ** ಒತ್ತುಗಳನ್ನು ಅಕ್ಷರದ ಬಲಕ್ಕೆ ಸ್ವಲ್ಪ ಕೆಳಗಿರುವಂತೆ—ಒತ್ತುಗಳೂ ಅಕ್ಷರಗಳೂ ಒಂದೇ ಸಾಲಿನಲ್ಲಿ ಬರುವ ಹಾಗೆ—ಅಚ್ಚುಮೊಳೆಗಳನ್ನು ಜೋಡಿಸುವುದು— ಉದಾ: ತಪ್ ಪ; ಒಪಪು — ಇ.

೪. ಈ ಒತ್ತುಗಳಾದರೂ, ಬೇರೆ ಬೇರೆ ವರ್ಣಗಳಿಗೆ ಬೇರೆಬೇರೆಯಾಗಿರದೆ (ಅಂದರೆ, 'ಕ'ದ ಒತ್ತು '್ಕ'; 'ಪ'ದ ಒತ್ತು '್ಪ'; 'ಚ'ದ ಒತ್ತು '್ಚ' ಆದರೆ, 'ತ'ದ ಒತ್ತು ಮಾತ್ರ '್ತ' ಎಂದೂ; 'ರ'ದ ಒತ್ತು '್ರ' ಎಂದೂ ಆಗುತ್ತವೆ; ಹೀಗಾಗದೆ,) ಎಲ್ಲ ಒತ್ತುಗಳೂ **ಮೂಲಾಕ್ಷರಗಳನ್ನೇ** ಹೋಲುವಂತಿರಬೇಕು.

ಉದಾ: ಹಬಬ ; ಬತತ ಇತ್ಯಾದಿ.

"ಪರಿಷತ್ತು" ಸ್ವೀಕರಿಸಿದ ರೀತಿಯಲ್ಲಿ ನಾವು ಯಾವುವಾದರೂ ಸಾಲುಗಳನ್ನು ಬರೆದರೆ, ಯಾವ ರೀತಿ ಕಾಣುತ್ತದೆಂಬುದನ್ನು ಈ ಕೆಳಗೆ ಕೊಟ್ಟಿದೆ.

ದೇವನೊಬ್ ಬ, ನೇಮ ಹಲವು; ಪರಮ ಪತಿವ್ ರತೆಗೆ ಗಂಡನೊಬ್ ಬ.
ಮತ್ ತೊಂದರ್ ಕೆರಗಿದೊಡೆ ಕಿವಿಮೂಗ ಕೊಯ್ ವನು. ಇತ್ಯಾದಿ.

ಹಾಗೇ,

ಹುತ್ ತವ ಬಡಿದಡೆ, ಹಾವು ಸಾಯಬಲ್ ಲುದೇ ಅಯ್ ಯ? ಘೋರ ತಪವ ಮಾಡಿದ-
ಡೇನು? ಅಂತರಂಗ ಆತ್ ಮ ಶುದ್ ಧಿಯಿಲ್ ಲದವರನೆಂತು ನಂಬುವನಯ್ ಯ
ಕೂಡಲಸಂಗಮದೇವ - ಇತ್ಯಾದಿ.

ಹೀಗಾಗಿ, ಬೆಳೆಯುತ್ತಿರುವ ಕನ್ನಡದ ಕೋಶ ಮತ್ತು ಆವಶ್ಯಕತೆಗಳ ಪ್ರಕಾರ, ಹಿಂದಿನಂತೆ ಇಂದು ಪುನಃ ನಾವು ಲಿಪಿಪರಿಷ್ಕಾರ ಮಾಡುವುದು ತುಂಬಾ ಅಗತ್ಯವಿದೆ. ಇಷ್ಟೇ ಈ ಮಾರ್ಪಾಡುಗಳನ್ನು ಮಾಡಿಕೊಳ್ಳುವಾಗ ಲಿಪಿಯ ಆವಶ್ಯಕ ಅಂಶಗಳಾದ ಸೌಂದರ್ಯ ಸ್ಪಷ್ಟತೆಗಳಿಗಾಗಲೀ, ಶೀಘ್ರತೆಗಾಗಲೀ ವ್ಯತ್ಯಯ ಬಾರದಂತೆ ಮಾತ್ರ ಜಾಗ್ರತೆ ವಹಿಸಬೇಕು.

ಪುನಃ ಕನ್ನಡ ಲಿಪಿ

ನಾವು ಈ ಕನ್ನಡ ವರ್ಣಮಾಲೆಯ ಪ್ರಕರಣವನ್ನು ಮುಗಿಸುವ ಮುನ್ನ, ಇದೇ ವಿಷಯಕ್ಕೇ ಸಂಬಂಧಪಟ್ಟಿದ್ದು, ಕನ್ನಡ ಲಿಪಿ-ಸಂಸ್ಕರಣದ ದೃಷ್ಟಿಯಿಂದ ಬಹುಶಃ ಉಪಯುಕ್ತವಾಗಬಹುದಾದ ಇನ್ನೊಂದು ಮಾತನ್ನು ಗಮನಿಸುವುದೂ ಯೋಗ್ಯವಾದೀತು.

ಕನ್ನಡಲಿಪಿಯು ಯಾವಾಗಲೂ ಪ್ರಗತಿಗಾಮಿಯಾಗಿ, ಯಾವ ರೀತಿ ಬಳೆಯುತ್ತ ಬಂದಿತೆಂಬುದನ್ನು ಈ ಮೊದಲೇ ಸೂಚಿಸಿದ್ದೇವಷ್ಟೇ. ಹಾಗಾದರೆ, ಈ ಪ್ರಾಚೀನ ಕನ್ನಡ ಲಿಪಿಯ ಸ್ಥೂಲ-ಲಕ್ಷಣಗಳೇನಿದ್ದುವು? ಅದು ಎಂದು ಹೇಗೆ ಮಾರ್ಪಾಡಾಯಿತೆಂಬುದನ್ನು ಪ್ರಸ್ತುತ ನೋಡೋಣ: –

'ಲಲಿತ ವಿಸ್ತರ' ಎಂಬ ಬುದ್ಧ ಚರಿತ್ರರೂಪವಾದ ಗ್ರಂಥದಲ್ಲಿ, ಬ್ರಾಹ್ಮೀ, ಖರೋಷ್ಠೀ, ವಂಗಲಿಪಿ—ಮೊದಲಾಗಿ ೬೪ ಲಿಪಿಗಳಲ್ಲಿ ದ್ರಾವಿಡ, ದಕ್ಷಿಣಲಿಪಿಯೆಂದು ಇದೆಯಲ್ಲದೆ, ಕರ್ಣಾಟಕ ಇಲ್ಲವೆ ಕನ್ನಡ ಲಿಪಿಯ ನಿರ್ದೇಶವಿಲ್ಲ. ಆದರೂ, ಕನ್ನಡ ಲಿಪಿಯು ತೀರ ಪ್ರಾಚೀನ ಕಾಲದಿಂದ ನಡೆದುಬಂದುದನ್ನು ನಾವು ಕಾಣುತ್ತೇವೆ. ಕ್ರಿ. ಶ. ೫ರ ಹಲ್ಮಿಡಿ ಶಾಸನವಂತೂ ಸುಪ್ರಸಿದ್ಧವೇ ಇದೆ.

ಕನ್ನಡ ಲಿಪಿಯು ಕ್ರಿ ಶ. ೫ರಿಂದ ಸುಮಾರು ಕ್ರಿ. ಶ. ೯ರ ವರೆಗೆ ಒಂದು ವಿಧವಾಗಿದ್ದಿತು; ಅನಂತರ, ಕ್ರಿ. ಶ. ೯ರಿಂದ ಕ್ರಿ ಶ. ೧೩೦೦ ರ ವರೆಗೂ ಕೂಡ ಕನ್ನಡ ಮತ್ತು ತೆಲುಗು ಲಿಪಿಗಳು ಏನೂ ವ್ಯತ್ಯಾಸವಿಲ್ಲದೆ ಬಳೆದವು. ಅನಂತರ, ಕ್ರಿ. ಶ. ೧೩ರಿಂದ ೧೯ರ ವರೆಗೆ ವ್ಯತ್ಯಾಸವನ್ನು ಪಡೆಯುತ್ತ, ಕ್ರಿ. ಶ. ೧೯ ರಲ್ಲಿ ಮುದ್ರಣವು ಪ್ರಾರಂಭವಾದಂದಿನಿಂದಂತೂ ಕನ್ನಡ ಮತ್ತು ತೆಲುಗು ಲಿಪಿಗಳು ಎದ್ದು ಕಾಣುವಷ್ಟು ಭಿನ್ನವಾಗಿವೆ.

ಕನ್ನಡ ವ್ಯಾಕರಣ ಗ್ರಂಥಕಾರರಾದರೂ ಕೂಡ, ಕೇವಲ 'ಸಿದ್ಧೋ ವರ್ಣಸಮಾಮ್ನಾಯಃ' 'ಸಿದ್ಧಾ ಹಿ ಶುದ್ಧಕಾಃ'—ಎನ್ನುವ ರೀತಿಯಲ್ಲಿ ಈ ಲಿಪಿಗಳನ್ನು ಒಪ್ಪಿಕೊಳ್ಳುತ್ತ ಬಂದರು. ಇವರು ವರ್ಣ ಸಮಾಮ್ನಾಯದಲ್ಲಿಯ ಅಕಾರಾದಿ ವರ್ಣಗಳ ವರ್ಣ, ಅಧಿದೈವತ ಪರ್ಯಾಯ, ಉದ್ಧಾರ ಕ್ರಮ— ಮೊದಲಾದವುಗಳ ಬಗ್ಗೆ ತಮ್ಮ ಗ್ರಂಥಗಳಲ್ಲಿ ವಿವರವಾಗಿ ಹೇಳಿಲ್ಲವಾದರೂ, ಸಂಸ್ಕೃತ ಅಧಿಕಾರಿಗಳಾದ ಅಗ್ನಿಪುರಾಣಾದಿಗಳೇ ಇವರಿಗೂ ಆದರ್ಶವಾಗಿರಬೇಕು. ಈ ವರ್ಣಗಳ ಬಗ್ಗೆ ಅಗ್ನಿಪುರಾಣವು ಹೇಳುವುದೆಂದರೆ–

ಅಕಾರೋ ವಿಷ್ಣುರುದ್ದಿಷ್ಟಃ, ಉಕಾರಸ್ತು ಮಹೇಶ್ವರಃ
ಮಕಾರ ಉಚ್ಯತೇ ಬ್ರಹ್ಮಾ
ಪ್ರಣವೇನ ತ್ರಯೋ ಮತಾಃ
ಅ, ಇ, ಉ, ಏ. ಓ, ಓಮ್ **ಕಲಾಶ್ಚ ಮೂಲಂ ಬ್ರಹ್ಮ ಇತಿ ಕೀರ್ತಿತಂ**

ಇದನ್ನು ನೋಡುವಾಗ, ಆಧುನಿಕ ತತ್ವವೇತ್ತರಾದ ಬರ್ಟ್ರಾಂಡ ರಸೆಲ್ ಅವರು '*Æ*' ಎಂಬ ಹೆಸರಿನ ಬಗ್ಗೆ ಹೇಳಿದ ಮಾತುಗಳು ಗಮನಕ್ಕೆ ಬಾರದಿರವು....

ಪ್ರಾಚೀನ ಕನ್ನಡ ಲಿಪಿಯ ವೈಶಿಷ್ಟ್ಯಗಳಾಗಿ ನಾವು ಕೆಳಗಿನ ಅಂಶಗಳನ್ನು ಗಮನಿಸಬಹುದು:—

೧. ಪ್ರಾಚೀನ ಹಳಗನ್ನಡ ಲಿಪಿಗಳಲ್ಲಿ ಅಕ್ಷರಗಳಿಗೆ **ತಲೆಕಟ್ಟು** ಇಲ್ಲ. ಅನಂತರ ಅಕ್ಷರದ ಮೇಲ್ಗಡೆ ಸಣ್ಣ ಅಡ್ಡಗೀಟು ಪ್ರಾರಂಭವಾದುವು.

೨. ಅನುಸ್ವಾರವನ್ನು **ಅಕ್ಷರದ ಮೇಲೆ** ಬರೆಯುತ್ತಿದ್ದರು.

ಉದಾ: **ವಸುನ್ಧರೆಂ; ಪರೆಂದಾನೆಂ** — ಇತ್ಯಾದಿ.

೩. "ಸಜಾತೀಯ ಸಂಯುಕ್ತಾಕ್ಷರಗಳು ಪ್ರಾಯಶಃ ದ್ವಿತ್ವಾಕ್ಷರಗಳಾಗಿಯೇ ಬರೆಯಲ್ಪಡುತ್ತಿದ್ದುವು."*

ಉದಾ: ವರ್ಗ (ಹ. ಗ. ವಗ್ಗ); ಇತ್ಯಾದಿ.

೪. ರೇಫಸಂಯುಕ್ತಾಕ್ಷರಗಳಿಗೆ ಅರ್ಕಾವತ್ತನ್ನೇ ಉಪಯೋಗಿಸುತ್ತಿದ್ದರು.

೫. "ವಿಸರ್ಗದ ಮುಂದೆ 'ಕ, ಖ' ಅಕ್ಷರಗಳು ಬಂದರೆ, ಷಕಾರವನ್ನೂ. 'ಪ, ಫ' ಅಕ್ಷರಗಳು ಬಂದರೆ, ಶಕಟ ರೇಫವನ್ನೂ ವಿಸರ್ಗಕ್ಕೆ ಆದೇಶವಾಗಿ ಉಪಯೋಗಿಸುತ್ತಿದ್ದರು. ಇದನ್ನೇ ವೈಯಾಕರಣಿಗಳು ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯಗಳೆಂದು ಹೇಳಿ, ಜಿಹ್ವಾಮೂಲೀಯವನ್ನು ವಜ್ರಾಕೃತಿಯಲ್ಲೂ (ಅಂದರೆ ×ಕ, ×ಖ) ಉಪಧ್ಮಾನೀಯವನ್ನು ಗಜಕುಂಭಾಕೃತಿಯಲ್ಲೂ (ಂಂಪ, ಂಂಫ) ಬರೆಯುತ್ತಿದ್ದರು. ಇವೇ ಜಿಹ್ವಾಮೂಲೀಯ ಉಪಧ್ಮಾನೀಯ ವರ್ಣನೆಗಳನ್ನು ಕೇಶಿರಾಜನು ಕಾವ್ಯಮಯವಾಗಿ,—

> "ಕಕಾರಮುಚ್ಚಾರಣಾರ್ಥಮಾಗುಳಿದ ಪಸುಂಬೆಯ
> ಲಚ್ಚಣದಂತಿರ್ದ ಜಿಹ್ವಾಮೂಲೀಯಮೆಂಬುದು;—
> ಪಕಾರಮುಚ್ಚಾರಣಾರ್ಥಮಾಗುಳಿದ ಕುಮಾರೀಸ್ತನ
> –ಯುಗಳಾಕೃತಿಯ ವರ್ಣಂ ಉಪಧ್ಮಾನೀಯಂ"—

ಎಂದು ವರ್ಣನೆ ಮಾಡಿದ್ದು.

೬. ಪೂರ್ವದ ಹಳಗನ್ನಡದ ಹಲವು **ಅಕ್ಷರಗಳು,** ಇಂದಿನ ಕನ್ನಡದ **ಒತ್ತಕ್ಷರಗಳಲ್ಲಿ ಮಾತ್ರ** ಕಂಡುಬರುತ್ತವೆ.

ಉದಾ: ಗ (ಹ. ಗ ∩); ಠ (ಹ. ಗ. ⊙);
ತ (ಹ ಗ. ◡); ಥ (ಹ. ಗ ◉);
ರ (ಹ. ಗ. ᒍ); ಸ (ಹ. ಗ ∽) — ಇತ್ಯಾದಿ.

ಈ ಮೇಲಿನ ಕನ್ನಡ ಲಿಪಿಯ ಹಲವು ಅಂಶಗಳು, ಬಹುಶಃ ಇಂದಿನ ಲಿಪಿಸಂಸ್ಕರಣದ ವಿಚಾರದಲ್ಲೂ ತುಂಬಾ ಉಪಯುಕ್ತವಾಗಬಹುದು.

---

* ಕನ್ನಡ ಭಾಷಾಲಿಪಿ– ಪುಟ ೨೦.

ನಾಲ್ಕನೆಯ ಪ್ರಕರಣ

ಕನ್ನಡ ಕೋಶ ಮತ್ತು ಅದರ ಬೆಳವಣಿಗೆ

ಭಾಷೆಯು ನಿತ್ಯಪರಿವರ್ತನಶೀಲವಾದುದೆಂದೂ ಮತ್ತು ಹರಿಯುವ ನೀರಿನ ಪ್ರವಾಹದಂತೆ ಹೊಸ ಹೊಸ ಸಲಿಲಗಳನ್ನು ತಾನಾಗಿಯೇ ಸೇರಿಸಿಕೊಳ್ಳುವಂತಹದೆಂದೂ ಈಗಾಗಲೇ ಅನೇಕ ಸಲ ನೋಡಿದ್ದೇವೆ. ಭಾಷೆಯಲ್ಲಿ ಸ್ಥಿತಿಪ್ರಿಯತೆ ಎಂಬುದಕ್ಕಾಗಲೀ, ವೀರ–ಮಡಿವಂತಿಕೆ (ultra purism) ಎಂಬುದಕ್ಕಾಗಲೀ ಸ್ಥಾನವಿಲ್ಲ. ಬೆಳೆಯುತ್ತಿರುವ ಕೂಸಿನ ಮೇಲಿನ ಮೋಹದಿಂದ ಅದರ ರಕ್ಷಣೆಗಾಗಿ ಕಬ್ಬಿಣದ ಕಟ್ಟನ್ನು ಹಾಕಿದರೆ, ಕೂಸಿನ ಬೆಳವಣಿಗೆ ಸರ್ವಥಾ ಆಗಲಾರದು. ಹಾಗೆಯೇ, ಈ ಮಾತು ಯಾವುದೇ ಒಂದು ಭಾಷೆಯ ಕೋಶಕ್ಕೆ ಸರ್ವಥಾ ಅನ್ವಯಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ತಿಳಿದೋ ತಿಳಿಯದೆಯೋ ಅನೇಕ ವಿಧವಾಗಿ ಹೊಸ ಹೊಸ ಶಬ್ದಗಳನ್ನು ಸಿದ್ಧಿಸಿಕೊಳ್ಳುತ್ತಿರುತ್ತಾನೆ. ಇಂಥ ಶಬ್ದಗಳು ನಾಣ್ಯವಿದ್ದ ಹಾಗೆ. ಯಾವುದೇ ಒಂದು ಶಬ್ದವು ಹತ್ತು ಜನರ ನಾಲಗೆ ಸೇರಿದಾಗಲೇ ಅದಕ್ಕೆ ಚಲಾವಣೆ ಬರುವುದುಂಟು. ರಾಜ್ಯದಾಡಳಿತೆಯಲ್ಲಿ ಕಾಲಕಾಲಕ್ಕೆ ಹಳೆಯ ನಾಣ್ಯಗಳು ಮಾಯವಾಗಿ ಹೊಸಪ್ರಭುತ್ವದ ನಾಣ್ಯಗಳು ಚಲಾವಣೆ ಪಡೆಯುತ್ತಿರುವಂತೆ, ಅನೇಕ ಸಲ ಭಾಷೆಯಲ್ಲೂ ಕೂಡ ಹಳೆಯವೇ ಆಗಲಿ, ಹೊಸವೇ ಆಗಲಿ ಶಬ್ದಗಳು ನಿಂತು ಬೇರೆ ಶಬ್ದಗಳಿಗೆ ಎಡೆಮಾಡಿಕೊಡುತ್ತವೆ. ಆದರೆ ಒಂದು ಮಾತು; ಭಾಷಾಪ್ರಪಂಚದಲ್ಲಿ ಏಕತಂತ್ರಾಧಿಕಾರಕ್ಕೆ ಅವಕಾಶವಿಲ್ಲ. ಭಾಷಾಪ್ರಪಂಚವು ಪ್ರಜಾಪ್ರಭುತ್ವವಿದ್ದ ಹಾಗೆ. ರಾಜಕೀಯದ ನಾಣ್ಯಕ್ಕೆ ಯಾವನಾದರೊಬ್ಬನ ಪ್ರಭುತ್ವದ ಮುದ್ರೆ ಬಿದ್ದರೆ ಸಾಕು, ಆಕ್ಷಣದಿಂದ ಅದರ ಚಲಾವಣೆಗೆ ಪ್ರಾರಂಭ. ಆದರೆ ಭಾಷಾಪ್ರಪಂಚದಲ್ಲಿ ಮಾತ್ರ ಹಾಗಿಲ್ಲ. ಎಷ್ಟೇ ಬುದ್ಧಿವಂತನಾದ ಒಬ್ಬ ವ್ಯಕ್ತಿಯು ಒಂದು ಶಬ್ದವನ್ನು ನಿರ್ಮಿಸಿದ್ದರೂ, ಜನತೆಯ ಚಲಾವಣೆಯ ಮನ್ನಣೆ ಸಿಕ್ಕಾಗಲೇ ಮಾತ್ರ ಅದರ ಇತಿಹಾಸ ಪ್ರಾರಂಭವಾಗುತ್ತದೆ. ಆಂಡಯ್ಯನು ಎಷ್ಟೇ ಪರಿಶ್ರಮಪಟ್ಟು ಶಬ್ದಗಳನ್ನು ನಿರ್ಮಿಸಿಕೊಂಡಿದ್ದರೂ, ಅವರಲ್ಲಿ ಮುಕ್ಕಾಲು ಪಾಲು ಇಂದು ಸತ್ತವು. ಅನೇಕ ಶಬ್ದಗಳ ಮೂಲಸ್ವರೂಪವನ್ನು ಅಚ್ಚಳಿಯದೆ ಉಳಿಸಬೇಕೆಂದು ಕೇಶಿರಾಜನು ಹೆಣಗಿದಷ್ಟೂ, ಜನತೆ ಅವುಗಳನ್ನು ಧಿಕ್ಕರಿಸಲು ಪ್ರಾರಂಭಿಸಿತು. ಹೀಗಾಗಿ, ಅವ್ಯಕ್ತ ವಿಧಿಯ ಹಾಗೆ, ಭಾಷಾ–ಪ್ರವಾಹವೆಂಬುದಾಗಲೀ, ಪ್ರತಿಭೆಯೆಂಬುದಾಗಲೀ, ತಾನೇ ತಾನಾಗಿ ಸ್ವಚ್ಛಂದ ಛಂದವಲ್ಲಿ ಸಾಗಿರುತ್ತದೆ. ಅಂತಲೇ ಹ್ಯುಂಬೋಲ್ಟ್ ಅವರು ಭಾಷೆಯೆಂದರೆ,

> "Language is not a substance or finished work but *action*... It is the ever-repeated labour of the mind to utilise articulated sounds to express thoughts."

ಇದನ್ನೇ ನಾವು ಭಾಷೆಯ ಬೆಳವಣಿಗೆ ಇಲ್ಲವೆ ಮಾರ್ಪಾಡು ಎಂದು ಕರೆಯುತ್ತೇವೆ. ಯಾವುದಾದರೊಂದು ರಾಜಕೀಯ ಇಲ್ಲವೆ ಸಾಮಾಜಿಕ ಕ್ರಾಂತಿಯಾದಾಗಾಗಲೀ, ಇಲ್ಲವೆ ಯಾವುದೇ ರೀತಿಯಿಂದ ಅನ್ಯ

ಭಾಷೆಯ ಸಂಪರ್ಕವೊದಗಿದಾಗಾಗಲೀ, ಇಂಥ ಮಾರ್ಪಾಡಿನ ವೇಗವು ಸ್ವಲ್ಪ ಹೆಚ್ಚಾಗುತ್ತದೆ. ಯುದ್ಧಾನಂತರ ಆಂಗ್ಲ ಭಾಷಾಕೋಶಕ್ಕೆ, ಸೇರಿದ ಅನೇಕ ಹೊಸ ಶಬ್ದಗಳೇ ಇಂಥ ವೇಗದ ಓಟದ ದೃಷ್ಟಾಂತ. ಕಳೆದ ಎರಡು ಮಹಾಯುದ್ಧಗಳ ಮೂಲಕ, Quisling, V–8, Atom-bomb, Jeep, Bull-dozer, Yak-yak, York-plane, Fifth-column, Tank, Sub-marine — ಮೊದಲಾದ ಅನೇಕ ಶಬ್ದಗಳನ್ನು ನಾವು ಕೋಶದಲ್ಲಿ ಕಾಣುತ್ತೇವೆ.

ಈ ರೀತಿಯಾಗಿ ಭಾಷೆಯಲ್ಲಾಗುವ ಬೆಳವಣಿಗೆಯನ್ನು ನಾವು ಸ್ಥೂಲವಾಗಿ ಮೂರು ವಿಧವಾಗಿ ವಿಭಾಗಿಸಬಹುದು. **ಒಂದು** ಸಾಕೂತಪ್ರಯತ್ನದ ಮೂಲಕ ಮಾಡಿಕೊಂಡ ಮಾರ್ಪಾಡು ಇಲ್ಲವೆ ಬೆಳವಣಿಗೆಗಳು, **ಎರಡು** ನಾವು ಅರಿಯದೆಯೆ ನಡೆದಿರುವ ಪ್ರಕ್ರಿಯೆಗಳು. **ಮೂರನೆಯದಾಗಿ** ಅನ್ಯಭಾಷೆ ಇಲ್ಲವೆ ಸಂಸ್ಕೃತಿಯ ಸಂಪರ್ಕದ ಮೂಲಕವಾಗಿ ಬಂದ ಹೊಸ ಶಬ್ದಗಳು. ಮಾನವನ ಅನುಭವದ ಕ್ಷಿತಿಜವು ವಿಸ್ತಾರವಾದಂತೆ, ಅವನ ವಿಚಾರ ಶಕ್ತಿಯು ಹೆಚ್ಚು ತೀಕ್ಷ್ಣವಾದಂತೆ, ಇಲ್ಲವೆ ಹೊಸ ಹೊಸ ಸಂಶೋಧನೆಗಳಾದಂತೆ ಅವುಗಳಿಗೆ ಅಭಿವ್ಯಕ್ತಿಯನ್ನು ಕೊಡಬೇಕಾದರೆ, ಇಂಥ ಭಾಷೆಯ ಬೆಳವಣಿಗೆ ಆವಶ್ಯಕ; ಅ-ನಿವಾರ್ಯ. ಈ ರೀತಿ ಮೇಲೆ ವಿವರಿಸಿದ ಮೂರು ವಿಧಗಳಲ್ಲಿ, ವ್ಯಾಕರಣ ನಿಯಮಗಳ ಪ್ರಕಾರ ಸಾಧಿಸಿಕೊಳ್ಳಲು ಯತ್ನಿಸಿದ ಕೃತ್ತದ್ಧಿತ ಸಮಾಸ ಪ್ರಕ್ರಿಯೆಗಳನ್ನು ಭಾಷೆಯ ಬೆಳವಣಿಗೆಗಾಗಿ ಮನುಷ್ಯನು ಮಾಡಿದ ಸಾಕೂತ ಪ್ರಯತ್ನವೆಂದು ಹೇಳಬಹುದು.—ನೋಡು ಧಾತುವಿನಿಂದ ನೋಡಿದವನು ಎನ್ನುವ ಅರ್ಥದಲ್ಲಿಯ ನೋಡಿದ, ಹಾಗೇ, ಬೇಡಿದ ಮಾಡಿದ, ಸೂಡಿದ ಮೊದಲಾದುವು ಕೃದಂತಗಳಿಗೆ ಉದಾಹರಣೆ. ಅದರಂತೇ, ಮಾತು ಎಂಬ ನಾಮಪದದಿಂದ ಮಾತುಗಾರ, ಮಾತುಗಾರಿಕೆ, ಮಾತಾಳಿ,—ಮೊದಲಾದ ಪ್ರಯೋಗಗಳು ತದ್ಧಿತಗಳ ದೃಷ್ಟಾಂತ. ಹಾಗೇ ಅಡಪವಳ, ಕುಂಬಾರ, ಸಮಗಾರ, ಕಂಚಗಾರ, ನೇಕಾರ ಮೊದಲಾದವುಗಳನ್ನು ನೋಡಬಹುದು. ವೈಯಾಕರಣಿಗಳು ಕೇವಲ ಧಾತು ಮತ್ತು ನಾಮಪದಗಳಿಂದಷ್ಟೇ ಅಲ್ಲದೆ, ಅನೇಕ ಸಲ ಹಲವು ನಾಮಪದಗಳನ್ನೋ ಇಲ್ಲವೆ ಧಾತು ಮತ್ತು ನಾಮಪದಗಳನ್ನೋ ಕೂಡಿಸಿ ಸಮಾಸವೆಂದು ಹೆಸರಿಟ್ಟು ಹೊಸ ಅರ್ಥವನ್ನು ಸೂಚಿಸಲು ಯತ್ನಿಸುತ್ತಾರೆ. ಉದಾ: ಮುಕ್ಕಣ್ಣ; ವಜ್ರಾಂಗಿ ಇತ್ಯಾದಿ. ಇಂಗ್ಲಿಷ್ ಭಾಷೆಯಲ್ಲಿಯೂ ಕೂಡ ನಾವು ಇಂಥ ಅನೇಕ **ಸಮಾಸ**ಗಳನ್ನು ಕಾಣುತ್ತೇವೆ. ಉದಾ: Rail-way (=way formed by Rails); Steam-boat; Motor-car; ಕೆಲಕಾಲವಾದ ನಂತರ ಈ ಪದಗಳು ಸಮಾಸವೆಂದು ಗುರುತಿಸಲು ಕೂಡ ಸಾಧ್ಯವಾಗುವದಿಲ್ಲ ಉದಾ: ಬಿಕ್ಕಟ್ಟು; ರಾಮಕೃಷ್ಣ; daisy (=day's eye ಒಂದು ಹೂವು); ಕ್ರಿಸ್‌ಮಸ್ (Christ's Mass); Don=Do+on; Doff=Do+off; Flurry=Flow+hurry ಇತ್ಯಾದಿ. ವಿಚಾರಗಳ ಅಭಿವ್ಯಕ್ತಿಗಾಗಿ, ಸಾಕೂತವಾಗಿ ಭಾಷಾಕೋಶವನ್ನು ಬೆಳೆಸಿಕೊಳ್ಳುತ್ತಿರುವುದಕ್ಕೆ ಇವು ದೃಷ್ಟಾಂತ.

ಆದರೆ, ಮೇಲೆ ವಿವರಿಸಿದ **ಎರಡನೆಯ** ವಿಧದ ಪ್ರಕ್ರಿಯೆಯಲ್ಲಿ ಮನುಷ್ಯನಿಗಾಗಲೀ ಅವನ ಉದ್ದೇಶಕ್ಕಾಗಲೀ ಅಷ್ಟೊಂದು ಪ್ರಾಧಾನ್ಯತೆ ಇಲ್ಲ. 'ಮಿತವ್ಯಯಾಸಕ್ತಿ'ಯಲ್ಲಿಯಂತೆ ಹಲಕೆಲವು ಸಲ ಅವನು ತನ್ನ ಉದ್ದೇಶವನ್ನು ಸಾಧಿಸಿಕೊಳ್ಳಲು ಯತ್ನಿಸುತ್ತಿದ್ದರೂ, ಇತರತ್ರ ಅವನಿಗೆ **ತಿಳಿಯದೆಯೇ** ಈ ಮಾರ್ಪಾಡುಗಳು ಅನೇಕ ಸಲ ನಡೆದಿರುತ್ತವೆ.

ಇಂಥ ಬದಲಾವಣೆಗಳಲ್ಲಿ, ಈ ಕೆಳಗಿನವುಗಳನ್ನು ನಾವು ಪ್ರಾಮುಖ್ಯವಾಗಿ ಗಮನಿಸಬಹುದು.

ಒಂದು — Prosthesis–**ಸ್ವರಪ್ರಾರಂಭ**–- ಅಂದರೆ ವ್ಯಂಜನಾದಿಯಾದ ಶಬ್ದಗಳ ಉಚ್ಚಾರ ಸೌಲಭ್ಯಕ್ಕಾಗಿ ಹಿಂದೆ ಸ್ವರಗಳನ್ನು ಯೋಜಿಸಿಕೊಳ್ಳುವ ಸ್ವಾಭಾವಿಕ ಪ್ರವೃತ್ತಿ. ಉದಾಹರಣೆಗೆ ಕನ್ನಡಕ್ಕೆ

ಇಂಗ್ಲಿಷ್ ಭಾಷೆಯ ಸಂಪರ್ಕ ಬಂದಂದಿನಿಂದ ಅಲ್ಲಿಯ ಅನೇಕ ವ್ಯಂಜನಾದಿಯಾದ ಶಬ್ದಗಳನ್ನು ಉಚ್ಚಾರ ಮಾಡುವುದು ನಮ್ಮ ಜನರಿಗೆ ತೊಂದರೆಯಾಗಿದೆ. ಇಂಥ ಕಠಿಣ ವ್ಯಂಜನಗಳ ಉಚ್ಚಾರದ ಸೌಲಭ್ಯಕ್ಕಾಗಿ ನಾವು ಅನೇಕ ಸಲ ಹಿಂದೊಂದು ಸ್ವರವನ್ನು ಯೋಜಿಸಿಕೊಳ್ಳುವುದುಂಟು. ಉದಾಹರಣೆಗೆ, ಇಂಗ್ಲಿಷ್‌ದ ಸ್ಕೂಲ್, ಸ್ಕ್ರೂ, ಹಾಸ್ಪಿಟಲ್—ಮೊದಲಾದುವನ್ನು ಉಚ್ಚರಿಸಲು ಕಠಿಣವಾಗಿ, ನಾವು ಇಸ್ಕೂಲ್, ಇಸ್ಕ್ರೂ, ಇಸ್ಪಿತಾಲ್—ಮೊದಲಾಗಿ ಮಾಡಿಕೊಳ್ಳುವುದುಂಟು. ತಮಿಳಿನಲ್ಲಿ 'ರ' ವರ್ಣದ ಉಚ್ಚಾರ ಸೌಲಭ್ಯಕ್ಕಾಗಿ, ಇರಾಮನ್, ಅರಶನ್, ಉಲೋಕಮ್ ಮೊದಲಾಗಿ ಮಾಡಿಕೊಳ್ಳುವಂತೆ.

ಎರಡನೆಯದಾಗಿ, Emphasis (ಅವಧಾರಣೆ)—ಹಲಕೆಲವು ಶಬ್ದಗಳಲ್ಲಿ ಅನಗತ್ಯವಾದ ಹೊಸ ಅಕ್ಷರಗಳನ್ನು ಸೇರಿಸಿ ಇಲ್ಲದ ಅವಧಾರಣೆ ಕೊಡುವದುಂಟು ಉದಾಹರಣೆಗೆ ಇಂಗ್ಲಿಷಿನಲ್ಲಿ Passenger ಮತ್ತು Messenger ಎಂಬ ಶಬ್ದಗಳಿವೆಯಷ್ಟೇ! ಇಲ್ಲಿ ಬರುವ 'ನ' ಅನಗತ್ಯವಾದ ಅವಧಾರಣೆ. ಯಾಕೆಂದರೆ, Passenger ಅಂದರೆ "one who passes"; Passage ಇದರ ಮೇಲಿಂದ Passager ಆಗಬೇಕೇ ವಿನಾ, PasseNger ಆಗುವ ಕಾರಣವಿಲ್ಲ. ಹಾಗೇ, Message, ಇದರ ಮೇಲಿಂದ Messagerವೇ ಹೊರತು MesseNger ಆಗುವ ಕಾರಣವಿಲ್ಲ. ಅದರಂತೆ ಇಂಗ್ಲಿಷದಲ್ಲಿರುವ Admiral ಶಬ್ದವನ್ನು ತೆಗೆದುಕೊಳ್ಳೋಣ. ಅದು ಪರ್ಶಿಯನ್ 'ಅಮೀರ್'ನಿಂದ ಬಂದುದು. ಪ್ರಾಚೀನ ಇಂಗ್ಲಿಷ ಸಾಹಿತ್ಯದಲ್ಲಿ Amiral ಎಂದು ಬರುತ್ತದೆ. ಆನಂತರ 'ಡ' ಉಚ್ಚಾರ ಸೇರಿಕೊಂಡಿತು. ಅಥವಾ, ನಮ್ಮ ಕನ್ನಡ ಶಬ್ದಗಳನ್ನೇ ತೆಗೆದು ಕೊಳ್ಳೋಣ. ಕನ್ನಡದ 'ದೊಡ್ಡಿಸ್ತನ' ಶಬ್ದ ಇಂಥ ಒಂದು ಉದಾಹರಣೆ. 'ದೊಡ್ಡ' ಎಂಬ ಗುಣವಚನಕ್ಕೆ ಭಾವವಾಚಕವಾದ 'ತನ' ಸೇರಿ,—ಪೆಣ್+ತನ=ಪೆಣ್ತನ ಆವಂತೆ,—ದೊಡ್ಡ+ತನ ಕೂಡಿ, ದೊಡ್ಡತನ ವಾಗಿರಬೇಕು. ಬೇಕಾದರೆ, 'ತೆ' ಸೇರಿ 'ದೊಡ್ಡಿತೆ' ಆಗಲಿ; ಈ 'ದೊಡ್ಡಿಸ್ತನ' ಎಲ್ಲಿಯದು?

"ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯ; **ದೊಡ್ಡತನ**ವೆನಗಿಲ್ಲವಯ್ಯ"

ಎಂದು ವಚನಗಳಲ್ಲಿ ಬರುತ್ತದೆ. ಆದ್ದರಿಂದ, ನಮ್ಮ "ದೊಡ್ಡಿಸ್ತನ" ಇಲ್ಲದ ಅವಧಾರಣೆ. ಇದರಂತೆಯೇ, 'ಯವಲ'ಗಳಲ್ಲಿ ಬರುವ ಅನುನಾಸಿಕವನ್ನು ಕೇಶಿರಾಜನ ಪ್ರಕಾರ ಸೇವಗೆ, ಸೇವೆ, ಭಾವಿ, ಅಲ್ಲಣಿಗೆ, ನೋಯ್, ಮೊದಲಾದ ಪ್ರಯೋಗಗಳಲ್ಲಿ ಒಪ್ಪಬಹುದಾದರೂ, ಸಂಸ್ಕೃತದ 'ಉಷ್ಟ್ರ' ಕನ್ನಡದ 'ಒಂಟೆ' ಯಾಗುವಲ್ಲಾಗಲೀ, ಸಂಸ್ಕೃತದ 'ಇಷ್ಟಿಕಾ' ಕನ್ನಡದ 'ಇಟ್ಟಂಗಿ'ಯಾಗುವಲ್ಲಾಗಲೀ ಇದೇ ಸಮರ್ಥನೆ ನಡೆಯದು. ಭಾಷೆಯಲ್ಲಿ ನಡೆಯುವ ಈ ಪ್ರಕ್ರಿಯೆಗೆ ನಾವು emphasis ಇಲ್ಲವೆ 'ಅವಧಾರಣೆ' ಎಂದು ಕರೆಯುತ್ತೇವೆ ಪಂಪನಲ್ಲಿ 'ಸುಟ್ಟುರೆಗಾಳಿ', 'ಸುಂಟರಗಾಳಿಯಾಗಿದ್ದರೂ, 'ಕುಟ್ಟನಿ' ಪದವು 'ಕುಂಟನಿ' ಯಾಗಿದ್ದರೂ, ಉಷ್ಟ್ರ, ಇಷ್ಟಿಕೆಗಳು ಮಾತ್ರ ಇನ್ನೂ 'ಒಟ್ಟೆ', 'ಇಟ್ಟಗೆ'ಗಳೇ ಆಗಿವೆ. ಉದಾ: ಪೇರ್ ಒಟ್ಟೆಯಾ ಮತ್ಸ್ಯನುಂ"; "ಇಟ್ಟಗೆ ಕಲ್ಮರನೆಂಬುದಿಲ್ಲ." ಇತ್ಯಾದಿ.

ಇದರಂತೆಯೇ ಭಾಷೆಯಲ್ಲಿ ನಡೆವ **ಮೂರನೆಯ** ಬದಲಾವಣೆಯೊಂದರೆ *Metathesis* ಇಲ್ಲವೆ **ಅಕ್ಷರಪಲ್ಲಟ.** ಇಂಥ ಶಬ್ದಗಳಲ್ಲಿ ಹಳಗನ್ನಡದ ರೂಪಗಳಿಗೂ ಇಂದಿನ ರೂಪಗಳಿಗೂ ತುಂಬಾ ವ್ಯತ್ಯಾಸ ಕಂಡುಬರುತ್ತದೆ. ೧೩ನೆಯ ಶತಮಾನದ ಕೇಶಿರಾಜನೇ ಮುಲರ್, ಅಲರ್,—ಮೊದಲಾದ ಶಬ್ದಗಳು ಅರಲ್, ಆಗುತ್ತವೆಂದೂ, 'ಮರಲ್' ಎಂಬುದಂತೂ 'ಮಳಲ್' 'ಮಣಲ್' ಎಂದು ಕೂಡ ಆಗುತ್ತದೆ ಯೆಂದೂ ತನ್ನ ಕಾಲದಲ್ಲೇ ಒಪ್ಪಿತವಾದ ಅಕ್ಷರಪಲ್ಲಟಗಳನ್ನು ಹೇಳಿದ್ದಾನೆ. ಕೇಶಿರಾಜನಕಿಂತ ಸು. ೨೦೦ ವರುಷ ಮೊದಲಿನ ನಾಗವರ್ಮನ ಕಾದಂಬರಿಯಲ್ಲಿ "ಸುರಿಯೆ ಕಚಭಾರಹಸ್ತದಿಂ ಅರಲ್ಗಳ್" ಎಂದೂ,

"ಕೆಂದಾವರೆ ಅಲರ್ಗಳ್" ಎಂದೂ ಎರಡೂ ರೂಪಗಳು ದೊರಕುತ್ತವೆ. ಇದರಂತೆ, ಅಹುದು 7 ಹೌದು ಎಂದೂ, ಎಹಗೆ 7 ಎಂಬುದು ಹೇಗೆ ಎಂದೂ, ಅಹಗೆ ಎಂಬುದು ಹಾಗೆ ಎಂದೂ ಆಗುತ್ತವೆ. 'ಅಲುಗಾ'ಡು 'ಧಾತುವು' 'ಅಗಳಾಡು' ಎಂದು ಆಗುತ್ತವೆ. ಎಱಂಕೆ 7 ರೆಕ್ಕೆಯಾಗುತ್ತದೆ. ಒಂದೊಂದು ಸಲ, ಈ ಅಕ್ಷರ ಪಲ್ಲಟವು ಅತಿಯಾಗಿ ಆದಾಗ ಮೂಲದ ವ್ಯುತ್ಪತ್ತಿಯನ್ನು ಕೂಡ ಗುರುತಿಸುವುದು ತೊಂದರೆಯ ಮಾತಾಗುತ್ತದೆ. ಉದಾಹರಣೆಗೆ, "ಇಷ್ಟಾಗಬೇಕೆಂದು ನನ್ನ **ಹಣೇಭಾರ** ಇತ್ತೆಂದು" ಸಾಮಾನ್ಯವಾಗಿ ಗ್ರಾಮ್ಯರು ಹೇಳುವುದನ್ನು ನಾವು ಅನೇಕ ಸಲ ಕೇಳಿದ್ದೇವೆ. ಇಲ್ಲಿ ಬರುವ 'ಹಣೇಭಾರವನ್ನು' ಯಾವುದೇ "ಭಾರವನ್ನೋ ಹಗುರನ್ನೋ" ಮಾಡಿ ಹೇಳುವ ಪ್ರವೃತ್ತಿ ಅಷ್ಟು ಅಸಂಭವನೀಯವೇನೂ ಅಲ್ಲ. ಆದರೆ, ನಿಜವಾಗಿ ಇಲ್ಲಿಯ ಶಬ್ದ, 'ಭಾರ' "ಬರೆಹ" ಎನ್ನುವುದರ ಅಕ್ಷರಪಲ್ಲಟವಾಗಿ ಬರೆಹ 7 ಬಹರ 7 ಭಾರ ಎಂದಾಯಿತು. ಹಣೆಬರೆಹ. ಲಲಾಟಲಿಖಿತ; ವಿಧಿಲಿಖಿತ. ವಿಜಾಪುರ ಪ್ರಾಂತದಲ್ಲಿಯ ಆಹರ್ 7 ಹಾರ; ಅಹನ್ 7 ಹಾನ ಈ ಮಾತನ್ನೇ ಹೇಳುತ್ತವೆ. ಅದರಂತೆ, "ಬ್ರಾಹ್ಮಣರ **ಫರಾಳದ** ಅಂಗಡಿ" ಇಲ್ಲಿಯ ಫರಾಳಕ್ಕೆ, ಫರ+ಆಳ —ಮೊದಲಾಗಿ ವ್ಯುತ್ಪತ್ತಿ ಸಿಗದು. ಇದು ನಿಜವಾಗಿ ಫಲ+ಆಹಾರ ಕೂಡಿ ಫಲಾಹಾರವಾದುದ್ದರ ಅಕ್ಷರಪಲ್ಲಟ. ಅಂಗಡಿಯಲ್ಲಿ ಬರೀ ದೋಸೆ ಭಜಿಗಳಿದ್ದರೂ ಅಡ್ಡಿ ಇಲ್ಲ; ಅದು ಫಲ ಆಹಾರದ ಅಂಗಡಿಯಾಗುತ್ತದೆ.— ಇನ್ನೂ ಒಂದು ಶಬ್ದ 'ಅಗಸ' ಎನ್ನುವುದು. ಅಗಸ ಎಂದರೆ ಮಡಿವಳ-ಮಲಿನವನ್ನು ತೊಳೆಯುವವ. ಆದರೆ ಈ ಶಬ್ದದ ಮೂಲರೂಪ 'ಅಸಗ' — ಎಂದಿತ್ತು. ಪಂಪನಲ್ಲಿ "ಅಸಗವೊಯ್ಲಿದೆ."

ಬಸವಣ್ಣನವರ ವಚನಗಳಲ್ಲಿ—

"ಊರ ಸೀರೆಗೆ **ಅಸಗ** ಬಡಿವಡೆವಂತೆ"

ಎಂದು ರೂಪ ಬರುತ್ತದೆ. 'ಪಾದರಸ' ವರ್ಣಪಲ್ಲಟವನ್ನು ಪಡೆದು 'ಪಾರದ'ವಾಯಿತು. 'ಕಾದಂಬರಿ'ಯಲ್ಲಿ

"ಕುಂಚಿಗೆಯಿಂದಮೆ' ಕರ್ಚಿ **ಪಾರದಂ** ತೊಡೆದರೊ ಪೇಳ್ ಎನಲ್—
ಕಣ್ಗೆ ಸೆದಿರ್ದುದು ರೂಪು ಕಾಂತೆಯಾ" (೩.೨೪)

ಎಂದಿದೆ.

ಇದರಂತೆಯೇ. ಮಾನವಸಹಜವಾದ **ಮಿತವ್ಯಯಾಸಕ್ತಿ.** ಇದರ ಮೂಲಕವಾಗಿ, ಪೊಸಂತಿಲ್, ಎಂಬುದು ಹೊಸ್ತಲವಾಗಿಯೂ, ಶ್ರೀನಿವಾಸ ಇದ್ದುದು, ಶೀನುವಾಗಿಯೂ, ನಾರಾಯಣ ನಾಣಿಯಾಗಿಯೂ, ಅವಿಧವಾನಪಮಿಯು ಐದಾನೋಮಿಯಾಗಿಯೂ ಪರಿಣಮಿಸುತ್ತವೆ. ಬಂದಿತು, ಹೋಯಿತು, ಮೊದಲಾದ ಕ್ರಿಯಾಪದ ರೂಪಗಳು ಕೂಡ ಮಾತಾಡುವ ಭಾಷೆಯಲ್ಲಿ 'ಬಂತು' 'ಹೋತು' ಮೊದಲಾಗಿ ಆಗುವುದು ಈ ಮಿತವ್ಯಯಾಸಕ್ತಿಯ ಮೂಲಕವಾಗಿಯೇ. ಸ್ವಲ್ಪೇ ಪರಿಶ್ರಮದ ಮೂಲಕ ಅಧಿಕ ಲಾಭವನ್ನು ಪಡೆಯ ಲಿಚ್ಛಿಸುವುದು ಮಾನವನ ಸ್ವಾಭಾವಿಕ ಗುಣವಾಗಿದೆ

ಇದರಂತೆ, ಒಂದು ಶಬ್ದದ ಸಾಮ್ಯದ ಮೇಲಿಂದ ಅದೇ ರೀತಿಯ ಬೇರೊಂದು ಶಬ್ದವನ್ನು ಸೃಷ್ಟಿಸಿ ಕೊಳ್ಳುವುದೂ ಸ್ವಭಾವಸಹಜವಾಗಿದೆ ಇದಕ್ಕೆ ಪಾರಿಭಾಷಿಕವಾಗಿ 'Analogy' ಇಲ್ಲವೆ "**ರೂಪ-ಸಾಮ್ಯ**" ಎಂದು ಕರೆಯುವುದುಂಟು. ಈ ಸಾಮ್ಯದ ಮೂಲಕವಾಗಿಯೇ, ಪೂರ್ವ ಇದರ ಗುಣವಚನವಾದ ಪೌರ್ವಾತ್ಯ ಇದರ ಮೇಲಿಂದ, ಪಶ್ಚಿಮದ, ಗುಣವಚನ ಪಾಶ್ಚಾತ್ಯ ಸಿದ್ಧಿಗೊಂಡಿತು ನಿಜವಾಗಿ ಪಶ್ಚಿಮ ಇದರ ಮೇಲಿಂದ ಪಾಶ್ಚಿಮಾತ್ಯ ಆಗಬಹುದೇ ಹೊರತು ಪಾಶ್ಚಾತ್ಯ ಆಗಲಾರದು ಅದರಂತೆ, ವನಸ್ಪತಿ, ದಿವಸ್ಪತಿ; ಹೊದ್ದು, ಕದ್ದು ಇತ್ಯಾದಿ ರೂಪಗಳನ್ನು ನೋಡಬಹುದು. ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೆಯ ಶತಮಾನದಲ್ಲಾದ ವೀರಶೈವ ಕ್ರಾಂತಿಯ ಮೂಲಕವಾಗಿ ಇಂಥ ಅನೇಕ ಹೊಸ ರೂಪಗಳು ಭಾಷೆಯಲ್ಲಿ ಬಂದು ಸೇರಿದುವು.

ಇಂದಿಗೂ, ವೀರಶೈವರ ಭಾಷೆಯಲ್ಲಿ, 'ನಿಲ್' ಧಾತುವಿನ ಭೂತಕೃದ್ವಾಚಕದ "ನಿಂತು" ರೂಪದ ಸಾಮ್ಯದ ಮೇಲಿಂದ ಮಾಡಿಕೊಂಡ, 'ಕೂರ್' ಧಾತುವಿನ "ಕುಂತು" ಪ್ರಯೋಗವನ್ನು ಕಾಣಬಹುದು. ನಿಲ್-ನಿಂತು ಆಗಬಹುದಾದರೆ, ರೂಪಸಾದೃಶ್ಯದ ಮೇಲಿಂದ ಕೂರ್-ಕುಂತು ರೂಪವು ಅವಶ್ಯವಾಗಿ ಆಗಬಹುದು. **ಭಾಷಾಶಾಸ್ತ್ರದ** ದೃಷ್ಟಿಯಿಂದ ಈ ಪ್ರಯೋಗಕ್ಕೆ ಯಾವ 'ಶಿಷ್ಟರೂ' ಆಕ್ಷೇಪವೆತ್ತಲಾರರು. ಅಷ್ಟೇ ಅಲ್ಲ; ವೀರಶೈವ ಕ್ರಾಂತಿಯ ಕಾಲಕ್ಕೆ ಈ ರೂಪ-ಸಾಮ್ಯ-ಪ್ರಯೋಗಗಳು ಇಲ್ಲಿಗೇ ನಿಲ್ಲಲಿಲ್ಲ. ಕನ್ನಡದಲ್ಲಿ 'ಬಾ-ಬರ್' ಧಾತುವಿನ ಬಹುಮಾನಾರ್ಥದ "ಬನ್ನಿ" ರೂಪವಿದೆಯಷ್ಟೇ; ಇದರ ಸಾಮ್ಯದ ಮೇಲಿಂದ ಹೋಗು ಅರ್ಥದಲ್ಲಿ "ಸನ್ನಿ" ಎನ್ನುವ ಪ್ರಯೋಗ ದೊರಕುತ್ತದೆ. ಬಸವಣ್ಣನವರ ವಚನಗಳಲ್ಲಿ—

"ಬಡಭಕ್ತರು ಬಂದರೆ ಎಡೆ ಇಲ್ಲವಯ್ಯಾ — ಅತ್ತ **ಸನ್ನಿ** ಎಂಬರು"—

ಎನ್ನುವ ಪ್ರಯೋಗವಿದೆ! ಇಂಥ ರೂಪ ಸಾದೃಶ್ಯಗಳು ಭಾಷೆಯಲ್ಲಿ ಇಂದಿಗೂ ನಡೆಯುತ್ತಿರುತ್ತವೆ. ಹಾಗೇ ಐತಿ, ಇದಾವೆ, ಮೊದಲಾದ ಪ್ರಯೋಗಗಳನ್ನೂ ನೋಡಬಹುದು. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ 'ಇದಾನೆ' ಅರ್ಥದಲ್ಲಿ 'ಐವನೆ' ಪ್ರಯೋಗವಿದೆ "ಹರಿಶ್ಚಂದ್ರ ಬಂದು ನಮ್ಮಯ ತಪೋವನದೊಳೈದನೆ" ಇದರಿಂದ ನಪುಂಸಕದ 'ಐತಿ' ದೂರದ ದಾರಿಯೇನೂ ಅಲ್ಲ. 'ಸಹಿಸು' 'ವಹಿಸು' ಅರ್ಥದಲ್ಲಿಯ 'ನಿಸ್ತರಿಸು' ಪದವನ್ನು ಗ್ರಾಮ್ಯರು 'ನಿತ್ತರಿಸು' ಎಂದು ಪ್ರಯೋಗಿಸುವರಷ್ಟೆ-? ಈ ಪ್ರಯೋಗವು ಪಂಪಾದಿಗಳಲ್ಲಿ ಕೂಡ ಇದೆ -'ನೊಂದು **ನಿತ್ತರಿಸದೆ** ಪಾರ್ವನೊಳ್ ಕಲಹವಾಗದು 'ಅವರಂ ಕಾದಿ ನಿತ್ತರಿಸುವೆಂ' ಇತ್ಯಾದಿ. ಇಂದು ಗ್ರಾಮ್ಯವೆಂದು ಪರಿತ್ಯಕ್ತವಾಗಿ, 'ಮೇಲು' ಎಂಬ ಪದಕ್ಕೆ ಆಸ್ಪದ ಮಾಡಿಕೊಟ್ಟ 'ಮ್ಯಾಗ' ಶಬ್ದವು ಒಂದು ಕಾಲಕ್ಕೆ 'ಮೇಗು' ಎಂಬರ್ಥದಲ್ಲಿ ಪ್ರಯುಕ್ತವಾಗುತ್ತಿದ್ದಿತು. ವೊಡ್ಡಾರಾಧಣದಲ್ಲಿ ಹಾಗೆಯೇ ಪ್ರಯೋಗವಿದೆ. ೧೩ನೆಯ ಶತಕದ ಜನ್ನನಲ್ಲಿ— "**ಮೇಗಂ** ಬಗೆವೊಡೆ ವಧೆಹಿತವಾಗದು" ಎಂದು ಬರುತ್ತದೆ. ಹೀಗಾಗಿ, ಭಾಷಾಶಾಸ್ತ್ರದ ಪ್ರಪಂಚದಲ್ಲಿ "ಶಿಷ್ಟತೆಗೆ" ಏನೂ ಎಡೆಯಿಲ್ಲ. ಈ ಬಗ್ಗೆ ಒಬ್ಬ ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರು ವ್ಯಕ್ತಪಡಿಸಿದ ಅಭಿಪ್ರಾಯಗಳು ಮನನೀಯವಾಗಿವೆ—

> "The speaker of the 'standard' language is frequently tempted to consider himself as the dialect speaker's superior, unless he has already acquired some elementary knowledge of the value of the science of language, or has sufficient common-sense to be desirous of learning to understand that which for the moment is beyond him."*

ಇದರಂತೆ, ಆರನೆಯ ಪ್ರಕ್ರಿಯೆಯೆಂದರೆ, **ದ್ವಿರುಕ್ತಿ ಇಲ್ಲವೆ ಪುನರುಕ್ತಿ.** ಮೂಲದ ಒಂದು ಶಬ್ದವಿದ್ದು, ಕಾಲಕ್ರಮೇಣ ಅದರ ಅರ್ಥವು ಅಸ್ಪಷ್ಟವಾದಂತೆ ಕಂಡಾಗ, ಅದೇ ಅರ್ಥದ ಅನ್ಯಭಾಷೆಯ ಬೇರೊಂದು ಶಬ್ದವನ್ನು ಸೇರಿಸಿ ಆ ನಷ್ಟದ ಪರಿಹಾರವನ್ನು ಕಲ್ಪಿಸುವುದುಂಟು. ಇದಕ್ಕೆ ಇಂಗ್ಲಿಷಿನಲ್ಲಿ Tautology (ದ್ವಿರುಕ್ತಿ)ಯೆಂದು ಕರೆಯುವುದುಂಟು. ವದ್ದೆ ಹಸಿಯೇ ಇದ್ದಾಗ, ಹಸಿ ವದ್ದೆ ಎಂದು ಹೇಳುವ ಅವಶ್ಯಕತೆ ಇಲ್ಲದಿದ್ದರೂ, ಈ ಶಬ್ದಗಳ ಜೋಡಣೆಯೆಲ್ಲ ಆ ವರ್ಗಕ್ಕೇ ಸೇರಿದುವು. ಈ ರೀತಿ ಮೂಲದಲ್ಲಿ ಅಸ್ಪಷ್ಟವಾದ ಶಬ್ದಗಳು ಕನ್ನಡವೇ ಆಗಿರಬಹುದು; ಸಂಸ್ಕೃತವಾಗಿರಬಹುದು; ಅಥವಾ ಇಂಗ್ಲಿಷ್ ಕೂಡ ಆಗಿರಬಹುದು. ಎಷ್ಟೋ ಸಲ ಇಂಥ ದ್ವಿರುಕ್ತಿಯಲ್ಲಿ ಅಜ್ಞತೆಯನ್ನು ಕೂಡ ಕಾಣಬಹುದು. ೯ನೆಯ ಶತಮಾನದ

* H. B L. P. 202.

ನೃಪತುಂಗನ ಪ್ರಕಾರ ಇಂಥ ಪ್ರಯೋಗಗಳು ಕಾವ್ಯದೋಷವಾಗಿದ್ದರೂ, ಭಾಷೆಯ ಬೆಳವಣಿಗೆಯ ಒಂದು ಆವಶ್ಯಕ ಭಾಗವಾಗಿವೆ. ಯಾಕಂದರೆ, ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ಪುನರುಕ್ತದೋಷವೆಂದರೆ– "ಪುನರುಕ್ತಮೆಂದಕ್ಕುಂ, ನೆನೆಯದೆ ಪೂರ್ವೋದಿತಾರ್ಥ ಪದಪದ್ಧತಿಗೆ **ಒಂದಿನಿಸುಂ ವಿಶೇಷವಿಲ್ಲದೆ, ಜನಯಿಸಿದ ಪದಾರ್ಥಮ್**" ಎಂದು ಹೇಳಿ, ಅದರ ದೃಷ್ಟಾಂತವಾಗಿ, "ತ್ರಿದಶ ಸುರಲೋಕಾಸ್ಪದಮಂ ಪೆಜಗುಂ **ಮನುಷ್ಯ–ಮನುಜಂ**", "ನಿನ್ನ **ಪದಚರಣ ಯುಗದ್ವಯಮಂ**" ಮೊದಲಾದುವನ್ನು ಹೇಳುತ್ತಾನೆ. ಆದರೆ ಕನ್ನಡ ಕೋಶವನ್ನು ಕಂಡಾಗ ಇಂಥ ಪ್ರಯೋಗಗಳು ಎಷ್ಟಿಲ್ಲ!

ಅಥವಾ ಸಂಸ್ಕೃತ ಕೋಶವನ್ನೇ ತೆಗೆದುಕೊಳ್ಳೋಣ. ಸಂಸ್ಕೃತ ಕೋಶದಲ್ಲಿ—'ಮಲಯ–ಪರ್ವತ' 'ಮಲಯ ಗಿರಿ' ಮೊದಲಾಗಿ ಪ್ರಯೋಗಗಳಿದ್ದುದನ್ನು ನಾವು ನೋಡಬಹುದು. ಇದರಲ್ಲಿಯ ಮಲಯ ಎಂದರೂ ಪರ್ವತವೇ; ಪರ್ವತವೆಂದರಂತೂ ಪರ್ವತವೇ. ಆದ್ದರಿಂದ ಆ ಪ್ರಯೋಗದ ರೂಪ ಪರ್ವತ–ಪರ್ವತವೆಂದಾಯ್ತು. ಮೇಲಿನ ಪ್ರಯೋಗದಲ್ಲಿ ಬರುವ 'ಮಲಯ' ಶಬ್ದವು ದ್ರಾವಿಡದಿಂದ ಸಂಸ್ಕೃತಕ್ಕೆ ಹೋದ ಶಬ್ದವೆಂದು ಪಂಡಿತರ ಅಭಿಪ್ರಾಯ. ದ್ರಾವಿಡದಲ್ಲಿ 'ಮಲಯ' 'ಮಲೆ'—ಎಂದರೆ ತಪ್ಪಲು ಪ್ರದೇಶ. ಮಲೆ–ಬಾರ್–ಮಲೆ–ನಾಡು ಇತ್ಯಾದಿ. ಆರ್ಯರಿಗೆ ದ್ರಾವಿಡರ ಸಂಪರ್ಕವು ಬಂದ ಕೆಲಕಾಲವಾದ ಮೇಲೆ 'ಮಲೆ' ಶಬ್ದದ ತಪ್ಪಲುಪ್ರದೇಶ ಎನ್ನುವ ಸಾಮಾನ್ಯಾರ್ಥವು ನಷ್ಟವಾಗಿ, ಪರ್ವತ ಎನ್ನುವ ಪರಿಹಾರ ಕೂಡಿಕೊಂಡಿತು. ಈ ಬಗ್ಗೆ ಶ್ರೀ. ಬಿ. ಸಿ. ಮುಜುಮುದಾರ ಅವರು ತಮ್ಮ History of Bengali Languageದಲ್ಲಿ ಹೇಳುವುದೇನಂದರೆ,—

> "Very likely in the third Century B. C. when the Aryans after some acquaintance with the people of the South confounded the general name for a mountain. with the name of a particular mountain, a ಮಲಯಗಿರಿ (tautology) was made"

ಇದರಂತೆಯೇ, ಸಂಸ್ಕೃತದ ಸಹ್ಯ–ಪರ್ವತ.

ಕನ್ನಡದ 'ಅವಳಿ ಜವಳಿ' ಶಬ್ದವೂ ಕೂಡ ಈ ರೀತಿ ತೀರ ತಲೆಮರೆಸಿಕೊಂಡು ಅವಿತು ಕೂತ ಇನ್ನೊಂದು ಶಬ್ದ. ಇದರಲ್ಲಿಯೂ ಒಂದು ಶುದ್ಧ ಕನ್ನಡ, ಮತ್ತು –ಅದು ಅರ್ಥವಾಗದ ಹಾಗೆ ಆದಾಗ–ಅದೇ ಅರ್ಥದ ಒಂದು ಸಂಸ್ಕೃತ ನುಡಿಯನ್ನು ಕೂಡಿಕೊಂಡು–ಆದ ಕೂಡು–ನುಡಿ. ಇದೇ ಮರಾಠಿಯಲ್ಲಿ 'ಆವಳೀ ಜಾವಳೀ' ಎಂದು ಆಯಿತು. ಇಲ್ಲಿಯ 'ಅವಳಿ' ಎಂಬ ಶುದ್ಧ ಕನ್ನಡ ಪದದ ಅರ್ಥವೂ 'ಜೋಡೀ'; 'ಜವಳಿ'ಯ ಅರ್ಥವೂ ಜೋಡೀ. ಈ ಬಗ್ಗೆ ಪ್ರೊ. ಕೃ. ಪಾ. ಕುಲಕರ್ಣಿ ಅವರು ಬರೆಯುವದೇನಂದರೆ:— "ಆವಳ comes from Kannada ಆವಳೀ=ಜೋಡೀ. In this way, it is an Arya Dravidian echo-word."*

ಆದರೆ, ಈ ಪ್ರಯೋಗವು ಸಂಸ್ಕೃತಕ್ಕಷ್ಟೇ ನಿಲ್ಲಲಿಲ್ಲ; ಸಂಸ್ಕೃತ ಕನ್ನಡ ಕೂಡಿದಾಗಲೂ ನಡೆಯಿತು. ಉದಾ:— ಚಾತುರ್ಮಾಸ್ಯ–ನಾಲ್ಕು ತಿಂಗಳು; ಗೋಮಯ–ಸೆಗಣಿ; ಇತ್ಯಾದಿ.

ಹಲವು ಸಲ ಮೊದಲಪದ ಪ್ರಾಕೃತವೂ ಎರಡನೆಯ ಪದ ಕನ್ನಡವೂ ಆದುದುಂಟು ಉದಾ: ಛಪ್ಪನ್ನೈವತ್ತಾರು; ಖೇಳ್ ಆಡು; ಇಡಲಿಂಬು; ಇತ್ಯಾದಿ.

ಹಲವು ಸಲ ಮೊದಲ ಶಬ್ದ ಕನ್ನಡವಾದಾಗ್ಯೂ, ಅದರ ಅರ್ಥವೇ ಅಸ್ಪಷ್ಟವಾಗಿ ಸಂಸ್ಕೃತದಿಂದ ಪರಿಹಾರ ದೊರೆಯುವುದುಂಟು. ಉದಾ: ಕೂಡಲ–ಸಂಗಮ; ಆಳುಮನುಷ್ಯ –ಇತ್ಯಾದಿ.

---

* Relationship of Some Marathi & Kanarese words.

ಇನ್ನೂ ಕೆಲವು ಸಲ ಮೂಲದ ಅರ್ಥವು ಅಸ್ಪಷ್ಟವಾಗಿ ಮತ್ತೆ ಹೇಗೋ ಪರಿಹಾರವೊದಗುತ್ತದೆ. ಉದಾಹರಣೆಗೆ - **ಹಳದೀ ಪೀತಾಂಬರ.** ನಿಜವಾಗಿ ಪೀತಾಂಬರವೆಂದರೇ – ಪೀತ ಅಂಬರ=ಹಳದಿಯಾದ ವಸ್ತ್ರ. ಆದ್ದರಿಂದ ಹಳದಿ—ಹಳದಿಯಾದ ವಸ್ತ್ರ ಎಂದರೆ ಅನಾವಶ್ಯಕ ದ್ವಿರುಕ್ತಿ. ಅಷ್ಟೇ ಅಲ್ಲ; ಕೆಂಪು ಪೀತಾಂಬರ; ಹಸಿರು-ಪೀತಾಂಬರ - ಎಂಬುದು ಆಂತರ್-ವಿರೋಧ ಇದರಂತೆ, **ಎಳ್ಳೆಣ್ಣೆ;** ಎಣ್ಣೆ ಎಂದರೇ ಎಳ್+ನೆಯ್=ಎಳ್ಳ-ಎಳ್ಳಿನ ಜಿಡ್ಡು; ಆದ್ದರಿಂದ ಎಳ್ಳಿನ ಎಳ್ಳಿನ ಜಿಡ್ಡು ಎನ್ನುವುದು ದ್ವಿರುಕ್ತಿ. ಆದ್ದರಿಂದ ಅಗಸಿ ಎಣ್ಣೆ; ಸೇಂಗಾದ ಎಣ್ಣೆ ಎನ್ನುವುದು ಆಂತರ್ ವಿರೋಧ. ಅಥವಾ, ತಂಗಳೂಟ ತೆಗೆದುಕೊಳ್ಳೋಣ. ಇಲ್ಲಿಯೂ ತಂಗಳ ಅಂದರೇ ಆರಿದ ಊಟ—ತಂಪಾದ ಊಟ. ತಣ್+ಕೂಳ್=ತಂಗೂಳ್. ಈ ತಂಗುಳದ ಮೂಲದ ಅರ್ಥ ತಿರೋಹಿತವಾದಾಗ ಊಟ ಸೇರಿಕೊಂಡಿತು ಅಥವಾ ಹಣ್ಣು-ಹಂಪಲ; ಹಂಪಲ ಎನ್ನುವುದೇ ಒಂದು ಸಮಾಸ-ಬಹುಶಃ ಅರಿಸಮಾಸ ಹಣ್ಣು+ಫಲ=ಹಣ್‌ಫಲ=ಹಂಪಲ. ಆಮೇಲೆ, ಹಣ್ಣು—ಹಂಪಲ ಪ್ರಾರಂಭವಾಯಿತು. (ಪ್ರೊ **ಜೂಲ್ಸ ಬ್ಲಾಕ್** ಅವರ ಪ್ರಕಾರ ಸಂಸ್ಕೃತದ 'ಫಲ' ಶಬ್ದವೂ ಕೂಡ ದ್ರಾವಿಡವೇ. ಯಾಕಂದರೆ, ಅವರ ಪ್ರಕಾರ, ಕನ್ನಡದ ಮೆಣಸು 7 ಮೆಳಸಾದಂತೆ; ಗೆಳೆಯ 7 ಗೆಣೆಯ ಆದಂತೆ; 'ಪಣ್' ಪದವೇ 'ಪಲ'ವಾಗಿರಬೇಕು.)

> "Is the Tamil word ಪಲವು "ripe fruit" copied from or the original of Vedic 'ಫಲ'?.... If (a) connection were proved, it would be most probable that ಫಲ was borrowed from Dravidian."*

ಇದರಂತೆಯೇ, ಈ ಕೆಳಗಿನ ಪ್ರಯೋಗಗಳನ್ನೂ ಇದೇ ದ್ವಿರುಕ್ತಿಯ ವರ್ಗಕ್ಕೇ ಸೇರಿಸಬಹುದು :— ಉದಾ: ಕನ್ನಡ–ನಾಡು; ಆಕಳ–ಗೋಮೂತ್ರ; ರೋಗ–ರುಜಿನ, ನಡು–ಮಧ್ಯ; ಹಿಂದುಸ್ಥಾನ–ದೇಶ; ಕಲ್ಲ ಪಾಷಾಣ; ಕುಡು–ವೊಕ್ಕಲಿಗ; ಕಾಗದ-ಪತ್ರ, ಹೆಣ್ಣು-ಕೂಸು; ಬಾಲ್ಬುಡಿಗಿ – ವಸ್ತ್ರ; ವಸ್ತ್ರ-ಒಡವಿ; ಹೊತಗೊಳ್ಳುವ ಮೇಲ್ದಿ; ಇತ್ಯಾದಿ. ಕನ್ನಡದಲ್ಲಿ ನಿರರ್ಥಕವಾದ ನಿಷ್ಪ್ರಯೋಜಕವಾದ ಮಾತಿಗೆ "ಗೊಡ್ಡು ಹರಟೆ" ಎನ್ನುತ್ತೇವಷ್ಟೇ; ಇಲ್ಲಿ ಬರುವ 'ಗೊಡ್ಡು ಹರಟೆ' ಕೂಡ ದ್ವಿರುಕ್ತಿ. ಯಾಕಂದರೆ, ಗೊಡ್ಡಿ, ಅಥವಾ ಗೊಡ್ಡು ಎಂದರೇ "ಹರಟೆ" ಎಂದು ಅರ್ಥವಾಗುತ್ತಿತ್ತೆಂದು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನೋಡುತ್ತೇವೆ. ಸಂಸ್ಕೃತದ 'ಗೋಷ್ಠಿ'—(ಮಾತು), ಪ್ರಾಕೃತ 'ಗೊಟ್ಟಿ' ಆಯಿತು. ಅದೇ ಕನ್ನಡದಲ್ಲಿ ಗೊಡ್ಡು ಆಗಿರಬೇಕು. ಪಂಪಭಾರತದಲ್ಲಿ 'ಗೊಡ್ಡು' ಅಂದರೆ ಹರಟೆ ಎನ್ನುವ ಅರ್ಥದಲ್ಲಿ ಬರುತ್ತದೆ. ಉದಾಹರಣೆಗೆ ಪಂಪಭಾರತದ ೪.೮೦ರಲ್ಲಿ ಮಿಱುಗೊಡ್ಡ ಅಂದರೆ ಕೊಲ್ಲುವಂಥ ಹರಟೆ (fatal talk) ಎನ್ನುವ ಪ್ರಯೋಗ ಬರುತ್ತದೆ. ಹಾಗೇ, **ಒಣಗಿ**–ತಾರಾಗುವುದೂ ದ್ವಿರುಕ್ತಿ. ತಾಱು ಎಂದರೇ ಒಣಗು. ಪಂಪಭಾರತದಲ್ಲಿ, "**ತಾಱಿದ** ಪೇರಾನೆಯೊಡಲ್ಗಳ್" ಎಂದು ಬರುತ್ತದೆ.—೧೧.೬೭.

ಹಲಕೆಲವು ಸಲ, ಇಂಥ ಪ್ರಯೋಗಗಳಲ್ಲಿ ಅರೇಬಿಕ್—ಪರ್ಶಿಯನ್ನುಗಳೂ ಸೇರಿದ್ದುಂಟು.— ಉದಾ: ಕಾಗದ-ಪತ್ರ; ಫತ್ತರಾ-ಪೋಡ (ಫಡಿ)—ಇತ್ಯಾದಿ.

ಈ ದ್ವಿರುಕ್ತಿಯಲ್ಲಿ ಕೆಲವು ಸಲ—ಇಂಗ್ಲಿಷೂ ಇಲ್ಲದಿಲ್ಲ. ಉದಾ : ಗೇಟ್–ಬಾಗಿಲ; ಪಾಕೀಟ–ಕಿಶೆ; ಇತ್ಯಾದಿ.

ಕೆಲವು ಸಲ, ಇಂಥ ದ್ವಿರುಕ್ತಿಯಲ್ಲಿ ಹೆಚ್ಚಿನ ಅವಧಾರಣೆಯನ್ನೂ ಕಾಣಬಹುದು. ಉದಾ: ಇಕ್ಕರಿಸು=ಇಕ್ಕು+ಇರಿಸು; ಕುಕ್ಕರಿಸು; ಇತ್ಯಾದಿ.

---

* P. A and P. D., 54.

ಏಳನೆಯದಾಗಿ, ಮೇಲೆ ವಿವರಿಸಿದ ರೂಪ-ಸಾದೃಶ್ಯದ ಹಾಗೆಯೇ, ಭಾಷೆಯ ಬೆಳವಣಿಗೆಯಲ್ಲಿ ಇನ್ನೊಂದು ಪ್ರಕ್ರಿಯೆಯು ನಡೆಯುತ್ತಿರುತ್ತದೆ. ಅದೆಂದರೆ,--ಅನ್ಯಭಾಷೆಯ ಯಾವುದಾದರೊಂದು ಶಬ್ದವನ್ನು ಕೇಳಿದಾಗ, ಅಸ್ಪಷ್ಟ ಕೇಳುವಿಕೆಯ ಮೂಲಕವೋ ಅಥವಾ ಅದಕ್ಕೆ ಸಮೀಪವಾಗಿರುವ ಅಂಥ ಅರ್ಥವನ್ನೇ ಅಭಿವ್ಯಕ್ತಿಗೊಳಿಸುವ ಮನಸ್ಸಿನ ವಿಚಾರ-ಸಾಹಚರ್ಯದಿಂದಲೋ ಹೊಸ ರೂಪಗಳು ಹುಟ್ಟಿಕೊಳ್ಳುತ್ತಿರುತ್ತವೆ. ಇದಕ್ಕೆ **False association 'ತಪ್ಪು ಸಾಹಚರ್ಯ'**-ಎಂದು ಕರೆಯಬಹುದು. ಉದಾಹರಣೆಗೆ ಅಸ್ಪಷ್ಟ ಕೇಳುವಿಕೆಯ ಉದಾಹರಣೆಗಾಗಿ—ಜನ್ಮ 7 ಜಲ್ಮ; ನೋಟೀಸು 7 ಲೋಟೀಸು; ಸರೋಜಿನಿ ನಾಯಡು 7 ಸರೋಜಿನಿ ಲಾಯಡು—ಮೊದಲಾದವುಗಳಲ್ಲಿ ಆಗುವ ನ-ಲ ವ್ಯತ್ಯಾಸವನ್ನು ಗಮನಿಸಬಹುದು. ಇದು ನಾಲಗೆಯ ದೋಷವೂ ಆಗಿರಬಹುದು. ಅಂತಲೇ ಏನೋ, ವೈಯಾಕರಣಿಗಳು ಕೂಡ ನ-ಲ ವ್ಯತ್ಯಾಸವನ್ನು ಒಪ್ಪಬೇಕಾಗಿ ಬಂತು. ಇಂಗ್ಲಿಷದಲ್ಲಿ 'Sovereign'—ಸಾರ್ವಭೌಮ, 'ಆಳುವ'-ಎನ್ನುವ ಶಬ್ದವಿದೆಯಷ್ಟೇ! ಅದರ ಮೂಲರೂಪವು **'Sovran'** ಎಂದು ಇದ್ದಿತು. ಮಿಲ್ಟನ್ ಕವಿಯಲ್ಲೂ ಕೂಡ, "Since, He who now is sovran can dispose" ಎಂದಿದೆ. † ಈ ಇಟ್ಯಾಲಿಯನ್ ಶಬ್ದವಾದ 'Sovran' "ಸಾಹಚರ್ಯದಲ್ಲಿ" "reign" 'ಆಳು' ಎಂಬುದಕ್ಕೆ ಅನ್ವಯಿಸಿ "Sovereign" ಎಂದಾಯಿತು. ಆದರೆ, ನಿಜವಾಗಿ ಅಲ್ಲಿ "reign" ಆವಶ್ಯಕವಿಲ್ಲ.

ಆದರೆ, ಮೇಲಿನ ಅಭಿಪ್ರಾಯದಲ್ಲಿಯ ಎರಡನೆಯ ಭಾಗ ಹೆಚ್ಚು ಮಹತ್ವದ್ದು. ಈ ಸಂದರ್ಭಗಳಲ್ಲಿ, ಮೂಲದ ಶಬ್ದದ ಸ್ಥೂಲ ಭಾವಕ್ಕೆ ಸರಿಹೋಗುವ ಯಾವುದೋ ಒಂದು ಸಾಹಚರ್ಯದ ಮೂಲಕ ಹೊಸ ಶಬ್ದವನ್ನು ಹೇಗೋ ಉಚ್ಚರಿಸುತ್ತೇವೆ. ಉದಾಹರಣೆಯಿಂದ ಅಭಿಪ್ರಾಯವನ್ನು ಸ್ಪಷ್ಟವಾಡಬಹುದು ಕನ್ನಡದಲ್ಲಿ ಮರೆ ಧಾತುವಿಗೆ – ಆ ಸ್ವಭಾವವುಳ್ಳ ಎನ್ನುವ ಅರ್ಥದಲ್ಲಿ 'ಗುಳಿ' ತದ್ಧಿತ ಪ್ರತ್ಯಯ ಸೇರಿದಾಗ —'ಮರಗುಳಿ'—ಎನ್ನುವ ಶಬ್ದ ಸಿದ್ಧವಾಗುತ್ತದೆ. ಆದರೆ ಈ ಶಬ್ದದ ಉಚ್ಚಾರವನ್ನು ಸಾಮಾನ್ಯವಾಗಿ ನಾವು 'ಮರಗುಳಿ' ಎಂದು ಕೇಳದೆ, ಮರ**ಗೂಳಿ**—ಎಂದು ಕೇಳುತ್ತೇವೆ. ಇದಕ್ಕೆ ಕಾರಣ, ತನ್ನ ಸೊಕ್ಕಿನಲ್ಲಿಯೇ 'ಗೂಳಿ' ಇತರರನ್ನು ಮರೆಯುತ್ತದೆ, ಕಡೆಗಣಿಸುತ್ತದೆ ಎನ್ನುವ ಅಸ್ಪಷ್ಟವಿಚಾರವು ಹಿನ್ನೆಲೆಯಾಗಿ ನಿಂತಿರಲೂ ಬಹುದು. ಆದರೆ, ಅದೇ ಗುಳಿ ಪ್ರತ್ಯಯವುಳ್ಳ ಇತರ ಶಬ್ದಗಳನ್ನು ಸರಿಯಾಗಿ ಉಚ್ಚರಿಸುತ್ತೇವೆ. "ಲಂಚಗೂಳಿ" ಎನ್ನುವ ಶಬ್ದವನ್ನೂ ಹಾಗೇ ಹೇಳಬಹುದು. ಇದರಂತೆ 'ಎಳೆತಟ' ಪದವು 'ಎಳೆದಾಟ' ವಾಗುತ್ತದೆ. ಅಥವಾ ಅದೂ ಹೋಗಲಿ; ಇಲೆಕ್ಟ್ರಿಕ್ ತಂತಿ ಹಿಡಿದರೆ ಮನುಷ್ಯ ಸಾಯುತ್ತಾನೆ ಎಂಬುದು ಗೊತ್ತಿದ್ದ ಮಾತು. ಇದಕ್ಕೆ ಇಂಗ್ಲಿಷ್‌ದಲ್ಲಿ "ಇಲೆಕ್ಟ್ರಿಕ್ ಶಾಕ್" ಎಂದೆವು. ಆ ಶಾಕೇ ಸಾಯುವ ಶಾಪವಾದದ್ದರಿಂದ—ಕನ್ನಡದಲ್ಲಿ ಶ್ರಾಪವಾಯಿತು. ಸಾಹೇಬರ ಇಲೆಕ್ಟ್ರಿಕ್—ಇಲೆಕಟರ್ ಆಯಿತು. ಹೀಗಾಗಿ ಆ ಸಮಾಸಪದವು "ಇಲಿಕಟರ ಶ್ರಾಪವಾಯಿತು." ಕಲಿಕಟರ ಶ್ರಾಪವೆಂದರೇನು ಸಾಮಾನ್ಯವೇ? .. ಅಥವಾ ಕಾಶಿ ರಾಮೇಶ್ವರದ ದೇವರ ಹೆಸರಿನಲ್ಲಿಯಂತೆಯೇನೋ ಬರಕೊಡುವ ಹಣದ "ರಾಮೇಶ್ವರಿ ಲೋಟ" ಇದೆಯಲ್ಲ! ಅದು "Promisory Note" ದ ಕನ್ನಡ ರೂಪ! ಅಥವಾ ಜಡ್ಡಾದಾಗಲು ನೋಡಲು ಬಂದ 'ನರ್ಸು' (nurse), ಕಮಲಿ. ಭೀಮಿಯರ ಹಾಗೆ "ನರಶಿ" ಆದಳು. ಅವನ ಗಾಡಿ, ಇವನ ಗಾಡಿ, ಇದ್ದಹಾಗೆ "Local ಗಾಡಿ" —ಲೋಕ್ಯಾನ ಗಾಡಿ- ಆಯಿತು. ಕಾಶ್ಮೀರದಿಂದ ಬಂದು, ಹೊಯ್ಸಳರ ಆಧಿಪತ್ಯದಲ್ಲಿ ಅರಮನೆಗಳ ಮೇಲ್ವಿಚಾರಕರಾಗಿ ಸೇರಿದ ಸಹವಾಸಿ–ಸಾವಾಸಿ–ಗಳು ನಮ್ಮ ಬ್ರಾಹ್ಮಣರಲ್ಲಿ "**ಸವ್ವಾಶೇರು**" ಆದರು. ಇಲ್ಲಿಯ ಬ್ರಾಹ್ಮಣರಿಗೆ ಅವರು ಸೇರಿಗೆ ಸವ್ವಾಶೇರೋ ಏನೋ! ಇಂಗ್ಲಿಷು, ಸಂಸ್ಕೃತವಷ್ಟೇ ಅಲ್ಲ;

† P. L. 246.

ಪರ್ಶಿಯನ್‌ದ ಗತಿಯೂ ಕನ್ನಡದಲ್ಲಿ ಹೀಗೇ ಆಗಿದೆ. ಪರ್ಶಿಯನ್‌ದ "ಝಮೀನ್ ಅಸ್ಮಾನ್ ಫರಖ್"— ಪ್ರಯೋಗದಲ್ಲಿಯ 'ಜಮೀನ್' ಮತ್ತು '**ಫರಕು**' ನಮಗೆ ಅರ್ಥವಾದುವು. ಆದರೆ 'ಅಸ್ಮಾನ್' ಎಂದರೇನು?........ಸಂಸ್ಕೃತದ ಅ-ಸಮಾನ, ಸಮಾನವಲ್ಲದ್ದರ ಸಾಹಚರ್ಯವು ಸಹಾಯಕ್ಕೆ ಬಂದಿತು. ಹೀಗಾಗಿ, ಭೂಮಿ ಆಕಾಶಗಳ ಅಂತರವಾಗಬೇಕಾಗಿದ್ದುದು — "ಜಮೀನ ಅ-ಸಮಾನ ಫರಕಾ"ಯಿತು. ಅಥವಾ ಮರಾಠಿಯ ಕಾರಕಿರ್ದಿ (ಪರ್ಶಿಯನ್ ಕಾರಕರ್ದ್) ತೆಗೆದುಕೊಳ್ಳೋಣ —; ಇದು ಕನ್ನಡದ ಕಾಲದ ಸಾಹಚರ್ಯದಿಂದ "ಕಾಲಕಿರ್ದಿ" ಆಯಿತು. ಅವನ **ಕಾಲ**ಕಿರ್ದಿಯಲ್ಲಿ, ಔರಂಗಜೇಬನ **ಕಾಲ**ಕಿರ್ದಿಯಲ್ಲಿ ಇತ್ಯಾದಿ. ಹೀಗೇ ಪಾಯ್ನಲ್ ಬಾಗಲ—Panel–ಬಾಗಲದಿಂದ ಬಂದುದು.

ಆದರೆ, ಒಂದೊಂದು ಸಲ ಈ ಸಾಹಚರ್ಯವು ಅರಿಯದೆಯೇ ಅಪದ್ಧ ಉಚ್ಚಾರವನ್ನು ಕೊಡುವುದೂ ಉಂಟು. ಉದಾಹರಣೆಗೆ—ರೇಶನ್ ಕೋಟಾ ಹೋಗಿ ರೇಶನ್ **ಖೋಟಾ;** ಖೋಟಾ-ಭಾಗ ಎನ್ನುವ ಸಾಹಚರ್ಯ. ಅಥವಾ ಹೆಣ್ಣುಮಕ್ಕಳು ಅಡುಗೆಯ ಕಾಲದಲ್ಲಿ ರುಚಿಗಾಗಿ ಉಪಯೋಗಿಸುವ Baking Powder, ಕಲಿಯದವರ ಬಾಯಲ್ಲಿ "ಬೆಕ್ಕಿನ ಪುಡಿ"ಯೂ ಆಗುವದುಂಟು. ನನ್ನ ಮಿತ್ರರೊಬ್ಬರು "Jasmine" ಅತ್ತರವನ್ನು, ಅಂಗಡಿಯಲ್ಲಿ "ದಶಮಿ ಎಣ್ಣೆ" ಎಂದು ಕೇಳಿದರು.

ಭಾಷಾವ್ಯತ್ಯಾಸದ ಎಂಟನೆಯ ಕಾರಣವೆಂದರೆ, **ಮನಸ್ಸಿನ ಸಂಸ್ಕೃತಿ.** ಮನುಷ್ಯನಿಗೆ ಜೀವನದ ಆವಶ್ಯಕ ವಿಷಯಗಳು ಪೂರೈಸಿದ ಮೇಲಾದರೂ, ಸಂಸ್ಕೃತಿ ಎಂಬುದು ಬೇಕು. ಆದಷ್ಟುಮಟ್ಟಿಗೆ, ಅವನು ಅಪ್ರಿಯವಾದುದನ್ನಾಗಲೀ, **ಅಸಹ್ಯ**ವಾದುದನ್ನಾಗಲೀ ಬಾಯಿಂದ ಆಡಲಾರ. ಅಂತಹ ಪ್ರಸಂಗ ಬರುವುದೇ ಆದರೆ ಅದನ್ನು ಬೇರೆ ಯಾವುದಾದರೊಂದು ವಿಧವಾಗಿ ಸೂಚಿಸುತ್ತಾನೆ. ಅಂತಲೇ, ಶ್ರುತಿಕಷ್ಟದ ಜೊತೆಗೆ ಶ್ರುತಿದುಷ್ಟವೂ ಕೂಡ ಕನ್ನಡದಲ್ಲಿ ವ್ಯಾಕರಣದೋಷವಾಯಿತು. ಈ ರೀತಿ ಅಸಹ್ಯ ಇಲ್ಲವೆ ಅಮಂಗಲ ವಾದದ್ದನ್ನು ಬಾಯಿಂದ ನೇರವಾಗಿ ನುಡಿಯದೆ, ಬಳಸಿ ಗೌರವಪೂರ್ಣವಾಗಿ ಹೇಳುವುದೇ **Euphemism**- **ಇಲ್ಲವೆ ಸೌಕುಮಾರ್ಯ** ಇಲ್ಲವೆ **ಭಾಷಾಗೌರವ** ಎಂದು ಕರೆಯಲ್ಪಡುತ್ತದೆ. ಉದಾಹರಣೆಗೆ ಇಂಗ್ಲಿಷಿನಲ್ಲಿ 'ನಷ್ಟವಾಗು' ಎನ್ನುವ ಅರ್ಥದಲ್ಲಿ "Go west" ಎಂದು ಹೇಳುತ್ತಾರೆ. ಈ ಬಗೆಯ ಭಾಷಾಗೌರವಕ್ಕಾಗಿ ಹೆಚ್ಚಾಗಿ ಕಾಣಿಕೆಯನ್ನು ಸಲ್ಲಿಸುವವರು ಸ್ತ್ರೀಯರೆಂದು ಬೇರೇನೂ ಹೇಳಬೇಕಾಗಿಲ್ಲ. ಯಾಕಂದರೆ, ಪುರುಷರಕಿಂತ ಹೆಚ್ಚು ಶ್ರುತಿದುಷ್ಟದ ಸಲುವಾಗಿ ಜಾಗ್ರತೆ ವಹಿಸುವವರು ಸ್ತ್ರೀಯರು.

ಈಗ ಕನ್ನಡ ಕೋಶದ ಉದಾಹರಣೆಗಳನ್ನೇ ತೆಗೆದುಕೊಳ್ಳೋಣ:—

ಹೆಣ್ಣುಮಕ್ಕಳ ಕೈಯಲ್ಲಿಯ ಬಳೆ ಒಡೆದಾಗ ಮಾಂಗಲ್ಯದೃಷ್ಟಿಯುಳ್ಳ ಅವರು 'ಬಳೆ ಒಡೆಯಿತು' ಎಂದು ಎಂದಿಗೂ ಹೇಳುವದಿಲ್ಲ. "ಬಳೆ ಹೆಚ್ಚಿತು" ಎಂದು ಹೇಳುತ್ತಾರೆ. "ಬಳೆ ಒಡೆಯಿತು" ಎನ್ನುವವ ಗ್ರಾಮ್ಯ; ಅನಾಗರಿಕ. ಹಾಗೇ "ಕುಂಕುಮ ತೀರಿತು" ಎಂದು ಹೇಳುವದಿಲ್ಲ. ತದ್ವಿರುದ್ಧವಾಗಿ ಕುಂಕುಮ ಹತ್ತಿರವಿರದಿದ್ದರೂ ಅದರ ಕೇವಲ ವಿರುದ್ಧಾರ್ಥವನ್ನೇ ಹೇಳುವ "ಕುಂಕುಮ ಬಳೆಯಿತು" ಎಂದು ಹೇಳುವು ದುಂಟು. ಪಂಪಭಾರತದಲ್ಲಿ ಒಬ್ಬ ಸೈನಿಕನು ಯುದ್ಧಕ್ಕೆ ಹೊರಟಾಗ, ಅವನ ಹೆಂಡತಿ ತನ್ನ ಗಂಡನು ರಣಾಂಗಣದಲ್ಲಿ ಮಡಿಯದೆ ತಿರುಗಿ ಬರುವನೆಂಬುದನ್ನು ಸೂಚಿಸುವ ರೀತಿ ಇದು. ಕೊಳಗುಳಕ್ಕೆ ಹೊರಟು ನಿಂತ ಆ ಸೈನಿಕನು ಹೇಳುವುದೆಂದರೆ:—"ಈ ಪೊಳ್ತೆ ಪೊಳ್ತು; ನಾಳೆ ದೇವಲೋಕದ ಕನ್ನೆಯರೋಲಗ ದೊಳಿರ್ಪೆಂ" ಎಂದು ನುಡಿಯೆ, (ಅವಳ್) "ನೀನೆಂದುತು ಪೋಗಲ್ ತೀರದು; ನಾಳೆ ಮಗುಳ್ ಬಂದು ಎನ್ನೊಳ್ ನೆರೆವುದೆಂದು ಪೇಳಿ, "ನಿನಗಜಂವುಂಟೆ?" ಎಂದು ಕೇಳೆ, "ಎನ್ನ **ಒಲೆವಾಗ್ಯವುಂಟೆಂ**ವಳ್"

೧೦೪೫. ಅವಳ ಪತಿ ಸಾಯಲಾರನೆಂಬುದಕ್ಕೆ ಅವಳ ಓಲೆವಾಗ್ಯ, ಓಲೆಭಾಗ್ಯವೇ ಸಾಕ್ಷಿಯಾಗಿದೆ. ಸತ್ತವರು ಅವರವರ ಕರ್ಮಾನುಸಾರವಾಗಿ ಸ್ವರ್ಗಕ್ಕೇ ಹೋಗಲಿ; ನರಕಕ್ಕೇ ಹೋಗಲಿ; ವೈಕುಂಠವಾಸಿಗಳೋ, ಕೈಲಾಸವಾಸಿಗಳೋ, ಸ್ವರ್ಗಸ್ಥರೋ, ತೀರಿಕೊಂಡವರೋ-ಆಗುತ್ತಾರೆ. ಅದರಂತೆಯೇ, ಊಟಕ್ಕೆ ಕುಳಿತಾಗ, "ದೀಪ ಆರುವ"ದಿಲ್ಲ; ಶಾಂತವಾಗುತ್ತದೆ. ಹಾವು ಕಚ್ಚುವದಿಲ್ಲ; ಮುಟ್ಟುತ್ತದೆ. ಹಲಕೆಲವು ಔಷಧಿ ಕೊಡುವ ಒಡ್ಡರಂತೂ ಹಾವು ಎಂದು ಬಾಯಿಂದ ಕೂಡ ಹೇಳುವದಿಲ್ಲ; "ಹುಳ ಮುಟ್ಟಿತು" ಎಂದು ಹೇಳುತ್ತಾರೆ. ಇವರಂತೆಯೇ ಅಲ್ಪಾರ್ಚನೆ, ಹೊರಗೆ ಕೂಡು, ಒಂದಕ್ಕೆ ಹೋಗು---ಮೊದಲಾದ ಪ್ರಯೋಗಗಳಲ್ಲೂ ಈ ಸೌಕುಮಾರ್ಯ ದೃಷ್ಟಿಯನ್ನೇ ಕಾಣಬಹುದು. ಅಷ್ಟೇ ಅಲ್ಲ; ಅನೇಕ ಹೆಣ್ಣುಮಕ್ಕಳು—ನಾಪಿಕ, ಇಲ್ಲವೆ ಕ್ಷೌರಿಗ, ಇಲ್ಲವೆ ಹಜಾಮು—ಎಂದು ಬಾಯಿಂದ ಕೂಡ ಹೇಳುವದಿಲ್ಲ; 'ಕೆಲಸಿಗ' (ಕೆಲಸ ಮಾಡುವವ) ಎಂದು ಕರೆಯುತ್ತಾರೆ. ತಮಿಳುನಾಡಿನಲ್ಲಂತೂ ಕ್ಷೌರಿಗನನ್ನು "ಅಂಬಟ್ಟನ್" ಎಂದು ಕರೆಯುತ್ತಾರಂತೆ! "ಅಂಬಟ್ಟನ್" ಎಂದರೆ ತಮಿಳಿನಲ್ಲಿ "ವೈದ್ಯ!". ಹಜಾಮರು ಒಂದು ಕಾಲಕ್ಕೆ ವೈದ್ಯರೂ ಆಗಿದ್ದುದರಿಂದ ಒಂದು ಹೆಚ್ಚಿನ ದರ್ಜೆಯಿಂದಲೇ ಕರೆಯಿಸಿಕೊಳ್ಳಲ್ಪಡಹತ್ತಿದರು. ಈ ಬಗ್ಗೆ ಶ್ರೀ ಬಿ. ಸಿ. ಮುಜುಮುದಾರ **ಅವರು ಬರೆಯುವದೇನಂದರೆ:—**

> "The barbers once took largely to the medical profession and now the barbers in general are called by honorific name '**ಅಂಬಟ್ಟನ್**', though this term does not really indicate the barber caste" *

ಅಷ್ಟೇ ಅಲ್ಲ; ಹಲಕೆಲವು ತಮಿಳು ಸ್ತ್ರೀಯರು — ಅದರಲ್ಲಿ ವಿಶೇಷತಃ ಶ್ರೀವೈಷ್ಣವರು — ಹೀಗೂ ಕೂಡ ಕರೆಯದೆ, "ಪೇರಶೊಲ್ಲಾದವನ್" ಅಂದರೆ ಪೆಯರ್ "ಹೆಸರು ಇಲ್ಲದವನು" ಎಂದು ಕರೆಯುತ್ತಾರಂತೆ; ಈ ಭಾಷಾಗೌರವದ ಗಡಬಡಿಯಲ್ಲಿ ಕ್ಷೌರಿಗ ಇದ್ದ ಹೆಸರನ್ನು ಕೂಡ ಕಳೆದುಕೊಂಡು, ಹೆಸರಿಲ್ಲದವನಾಗಿದ್ದಾನೆ.

ಇದರಂತೆ, ಹಲಕೆಲವು ಸಲ ಬೆಲೆ ಕಡಿಮೆ ಇದ್ದರೂ, ಹೆಚ್ಚಾಗಿ ಹೇಳುವಲ್ಲಿಯೂ ಈ ಭಾಷಾಗೌರವವನ್ನು ಕಾಣಬಹುದು. ಒಬ್ಬ ವ್ಯಕ್ತಿಯನ್ನು ಸ್ವತಃ ಅವನ ಮನೆ ಕಸಗೂಡಿಸುವವ ಕೂಡ ಕೇಳಲಿ; ಬಿಡಲಿ. ಆದರೆ ಅವನು ನಮ್ಮ ಪತ್ರಗಳಲ್ಲಿ **ರಾಜಮಾನ್ಯ** ರಾಜಶ್ರೀ –ಆಗುತ್ತಾನೆ. ಹತ್ತಿರ ಒಂದು ಕಾಸು ಕೂಡ ಇರದ ನಿರ್ಭಾಗ್ಯನೂ ಕೂಡ ಶ್ರೀಯುತನಾಗುತ್ತಾನೆ.

ಈ ರೀತಿ ಭಾಷಾ-ಕೋಶದಲ್ಲಿ ಹೊಸ ಶಬ್ದಗಳನ್ನು ಸೇರಿಸಿ, ಹಲವಕ್ಕೆ ವಿಶಿಷ್ಟಾರ್ಥವನ್ನು ಕೂಡ ಕಲ್ಪಿಸುವಲ್ಲಿ ಭಾಷಾಗೌರವವು ಪ್ರಬಲವಾದ ಸಾಧನೆಯಾಗಿದೆ.

ಇದರಂತೆಯೇ, ನಾವು ಅರಿಯದೇ ಭಾಷೆಯಲ್ಲಿ ತುಂಬಾ ಮಹತ್ವಪೂರ್ಣವಾಗಿ ನಡೆಯುವ ಇನ್ನೊಂದು ವ್ಯತ್ಯಾಸವೆಂದರೆ ಶಬ್ದಗಳ ಅರ್ಥವು ಬದಲಾಗುವುದು. ವ್ಯಕ್ತಿಗಳಿಗೆ, ನಾಡುಗಳಿಗೆ ದೈವಬಲವಿದ್ದಂತೆ, ಶಬ್ದಗಳಿಗೂ ಒಂದು ದೈವಬಲವಿದೆ. ಹುಟ್ಟಿದ ಪ್ರತಿಯೊಂದು ಶಬ್ದಕ್ಕೂ ಅದರದರ ದೈವರೇಷೆಯನ್ನು ಕೊರೆಯಿಸುವ ಒಂದು ಜನ್ಮಕುಂಡಲಿ ಸಿದ್ಧವೇ ಆಗಿದೆ. "ಹಲವು ಜನ ಪ್ರತಿಷ್ಠಿತರಾಗಿ ಹುಟ್ಟುತ್ತಾರೆ; ಹಲವು ಜನ ಪ್ರತಿಷ್ಠೆಯನ್ನು ಸಂಪಾದಿಸುತ್ತಾರೆ; ಮತ್ತು ಹಲವು ಜನರ ಮೇಲೆ ಪ್ರತಿಷ್ಠೆ ಹೇರಲ್ಪಡುತ್ತದೆ" ಎಂದು ಷೇಕ್ಸಪಿಯರ್ ಮಹಾಕವಿಯು ವ್ಯಕ್ತಿಗಳ ಬಗ್ಗೆ ಹೇಳಿದ ಮಾತು ಈ ಶಬ್ದಗಳ ದೈವಬಲಕ್ಕೂ ಅನ್ವಯಿಸುತ್ತದೆ. ಆದರೆ, ಇಲ್ಲಿ ಮಾತ್ರ ಪ್ರತಿಷ್ಠೆ ಗಳಿಸುವ ಹವ್ಯಾಸವಿಲ್ಲ. ಅದು ತಾನಾಗಿಯೇ ಅರಸಿ

* H. B. L. 63.

ಬರುತ್ತದೆ; ಇಲ್ಲವಾದರೆ, ಇದ್ದುದನ್ನೂ ಕಚ್ಚಿಕೊಂಡು ಹೋಗುತ್ತದೆ. ಹೀಗಾಗಿ, ತೀರ ಬಡತನದ ಮನೆಯಲ್ಲಿ ಹುಟ್ಟಿದ ಅನೇಕ ಶಬ್ದಗಳು ಶ್ರೀಮಂತವಾಗುತ್ತವೆ; ಶ್ರೀಮಂತಿಕೆಯ ತೊಟ್ಟಿಲಲ್ಲಿಯೇ ತೂಗಲ್ಪಟ್ಟ ಅನೇಕ ಶಬ್ದಗಳು ಹರಕು ಚಿಂದಿಗಳನ್ನುಟ್ಟು ದೇಸಿಗರಂತೆ ಮನೆಮನೆ ತಿರುಗುತ್ತವೆ. ಮೊದಲನೆಯ ರೀತಿಗೆ ಶಬ್ದಗಳ ಸುಭೋಗ ಇಲ್ಲವೆ ಉತ್ಕರ್ಷವೆಂದು ಕರೆಯುತ್ತೇವೆ. ಎರಡನೆಯದಕ್ಕೆ, ಶಬ್ದಗಳ 'ಕುಭೋಗ' ಇಲ್ಲವೆ 'ಅಪಕರ್ಷ'ವೆಂದು ಕರೆಯುತ್ತೇವೆ.

ಈಗ ಉದಾಹರಣೆಗೆ ಮೊದಲು ಇಂಥ ಶ್ರೀಮಂತಿಕೆಯನ್ನು ಅನಾಯಾಸವಾಗಿ ಪಡೆದ ಪುಣ್ಯವಂತ ಶಬ್ದಗಳನ್ನು ನೋಡೋಣ: ಇಂಗ್ಲಿಷದಲ್ಲಿ Virtue ಎನ್ನುವ ಶಬ್ದವಿದೆಯಷ್ಟೆ; Virtue ಎಂದರೆ ಸದ್ಗುಣ. ಪ್ರತಿಯೊಬ್ಬರಿಗೂ Virtuous ಎನಿಸಿಕೊಳ್ಳಬೇಕೆಂದು ಆಶೆ ಆದರೆ, ಮೂಲತಃ ಈ ಶಬ್ದದ ಅರ್ಥ 'ಶೌರ್ಯ'—ಎಂದು ಮಾತ್ರ. ಮಿಲ್ಟನ್‌ನ ಸೆಟನ್ನನು ನರಕದಲ್ಲಿ ಬಿದ್ದ ತನ್ನ ಅನುಚರರನ್ನು— "Oh have you chosen this place after the toil of battle to repose your wearied virtue" (strength: Prowess)---ಎಂದು ಕೇಳುತ್ತಾನೆ. ಈ ಶಬ್ದವು ಲ್ಯಾಟಿನ್ Vir, (ಸಂ. ವೀರ)—ದಿಂದ ಬಂದುದು. ಅದರಂತೆ, ಇಂಗ್ಲಿಷದಲ್ಲಿ Lord ಮತ್ತು Lady ಶಬ್ದಗಳಿವೆಯಲ್ಲ; ಇವನ್ನು ಶ್ರೀಮಂತರೂ ಸ್ಥಿತಿವಂತರೂ ಆದ ಪುರುಷ-ಸ್ತ್ರೀಯರನ್ನು ಸಂಬೋಧಿಸಲು ಉಪಯೋಗಿಸುವದುಂಟು. ಭಾರತದಲ್ಲಿಯಂತೂ ಪ್ರತಿಯೊಬ್ಬ 'ಸರ್'ನ ಹೆಂಡತಿ, 'Lady'. ಆದರೆ, ಮೂಲತಃ ಈ ಎರಡೂ ಶಬ್ದಗಳಿಗೂ ಅಷ್ಟೇನೂ ಶ್ರೀಮಂತಿಕೆ ಇರಲಿಲ್ಲ ರಸ್ಕಿನ್‌ನ ಪ್ರಕಾರ—Lord ಅಂದರೆ "One who wards or guards bread"; Lady ಅಂದರೆ "Kneader or giver of bread." ಈ ಪದ ಆಂಗ್ಲೊ ಸ್ಯಾಕ್ಸನ್ -Hlafdigeದಿಂದ ಬಂದುದು. Hlaf= bread; daege ಅಂದರೆ kneader ಮಾಡುವವಳು. ಇಂಗ್ಲಿಷ್‌ದಲ್ಲಿ 'ಪಗಾರ' ಎನ್ನುವ ಅರ್ಥದಲ್ಲಿ 'Salary' ಎಂಬ ಪದವಿದೆಯಲ್ಲವೇ? ಅವರ ಮೂಲಾರ್ಥದ ಪ್ರಕಾರ ಇಂದು ಯಾರಿಗಾದರೂ "ಸಾವಿರ ರೂಪಾಯಿ ಸ್ಯಾಲರಿ" ಎಂದರೆ ನಾವು ನಗಬಹುದು ಯಾಕಂದರೆ ಪ್ರೊ ವೀಕ್ಲಿ ಅವರು ಹೇಳುವಂತೆ: "a salary is an allowance for 'salt' 'sal'" ಸಾವಿರ ರೂಪಾಯಿ salt-allowance ಅಂದರೇನು!! ಅಥವಾ ನಮ್ಮ ಕನ್ನಡದಲ್ಲೇ ನೋಡಿದರೆ, "ಶ್ರೀಯುತರು" ನರ**ಪುಂಗವರು** ಎಂದು ಅನೇಕ ಸಲ ಹೇಳುತ್ತೇವೆ. ಈ ವಾಕ್ಯದ ಅರ್ಥವೆಂದರೆ "ಶ್ರೀಯುತರು ಮನುಷ್ಯರಲ್ಲಿ ಶ್ರೇಷ್ಠರು" ಎಂದು. ಆದರೆ, 'ಪುಂಗವ' ಶಬ್ದಕ್ಕೆ ಮೊದಲು ಈ 'ಶ್ರೇಷ್ಠ' ಎನ್ನುವ ಅರ್ಥವಿರಲಿಲ್ಲ. 'ಪುಂಗವ' ಎಂದರೆ 'ಗೂಳಿ'. ಅದರ ಲಕ್ಷಣಾರ್ಥವಾಗಿ 'ಶ್ರೇಷ್ಠ' ಎಂದು ಬಂದಿರಬೇಕು. ಹಾಗೆಯೇ, 'ಭಗ' ಎಂದರೆ ಸ್ತ್ರೀಂದ್ರಿಯ ಮತ್ತು ದೈವ ಎರಡೂ ಆಗುತ್ತದೆ. ಭಗವತ್ತ, ಭಗವಾನ್ ಇತ್ಯಾದಿ. ಹಲವು ಕಡೆ ಸೋದರಿಯರಿಗೆ 'ಭಗಿನಿ' ಎಂದು ಸಂಬೋಧಿಸುವದಿಲ್ಲವೆಂದೂ ಕೇಳಿದ್ದೇವೆ. ಅದರಂತೇ 'ಲಿಂಗ' ಎರಡೂ ಅರ್ಥವನ್ನು ಕೊಡುತ್ತದೆ. ಅದೂ ಹೋಗಲಿ; ಶುದ್ಧ ಕನ್ನಡದ 'ಬೆರಕಿ' ಶಬ್ದವಿದೆಯಲ್ಲಾ!! ಯಾವ ತಂದೆಯೂ ತನ್ನ ಮಗನನ್ನು ಬೆರಕಿ-ಜಾಣ ಎಂದು ಹೇಳಿಕೊಳ್ಳಲು ಹಿಂದುಮುಂದು ನೋಡುವುದಿಲ್ಲ. ಆದರೆ, ಬೆರಕಿ ಎನ್ನುವ ರೂಪ ಬೆರಿಸು-ಮಿಶ್ರಣ ಮಾಡು ಇದರಿಂದ 'ಬೆರಕೆ'ಯಾಗಿ ಬಂದಿತೆಂದು ತಿಳಿದಾಗ ಯಾರೂ ತಮ್ಮ ಮಕ್ಕಳನ್ನು ಆ ರೀತಿ ಸಂಬೋಧಿಸಲು ಹಿಂದುಮುಂದು ನೋಡಿಯಾರು!

ಇದರಂತೆ, ನಿಜವಾಗಿ ತೀರ ಕೆಟ್ಟ ಬೈಗಳೇ ಆದ ಅನೇಕ ಶಬ್ದಗಳು ತಮ್ಮ ಮೂಲದ ತೀರ ಕೆಟ್ಟವಾದ ಅರ್ಥವನ್ನು ಕಡಿಮೆ ಮಾಡಿಕೊಂಡು ಸಾಮಾನ್ಯಾರ್ಥದಲ್ಲೋ, ಲಲ್ಲೆಯಲ್ಲೋ ಉಪಯೋಗಿಸಲ್ಪಡುತ್ತವೆ. ಉದಾ: ಭಾಂಚೋದ್; ಹಲಕಟ್; **ತಾಯಿಗಂಡ;** ಗುಲಾಮ ಇತ್ಯಾದಿ.

ಸಂಸ್ಕೃತ 'ದಂತ' ಶಬ್ದವು, ಕನ್ನಡದಲ್ಲಿ ತದ್ಭವನಾದಾಗ ಎಷ್ಟೇ ಶ್ರುತಿದುಷ್ಟವಾಗಿದ್ದರೂ, ಅದನ್ನು ಎಂಥ ಶಿಷ್ಟರೂ ಸಮಾಸದಲ್ಲಿ ಉಪಯೋಗಿಸುತ್ತಿದ್ದಾರೆ. ಉದಾ: ಜಂತಹಣಿಗೆ. ಅದರಂತೆ, ಇದರ ಸಮೀಪದಲ್ಲೇ ಇರುವ "ಜಂತಿನ ಪುಡಿ ತೆಗೆದುಕೊಳ್ಳುವುದು" "ಜುಲಾಬು ತೆಗೆದುಕೊಳ್ಳುವುದು" ವಿಚಾರಿಸಲು ಅಸಾಧ್ಯವಾದ ಮಾತು! ಆದರೂ, ಏನೂ ಅಸಹ್ಯವಿರದಂತೆ ಇವನ್ನು ಭಾಷೆಯಲ್ಲಿ ಎಂಥವರೂ ಉಪಯೋಗಿಸುತ್ತಿರುತ್ತೇವೆ. ಪಾರ್ಶ್ವ–ಪಕ್ಕೆಲುಬಿನಿಂದ ಬಂದ 'ಪರಶು' ಇಂದು ಕೊಡಲಿಯಾಯಿತು; ಹಾಗೇ, ರಜಕ ಮೊದಲಾದ ಪದಗಳು.

ಅಷ್ಟೇ ಅಲ್ಲದೆ, ಯಾವ ಮನುಷ್ಯನೂ 'ದುಡ್ಡಿದ್ದ'ವನಾದರೆ ದೊಡ್ಡವ. ಆದರೆ, ಇವರ ಜೊತೆಗೆ ರೂಪಾಯಿಯಿದ್ದವರ ಸ್ಥಾನಮಾನವೇನು? 'ಪೈಸೆವಾಲಾ' 'ದುಡ್ಡಿದ್ದವ' 'ರೊಕ್ಕಸ್ತ'—ಮೊದಲಾದ ಶಬ್ದಗಳಲ್ಲಿ ಮೂಲತಃ ಅಂತಹ ಶ್ರೀಮಂತಿಕೆಯೇನೂ ಇರದಿದ್ದರೂ 'ಶ್ರೀಮಂತ' ಎನ್ನುವ ಸಾಮಾನ್ಯಾರ್ಥದಲ್ಲಿ ಈ ಪದಗಳನ್ನು ನಾವು ಉಪಯೋಗಿಸುತ್ತೇವೆ. ಅಷ್ಟೇ ಅಲ್ಲದೆ, ಕನ್ನಡದ 'ಕಳ್ಳ' ಬಂಗಾಲಿಗೆ ಹೋದಾಗ ಅಷ್ಟೇನೂ ಹೀನನಾಗುವದಿಲ್ಲ. ಅವರಲ್ಲಿ 'ಕಲ್' 'ಕಳ್' ಎಂದರೆ "ಧೂರ್ತನಾದರೂ ಜಾಣ" ಎಂದು ಅರ್ಥವಂತೆ. ಈ ಬಗ್ಗೆ ಶ್ರೀ. ಬಿ. ಸಿ. ಮುಜುಮುದಾರ ಅವರು ಹೇಳುವದೆಂದರೆ:— "'ಕಲ್' a clever but wily man in Bengali is from ಕಳ್ಳನ್ (a thief)". 'ಪೀತಾಂಬರ' ಬರೀ ಹಳದಿ ವಸ್ತ್ರವಾಗಿದ್ದರೂ. ಶ್ರೀಮಂತ ಜರದ ವಿಚಾರವನ್ನು ಸೂಚಿಸಹತ್ತಿತು.

ಇದೇ ಸಂದರ್ಭದಲ್ಲಿಯೇ, ಸಂಸ್ಕೃತದ 'ದೇವ' ಶಬ್ದದ ಬಗ್ಗೆಯೂ ಒಂದು ಮಾತನ್ನು ನೋಡಬಹುದು. ಸಂಸ್ಕೃತದ ಈ ಶಬ್ದವು ಇಂದು ನಮ್ಮ ಕನ್ನಡದಲ್ಲಿ ಹೆಚ್ಚು ಕಡಿಮೆ ಸಂಸ್ಕೃತದಲ್ಲಿಯ ಅರ್ಥವನ್ನೇ ಕೊಡುತ್ತಿದೆ. ಆದರೆ. ಮೂಲತಃ ಈ ಶಬ್ದವೂ ಅನೇಕ ಬಗೆಯ ವಿಧಿವಿಲಸನವನ್ನು ಕಂಡಿದೆ. ಯಾಕಂದರೆ, ಪಾರಸಿಕರಲ್ಲಿ 'ದೇವ' ಎಂದರೆ, ಒಂದು ಕಾಲಕ್ಕೆ 'ಅಸುರ' ಎಂಬರ್ಥವನ್ನು ಕೊಡುತ್ತಿದ್ದಿತು.

ಮೂಲತಃ 'ದೇವ' ಶಬ್ದವು 'ದಿವ' ಅಂದರೆ 'ಪ್ರಕಾಶಿಸು' 'ಹೊಳೆ'—ಎಂಬ ಧಾತುವಿನಿಂದ ಬಂದುದು. ಗ್ರೀಕ್‌ರ "Zeus" ಮತ್ತು ಪ್ರಾಚೀನ ಲ್ಯಾಟಿನ್ನದ "Deus"—ಎಂಬ ಎರಡೂ ಪದಗಳು ಈ 'ದೇವ' ಪದದ ಸಮಾನ ರೂಪಗಳೇ. ಆದರೆ, ಕಾಲಾನಂತರ ಪಾರಸಿಕ "ಝರಾತುಷ್ಟ್ರ"ನ ಕಾಲದಲ್ಲಿ ಈ "ದೇವ" ವರ್ಗದವರನ್ನು ಹೀಗಳೆದು "ಅಸುರ"ನ ಮಹಾತ್ಮೆಯನ್ನು ಪ್ರಸ್ಥಾಪಿಸಲಾಯಿತು. ಆದ್ದರಿಂದ "ಝರಾತುಷ್ಟ್ರ"ನ ಕಾಲದಲ್ಲಿ "ದೇವ" ಅಂದರೆ "ವೇಷಗಾರ; ಕೆಟ್ಟ ಮನಸ್ಸಿನವ" ಎಂಬ ಅರ್ಥವು ನೆಲಸಿತು. ಅವನ ಒಂದು ಉಕ್ತಿಯಲ್ಲಿ ಬರುವ ಮಾತೆಂದರೆ—

"Then you 'Devas' all are the seed of the evil mind"* ಪುನಃ "Since, you instigate those men of the worst knowledge, who are said to be believers of the 'ದೈವ'. who are h.nderers of good thought and destroyers of the Divine Wisdom."— ಇತ್ಯಾದಿ ಇಷ್ಟೇ ಅಲ್ಲ; "ದೇವರಲ್ಲಿ" ತೀರ ಕೆಟ್ಟವನಾದ "Annra Mainu" ಎಂಬವನನ್ನು "ದೈವಾನಾಮ್ ದೈವೋ," ಎಂದು ಗಾಥೆಗಳು ಸಂಬೋಧಿಸುತ್ತವೆ. ಆದ್ದರಿಂದ ಹೊಸದಾಗಿ 'ಝರಾತುಷ್ಟ್ರ' ಪಂಥವನ್ನು ಸೇರಬೇಕಾದವನು ತಾನು "ದೈವ-ಪಂಥಿ" ಯಲ್ಲವೆಂದು ಮೊದಲೇ ಪ್ರತಿಜ್ಞೆ ತೆಗೆದುಕೊಳ್ಳಬೇಕಾಗುತ್ತಿತ್ತು. ಅಲ್ಲಿಯ ಪ್ರತಿಜ್ಞೆಯ ಪ್ರಾರಂಭವು ಈ ರೀತಿಯಿದೆ "ನೈಸ್ಮಿ ದೈವೋ"— ಎಂದು ಮೊದಲಾಗಿ. ಅಂದರೆ

* The Term 'Deva' ಇತ್ಯಾದಿ— P. T. O. C. IX P. 244

"ನಾನು ದೇವಸಂಘವನ್ನು ಬಿಟ್ಟದ್ದೇನೆ." ಹೀಗಾಗಿ, ಆರ್ಯೇತರರ ವಿಪರೀತಾರ್ಥವನ್ನು ಕೊಟ್ಟ ಈ ಪದವು, ಆರ್ಯರಲ್ಲಿ ಮಾತ್ರ ಒಳ್ಳೆಯ ಅರ್ಥವನ್ನು ಕೊಟ್ಟಿತು.

ಇದು ಈ ಶಬ್ದಗಳ ಪುಣ್ಯ. ಮೂಲತಃ ಕೆಟ್ಟ ದೋಸ್ತರ ಗೆಳೆತನ ಮಾಡಿದ್ದರೂ, ಎಂತಹ ಬಡತನದ ಚಿಂತೆಯಲ್ಲಿ ಹುಟ್ಟಿದ್ದರೂ, ಇವು ಒಳ್ಳೇ ಉಡುಪು ಧರಿಸಿ ಮೆರೆಯುತ್ತಿರುತ್ತವೆ. 'ಅಪಕರ್ಷ'ವೆಂದರೆ ಇದರ ವಿರುದ್ಧವಾದ ಪ್ರಕ್ರಿಯೆ. ಇಲ್ಲಿ ಶ್ರೀಮಂತ ಶಬ್ದಗಳು, ತಮ್ಮ ಯಾವ ಪಾಪವಿಲ್ಲದಿದ್ದರೂ, ದುರ್ದೈವದಿಂದ ಪರದೇಶಿತನವನ್ನು ಪಡೆಯುತ್ತವೆ. ಜೀವನದಲ್ಲಿ ಇಂಥ ಬಡವರ ಸಂಖ್ಯೆ ಹೆಚ್ಚಿರುವಂತೆಯೇ, ಕೋಶದಲ್ಲಿ ಕೂಡ ಇಂಥ ದುರ್ದೈವಿಗಳ ಸಂಖ್ಯೆ ಸಾಕಷ್ಟಿದೆ.

ಇವುಗಳಲ್ಲಿ ಸ್ಥೂಲವಾಗಿ ಮೂರು ರೀತಿಯನ್ನು ಕಾಣಬಹುದು :—

ಒಂದು— ಮೂಲತಃ ಒಳ್ಳೆಯ ಅರ್ಥವನ್ನು ಕೊಡುತ್ತಿದ್ದ ಹಲವು ಪಡೆನುಡಿಗಳು, ಲಕ್ಷಣದ ಮೂಲಕವಾಗಿಯೋ ಅಥವಾ ಕಾವ್ಯದೃಷ್ಟಿಯ ಮೂಲಕವೋ ಅಣಕಕ್ಕೆ ಎಡೆಗೊಡುವುದು.

ಉದಾಹರಣೆ— ಪೂಜೆ ಆಗು, ಮಂಗಳಾರತಿ ಆಗು, ಮೂರು ನಾಮವಾಗು ಅಂದರೆ ಬಯ್ಯಿಸಿಕೊಳ್ಳು, ಪಿಟ್ಟು ಮಾಡಿಸಿಕೊಳ್ಳು ಎಂದು ಅರ್ಥ. 'ಸಂಪುಷ್ಟಕ್ಕೆ ಬಾ' (ರಾಯರ ವಕೀಲಿ ಇಲ್ಲ; ಸಂಪುಷ್ಟಕ್ಕ ಬಂದಾರೆ') ಎನ್ನುವಲ್ಲಿ ಸೋಲು, 'ಥಕಾಸು' ಎಂದು ಅರ್ಥ; 'ಏತಾವಾನಸ್ಯ' ಎಂದರೆ ಇಲ್ಲದ ಸೊಕ್ಕು, ಜಂಭ; 'ಭುಜಂಗಿಸು' ಅಂದರೆ ಸಮಾಪ್ತಿ ಮಾಡು; ಅಥವಾ 'ಶಕ ನಡೆಸು'. ನಿಜವಾಗಿ ಕನ್ನಡ ನಾಡು ತಮ್ಮದೇ ಆದ ಕಾಲಗಣನೆಯನ್ನು ಪ್ರಾರಂಭಿಸಿ ಶಕಕರ್ತರೆಂದು ಕೀರ್ತಿವೆತ್ತ ಶಾಲಿವಾಹನ ವಿಕ್ರಮರ ನಾಡು. ಆದರೆ ಇಂದು 'ತಮ್ಮದೇ ಆದ ಶಕ ನಡೆಸುವವರು' ಹಟಗಳು; ತಲೆ ಬಾತವರು. ತಮ್ಮ ಶಕ ಬಿಡದವರು. ಅದರಂತೆ ಸಂಪ್ರದಾಯದ ಮನೆತನಗಳಲ್ಲಿ 'ಹುಡುಗ ಉಡಾಳನಾಗಿದ್ದಾನೆ' ಎಂದು ಹೇಳಬೇಕಾದಾಗ 'ರುದ್ರ ಓದುತ್ತಾನೆ' ಎಂದು ಹೇಳುವದುಂಟು. ಇದು ಕೂಡ ಕೇವಲ 'ಅಹಂ ರುದ್ರೇ' ಅಷ್ಟೇ ಕಲಿತಿದ್ದರಿಂದ ಎಂದು ಹಾಗೆ ಅರ್ಥ ಬಂದಿತೋ, ಇಲ್ಲವೆ 'ಸ್ತೇನಾನಾಮ್ ಪತಿ'ಯಾದ ರುದ್ರನಲ್ಲಿ ಓದುತ್ತಿದ್ದಾನೆ—ಉಡಾಳನಾಗಿದ್ದಾನೆ— ಎಂಬ ಅರ್ಥವನ್ನು ಸೂಚಿಸಿತೋ ಹೇಳಲಿಕ್ಕಾಗದು.

ಇದರಂತೆ, ಒಂದೇ ಅರ್ಥವನ್ನು ಹೆಚ್ಚುಕಡಿಮೆ ಹೇಳುವ ಜೋಡುನುಡಿಗಳಿದ್ದಾಗ ಕೂಡ, ಒಂದು ಶಬ್ದವನ್ನು ಸ್ವಲ್ಪ ಮರ್ಯಾದೆ ಕೊಟ್ಟು ಉಪಯೋಗಿಸುತ್ತೇವೆ; ಮತ್ತೊಂದನ್ನು ಸ್ವಲ್ಪ ಕೆಳಗೆ ನಿಲ್ಲಿಸುತ್ತೇವೆ.

ಉದಾಹರಣೆಗೆ—"ಆಳುಮಗ ಬಸಪ್ಪ ಗಂಗಾಳದಲ್ಲಿ ಉಣ್ಣುತ್ತಾನೆ; ಶ್ರೀನಿವಾಸ ತಾಟಿನಲ್ಲೋ ತಳಿಗೆಯಲ್ಲೋ ಉಣ್ಣುತ್ತಾನೆ". ಶ್ರೀನಿವಾಸ ಗಂಗಾಳದಲ್ಲಿ ಉಣ್ಣಲಾರ. "ಕಾರಕೂನ ರಾಮು ಕಚೇರಿಗೆ ಹೋಗುತ್ತಾನೆ; ಜಾನ್ ಮಥಾಯ್ ಅವರು ಆಃಫೀಸಿಗೆ ಹೋಗುತ್ತಾರೆ." ನಿಜವಾಗಿ, ಕನ್ನಡ ಕಚೇರಿ, ಆಫೀಸದ ಭಾಷಾಂತರವೇ. ಆದರೂ ೧೦೦ ೧೫೦ ರೂಪಾಯಿ ಕೆಳಗಿನ ಪಗಾರದ ಜನ ಅಷ್ಟಾಗಿ ಆಫೀಸ್ ಎಂದುಕೊಳ್ಳಲಾರರು. ಅದರಂತೆ, ನಿಂಗಪ್ಪ ಮೆಡುವುದು ಕೆರವು; ಬ್ಯಾರಿಸ್ಟರ್ ಅಶೋಕ ಅವರು ಹಾಕಿಕೊಳ್ಳುವುದು ಚಪ್ಪಲಿ. ಅಶೋಕ ಅವರು ಸಾಮಾನ್ಯವಾಗಿ ಕೆರವು ಮೆಡಲಾರರು. ಇಲ್ಲಿ ಕೂಡ ಮೂಲತಃ ಎರಡೂ ಶಬ್ದಗಳು 'ಚೆರ್ಪು' ಎನ್ನುವ ಮೂಲ ದ್ರಾವಿಡ ಶಬ್ದದಿಂದಲೇ ಬಂದುವು. ಕೇಶಿರಾಜನ ಕಾಲದ ವರೆಗೆ ಈ ಕೆರ್ಪು ಶಬ್ದವು ಜೀವಂತವಿದ್ದು, ಆಗಲೇ ತನ್ನ ರೂಪವನ್ನು ಬದಲಿಸಿಕೊಳ್ಳಲು ಪ್ರಾರಂಭವಾಗಿತ್ತೆಂದು ಹೇಳಬಹುದು. ಕ್ರಿ. ಶ. ೧೫ರಲ್ಲಿಯೇ ಈ ಶಬ್ದದ ರೇಫವು ಮಾಯವಾಗಹತ್ತಿದ್ದರಿಂದ ಕೇಶಿರಾಜನು "ಇರ್ಪುಂ ಮುರ್ಪುಂ **ಕೆರ್ಪುಂ** ನೆರ್ಪುಂ........ ಮುಂತಾಗಿ ರೇಫಸಂಯೋಗಂಗಳ್" ಎಂದು ಹೇಳುತ್ತಾನೆ.

ವೊಡ್ಡಾರಾಧಣದಲ್ಲಿ (೯೪೦) "ತಂತಮ್ಮ ಕೆರ್ಪುಗಳೊಳ್ ತಗುಳ್ಚಿದರ್"—ಎಂದು ಬರುತ್ತದೆ. ಒಂದು ತೆಲುಗಿನ ಮುಖಾಂತರ ಚಪ್ಪಲವಾಯಿತು; ಮತ್ತೊಂದು ತಮಿಳಿನ ಮುಖಾಂತರ ಕೆರವಾಯಿತು. ಈಗ್ಯೂ ತಮಿಳಿನಲ್ಲಿ 'ಚೆರುಪು' ಎಂದೂ ತೆಲುಗು ಮಲಯಾಳಮ್‌ಗಳಲ್ಲಿ 'ಚೆಪ್ಪು' 'ಚೆರಿಪ್ಪು' ಎಂದೂ ಇವೆ. ಹಾಗೇ, ಶ್ರೀನಿವಾಸನು ಜಳಕಮಾಡುತ್ತಾನೆ; ಸುಶೀಲೆಯು ಮೈತೊಳೆದುಕೊಳ್ಳುತ್ತಾಳೆ; ದ್ವೈಪಾಯನಾಚಾರ್ಯರು ಸ್ನಾನಮಾಡುತ್ತಾರೆ. ಸಂಸ್ಕೃತ ದ್ವೈಪಾಯನಾಚಾರ್ಯರು ಮೈತೊಳಕೊಂಡರೆಂದು ಹೇಳಬಹುದೋ ?—ಶಾಂತಮ್ ಪಾಪಮ್ ! ಹೀಗೇ ಇನ್ನೂ ಅನೇಕ ದೃಷ್ಟಾಂತಗಳನ್ನು ಹೇಳಬಹುದು. ಝೋಪಡಿ, ಗುಡಿಸಲ ಇತ್ಯಾದಿ. ಈಯೆಲ್ಲ ಸಂದರ್ಭಗಳಲ್ಲಿ ನಾವು ಗಮನಿಸಬೇಕಾದ ಮಾತೆಂದರೆ, ಈ ಜೋಡುನುಡಿಗಳು ಹೆಚ್ಚು ಕಡಿಮೆ ಒಂದೇ ಅರ್ಥವನ್ನೇ ಕೊಡುತ್ತಿದ್ದರೂ, ಒಂದರ ಪುಣ್ಯಬಲ ಹೆಚ್ಚಿದೆ; ಮತ್ತೊಂದಕ್ಕೆ ಅಷ್ಟಿಲ್ಲ.

ಇನ್ನು ಎರಡನೆಯದಾಗಿ, ಹಲವು ಶಬ್ದಗಳು ಈ ರೀತಿ ಅಪಕರ್ಷವನ್ನು ಪಡೆಯಲಿಕ್ಕೆ ಕಾರಣವೆಂದರೆ, ಅವು ಮೂಲದ ತಮ್ಮ ಸಂಸ್ಕೃತ ಮನೆತನವನ್ನು ಬಿಟ್ಟು, **ತದ್ಭವವಾಗಿ** ಕನ್ನಡಕ್ಕೆ ಬಂದದ್ದೇ ಕಾರಣವೆಂದು ತೋರುತ್ತದೆ.

ಉದಾಹರಣೆಗೆ—ಕರ್ನಾಟಕದಲ್ಲಿ ವಿದ್ಯಾವರ್ಧಕ **ಸಂಸ್ಥೆ**ಯಿದೆ; ಲಿಂಗಾಯತ ವಿದ್ಯಾಭಿವೃದ್ಧಿ **ಸಂಸ್ಥೆ**ಯಿದೆ. ಆದರೆ ಇವು 'ಸಂತೆ'ಯಾಗಿಲ್ಲ. ಈ ಸಂಸ್ಥೆಗಳು '**ಸಂತೆ**'ಯಾಗುವುದು ಏನಾದರೂ ಅವ್ಯವಸ್ಥೆಯಾದಾಗ ಮಾತ್ರ ! ವಿಧಿ ನಮಗೆ ಒಳ್ಳೆಯದನ್ನು ಮಾಡಬಹುದು; ಕೆಟ್ಟದನ್ನೂ ಮಾಡಬಹುದು. ಆದರೆ ಅದರ ತದ್ಭವ "ಇದಿ" ಮಾತ್ರ ಎಲ್ಲಿ ಹೋದರೂ ಬಿಡದು. ಸಂಸ್ಕೃತದ 'ರಘಟಿ' ಒಂದು ಛಂದಸ್ಸಿನ ಭೇದವಾದೀತು. ಕನ್ನಡದ 'ರಗಳೆ' ಪ್ರಾರಂಭವಾಗುವ ಮುನ್ನ ಕುಳಿತಲ್ಲಿಂದ ಏಳುವುದು ಲೇಸು !.... ನಾವು ಕಾಶಿ-ರಾಮೇಶ್ವರ ಯಾತ್ರೆಗೆ ಹೋಗುತ್ತೇವೆ; ಉಳವಿಬಸವಣ್ಣನ ಜಾತ್ರೆಗೆ ಹೋಗುತ್ತೇವೆ. ಕಾಶಿರಾಮೇಶ್ವರ **ಜಾತ್ರೆಗೆ** ಯಾರೂ ಹೋದವರಿಲ್ಲ !! ಇದೊಂದು ಬಗೆಯ ಅರ್ಥಭೇದ.

ಇನ್ನು ಮೂರನೆಯ ವಿಧದ ಅಪಕರ್ಷದಲ್ಲಿ ಯಾವ ನಿಶ್ಚಿತ ಕಾರಣವನ್ನೂ ಹೇಳಲು ಸಾಧ್ಯವಿಲ್ಲ. ತಾಬಲ ವಿಮುಕ್ತರಂತೆ, ಅಸ್ತಮಿತ ಪುಣ್ಯರಂತೆ, ಈ ಶಬ್ದಗಳು ನೇರವಾಗಿ ಕೆಳಗಿಳಿಯುತ್ತವೆ.

ಉದಾಹರಣೆಗೆ—ಇಂಗ್ಲಿಷ್ Libertine ಶಬ್ದವನ್ನು ತೆಗೆದುಕೊಳ್ಳೋಣ, ಈ ಶಬ್ದದ ಇಂದಿನ ಅರ್ಥವೆಂದರೆ ನೀತಿಯಿಲ್ಲದವ; ಲಫಂಗ ಆದರೆ, ಒಂದು ಕಾಲಕ್ಕೆ libertine ಅಂದರೆ ಇಷ್ಟೇನೂ ಕೆಟ್ಟ ಅರ್ಥವಿರಲಿಲ್ಲ. ನಾವು ನೀವು ಕೂಡ libertine ಆಗಿರಬಹುದಿತ್ತು. ಯಾಕಂದರೆ, ಮೂಲತಃ libertine ಅಂದರೆ, "one who was free in religious opinions". ಇಂಥ ಮನುಷ್ಯನು ನಾಸ್ತಿಕನಾಗಬಹುದೇ ಹೊರತು, ಲಫಂಗ ಇಲ್ಲವೆ ಘಟಿಂಗನಾಗುವ ಕಾರಣವಿಲ್ಲ. ಅದರಂತೆ, ಇಂದು ಇಂಗ್ಲಿಷ 'Hooligan' ಅಂದರೆ 'ಗುಂಡಾ'; ಗದ್ದಲಮಾಡುವವ; ಹುಂಬ ಇತ್ಯಾದಿ. ಆದರೆ, ಮೂಲತಃ 'ಹೂಲಿಗನ್' ಅಂದರೆ ಆಯರ್ಲಂಡದಲ್ಲಿಯ ಒಂದು ಮನೆತನ. ೧೯ನೇ ಶತಮಾನದಲ್ಲಿ ಈ ಹೂಲಿಗನ್ನರು ಇತಿಹಾಸದಲ್ಲಿ ಬಹಳ ಗದ್ದಲ ಮಾಡಿದ್ದರಿಂದ, ಈ ಹೊಸ ಅರ್ಥ ಬಂದಿತು. ಇಂಗ್ಲಿಷ್ 'Rivals'— ಎಂದರೆ ಇಂದು ಪ್ರತಿಸ್ಪರ್ಧಿಗಳು; ಎದುರಾಳಿಗಳು. ಈ Rivals ಅನೇಕ ಸಲ ವೈರಿಗಳಾಗುವುದೇ ಹೆಚ್ಚು. ಆದರೆ, ಮೂಲತಃ Rivals—ಅಂದರೆ—ಒಂದೇ ನದಿಯ ಬೇರೆ ಬೇರೆ ಬದಿಗೆ ಇರುವ ಜನ ಎಂದು ಮಾತ್ರ ಅರ್ಥ. "people living by the same 'stream' 'rivus' ". ಇಂಗ್ಲಿಷದ ಛಾಡಿ, ನಿಂದೆ, ಪಿಸು-ಮಾತು ಎಂದು ಹೇಳುವ 'gossip ಶಬ್ದ, ಮೂಲತ. 'god-sib'— ಎಂದರೆ "ದೇವರಿಗೆ ಸಂಬಂಧಪಟ್ಟುದು." ಅನಂತರ, ಸಖ, ಪರಮಮಿತ್ರ

ಎಂಬ ಅರ್ಥವನ್ನು ಕೊಡ-ಕೊಡುತ್ತ ಇಬ್ಬರು " ದೋಸ್ತರು "ರು ಭೆಟ್ಟಿಯಾದಾಗ ಆಡುವ 'ಪಿಸು-ಮಾತಿನ' ಅರ್ಥವನ್ನು ಕೊಡಲು ಪ್ರಾರಂಭಿಸಿತು. ಸಂಸ್ಕೃತ 'ದೇವಾನಾಂಪ್ರಿಯ' ಇದ್ದ ಹಾಗೆ—ಇಂಗ್ಲಿಷ್ 'ಬೆಗರ್' ಅಂದರೆ ಮೊದಲು ಭಿಕ್ಷುಕನಲ್ಲ; ಬೆಲ್ಜಿಯಮ್‌ದ Lambart la Begue ಎನ್ನುವವನು ಕ್ರಿ. ಶ. ೧೨೦೦ರಲ್ಲಿ ಸ್ಥಾಪಿಸಿದ ಧರ್ಮಪಂಥಕ್ಕೆ ಸೇರಿದವ.

ಕನ್ನಡದ ಓಜ ಶಬ್ದ ತೆಗೆದುಕೊಳ್ಳೋಣ; 'ಓಜ' ಇದು ಉಪಾಧ್ಯಾಯದ ತದ್ಭವ. ಓಜ ಎಂದರೆ ಗುರು. ' ನಾಡವರೊವಜರ್ ' ಎಂದು ನೃಪತುಂಗನೂ, ಅಗಸ್ತ್ಯನನ್ನು 'ವಿಂಧ್ಯದೋಜ'ನೆಂದು ಮುದ್ದಣನೂ ಸಂಬೋಧಿಸುತ್ತಾರೆ. ಪಂಪಭಾರತದಲ್ಲಿ " ಶಸ್ತ್ರವಿದ್ಯೆ-ಗೊವಜನ್ ನೀನಾಗು ಕುಂಭೋದ್ಭವಾ " ಎಂದು ಬರುತ್ತದೆ. ಇದರ ಮೇಲಿಂದಲೇ, ಒವಜುಗೆಯ್ ಎಂದರೆ ಪಾಠ ಹೇಳು ಎನ್ನುವ ಧಾತು ಹುಟ್ಟಿಕೊಂಡಿತು. 'ಬವರದೊಳ್ ಏಂ ಬಲ್ಲಮ್ ಕರಮ್ ಒವಜುಗೆಯ್ಯಲ್ ' ಎಂದು ಪಂಪಭಾರತ. ಆದರೆ, ಈ ಮೂಲದ ಉನ್ನತ ಅರ್ಥ ಇಂದು ಮಸುಳಿಸಿ ಓಜ ಎಂದರೆ ಅಕ್ಕಸಾಲಿಗ ಎಂದು ಮಾತ್ರ ಹೇಳುತ್ತದೆ. ಇದರಂತೆ, 'ಅಸುರ' ಶಬ್ದ "ಅಸುರಾ ದೈತ್ಯದೈತ್ಯೇಯಾ ದನುಜೇಂದ್ರಾರಿ ದಾನವಃ" ಎಂದು ಅಮರ ಹೇಳುತ್ತದೆ. ಆದರೆ ಮೂಲತಃ 'ಅಸುರ' ಎಂದರೆ ಕೇವಲ ಇದರ ವಿರುದ್ಧಾರ್ಥವಿದ್ದಿತು. ಮೂಲತಃ ' ಅಸುರ' ಎಂದರೆ ದೇವರು— ಶಕ್ತಿಮಾನ್. (ವೇದದಲ್ಲಿ ಅಸುರ್ಯಮ್=ಸಾಮರ್ಥ್ಯ) ಆರ್ಯರ ಪರ್ಯಟನದ ಕಾಲಕ್ಕೆ ಇರಾಣದಲ್ಲಿ ನೆಲೆಸಿದ ಒಂದು ಪಂಗಡವು ಈ ಅಸುರ ಶಬ್ದವನ್ನು ಅಹುರ-ಅಹುರಮಜ್ದ ಎಂದು ರೂಪಾಂತರಿಸಿಕೊಂಡರು. ಆದರೆ, ಹಿಂದುಸ್ಥಾನಕ್ಕೆ ಬಂದ ಆರ್ಯರ ಮತ್ತೊಂದು ವರ್ಗದವರು ಇರಾಣಿಯರ ಈ ದೇವರ ಚೇಷ್ಟೆಯನ್ನು ಪ್ರಾರಂಭಿಸಿ, ಅವನನ್ನು ' ರಾಕ್ಷಸನನ್ನಾಗಿ ' ಮಾಡಿದರು. ಹೀಗಾಗಿ ' ಅಸುರ ' ' ರಾಕ್ಷಸನಾದ '. ನಂತರ ಇದರ ನಿಷೇಧದ ' ಅ ' ವರ್ಣ ಹೋಗಿ ' ಸುರ ' ಎಂದರೆ ' ದೇವರು ' ಎಂದು ಅರ್ಥ ಬಂದಿತು. ಆದರೆ, ನಿಜವಾಗಿ 'ಸುರಾಸುರರು'—ಅನ್ನುವಲ್ಲಿ ದ್ವಿರುಕ್ತಿ ದೋಷವಿದೆಯೆಂದೇ ಹೇಳಬೇಕು. ಇದೂ ಒಂದು ಬಗೆಯ ' ಕೂಡಲ-ಸಂಗಮ '.

ಇದರಂತೆ, ಪೆದ್ದ ಶಬ್ದ ಪೆದ್ದ ಎಂದರೆ ಇಂದು ಹೆಡ್ಡ, ಮೂರ್ಖ, ಮಂಕು. ಆದರೆ ನಿಜವಾಗಿ, ಪೆದ್ದ ಎಂದರೆ ಪಿರಿಯ, ಹಿರಿಯ, ಪಂಡಿತ. ಪೆದ್ದ ದೇವರ ಹೆಸರು. ತಿರುಪತಿಯ ವೆಂಕಟರಮಣನನ್ನು " ಪೆದ್ದ" ಎಂದು ಕರೆಯುತ್ತಾರಂತೆ. ಅಲ್ಲಸಾನಿ ಪೆದ್ದನು ಸುಪ್ರಸಿದ್ಧ.

ಹಾಗೇ, ಬೆಪ್ಪ ಎನ್ನುವ ಶಬ್ದವೂ ಮೇಲಿನ ಕೆಟ್ಟ ಅರ್ಥವನ್ನೇ ಸೂಚಿಸುತ್ತದೆ. ಆದರೆ, ಮಾನ್ಯ ಮುಳಿಯ ತಿಮ್ಮಪ್ಪಯ್ಯನವರ ಪ್ರಕಾರ ಈ ಶಬ್ದ ಕೇವಲ ಜನಾಂಗವಾಚಕವಾಗಿ ಆರ್ಯರನ್ನು ಉಳಿದು ಬಂದ ಗುಣಾಢ್ಯನನ್ನು ಸೂಚಿಸುತ್ತದೆಂದು ಅಭಿಪ್ರಾಯ. ಇಂದಿಗೂ ಅನಾಗರಿಕ, ಮುಗ್ಧ ಎನ್ನುವ ಅರ್ಥದಲ್ಲಿ 'ಬೆಳ್ವಾಳ್' ಶಬ್ದದ ಪ್ರಯೋಗವಿದ್ದುದನ್ನು ನೋಡಬಹುದು. " ಕೃಷ್ಣೋರಗನಂ ಪಿಡಿವ ಬೆಳ್ವಾಳ್ " ಅಥವಾ " ನೊಂದ ಸಿಂಗದ ಮೇಲೆ ಬೆರಗರಿಯದ ಬೆಳ್ವಾಳ್ ಪಾಯ್ವಂತೆ " ಇತ್ಯಾದಿ. ಅನಂತರ ಹೇಮಚಂದ್ರನು * ತನ್ನ ದೇಸಿ ನಾಮಮಾಲೆಯಲ್ಲಿ " ಭೂಅಗಹಿಏಸು (ಭೂತಗೃಹೀತೇ) ವಪ್ಪೋ ", " ಗಹಗಹಿಏ (ಗೃಹ ಗ್ರಹೀತೇ) ವೆಪ್ಪೋ ", " ವೆಪ್ಪೋ ಸಂ ಉವೋಚ ಪಿಶಾಚಾಕ್ರಾಂತೇ "— ಎಂದು ಮೊದಲಾಗಿ ಹೇಳಿದನು. ಹೀಗಾಗಿ, ಕೇವಲ ಜನಾಂಗವಾಚಕವಾದ ಶಬ್ದ, ಮಂಕು, ಮೂಢ ಹೆಡ್ಡ, ದಡ್ಡ, 'ಬೆಪ್ಪ', ಎನ್ನುವ ಅರ್ಥವನ್ನು ಸೂಚಿಸುವಂತಾಯಿತು.

* ಮುಳಿಯ ತಿಮ್ಮಪ್ಪಯ್ಯ—'ನಾಡೋಜ ಪಂಪ'.

ಇದರಂತೆ, 'ಅಡಕೆ' ಶಬ್ದ. ಇಂದಿಲ್ಲದಿದ್ದರೂ ನಾಲ್ಕಾರು ವರ್ಷಗಳ ಹಿಂದೆ ಅಡಕೆಗೆ ಏನೂ ಮಾನ ವಿರಲಿಲ್ಲ; ಬೆಲೆಯಿರಲಿಲ್ಲ. ಅಂತಲೇ, "ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು"—ಎಂದು ಕೊಂಡೆವು. ಆದರೆ, ಹಲವು ಪಂಡಿತರ ಪ್ರಕಾರ ಅಡಕೆಗೂ ಕೂಡ, (ಕವಡಿಯಷ್ಟೇ ಇರಲೊಲ್ಲದೇಕೆ), ಒಂದು ಬೆಲೆಯಿತ್ತು. ಅಡಕೆ ಚಲಾವಣೆಯ ಒಂದು ನಾಣ್ಯವಾಗಿದ್ದಿತು. ಶ್ರೀ. ಶಂ. ಬಾ. ಜೋಶಿ ಅವರ ಪ್ರಕಾರ, ಮರಾಠಿಯಲ್ಲಿ ಬರುವ "ಕೋಕ್ರು ಹವ ಕಾಯ್? ಕೋಕ್ರು? ಕಿತಕ್ಯಾಲಾ? ಅಡಕ್ಯಾಲಾ" ಇದರ ಮೇಲಿಂದ ಅಡಕೆಗೂ ಒಂದು ಚಲಾವಣೆಯ ಬೆಲೆ ಇದ್ದಿತೆಂದು ಊಹೆ. ಪಿ. ಸಿ. ಬಾಗ್ಚಿ ಅವರ ಪ್ರಕಾರ ಅಡಕೆಯ ಈ ನಾಣ್ಯ-ಬೆಲೆ ಆಸ್ಟ್ರೊ-ಏಶಿಯಾಟಿಕ್ ಪ್ರಭಾವ. ಅವರ ಪ್ರಕಾರ ಇದು ಇಂಡೋನೇಶಿಯಾದಿಂದ ಪ್ರಾರಂಭವಾಯಿತು. "Possibly, the origin was from Indonesia, whence apparently the use of ಸುಪಾರಿ (areca-nut) spread to India as well as the Pacific".* ಈ ಅಡಕೆಯ ಬೆಲೆ ಎಂದು ಮತ್ತು ಹೇಗೆ ಕಡಮೆ ಆಯಿತೆಂಬುದನ್ನು ಹೇಳುವುದು ಕಠಿಣವಾದರೂ, ಹತ್ತನೆಯ ಶತಮಾನದ ಪಂಪಭಾರತದ ಹೊತ್ತಿಗೆ ಈ ಅಪಕರ್ಷ ಪ್ರಾರಂಭವಾದಂತೆ ಕಾಣುತ್ತದೆ. ಪಂಪಭಾರತ ೨-೪೬ರಲ್ಲಿ "**ಒಂದಡಕೆಯುಮ್** ಇಲ್ಲ ಕೈಯೊಳ್ ಎರೆದಮ್ ಶ್ರುತಪಾರಗಮ್" ಎಂದು ಬರುತ್ತದೆ. ಪ್ರಾಣ್ಯನಾದರಸ್ಮರಣೆಯಲ್ಲಿ ೧೩ನೆಯ ಶತಮಾನದ ಕೇಶಿರಾಜನು "ಮಾನಸರಮ್ **ಪುಲ್ಗೆ** (ಕಷ್ಟಮಾಗೆ) ನೆನೆವಮ್"–ಎಂದು ಹೇಳಿದರೆ ೧೬ನೆಯ ಶತಮಾನದ ಭಾಷಾಭೂಷಣಕಾರನು "**ಅಡಕೆಗೆ** ಸಮನಾಗಿ ನೆನೆವಮ್" "ಆತನಮ್ **ಒಂದಡಕೆಗೆ** ಕೊಳ್ವಮ್" ಎಂದೂ ಹೇಳುತ್ತಾನೆ.

ಇದರಂತೆ, 'ಹಾರುವ' 'ಭೂರಿ' 'ಪುಣ್ಯತಿಥಿ' 'ಶನಿ' 'ಪಡಿಸಣಿ' 'ಪಿತೃವನ'—ಮೊದಲಾದ ಶಬ್ದಗಳು.

ಅನ್ಯಮತೀಯರು ಬ್ರಾಹ್ಮಣರ ಬಗ್ಗೆ ಚೇಷ್ಟೆ ಮಾಡಬೇಕಾದಾಗ ಅಣಕದಲ್ಲಿ ಸಾಮಾನ್ಯವಾಗಿ 'ಹಾರುವ' ಎಂದು ಹೇಳುವುದುಂಟು. ಬ್ರಾಹ್ಮಣನಿಗೂ 'ಹಾರುವ' ಎನ್ನಿಸಿಕೊಳ್ಳಬೇಕಾದರೆ, ಸ್ವಲ್ಪ ಅಪಮಾನ; ತುಂಬಾ ಕೋಪ ಆದರೆ, ನಿಜವಾಗಿ ಇದಕ್ಕೇನೂ ಕಾರಣವಿದ್ದಂತಿಲ್ಲ. ಯಾಕಂದರೆ, 'ಹಾರುವ' ಶಬ್ದದ ಮೂಲರೂಪ 'ಪಾರ್ವ'—ಎಂದು ಇದ್ದಿತು. ಹಳಗನ್ನಡ ಸಾಹಿತ್ಯದಲ್ಲೆಲ್ಲ ಇದೇ ರೂಪ ಸಿಕ್ಕುತ್ತದೆ. ಪಾರ್ ಧಾತುವಿನ ಮೇಲಿಂದ (ನಿರೀಕ್ಷಿಸು-ಕಾಣು-ಸೆರಗಂ ಬೆರಗಂ ಪಾರಪೆ ಪ್ರತಾಪಿ-ಇ) ಪಾರ್ವ ಬಂದಿತು. ಕನ್ನಡ 'ಪಾರ್ವ', ಸಂಸ್ಕೃತ 'ದ್ರಷ್ಟಾರ'ರಿಗೆ ಸಮನಾದುದು. ದ್ರಷ್ಟಾರರು, ಜ್ಞಾನವುಳ್ಳವರು, ಎನ್ನುವುದು ಪಾರ್ವದ ಅರ್ಥ. ಇದರ ಸ್ತ್ರೀರೂಪ 'ಪಾರ್ವಂತಿ' 'ಪಾರ್ವತಿ'. ಆದರೆ 'ಪಾರ್ವಂತಿ' ಮಾತ್ರ ಎಂದೋ ಸತ್ತು, 'ದ್ರಷ್ಟಾರ'ನಾದ 'ಪಾರ್ವ' ಕುಭೋಗವನ್ನು ಪಡೆದು ಬೈಗಳ 'ಹಾರುವ'ನಾದ.

'ಭೂರಿ'—ಎಂದರೆ ಹೆಚ್ಚಿನದು; ದೊಡ್ಡದು. ಆದರೆ ಭೂರಿ—ಭೋಜನದ ಕೂಡ ಸಂಪರ್ಕ ಬೆಳಸಿ, ಶ್ರಾದ್ಧದ ಸಮಯ ಬಂದಾಗೆಲ್ಲ ಭೂರಿಭೋಜನವಾಯಿತು. ಅನಂತರ, ಇದರ ಮುಂದಿನ ಭೋಜನ ಕೂಡ ಹೋಗಿ, 'ಭೂರಿ' ಅಂದರೆ ಸಾಕು; ಶ್ರಾದ್ಧದ ಭೋಜನವಾಯಿತು. ಈಗ, ಯಾರೂ ಮಕ್ಕಳ ಹುಟ್ಟಿದ ದಿವಸದಲ್ಲಾಗಲೀ, ದೀಪಾವಳಿಯ ಶುಭಪ್ರಸಂಗದಲ್ಲಾಗಲೀ, 'ಭೂರಿ'ಗೆ ಆಮಂತ್ರಿಸುವದಿಲ್ಲ. ಇದು ಅಪಸವ್ಯ.

ಅಪಸವ್ಯವನ್ನೇ ತೆಗೆದುಕೊಳ್ಳೋಣ; ಅಪಸವ್ಯ ಎಂದರೆ ಸವ್ಯದ ವಿರುದ್ಧ. ಆದರೆ ಇಂದು ಮೈಲಿಗೆ-ಸೂತಕ-ಅಶುದ್ಧ-ಎನ್ನುವ ಅರ್ಥವನ್ನು ಮಾತ್ರ ಈ ಪದವು ಸೂಚಿಸುತ್ತದೆ.

* P. A. and P, D. Intr XVIII.

ಪುಣ್ಯತಿಥಿಯೆಂದರೆ—ಪುಣ್ಯದ ತಿಥಿ—ದಿವಸ. ಆದರೆ ಈಗ ಯಾವ ಬದುಕಿದ್ದವರಿಗೂ ಪುಣ್ಯತಿಥಿ ಬಾರದು. ಅದರ ಇಂದಿನ ಅರ್ಥ 'ಸತ್ತ ದಿವಸ' ಎಂದು ಮಾತ್ರ.

ನವಗ್ರಹಗಳಲ್ಲಿ ಒಂದಾದ, 'ಶನಿ'—ಒಳ್ಳೆಯದನ್ನು ಕೂಡ ಮಾಡಬಹುದಾದರೂ, 'ಶನಿ ಕಾಟ' ದಲ್ಲಿ ಮಾತ್ರ ನಿಂತಿದೆ. 'ಪ್ರತಿಸ್ಪರ್ಧಿ' 'ಸೆಣಸುವವ' 'ಆಹ್ವಾನಿಸುವವ' ಎನ್ನುವ 'ಪಡಿಸಣಿ' ಇಂದು ಏನೇನೋ ರೂಪವನ್ನು ಪಡೆದಂತೆ ಕಾಣುತ್ತದೆ. ಇದೂ ಕೂಡ, ಪ್ರತಿ-ಪಡಿ, ಶನಿ-ಸಣಿ-ಇದರಿಂದ ಬಂದುದೆಂದು ತೋರುತ್ತದೆ. ಅಥವಾ 'ಪ್ರತೀಕ್ಷಣ' ಎಂದೂ ಇರಬಹುದು. ಪಡಿಸಣ, ಪಡಿಸಲ್-ಎಂಬ ರೂಪಗಳೂ ಉಂಟು. ಹದಿನೈದನೆಯ ಶತಮಾನದ ಕುಮಾರವ್ಯಾಸನಲ್ಲಿ,

"ಮಲ್ಲಗೆದ್ದನು ಯೀಕ್ಷಣದಿ ಗೆಲ-
ವಿಲ್ಲ ವಲಲನಿಗಾಯ್ತು ಹೋಹೋ-
ನಿಲ್ಲು **ಪಡಿಸಣಿ** ಗೆದ್ದನಾಗಲೆ ಗೆದ್ದನಾವಲಲ!"—

ಎಂದು ಬರುತ್ತದೆ.

ಪಿತೃವನ—ಎಂದರೆ ಇಂದು ಸ್ಮಶಾನ, ಪಿತೃಗಳು ವಾಸಿಸುವ ಸ್ಥಾನ.

ಹೆಣ್ಣುಮಕ್ಕಳ ಬಾಯಲ್ಲಿ ಇಂದಿಗೂ 'ಚೇಷ್ಟೆಮಾಡುವವರು' 'ಛಿದ್ರಾನ್ವೇಷಿಗಳು' 'ಗಿಲ್ಲಿಮಾಡುವವರು'—'Scandal-mongers' ಎನ್ನುವ ಅರ್ಥದಲ್ಲಿ 'ಹಗಣ್ಯಾರು' ಎನ್ನುವ ಶಬ್ದವನ್ನು ಕೇಳಿರಬಹುದು. ಸಾಮಾನ್ಯವಾಗಿ, ಯಾರ ಬಗ್ಗೆಯಾದರೂ ಕೃತಕವಾದ ಆಸ್ಥೆಯನ್ನು ತೋರಿಸುವಲ್ಲಿ ಈ ನಟನೆಯ 'ಹಗಣ್ಯಾರು' ಎನ್ನುವ ಶಬ್ದವನ್ನು ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಇಂಥ ಕೃತಕವಾದ ಆಸ್ಥೆಯಲ್ಲಿ ಈ ನಟನೆಯ 'ಹಗಣ್ಯಾರು' 'ಹಗಣೆ'ಯರು ಶ್ರೇಷ್ಠರು. ಇವರು ವ್ಯಕ್ತಪಡಿಸುತ್ತಿರುವ ಭಾವನೆಗಳು ಇವರ ಮನಸ್ಸಿನಲ್ಲೇ ಇರುವದಿಲ್ಲ. ಇಂಥ 'ನಟನೆ'ಯ ಜನರು 'ಹಗಣೆಯರು'. ಆದರೆ, ನಿಜವಾಗಿ ನೋಡಿದರೆ ಈ ಶಬ್ದದ ಉಗಮ ಸಂಸ್ಕೃತದಿಂದ. ಸಂಸ್ಕೃತದಲ್ಲಿ ನಾಟಕಗಳ ಪ್ರಭೇದಗಳಲ್ಲಿ 'ಪ್ರಕರಣ' ಎಂಬುದು ಇದೆಯಷ್ಟೇ; ಅದೇ ಕನ್ನಡದಲ್ಲಿ ತದ್ಭವವಾಗಿ 'ಪಗರಣ' ಎಂದಾಯ್ತು. ಹಳ್ಳಿಯ ಬಯಲಾಟ ಎನ್ನುವ ಅರ್ಥದಲ್ಲಿ ೧೩ನೆಯ ಶತಮಾನದ ಕೇಶಿರಾಜನಲ್ಲಿ 'ನಾಜ್ ಪಗರಣ' ಎಂದು ಪ್ರಯೋಗವಿದೆ. ಈ 'ಪಗರಣವೇ' ದುರಂತವಾದಾಗ 'ಹಗರಣ'—ತೊಂದರೆ, ಕೀಟಲೆ, ಅವಾಂತರ—ವಾಗುತ್ತದೆ. ಈ ರೀತಿ 'ಹಗರಣ'ದಲ್ಲಿ ಪಾತ್ರವಹಿಸುವವರು—ನಟಿಸುವವರು, ತಮ್ಮ ಭಾವನೆಗಳೇನೇ ಇರಲಿ;—ಹಗರಣರು–ಹಗಣರು. ಅವರ ಸ್ತ್ರೀರೂಪ 'ಹಗಣೆಯರು' — ಹೆಣ್ಣುಮಕ್ಕಳ ಕೃತಕ —'ನಾಟಕೀ ಜನ'.

ಇದರಂತೆ, ಅಗ್ಗ, ನ್ಯಾಯ, ಪಂಚಾಯತಿ, ನಾತ, ಬೈರಾಗಿ, ಗೋಸಾವಿ, ಶೌಚ, ಗಂಗಾಭಾಗೀರಥಿ ಸಾಲಾ, ಮುದ್ರಾರಾಕ್ಷಸ, ಅನಾಹುತ-ಇತ್ಯಾದಿ ಶಬ್ದಗಳು. 'ಅಗ್ಗ' ಎಂದರೆ 'ಅರ್ಘ'-ಶ್ರೇಷ್ಠ; ಬೆಲೆಯುಳ್ಳ. ಲಕ್ಷ್ಮೀಶನಲ್ಲೂ ಕೂಡ (೧೭ನೆಯ ಶತಮಾನ)—'ಅನ್ನೆಗಮ್ ಬಂದನಗ್ಗದ ಸಮಿತ್ಪುಷ್ಪಂಗಳಮ್' ಎಂದು ಪ್ರಯೋಗವುಂಟು ರಾಘವಾಂಕನ (ಸು. ಕ್ರಿ ಶ ೧೨೫೦) ಕಣ್ಣಿಗೆ ಅಯೋಧ್ಯಾನಗರಿಯ ದುರ್ಗವು ಕಾಣುವುದು ಹೀಗೆ: "ಕಾಲಭೈರವನ ಕದನದ ಕಳನೊ, ಭೂಪತಿಯ ಭಾಳಾಕ್ಷನೊ, ಪ್ರಳಯಕಾಲದ **ಅಗ್ಗದ** ಸಿಡಿಲ ಹೋಳೊ—" ಇತ್ಯಾದಿ ಇಲ್ಲಿ 'ಅಗ್ಗ' ಅಂದರೆ ಪುನಃ ಶ್ರೇಷ್ಠ ಆದರೆ, ಇಂದು 'ಅಗ್ಗ' ಅಂದರೆ ತೀರ ಇದರ ವಿರುದ್ಧಾರ್ಥವನ್ನು ಕೊಡುತ್ತದೆ ಅಗ್ಗ ಅಂದರೆ ಹೀನ, ಬೆಲೆಯಿಲ್ಲದ, ಸೋವಿ ದರದ—ಎಂದು ಅರ್ಥ.

ನ್ಯಾಯ ಅಂದರೆ ಸರಿಯಾದ ನಿರ್ಣಯ. ನ್ಯಾಯ–ಅನ್ಯಾಯ. ಆದರೆ, ಇಂದು 'ನ್ಯಾಯ ತೆಗೆಯುವುದು' ಅಂದರೆ ಜಗಳ ತೆಗೆಯುವುದು. ಬಹುಶಃ ಕರ್ಣಾಟ ಕಲಹಪ್ರಯೋಗ!

ಇದರ ಸಮೀಪದ ಪಂಚಾಯತಿಯೂ ಅಷ್ಟೇ. ಪಂಚಾಯತಿಯ ಜನ ನ್ಯಾಯ ಬಗೆಹರಿಸುವವರು ಆದರೆ, ಇಂದು ಇಲ್ಲದ 'ಕಿತಾಪತಿ' ಮಾಡುವ ಜನ—ಇಲ್ಲದ 'ಪಂಚೇತಿ'ಯವರು.

ನಾತ ಎಂದರೆ ಮೊದಲು ಸುವಾಸನೆ. 'ನಱುಗಂಪು' ಶಬ್ದದಲ್ಲಿ ಇನ್ನೂ ಆ ಮೂಲದ ಅವಶೇಷ ವನ್ನು ಕಾಣಬಹುದು. ಆದರೆ, ಇಂದು 'ನಾತ' ಎಂದರೆ 'ಹೊಲಸು ನಾರುವುದೇ'! ಗುಲಾಬಿಹೂವು 'ನಾತ ಕೊಡಲಾರದು.'

ಬೈರಾಗಿ—ಎಂದರೆ ಇಂದು ಭಿಕ್ಷೆಬೇಡುವ ಬಾವಾ—ಬೈರಾಗಿ. ಆದರೆ, ಅದರ ಮೂಲಾರ್ಥ 'ವೈರಾಗ್ಯ'ವುಳ್ಳವ. 'ವಿರಾಗಿ' ರಾಗ–ಲೋಭಗಳಿಲ್ಲದವ. ಶ್ರೀ. ಬೇಂದ್ರೆ ಅವರ 'ಪರಾಗ' ಕವನದಲ್ಲಿಯ,

'ಬಾ, ಭೃಂಗವೆ, ಬಾ ವಿರಾಗಿಯಂದದಿ
ಭ್ರಮಿಸುವಿ ನೀನೇಕೆ?
ಕಂಪಿನ ಕರೆಯಿದು ಸರಾಗವಾಗಿರೆ,
ಬೇರೆಯ ಕರೆ ಬೇಕೆ?'

ಎನ್ನುವ 'ವಿರಾಗಿ'ಗೂ, ಈ ನಮ್ಮ ಬೈರಾಗಿಗೂ ಎಲ್ಲಿಯ ಅಂತರ!

ಗೋಸಾವಿಯೂ ಅಷ್ಟೇ; 'ಗೋಸಾವಿ' ಎಂದರೆ ಗೋ-ಸ್ವಾಮಿ, ಗೋವುಗಳ ಅಧಿಪತಿ. ಇಂದು ಕೇವಲ ಸನ್ಯಾಸಿ, ಬೈರಾಗಿ. ಮರಾಠಿಯಲ್ಲಿ ಮಾತ್ರ ಒಂದು ಕಾಲಕ್ಕೆ 'ಗೋಸಾವಿ' ಶಬ್ದವು "ಯಜಮಾನ" 'ಗಂಡ' ಅನ್ನುವ ಅರ್ಥವನ್ನೂ ಕೊಡುತ್ತಿದ್ದಿತು. ಉದಾ: "ಅಮಾತುಮಾ ಏಕ ಗೋಸಾವಿ" (ನಮ್ಮಿಬ್ಬರಿಗೂ ಒಬ್ಬನೇ ಯಜಮಾನನಿದ್ದಾನೆ)

ಶೌಚ ಅಂದರೆ ಶುದ್ಧಿ, ಶುಚಿ. ಆದರೆ ಇಂದಿನ ಅರ್ಥ ಗೊತ್ತೇ ಇದೆ. ಪಾವನೆಯರಾದ ಗಂಗೆ–ಭಾಗೀರಥಿಯರು ಬೇರೆ ಬೇರೆ ಇದ್ದಾಗ ತಮ್ಮ ಮಾನವನ್ನೇನೋ ಕಾಯ್ದುಕೊಂಡರು. ಆದರೆ, ಕೂಡಿ ಮತ್ತೇನನ್ನೋ ಸೂಚಿಸಿದರು. 'ಸಾಲಾ'—ಶಬ್ದ ಮರಾಠಿಯಲ್ಲಿ ಬೈಗುಳ. ಕನ್ನಡದಲ್ಲಿಯೂ ಹಲವು ಜನ ಇದನ್ನು ಉಪಯೋಗಿಸುತ್ತಿದ್ದಾರೆ. 'ಕಾಯ್‌ರೇ ಸಾಲಾ'. ಆದರೆ, ಡಾ. ಶ್ರೀಮತಿ ಇರಾವತಿ ಕರ್ವೆ ಅವರ ಪ್ರಕಾರ ಈ ಶಬ್ದ "ಹೆಂಡತಿಯ ತಮ್ಮನ-ಶಾಲಕನ-ಕಾಣಿಕೆ." ಹೆಂಡತಿಯ ತಮ್ಮನಿಗೆ ಅಕ್ಕನ ಗಂಡನ ಹತ್ತಿರ ಎಷ್ಟೇ ಮರ್ಯಾದೆ ಇರಲಿ; ಕಾಲಕ್ರಮೇಣ ಅವನು 'ಸಾಲಾ' ಮಾತ್ರ ಆದನು. "The word 'ಸಾಲಾ' seems to be the same as 'ಶಾಲಕ', 'ಶಾಲ'". 'ಮುದ್ರಾರಾಕ್ಷಸ'.... ...ಮಂತ್ರಿ. ಆದರೆ, ಇಂದು ಅಚ್ಚುಗಾರರ ಮುದ್ರಣದೋಷ ಮಾತ್ರವಾಯಿತು. 'ಅನಾಹುತ'—ಆಹ್ವಾನಿಸದೆ ಇದ್ದುದು. ಆದರೆ, ಇಂದು ವಿಪತ್ತು; ಅಪಘಾತ; ತೊಂದರೆ.

ಕನ್ನಡದ ಹೆಣ್ಣುಮಕ್ಕಳ ಬೈಗುಳಲ್ಲಿ "ಮುಂಡೆ" ಎನ್ನುವ ಪದವಿದೆಯಷ್ಟೇ! ಇದರ ಮೂಲಾರ್ಥ ಏನಿರಬಹುದು? ಈಗಂತೂ ಇದರ ಅರ್ಥ ಸ್ಪಷ್ಟವೇ ಇದೆ.

ಡಾ. ಕಿಟೆಲ್ ಅವರು ಈ ಪದದ ವಿವಿಧಾರ್ಥಗಳನ್ನು ವಿವರಿಸುವಾಗ, ಇದರ ಅರ್ಥವು "ವಿಧವೆ, ವಿಶ್ವಸ್ತೆ, ವಾಪಿತೆ" ಎಂದು ಮೊದಲಾಗಿ ಹೇಳುತ್ತಾರೆ. ಅವರ ಪ್ರಕಾರ ಇದು ಸಂಸ್ಕೃತ ಶಬ್ದ. "ಮುಣ್ಡೆಯ ಮದುವೆಗೆ ಮೂವತ್ತು ವಿಘ್ನ"; "ಕಳ್ಳನ ಹೆಣ್ಡತಿ ಎಂದಿದ್ದರೂ ಮುಣ್ಡೆ"; "ಬೀಸುವ ಮುಣ್ಡೆಗೆ ಮುಕ್ಕಿದ್ದೇ ಲಾಭ" ಎಂದು ಮೊದಲಾಗಿ ಇವಳ ಬಗ್ಗೆ ಹತ್ತಾರು ಗಾದೆಗಳಿವೆ. ಡಾ. ಕಿಟೆಲ್ ಅವರು ಈ ಪದದ ಅರ್ಥವನ್ನು "a close-shaved woman; a widow" ಎಂದು ಹೇಳುತ್ತಾರೆ. ರಿಸ್ಲೆ ಅವರು ಕೂಡ "The name **ಮುಂಡಾ** is of Sanskrit origin; it means headman of a village"—ಎಂದು ಹೇಳುತ್ತಾರೆ.

ಹಾಗಾದರೆ, ಈ ಪದಕ್ಕೆ ಈ ಅರ್ಥವು ಬರಲು ಕಾರಣವೇನು? 'ಮುಂಡ' ಸಂಸ್ಕೃತ ಧಾತುವಿನಿಂದ ಬಂದುದೇ?—ಅಥವಾ ಈ ಪದವು ಸಂಸ್ಕೃತಕೋಶಕ್ಕೆ ಸೇರುವುದಕ್ಕಿಂತ ಮೊದಲಿನ ಇತಿಹಾಸವನ್ನೇನಾದರೂ ನಾವು ಕಾಣಬಹುದೇ—?—ನೋಡೋಣ.

ಪ್ರೊ. ಸಿಲ್ವೇನ್ ಲೆವಿ ಅವರು ಸೂಚಿಸುವಂತೆ ಈ ಪದವು ಇಂದಿನ ಮುಂಡ ಭಾಷೆಗಳನ್ನಾಡುವ ಜನಾಂಗವನ್ನು ಮಾತ್ರ ಸೂಚಿಸುತ್ತಿರಬಹುದೇ?—ಕನ್ನಡದ "ಬೆಪ್ಪ" ಪದವು ಈ ರೀತಿ ಜನಾಂಗವನ್ನು ಹೇಗೆ ಸೂಚಿಸುತ್ತಿತ್ತೆಂಬುದನ್ನು ಈ ಮೊದಲೇ ನೋಡಿದ್ದೇವೆ. 'ಮುಂಡ' ಪದವು ಜನಪದವಾಚಕವಾಗಿ ಕ್ವಚಿತ್ಪ್ರಯುಕ್ತವಾಗಿದ್ದರೂ, ಮಹಾಭಾರತದ VI. 56; 2410 ರಲ್ಲಿ, ಭೀಷ್ಮರು ಯುದ್ಧಮಾಡಿದ ಕ್ರಮವನ್ನು ವರ್ಣಿಸುವಾಗ ಜನಪದವಾಚಕವಾಗಿಯೇ ಇದೆ.

ಅನಂತರ, III 51, 1991 ದಲ್ಲಿಯೂ VII 119-4728 ದಲ್ಲಿಯೂ ಭಾರತದ ವಾಯುವ್ಯ ಭಾಗದಲ್ಲಿಯ ಜನರನ್ನು "ಮುಂಡ" ಎಂದರೆ "ತಲೆ ಬೋಳಿಸಿಕೊಂಡವರು"—ಎಂಬರ್ಥದಲ್ಲಿಯೇ ಕರೆಯಲಾಗಿದೆ. ವಿಶೇಷತಃ ಕಾಬೂಲ ಪ್ರಾಂತದ ಕಾಂಬೋಜರ ಬಗ್ಗೆ ಹೀನಾಯವಾಗಿ ಈ ಪದವನ್ನು ಪ್ರಯೋಗಿಸಲಾಗಿದೆ. ಪ್ರೊ. ಸಿಲ್ವೇನ್ ಲೆವಿ ಅವರು ಹೇಳುವಂತೆ—

> "The Hindus who are bound by their religion to wear a tuft (**ಚೂಡ**) on the top of their head, despised the foreign populations, who shaved their whole head; 'shaved like a Greek', 'shaved like a Kamboja' (**ಯವನ ಮುಂಡ, ಕಾಂಬೋಜ ಮುಂಡ**) were expressions in vogue from the time of Panini" †

ಹೀಗಾಗಿ, ಮೂಲತಃ ಜನಾಂಗಸೂಚಕವಾಗಿದ್ದು, ಇಂಥ ಪರಂಪರೆಯ ಮೂಲಕ ಜುಗುಪ್ಸಿತವಾಗಿ ಈ ಪದವು ಇಂಥ ಹೀನಾರ್ಥವನ್ನು ಕೊಡುತ್ತಿರಬಹುದೇ? ವಿಚಾರಿಸಬೇಕು. ಇದಕ್ಕೆ ಸಾಧಕವಾಗಿ "ಮುಂಡೆ" ಸ್ತ್ರೀರೂಪ ದೊರೆತಂತೆ, "ಮುಂಡ" ಎನ್ನುವ ಪುರುಷವಾಚಕ ರೂಪವೂ ದೊರೆತರೆ ಹೆಚ್ಚು ಬಲ ಬಂದೀತು. ಅಲ್ಲಿಯ ವರೆಗೆ, ನಾವೂ ಪ್ರೊ. ಲೆವಿ ಅವರು ಹೇಳಿದ ಹಾಗೆ ಅನಿಶ್ಚಿತತೆಯನ್ನೇ ಅವಲಂಬಿಸಬೇಕು. *

ಕನ್ನಡದ 'ಕೂಳು' 'ಕೊಜೆ' ಶಬ್ದಗಳೂ ಅಷ್ಟೇ; ಇಂದು 'ಕೂಳು' ಎಂದರೆ ಬೇಡಾದವರಿಗೆ ಒಟ್ಟುವ ಅನ್ನ. **ಕೂಳು**—ಬಕ್ಕರಿಸುವವರು, ತಿನ್ನಸಿಗರಕಿಂತ ಕಡಮೆ ದರ್ಜೆಯವರು. ಇಂದು ಯಾರೂ

† P. A. & P. D. 87

* "I do not know for what reason Mr. Risley says that the word **ಮುಂಡ** is of Sanskrit origin." **ಅದೇ, ಪು. ೮೬.**

ಪಂಡಿತ ಜವಾಹರಲಾಲ ನೆಹರೂರನ್ನಾಗಲೀ, ವಲ್ಲಭಭಾಯಿಯವರನ್ನಾಗಲೀ "ಕೂಳಿಗೆ" ಕರೆಯಲಾರರು. ಹಾಗೆ ಕರೆದವರು ಉದ್ಧಟರು. ಆದರೆ, ಒಂದು ಕಾಲಕ್ಕೆ ಯಾರನ್ನೂ ಹೀಗೆ 'ಕೂಳಿಗೆ' ಕರೆಯಬಹುದಾಗಿತ್ತು. ಅದರಲ್ಲಿ ಯಾವ ಅಪಮಾನದ ಪ್ರಶ್ನೆಯೂ ಇರಲಿಲ್ಲ. ಯಾಕಂದರೆ, ಒಂದು ಕಾಲಕ್ಕೆ 'ಕೂಳು' ಎಂದರೆ 'ಅನ್ನ' 'ಆಹಾರ'—ಎಂಬ ಸಾಮಾನ್ಯಾರ್ಥ. 'ತಂಗುಳ' – ತಂಗೂೞ್ — ತಂಪಾದ ಕೂಳು (ಅನ್ನ) ಎನ್ನುವ ಶಬ್ದದಲ್ಲೂ ಇದೇ ಅರ್ಥವನ್ನು ಇನ್ನೂ ಕಾಣಬಹುದು. ಮಡು-ಕೂೞ್ ಅಂದರೆ ಮಡಗಿದ—ಇಟ್ಟಂಥ ಅನ್ನ; ಅವಶೇಷ. ಪಂಪನಲ್ಲಿ, ಭರತನಿಗೆ ರಾಜ್ಯವನ್ನೊಪ್ಪಿಸಿ, ಅವನ ಕೈಂಕರ್ಯದಲ್ಲಿರುವುದೆಂದರೆ ಅವನ ಸೋದರರ ಪ್ರಕಾರ "ಅಕ್ಕಿಕೊಟ್ಟು **ಮಡು-ಗೂೞ್**" ಉಣ್ಣುವಂತೆ. ವೊಡ್ಡಾರಾಧಣದಲ್ಲಿ 'ಬೈಕಂ ತಿಱಿದುತಂದ **ಕೂೞ್**'; "ಉಪಾಧ್ಯಾಯಂಗೆ ಕಟವೆಯ **ಕೂೞುಂ** ತುಪ್ಪಮುಂ ತೋಯಮುಮ್ ಉಣಲ್ ಕೊಟ್ಟು ಕುಮಾರನಂ ಓದಿಸುಗೆ" ಎಂದು ಅಶೋಕ ಚಕ್ರವರ್ತಿಯು ಆದೇಶಿಸುತ್ತಾನೆ. ಅಶೋಕ ಮಹಾರಾಜನು ನಮ್ಮ ಇಂದಿನ ಕೂಳನ್ನೇನೂ ಹಾಕಿರಲಿಕ್ಕಿಲ್ಲವಷ್ಟೇ? ಹಾಗೇ "ಬಸಿಱ್ಕೂೞ್" ಮೊದಲಾದ ಪ್ರಯೋಗ ಬರುತ್ತವೆ. ಪಂಪನಲ್ಲಿ ಪುನಃ "ಮನೆಯ ಕೂೞೆ (ಅನ್ನ,) ನುಡಿಯಿಸೆ ನುಡಿದೈ" (ಸು. ೯೫೪) "**ಕೂೞ್ಕುದಿಯೆ** ಮೇಗೆ ಸಿಡಿಲ್ದ ಅಗುಳಂತೆ" ಎಂದೂ (೧೧.೧೫೩) ಬರುತ್ತವೆ. ನಾಗಚಂದ್ರನಲ್ಲಿ – "ಸಪತ್ನಿಯರ **ಇಕ್ಕುಂಗೂೞಿಗೆ** ಬಯಸಿ ಪಾರ್ದಿರ್ಪರ್"— ಎನ್ನುವಲ್ಲಿ ಶಬ್ದ ಕೆಳಗಿಳಿಯುತ್ತಿದ್ದರೂ, ಇನ್ನೂ 'ಅನ್ನ'ದ ಅರ್ಥವನ್ನೇ ಕೊಡುತ್ತಿರುವುದನ್ನು ಕಾಣಬಹುದು. ರನ್ನನಲ್ಲಿ ಬರುವ 'ಕೂೞ್—ಕುದಿಗೊಳ್' ಎನ್ನುವ 'ಪಡಿ-ನುಡಿ'ಯು ಕೂಡ ಈ ಅನ್ನದ ಸಾಮಾನ್ಯಾರ್ಥವನ್ನೇ ತೋರಿಸುತ್ತದೆ. ಆದರೆ, ೧೨೬೦ರ ಕೇಶಿರಾಜನು '**ಒರ್ಪಿಡಿಗೂೞುಂ** ಸಿತಗನ ಕಪ್ಪಡಮುಂ' ಎನ್ನುವಲ್ಲಿ ಅವಧಾರಣೆ ಬದಲಾಗುತ್ತಿರುವುದನ್ನು ಗುರುತಿಸಬಹುದು. ಕ್ರಿ.ಶ. ೧೨೩೦ರ ರಾಘವಾಂಕನಲ್ಲಿ '**ಮೊಟ್ಟೆಗೂಳ್**' ಎಂದರೆ ಮೊಟ್ಟೆಯಲ್ಲಿ ಕಟ್ಟಿದ ಬುತ್ತಿ ಎಂಬರ್ಥದಲ್ಲಿ ಬರುತ್ತದೆ; "ಬಿಟ್ಟತಲೆ,....ಕುಂಟುವ ಪದವ್, ಜಿನ್ನಬಿಗುಹಳಿದು ಎಳಲ್ವ **ಮೊಟ್ಟೆಗೂಳ್**, ಎಡಹಿಕೆಡೆದೊಡೆದ ಮೊಳಕಾಲ್" ಇ. ಇಂದಿನ 'ರೈತ ಗಳಿಸಿದ್ದು ನ್ಯಾಯಕ್ಕಾಯಿತು; ಹಾರುವ ಗಳಿಸಿದ್ದು **ಕೂಳಿಗಾಯ್ತು**' ಎನ್ನುವಲ್ಲಿಯಂತೂ 'ಕೂಳಿನ' ಕು-ಭೋಗ ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಾಗಿ, ಸಂಸ್ಕೃತ 'ಅನ್ನ' ಬಂದಾಗ, ಕನ್ನಡದ "ಕೂೞು" ಕಂಗೆಟ್ಟು ಬೇಡಾದ ಅನ್ನವಾಯಿತು.

'ಕೋಱ'ಯೂ ಅಷ್ಟೇ; ಇದರ ಇಂದಿನ ರೂಪವೆಂದರೆ 'ಕೋರಿ' ಕೋರಿಯುಟ್ಟವರೆಲ್ಲರೂ ಬಡವರೇ; ಹೈದರಾಬಾದದ ನಿಜಾಮರು 'ಕೋರಿ'ಯನ್ನು ಉಡಲಾರರು. ಅಂಥ ಕುಬೇರನ ಸಂಪತ್ತು ಇದ್ದವರಿಗೆ ಕೋರಿ–ಹರಕು–ಕೋರಿ ಏಕೆ?—ಆದರೆ, ಒಂದು ಕಾಲಕ್ಕೆ, '**ಕೋರಿ**' ಎಂದರೆ ಬರೀ ಅರಿವೆ–ವಸ್ತ್ರ. ಉಡು-ಗೊಱೆ=ಉಡುವ ಕೊಱೆ ಎಂಬ ಶಬ್ದದಲ್ಲೂ, ಕೊಱೆ+ಅನ್ನ=ಕೋರ್ಯಾನ್ನ ಎನ್ನುವಲ್ಲೂ ಇನ್ನೂ ಇದರ ಮೂಲವನ್ನು ಕಾಣಬಹುದಾಗಿದೆ.

ಸಂಸ್ಕೃತದಲ್ಲಿ 'ಜಾರ' ಶಬ್ದವಿದೆಯಷ್ಟೇ; ಇಂದು ಅದರ ಅರ್ಥ—ನೀತಿಯಿಲ್ಲದವ, ಸ್ತ್ರೀಲಂಪಟ, ಸಿತಗ, ಜೋಡ, ಪಾಣ್ಬ – ಎಂದು. ಸ್ತ್ರೀವ್ಯಸನಿಯಾಗಿ, ಅನೀತಿಮಾರ್ಗವನ್ನು ಹಿಡಿದವರೆಲ್ಲರೂ 'ಜಾರರು.' ಯಾರಿಗಾದರೂ ಕಾರಣವಿಲ್ಲದೆ 'ಜಾರ' ಎಂದು ಕರೆದರೆ ಇಂದು ಇಂಡಿಯನ್ ಪಿನಲ್ ಕೋಡ ಪ್ರಕಾರ ಅಪರಾಧ; ಕೋರ್ಟ್ ಕಾಣಬೇಕಾದೀತು! ... ಆದರೆ, ಒಂದು ಕಾಲಕ್ಕೆ 'ಜಾರ'ರಾಗುವುದೂ ಒಂದು ಸುದೈವವಾಗಿತ್ತು. ಯಾಕಂದರೆ, ಸಂಸ್ಕೃತದಲ್ಲಿ ಮೂಲತಃ '**ಜಾರ**' ಎಂದರೆ ಪ್ರಿಯ, ಓಪ, lover. ವಿಶೇಷತಃ ಅವಿವಾಹಿತ ಹುಡುಗೆಯರನ್ನು ಪ್ರೀತಿಸುವವರ ಬಗ್ಗೆ ಈ ಶಬ್ದವನ್ನು ಉಪಯೋಗಿಸಲಾಗುತ್ತಿತ್ತು. ಕೆಲ ಕೆಲವು

ವಿವಾಹಪದ್ಧತಿಗಳಲ್ಲಿ, ವಿವಾಹೇಚ್ಛುಗಳಾದ ಹುಡುಗೆಯರನ್ನು ಅವರ "ಜಾರರ" ಬಗ್ಗೆ ಕೇಳುವ ಸಂಪ್ರದಾಯವಿತ್ತು. ಅವಳನ್ನು "ಕಃ ತೇ ಜಾರಃ ?",—ಎಂದು ಕೇಳಿದ ನಂತರ 'ವಿವಾಹ' ನಡೆಯುತ್ತಿತ್ತು ಆದರೆ, ಇಂದಿನ ಜಾರರು ! Oh what a fall was there my countrymen ! ಎಂದು ಹೇಳುವಂತಿದೆ.

ಇದರಂತೆಯೇ, ತೊತ್ತು, ಕೂಸು. ಸೀರೆ, ಕುಪ್ಪಸ, ಕೆಲಸಿಗ, ಹಡಪ, ಅಬ್ಬೆ, ಅಮ್ಮ–ಶಬ್ದಗಳು.

ಸಂಸ್ಕೃತ 'ದುಹಿತಾ'—ಎಂದರೆ ಮೊದಲು ಬರಿಯ ಹಾಲು ಹಿಂಡುವವಳು, ಈಗ ಮಗಳು.

ತೊತ್ತು ಎಂದರೆ ಇಂದು 'ದಾಸಿ'; ಸ್ತ್ರೀಪರಿಚಾರಕಳು. ಆದರೆ, ಹಿಂದಿನ ಕಾಲಕ್ಕೆ ಗಂಡಸರೂ 'ತೊತ್ತಾ'ಗಿರಬಹುದಾಗಿತ್ತು. ಒಟ್ಟು 'ಸೇವಕ' ಎಂದು ಅರ್ಥ. ಬಸವಣ್ಣನವರು "ನಿಮ್ಮ ತೊತ್ತಿನ ತೊತ್ತಯ್ಯ"—ಎಂದು ತಮ್ಮನ್ನು ಕರೆದುಕೊಳ್ಳುತ್ತಾರೆ. ಕೇಶಿರಾಜನು ಮಾತ್ರ ತೊತ್ತು ಶಬ್ದವು ತನ್ನ ಒಂಬತ್ತು ಲಿಂಗಗಳಲ್ಲಿ ಪುಂ-ಸ್ತ್ರೀಯಾಗಿದೆಯೆಂದು ಹೇಳಿ, "ಇವಂ ದೇವರ ತೊಬ್ಬು"; "ಇವಳ್ ದೇವರ ತೊಬ್ಬು"—ಎಂದು ಉದಾಹರಣೆ ಕೊಡುತ್ತಾನೆ.

'ಕೂಸು'—ಎಂದರೆ, ಈಹೊತ್ತು 'ಮಗು', 'ಶಿಶು' ಎಂದು ಅರ್ಥ. ಅದು ಗಂಡಿರಬಹುದು; ಅಥವಾ ಹೆಣ್ಣಿರಬಹುದು. ಆದರೆ ಒಂದು ಕಾಲಕ್ಕೆ, 'ಕೂಸು' ಎಂದರೆ 'ಹೆಂಗಸು'; 'ಸ್ತ್ರೀ'. ಇಂದಿಗೂ, 'ಕೊಡ–ಗೂಸಿ'ನಲ್ಲಿ ಈ ಅರ್ಥವನ್ನು ಕಾಣುತ್ತೇವೆ. ಹತ್ತನೆಯ ಶತಮಾನದ (ಸು. ೯೪೦) ವೊಡ್ಡಾರಾಧಣದಲ್ಲಿ "ಜಾತ್ಯಂಧೆಯಪ್ಪ ಪೊಲೆಯರ **ಕೂಸಂ** ಕಂಡು" (ಸುಕುಮಾರ ಸ್ವಾಮಿಯ ಕಥೆ); "ಇತ್ತ ಜಾತ್ಯಂಧೆಯಪ್ಪ **ಕೂಸುಮ್ ಅಹಿಂಸಾವ್ರತಂಗಳಂ ಮೇಲ್ಕೊಂಡು ತಮ್ಮ ಮನೆಗೆ ಪೋದಳ್**" - ಎಂದು ಮೊದಲಾಗಿ ಪ್ರಯೋಗಗಳಿವೆ. ಇಲ್ಲಿ ಸರ್ವತ್ರ 'ಕೂಸು' ಎಂದರೆ ದೊಡ್ಡವಳಾದ ಹೆಣ್ಣುಮಗಳು. ಅಹಿಂಸಾವ್ರತಗಳನ್ನು ಸ್ವೀಕರಿಸಿ ಮನೆಗೆ ತಾನಾಗಿಯೇ ಹೋಗುವ ಕೂಸು ಶಿಶುವಾಗಲಾರದು. ಪಂಪಾದಿಗಳಲ್ಲೂ ಕೂಡ ಇದೇ ಪ್ರಯೋಗವಿದೆ. ಪಂಪನಂತೂ, 'ಕೂಸು' ಶಬ್ದವನ್ನು ಸ್ಪಷ್ಟವಾಗಿ 'ಸ್ತ್ರೀ'—ವಯಸ್ಸಿಗೆ ಬಂದ ಹುಡುಗೆ—ಎನ್ನುವ ಅರ್ಥದಲ್ಲೇ ಉಪಯೋಗಿಸುತ್ತಾನೆ:—"ಮಗಳಮ್ ಈವೆನಪ್ಪೊಡೆ **ಕೊಡ–ಗೂಸು**" III. 25 "**ಕೊಡ-ಗೂಸುತನದ** ಭಯದಿಂ ನಡುಗುವ ಕನ್ನಿ**ಕೆಯ** ಬೆಮರ" I. 92 "ಅಭಿಮನ್ಯುಗೆ ಕೂಸಮ್ ಕೊಟ್ಟ ಜಟ್ಟಿಗಮ್ ವಿರಾಟಮ್" ಇತ್ಯಾದಿ. (9. 96) ಬಸವಣ್ಣನವರು ಯಾವ ಬಾಹ್ಯ ವಿರೋಧವನ್ನೂ ಲೆಕ್ಕಿಸದೆ, ತಮ್ಮ ಆತ್ಮಸಾಕ್ಷಿಯಾಗಿ ಆಹ್ವಾನಿಸುತ್ತಿದ್ದಾರೆ — "ಯಾರು ಮುನಿದೆಮ್ಮನೇನು ಮಾಡುವರು ?— ಊರು ಮುನಿದು ಎಮ್ಮನೇನು ಮಾಡುವದು ?—ನಮ್ಮ ಕುನ್ನಿಗೆ **ಕೂಸ** ಕೊಡಬೇಡ ನಮ್ಮ ಸೊಣಗಂಗೆ ತಳಿಗೆಯಲಿಕ್ಕ ಬೇಡ. ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ ?" ಇಲ್ಲಿ ಬಸವಣ್ಣನವರು ತಮ್ಮ 'ಕುನ್ನಿಗೆ' ಅಪೇಕ್ಷಿಸಿದ ಕೂಸು ಶಿಶುವಲ್ಲ. ನಾಗಚಂದ್ರನಲ್ಲಿ ರಾವಣನು ವಾಲಿಯ ಮಗಳನ್ನು ಮದುವೆಗಾಗಿ ಕೇಳಿದಾಗ ವಾಲಿಯ ಮಗಳನ್ನು ಆ ರೀತಿ ಕೊಡಲಾರದಾಗಿ ನಿರ್ಧರಿಸುತ್ತಾನೆ:—"ತಗದು; ಎನಗೆ ಉನ್ಮಾರ್ಗಿಗೆ ಕೂಸು–ಗುಡಲ್; ದಶಕಂಧರಂ ಮದಾಂಧಂ" ಪುನಃ, "ಕುಡೆ **ಕೂಸಮ್** ಉದ್ಧತಂಗಾಮ್" "ಅದಱಿಂದಾತಗೆ ಆನೀಯದೆ ಕೂಸಮ್ ಕಾಳೆಗಕ್ಕೆ ಮೆಯ್ತುರುವೆಮ್" - (೫.೪೫ ೩). ಹೀಗಾಗಿ, ಹೆಣ್ಣು+ಕೂಸು, ಎನ್ನುವಲ್ಲಿ ದ್ವಿರುಕ್ತಿಯೆಂದೇ ಹೇಳಬೇಕು. ಶಬ್ದಮಣಿದರ್ಪಣದ ಪ್ರಯೋಗ ವಾಕ್ಯದಲ್ಲಿ ಮಾತ್ರ 'ಕೂಸು' ಎಂದರೆ ಕಿರಿದು, ಚಿಕ್ಕದು ಎಂಬ ಅರ್ಥದಲ್ಲಿ ಉಪಯುಕ್ತವಾಗಿದೆ. "ಪ್ರಾಯಂ **ಕೂಸಾದೊಡೆ** ಅಭಿಪ್ರಾಯಂ ಕೂಸಕ್ಕುಮೆ ?"

ಕನ್ನಡದ 'ಸೀರೆ'---ಸಂಸ್ಕೃತ ಚೀರದ ತದ್ಭವ. ಚೀರವೆಂದರೆ ಬಟ್ಟೆ; ವಸ್ತ್ರ; ಉಡುಗೆ. ಆದರೆ ಇಂದು ಕನ್ನಡದಲ್ಲಿ ಸೀರೆ ಎಂದರೆ ಹೆಣ್ಣುಮಕ್ಕಳು ಮಾತ್ರ ಉಟ್ಟುಕೊಳ್ಳುವ ವಸ್ತ್ರ. ಆದರೆ, ಹಿಂದಿನ ಕಾಲದಲ್ಲಿ ಕನ್ನಡ ಗಂಡಸರೂ 'ಸೀರೆ'ಯನ್ನು ಉಡಬಹುದಾಗಿತ್ತು. ಕ್ರಿ. ಶ. ಸು. ೯ಅಂರ ವೊಡ್ಡಾರಾಧಣದಲ್ಲಿ 'ಸೀರೆ' ಎಂಬ ಪದವು 'ವಸ್ತ್ರ' ಎನ್ನುವ ಈ ವಿಶಾಲಾರ್ಥದಲ್ಲೇ ಉಪಯೋಗಿಸಲ್ಪಟ್ಟಿದೆ. ಉದಾ: ಕಾಷ್ಠಕೂಟನ ಊಳಿಗದಲ್ಲಿರುವ ದುರ್ದೈವಿ ನಂದಿಮಿತ್ರನು ಅನೇಕ ದಿವಸ ಅವನ ಸೇವೆಯನ್ನು ಮಾಡಿ, ಆ ಕಾಷ್ಠಕೂಟನಿಗೆ ಶ್ರೀಮಂತಿಕೆ ಬಂದ ಮೇಲೆ ಅವನಲ್ಲಿ ವಿಜ್ಞಾಪಿಸಿಕೊಳ್ಳುತ್ತಾನೆ:—"ಅಯ್ಯಾ ಎನಗುಡಲಿಲ್ಲ ಏನುಮ್; ಒಂದು ದಮ್ಮಕ್ಕಾದೊಡಮ್ **ಸೀರೆಯುಮ್** ಕುಡಿಯಿಮ್" ಎಂದು. ಇಲ್ಲಿ ಪುರುಷನಾದ ನಂದಿಮಿತ್ರನು ಕೇಳುವುದು 'ಸೀರೆ'ಯನ್ನು. ಮೇಲೆ ವಿವರಿಸಿದ ಬಸವಣ್ಣನವರ ವಚನದಲ್ಲಿ, ತಮ್ಮ ಆಮಿಷದ ವಿಷಯವನ್ನು ಹೇಳುವಾಗ ಅವರು ತಮ್ಮ ಮನಸ್ಸಿನ ಸ್ಥಿತಿಯು ಅಸಗನ ಹಾಗೆ ಇದೆಯೆಂದು ಹೇಳುತ್ತಾರೆ: "ಊರ **ಸೀರೆಗೆ** ಅಸಗ ಬಡಿವಡೆದಂತೆ, ಹೊನ್ನೆನ್ನದು, ಮಣ್ಣೆನ್ನದು ಎಂದು ಮರುಳಾದೆ." ಪುನಃ ತಮ್ಮ ನಿಸ್ಪೃಹತೆಯನ್ನು ಸಾರುವಾಗ ಬಸವಣ್ಣನವರು— "ಹೊನ್ನಿನೊಳಗೊಂದೊರೆಯ, **ಸೀರೆ**ಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ; ನಿಮ್ಮ ಪುರಾತನರಾಣೆ"—ಎಂದು ಹೇಳುತ್ತಾರೆ. ತನ್ನ ಮಿತ್ರನ ಪ್ರೇಮಾನುರಾಗದ ಬಗ್ಗೆ ಮಹಾಶ್ವೇತೆಯಲ್ಲಿ ಬಿನ್ನಹ ಮಾಡಿಕೊಳ್ಳುವದೆಂದರೆ ಕಪಿಂಜಲ ಋಷಿಕುಮಾರನಿಗೆ "ಬಗೆವೊಡೆ ಕಟ್ಟದೀ ಜಡೆಗೆ ತಕ್ಕುದೊ? ಪೊದೆದಿರ್ದ **ನಾರಸೀರೆ**ಗೆ ದೊರೆಯೊ ತಪಕ್ಕಿದು ಅನುರೂಪಮೊ"—ಎಂದೆನಿಸುತ್ತದೆ (ಕಾದಂಬರಿ). ನಾಗಚಂದ್ರನ (ಕ್ರಿ. ಶ. ೧೧೦೦) ರಾವಣನು ಸೀತಾದೇವಿಯನ್ನು ಒಲಿಸಿಕೊಳ್ಳುವುದಕ್ಕಾಗಿ ಹೇಳುವ ಮಾತೆಂದರೆ:— "ದಿಕ್ಪಾಲಕರ್ ಜೆನ್ನಿತ್ತಿಕ್ಕಿದ **ಚೀಲದಿಂ** (ಚೀರ=ವಸ್ತ್ರ) ಸಮೆದ ಕೇಳೀತಲ್ಪದೊಳ್ ನಿದ್ರೆಗೆಯ್"—ಎಂದು ಬರುತ್ತದೆ. ಕುಮಾರವ್ಯಾಸನ ದುರ್ಯೋಧನನು ಹೊಡೆತ ತಿಂದಾಗ –"ಅವನ ಭಾರಿಯ ವಲ್ಲಿ–**ಸೀರೆಗಳು** ಅವಯವದ ರಕುತದೊಳು ತೋದುವು"–ಎಂದು ಕವಿಯು ವರ್ಣಿಸುತ್ತಾನೆ. (ವಿರಾಟಪರ್ವ ೯.೭೪). ಇಲ್ಲೆಲ್ಲ 'ಸೀರೆ' ಶಬ್ದವು 'ವಸ್ತ್ರ' ಎನ್ನುವ ಸಾಮಾನ್ಯಾರ್ಥದಲ್ಲಿ ಪ್ರಯೋಗವಾದದ್ದನ್ನು ಕಾಣಬಹುದು. ಅದನ್ನು ಕೇವಲ ಸ್ತ್ರೀಯರ ವಸನಕ್ಕೆ ಮಾತ್ರ ಅಂಟಿಸಿದ್ದು ಆ ಶಬ್ದದ ಸಂಕೋಚ–ಅಪಕರ್ಷ.

ಕುಪ್ಪಸವೂ ಅಷ್ಟೇ; ಮೊದಲು ಕುಪ್ಪಸವೆಂದರೆ "ಕವಚ": 'ಜಾಕೀಟು'. ಅದನ್ನು ಗಂಡಸರೂ ಧರಿಸಬಹುದಾಗಿತ್ತು. ಅನೇಕ ಯೋಧರು ಕುಪ್ಪಸಗಳನ್ನು ಧರಿಸಿ ಯುದ್ಧಕ್ಕೆ ಹೋಗುತ್ತಿದ್ದರು. ಉದಾ: ಹರಿಹರ ಕವಿಯು ಚಿತ್ರಿಸಿದ, ಬಸವಣ್ಣನವರು ಧರಿಸಿದ ವೇಷವೆಂದರೆ: "**ಕುಪ್ಪಸದ** ಬೀರಣೆಯ ಬಿನ್ನಣದ ಹಸನಿಗಮ್ ಟೊಪ್ಪಿಗೆಯ ಹೊಜವೇಷದಿಹಪರದ ಲೆಕ್ಕಿಗಮ್" (೫.೫೯). ೧೭ನೆಯ ಶತಕದ ಗೋವಿಂದ ವೈದ್ಯನಲ್ಲಿ "ಕರಡಿಯು ನೈಜೋಕು; ಕಾರ್ಪಾಸ **ಕುಪ್ಪಸ**....ತೋಳ ಪಾವಡೆಯ"—ಎಂದು ವರ್ಣನೆ ಇದೆ. ಮಂಗೇಶರಾಯರ "ಹುತ್ತರಿ ಹಾಡಿ"ನಲ್ಲೂ ಕೂಡ ಇದೇ ಅರ್ಥದಲ್ಲಿ—"ಒಮ್ಮನವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ: ಸುಮ್ಮನಿತ್ತರೊ ದಟ್ಟಿ**ಕುಪ್ಪಸ** ಹಾಡುಹುತ್ತರಿ ಹೇಳಿರಿ"—ಎಂದು ಬರುತ್ತದೆ. ಆದರೆ, ಈಗ?....ಕುಪ್ಪಸ ಧರಿಸುವವ ಗಂಡುಸಾದಾನೇ?....

'ಕೆಲಸಿಗ' ಅಂದರೆ ಈಹೊತ್ತು ಕನ್ನಡದಲ್ಲಿ ವಿಶಿಷ್ಟಾರ್ಥ. ನಿಜವಾಗಿ 'ಕೆಲಸ' ಎಂಬ ನಾಮಪದಕ್ಕೆ 'ಇಗ' ಎನ್ನುವ ತದ್ಧಿತ ಪ್ರತ್ಯಯ ಹತ್ತಿ 'ಕೆಲಸಿಗ' ಅಂದರೆ ಕೆಲಸ ಮಾಡುವವ ಎಂದು ಸಾಮಾನ್ಯಾರ್ಥ. ಆ ರೀತಿ ಪ್ರಾಧ್ಯಾಪಕನಿಂದ ಮೊದಲು ಮಾಡಿಕೊಂಡು ಕಲ್‌ಕುಟಿಗನ ವರೆಗೆ ಎಲ್ಲರೂ ಕೆಲಸ ಮಾಡುವವರೇ; ಕೆಲಸಿಗರೇ. ಆದರೆ, ಇಂದಿನ ಕನ್ನಡದಲ್ಲಿ ಕೆಲಸಿಗ ಎನ್ನುವುದು 'ನಾಪಿಕ, ಹಜಾಮ' ಎನ್ನುವುದರ ಗೌರವ-

ಪೂರ್ಣವಾದ ಪರ್ಯಾಯಪದವಾಗಿದೆ. ಕೆಲಸಿಗನೆಂದರೆ ನಾಪಿಕ. ಕೆಲಸಿಗ ಎಂದರೆ ಈ ಅರ್ಥ ಹೇಗೆ ಬಂತೋ ತಿಳಿಯದು.

ಈ ಮೊದಲೇ ವಿವರಿಸಿದಂತೆ, ತಮಿಳಿನಲ್ಲಿಯಂತೂ ಅವನು ಹೆಸರಿಲ್ಲದವನಾಗಿದ್ದಾನೆ. ಅಷ್ಟೇ ಅಲ್ಲ; ಪಾಪ ಬಡಪಾಯಿ ವೈದ್ಯನ (ಅಂಬಟ್ಟನ್) ಹೆಸರನ್ನು ಅವನಿಂದ ಕಿತ್ತುಕೊಂಡು ನಾಪಿಕನಿಗೆ ಅಂಟಿಸಲಾಗಿದೆ. ಆದ್ದರಿಂದ ತಮಿಳಿನಲ್ಲಿ 'ಅಂಬಟ್ಟನ್' ಎಂದರೆ ನಾಪಿಕ. ನಿಜವಾಗಿ ಆ ಶಬ್ದದ ಅರ್ಥ 'ವೈದ್ಯ' ಎಂದು. ಬಹುಶಃ ಒಂದು ಕಾಲಕ್ಕೆ ನಾಪಿಕರೂ ವೈದ್ಯಕಿ ಮಾಡುತ್ತಿದ್ದುದರಿಂದ ಆ ಹೆಸರು ಅವರಿಗೆ ಹೋಗಿರಬೇಕು. ಮದ್ರಾಸದಲ್ಲಿರುವ ಒಂದು ಸೇತುವೆಯ ಬಗ್ಗೆ ಒಂದು ಮೋಜಿನ ಕಥೆಯನ್ನು ಹೇಳುತ್ತಾರೆ:—ಹಿಂದಕ್ಕೆ ಮದ್ರಾಸದಲ್ಲಿ ಮಿ. ಹ್ಯಾಮಿಲ್ಟನ್ ಎಂಬ ಎಂಜಿನೀಯರರಿದ್ದರಂತೆ! ಅವರ ಹೆಸರಿನಲ್ಲಿ ಒಂದು ಸೇತುವೆಯನ್ನು ಕಟ್ಟಿಸಿ ಹ್ಯಾಮಿಲ್ಟನ್ ಸೇತುವೆ (Hamilton Bridge) ಎಂದು ನಾಮಕರಣ ಮಾಡಿದರಂತೆ. ಆದರೆ, ಅನೇಕ ಇಂಗ್ಲಿಷ ಶಬ್ದಗಳು ನಮ್ಮ ಭಾರತೀಯ ಬಾಯಿಗೆ ಸರಿಹೋಗುವುದಿಲ್ಲವೆಂಬುದು ಗೊತ್ತಿದ್ದ ಮಾತು. ಉದಾ: ಬಂಗಾಲಿ ಜನರ ಬಾಯಿಗೆ Grongerham ಎಂಬ ಹೆಸರು ಹಿಡಿಯದಾಗ 'ಗಂಗಾರಾಮ'ವಾಯಿತು. Ramsay—ರಾಮ್‌ಸಹಾಯ್‌ನಾದ. Ramsay Macdonald ಬಹುಶಃ ರಾಮ್‌ಸಹಾಯ ಮೋಕ್ಡನಲ್ ನಾಗಬಹುದಿತ್ತು. ಅದೇ ರೀತಿ ಸಾಹೇಬರ ಉಚ್ಚಾರ ಮಾಡಲು ಕಠಿಣವಾದಾಗ ಜನರು, ತಮ್ಮ ನಿತ್ಯದ ಜೀವನದಲ್ಲಿರುವ ಶಬ್ದದ ಸಾಹಚರ್ಯದ ಮೂಲಕ 'ಹ್ಯಾಮಿಲ್ಟನ್' ಶಬ್ದವನ್ನು 'ಅಂಬಟ್ಟ' 'ಅಂಬಟ್ಟನ್' ಎಂದು ಮಾರ್ಪಡಿಸಿಕೊಂಡರು. ಆದರೆ, ತಮಿಳಿನಲ್ಲಿ 'ಅಂಬಟ್ಟನ್' ಎಂದರೆ 'ನಾಪಿತ' ಎಂದು ಇದ್ದದ್ದರಿಂದ ಆ ಶಬ್ದ ಪುನಃ ಇಂಗ್ಲಿಷಿಗೆ ಹೋದಾಗ ಅಂಬಟ್ಟನ್ ಸೇತುವೆ (Barber's Bridge)—ಆಗಿ ಹೋಯಿತು! ಹೀಗಾಗಿ ಪಾಪ ಮಿ. ಹ್ಯಾಮಿಲ್ಟನ್ ಸಾಹೇಬರು 'Barber' ಆದರು.

ಹಡಪದವ ಅಂದರೂ ಇಂದು ನಾಪಿಕ, ಹಜಾಮ. ದಡ್ಡ ವಿದ್ಯಾರ್ಥಿಗಳು ಶಾಲೆಗೆ ತೆಗೆದುಕೊಂಡು ಬರುವ ಚೀಲಗಳು ಹಡಪಗಳೆಂದೇ ಅವರ ಗುರುಗಳ ಮತ. ಆದರೆ, ಹಳಗನ್ನಡದಲ್ಲಿ 'ಹಡಪ' ಎಂದರೆ ಈ 'ಕೆಟ್ಟ' ಅರ್ಥವಿರಲೇನೂ ಕಾರಣವಿರಲಿಲ್ಲ. 'ಹಡಪ' ಎಂದರೆ ಸಾಮಾನ್ಯ ಚೀಲ; ಸಂಚಿ. ಅರಮನೆಗಳಲ್ಲಿ 'ಹಡಪಿಗ' ಎಂದು ಸೇವಕರಿರುತ್ತಿದ್ದರು.

ಹರಿಶ್ಚಂದ್ರ ಕಾವ್ಯದ (ಸು. ೧೪೦) ವೀರಬಾಹುಕನಿಗೆ ಹಡಪಿಗನಿದ್ದಾನೆ. "ಮಾಱುವಡೆ, ಕೊಂಡು ಹೊಂಗೊಡುವೆ ನಾನೆಂದು ತನ್ನ **ಹಡಪಿಗನಿಂದ** ಕೇಳಿಸಿದನು." "**ಅಡಪದವನಳ್** ಕೆಲದೊಳ್ ಇರ್ದೊಡೆ"—ಎಂದು ನಾಗವರ್ಮನ ಕಾದಂಬರಿ. ಆದರೆ, ಇಂದು ಈ ಶಬ್ದದ ಕು-ಭೋಗವನ್ನು ಸ್ಪಷ್ಟವಾಗಿ ಕಾಣಬಹುದು.

'ಅಬ್ಬೆ' ಶಬ್ದದ ಸವಕಳಿ ರೂಪವಾದ 'ಅಬೆ' ಎಂಬುದಂತೂ ಇಂದು ಬೈಗುಳ. "ಏನಬೆ ನೋಡಿ ಮಾತಾಡು" ಅಂದರೆ, "ಯಾಕೊ, ಭಾಡ್ಯಾ" ಎನ್ನುವ ಉತ್ತರ ನಿಶ್ಚಿತ. ಆದರೆ, ಹಳಗನ್ನಡದ ಪ್ರಕಾರ ಅಬೆ, ಅಬ್ಬೆ, ಅಂದರೆ, ಸಿಟ್ಟಿಗೇಳುವ ಕಾರಣವಿಲ್ಲವಷ್ಟೇ ಅಲ್ಲ; ಸ್ತ್ರೀಯರು ನಿಜವಾಗಿ ಪ್ರೀತಿ ಮಾಡಬೇಕು. ಯಾಕಂದರೆ, ಹಳಗನ್ನಡದಲ್ಲಿ 'ಅಬ್ಬೆ' ಎಂದರೆ 'ಅವ್ವೆ' 'ಅವ್ವಾ' 'ತಾಯಿ'. ವೊಡ್ಡಾರಾಧಣದಲ್ಲಿ— "—ನಿನ್ನ ಕೈಯಿಂದಮ್ ಕೊಳ್ಳಿ ಪೋ**ಗಬ್ಬಾ**", "ನಿನ್ನಂ ಏಕೆ ಕಾಷ್ಠಕೂಟಂ ಬಡಿದ**ನಬ್ಬಾ** ಎಂದು ಬೆಸಗೊಂಡಡೆ", "ಅರಸಿಗೆಂದರ್—**ಅಬ್ಬಾ** ಇಂದೆಮಗೆ ಉಣಲ್ಕೆ ಬಗೆಯಿಲ್ಲ"— ಈ ಮೊದಲಾಗಿ ಬರುವ ಪ್ರಯೋಗಗಳಲ್ಲಿ 'ಅಬ್ಬಾ' ಎಂದರೆ, 'ತಾಯಿ' ಎಂಬ ಅರ್ಥ ಸ್ಪಷ್ಟವಾಗಿ ಇದ್ದುದನ್ನು ಕಾಣುತ್ತೇವೆ. ಇದರ

ಜೊತೆಗೇ, 'ಅಬ್ಬೆ'ಯ ಇನ್ನೊಂದು ರೂಪವಾದ 'ಅವ್ವಾ' ಪ್ರಯೋಗವನ್ನೂ ಕಾಣಬಹುದು.— "ಸತ್ಯವಾದಿಯ್ರೈ, **ಪೋಗವ್ವಾ** ಎಂದು ಪೇಳ್ದೊಡೆ" (ಸುಕುಮಾರಸ್ವಾಮಿಯ ಕಥೆ). ಪಂಪ-ರನ್ನರಲ್ಲೂ ಹೀಗೇ ಪ್ರಯೋಗವಿದೆ.

ಆದರೆ, ಇಂದು 'ಅಬ್ಬೆ', 'ತಾಯಿ' ಎನ್ನುವ ಶಬ್ದ ಸವಕಳಿ ರೂಪವನ್ನು ಪಡೆದು, ಹೀನತ್ವ-ಬೈಗುಳಿಗೆ ಎಡೆಗೊಟ್ಟಿದ್ದನ್ನು ನೋಡುತ್ತೇವೆ.

ಈ 'ಅಬ್ಬೆ'ಯ ಸಮೀಪದಲ್ಲಿಯೇ ಇರುವ ಇನ್ನೊಂದು ಶಬ್ದವೆಂದರೆ 'ಅಮ್ಮ'. 'ಅಮ್ಮ' ಶಬ್ದದ ಇಂದಿನ ಅರ್ಥ ಗೊತ್ತಿದ್ದದ್ದೇ. ಅಮ್ಮ ಅಂದರೆ ವಿಧವೆ, ಅದೂ ಹೀನಾರ್ಥದಲ್ಲಿ. ಅದಕ್ಕೆ ಬಹುವಚನದ 'ಗಳ್', 'ಗೋಳ್' ಮಾಡಿ, 'ಅಮಗೋಳು' ಎಂದು ಹೇಳುವುದುಂಟು.

ಆದರೆ, ನಿಜವಾಗಿ ನೋಡಿದರೆ, 'ಅಮ್ಮ' ಶಬ್ದದ ಅರ್ಥ 'ತಾಯಿ' ಎಂದು. ಇಂದಿಗೂ ಮೈಸೂರು ಪ್ರಾಂತದಲ್ಲಿ ಈ ಅರ್ಥದಲ್ಲೇ ಉಪಯೋಗಿಸುತ್ತಿದ್ದುದನ್ನು ಕಾಣುತ್ತೇವೆ. ಹಲವು ಜನ ತಮ್ಮ ತಾಯಂದಿರನ್ನು 'ಅಮ್ಮಾ' ಎಂದು ಸಂಬೋಧಿಸುತ್ತಿದ್ದುದು ಗೊತ್ತಿದ್ದ ಮಾತು. ಅಷ್ಟೇ ಅಲ್ಲ; ಒಂದು ಕಾಲಕ್ಕೆ 'ಅಮ್ಮ' ಶಬ್ದವು 'ತಾಯಿ' ಎಂದು ಕೇವಲ ಸ್ತ್ರೀವಾಚಕ ಕೂಡ ಇರಲಿಲ್ಲ. ಅದು ಪುರುಷವಾಚಕವೂ ಆಗಿದ್ದಿತು. **ಅಮ್ಮ ಅಂದರೆ ಅಪ್ಪ–ತಂದೆ**. ಈ ರೀತಿ, ಅಮ್ಮ ಶಬ್ದವನ್ನು 'ತಂದೆ' ಎನ್ನುವ ಅರ್ಥದಲ್ಲಿ ಪ್ರಯೋಗಿಸಿದ್ದಕ್ಕೆ ಹಳಗನ್ನಡದಲ್ಲಿ ಹೇರಳವಾದ ದೃಷ್ಟಾಂತಗಳುಂಟು ಕ್ರಿ. ಶ. ಸು. ೯೪೦ರ ವೊಡ್ಡಾರಾಧಣದಲ್ಲಿ— "ಎಮ್ಮ ಕೊಟ್ಟ ಚಿತ್ರಂಗಳಂ **ನಿಮ್ಮಮ್ಮಂ** ಬಿಸುಡಲ್ವೇಟ್ಟಿ**ನ**ಪ್ಪೊಡೆ, ಪೆಱವುಳಿವಿಸುಡದಿರ್," "ಈತನಮ್ ಏಕೆ ಕೊಲರ್ ಉಯ್ದಪ್ಪ**ರವ್ವಾ** ಬೆಸಗೊಳ್ಳಿಮ್ ಎನೆ," (ಸುಕುಮಾರ ಸ್ವಾಮಿಯ ಕಥೆ) ಎಂದು ಮೊದಲಾಗಿ 'ಅಮ್ಮ' ಪದವು 'ಅಪ್ಪ' ಎನ್ನುವ ಅರ್ಥದಲ್ಲಿ ಪುರುಷವಾಚಕವಾಗಿ ಪ್ರಯುಕ್ತವಾದದ್ದನ್ನು ಕಾಣಬಹುದು. ಹತ್ತನೆಯ ಶತಮಾನದ ಉಳಿದ ಗ್ರಂಥಗಳಲ್ಲೂ ಇದೇ ರೀತಿ ಪ್ರಯೋಗವಿದ್ದದ್ದನ್ನು ಕಾಣುತ್ತೇವೆ. ಪಂಪಭಾರತದಲ್ಲಿ "ಇದಲ್ತು ಇದ**ಱಮ್ಮನುಮ್** ಎನ್ನನಾಂಪುದೇ ?" ಎಂದು ಬರುತ್ತದಲ್ಲದೆ, '**ಚಿಕ್ಕಪ್ಪ**' ಎನ್ನುವ ಅರ್ಥದಲ್ಲಿ ೯. ೧೦೨ರಲ್ಲಿ '**ಕಿತ್ತಮ್ಮ**' ಎಂದು ಪ್ರಯೋಗವಿದೆ. ಪುನಃ, "ಕೇಳ್ ಕರ್ಣ, ನಿನ್ನಾದಿಯೊಳಬ್ಬೆ ಕೊಂತಿ, ನಿನ**ಗಮ್ಮನ್** ಅಹರ್ಪತಿ" ಎಂದು ೯.೬೪ರಲ್ಲಿ ಬರುತ್ತದೆ.

ಹನ್ನೊಂದನೆಯ ಶತಮಾನದ ರನ್ನನ ಗದಾಯುದ್ಧದಲ್ಲೂ ಕೂಡ, "ತಾನಕ್ಕೆ ತನ್ನ**ಮ್ಮನ**ಕ್ಕೆ ಇಸಲ್ ಅಂಬಮ್ ತಿರುವಾಯ್ಗೆ ತಂದಜೀವರೇ ?" — ಎಂದಲ್ಲದೆ, "ಅಣಮ್ **ಅಮ್ಮನಲಂ**ಪುಮ್ ಎತ್ತ ವೋದುದೋ ! "—ಎಂದೂ, "ಎಮ್ಮ**ಮ್ಮನಪ್ಪ** ಶಂತನುಗಮ್ ಯೋಜನಗಂಧಿಯೆನಿಸಿದ ಸತ್ಯವತಿಗಮ್ ಚಿತ್ರಾಂಗದನುಮ್ ವಿಚಿತ್ರವೀರ್ಯನುಮ್ ಎಂಬಿರ್ವರ್ ತನೂಜರಾದರ್ "–ಎಂದೂ ಬರುತ್ತವೆ. ಈ ಕಾಲದಲ್ಲಿ ಚಲುಕ್ಯ ಚಕ್ರವರ್ತಿಗೆ "**ಅಮ್ಮನ** ಗಂಧವಾರಣ" – ಎಂದು ಬಿರುದು. ನಾಗವರ್ಮನ ಕಾದಂಬರಿಯಲ್ಲಿ "ಬಾಱಿಸ್ಕೆಯೆ ಲೇಸೆನುತ್ತುಮಿರ್ಪನ್ನೆಗಮ್ **ಅಮ್ಮ**, ನಿನ್ನಮ್ ಒಡಗೊಂಡು ಮುಱುಂಗುವ ಕಾಲವಾದುದೋ ! "—ಎಂದು ಪುರುಷವಾಚಕವಾಗಿಯೇ ಬರುತ್ತದೆ (೧.೮೩) ಕ್ರಿ. ಶ. ೧೧೦೦ರ ನಾಗಚಂದ್ರನಲ್ಲು ಕೂಡ ಇದೇ ಅರ್ಥದಲ್ಲಿ "ಎನ್ನನುಜಂಗೆ ಎನ**ಗಮ್ಮ**-ನಿತ್ತುದನ್ ವಸುಧೆಯುಮ್ ಈವೆಮ್"— ಎಂದು ಬರುತ್ತದೆ. (೩.೩೩) 'ಅಲ್ಲಮ' 'ಮಲ್ಲಿತಮ'–ಮೊದಲಾದಲ್ಲಿ ಬರುವ 'ಮ' ಪ್ರತ್ಯಯವು ಈ 'ಅಮ್ಮ' (ತಂದೆ) ಶಬ್ದದ ಸವಕಳಿರೂಪವೇ ಎಂದು ಹೇಳುತ್ತಾರೆ. ತಮಿಳಿನಲ್ಲಿ 'ಅಮ್ಮಾನ್' ಪದವು 'ತಂದೆ' ಎನ್ನುವ ಅರ್ಥದಲ್ಲಿದೆಯಂತೆ. (ತಿರುವಾಚಗಮ್)

'ವಾಚಾಳಿ' 'ಬಜು ಮಾತುಗಾರ' ಎನ್ನುವ ಅರ್ಥದಲ್ಲಿ ಬರುವ 'ಬಾಷ್ಕಳ' ಶಬ್ದವೂ ಕೂಡ, 'ಬಾಸ್ಕಲ' ಎನ್ನುವ ಋಷಿಪರಂಪರೆಯಿಂದ ಬಂದಿತೆಂದು ಒಂದು ಅಭಿಪ್ರಾಯ. ಈ ಪಂಥ ಬೇಡಾದವರು ಇವರನ್ನು ಕೇವಲ 'ವಾಚಾಳಿ'ಗಳೆಂದು ಹೀಗೆ ಸಂಬೋಧಿಸುತ್ತಿದ್ದರಂತೆ. ಮರಾಠಿಯಲ್ಲಿಯೂ ನಾವು ಈ ಶಬ್ದವನ್ನು ಕಾಣುತ್ತೇವೆ. ದಿವಂಗತ ಕೆರೂರ ವಾಸುದೇವಾಚಾರ್ಯರ 'ಇಂದಿರಾ' ಕಾದಂಬರಿಯಲ್ಲಿಯ ಡಾಕ್ಟರನ ಹೆಸರು 'ಬಾಷ್ಕಳಪಂತ ಡಾಕ್ಟರು' ಎಂದೇ ಇದೆ.

ಕೊಂಕಣಿಯಲ್ಲಿ 'ಕಾಕಾ' ಅಂದರೇನು ಗೊತ್ತೇ? 'ಕಾಕಾ' ಅಂದರೆ ಅಲ್ಲಿ 'ಚಿಕ್ಕಪ್ಪ' ಅಥವಾ 'ದೊಡ್ಡಪ್ಪ' ಅಲ್ಲ; ತಂದೆಯ ತಂಗಿ ಅಥವಾ ಅಕ್ಕ —"ಮಾಯಿಚೀ ಭಯೀಣ ಮಾವಶೀ—ವಾಯಟಾ ಬರ್‍ಯಾಕ ಪಾವಶೀ;—ಪಾಯಚೀ ಭಯೀಣ ಕಾಕಾ–ಕಿತ್ಯಾಕ್ ಚ ಮಾನಕಾ" ಅಂದರೆ "ತಾಯಿಯ ತಂಗಿ 'ಮಾವಶಿ' ಸುಖದುಃಖಗಳಲ್ಲಿ ಉಪಯುಕ್ತಳಿದ್ದಾಳೆ. ತಂದೆಯ ತಂಗಿ 'ಕಾಕಾ'—ಏನಾದರೂ ನನಗೆ ಬೇಡ" ಈ ಬಗ್ಗೆ ಡಾ. ಇರಾವತಿ ಕರ್ವೆ ಅವರು "Those Konkani speaking people of Goa, who are called Bardeskar call the father's sister ಕಾಕಾ" ಎಂದು ಬರೆಯುತ್ತಾರೆ.

ಹೀಗಾಗಿ, ಮೇಲೆ ವಿವರಿಸಿದ ಈ ಶಬ್ದಗಳೆಲ್ಲ ಒಂದು ಕಾಲಕ್ಕೆ ಶ್ರೀಮಂತ ಮನೆತನದಲ್ಲಿ ಹುಟ್ಟಿ, ಒಳ್ಳೇ ರೀತಿಯಾಗಿ ಬೆಳೆದು, ಸುಖವಾದ ಆಹಾರವನ್ನುಂಡು, ಐಷಾರಾಮದಲ್ಲಿದ್ದು, ಯಾವುದೋ ದುರ್ದೈವದ ಮೂಲಕ ಅಪಕರ್ಷವನ್ನು ಪಡೆದು ಅರ್ಥ ಸಂಕೋಚವನ್ನೋ, ವಿಪರೀತಾರ್ಥವನ್ನೋ ಪಡೆದದ್ದನ್ನು ಕಾಣುತ್ತೇವೆ.

ಈ ಶಬ್ದಗಳ ಅಪಕರ್ಷದ ಸಂದರ್ಭದಲ್ಲೇ ಇನ್ನೂ ಒಂದೆರಡು ಮಾತುಗಳನ್ನು ನೋಡಬಹುದು:— ಅದೆಂದರೆ, ಎಷ್ಟೋ ವ್ಯಕ್ತಿಗಳು ಕೂಡ ತಮ್ಮ ಚಾರಿತ್ರ್ಯಚ್ಯುತಿ ಹೊಂದಿದಾಗಲೋ, ಇಲ್ಲವೆ ಅವಹೇಲನೆಗೆ ಗುರಿಯಾದಾಗಲೋ, ತಾವೂ ಕೆಳಗಿಳಿಯುತ್ತ ತಮ್ಮ ಹೆಸರಿನಲ್ಲಿ ಶಬ್ದಕೋಶದಲ್ಲಿ ಒಂದು ಅಪಕರ್ಷದ ಬೀಜವನ್ನು ಬಿತ್ತಿ ಹೋಗುತ್ತಾರೆ. ಇಂಗ್ಲಿಷ್ ಕೋಶದಲ್ಲಿರುವ Renegade, Machiavelli, Cannibalism, Bismark, Quisling-Geremanering ಮೊದಲಾದ ಪದಗಳು ಈ ವರ್ಗಕ್ಕೆ ಸೇರಿದುವು. Renegade ಎಂದರೆ ಇಂದಿನ ಇಂಗ್ಲಿಷದಲ್ಲಿ "turn-coat" "ತತ್ವಬಿಟ್ಟವನು." ಆದರೆ, ಮೂಲತಃ ಈ ಶಬ್ದವು ಆ ಹೆಸರಿನ ಒಬ್ಬ ವ್ಯಕ್ತಿಯಿಂದ ಬಂದಿತು ೧೮ನೇ ಶತಮಾನದಲ್ಲಿ ಡಾ. ಜಾನ್ಸನ್ ಅವರು ತಮ್ಮ ನಿಘಂಟುವನ್ನು ಸಿದ್ಧಮಾಡುವಾಗ ಆಗತಾನೆ, 'ಟೋರಿ' ಪಕ್ಷವನ್ನು ಬಿಟ್ಟು, 'ವ್ಹಿಗ್' ಪಕ್ಷಕ್ಕೆ ಸೇರಿದ ಒಬ್ಬ ವ್ಯಕ್ತಿಯ ಮೇಲಿನ ಸೇಡನ್ನು ತೀರಿಸಿಕೊಳ್ಳುವಾಗ ಈ ಹೆಸರನ್ನು ಉಪಯೋಗಿಸಿದರು. 'ತತ್ವಬಿಟ್ಟವ'—ಎನ್ನುವ ಪದದ ಅರ್ಥವನ್ನು ವಿವರಿಸಿ ಆದ ಮೇಲೆ, ಕೊನೆಗೆ ಸಣ್ಣಾಗಿ "ಈಗ ಇಂಥವರಿಗೆ 'Renegade' ಎಂದೂ ಕರೆಯುತ್ತೇವೆ" ಎಂದು ಸೇರಿಸಿದರು. ಅಂದಿನಿಂದ 'Renegade' ಹೆಸರು ಈ ಅರ್ಥವನ್ನು ಕೊಡಲು ಪ್ರಾರಂಭಿಸಿತು. ಅದರಂತೆ Machiavelli, ಸುಪ್ರಸಿದ್ಧ ರಾಜಕಾರಣಿ; ಆದರೆ ಅವನ ತತ್ವದ ಪ್ರಕಾರ ಉಪಾಯ ಮತ್ತು ಉಪೇಯಗಳ ಬಗ್ಗೆ ಜಾಗ್ರತೆ ವಹಿಸುವ ಆವಶ್ಯಕತೆ ಇರಲಿಲ್ಲ. ಉದ್ದೇಶಸಾಧನೆಗಾಗಿ ಎಂಥ ಉಪಾಯವನ್ನೂ ಕೈಕೊಳ್ಳಬಹುದೆಂದು ಅವನ ಮತ. ಆದ್ದರಿಂದ 'ಏನಕೇನ ಪ್ರಕಾರೇಣ' ಉದ್ದೇಶವನ್ನು ಸಾಧಿಸಿಕೊಳ್ಳುವ ಪ್ರಸಂಗಗಳಲ್ಲೆಲ್ಲ "Machiavellism" ಶಬ್ದ ಬಂದಿತು. ಬಿಸ್ಮಾರ್ಕ ಕೂಡ ಒಬ್ಬ ರಾಜಕಾರಣಿ; ಆದರೆ, ಅವನದು ಸ್ಥಿರ-ಹಸ್ತ. ಆದ್ದರಿಂದ Political Bismark ಬಂದಿತು. Quisling ಅಂತೂ ಈ ಯುದ್ಧದ ಕಾಣಿಕೆ. ರಾಷ್ಟ್ರಕ್ಕೆ ಅನ್ಯಾಯವನ್ನು ಬಗೆದು, ವೈರಿರಾಷ್ಟ್ರಗಳ ಕೂಡ ಸ್ನೇಹಸಂಬಂಧವನ್ನಿಟ್ಟುಕೊಂಡ ಆ ವ್ಯಕ್ತಿಯ ಹೆಸರಿನ ಮೇಲಿಂದ, ಅಂಥ ವ್ಯಕ್ತಿಗಳಿಗೇ ಆ ಹೆಸರು ಬಂದಿತು.

ನಮ್ಮ ಕನ್ನಡದಲ್ಲೂ ಇಂಥ ಶಬ್ದಗಳಿಲ್ಲವೆ ಇಲ್ಲ ಉದಾಹರಣೆಗಾಗಿ, ಕೌಟಿಲ್ಯನೀತಿ, ಚಾಣಕ್ಯತಂತ್ರ, ತ್ರಾಟಿಕಾ, ಭಿಲಂವರವೃತ್ತಿ, ಫಡಣವೀಸಗಿರಿ, ಭಗೀರಥ ಪ್ರಯತ್ನ, ಬಾದರಾಯಣಸಂಬಂಧ, ಶಿಖಂಡಿ, ಕಲಿ–ತನ ಭೀಷ್ಮಪ್ರತಿಜ್ಞೆ—ಈ ವೊದಲಾದ ಶಬ್ದಗಳಲ್ಲಿ ಇಂಥ ರೀತಿಯನ್ನು ಕಾಣಬಹುದು. ಕನ್ನಡದಲ್ಲಿ ಇನ್ನೊಂದು ಶಬ್ದವಿದೆಯಲ್ಲ; ಅದನ್ನು ಕೂಡ ಉತ್ತರ ಕರ್ನಾಟಕದಲ್ಲಿ ಒಂದರ್ಥದಲ್ಲಿ ಉಪಯೋಗಿಸುತ್ತಿದ್ದಾರೆ. ಆ ಪದವೆಂದರೆ "ವೊಕಾಶಿ" ... ... ನೀವು ನಾಲ್ಕು ಜನರೊಡನಿದ್ದಾಗ "ವೊಕಾಶಿ" ಎಂದರೆ, "ಹುಚ್ಚು ವೊಕಾಶಿ"—ಎಂದು ಶಬ್ದಪೂರಣ ಬಂದೇಬರುತ್ತದೆ. ಇದಕ್ಕೆ ಕಾರಣವೇನೆಂದು ತಿಳಿಯದಿದ್ದರೂ, ಸಾಮಾನ್ಯವಾಗಿ 'ಮೊಕಾಶಿ' ಎನ್ನುವ ಪದ 'ಹುಚ್ಚ' ಎನ್ನುವ ಅರ್ಥವನ್ನೇ ಕೊಡುತ್ತಿರುವುದನ್ನು ಕಾಣುತ್ತೇವೆ. ಇದರಂತೆಯೇ, ಇಂಗ್ಲಿಷ್‌ದಲ್ಲಿಯೂ ಕೂಡ 'Pelton' ಅಥವಾ 'Pilton' ಎಂಬ ಪದವು 'ಅಪದ್ಧ' 'ಮೂರ್ಖ' 'ಪೆಚ್ಚ' ಎನ್ನುವ ಅರ್ಥವನ್ನು ಕೊಡುತ್ತದೆ. ಈ ಬಗ್ಗೆ 'ಯೆಸ್ಪರ್ಸನ್ ಅವರು ಬರೆಯುವುದೇನಂದರೆ:—

> "Foolish is expressed by 'pelton' or 'pilton', derived from the name of a deranged person, one Archibald Pelton, whom the Indians saw at Astoria, his strange appearance and actions made such an impression upon them, that thenceforward any one behaving in an absurd, or irrational manner was termed 'pelton'"

ಇದರಂತೆಯೇ, ಇಂಗ್ಲಿಷದಲ್ಲಿಯ ಕೆಲವು ಶಬ್ದಗಳು ಕನ್ನಡಕ್ಕೆ ಬಂದಾಗ ಅಪಕರ್ಷವನ್ನು ಪಡೆದದ್ದನ್ನೂ ಕಾಣಬಹುದು. ಉದಾ: Chapter ಶಬ್ದ. ಚಾಪ್ಟರ್ ಮನುಷ್ಯ ಎಂದರೆ ಕನ್ನಡದಲ್ಲಿ ನೀತಿಯಿಲ್ಲದವ; ಲಫಂಗ; ಫಟಿಂಗ; ಬದ್ಮಾಷ್; ಡಾಕು ಎಂದು ಅರ್ಥ.

ಇದರಂತೆಯೇ, ಈ ಅಪಕರ್ಷದಲ್ಲಿ ಇನ್ನೂ ಒಂದು ವಿಧವನ್ನೂ ಕಾಣಬಹುದು. ಅದೆಂದರೆ, ಹಲವು ಶಬ್ದಗಳಲ್ಲಿ, ಎಲ್ಲಿಯಾದರೂ ವರ್ಣವ್ಯತ್ಯಯದ ಮೂಲಕವೋ, ಅಥವಾ ಬೇರಾವ ಕಾರಣಕ್ಕೋ ಒಂದು ಅಕ್ಷರ ಪಲ್ಲಟವಾದರೆ ಸಾಕು; ಅಪಕರ್ಷ ಒದಗುತ್ತದೆ. ಉದಾ: ಗೆಣ್ಯಾ; ಕಾವಲಿ ಇತ್ಯಾದಿ ಶಬ್ದಗಳು. ಉತ್ತರಕರ್ನಾಟಕದಲ್ಲಿ 'ಗೆಣ್ಯಾ' ಅಥವಾ 'ಗೆಣೆಯ'ನೆಂದರೆ, ತೀರ ಕೆಟ್ಟ ಅರ್ಥ. 'ಗೆಣ್ಯಾ' ಅಥವಾ 'ಗೆಣತಿ'ಯರು ಕೂಡಿದರೆಂದರೆ, ಯಾವುದೋ ಜಾತ್ರೆಗೋ ಉರುಸಿಗೋ ಹೋಗುವುದು ನಿಶ್ಚಿತ. ಆದರೆ, ನಿಜವಾಗಿ ಈ 'ಗೆಣೆಯ' ಶಬ್ದ 'ಕೆಳೆಯ' 'ಗೆಳೆಯ' ಶಬ್ದದ ಒಂದು ರೂಪ 'ಗೆಳೆಯ' ಎಂಬುದು 'ಮಿತ್ರ' ಎನ್ನುವ ಒಳ್ಳೆಯ ಅರ್ಥವನ್ನು ಕೊಡಬಹುದಾದರೆ, 'ಗೆಣೆಯ' ಶಬ್ದವು ಈ ವಿಪರೀತಾರ್ಥವನ್ನು ಕೊಡಲು ಕಾರಣವೇನೋ ತಿಳಿಯದು. ಈ ರೀತಿ, ಳ–ಣ ವ್ಯತ್ಯಾಸ ಕನ್ನಡಕ್ಕೆ ಹೊಸದೇನೂ ಅಲ್ಲ. ಈ ರೀತಿಯಾಗಿ 'ಹೊಯ್ಸಳ' 'ಹೊಯ್ಸಣ'ವಾಗುತ್ತದೆ; ನೊಳ7 ನೊಣ; ತಳಿಗಿ7 ತಣಿಗಿ ಇತ್ಯಾದಿ. ಆದರೆ, ಗೆಳೆಯ ಶಬ್ದ ಗೆಣೆಯನಾದಾಗ ಈ ರೀತಿ ಅವನತಿಯ ಅರ್ಥವನ್ನು ಕೊಡುವುದು ನಿಜವಾಗಿಯೂ ಕುತೂಹಲದಾಯಕವಾದುದು. ಆದರೆ, ೧೭ನೆಯ ಶತಮಾನದ ಸರ್ವಜ್ಞನಲ್ಲಿ 'ಗೆಣೆಯ' ಶಬ್ದವು ಕೂಡ 'ಗೆಳೆಯ' ಅರ್ಥವನ್ನೇ ಇನ್ನೂ ಕೊಡುತ್ತಿರುವುದನ್ನು ನೋಡಬಹುದು. ಉದಾ: "ತಿಗುಳಜನ ಗೆಣೆಯಿಂದೆ ತಿಗುಣಿಯೂ ಕಡಿಲೇಸು" ಇತ್ಯಾದಿ.

ಇದರಂತೆಯೇ, 'ಕಾವಲಿ' ಶಬ್ದ. ಉತ್ತರಕರ್ನಾಟಕದಲ್ಲಿ 'ಕಾವಲಿ' ಎಂದರೆ — ಮೈಸೂರ ಹಂಚಲ್ಲ; ಕಾವಲಿಯ ಮೇಲೆ ದೋಸೆಯನ್ನು ಹಾಕಿ ಇತ್ಯಾದಿ—ಆದರೆ, 'ಗಟಾರ'; ಮನೆಯ ಮುಂದಿನ

ನೀರಿನ ಕಾವಲಿ. ಈ ಕಾವಲಿಯ ನೀರನ್ನು ಸ್ವಾಭಾವಿಕವಾಗಿ ಯಾರೂ ಕುಡಿಯರು. "ಬಚ್ಚಲುದಕಮ್ ತಿಳಿದಡಾರ ಮೀಹಕ್ಕೆ ಯೋಗ್ಯಮ್?" ಆದರೆ, ಒಂದು ಕಾಲಕ್ಕೆ 'ಕಾವಲಿ' ಬೇರೆ ರೂಪದಲ್ಲಿದ್ದಾಗ, ಯಾರೂ ಇದರ ನೀರನ್ನು ಕುಡಿಯಬಹುದಾಗಿತ್ತಷ್ಟೇ ಅಲ್ಲ; ಅದೊಂದು ಸಂಪತ್-ಸಮೃದ್ಧಿಯ ಲಕ್ಷಣವಾಗಿದ್ದಿತು. ಯಾಕಂದರೆ, ಈ "ಕಾವಲಿ"ಯ ಹೆಚ್ಚು ಪ್ರಾಚೀನ ರೂಪ "ಕಾಲುವೆ" ಎಂಬುದು. ಕಾಲ್+ವಾಯ್—ಎಂದರೆ ಕಾಲಬಾಯಿ=ಪ್ರವಾಹದ ಬಾಯಿ—ಕಾಲುವೆ. ಇಲ್+ವಾಯ್ (ಇಲ್ವಾಯ್-ವಾಕಿಲ್) ಆದಂತೆ. ಶಾಸನಗಳಲ್ಲಿ ಬಾಯ್ಕಾಲ್ ಎಂದೂ ರೂಪ ದೊರಕುತ್ತದೆ.

ಶಾಸನಗಳ ಬಾಯ್ಕಾಲ್ ಅನಂತರ ಸಾಹಿತ್ಯದ 'ಕಾಲ್ವಾಯ್' 'ಕಾಲ್ವೆ'ಯಾಗಿ, ಅಕ್ಷರಪಲ್ಲಟ ಪಡೆದು, ಕಾವಲಿಯಾದಾಗ 'ಗಟಾರ' ಎನ್ನುವ ಹೀನಾರ್ಥವನ್ನು ಕೊಡಲು ಪ್ರಾರಂಭಿಸಿತು. ಸಾರಾಂಶವೇನಂದರೆ—ವ್ಯಕ್ತಿಗಳ ಹಾಗೆಯೇ ಶಬ್ದಗಳಿಗೂ ಒಂದು ಭಾಗ್ಯರೇಷೆಯಿದ್ದು, ಅವು ಉತ್ಕರ್ಷ ಅಪಕರ್ಷಗಳನ್ನು ಪಡೆಯುವದುಂಟು. ಶಬ್ದಗಳ ಈ ಅಪಕರ್ಷವು ನಾಲ್ಕಾರು ವಿಧವಾಗಿ ನಡೆಯುವುದನ್ನು ನೋಡುತ್ತೇವೆ. (೧) "ಅಮ್ಮ" "ಅಬ್ಬೆ" "ಕುಪ್ಪುಸ" ಮೊದಲಾದ ಶಬ್ದಗಳು ಯಾವ ಕಾರಣವೂ ಇಲ್ಲದೆ ತಾವಾಗಿಯೇ ಅವನತಿಯನ್ನು ಐದುತ್ತವೆ. (೨) ಸಂಸ್ಥಾ-ಸಂತೆ; ಜಾತ್ರೆ ಮೊದಲಾದುವು ತದ್ಭವವಾದಾಗ ಹೀನಾರ್ಥವನ್ನು ಪಡೆಯುತ್ತವೆ. (೩) ಹಲವು ವ್ಯಕ್ತಿಗಳು ತಮ್ಮ ಚಾರಿತ್ರ್ಯವನ್ನು ಕಳೆದುಕೊಂಡಾಗ ಹಲವು ಶಬ್ದಗಳನ್ನು ಬಿತ್ತಿ ಹೋಗುವುದುಂಟು. (೪) ಚಾಪ್ಟರ್ ಮೊದಲಾದ ಇಂಗ್ಲಿಷದ ಕೆಲವು ಶಬ್ದಗಳು ಕನ್ನಡಕ್ಕೆ ಬಂದಾಗ ಹೀನಾರ್ಥವನ್ನು ಪಡೆಯುವದುಂಟು. (೫) ಕಾವಲಿ ಮೊದಲಾದುವು ಅಕ್ಷರಪಲ್ಲಟದ ಮೂಲಕ ಹೀನಾರ್ಥವನ್ನೈದುತ್ತವೆ.

೨

ಈ ವರೆಗೆ ಉಚ್ಚಾರಸೌಲಭ್ಯ, ವರ್ಣವ್ಯತ್ಯಯ, ಸಾಹಚರ್ಯ, ಪುನರುಕ್ತಿ, ಭಾಷಾಗೌರವ, ಉತ್ಕರ್ಷ ಮತ್ತು ಅಪಕರ್ಷ— ಮೊದಲಾದ ಅಂತರ ಕಾರಣಗಳ ಮೂಲಕ ಕನ್ನಡ ಭಾಷೆಯು ಕಾಲಕ್ರಮದಲ್ಲಿ ಯಾವ ರೀತಿ ವ್ಯತ್ಯಾಸ ಹೊಂದುತ್ತಾ ಸಾಗಿದೆಯೆಂಬುದನ್ನು ವಿವರಿಸಿದೆವು ಈ ಕಾರಣಗಳ ಮೂಲಕ ಎಷ್ಟೋ ಸಲ ಮೊದಲಿದ್ದ ಶಬ್ದಗಳ ಅಕ್ಷರಸ್ವರೂಪವು ಬದಲಾಗಿದೆಯಷ್ಟೇ ಅಲ್ಲದೆ, ಎಷ್ಟೋ ಶಬ್ದಗಳು ಮೂಲತಃ ತಾವು ಹೇಳದೇ ಇದ್ದ ಅರ್ಥವನ್ನೂ, ಇನ್ನೂ ಅನೇಕ ಶಬ್ದಗಳು ತಮ್ಮ ಮೂಲದ ಅರ್ಥಕ್ಕೆ ತೀರ ವಿಪರೀತವಾದ ಅರ್ಥಗಳನ್ನೂ ಕೊಡುವಂತಾಗಿವೆ

ಇದರಂತೆ ಭಾಷೆಯ ಬೆಳವಣಿಗೆಗೆ ಕಾರಣವಾದ ಇನ್ನೊಂದು ಮಹತ್ವದ ಅಂಶವೆಂದರೆ ಅನ್ಯ-ಭಾಷಾಸಂಪರ್ಕ. ಇಂದಿನ ಕಾಲದಲ್ಲಿಯ ಅನೇಕ ಮಹಾಯುದ್ಧಗಳು ಬೇರೆ ಬೇರೆ ಶಬ್ದಗಳ ನಿರ್ಮಾಣಕ್ಕೆ, ಕಾರಣವಾಗಿವೆ.

ಈ ಅನ್ಯಭಾಷಾಸಂಪರ್ಕದ ದೃಷ್ಟಿಯಿಂದ ಕನ್ನಡ ನಾಡು ಮೊದಲಿನಿಂದಲೂ ಅನೇಕ ಭಾಷೆ ಮತ್ತು ಸಂಸ್ಕೃತಿಗಳ ಜನರ ಕೂಡ ಸಂಬಂಧವುಳ್ಳದ್ದಾಗಿದೆ 'ಕರ್ನಾಟಕ' ಎನ್ನುವ ಪದವು ಇತಿಹಾಸದಲ್ಲಿ ಇತ್ತೀಚಿನದಾದರೂ, ಕನ್ನಡ ಭಾಷೆಯನ್ನಾಡುವ ಜನರು ಎಷ್ಟೋ ಶತಮಾನಗಳ ಹಿಂದಿನಿಂದಲೂ ತಮ್ಮದನ್ನು ಇತರರಿಗೆ ಕೊಟ್ಟು ಹೆರವರದನ್ನು ಸ್ವೀಕರಿಸುವಷ್ಟು ಮಹತ್ವದ ಘಟಕವಾಗಿದ್ದಾರೆ.

ಈ ರೀತಿಯ ಪರಭಾಷೆಯ ಶಬ್ದಗಳ ಸ್ವೀಕರಣವಿಚಾರದಲ್ಲಿ ಸಾಕಷ್ಟು ಐಕಮತ್ಯವಿಲ್ಲ. ಹಲವರ ಪ್ರಕಾರ ಪ್ರತಿಯೊಂದು ಭಾಷೆಯೂ, ಅನ್ಯರದನ್ನು ಸ್ವೀಕರಿಸದೆ ತನ್ನ ಭಾಷಾಶುದ್ಧತೆಯನ್ನು ಕಾಯ್ದುಕೊಳ್ಳಬೇಕು. ಈ ಪಕ್ಷದ ಅಭಿಪ್ರಾಯವನ್ನು ಪ್ರೊ. ಸ್ಮಿಥ್ ಅವರು ಈ ರೀತಿ ಸಂಗ್ರಹಿಸುತ್ತಾರೆ:—

> " The upholders of this ideal (of purism in language) maintain that extensive borrowing from other nations is a proof of want of imagination and a certain weakness of mental activity, that a people who cannot, or do not take the trouble to find a native word for a new conception show thereby the poverty of their invention and weakness of speech-feeling ".

ಅಲ್ಲದೆ, ಈ ಅನ್ಯಭಾಷಾಸ್ವೀಕರಣವು ಎಷ್ಟೋ ಸಲ ಒಂದು ವಿಧದ ಅನವಶ್ಯಕ ಹೆಮ್ಮೆಯ ಮೂಲಕವೂ ನಡೆಯುತ್ತದೆ. ಉದಾ : ನಾವೇ ನಮ್ಮ ಭಾಷೆಯಲ್ಲಿ 'ನಮ್ಮ ತಂದೆ' 'ನಮ್ಮ ತಾಯಿ' 'ನಮ್ಮ ಅಕ್ಕ'— ಎಂದು ಹೇಳದೆ, 'ನಮ್ಮ father, mother sister' ಎಂದು ಹೇಳುವಲ್ಲಿ ಒಂದು ವಿಧದ ಶಿಷ್ಟತೆ ಇದೆಯೆಂದು ನಂಬಿದ್ದೇವೆ ಆದರೆ, ಈ ಭಾಷಾಶುದ್ಧತೆಯ ಪ್ರತಿಕಕ್ಷಿಗಳು ಈ ವಿಧದ ಸ್ವೀಕರಣವು ಸಂಪರ್ಕಗಳ ಮೂಲಕ ಅ-ನಿವಾರ್ಯವೆಂದು ಹೇಳಿ, ತಮ್ಮ ಭಾಷಾಶುದ್ಧತೆಯನ್ನು ರಕ್ಷಿಸಲು ಯತ್ನಿಸುತ್ತಿದ್ದ ಜರ್ಮನ್ ಮೊದಲಾದ ಜನರು 'ಭಾಷೆ' ಮತ್ತು 'ರಾಜಕಾರಣ'ಕ್ಕೆ ತಳಕುಹಾಕಿದ್ದಾರೆಂದು ಹೇಳುತ್ತಾರೆ.

ಅದೇನೇ ಇರಲಿ; ಭಾರತದ ಔತ್ತರೇಯ ಭಾಷೆಗಳನ್ನಾಡುವ ಜನರ ಸಂಪರ್ಕವಂತೂ ಕನ್ನಡಿಗರಿಗೆ ಮೊದಲಿನಿಂದಲೇ ಇದ್ದಿತು. 'ಮಗಧ ಚೇರ ಚೋಳ ವಂಗ ಕಳಿಂಗಾದಿ'ಗಳನ್ನು ಜಯಿಸಬೇಕೆಂದು

ಮೊದಲಿನಿಂದಲೂ ಕನ್ನಡಿಗರ ಮಹತ್ವಾಕಾಂಕ್ಷೆ. ಇತ್ತೀಚೆ, ಸಿಂಧಪ್ರಾಂತದಲ್ಲಿ ದೊರೆತ ಮೊಹೆಂಜೊದಾರೋ ಮತ್ತು ಹರಪ್ಪಗಳ ಸಾಂಸ್ಕೃತಿಕ ಅವಶೇಷಗಳು ಕನ್ನಡ ಸಂಸ್ಕೃತಿ ಮತ್ತು ಜನಪದವನ್ನೇ ಸೂಚಿಸುತ್ತವೆಂದು ರೆವರೆಂಡ್ ಹೆರಾಸ್‌ರವರ ಮತ. ಡಾ. ವೀಲರ್ ಅವರಂತೂ, ಅರಿಕೆಮೆಡುವಿನಿಂದ ಮೊದಲ್ಗೊಂಡು ಬ್ರಹ್ಮಗಿರಿ, ಚಂದ್ರವಳ್ಳಿ, ಬ್ರಹ್ಮಪುರಿ, ಮೊಹೆಂಜೊದಾರೊ, ಹರಪ್ಪ ಮತ್ತು ಸ್ವೀಡನ್ ದೇಶದಲ್ಲಿಯ ಅನೇಕ ಪ್ರದೇಶಗಳು ಒಂದೇ ಸಾಂಸ್ಕೃತಿಕ ಅಂಶವನ್ನು ತೋರಿಸುತ್ತವೆಂದು ಹೇಳುತ್ತಾರೆ.

ಈ ರೀತಿ ಕಾಲಕ್ರಮವಾಗಿ ಕನ್ನಡಿಗರಿಗೆ-ಆರ್ಯರು, ಗ್ರೀಕ್ ಮತ್ತು ರೋಮೀಯರು, ಪಾರಸಿಕ–ಯವನರು, ಹಿಂದುಸ್ತಾನಿಯಾಡುವ ಜನರು, ಪೋರ್ಚುಗೀಜ್ ಮತ್ತು ಫ್ರೆಂಚರು, ಇಂಗ್ಲಿಷರು—ಈ ಮೊದಲಾದ ಜನರ ಸಂಬಂಧವು ತೀರ ನಿಕಟವಾಗಿ ಬಂದಿತು. ಇದರ ಜೊತೆಗೆ ನೆರೆಹೊರೆಯ ದ್ರಾವಿಡ ಭಾಷೆಗಳು ಮತ್ತು ಮರಾಠಿಯಂತೂ ಕನ್ನಡದ ಜೊತೆಗೆ ಕೈಯಲ್ಲಿ ಕೈಹಾಕೇ ಸಾಗಿದವು. ಇವರಲ್ಲಿ ಹಲವರು ವ್ಯಾಪಾರ–ವ್ಯವಹಾರಗಳ ಸಂಪರ್ಕದ ಮೂಲಕವೂ ಕನ್ನಡಿಗರ ಮೇಲೆ ಪ್ರಭಾವವನ್ನು ಮಾಡಿದರು ಸ್ವಾಭಾವಿಕವಾಗಿಯೇ, ಇಂಥ ಗಾಢವಾದ ಸಂಪರ್ಕದ ಮೂಲಕ ಕನ್ನಡ ಕೋಶವು ಈ ಭಾಷೆಗಳಿಂದ ಅನೇಕ ಪದಗಳನ್ನೂ ಪ್ರಯೋಗಗಳನ್ನೂ ಅನಾಯಾಸವಾಗಿ ಸ್ವೀಕರಿಸಿತು. ಹಾಗಾದರೆ, ಈ ಮೇಲೆ ವಿವರಿಸಿದ ಜನರ ಸಂಪರ್ಕದ ರೀತಿ ಯಾವುದು? ಮತ್ತು ಅವರು ಕನ್ನಡಕೋಶಕ್ಕೆ ಕೊಟ್ಟ ಕಾಣಿಕೆಯೇನು ನೋಡೋಣ:—

ಕನ್ನಡ–ಆರ್ಯ ಸಂಬಂಧ

ಕನ್ನಡಿಗರಿಗೆ ಆರ್ಯರ ಸಂಪರ್ಕವು ಬಂದುದು ಕನ್ನಡಿಗರು ದ್ರಾವಿಡ ಮೂಲ ಶಾಖೆಯಿಂದ ಕವಲೊಡೆದ ಮೇಲೆಂದೇ ಹೇಳಬೇಕು ಧರ್ಮ, ತತ್ವಜ್ಞಾನ, ಮತ್ತು ಕಾವ್ಯಾದಿಗಳನ್ನು ಕನ್ನಡರಕಿಂತ ಹೆಚ್ಚಾಗಿ ಬೆಳೆಸಿಕೊಂಡಿದ್ದ ಆರ್ಯರು ಕನ್ನಡಕ್ಕೆ ಕೊಟ್ಟ ಕಾಣಕಯೆಂದರೆ ಈ ವರ್ಗಕ್ಕೆ ಸೇರಿದ ಶಬ್ದಗಳು. ಕನ್ನಡದ ಮೇಲಾದ ಈ ಆರ್ಯರ ಪ್ರಭಾವವು ತೀರ ಅತಿಶಯವೂ ಗಾಢವೂ ಆದದ್ದರಿಂದ ಅನೇಕ ಕನ್ನಡರು ಆರ್ಯ ಭಾಷೆಯ ಶಬ್ದಗಳನ್ನು ಸ್ವೀಕರಿಸಿದಂತೆಯೇ ಅವರ ಆಚಾರ ವ್ಯವಹಾರಗಳನ್ನೂ, ರೀತಿ-ನೀತಿಗಳನ್ನೂ ಕೂಡ ಸ್ವೀಕರಿಸಿದರು. ಇದರ ಪರಿಣಾಮವಾಗಿ ಒಂದು ಕಾಲಕ್ಕೆ ಕನ್ನಡ ಮೊದಲಾದ ಭಾಷೆಗಳು ಸಂಸ್ಕೃತ-ಜನ್ಯವೆಂದೇ ಪಂಡಿತರು ಕೂಡ ಯಾವ ರೀತಿ ನಂಬಿದ್ದರೆಂಬುದನ್ನು ಈ ಮೊದಲೇ ಚರ್ಚಿಸಿದ್ದೇವೆ ಹೀಗಾಗಿ, ಕನ್ನಡದಲ್ಲಿಯ ದೇವರು, ತತ್ವಜ್ಞಾನ, ಸ್ವರ್ಗ, ನರಕ—ಮೊದಲಾದ ಶಬ್ದಗಳೆಲ್ಲ ಸಂಸ್ಕೃತ ಕಾಣಿಕೆಗಳಾದುವು.

ಕನ್ನಡ ಮತ್ತು ಗ್ರೀಕ್–ರೋಮೀಯ ಸಂಬಂಧ:— ಮೊದಲಿನಿಂದಲೂ ಪ್ರಬಲವಾದ ರಾಜಕೀಯ ಘಟಕವಾಗಿದ್ದ ಕನ್ನಡಿಗರಿಗೆ ಬಂದ ತೀರ ಪ್ರಾಚೀನ ಸಂಪರ್ಕವೆಂದರೆ ಗ್ರೀಕ್ ಮತ್ತು ರೋಮೀಯರದು. ಕನ್ನಡಿಗರ ಈ ಸಂಪರ್ಕವು ಕ್ರಿ. ಪೂರ್ವ ೨ನೆಯ ಶತಮಾನದಿಂದಲೇ ಪ್ರಾರಂಭವಾಗಿರಬೇಕು. ಕ್ರಿ. ಶಕ ೨ನೆಯ ಶತಮಾನದ್ದೆಂದು ಹೇಳಲ್ಪಡುವ ಕೆಳಗಣ ಇಜಿಪ್ತದ ‘ಆಕ್ಸಿರಿಂಕಸ್’—ಎಂಬಲ್ಲಿ ದೊರೆತ ವಲ್ಕಲಗಳಲ್ಲಿರುವ ಅನೇಕ ಶಬ್ದಗಳು ಕನ್ನಡವಾಗಿವೆಯೆಂದೂ, ಅಲ್ಲಿಯ ಅನೇಕ ಸಂವಾದಗಳು ಕನ್ನಡದಲ್ಲಿಯೇ ಇವೆಯೆಂದೂ ಮಾನ್ಯಶ್ರೀ ಗೋವಿಂದ ಪೈ ಅವರು ಅಭಿಪ್ರಾಯಪಡುತ್ತಾರೆ ಇಲ್ಲಿಯ ಸನ್ನಿವೇಶವು ಇಂದಿಗೂ ಅಚ್ಚಗನ್ನಡ ಭಾಗವಾದ ಉಡುಪಿಯ ಬಳಿಯ ಮಾಲ್ಪಿ ಎಂಬ ರೇವು ಸ್ಥಳದಲ್ಲಿ ನಡೆದುದು. ಕ್ರಿ. ಶ. ೯ರ ಮೊದಲಿರಬಹುದಾದ ಕನ್ನಡ ಸಾಹಿತ್ಯದಲ್ಲಿ ಈ ಗ್ರೀಕ್ ಸಂಪರ್ಕದ ಮೂಲಕ ಅನೇಕ ಗ್ರೀಕ್ ಇಲ್ಲವೆ ಅಲ್ಲಿಂದ ರೂಪಾಂತರ ಹೊಂದಿದ ಶಬ್ದಗಳು ಕಂಡುಬಂದರೆ ಏನೂ ಆಶ್ಚರ್ಯದ ಮಾತಲ್ಲ. ಯಾಕಂದರೆ,

ಕ್ರಿ. ಶ. ೯೪೦ರದೆಂದು ಹೇಳಲ್ಪಡುವ 'ವೊಡ್ಡಾರಾಧಣ' ಎಂಬ ಗ್ರಂಥದಲ್ಲಿ ಅಂದಿಗೂ ಗ್ರೀಕ್ ಮೂಲದ ಸಮೀಪದಲ್ಲಿರುವ ನಾಣ್ಯವಾಚಕಗಳಾದ ಮೂರು ನಾಲ್ಕು ಶಬ್ದಗಳನ್ನು ಕಾಣುತ್ತೇವೆ. ಆ ಶಬ್ದಗಳೆಂದರೆ ಗ್ರೀಕ್ ಡಿನೇರಿಯಸ್‌ದ ರೂಪಾಂತರವಾದ 'ದೀನಾರ' ಎಂಬುದೂ, ಮತ್ತು 'ಡ್ರಾಕ್ಮಾ'ದ ರೂಪಾಂತರವಾದ 'ದ್ರಮ್ಮ' ಎಂಬುದೂ ಆಗಿವೆ. ಡಾ. ಭಂಡಾರಕರ ಅವರ ಪ್ರಕಾರ "ದ್ರಮ್ಮ" ನಾಣ್ಯವು ಉತ್ತರ ಹಿಂದುಸ್ಥಾನದಲ್ಲಿ ಕ್ರಿ. ಶ. ೯ರಿಂದ ೧೩ನೆಯ ಶತಮಾನದ ವರೆಗೆ ಪ್ರಚಲಿತವಿತ್ತೆಂದೂ, ಪ್ರತೀಹಾರ ವಂಶದ ಭೋಜದೇವನ ಕ್ರಿ. ಶ. ೮೭೬ರ ಗ್ವಾಲ್ಹೇರ ಶಾಸನದಲ್ಲಿ ಇದು ಮೊಟ್ಟಮೊದಲು ದೊರಕುತ್ತದೆಂದೂ ಹೇಳುತ್ತಾರೆ. ಆದರೆ, ಶ್ರೀ. ಎಸ್. ಕೆ. ಚಕ್ರವರ್ತಿ ಅವರ ಪ್ರಕಾರ, ಈ ಪದದ ಪ್ರಯೋಗವು ಭರತವರ್ಷದಲ್ಲಿ ಕ್ರಿ. ಶ. ೨ನೆಯ ಶತಮಾನದಿಂದಲೇ ಇದ್ದುದು ಕಂಡುಬರುತ್ತದೆ. ಅವರ ಪ್ರಕಾರ ಕ್ರಿ. ಶ. ೨ನೆಯ ಶತಮಾನದ ಯೌಧೇಯ ವಂಶದವರ ಒಂದು ನಾಣ್ಯದ ಮೇಲೆ "ಬ್ರಹ್ಮಣ್ಯದೇವಸ್ಯ ದ್ರಮ"—ಎಂದು ಒಕ್ಕಣಿಕೆಯಿದೆಯಂತೆ. ಮಧ್ಯಯುಗದಲ್ಲಿ ಮಾತ್ರ ಅನೇಕ ಭಾರತೀಯ ಅರಸರೂ ತಮ್ಮ ಹೆಸರಿನಲ್ಲಿಯೇ ಅನೇಕ "ದ್ರಮ್ಮ"ಗಳನ್ನು ಪ್ರಸಿದ್ಧಿಗೆ ತಂದರು. ಪ್ರಾಯಶಃ ಈ 'ದ್ರಮ್ಮ'ಗಳೆಲ್ಲ ಬೆಳ್ಳಿಯವಾಗಿದ್ದವು. ಉದಾಹರಣೆಗೆ, ಪ್ರತೀಹಾರವಂಶದ ಭೋಜ ಆದಿವರಾಹನ "ಶ್ರೀಮದ್ ಆದಿವರಾಹ ದ್ರಮ್ಮ"; ಪಾಲವಂಶದ 'ವಿಗ್ರಹಪಾಲನ' "ವಿಗ್ರಹಪಾಲೀಯ ದ್ರಮ್ಮ"—ಇತ್ಯಾದಿ. ಆದರೆ, ಕ್ರಿ ಶ. ೮೧೪ರಿಂದ ೮೭೮ರ ವರೆಗೆ ರಾಜ್ಯವಾಳಿದ ರಾಷ್ಟ್ರಕೂಟ ಅಮೋಘವರ್ಷನ "ದ್ರಮ್ಮ"ವು ಮಾತ್ರ ಸುವರ್ಣದ್ದಾಗಿತ್ತು.*

'ದೀನಾರ'ವು ಮಾತ್ರ ಯಾವಾಗಲೂ ಸುವರ್ಣದ್ದೇ ಆಗಿತ್ತು. ಅದರ ರೋಮೀಯ ಬೆಲೆ ಇಂದಿನ ೧೮ ಪೆನ್ನುಗಳಷ್ಟು ಆಗುತ್ತಿತ್ತು. ಈ ನಾಣ್ಯವು 'ಸುವರ್ಣ'ದ ಪರ್ಯಾಯ ಪದವಾಗಿ ಕ್ರಿ. ಶ ೭ರಿಂದಲೇ ಬಳಕೆಯಲ್ಲಿದೆ.

ಸುಕುಮಾರಸ್ವಾಮಿಗಳ ಕಥೆಯಲ್ಲಿ ಜೈನವ್ರತವನ್ನು ಆಗ ತಾನೆ ಸ್ವೀಕರಿಸಿದ ನಾಗಶ್ರೀಯು ಕೊಲೆಗೆ ಒಯ್ಯಲ್ಪಡುತ್ತಿರುವ ವ್ಯಕ್ತಿಯ ಬಗ್ಗೆ ಅವನನ್ನು ಹಾಗೇಕೆ ಒಯ್ಯುತ್ತಾರೆಂದು ಕೇಳಿದಾಗ, ಅವನ ತಂದೆಯು ಹೇಳುವುದೆಂದರೆ—"ಈ ಪೊಬಿಲ ಪ್ರಧಾನನಪ್ಪ ಶ್ರೇಷ್ಠಿ ಇಂದ್ರದತ್ತನೆಂಬೊಂ........ಜೂದಾಡಿ ಯಕ್ಷದ್ಯೂತನೆಂಬೊಂಗೆ **ಸಾಸಿರ ದೀನಾರಮಂ** ಸೋಲ್ತು ಸೋಲಂ ಕುಡಲಾಱದಾಗೆ" ಒಯ್ಯುತ್ತಿದ್ದರೆಂದು ಹೇಳುತ್ತಾನೆ. ಅದೇ ಕಥೆಯಲ್ಲಿ, ಸುಮಿತ್ರಸೆಟ್ಟಿಯೆಂಬವನು "ನಾಲ್ವರ್ಸುಭಟರ್ಗೆ ಓರೊರ್ವರ್ಗೆ ಸಾಸಿರ **ದೀನಾರದ ಪೊಟ್ಟಳಿಗೆಗಳಂ**" ಕೊಟ್ಟು, ನಂತರ ಅರಸನಲ್ಲಿ "ಎನ್ನ ಸಾಸಿರ ದೀನಾರದ ಪೊಟ್ಟಳಿಗೆ ಕೆಟ್ಟುದು ಅದಮ್ ದೇವರ್ ಅರ್ೈವುದು"—ಎಂದು ಬಿನ್ನವಿಸಿಕೊಳ್ಳುತ್ತಾನೆ. ಪುನಃ, ಅದೇ ಕಥೆಯಲ್ಲಿ, "ಪುಳ್ಳಿಯುಮ್ ತರಲ್ ಪೋದಾತಮ್ **ಸಾಸಿರ ದೀನಾರದ ಪೊಟ್ಟಳಿಗೆಯುಮ್** ಕದ್ದಾತ"ನಿರುತ್ತಾನೆ. ಇದರಂತೆ, "ಕಳ್ಳನುಮಂ **ದೀನಾರದ ಸಹಸ್ರ ಪೊಟ್ಟಳಿಗೆಯುಮಂ** ಕೊಂಡು ಪೋಗಿ" ಎಂದೂ "ರತ್ನದ್ವೀಪದಿಂದೊರ್ವ ಪರದಮ್ ಸರ್ವಲಕ್ಷ ಕಂಬಳಂಗಳಮ್ ಲಕ್ಷ **ದೀನಾರಂಗಳ್** ಬೆಲೆಯಪ್ಪವಮ್" ಎಂದೂ "ಅಱುಸಾಸಿರ **ದೀನಾರಮ್ ಎನ್ನ ಸೂಳೆಗೆ** ಬಯಸಮಾದುದು" ಎಂದೂ, "**ಲಕ್ಷ ದೀನಾರಂಗಳಮ್** ಕೊಟ್ಟು ರತ್ನಕಂಬಳಂಗಳಮ್ ಕೊಂಡು" ಎಂದೂ ಪ್ರಯೋಗಗಳಿವೆ. ಈ 'ದೀನಾರ' ಶಬ್ದವು ಗ್ರೀಕ್ 'ಡಿನೇರಿಯಸ್'ದ ರೂಪಾಂತರ ಇದರಂತೆ 'ದಮ್ಮ'. ವೊಡ್ಡಾರಾಧಣದ 'ಭದ್ರಬಾಹು ಭಟ್ಟಾರರ' ಕಥೆಯಲ್ಲಿ ನಂದಿಮಿತ್ರನು ಕಾಷ್ಠಕೂಟನಿಗೆ "ಅಯ್ಯಾ, ಎನಗುಡಲಿಲ್ಲ ಏನುಮ್ ಒಂದು **ದಮ್ಮಕ್ಕಾದೊಡಮ್** ಸೀರೆಯಮ್

* "Foreign Denominations of ancient Indian Coins,"....A. O. C. P 888.

ಕುಡಿಯಿಮ್ "— ಎಂದು ಕೇಳಿಕೊಳ್ಳುತ್ತಾನೆ. ಅದರಂತೆ, " ಎಂಟು **ದಮ್ಮುದ** ಪುಳ್ಳಿಯಮ್ ತಂದು "— ಎಂದು ಪ್ರಯೋಗಗಳಿವೆ. ಕ್ರಿ. ಶಕ ೧೦ನೆಯ ಶತಮಾನದ ನಂತರ ಕನ್ನಡ ಕೋಶದಲ್ಲಿ ನಾವು ಹೆಚ್ಚಾಗಿ ಇಂಥ ಪ್ರಯೋಗಗಳನ್ನು ಕಾಣುವದಿಲ್ಲ. ಕನ್ನಡದಲ್ಲಿ ಬರುವ ಹೋರಾರತ್ನ ಮೊದಲಾದ ಪ್ರಯೋಗಗಳು ಗ್ರೀಕ್ ರೂಪವನ್ನು ತೋರಿಸುತ್ತವೆ.

ಕನ್ನಡದಲ್ಲಿ ರೋಮೀಯ ಪದಗಳನ್ನು ಕಾಣದಿದ್ದರೂ ಕನ್ನಡನಾಡಿನ ಕೂಡ ರೋಮ ಸಾಮ್ರಾಜ್ಯದ ಸಂಪರ್ಕವಿದ್ದುದನ್ನು ಇತ್ತೀಚಿನ ಅನೇಕ ಉತ್ಖನನಗಳಿಂದ ಕಂಡುಕೊಳ್ಳುತ್ತೇವೆ. ಚಂದ್ರವಳ್ಳಿಯ ಉತ್ಖನನಗಳು, ಇದಕ್ಕೆ ಒಳ್ಳೆಯ ದೃಷ್ಟಾಂತಗಳಾಗಿವೆ. ಈ ಉತ್ಖನನಗಳ ಮೇಲಿಂದ ಕ್ರಿ. ಪೂ. ೧೧ರಿಂದ ಕ್ರಿ. ಶ. ೧ನೆಯ ಶತಮಾನದ ವರೆಗೆ ಆಳಿದ ಶಾತವಾಹನ ಅರಸರ ಕಾಲದ ಸಂಸ್ಕೃತಿಯನ್ನು ನಾವು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಇಲ್ಲಿ ದೊರೆಯುವ ವಿಶೇಷ ತರದ ಮಣ್ಣಿನ ಪಾತ್ರೆಗಳೂ ಮತ್ತು ರೇಖಾನಕ್ಷೆಯುಳ್ಳ ಇತರ ಉಪಕರಣಗಳೂ ಕನ್ನಡಿಗರಿಗೆ ರೋಮಸಾಮ್ರಾಜ್ಯದ ಕೂಡ ಇದ್ದ ಸಂಬಂಧವನ್ನು ಸಾರುತ್ತವೆ. ಇಲ್ಲಿ ದೊರೆಯುವ ರೌಲೆಟಿಡ್ ಎನ್ನುವ ಪಾತ್ರಾವಿಶೇಷವನ್ನು ಕನ್ನಡಿಗರು ಕ್ರಿ. ಪೂ. ೧ನೆಯ ಶತಮಾನದಲ್ಲಿಯೇ ಇಟಲಿಯಲ್ಲಿರುವ ಆ ಹೆಸರಿನ ಊರಿನಿಂದ ತರಿಸುತ್ತಿದ್ದರೆಂದು ಹೇಳುತ್ತಾರೆ. ಆ ನಂತರದ ಸಂಸ್ಕೃತಿಯ ಮಟ್ಟಗಳಲ್ಲಿ ಈ ರೌಲೆಟಿಡ್ ಪಾತ್ರೆಗಳ ಅನುಕರಣೆಯನ್ನು ಇಲ್ಲಿಯ ಜನರು ಕೂಡ ಮಾಡಲು ಯತ್ನಿಸಿದ್ದನ್ನು ಕಾಣಬಹುದು. ಈ ಪಾತ್ರೆಯ ವೈಶಿಷ್ಟ್ಯವೆಂದರೆ, ಇದರ ಒಳಮುಗ್ಗಲು ಕರಿಯ ಬಣ್ಣದ್ದಿದ್ದು ಹೊರಗಿನ ಬದಿಯು ಕೆಂಪು ಬಣ್ಣದ್ದಾಗಿರುತ್ತದೆ. ಇದು ತೀರ ನುಣುಪಾಗಿದ್ದು ಗ್ರಾಮೊಫೋನ್ ಪ್ಲೇಟುಗಳ ಮೇಲಿನಂತೆ ಸೂಕ್ಷ್ಮವಾದ ರೇಖೆಗಳು ಇದರಲ್ಲಿರುತ್ತವೆ. ಇದರಲ್ಲಿಯ ಮಣ್ಣಿನ ಮಿಶ್ರಣವು ತೀರ ಸರಿಯಾಗಿದ್ದು ಇದನ್ನು ಬಾರಿಸಿದರೆ ಇದರ ತುಣುಕುಗಳು ಕಂಚಿನ ಹಾಗೆ ಧ್ವನಿಯನ್ನು ಕೊಡುತ್ತವೆ. ಎಷ್ಟೋ ಪಾತ್ರೆಗಳ ತಳದಲ್ಲಿ ಯಾವ ಊರಲ್ಲಿ ಸಿದ್ಧವಾಯಿತೆಂಬ ಮುದ್ರೆಯೂ ಇರುತ್ತದೆ. ಈ ಚಂದ್ರವಳ್ಳಿಯಲ್ಲಿ ದೊರೆತ ಅನೇಕ ನಾಣ್ಯಗಳು ಕೂಡ ರೋಮ ಸಾಮ್ರಾಜ್ಯದ ಸಂಪರ್ಕವನ್ನು ಸೂಚಿಸುತ್ತವೆ. ಕಳೆದ ಎರಡು ಉತ್ಖನನಗಳಲ್ಲೂ ರೋಮ ಸಾಮ್ರಾಜ್ಯದ ಚಕ್ರವರ್ತಿಯಾದ ಅಗಸ್ಟಸ್ ಸೀಝರನ ಅನೇಕ ನಾಣ್ಯಗಳು ಇಲ್ಲಿ ದೊರಕಿವೆ. ಚೀನ ಸಮ್ರಾಟನಾದ ಹನ್‌ಉತಿ ಎಂಬವನ ನಾಣ್ಯವೂ ಇಲ್ಲಿ ದೊರಕಿದೆ.

ಈ ರೀತಿ ಕನ್ನಡಿಗರಿಗೆ ರೋಮ ಸಾಮ್ರಾಜ್ಯದ ಸಂಪರ್ಕವು ತೀರ ನಿಕಟವಾಗಿ ಇದ್ದಿತಾದರೂ ಕನ್ನಡ ಕೋಶದಲ್ಲಿ ಮಾತ್ರ ಸಾಕಷ್ಟು ರೋಮೀಯ ಶಬ್ದಗಳನ್ನು ನಾವು ಕಾಣುತ್ತಿಲ್ಲ.

ಗ್ರೀಕ ಮತ್ತು ರೋಮೀಯರ ಸಂಪರ್ಕಗಳಾದ ಮೇಲೆ ಕನ್ನಡಿಗರಿಗೆ ಉಂಟಾದ ಸಂಪರ್ಕವೆಂದರೆ ಅರಬರದು. ಈ ಸಂಪರ್ಕವನ್ನು ನಾವು ಕ್ರಿ. ಶ. ೮ ರಿಂದಲೇ ಕಾಣಬಹುದು. ಕ್ರಿ. ಶ. ೮೫೫ರಲ್ಲಿ ಸುಪ್ರಸಿದ್ಧ ಅರಬವರ್ತಕನಾದ ಸುಲೇಮಾನನು ರಾಷ್ಟ್ರಕೂಟ ಅರಸನಾದ ಅಮೋಘವರ್ಷ ನೃಪತುಂಗನನ್ನು ಜಗದ್ವಿಖ್ಯಾತ ಸಮ್ರಾಟನೆಂದು ವರ್ಣಿಸಿದ್ದಾನೆ. ಗುಜರಾಥದಲ್ಲಿದ್ದ ಚಾಲುಕ್ಯ ಮತ್ತು ರಾಷ್ಟ್ರಕೂಟರಿಗೆ ಸಿಂಧದ ಮಾರ್ಗವಾಗಿ ಮುಸಲ್ಮಾನರ ಅಭಿಯೋಗ ಮತ್ತು ಸಂಪರ್ಕಗಳು ಅನಿವಾರ್ಯವಾದವು. ಔತ್ತರೇಯರಿಗೆ ಕಾಲಿದಾಸನು ವರ್ಣಿಸುವ ಹಾಗೆ ಕ್ರಿ. ಶ. ಪ್ರಾರಂಭದಲ್ಲಿಯೇ ಯವನ ಮತ್ತು ಪಾರಸಿಕರ ಸಂಬಂಧವು ಬಂದಿದ್ದರೆ, ಕನ್ನಡಿಗರಿಗೆ ಮಾತ್ರ ಈ ಸಂಪರ್ಕವು ತೀರ ತಡವಾಗಿ ಬಂದಿತು. ಕಾಲಿದಾಸನು ರಘುರಾಜನ ದಿಗ್ವಿಜಯದ ಸಂಬಂಧದಲ್ಲಿ ಅವನು ಭೂಮಾರ್ಗವಾಗಿ ಹೋಗಿ ಸ್ಮಶ್ರುಲರಾದ ಪಾರಸಿಕರನ್ನು ಹಣಿದನೆಂದು ಹೇಳುತ್ತಾನೆ.

ಕಂಠದಿಂದ ಪ್ರಾಣವು ಹೋಗುತ್ತಿದ್ದರೂ ಯವನಭಾಷೆಯನ್ನು ಕಲಿಯಬಾರದಾಗಿ ಸಂಸ್ಕೃತವಲ್ಲಿ ಗಾದೆ ಇದೆ. "ನ ಪಠೇತ್ ಯಾವನೀಂ ಭಾಷಾಂ ಪ್ರಾಣೈಃ ಕಂಠಗತೈರಪಿ." ಆದರೆ ಕನ್ನಡಿಗರಿಗೆ ಮಾತ್ರ ಈ ಮಹಮದೀಯ ಸಂಬಂಧವು ಬಹುಶಃ ಮೊದಲು ಸಲ ಕ್ರಿ. ಶ. ೮ನೆಯ ಶತಮಾನದಲ್ಲೂ ಅನಂತರ ೧೬ನೆಯ ಶತಮಾನದಲ್ಲಿ ಬಹಮನಿಯ ರಾಜ್ಯಗಳ ಕಾಲದಲ್ಲೂ ಮತ್ತು ಕೊನೆಕೊನೆಗೆ ಮೈಸೂರಿನ ಹೈದರ ಮತ್ತು ಟೀಪುಗಳ ಕಾಲದಲ್ಲೂ ಬಂದಿತು. ಆದ್ದರಿಂದ ಈ ಪರ್ಶಿಯನ್ ಶಬ್ದಗಳನ್ನು ಉಳಿದ ಭಾಗಗಳಲ್ಲಿಯಕಿಂತ ಮೈಸೂರ ಪ್ರಾಂತದಲ್ಲಿ ಹೆಚ್ಚಾಗಿ ಕಾಣುತ್ತೇವೆ. ಉತ್ತರಕರ್ನಾಟಕದ ಪಲ್ಲೆ ಅಲ್ಲಿ ತರಕಾರಿಯಾಗಿಯೂ, ಪೇಟೆಯು ಅಲ್ಲಿ ಬಝಾರವಾಗಿಯೂ ಮತ್ತು ಇಲ್ಲಿ ಸುಖವಾಗಿದ್ದ ಜನ ಅಲ್ಲಿ ಷೋಕಾಗಿಯೂ ಮತ್ತು ಇಲ್ಲಿ ಅದ್ಭುತವಾದದ್ದು ಅಲ್ಲಿ ಭರ್ಜರಿಯಾಗಿಯೂ ಇದ್ದುದೇ ಇದಕ್ಕೆ ದೃಷ್ಟಾಂತವಾಗಿವೆ. ಆದರೂ ಅನೇಕ ಮುಸಲ್ಮಾನಿ ಶಬ್ದಗಳು ಕನ್ನಡದ ಹಾಸುಹೊಕ್ಕಿನಲ್ಲಿ ತೀರ ಸೇರಿಕೊಂಡಿದ್ದು, ಇಂದು ಅವನ್ನು ಕನ್ನಡೇತರ ವೆಂದು ಗುರುತಿಸಲು ಕೂಡ ಸಾಧ್ಯವಿಲ್ಲದಾಗಿದೆ. ಉದಾ:— "ರೈತರು ದುಂಬಾಲಬಿದ್ದು ಹವೆಯ ಬಗ್ಗೆ ಅವನ ಸಲಹೆಯನ್ನು ಕೇಳಲು, ಅವನು ಕಾಗದದ ಮೇಲೆ ಏನೂ ಬರೆದುಕೊಡದೆ ಸುಮಾರಾಗಿ ಬಾಜಾರದ ಮಾತಿನ ರೀತಿಯಲ್ಲಿ ಏನನ್ನೋ ಹೇಳಿದನು."

ಈ ಮೇಲಿನ ವಾಕ್ಯದಲ್ಲಿ ಬರುವ ಕ್ರಿಯಾಪದಗಳನ್ನು ಬಿಟ್ಟರೆ ಬಹುಶಃ ಪ್ರತಿಯೊಂದು ಶಬ್ದವೂ ಪರ್ಶಿಯನ್ ಇಲ್ಲವೆ ಅರೆಬಿಕ್ ಆಗಿವೆ. ರೈತ ಶಬ್ದದ ಮೂಲವನ್ನು ರಇಉತ್ತನಲ್ಲೂ, ಹವೆ ಇದರ ಮೂಲವನ್ನು ಹವಾ ಎಂಬುದರಲ್ಲೂ, ಸಲಹೆ ಎಂಬುದರ ಮೂಲವನ್ನು ಸಲಾಹ ಎಂಬುದರಲ್ಲೂ, ಹಾಗೆಯೇ ತ್ರಾಸ–ತರಾಜು, ಕಾಗದ–ಕಾಗಜ್; ಬಾಜಾರ–ಬಾಝಾರ್ ಮೊದಲಾಗಿ ನಾವು ನೋಡಬಹುದು. ಇದರಂತೆಯೇ ನಮ್ಮ ಭಾಷೆಯಲ್ಲಿ ತೀರ ಹೊಂದಿಕೊಂಡು ಹೋದ ಮತ್ತು ಅನ್ಯದೇಶಿಯವೆಂದು ಗುರುತಿಸ ಲಾಗದ ಶಬ್ದಗಳೆಂದರೆ — ಕಚೇರಿ (ಕಚ್ಹರಿ) ರುಮಾಲ (ರೂಮಾಲ್) ಖುರ್ಚಿ (ಕುರ್ಸಿ), ರಾಜೀ (ರಾಝಿ) ತಾರೀಖು (ತಾರೀಖ), ಪರಿವೆ (ಪರ್ವಾಹ), ಜಮೀನ (ಝಮೀನ್), ಹದ್ದು (ಹದ್ದ), ವಸೀಲಿ, (ವಸೀಲಾ), ಕಿಮ್ಮತ್ತು, (ಕೀಮತ್) ಶಾಬಾಸ್, ಅಪ್ಪಪೈಲು, ಚುಕ್ಕಾಣಿ, ಲಂಗರ್, ಮೋಜು; ತಮಾಷೆ; ಮೊದಲಾದ ಶಬ್ದಗಳಲ್ಲಿ ಕಾಣುತ್ತೇವೆ. ಹಾಗೆಯೇ ಕಾಯದಾ, ಆಸಾಮಿ, ಜಪ್ತಿ, ನಾಜೂಕು, ವಝೀರ್, ಅಮೀರ್, ಸಾವುಕಾರಿ, ದಸ್ತಾವೇಜು, ಮೊಖದ್ದಮೆ, ದಾವಾ, ಬಂದೋಬಸ್ತ, ಬಂಗಲಾ, ಶಹಾ, ಸೈರಪ್, ಶರ್ಬತ್, ದಾರು, ಸರಬರಾಯಿ, ಸಿಫಾರಸು, ಸಿಬ್ಬಂದಿ, ಸುಮಾರು, ಖಾಸ, ಬಹದೂರ, ಶಿಲ್ಲಕ, ಮಜಕೂರು, ಜೀನಸು, ಜಮಾ, ತೈನಾತ, ದರಮಾಹೆ; ಬೇರೀಜ್; ಮುಜುರೆ; ಇನಾಮ್; ಕೌಲ್; ಬಾಬ; ಬಾಬತ; ಮಿಳಕತ್; ಸರಕಾರ; ಕಿಲ್ಲಾ; ಬಾಕಿ; ಉಮೇದವಾರ; ಖುಲಾಸಾ; ಖುಶಾಲ; ಜಿಂದಗಿ; ತಜವೀಜ; ಪಸಂತ; ಪೋಕ್ತ; ಫಾಜೀಲ; ನಾಮರ್ದ; ಅಸ್ಸಲ್; ಖುದ್ದ; ಅಲಬತ್; ಖಬರದಾರ್; ಹಮೇಷ; ಬಿಲಕೂಲ; ಮುಷ್ಕೀಲ; ಜಲ್ದ; ನಜರಚೂಕ್; ಜಾದು; ಜಾಹೀರ್; ಮುಶಾಯಿರಾ; ಗೈರಮರ್ಜಿ; ಚೀಖ್; ದೌಲತ್; ಮೋಜು; ವಸ್ತಾದ; ಶಿಕ್ಕಾ; ಇತ್ಯಾದಿ. ದೇಣಗಿ, ಪೋಟಗಿ; ಪಗಾರ-ದಾರ್, ಕಂತ್ರಾಟದಾರ್; ಬಂಡ-ಖೋರ್, ದಿವಾಳ-ಖೋರ್; ದವಾ-ಖಾನಾ; ತೋಫ-ಖಾನಾ; ಮಚ್ಛರ-ದಾಣಿ, ಗುಲಾಬ-ದಾಣಿ; ಪೀಕ-ದಾಣಿ, ಅತ್ತರ-ದಾಣಿ; ತಬಲ್-ಜಿ – ಈ ಮೊದಲಾದವಲ್ಲಿ ಕಾಡುಬರುವ ಪ್ರತ್ಯಯಗಳೂ 'ಪಾರಸಿ' ಆಗಿವೆ. ಈ ಪ್ರಭಾವವು ಕೇವಲ ಸನಾತನಿಗಳಾದ ದಾಸರ ಮೇಲೆಯೂ ಕೂಡ ಆಗದೆ ಹೋಗಿಲ್ಲ. ಪ್ರಸನ್ನವೆಂಕಟರ ಕೀರ್ತನೆಗಳಲ್ಲಿ "ಹರಿ ಎನ್ನಬಾರದೆ ಜಿಹ್ವೆ **ನಾರಮ್‌ನಾಕೆ**–ಹರಿಯೆನ್ನಬಾರದೆ ಜಿಹ್ವೆ" ಎಂದು ಬರುತ್ತದೆ. ಈ ಶಬ್ದಗಳು ಕೂಡ ಪರ್ಶಿಯನ್ ಇಲ್ಲವೇ ಅರೇಬಿಕ್‌ದಿಂದ ಬಂದುವು. "ಮಾಲಕ" ಎನ್ನುವ ಶಬ್ದವು ಹಲವರ ಪ್ರಕಾರ ಮಲ್ ಎನ್ನುವ ಸಂಸ್ಕೃತ ಧಾತುವಿನಿಂದ (ಒಡೆತನ ಪಡೆ) ಮಲಿಕ ಅಂದರೆ ರಾಜನ್

ಒಡೆಯಾ ಎಂದು ಬಂದಿತೆಂದು ಹೇಳುತ್ತಾರೆ. ಆದರೆ ಮತ್ತೆ ಕೆಲವರ ಪ್ರಕಾರ ಈ ಶಬ್ದವು ಅರಬ್ಬಿಭಾಷೆಯಿಂದ ಬಂದಿತೆಂದು ಅಭಿಪ್ರಾಯ ರಸ್ತಾ ಶಬ್ದವು ಕೂಡಾ ಹಲವರ ಪ್ರಕಾರ ಸಂಸ್ಕೃತದ ರಥ್ಯಾ ಪಾಲಿ ರಚ್ಛಾ ಆಗಿ ರಾಸ್ತಾ ಆಯಿತೆಂದು ಹೇಳುತ್ತಾರೆ (ಬಿ ಸಿ. ಮುಜುಮದಾರ, ಪು. ೧೨). ಆದರೆ ಮತ್ತೆ ಕೆಲವರ ಪ್ರಕಾರ ಈ ಶಬ್ದವು ಪರ್ಶಿಯನ್ 'ರಾಹಾ' ಶಬ್ದಕ್ಕೆ 'ಇಸ್ತ' ಎನ್ನುವ ಪ್ರತ್ಯಯವು ಹತ್ತಿ ರೂಪವು ಸಿದ್ಧವಾಯಿತೆಂದು ಹೇಳುತ್ತಾರೆ. ಅದೇನೇ ಇದ್ದರೂ, 'ರಸ್ತಾ' ಅಥವಾ 'ರಸ್ತೆ' ಎನ್ನುವ ಶಬ್ದವು ತೀರ ಸಾಮಾನ್ಯರ ಬಾಯಲ್ಲಿಯೂ ಇರುವದಲ್ಲದೆ 'ರಾಸ್ತ ಮಾತು' ಅಂದರೆ ಸರಳವಾದ ಮಾತು, ಸರಿಯಾದ ಮಾತು ಎನ್ನುವ ಅರ್ಥದಲ್ಲಿ ಹೆಣ್ಣುಮಕ್ಕಳ ಬಾಯಲ್ಲಿಯೂ ಇದ್ದುದನ್ನು ಕಾಣುತ್ತೇವೆ ಈ ರೀತಿ ಅನೇಕ ಮುಹಮ್ಮದೀಯ ಶಬ್ದಗಳು ಕನ್ನಡದಲ್ಲಿ ಗುರುತಿಸಲಾರದಷ್ಟು ಒಳಸೇರಿವೆ. ಪ್ರಾಮುಖ್ಯವಾಗಿ ಈ ಭಾಷೆಯು ಕನ್ನಡಕ್ಕೆ ಕೊಟ್ಟ ಕಾಣಿಕೆಯೆಂದರೆ, ಭೂಮಿ ಮತ್ತು ರಾಜ್ಯವ್ಯವಹಾರಕ್ಕೆ ಸಂಬಂಧಪಟ್ಟಂಥ ಶಬ್ದಗಳು. ಮರಾಠಿ ಭಾಷೆಯಲ್ಲಂತೂ ಈ ಪರ್ಶಿಯನ್ ಅರೇಬಿಕ್ ಸಂಬಂಧವು ಕನ್ನಡದಕಿಂತ ಹೆಚ್ಚಾಗಿದೆ ಅಂತಲೇ ಶ್ರೀಛತ್ರಪತಿ ಶಿವಾಜಿ ಮಹಾರಾಜರು ಕ್ರಿಸ್ತಶಕ ೧೬೭೪ರಲ್ಲಿ ರಘುನಾಥ ಪಂಡಿತನೆಂಬವನಿಗೆ, ರಾಜ್ಯವ್ಯವಹಾರದಲ್ಲಿ ಅತಿಯಾಗಿ ಸೇರಿದ ಈ ಪಾರಸಿ-ಅರಬ್ಬಿ ಶಬ್ದಗಳನ್ನು ಕಿತ್ತುಹಾಕುವುದರ ಸಲುವಾಗಿ, ಒಂದು "ರಾಜ್ಯ-ವ್ಯವಹಾರ ಕೋಶವನ್ನು" ನಿರ್ಮಿಸಲು ಹೇಳಿದರು. ಈ ಕೋಶದ ಮೂಲಕ ಕೆಲಮಟ್ಟಿಗಾದರೂ, ಪಾರಸಿ ಪ್ರಭಾವ ಕಡಿಮೆಯಾದರೂ, ಮುಂದಿನ ಒಂದೆರಡು ತಲೆಮೊರೆಗಳಲ್ಲಿಯೇ ಅದು ಮತ್ತಿಷ್ಟು ತೀವ್ರತಮವಾಗಿ ಪ್ರಾರಂಭವಾಯಿತು. ಹೀಗಾಗಿ, ಛತ್ರಪತಿ ರಾಜಾರಾಮರ ಕಾಲದಲ್ಲಿ ಪುನಃ 'ಅಮಾತ್ಯ' ಪದದ ಬದಲು, 'ಹುಕಮತ-ಪನ್ಹಾ'ವೂ, 'ಸೇನಾ-ಖಾಸ, ಖೇಲಬಹುದೂರ್' — ಮೊದಲಾದ ಬಿರುದುಗಳೂ ಪ್ರಾರಂಭವಾದುವು.

ಅನಂತರ ಕನ್ನಡಕ್ಕೆ ಬಂದ ಸಂಬಂಧವೆಂದರೆ ಹಿಂದುಸ್ತಾನಿ ಭಾಷೆಯನ್ನಾಡುವ ಜನರದು. ಹಿಂದುಸ್ತಾನಿಯಿಂದ ಕನ್ನಡಕ್ಕೆ ಬಂದ ಶಬ್ದಗಳೆಂದರೆ ಈ ಕೆಳಗಿನವು. ಇದರಲ್ಲಿಯೂ ಕೂಡ ಅನೇಕ ಶಬ್ದಗಳು ಅನ್ಯದೇಶೀಯವೆಂದು ಗುರುತಿಸಲು ಸಹ ಸಾಧ್ಯವಿಲ್ಲ. ಉದಾ:—ಅಂತಸ್ತು, ಅಂದಾಜ, ಅಂಬಾರಿ, ಇನಾಮು, ಇರಾದೆ, ಇಸ್ಪಿ, ಕಂದಾಯ, ಕಮ್ಮಿ, ಗಡಿಯಾರ, ಗಾಡಿ, ಗಿರಾಕಿ, ಗಾಬರಿ, ಗುಲಾಮ, ಚಕಬಂದಿ, ಚಿಲ್ಲರೆ, ಚರಂಡಿ, ಚೂರಿ, ಜಾಗಾ, ಟೋಪಿ, ಡಬ್ಬಿ, ಡೇರೆ, ಪಂಜಾ, ಪಕ್ಕ, ಪಲ್ಲಕ್ಕಿ, ಪಸಂದ, ಬಂಗ್ಲಾ, ರುಜು ಮತ್ತು ವಕೀಲ.

ಹಿಂದುಸ್ತಾನಿ ಭಾಷೆ ಆದನಂತರ ಕನ್ನಡವು ಬಹುಮಟ್ಟಿಗೆ ಸ್ವೀಕರಿಸಿದ್ದು ಪೋರ್ತುಗೀಜ ಭಾಷೆಯಿಂದ. ಕರ್ನಾಟಕ ಯುದ್ಧಗಳ ಮುಖಾಂತರ ಫ್ರೆಂಚರ ಸಂಬಂಧವು ಕನ್ನಡ ಜನರಿಗೆ ಸಾಕಷ್ಟುಮಟ್ಟಿಗೆ ಬಂದಿರಬಹುದಾದರೂ ಅಷ್ಟಾಗಿ ನಾವು ಫ್ರೆಂಚರೂಪಗಳನ್ನು ಕನ್ನಡದಲ್ಲಿ ಕಾಣುತ್ತಿಲ್ಲ. ಇವಕ್ಕೆ ಆ ಕಾಲದ ಪ್ರಕ್ಷುಬ್ಧ ಪರಿಸ್ಥಿತಿಯೇ ಕಾರಣವಾಗಿರಬಹುದು ಆದರೆ ಪೋರ್ತುಗೀಜ ಸಂಪರ್ಕವು ಮಾತ್ರ ಈ ರೀತಿಯಾಗಲಿಲ್ಲ. ವಿಜಯನಗರ ಕಾಲಕ್ಕಂತೂ ವ್ಯಾಪಾರ-ವ್ಯವಹಾರಗಳ ಮೂಲಕ ಪೋರ್ತುಗಾಲದ ಸಂಪರ್ಕವು ಕರ್ನಾಟಕದ ಕೂಡ ಅತಿಯಾಗಿ ಬೆಳೆಯಿತು. ಕರ್ನಾಟಕದ ಕುದುರೆಗಳ ವ್ಯವಹಾರವು ಬಹುಶಃ ಪೋರ್ತುಗೀಜರ ಮುಖಾಂತರವೇ ನಡೆಯುತ್ತಿತ್ತು. ಫಾದರ್ ಹೆರಾಸ್ ಅವರ ಪ್ರಕಾರವಂತೂ ವಿಜಯನಗರದ ವಿಜಯವಿಠ್ಠಲ ಸ್ವಾಮಿಯ ಗುಡಿಯಲ್ಲಿಯ ಅನೇಕ ಚಿತ್ರಗಳು ಪೋರ್ತುಗೀಜ್‌ರವಾಗಿವೆ.* ಚಲುಕ್ಯ ೨ನೆಯ ಪುಲಕೇಶಿಯ

* Mythic Society Journal; 1926

ಓಲಗದಲ್ಲಿಯ ಇರಾಣದ ರಾಯಭಾರಿಯ ಚಿತ್ರವನ್ನು ನೋಡಿದವರಿಗೆ, ಈ ರೀತಿ ವಿದೇಶೀಯರ ಚಿತ್ರಗಳು ನಮ್ಮ ಶಿಲ್ಪದಲ್ಲಿ ಕಂಡುಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಫಾದರ್ ಹೆರಾಸ್ ಅವರ ಪ್ರಕಾರ ಮೇಲೆ ವಿವರಿಸಿದ ವ್ಯಕ್ತಿಗಳ ಉಡಿಗೆಗಳು ೧೬ನೆಯ ಶತಮಾನದ ಪೋರ್ತುಗೀಜರ ಉಡಿಗೆಗಳನ್ನು ಹೋಲುತ್ತಿವೆ. ೧೫೧೪ ರಲ್ಲಿ ಕೃಷ್ಣದೇವರಾಯನು ಅಲ್ಬುಕರ್ಕನಿಗೆ ಅರೇಬಿಯಾದಿಂದ ಬರುವ ಯಾವತ್ತೂ ಕುದುರೆಗಳನ್ನು ತನ್ನ ಕಡೆಗೆ ಕಳುಹಲಿಕ್ಕೆ ತಿಳಿಸಿದ್ದನು. ಆ ಪ್ರಕಾರ ಅಲ್ಬುಕರ್ಕನು ಕುದುರೆಗಳನ್ನು ಕಳುಹಿಸಿದ್ದರ ಮೂಲಕವೇ ಏನೋ ಈ ಗುಡಿಯಲ್ಲಿ ಅನೇಕ ಕುದುರೆಗಳ ಚಿತ್ರಗಳು ಇವೆ. ಇಲ್ಲಿ ಕಂಡು ಬರುವ ಪಾದ್ರಿಯ ಚಿತ್ರವು, ಹೆರಾಸ್ ಅವರ ಪ್ರಕಾರ, ೧೫೧೦ ರಲ್ಲಿ ಅಲ್ಬುಕರ್ಕನು ವಿಜಯನಗರಕ್ಕೆ ಕಳುಹಿದ "ಫ್ರೈಲುಇಝು" ಎಂಬ ಪಾದ್ರಿಯದಾಗಿರಬೇಕು. ಈ ಪಾದ್ರಿಯು ವಿಜಯನಗರದಲ್ಲಿ ಒಂದು ವರ್ಷ ಕಾಲ ಇರುವುದರಲ್ಲಿಯೇ, ವಿಜಾಪುರ ಸುಲ್ತಾನನ ಹಸ್ತಕನಿಂದ ಕೊಲ್ಲಲ್ಪಟ್ಟನು. ಶ್ರೀ. ಶಂ. ಬಾ. ಜೋಶಿ ಅವರ ಅಭಿಪ್ರಾಯದ ಪ್ರಕಾರ ಅನೇಕ ತಿನ್ನುವ ವಸ್ತುಗಳ, ಆಯುಧಗಳ ಮತ್ತು ಸಮಾಜವ್ಯವಸ್ಥೆಯ ಶಬ್ದಗಳು ಪೋರ್ತುಗೀಜದಿಂದ ಕನ್ನಡಕ್ಕೆ ಬಂದುವು. ಉದಾ:—ಪಗಾರ, ಚಾವಿ, ಕಾಡತೂಸ, ರತ್ತಲ, ಬಿಸ್ಕುಟ, ಕೋಬಿ, ಫಿರಂಗಿ, ಪಾದ್ರಿ, ನಾತಾಳ, ಲಿಲಾವ, ಬಂಬು, ಇಸ್ತ್ರೀ, ಆಪೂಸ, ಪಾಯರಿ, ಫರ್ನಾದಿ,—ಇತ್ಯಾದಿ ಪ್ರೊ. ಮರಿಯಪ್ಪ ಭಟ್ಟರವರು ಇನ್ನೂ ಕೆಲವು ಶಬ್ದಗಳನ್ನು ಹೇಳುತ್ತಾರೆ. ತೆಪ್ಪ ಎನ್ನುವ ಅರ್ಥದಲ್ಲಿ ಉಪಯೋಗಿಸುವ 'ಜಂಗಾಲ್' ಶಬ್ದವು ಪೋರ್ತುಗೀಜ 'ಜಂಗಡ'ದಿಂದ 'jangada.' ಬಂದುದು. ಮೇಜ, (mesa) ಮೇಸಿನಿಂದಲೂ 'ಬಟಾಟೆ', ಬಟಾಟದಿಂದಲೂ (Batata) ತಂಬಾಕು ಟಬಾಕೊದಿಂದಲೂ (tabaco) ಪಪ್ಪಾಯಿ, ಪಪಾಯದಿಂದಲೂ (carica papaya) ಶಾಲು ಚಾಲೆದಿಂದಲೂ (cale), ಟಾವೆಲ್ಲು ಟೋಅಲ್ಹಾದಿಂದಲೂ (toalha), ಜನೆಲ್ಲು ಜನೆಲ್ಲಾದಿಂದಲೂ ಬಂದುವು.

ಇಂಗ್ಲೀಷದಲ್ಲಿರುವ ಮ್ಯಾಂಗೋ ಶಬ್ದವು ಹಲವರ ಪ್ರಕಾರ ಪೋರ್ತುಗೀಜ್ ಎಂದು ಇದ್ದದ್ದು ಸರಿ ಅಲ್ಲ. ಅದು ದ್ರಾವಿಡ ಮಾವಿನಕಾಯಿ ಎಂಬುದು ಕೂಡಿ ಮಾಂಗಾಯ್ ಆಗಿ ಪೋರ್ತುಗೀಜದ ಮುಖಾಂತರ ಇಂಗ್ಲಿಷಕ್ಕೆ ಹೋಯಿತು. ಇದು ಮೂಲತಃ ದ್ರಾವಿಡ ಅಥವಾ ಅದಕ್ಕೂ ಹೆಚ್ಚು ಕನ್ನಡದ ಸಮೀಪದಲ್ಲಿರುವ ಶಬ್ದ. ೧೩ನೇ ಶತಮಾನದಲ್ಲಿ ತನ್ನ ಬಸವರಾಜದೇವರ ರಗಳೆಯನ್ನು ಬರೆದ ಹರಿಹರ ಕವಿಯಲ್ಲಿ ಮಾಗಾಯ್ ಎಂದು ರೂಪವು ಬರುತ್ತದೆ:—"ತೊದಳ್ನುಡಿಯ ತವಕಿಗಂ ನಲಿವ **ಮಾಗಾಯ** ನವನರ್ತನದ ಹಸನಿಗಂ" ಎಂದು ಬರುತ್ತದೆ. ಇಂದಿಗೂ ಚಿಕ್ಕಮಕ್ಕಳ ಆಭರಣದಲ್ಲಿ ಅರಳೆಲೆ ಮಾಗಾಯ್‌ಗಳಿದ್ದುದನ್ನು ಕಾಣಬಹುದು. ಆದ್ದರಿಂದ ಈ ಮಾಗಾಯ್ ಶಬ್ದವೇ ಪೋರ್ತುಗೀಜ್ ಮುಖಾಂತರ ಇಂಗ್ಲೀಷಕ್ಕೆ ಹೋಯಿತೆಂದು ಹೇಳಬೇಕು. ಶ್ರೀ. ಬಿ. ಸಿ. ಮುಜುಮದಾರರವರು ಹೇಳುವಂತೆ —

"The word 'mango' is the Portuguese form of the Dravidian word 'ಮಾಂಗಾಯ್' "

ಇದರಂತೆ, ಪ್ರೊ. ಮರಿಯಪ್ಪ ಭಟ್ಟರವರ ಪ್ರಕಾರ 'ಅನಾನಸು' ಹಣ್ಣು ಕೂಡ ಪೋರ್ತುಗೀಜ್ 'ಅನನಾಸ್'ದಿಂದ (ananas) ಬಂತು. ಇದನ್ನೇ ಮಲಯಾಳಿಯಲ್ಲಿ ಫರಂಗಿ ಚಕ್ಕೆ(ಚಕ್ಕೆ=ಹಲಸಿನಕಾಯಿ)— ಎಂದು ಕರೆಯುತ್ತಾರಂತೆ. ಆದರೆ, ಪ್ರೊ. ವೀಕ್ಲಿ ಅವರ ಅಭಿಪ್ರಾಯದ ಪ್ರಕಾರ 'ಅನಾನಸ್' ಫ್ರೆಂಚ್ ಶಬ್ದ ಅಥವಾ ಮೂಲತಃ 'ಬ್ರೆಝೀಲಿಯನ್' ಶಬ್ದ —

"The French name for the fruit is 'ananas', a Brazilian word. A vegetarian friend of the writer, misled by superficial likeness of this word to banana, once petrified a Belgian writer by ordering half a dozen for his lunch."*

* The Romance of Words, P. 32.

ಕನ್ನಡದ 'ಚಾಬೂಕು' ಶಬ್ದವಾದರೂ ಹೀಗೆಯೇ. ಹಳಗನ್ನಡದಲ್ಲಿ ಈ ಶಬ್ದದ ಪರ್ಯಾಯಪದಗಳಾಗಿ ಚಮ್ಮಟಿಗೆ, ಕಸೆಗೋಲು, ಕೋರಡಾ—ಮೊದಲಾದ ಪದಗಳನ್ನು ಕಾಣುತ್ತೇವೆ. ಇದರಲ್ಲಿಯ 'ಚಮ್ಮಟಿಗೆ' ಸಂಸ್ಕೃತ 'ಚರ್ಮಪಟ್ಟಿಕಾ'ದ ತದ್ಭವ. ಕಸೆಗೋಲು, ಬಾರುಕೋಲು ವರ್ಣಕಶಬ್ದಗಳು. 'ಕೋರಡಾ' ಶಬ್ದದ 'ಧ್ವನಿ' ಮಾತ್ರ ಪುನಃ ಅನ್ಯದೇಶೀಯವೆಂದು ಕಾಣುತ್ತದೆ ಆದರೂ, ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ 'ಹಿಂಸಕ' ಎನ್ನುವ ಅರ್ಥದಲ್ಲಿ 'ಕೋರಡಿಗ' ಎಂದು ಪ್ರಯೋಗವಿದೆ:—"ನೆಜಿಿದ ಕೋಪಾಗ್ನಿಯಂ ಬಿಡು ತಂದೆಯೆಂದು ಧರೆಗುಱುವ ಸತಿಸುತವೆರಸಿ ಪೊಡವಟ್ಟ ಡೆಅಣಕಿಸಿದನಾ ಆಸುರದ **ಕೋರಡಿಗನು**". ಕಿಟೆಲ್ ಅವರೂ ಈ ಶಬ್ದವನ್ನು ಅನ್ಯದೇಶೀಯವೆಂದೇ ಕೊಡುತ್ತಾರೆ. ಇದರಂತೆ, ಮೇಲೆ ಹೇಳಿದ 'ಚಾಬೂಕ್' ಶಬ್ದವಾದರೂ ಅನ್ಯದೇಶೀಯವೇ; ಪ್ರೊ. ಮರಿಯಪ್ಪ ಭಟ್ಟರವರು ಪುನಃ ಈ ಶಬ್ದವು ಪೋರ್ತುಗೀಸ್ 'Chabuco'ದಿಂದ ಬಂದುದೆಂದು ಹೇಳುತ್ತಾರೆ. ಆದರೆ, ನಿಜವಾಗಿ ಈ ಶಬ್ದವು ಮೂಲತಃ ಪರ್ಶಿಯನ್. ಈ ಶಬ್ದದ ಪರ್ಯಟನವು ಸಾಕಷ್ಟಾಗಿದೆ. ಏನಿಲ್ಲೆಂದರೂ ಈ ಶಬ್ದವು ಸಾವಿರಾರು ಮೈಲುಗಳನ್ನು ಕ್ರಮಿಸಿರಬೇಕು. ಕನ್ನಡಿಗರಿಗೆ ಸಂಪರ್ಕ ಬಂದಾಗ ಈ ಶಬ್ದವು ಪೋರ್ತುಗೀಜ್ ಮುಖಾಂತರವಾಗಿ ಬಂದಿದ್ದರೂ ಮೂಲತಃ ಪರ್ಶಿಯನ್ ಶಬ್ದವಾದ ಇದನ್ನು ಇಂಗ್ಲಿಷರು 'Chabouk' ಎಂದು ಮಾಡಿಕೊಂಡರು. ಮೂರ್ ಅವರು ಬರೆದ 'ಲಾಲಾ ರೂಖ್'ದಲ್ಲಿ 'Chabouk' ಎಂದು ಬರುತ್ತದೆ. ಹಿಂದುಸ್ಥಾನದ ಬಗ್ಗೆ ಇರುವ ಆಂಗ್ಲ ವರ್ಣನೆಗಳಲ್ಲಿ Sjambokದ ಬದಲು 'ಚಾಃಬಕ್' ಎಂದೇ ಬರುತ್ತದೆ. ಈ ಪರ್ಶಿಯನ್ ಶಬ್ದವನ್ನೇ ಪೋರ್ತುಗೀಜ್ ಹಿಂದುಸ್ಥಾನದಲ್ಲಿ ನೆಲಸಿದ ಪೋರ್ತುಗೀಜ್‌ರು 'Chabuco' ಎಂದು ಮಾರ್ಪಡಿಸಿಕೊಂಡರು. ಇದರಿಂದಲೇ ಕನ್ನಡ 'ಚಾಬೂಕು' ಸಿದ್ಧವಾಯಿತು.—

> "'Sjambok' occurs in 17th century accounts of India in the form 'chawbuck'. It is a Persian word spelt 'chabouk' by Moore in Lalla Rookh. It was adopted by the Portuguese as 'chabuco' in Portuguese India, a whip or scourge.''†

'ಅಯಾ'–ದಾಯಿ ಎನ್ನುವ ಶಬ್ದವು ಪೋರ್ತುಗೀಸ್ ಮುಖಾಂತರವೇ ಉಳಿದ ಐರೋಪ್ಯ ಭಾಷೆಗಳಿಗೆ ಹೋಯಿತು.

> "Ayah, an Indian nurse, is Portuguese aia, nurse of unknown origin ''‡

'ತಂಬಾಕ'ದ ಬಗ್ಗೆ ಪ್ರೊ. ವೀಕ್ಲಿ ಅವರು ಬರೆಯುವದೆಂದರೆ:—

> "Tobacco does not take its name from the island of Tobago, but from the native name of the tube through which the Caribs smoked it."

ಕೊನೆಯದಾಗಿ, ಪೋರ್ತುಗೀಜ್‌ದಿಂದ ಬಂದುದೆಂದು ಪ್ರೊ. ಮರಿಯಪ್ಪ ಭಟ್ಟರವರು ಹೇಳುವ ಇನ್ನೊಂದು ಶಬ್ದವನ್ನು ನೋಡೋಣ:—ಅದೆಂದರೆ, 'ಸಾಬೂಣ್' 'ಸಾಬಾಣ'—ಎಂಬುದು. ಈ ಶಬ್ದವು ಪ್ರೊ. ಭಟ್ಟರವರ ಪ್ರಕಾರ ಪೋರ್ತುಗೀಜ್ 'ಸಬಾಓ' 'Sabao'ದಿಂದ ಬಂದಿತು. ಇದರ ಇಂಗ್ಲಿಷ್ ರೂಪವೇ 'ಸೋಪ್' ಎಂಬುದು.

† Ibid, P. 26. ‡ Ibid, P. 194.

ಆದರೆ, ಕರ್ನಾಟಕದಲ್ಲಿ ಈ ವಸ್ತುನಿರ್ದೇಶವು ಮೂರು ವಿಧವಾಗಿ ಆಗುತ್ತಿರುವದನ್ನು ನಾವು ಕಾಣುತ್ತೇವೆ ಇವನ್ನು ಮೈಸೂರು ಪ್ರಾಂತದಲ್ಲಿ 'ಸಬ್ಬು' ಎಂದೂ. ಗ್ರಾಮ್ಯಜನರು 'ಸಬ್ಬ-ಸಬ-ಕಾರ'ವೆಂದೂ, ಉತ್ತರ ಕರ್ನಾಟಕದವರು 'ಸಾಬೂಣ್' 'ಸಾಬಾಣ'ವೆಂದೂ ಕರೆಯುತ್ತಾರೆ. ಪೋರ್ತುಗೀಜ್ ದಿಂದಲೇ ಈ ಶಬ್ದವು ಬಂದಿರಬೇಕಾದರೆ 'ಸಬ್ಬು' 'Sabao' 'ಸಬಕಾರ'ವೇನೋ ಸರಿಹೋಯಿತು ಆದರೆ, 'ಸಾಬಾಣ' 'ಸಾಬೂಣ'ಗಳಲ್ಲಿಯ ದೀರ್ಘ ಮತ್ತು 'ಣ'ಕಾರಗಳು ಎಲ್ಲಿಂದ ಬಂದುವು? ಒಂದೇ ವಸ್ತು ನಿರ್ದೇಶಕ್ಕೆ ಉತ್ತರ ಕರ್ನಾಟಕದಲ್ಲಿ ಒಂದು ರೂಪವೇಕೆ ಬಂದಿತು? ಮೈಸೂರು ಪ್ರಾಂತದಲ್ಲಿ ಬೇರೆ ರೂಪ ಯಾಕೆ ನೆಲಸಿತು?- ಇದನ್ನು ಪರ್ಯಾಲೋಚಿಸಿದರೆ, ಉತ್ತರ ಕರ್ನಾಟಕದಲ್ಲಿಯಂತೇ ಇನ್ನೂ ಅನೇಕ ಆರ್ಯವರ್ಗದ ಭಾಷೆಗಳಾದ ಮರಾಠಿ ಮೊದಲಾದ ಭಾಷೆಗಳಲ್ಲೂ ನಾವು ಈ 'ಸಾಬೂಣ' ರೂಪವನ್ನೇ ಕಾಣುತ್ತೇವೆ. ಹಾಗಾದರೆ, ಇದರ ಸಮರ್ಥನೆಯೇನು? . ನಿಜವಾಗಿ ಮೇಲಿನ ವಿವರಣೆಯಿಂದ ಕಂಡು ಬರುವದೇನಂದರೆ, ಪೋರ್ತುಗೀಜ್ 'Sabao' ಉತ್ತರದ 'ಸಾಬೂಣು' ಕೊಡಲಿಲ್ಲ; ಬಹುಶಃ ಪರ್ಶಿಯನ್ ಭಾಷೆಯು ಈ ರೂಪವನ್ನು ಕೊಟ್ಟಿತು ಪೋರ್ತುಗೀಜ್ 'ಸಬ್ಬ'ನ್ನು ಮಾತ್ರ ಕೊಟ್ಟಿತು. ಹಾಗಾದರೆ, ಈ 'ಸಾಬೂಣದ' ಮೂಲವಾವುದು? ಅದು ನಮ್ಮಲ್ಲಿ ಬಂದ ಕಾಲವನ್ನು ಹೆಚ್ಚುಕಡಿಮೆ ಗುರುತಿಸಬಹುದೇ?— ನೋಡೋಣ —

'ಸಾಬೂಣ' ಶಬ್ದದ ಇತಿಹಾಸವೂ ಮತ್ತು ಅದರ ಕ್ರಮದ ವಿಷಯವೂ ಸಾಕಷ್ಟು ಪ್ರಾಚೀನ ನಾಗಿದೆ. ಈ ವಸ್ತುವಿನ ಶೋಧವು ಹಿಂದುಸ್ಥಾನದಲ್ಲಿ ಆಗುವ ಮೊದಲು ಭಾರತೀಯರು ಸ್ವಚ್ಛತೆಗಾಗಿ, 'ಸಪ್ತಲಾ' 'ಆಮಲಕ' 'ಸೀಕೆಕಾಯಿ' ಮತ್ತು 'ಫೇನಕ'ಗಳನ್ನು ಉಪಯೋಗಿಸುತ್ತಿದ್ದರು ಈ ಕೊನೆಯ 'ಫೇನಕ'ವು ಹೆಚ್ಚುಕಡಿಮೆ ಸಾಬಾಣದ ಹಾಗೆಯೇ ಇರಬೇಕು. ನಾಗರಕನ ವಿಷಯವಾಗಿ ಹೇಳುವಾಗ ವಾತ್ಸ್ಯಾಯನನು –"ನಿತ್ಯಮ್ ಸ್ನಾನಮ್; ದ್ವಿತೀಯಕಮ್ ಉತ್ಸಾದನಮ್; ತೃತಿಯಕಃ ಫೇನಕಃ; ಚತುರ್ಥಕಮ್ ಆಯುಷ್ಯಮ್"—ಎಂದು ಹೇಳಿದ್ದಾನೆ. ಅಂದರೆ, ನಾಗರಕ ಅಥವಾ 'ಫ್ಯಾಶನ್' ಬಲ್ಲವನು "ಪ್ರತಿದಿವಸ ಸ್ನಾನಮಾಡಬೇಕು; ಒಂದು ದಿವಸ ಬಿಟ್ಟು ಒಂದು ದಿವಸ ದೇಹವನ್ನು ಎಣ್ಣೆಯಿಂದ ಉಜ್ಜಿಸಿ ಕೊಳ್ಳಬೇಕು; ಪ್ರತಿ ಮೂರು ದಿವಸಕ್ಕೊಮ್ಮೆ 'ಫೇನಕ'ವನ್ನು ಉಪಯೋಗಿಸಬೇಕು; ಪ್ರತಿ ನಾಲ್ಕು ದಿವಸಕ್ಕೆ ಕ್ಷೌರಮಾಡಿಸಿಕೊಳ್ಳಬೇಕು." ಇಲ್ಲಿ ಬರುವ 'ಫೇನಕ'ವು ಹೆಚ್ಚುಕಡಿಮೆ ಇಂದಿನ ಸಾಬಾಣದಂತಹದೇ. ಕ್ರಮವು ಒಂದೇ ಆಗಿದ್ದರೂ ನಾವಿನ್ನೂ ಪ್ರತ್ಯಕ್ಷವಾಗಿ 'ಸಾಬಾಣ' ಶಬ್ದವನ್ನು ಕಾಣುತ್ತಿಲ್ಲ.

'ಸಾಬಾಣ'ವು 'ಗಾಃಲ್' ಜನರಿಂದ ಸಿದ್ಧವಾಗಿದ್ದು, ಅದನ್ನು ದೇಹವನ್ನು ತೊಳೆಯುವದಕ್ಕಿಂತ ಕೇಶಸೌಂದರ್ಯಕ್ಕಾಗಿ ಉಪಯೋಗಿಸುತ್ತಿದ್ದರೆಂದು 'ಪ್ಲಿನಿ' ಹೇಳುತ್ತಾನೆ ಕ್ರಿ. ಶ. ೧೩೧ ರಿಂದ ೨೦೧ರ ವರೆಗಿದ್ದ ಗ್ಯಾಲಿನ್‌ನು 'ಸಾಬಾಣವು ಸ್ವಚ್ಛತೆಗಾಗಿ ಉಪಯೋಗಿಸಲ್ಪಡುತ್ತಿದ್ದಿ'ತೆಂದು ಹೇಳುತ್ತಾನೆ. ಕ್ರಿ.ಪೂ. ೨೬೫ರಲ್ಲಿದ್ದ 'ಥಿಆಕ್ರಿಟೋಸನು' (Theokritos) ಬಟ್ಟೆಗಳನ್ನು ಒಗೆಯುವುದರ ಸಲುವಾಗಿ ಸಾಬಾಣವನ್ನು ಉಪಯೋಗಿಸುತ್ತಾರೆಂದು ಹೇಳುತ್ತಾನೆ. ಹಿಂದುಸ್ಥಾನದಲ್ಲಿಯ ಪೋರ್ತುಗೀಜ್ ಕೋಟೆ ಮತ್ತು ವಸತಿಗಳ ಬಗ್ಗೆ ಬರೆಯುವಾಗ ಜೊಕ್ಯಾರೊ ಅನ್ನುವವನು "Saffron from Portugal, *Sabao*, porcelain and some silk cloth"—ಎಂದು ಹೇಳುತ್ತಾನೆ.

ಈ 'ಸೋಪ್' ಶಬ್ದವೇ, ಪರ್ಶಿಯನ್‌ದಲ್ಲಿ "ಶಾಬೂನ್" ಎಂದೂ; ಅರೆಬಿಕ್‌ದಲ್ಲಿ "ಶಬೋನ್" ಎಂದೂ; ಟರ್ಕಿಶ್‌ದಲ್ಲಿ "ಶಾಬನ್"—ಎಂದೂ ಆಗುತ್ತದೆ. ಈ ರೂಪಗಳು ಉತ್ತರ-ಕರ್ನಾಟಕದ ಶಬ್ದದ ರೂಪದ ಸಮೀಪವಿದ್ದುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು.

ಈ ಶಬ್ದದ ಭಾರತೀಯ ಪ್ರಯೋಗವನ್ನು ನಾವು ಮೊಟ್ಟಮೊದಲಿಗೆ ಬಹುಶಃ ಗುರು ನಾನಕರ "Japji Sahib"ದಲ್ಲೂ ಕಾಣುತ್ತೇವೆ. ನಾನಕರಲ್ಲಿ. "ಮೂತ ಫಲೀತೀ ಕಪಡ ಹೋಯದೇ **ಸಬೂನೀ** ಲಯ್ಯೇ ಧೂಯೇ" ಎಂದು ಬರುತ್ತದೆಂದು ಹೇಳುತ್ತಾರೆ. ಅಂದರೆ, ವಸ್ತ್ರಗಳು ಮಲಿನವಾಗಿದ್ದರೆ, ಅವನ್ನು 'ಸಾಬೂಣ'ದಿಂದ ತೊಳೆಯಬೇಕು. ಅದರಂತೆ, ಮುಂದುವರೆಯುತ್ತ ನಾನಕರು ಹೇಳುವದೇನಂದರೆ— "ಮನಸ್ಸು ಮಲಿನವಾದರೆ, ಪರಮಾತ್ಮನ ಹೆಸರಿನ ಉಚ್ಚರಣೆಯಿಂದ ಅದನ್ನು ಶುದ್ಧಗೊಳಿಸಬೇಕು." ಈ ಗ್ರಂಥದ ಕಾಲ ಕ್ರಿ. ಶ. ೧೫೧೦.

ಕ್ರಿಸ್ತಶಕ ೧೬೮೮ರ ಒಂದು ಮರಾಠಿ ಉಲ್ಲೇಖದಲ್ಲಿ ಪೇಶವೆಯರ ಕಾಲದಲ್ಲಿ ಮಾರಾಟವಾದ ಅನೇಕ ವಸ್ತುಗಳಲ್ಲಿ ಈ ಕೆಳಗಿನವನ್ನು ನಿರ್ದೇಶಿಸುತ್ತಾರೆ:—"ಇಂಗ್ರಜೀ ಖಿಲೇ; ಇಂಗ್ರಜೀ ಕಾಗದ ದಸ್ತೇ; '**ಸೋಪ**' ವಿಲಾಯತೀ"—ಇತ್ಯಾದಿ.

ಧುಂಡಿರಾಜನ ಮಗನಾದ 'ಮಾಲು'ನ 'ನವನಾಥ ಭಕ್ತಿಸಾರ'ದಲ್ಲಿ—

"ಜೈಸೇ ವಸ್ತ್ರ ಸ್ಪರ್ಶಿಲ್ಯಾ **ಸಾಬಣೇ**
ಸಕಳ ಮಳಾಚೇ ಹೋಯ ಹಾನೀ"—

ಎಂದು ಬರುತ್ತದೆ.

ಕ್ರಿ. ಶ. ೧೫೯೯ರಿಂದ ೧೬೪೯ರ ವರೆಗಿದ್ದ ಮುಕ್ತೇಶ್ವರರಲ್ಲಿ—

"**ಸಾಬಣ** ಪಾಂಡುನಿ ಗೇರುಸಿ ನಾಶಿಲೆ
ಸಕಳ ಫೇತಲಾ ಕಾಚಾರೇ—"

ಎಂದು ಬರುತ್ತದೆ.

ಸಾರಾಂಶವೇನೆಂದರೆ:—ಕನ್ನಡದಲ್ಲಿ ಮೂರು ವಿಧವಾಗಿ ಉಪಯೋಗಿಸಲ್ಪಡುವ 'Soap' ಶಬ್ದದ ರೂಪಾಂತರದಲ್ಲಿ ನಾವು ಬಹುಶಃ ಎರಡು ಬೇರೆ ಬೇರೆ ಪ್ರಭಾವಗಳನ್ನು ಕಾಣಬಹುದು. ಪೋರ್ತುಗೀಜ್ ಮುಖಾಂತರವಾಗಿ 'Sabao'ದಿಂದ ಮೈಸೂರು ಪ್ರಾಂತದ 'ಸಬ್ಬು' ಮತ್ತು ಗ್ರಾಮ್ಯ 'ಸಬಕಾರ'ಗಳು ಬಂದಿದ್ದರೆ, ಉತ್ತರಕರ್ನಾಟಕದ 'ಸಾಬಾಣ'ದಲ್ಲಿ ಬಹುಶಃ ಪರ್ಶಿಯನ್ ಇಲ್ಲವೆ ಅರೆಬಿಕ್ ಪ್ರಭಾವವನ್ನೋ ಇಲ್ಲವೆ ಮರಾಠಿ ಮೊದಲಾದ ಭಾಷೆಗಳಲ್ಲಿ ಪ್ರಚಲಿತವಿದ್ದ ರೂಪಗಳ ಸ್ವೀಕರಣೆಯನ್ನೋ ಕಾಣಬಹುದಾಗಿದೆ. ಭಾರತದಲ್ಲಿ ಪೋರ್ತುಗೀಜ್‌ರ ಆಗಮನದಕಿಂತ ಮೊದಲು ಈ ಶಬ್ದವು ನಮ್ಮ ಭಾಷೆಗಳಲ್ಲಿ ಗೊತ್ತಿರಲಿಲ್ಲ ವೆಂದು ಹೇಳಬಹುದಾದರೂ, ಅದರ ಬೇರೆ ಬೇರೆ ರೂಪಗಳಲ್ಲಿ ಬೇರೆ ಬೇರೆ ಮೂಲವನ್ನು ಕಾಣಬಹುದು. ಈ ಎಲ್ಲ ರೂಪಗಳಿಗೂ ಲ್ಯಾಟಿನ್ 'Sapo' ಇಲ್ಲವೆ 'ಗೇಲಿಕ್' ಮೂಲವಿದ್ದುದು ಸ್ಪಷ್ಟ *

ಈ ಪ್ರಕಾರ, ಮೇಲೆ ವಿವರಿಸಿದ ಎರಡು ಮೂರು ಸಂದರ್ಭಗಳನ್ನು ಬಿಟ್ಟರೆ ಇತರತ್ರ ನಾವು ಪೋರ್ತುಗೀಜ್ ಭಾಷೆಯ ಸುಸ್ಪಷ್ಟ ಪ್ರಭಾವವನ್ನು ಕಾಣದಿರೆವು. ಆದರೆ, ಪೋರ್ತುಗೀಜ್ ಭಾಷೆಯು ಮಾಡಿದಷ್ಟು ಪ್ರಭಾವವನ್ನು ಫ್ರೆಂಚ್ ಭಾಷೆಯು ಕನ್ನಡದ ಮೇಲೆ ಅಷ್ಟಾಗಿ ಮಾಡಲಿಲ್ಲ. ಇತ್ತೀಚೆ ಕನ್ನಡದಲ್ಲಿ

* ಇದರ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಶ್ರೀ ಪಿ. ಕೆ. ಗೋಡೆ ಅವರು ಅಕ್ಟೋಬರ್ ೧೯೪೩ನೆಯ ಇಸ್ವಿಯ 'Poona Orientalist'ದಲ್ಲಿಯ ಲೇಖನವನ್ನು ನೋಡುವುದು

ಬರುತ್ತಿರುವ 'ರೆಸ್ತರಾಂ' 'ಕೇಫ್' 'ಡಿಲಕ್ಸ'—ಮೊದಲಾದ ಪ್ರಯೋಗಗಳಲ್ಲಿ ಮಾತ್ರ ನಾವು ಫ್ರೆಂಚ್ ಪ್ರಭಾವವನ್ನು ಕಾಣಬಹುದು.

ಆರ್ಯಸಂಸ್ಕೃತ, ಗ್ರೀಕ್-ರೋಮೀಯ, ಅರೆಬಿಕ್-ಪರ್ಶಿಯನ್, ಹಿಂದುಸ್ಥಾನಿ, ಫ್ರೆಂಚ್-ಪೋರ್ತುಗೀಜ್ ಪ್ರಭಾವಗಳ ನಂತರ ಕನ್ನಡದ ಮೇಲೆ ತೀರ ಪ್ರಭಾವಶಾಲಿಯಾಗಿ ಪರಿಣಾಮ ಮಾಡಿದ ಮತ್ತು ಇಂದಿಗೂ ಮಾಡುತ್ತಿರುವ ಭಾಷೆಯೆಂದರೆ 'ಇಂಗ್ಲಿಷು.'

ಕರ್ನಾಟಕದ ಮೇಲಾದ ಇಂಗ್ಲಿಷ್ ಪ್ರಭಾವವು ಕೇವಲ ಸೈನಿಕ ದಿಗ್ವಿಜಯದ ರೀತಿಯದು ಮಾತ್ರ ವಾಗಿರದೆ, ಸಾಂಸ್ಕೃತಿಕ ಮತ್ತು ಸಾಹಿತ್ಯಕವೂ ಕೂಡ ಆಗಿದೆ. ಹೀಗಾಗಿ, ಇಂದಿನ ಕನ್ನಡದಲ್ಲಿ ಅನೇಕ ಸಾಂಸ್ಕೃತಿಕ ಸಂಶೋಧನೆಗಳನ್ನು ಹೇಳುವ ಶಬ್ದಗಳೂ, ಸಾಹಿತ್ಯದ ಪ್ರಯೋಗದ ರೀತಿಗಳೂ, ರಾಜ್ಯಾಂಗ, ಸೈನ್ಯವ್ಯವಸ್ಥೆ—ಮೊದಲಾದವುಗಳಿಗೆ ಸೇರಿದ ಶಬ್ದಗಳೂ ತುಂಬಾ ಇಂಗ್ಲಿಷ್ ಪ್ರಭಾವದಿಂದ ಉಂಟಾದು ವಾಗಿವೆ. ಇಂದಿನ ಕನ್ನಡ ಸಾಹಿತ್ಯದಲ್ಲೇ ಕಂಡುಬರುವ ಸುನೀತ, ಲಘುಕಥೆ, ಕಾದಂಬರಿ, ಪತ್ರಿಕಾ ವ್ಯವಸಾಯ, ನಿಬಂಧ—ಮೊದಲಾದ ಸಾಹಿತ್ಯರೂಪಗಳೆಲ್ಲ ಕನ್ನಡದಲ್ಲಿ ನೇರವಾಗಿ ಇಂಗ್ಲಿಷ್‌ದಿಂದ ಬಂದವು ಗಳೇ. ಈ ಇಂಗ್ಲಿಷ್ ಪ್ರಭಾವವು ಎಷ್ಟೋ ಸಲ ವಾಕ್ಯರಚನಾ ಪದ್ಧತಿಯಲ್ಲೂ, ಪಡೆನುಡಿಗಳಲ್ಲೂ ಕೂಡ ಕಂಡುಬರುತ್ತಿದೆ. ಹಲವು ಆಧುನಿಕ ಲೇಖಕರ ಪ್ರಯೋಗಗಳಲ್ಲಿ "ಅವನು ಅವನಲ್ಲಿ ಒಬ್ಬ ಮಿತ್ರನನ್ನು ಕಂಡನು." (He found in him a friend); "ಉತ್ತರಿಸು"; "ಬೆಲ್ಪಿನ ಮೇಲೆ ಉಗುಳುವುದು, ಬೆಲ್ಪಿನ ಕೆಳಗೆ ಹೊಡೆಯುವುದು"—ಮೊದಲಾದ ಪ್ರಯೋಗಗಳೆಲ್ಲ ಇದಕ್ಕೆ ದೃಷ್ಟಾಂತ. ಆದರೂ ಭಾಷಾ ದೃಷ್ಟಿಯಿಂದ ನಾವು ವಿಚಾರ ಮಾಡುತ್ತಿರುವಾಗ ಕನ್ನಡ ಕೋಶದ ಮೇಲಾದ ಇಂಗ್ಲಿಷ್ ಪ್ರಭಾವವನ್ನು ಅನೇಕ ವಿಧವಾಗಿ ಗುರುತಿಸಬಹುದಾಗಿದೆ

ಕನ್ನಡದ ಮೇಲಾದ ಈ ಇಂಗ್ಲಿಷ್ ಪ್ರಭಾವವನ್ನು ಪ್ರಾಮುಖ್ಯವಾಗಿ ನಾವು ಕೆಳಗಿನ **ಈ ಐದು** ವಿಧದಲ್ಲಿ ವರ್ಗೀಕರಿಸಬಹುದು :—

ಒಂದು ಅನೇಕ ಇಂಗ್ಲಿಷ್ ಶಬ್ದಗಳು ನೇರವಾಗಿ ಕನ್ನಡಕ್ಕೆ ಬಂದು ಸೇರಿದುವು.

ಎರಡು ಹಲವು ವಿಷಯಗಳ ಅಭಿವ್ಯಕ್ತಿಗಾಗಿ ನಮ್ಮಲ್ಲಿ ಮೊದಲಿನಿಂದಿದ್ದ ಪದಗಳ ಜೀರ್ಣೋದ್ಧಾರವನ್ನು ಮಾಡಿಕೊಳ್ಳುವುದು.

ಮೂರು ಹಲವು ವಿಚಾರಗಳನ್ನು ಸೂಚಿಸಲು ಪ್ರತಿಶಬ್ದಗಳನ್ನು ಯೋಜಿಸದೆ ಅವನ್ನು ಬರಿಯ ವರ್ಣಿಸುವುದು.

ನಾಲ್ಕು—ಹಲವು ಶಬ್ದಗಳಿಗೆ ಶಬ್ದಕ್ಕೆ ಶಬ್ದವನ್ನಿಟ್ಟು ಕನ್ನಡದಲ್ಲಿ ಭಾಷಾಂತರ ಮಾಡುವುದು.

ಐದು—ಸಂಸ್ಕೃತ ತದ್ಭವಗಳಂತೆ ಅನೇಕ ಶಬ್ದಗಳನ್ನು ನಮ್ಮ ಸೊಲ್ಲಿಗೆ ಅನುಗುಣವಾಗಿ "ತದ್ಭವ"ಗಳಾಗಿ ಮಾರ್ಪಡಿಸಿಕೊಂಡುದು.

ಇದನ್ನೇ ರೇಖಾರೂಪವಾಗಿ ನಾವು ಹೀಗೆ ಸೂಚಿಸಬಹುದು:—

ಇಂಗ್ಲಿಷ್ ಶಬ್ದಗಳು

೧	೨	೩	೪	೫
ನೇರವಾಗಿ ಬಂದುವು.	ನಮ್ಮ ಶಬ್ದಗಳ ಜೀರ್ಣೋದ್ಧಾರ	ವರ್ಣಕ ಶಬ್ದಗಳು	ಭಾಷಾಂತರಿತ ಶಬ್ದಗಳು	ತದ್ಭವಗಳು.

ಮೊದಲನೆಯ ವರ್ಗದ ಶಬ್ದಗಳಂತೂ ಗೊತ್ತೇ ಇವೆ. ಈ ವರ್ಗಕ್ಕೆ ಸೇರಿದುವೆಂದರೆ 'ಟೆನಿಸ್' 'ಟಾಯಿಮ್‌ಪೀಸ್' 'ವಾಚ್' ಇತ್ಯಾದಿ. ಈ ಶಬ್ದಗಳಲ್ಲಿಯ ಹಲವು ಶಬ್ದಗಳ ವಿಷಯವನ್ನು ಅನಂತರ ಪುನಃ ವಿವರವಾಗಿ ಪರ್ಯಾಲೋಚಿಸುತ್ತಿದ್ದುದರಿಂದ ಸದ್ಯ ಎರಡನೆಯ ವರ್ಗದ ಶಬ್ದಗಳನ್ನು ತೆಗೆದುಕೊಳ್ಳೋಣ.

ಮಾನವಪ್ರಪಂಚದಲ್ಲಿ ದಿನೇ ದಿನೇ ಹೊಸ ಹೊಸ ಸಂಶೋಧನೆಗಳು ನಡೆಯುತ್ತಿರುವುದು ಸ್ವಾಭಾವಿಕವಷ್ಟೇ. ಇಂಥ ಎಷ್ಟೋ ಹೊಸ ಸಂಶೋಧನೆಗಳು ನಮಗೆ ಅನ್ಯಭಾಷೆಯ ಮೂಲಕ ವಿದಿತವಾದಾಗ ಆ ಅನ್ಯಭಾಷೆಯ ಶಬ್ದಗಳನ್ನು ನಾವು ನೇರವಾಗಿ ಸ್ವೀಕರಿಸದೆ ಎಷ್ಟೋ ಸಲ ನಮ್ಮಲ್ಲಿಯ ಶಬ್ದಗಳನ್ನೇ ಹೆಚ್ಚುಕಡಿಮೆ ಉಪಯೋಗಿಸುತ್ತಿರುತ್ತೇವೆ. ಉದಾಹರಣೆಗೆ, ಸಂಸ್ಕೃತ ಜಲದೇವತೆ, ನಿಶ್ಚಯಿಸು, ಮೊದಲಾದ ಪದಗಳು ಕನ್ನಡದಲ್ಲಿ 'ನೀರ್ವೆಣ್', 'ತರಿಸಲ್'—ಮೊದಲಾಗಿ ಅಭಿವ್ಯಕ್ತಿ ಪಡೆದುವು. ಇಂಗ್ಲಿಷದ ಹೊಸ ಸಂಶೋಧನೆಯಾದ 'Radio'ವನ್ನೇ ತೆಗೆದುಕೊಂಡರೆ, ಇದರ ಅಭಿವ್ಯಕ್ತಿಯನ್ನು ನಾವು ಕನ್ನಡದಲ್ಲಿ ನಮ್ಮಲ್ಲಿರುವ ಎರಡು ಪದಗಳನ್ನು ಕೂಡಿಸಿ 'ಬಾನುಲಿ' ಎಂದು ಮಾಡಿಕೊಂಡೆವು. ಆದರೆ, ಅದಕ್ಕೂ 'Aero-plane' ಶಬ್ದ; ಇದರ ಅಭಿವ್ಯಕ್ತಿಗಾಗಿ, ಎಂದೋ ರಾಮಾಯಣ ಕಾಲದಲ್ಲಿರಬಹುದಾದ 'ವಿಮಾನ' ಶಬ್ದಕ್ಕೆ ಪುನಃ ಜೀವಕಳೆ ತುಂಬಿ, ಆ ನಾಣ್ಯವು ನಡೆಯುವಂತೆ ಮಾಡಿದೆವು. ಇದು ಭಾಷೆಯ ಜೀರ್ಣೋದ್ಧಾರ ಕಾರ್ಯ.

ಇಂಗ್ಲಿಷ್ ಶಬ್ದಗಳನ್ನು ನಾವು ಸ್ವೀಕರಿಸಿದ ಮೂರನೆಯ ರೀತಿಯೆಂದರೆ ಹಲವು ವಿಚಾರಗಳ ಸಲುವಾಗಿ ಮೂಲಶಬ್ದಗಳನ್ನು ಸ್ವೀಕರಿಸದೆ, ಇಲ್ಲವೆ ಅವನ್ನು ಕನ್ನಡದಲ್ಲಿ ಭಾಷಾಂತರಿಸದೆ, ಬರಿಯ ವರ್ಣಿಸಿ ಬಿಡುವುದು. ಹೀಗಾಗಿ, ಇಂಗ್ಲಿಷ್ 'Pin' ಶಬ್ದ ಮೈಸೂರ ಪ್ರಯೋಗದಲ್ಲಿ 'ಗುಂಡುಸೂಜಿ' ಎಂದಾಯಿತು. 'Socks'—'ಕಾಲುಚೀಲ'ವೋ (ಕೈಯ ಚೀಲ ಇದ್ದ ಹಾಗೆ) ಇಲ್ಲವೇ 'ಕಾಲುಕುಪ್ಪಸ'ವೋ ಆದುವು 'Neck-tie'—'ಸೀಮೆಯ ಕೊರಳಪಟ್ಟಿ'ಯೋ ಇಲ್ಲವೆ 'ಕೊರಳಪಟ್ಟಿ'ಯೋ ಆಯಿತು. ಇದರಂತೆಯೇ, 'Coal' ಎನ್ನುವ ಅರ್ಥದಲ್ಲಿಯ 'ಕಲ್ಲಿದ್ದಲು'; ಮೇಣಬತ್ತಿ, ಛಾಯಾಚಿತ್ರ, ಸೆಲೆಯ ಲೆಕ್ಕಣಿಕೆ ಇಲ್ಲವೆ ಮಸಿಯೊಡಲು, ಜಲಾಂತರ್ಗಾಮಿ; ಸೀಮೆ ಎಣ್ಣೆ; ಸೀಮೆ ಸುಣ್ಣ, ಚಿಮಣಿ ಎಣ್ಣೆ, ಕೀಲದೆಣ್ಣೆ, ಹರಳೆಣ್ಣೆ— ಮೊದಲಾದ ವರ್ಣಕ ಪ್ರಯೋಗಗಳನ್ನು ಕಾಣಬಹುದು. ಈ ಪ್ರಯೋಗಗಳಲ್ಲೆಲ್ಲ ಮೂಲದ ಶಬ್ದಗಳ ಅಭಿವ್ಯಕ್ತಿಗಾಗಿ ಆ ಶಬ್ದಗಳನ್ನು ವರ್ಣಿಸುತ್ತಿರುವದನ್ನು ಮಾತ್ರ ಕಾಣಬಹುದು. ಮೊನ್ನೆ ಮೊನ್ನೆ ತಮ್ಮ 'ಬದರಿಕಾಶ್ರಮ'ದ ಪ್ರವಾಸದ ವಿಷಯವಾಗಿ ಬರೆದ ಸಂಸ್ಕೃತ ಪಂಡಿತರೊಬ್ಬರು ರೈಲು ಎಂಜಿನ್ನನ್ನು **"ಬಾಷ್ಪಶಕಟಪ್ರಬಂಧ"**ವೆಂದೂ, ರೈಲ್‌ನಿಲ್ದಾಣವನ್ನು **"ಬಾಷ್ಪಶಕಟಪ್ರಬಂಧಾವಸ್ಥಿತಿಸ್ಥಾನ"**ವೆಂದೂ ವರ್ಣಿಸಿದ್ದರು !! *

ಇಂಗ್ಲಿಷ ಶಬ್ದಗಳ ಸ್ವೀಕರಣದ ನಾಲ್ಕನೆಯ ರೀತಿಯೆಂದರೆ, ಆ ಶಬ್ದಗಳನ್ನು ತದ್ವತ್ತಾಗಿ ಕನ್ನಡದಲ್ಲಿ **ಭಾಷಾಂತರಿಸುವುದು.** ಈ ರೀತಿಯಾಗಿ, Foreword ಮುನ್ನುಡಿಯಾಯಿತು, Short-Story ಲಘುಕಥೆ; Blotting-paper ಒತ್ತು-ಕಾಗದ; News paper ವರ್ತಮಾನ ಪತ್ರ; Wire ತಂತಿ ಇಲ್ಲವೆ ತಾರು; Foot-ball ಕಾಲು-ಚೆಂಡು; Lead-pencil ಸೀಸ-ಖಡ್ಡಿ; Litho-press ಶಿಲಾ-ಯಂತ್ರ; Extension ಹರವು, ವಿಸ್ತರಣ, ಬಡಾವಣೆ; Time-table ವೇಳಾ-ಪತ್ರಿಕೆ; Working-

* O. C. J. 4.4.

Committee ಕಾರ್ಯ-ಸಮಿತಿ; Walking-Stick ನಡೆ-ಗೋಲು; Magic-lantern ಮಾಯಾ-ದೀಪ; ಇತ್ಯಾದಿ. ಆದರೆ, ಒಂದೊಂದು ಸಲ, ಈ ಭಾಷಾಂತರವು ವಿ-ಪರೀತವಾಗುವುದೂ ಉಂಟು. ಈ ರೀತಿ, Rock-oil ಕಲ್ಲೆಣ್ಣೆಯಾಗಿಯೂ; Match-box ಕಡ್ಡಿ-ಪೆಟ್ಟಿಗೆಯಾಗಿಯೂ; Face-powder ಮುಖ-ಚೂರ್ಣವಾಗಿಯೂ; Mosquito-curtain ಸೊಳ್ಳೆ-ಪರದೆಯಾಗಿಯೂ; Tooth-powder ಹಲ್ಲು-ಪುಡಿ(!)ಯಾಗಿಯೂ ಭಾಷಾಂತರ ಹೊಂದುತ್ತವೆ.

ಈ ಮೇಲಿನ ರೀತಿಯಲ್ಲಿಯೇ, ಹಲವು ಇಂಗ್ಲಿಷ್ ಶಬ್ದಗಳು ಕನ್ನಡ ಸೊಲ್ಲಿಗೆ ಅನುಗುಣವಾಗಿ ತದ್ಭವವಾಗಿ ಭಾಷೆಯಲ್ಲಿ ಬಂದು ಸೇರುವುದುಂಟು. ಈ ರೀತಿ ತದ್ಭವಗಳನ್ನು ಕಲ್ಪಿಸಿಕೊಳ್ಳುವುದು ಕೇವಲ ವೈಯಾಕರಣಗಳ ವಿಕ್ಷಿಪ್ತತೆಯಾಗಲೀ, ಇಲ್ಲವೆ ಬುದ್ಧಿಯ ಡೊಂಬರಾಟವಾಗಲೀ ಆಗಿರದೆ, ಭಾಷೆಯ ಆವಶ್ಯಕ ಭಂಡಾರವೆಂಬುದನ್ನೂ ಮತ್ತು ಇಂಥ ಅನೇಕ ಸಂಸ್ಕೃತ ತದ್ಭವಗಳು ಕನ್ನಡದಲ್ಲಿ ಹಾಸು-ಹೊಕ್ಕಾಗಿ ಸೇರಿಕೊಂಡು ಇಂದು ಕನ್ನಡೇತರವೆಂದು ಅರಿಯದಷ್ಟು ಒಳಸೇರಿವೆಯೆಂಬುದನ್ನೂ ನಾವು ಪುನಃ ತದ್ಭವ ಪ್ರಕರಣದಲ್ಲಿ ಚರ್ಚಿಸುತ್ತೇವೆ. ಪ್ರಸ್ತುತ, ಇಂಥ ಅನೇಕ ಇಂಗ್ಲಿಷ ಶಬ್ದಗಳ ಕನ್ನಡದ ಬಾಯಿಗೆ ಹೊಂದಿಕೆಯಾಗಿ ಯಾವ ರೀತಿ ರೂಪಗಳನ್ನು ಪಡೆದವೆಂಬುದನ್ನು ನೋಡೋಣ: ಈ ರೀತಿಯ ಶಬ್ದಗಳಲ್ಲಿ ರೇಶನ್–ರೇಸನ ಆಯಿತು; Time–ಟೇಮು; Master–ಮಾಸ್ತರ; Cover–ಕೌರು; Rock-oil–ರಾಕೇಲು; Station–ಟೇಸನು; Madam–ಮಡ್ಡಮ್ಮ; Sunlight–ಸಾಂಗ್ಲೇಟ್; Lock-up—ಲಕಾಪು; Cut up—ಕಟಾಪು; Stamp–ಟಾಪು; Stamp—vendor–ಟಾಪೆಂಡರ್; Platoon–ಫಲಟನ್ನು; puncture–ಪಂಛೇರು; Tumbler–ಟಂಬ್ರೇಲು; Injection–ಇಂಗ್ಲಿಸು; Tank–ಟಾಕಿ; Volve—tube–ಹೊಲಟ್ಯೂಬು; gaslight–ಘಾಸ್ಲೇಟು; Guttar–ಘಟಾರ—ಈ ಮೊದಲಾದ ಕೇವಲ ಶಬ್ದಗಳಲ್ಲದೆ, ಎಷ್ಟೋ ಸಲ ವಾಕ್ಯಗಳೂ ಇಂಥ ರೂಪಾಂತರವನ್ನು ಪಡೆಯುವದುಂಟು. ಉದಾಹರಣೆಗೆ—ಪೋಲೀಸ ಶಿಪಾಯರ ಬಾಯಲ್ಲಿ Friend or Foe ? ಎನ್ನುವ ಪ್ರಶ್ನೆ "ಫಂಡರ್‌ಫೋ"—ಎಂದಾಗುತ್ತಿದ್ದುದನ್ನೂ, 'All—well' ಎಂಬುದು 'ಆಲ್ಬೇಲ್'— ಎಂದು ಆಗುತ್ತಿದ್ದುದನ್ನೂ, 'Who-comes there?' ಎಂಬುದು 'ಹುಕಮ್ ಡರ್'—ಎಂದಾಗುತ್ತಿರುವದನ್ನೂ ನಾವೆಲ್ಲ ಕೇಳಿದ ಮಾತು.

ಈ ಕೆಳಗಿನ ಇನ್ನೂ ಹತ್ತಾರು ತದ್ಭವಗಳನ್ನು ಮೇಲಿನ ವರ್ಗಕ್ಕೇ ಸೇರಿಸಬಹುದು. ಉದಾ:—ಫಾಯನಲ್ ಬಾಗಲ; ಫಲ್ವರ್, ಟಂಬಾಟೋ, ಸುನೀತ, ಖೋಟಾ, ಸುಲೂಪು, ಮಿಶೀನು, ಮಿಷ್ಟಿಕ್, (Shampoo) ಚಂಪಿ, (Cross) ಕ್ರೂಜೆ, (Thermos) ಥರ್ಮಾಸು; ಕಿರಕೆಟ್ಟು, ಬಿಸ್ಕತ್ತು; ಬುರೂಸು; ಕಪ್ತಾನ; ಬಾಟ್ಲಿ; ಆಸ್ಪತ್ರೆ; ಡ್ರಮ್ಮು; ಪಿಲಾಹೌಸ್; ಪಿಟಲ್ ಕೊಳವಿ; ಪಿಸ್ತೂಲು; ಕೆಲ್ನರ್; Anderson ಇಂದ್ರಸೇನ (ಪೇಶವೆಯರ ಕಾಗದದಲ್ಲಿ ಬರುವ ಹೆಸರು); ಇತ್ಯಾದಿ. ಇದರ ಜೊತೆಗೆ ಶ್ರೀ. ಆರ್. ನರಸಿಂಹಾಚಾರ್ಯರು ಹೇಳುವ - ದುಸ್ತು, ತುರುಪು, ಗಿಲೀಟು, ಪಿಟೀಲು, ತಿಕೀಟು, ಪಾಸ್ಕೋಟು, ಮೊದಲಾದವುಗಳನ್ನೂ.— ವರ್ಕಭಾಪು, ಬರಾಕು, ಥಕಾಯಿತ, ಹೊಲಂಟೇರ್, (Snow) ಸೋಹೊ, (Vaseline) ಹ್ಯಾಸ್ಲೀನ್—ಮೊದಲಾದ ಶಬ್ದಗಳನ್ನೂ ಸೇರಿಸಿಕೊಳ್ಳಬಹುದು.

ಆದರೆ, ಚೀಟಿ, ಗುದಾಮು, ಟಿಫಿನ್ನು, ಚೌ-ಚೌ, ಕಂದೀಲು, ಲಾಟನ್ ಮತ್ತು ಲಾಂದರ್ ಶಬ್ದಗಳ ಬಗ್ಗೆ ಇಷ್ಟು ನಿಶ್ಚಿತವಾಗಿ ಮಾತನ್ನು ಹೇಳಲು ಬಾರದು. ಯಾಕಂದರೆ, ಇದರಲ್ಲಿಯ ಅನೇಕ ಶಬ್ದಗಳು ಸ್ವತಃ ತಾವು ಹಿಂದುಸ್ಥಾನದಲ್ಲಿ ಹುಟ್ಟಿ ಸಾಕಷ್ಟು ಮಾರ್ಗಕ್ರಮಣ ಮಾಡಿ ಪುನಃ ಸ್ವದೇಶಕ್ಕೆ ಬಂದುವಾಗಿವೆ.

ಉದಾಹರಣೆಗೆ—'ಚೀಟಿ' ಶಬ್ದವು ಮೂಲತಃ ಹಿಂದುಸ್ತಾನಿ. ಅದು ಇಂದು ಕನ್ನಡ-ಇಂಗ್ಲಿಷು ಗಳಲ್ಲಿಯೂ ಕೂಡಿಯೇ ಸಾಗಿದೆ. 'ಗುದಾಮು' ಶಬ್ದವು ಇಂಗ್ಲಿಷ್ 'Godown'ದ ಕನ್ನಡ ತದ್ಭವ. ಇಂದಿನ ರೇಶನ್ ದಿವಸಗಳಲ್ಲಿಯಂತೂ ಇಂಗ್ಲಿಷದ ಈ ಶಬ್ದ ಹೆಚ್ಚು ಕಡಿಮೆ ಜನರ ಮನೆ-ಮಾತಾಗಿದೆ. ಆದರೆ, ಒಂದು ಕಾಲಕ್ಕೆ ಈ ಶಬ್ದವು ಮೂಲತಃ ದ್ರಾವಿಡ—ತಮಿಳಿನಿಂದ ಬಂದುದು; ಅದಕ್ಕೂ ಹೆಚ್ಚು ಕನ್ನಡ ಶಬ್ದದ ಸಮೀಪದ ರೂಪವುಳ್ಳದ್ದು. ಈ ಶಬ್ದವು ತಮಿಳ 'ಗಿಡಂಗಿ'ಯಿಂದ ಬಂದುದು. ಯೆಸ್ಪರ್ಸನ್ ಅವರು ಹೇಳುವಂತೆ—"Godown-ware-house, is an English popular interpretation of Malay 'ga ong' from Tamil 'gidaugi'" ಕನ್ನಡ 'ಗಡಂಗ'ವು ಕೂಡ ಇದರ ಸಮೀಪದ್ದೇ. ಹೀಗಾಗಿ, ಇಂದಿನ ಕನ್ನಡ 'ಗುದಾಮು' ಶಬ್ದವು ನಡೆದ ದಾರಿಯೆಂದರೆ—ಕನ್ನಡ ಮಿಳ (ಗಿಡಂಗಿ). ಮಲಯ (ಗಡೊಂಗ) ಇಂಗ್ಲಿಷ್ (ಗೋಡೌನ್) ಪುನಃ ಕನ್ನಡ ಗುದಾಮು. ಪುನಃ, ಕಟ್ಟೆಯ ಕಲ್ಲು ಕಟ್ಟೆಗೆ.

'ಟಿಫಿನ್ನು' 'ಫಲಾಹಾರ' ಕೂಡ ಇಷ್ಟೇ ದೂರದ ದಾರಿಯನ್ನು ನಡೆದು, ಎರಡು ಸಲ ಹಿಂದೀ ಉಪಸಾಗರವನ್ನು ದಾಟಿದೆ. "tea and tiffin" ಇದರಲ್ಲಿಯ ಫಲಾಹಾರಾರ್ಥದ 'tiffin' ಶಬ್ದವು ಹಿಂದುಸ್ಥಾನದಿಂದ ಇಂಗ್ಲಿಷಕ್ಕೆ ಹೋದ ಶಬ್ದವೆಂದು ಎಷ್ಟೋ ದಿನಗಳ ವರೆಗೆ ಪಂಡಿತರ ಕಲ್ಪನೆಯಿತ್ತು. ಆದರೆ, ಆಧುನಿಕ ಅಭಿಪ್ರಾಯದ ಪ್ರಕಾರ, ಹಿಂದುಸ್ಥಾನವು ಈ ಶಬ್ದವನ್ನು ಪೂರೈಸಿರದೆ, ಕೇವಲ ಅದರಲ್ಲಿಯ ಅರ್ಥವ್ಯಾಪ್ತಿಯನ್ನು ಪೂರೈಸಿತು. ಯಾಕಂದರೆ, ಮೂಲತಃ ಇಂಗ್ಲಿಷ ಶಬ್ದವಾದ ಈ 'ಟಿಫಿನ್' ಪದವು ಕೇವಲ 'ಕುಡಿ-ತಿನ್ನು' ಅರ್ಥವನ್ನು ಹೇಳಿ, 'ಫಲಾಹಾರ' ಎನ್ನುವ ಅರ್ಥವನ್ನು ಇಂದು ಸೂಚಿಸುವಂತಾಯಿತು. ಈ ಬಗ್ಗೆ ಯೆಸ್ಪರ್ಸನ್ ಅವರು ಹೇಳುವದೇನಂದರೆ—

> "Tiffin, which is used all over the East for lunch, is really an English word, properly 'tiffing' from the slang verb to 'tiff', to drink especially out of meal times. In India, it was applied to the meal and then re-introduced into English and believed to be a native Indian word."*

ಹೀಗಾಗಿ, ಇಂಗ್ಲಂಡದಿಂದ ಹೊರಟ ಈ ಶಬ್ದವು, ಎರಡು ಸಲ ಹಿಂದೀ ಉಪಸಾಗರವನ್ನು ದಾಟಿತು.

'ಸಂಗೀತ' ಇಲ್ಲವೆ 'ಮಿಸಳ' ಎನ್ನುವ ಅರ್ಥದಲ್ಲಿ ನಾವು ಚಹದ ಅಂಗಡಿಗಳಲ್ಲಿ ಕೇಳುವ 'ಚೌ-ಚೌ' ಶಬ್ದವು ಚೀನೀ ಭಾಷೆಯದು. 'ಚೌ-ಚೌ' ಅಂದರೆ ಚೀನೀ ಭಾಷೆಯಲ್ಲಿ ಕೂಡಿಸಿಟ್ಟ ವಸ್ತುಗಳು (Mixed preserves).

'ಕಂದೀಲು' ಶಬ್ದವು ಹಲವರ ಪ್ರಕಾರ ಇಂಗ್ಲಿಷ್ ಇಲ್ಲವೆ ಪೋರ್ತುಗೀಜ್ 'Candle'ದಿಂದ ಬಂದಿತು.

'ಲಾಟನ್' ಇಲ್ಲವೆ 'ಲಾಂದರು' ಇಂಗ್ಲಿಷ್ 'Lantern'ದ ತದ್ಭವ. ಈ 'ಲಾಟನ್' ಇಲ್ಲವೆ 'ಕಂದೀಲು'ಗಳಿಗೆ ಹಚ್ಚಿದ್ದ ಕೆಂಪು ಬಣ್ಣದ ಮೂಲಕ, ನಾವು ಈ ಮೊದಲೇ ನೋಡಿದ 'ಸಾಹಚರ್ಯ-ತತ್ವ'ದ ಪ್ರಕಾರ 'ಲಾಟನ'ವನ್ನು 'ಲಾಲ್-ಟೆನ್' ಎಂದು ಓರಿಸಾ ಪ್ರಾಂತದಲ್ಲಿ ಕರೆಯುತ್ತಿದ್ದರೆಂದು ಶ್ರೀ. ಬಿ. ಸಿ. ಮುಜುಮುದಾರ ಅವರು ಹೇಳುತ್ತಾರೆ:

* O. D. E. P. 223.

"Looking merely to the colour with which the metal tin was coated, a lantern was given the name "lal-tin" by the common people of Orissa, but now the literate people of that country call it by a name which is almost similar to the pronunciation of lantern."

ಏನೇ ಆಗಲಿ; ಕನ್ನಡವು ಸ್ವೀಕರಿಸಿದ ಈ ಎರಡೂ ಪದಗಳಲ್ಲಿ, ಉತ್ತರ ಕರ್ನಾಟಕದಲ್ಲಿ 'ಕಂದೀಲು' ಶಿಷ್ಟರ ಬಾಯಲ್ಲೂ, 'ಲಾಟನ'ವು ಗ್ರಾಮ್ಯರ ಬಾಯಲ್ಲೂ ಮಾತ್ರ ನಿಂತದ್ದನ್ನು ಕಾಣಬಹುದು. ಇನ್ನು ಕೊನೆಯದಾಗಿ, ಮೊದಲನೆಯ ಮಾತನ್ನೇ ತೆಗೆದುಕೊಳ್ಳೋಣ: ಅಂದರೆ, ಇಂಗ್ಲಿಷದಿಂದ ಯಾವ ಮಾರ್ಪಾಟನ್ನೂ ಪಡೆಯದೆ ನೇರವಾಗಿ ಕನ್ನಡಕ್ಕೆ ಬಂದ ಶಬ್ದಗಳು. ಇಂಥ ಪ್ರಸಂಗಗಳಲ್ಲಿ ಮನುಷ್ಯನು ಎಷ್ಟೇ ಭಾಷಾಂತರಿಸಲು ಯತ್ನಿಸಿದರೂ, ಆ ಭಾಷಾಂತರಗಳು ಅಳಿದು ಮೂಲ ಇಂಗ್ಲಿಷ್ ಶಬ್ದಗಳೇ ನಿಂತವು. ಈ ರೀತಿ, ರೇಶನದ ಸೀದಾ ಸತ್ತು, ರೇಸನ್ನೇ ನಿಂತಿತು; ಆಕಾಶವಾಣಿ-ಬಾನುಲಿ ಹೋಗಿ ರೇಡಿಯೊವೇ ಸ್ಥಿರವಾಯಿತು; ನಿಲ್ದಾಣ ನಿಂತು ಸ್ಟೇಶನ್ನೇ ಉಳಿಯಿತು ಇತ್ಯಾದಿ.

ಈ ತರಹದ ಶಬ್ದಗಳಲ್ಲಿ ಈ ಕೆಳಗಿನವುಗಳನ್ನೂ ಹೇಳಬಹುದು: ಅಟ್ಲಾಸ್; ಕಾಃಮಾ; ಟೆನಿಸ್; ಬಾಃಸ್; ಕ್ಯಾರೆಟ್; ಕೋಕೊ; ಗೋರಿಲಾ; ಮೆಂಡ್ಯಾರಿನ್; ಕ್ರೇನ್; ಜಾಕೀಟು; ನಿಕೆಲ್ಲು; ವ್ಯಾನ್; ಬ್ಯೂರಾಕ್ರಸಿ; ಲಂಬರ್‌ಕೋಣೆ; ಮನಿ; ಸ್ಟರ್ಲಿಂಗ್; ಬಜೆಟ್ಟು; ಚೆಕ್ಕು; ಕಾನ್‌ಸ್ಟೇಬಲ್; ಅಲಾರಮ್ಮು; ಕೋಟು; ಶರ್ಟು; ಪಾಟ್ಲೂನು; ಬಾನ್-ಫಾಯರ್; ಆಮ್ಲೆಟು; ಕ್ಯಾಬೀಜ; ಕಂಪೌಂಡು; ಪೆನ್ಸೀಲು; ಫೋಟೊ; ಸಾಯಕಲ್; ವಾಯರು; ಕ್ಯೂಬಿಟ್; ಫೂಟು; ಯಾರ್ಡು; ಫರ್ಲಾಂಗು; ಮೈಲು; ಶಿಪಾಯಿ; ಜೆರ್ರೀಹ್ಯಾಮ್; ವಿಕ್ಟೋರಿಯಾ; ವೆಲಿಂಗ್ಟನ್; ಟ್ರ್ಯಾಮು; ಮೆಕಂಟಾಶ್; ಸ್ಯಾಂಡವಿಚ್; ವ್ಹೋಲ್ಟ್ಸ; ನಿಕೊಟಿನ್; ಮೆಸ್ಮೆರಿಸಮ್; ಬಾಯ್‌ಕಾಃಟ್; ಪ್ಯಾಂಫ್ಲೆಟ್; ಡನ್ಸ; ಅದರಂತೆ ಕಂಪನಿ ಹೆಸರು, ಡಾಲ್ಡಾ, ಬಿನಿ, ಇತ್ಯಾದಿ. ಇವುಗಳಲ್ಲಿ ಹಲವನ್ನು ಮೈಸೂರಿನ ಕಡೆಗೆ ಮಧ್ಯಮ ವರ್ಗದ ಜನರು ಉಪಯೋಗ ಮಾಡುವುದನ್ನು ಕಾಣುತ್ತೇವೆ.

ಊರ ಹೆಸರು— ಕಾಶ್ಮೀರ್; ಡಮಾಸ್ಕ; ಮಸ್ಲಿನ್; ಸ್ಯಾಂಡಲ್; ಬ್ರಾಂರ್ಝ್; ಮ್ಯಾಗ್ನೆಟ್; ಇಂಡಿಗೋ; ಇತ್ಯಾದಿ.

ಇಂಗ್ಲಿಷದಿಂದ ಕನ್ನಡಕ್ಕೆ ನೇರವಾಗಿ ಬಂದ ಈ ಶಬ್ದಗಳ ವಿವರವಾದ ವರ್ಣನೆಯು ಇಲ್ಲಿ ಅನವಶ್ಯಕ ನಾದರೂ, ಈ ಎಲ್ಲ ಶಬ್ದಗಳ ಹಿಂದೆ ಅವಿತಿರುವ ಇತಿಹಾಸವೂ, ಅವು ಭಾಷೆಯ ಪ್ರವಾಹದಲ್ಲಿ ಸೇರಿದ ರೀತಿಯೂ ತುಂಬಾ ಚಿತ್ತಾಕರ್ಷಕವಾದದ್ದರ ಮೂಲಕ ಇಲ್ಲಿಯ ಹಲವು ಶಬ್ದಗಳ ಬಗ್ಗೆ ಯಾದರೂ ನಾಲ್ಕಾರು ಮಾತುಗಳನ್ನು ನೋಡೋಣ:—

ನಕಾಶಗಳ ಪುಸ್ತಕವಾದ 'ಅಟ್ಲಾಸ್' ಶಬ್ದವು ಆ ಹೆಸರಿನ ದೇವರಿಂದ ಬಂದುದು. ಯಾಕಂದರೆ, ಮೊದಮೊದಲು ಈ ನಕಾಶಗಳ ಪುಸ್ತಕದ ಮೇಲೆ ಇಡಿ ಪೃಥ್ವಿಯ ಭಾರವನ್ನು ಹೊತ್ತಿದ್ದ ಆ 'ಟಿಟನ್ ಅಟ್ಲಾಸ್' ಎಂಬವನ ಚಿತ್ರವಿರುತ್ತಿದ್ದಿತು.

ಕಾಃಮಾ ಮೂಲತಃ ಗ್ರೀಕ್ ಶಬ್ದ. 'ಟೆನಿಸ್' ಅಂದರೆ 'ಹಿಡಿ'. ಈ ಆಟವನ್ನು ಪ್ರಾರಂಭಿಸು ವಾಗ್ಗೆ, ಹೊಡೆಯುವವನು ಎದುರಾಳಿಗೆ 'ಹಿಡಿ'—'tenez' (ಫ್ರೆಂಚ್) ಎಂದು ಹೇಳಿ ಹೊಡೆಯುತ್ತಿದ್ದುದ ರಿಂದ ಆ ಹೆಸರೇ ಆಟಕ್ಕೆ ರೂಢವಾಯಿತು. ಈ ಆಟ ಫ್ರೆಂಚರಿಂದಲೇ ಪ್ರಾರಂಭವಾಯಿತೆಂದು ಹೇಳಬೇಕು.

'ಬಾಃಸ್' ಮೂಲತಃ ಡಚ್ ಶಬ್ದ; ಕ್ಯಾರೆಟ್ ಶಬ್ದ ಅರಬಸ್ಥಾನದಿಂದ ಬಂದುದು. 'ಕೋಕೊ' ಮೂಲತಃ 'ಮೆಕ್ಸಿಕನ್' ಶಬ್ದ; ಮೆಂಡಾರಿನ್ ಶಬ್ದ ಚೀನೀ ಎಂದು ಕಲ್ಪನೆ ಇತ್ತು. ಆದರೆ ಅದು ಸಂಸ್ಕೃತ ಜನ್ಯ.

'ಗೋರಿಲಾ' ಶಬ್ದ ಬಹುಶಃ ಆಫ್ರಿಕೆಯಿಂದ ಬಂದುದು. ಕ್ರಿ. ಪೂ. ೫-೬ನೆಯ ಶತಮಾನದಲ್ಲಿ 'ಹನ್ನೋ' ಎನ್ನುವವನು ಆಫ್ರಿಕಾಖಂಡದ ಪಶ್ಚಿಮ ಭಾಗವನ್ನೆಲ್ಲ ಸುತ್ತುಹಾಕಿ, ತಾನು ಕಂಡ ಅದ್ಭುತ ವಿಷಯಗಳನ್ನು ವರ್ಣಿಸುವಾಗ "ತುಂಬಾ ಕೂದಲಿದ್ದ ಪ್ರಾಣಿಗಳಾದ 'ಗೋರಿಲಾ'"ಗಳನ್ನು ನೋಡಿದೆನೆಂದು ವರ್ಣಿಸುತ್ತಾನೆ. ಅನಂತರ ೧೮೪೭ರಿಂದ ಮಾತ್ರ ಪುನಃ ನಾವು ಈ ಶಬ್ದದ ಹೆಚ್ಚಿನ ಚಲಾವಣೆಯನ್ನು ಕಾಣುತ್ತೇವೆ.

'ಕ್ರೇನ್' ವರ್ಣಕ ಶಬ್ದ. ಕೋಟದ ತಮ್ಮ ಜಾಕೀಟು; ಇಂಗ್ಲಿಷದಲ್ಲಿ 'Jack' ಅಂದರೆ 'ಕೋಟು'. ಅದರ ಸಣ್ಣ ಆವೃತ್ತಿ 'Jack-et'; ಕನ್ನಡ ಜಾಕೀಟು. 'ನಿಕೆಲ್'—ನಿಕೋಲಸ್ ಇದರ ಸಣ್ಣ ರೂಪ (Diminutive). 'ವ್ಯಾನ್' ಶಬ್ದವು ಒಂಟೆ—ಇಲ್ಲವೆ ಹಡಗಗಳ ಗುಂಪು ಎನ್ನುವ ಅರ್ಥದಲ್ಲಿಯ ಪರ್ಶಿಯನ್ 'Caravan' ಪದದಿಂದ ಬಂದಿತು. ಇಂದು 'ವ್ಯಾನ್' ಎಂದರೆ "ರೇಲ್ವೆ ಡಬ್ಬಿ" ಕೂಡ ಆಗುವದುಂಟು. 'ಬ್ಯೂರಾಕ್ರಸಿ' ಎಂದರೆ ಇಂದು 'ಕ್ರಮ-ಪ್ರೇಮಿ' 'ದರ್ಪದ'........ಇ. ಅರ್ಥ. ಈ ಶಬ್ದ 'ಬ್ಯೂರೋ' ಅಂದರೆ 'ಮೇಜು' ಇದರಿಂದ ಬಂದುದು. ಅನಂತರ, ಅದು ಇಂಥ ಕಚೇರಿ ಮತ್ತು ಕ್ರಮಗಳ ಸೂಚಕವಾಗಿ ಭಾಷೆಯಲ್ಲಿ ನಿಂತಿತು. ಹಳೆಯ ಸಾಮಾನು ಮೊದಲಾದವುಗಳನ್ನು ಇಡುವ ಕೋಣೆಗೆ ಇಂದು ನಾವು 'ಲಂಬರ್-ಕೋಣೆ' ಅನ್ನುತ್ತೇವೆ. ಈ 'ಲಂಬರ್' ಶಬ್ದ, ಲಂಡನ್‌ದಲ್ಲಿರುವ "ಲೊಂಬಾರ್ಡ ರಸ್ತೆ" ಎಂಬ ಬೀದಿಯಿಂದ ಬಂದಿದೆಯಂತೆ; ದಳ್ಳಾಳಿಗಳು ಮೊದಲಿನ ಕಾಲದಲ್ಲಿ ಅಡವಿಟ್ಟ ವಸ್ತುಗಳನ್ನೆಲ್ಲ ಈ 'ಲೊಂಬಾರ್ಡ ಬೀದಿ'ಯಲ್ಲಿ ಕಾಯ್ದಿಡುತ್ತಿದ್ದರಂತೆ!! ಇದರಂತೆ ಹಣದ ವಿಷಯವನ್ನು ಹೇಳುವ ಇಂಗ್ಲಿಷ್ 'Money' ಶಬ್ದದ ಇತಿಹಾಸವೂ ಮೋಜಿನದಿದೆ. ರೋಮ ಕಾಲದಲ್ಲಿಯ ಟಂಕಸಾಲೆಯು 'Juno Moneta' ಎಂಬ ದೇವರ ಗುಡಿಯಲ್ಲಿದ್ದಿತಂತೆ; ನಂತರ, ಈ ವಿಗ್ರಹದ ಹೆಸರೇ ಆ ಗುಡಿಗೂ ಬಂದು, ರೋಮನರು ಟಂಕಸಾಲೆಗೆ 'Moneta' ಎನ್ನಲು ಪ್ರಾರಂಭಿಸಿದರು. (ಇಂದು 'White-Hall' 'Wall-Street' 'Kalbadevi' 'Bori-Bunder' ಇತ್ಯಾದಿ ಹೇಳುತ್ತಿದ್ದ ಹಾಗೆ). ಈ 'ಮೊನೆಟಾ'ವೇ ಆ ಮುಂದು 'Money' ಆಯಿತು! ಇಂದು ನಾವು 'ಸ್ಟರ್ಲಿಂಗ-ಸಂಗ್ರಹ' ಎಂದು ಮೊದಲಾಗಿ ಪತ್ರಿಕೆಯಲ್ಲಿ ಓದುವ 'ಸ್ಟರ್ಲಿಂಗ್' ಪದವು 'ನಾರ್ಮನ್' ನಾಣ್ಯಗಳ ಮೇಲಿರುವ 'Star'ದಿಂದ ಬಂದುದು. ಈಹೊತ್ತು, 'ಬಜೆಟ್' ಅಂದರೆ ಬರಿಯ ಹೆಚ್ಚುಕಡಿಮೆ ಅಂಕಿ ಮಗ್ಗಿ; ಈ ಅಂಕಿಗಳು ಒಂದು ಕಾಗದ; ಉಲ್ಲೇಖ. ಆದರೆ ಮೂಲತಃ 'ಬಜೆಟ್' ಅಂದರೆ "ಅರ್ಥಸಚಿವನ ಚೀಲ" ಎಂದು ಮಾತ್ರ.

"If tinkers may have leave to live
And bear the sow-skin *budget*"—

ಎಂದು 'Winter's Tale'ದಲ್ಲಿ ಬರುತ್ತದೆ.

ಇಂಗ್ಲಿಷ್ 'Cheque' 'Check'—ಎರಡೂ ಒಂದೇ; ಇದರಲ್ಲಿ ಸ್ಪೆಲಿಂಗ ತಪ್ಪೇನೂ ಇಲ್ಲ. 'Check' ಅಂದರೆ ತಡೆಹಿಡಿ; ಪರೀಕ್ಷಿಸು. ಆದ್ದರಿಂದ, Cheque is a method of payment which makes 'checking' easy. The modern spelling is due to popular association with

Ex chequer, which is etymologically right, though the words have reached their modern functions by very different paths."*

ಮೈಮೇಲೆ ಧರಿಸುವ ವಸ್ತ್ರಗಳಲ್ಲಿ, ಜಾಕೀಟಿನ ಬಗ್ಗೆ ಈ ಮೊದಲೇ ನೋಡಿದ್ದೇವೆ. 'ನಿಕರ್' ಅಂದರೆ ಮೂಲತಃ 'ಲಳಿಗಿ-ಚಣ್ಣ'. ಈ ಹೆಸರು ವಾಶಿಂಗ್ಟನ್ ಆಯರ್ವಿಂಗ್ ಎಂಬ ಲೇಖಕನು 'ನಿಕರ್-ಬಾಃಕರ್' ಎಂದು ಹೆಸರಿಟ್ಟುಕೊಂಡು ಪ್ರಾಚೀನ ಕಾಲದ ಡಚ್ಚರು ನ್ಯೂಯಾರ್ಕದಲ್ಲಿ ವಾಸಿಸುತ್ತಿದ್ದಾಗ "ದಪ್ಪವಾದ ಲಳಿಗೆ-ಚೊಣ್ಣ"ಗಳನ್ನು ಧರಿಸುತ್ತಿದ್ದರೆಂದು ಮೊದಲಾಗಿ ವರ್ಣಿಸಿದ್ದರ ಮೂಲಕ ಬಂದಿತು.*

Constable ಅಂದರೆ ದೃಢ-ಮನುಷ್ಯ-stable. (ಯಥಾರ್ಥ !!) 'ಅಲಾರಮ್' ಗಡಿಯಾರದಲ್ಲಿನ 'ಅಲಾರ್ಮ್' ಶಬ್ದ ಸೈನ್ಯಪದ್ಧತಿಯಿಂದ ಬಂದುದು. ಇಟಾಲಿಯನ್ all'arme ಅಂದರೆ ಯುದ್ಧಕ್ಕೆ ಸನ್ನದ್ಧವಾಗು; ಕೈದು-ಗೊಳ್ಳು. ಅದರಿಂದ ಜಾಗ್ರತವಾಗು ಎಂದು ಅರ್ಥ ಕೊಟ್ಟು ಇಂದಿನ ಗಡಿಯಾರದಲ್ಲಿ ಮಾತ್ರ ಅದು ನಿಂತಿತು.

'ಬಾಃನ್‌ಫಾಯರ್-ಡೇ'—ಎಂದರೆ ಇಂದು ಆನಂದದ ದಿವಸ; ಹಬ್ಬದ ದಿವಸ; ಉತ್ಸಾಹದ ದಿವಸ. ಆದರೆ, ಈ ಶಬ್ದ ಮೂಲತಃ 'bone-fire' ಅಂದರೆ 'ಎಲುಬಿನ-ಉರಿ' ಎನ್ನುವುದರಿಂದ ಬಂದುದು. ಇದು ಹಿಂದಿನ ಕಾಲದ ಅನಾಗರಿಕ ಸಮಾಜ-ಸಂಪ್ರದಾಯಕ್ಕೆ ಸೇರಿದ ಪದ. ಪ್ರೊ. ವೀಕ್ಲಿ ಅವರು ಹೇಳುವಂತೆ—

"Apparently, the word is due to the practice of burning the dead after a victory"

'ಆಮ್ಲೆಟ್' ಅಂದರೆ ಇಂದಿನ ತತ್ತಿಯ ಖಾದ್ಯವೇ ಏನೂ ಅಲ್ಲ; ಮೊದಲು 'ಅಲಮೆಟ್' ಅಂದರೆ ತೆಳುವಾದ ಪದಾರ್ಥ. ಯಾವುದೂ 'ಅಲಮೆಟ್' ಅಥವಾ 'ಆಮ್ಲೆಟ್' ಆಗಬಹುದಿತ್ತು.

'ಕಂಪೌಂಡ್' ಶಬ್ದಕ್ಕೆ ತೀರ ಭಯಂಕರವಾದ ಅರ್ಥವಿದೆ. ಇಂದೇನೋ ನಾವು 'ಕಂಪೌಂಡ' ಗೋಡೆಯನ್ನು ಕಟ್ಟಿಸಿ, ಗುಲಾಬಿ ಹೂಗಳನ್ನು ನಡಿಸಿ ಸುಖವಾಗಿರುತ್ತೇವೆ. ಆದರೆ, ಮೂಲತಃ 'ಕಂಪೌಂಡ' ಅನೇಕ ಗುಲಾಮರನ್ನು ಕೊಂದ ನೆಲ. ಅದು ಮಲಯ ಶಬ್ದ. ವೀಕ್ಲಿ ಅವರು ಹೇಳುವಂತೆ –

"The Compound, in which the victims of 'Chinese Slavery' languished, is the Malay. Kampong, an enclosure",

ವಸ್ತುಗಳನ್ನು ಅಳೆಯುವ cubit—ಮೊದಲಾದ ಶಬ್ದಗಳು ನಮ್ಮ ಕನ್ನಡದಲ್ಲಿಯಂತೇ, ದೇಹದ ಅಂಗಗಳಿಂದ ಬಂದುವು. ನಮ್ಮ '೯ ಮೊಳದ ಸೀರೆ' 'ಮಾರುದ್ದ ಹಾವು' ಇತ್ಯಾದಿ ಇದ್ದ ಹಾಗೆ. 'ಕ್ಯುಬಿಟ್' ಅಂದರೆ ಲ್ಯಾಟಿನ್‌ದಲ್ಲಿ 'ಮೊಳಕೈ'; 'ಫೂಟು' ಕನ್ನಡದಲ್ಲಿ 'ಅಡಿ', 'ಯಾರ್ಡು' ಅಳೆಯುವ ಒಂದು 'ಕೋಲು'; ನಮ್ಮಲ್ಲಿ 'ಕ್ರೋಶ' 'ಕೂಗಳತೆ' ಇತ್ಯಾದಿ ಇದ್ದ ಹಾಗೆ 'ಫರ್ಲಾಂಗು' ಅಂದರೆ ಒಂದು "furrow-long" ಇತ್ಯಾದಿ. 'ಶಿಪಾಯಿ' ಅಂದರೆ ಇಂಗ್ಲಿಷ್ ಊಳಿಗದಲ್ಲಿರುವ ಭಾರತೀಯ ಸೈನಿಕರು. ಈ ಶಬ್ದವು ಮೂಲತಃ ಪರ್ಶಿಯನ್‌ವಾಗಿದ್ದು, ಅನಂತರ ಫ್ರೆಂಚ್ ಭಾಷೆಯಲ್ಲಿ 'Spahi' ಎಂದು ರೂಪವನ್ನು ಪಡೆದು, ಇಂಗ್ಲಿಷ್ 'ಸಿಪಾಯಿ' ಆಯಿತು.

---

* R. O. W. 89. † R. O. W. 44.

ಹಲವು ಪುಣ್ಯವಂತರೋ ಪಾಪಿಷ್ಠರೋ ತಮ್ಮ ವ್ಯಕ್ತಿತ್ವ-ಚಾರಿತ್ರ್ಯಗಳ ಮೂಲಕ ಹಲವು ಶಬ್ದಗಳನ್ನು ಕೋಶಕ್ಕೆ ಸೇರಿಸಿದರು. 'ಬ್ರೋಹ್ಯಾಮ್'— ಮೊದಲಾದುವು ಆ ವರ್ಗಕ್ಕೆ ಸೇರಿದುವು. ವಿಕ್ಟೋರಿಯಾ-ಗಾಡಿ, ವೆಲಿಂಗ್ಟನ್-ಬೂಟು ಇತ್ಯಾದಿ. ಮೆಕಿಂಟಾಶ್ ಎನ್ನುವವನು ಆ ರಬ್ಬರ-ದಂತಹದನ್ನು ಹುಡುಕಿದ್ದರಿಂದ ಅವನ ಹೆಸರು ಆ ವಸ್ತುವಿಗೇ ನಿಂತಿತು. ಅದರಂತೆ, ೧೮ನೆಯ ಶತಮಾನದ ಇಟಲಿಯ 'ವೋಲ್ಟಾ' ಎಂಬ ಶಾಸ್ತ್ರಜ್ಞನ ಮೂಲಕ 'ವೋಲ್ಟ' ಪದವೂ; ೧೬ನೆಯ ಶ. ದ ಜೀನ್ ನಿಕಾಟ್ ಎಂಬ ಫ್ರೆಂಚ ರಾಯಭಾರಿಯ ಮೂಲಕ 'ನಿಕೊಟಿನ್' ಶಬ್ದವೂ; ೧೮ನೆಯ ಶ. ದ 'ಮೆಸ್ಮರ್' ಎಂಬ ಸುಪ್ರಸಿದ್ಧ ಜರ್ಮನ್ ಭೌತಶಾಸ್ತ್ರಜ್ಞನ ಮೂಲಕ 'ಮೆಸ್ಮೆರಿಸಮ್' ಎಂಬ ಶಬ್ದವೂ ಬಂದವು.—'ಬಾಃಯ್‌ಕಾಃಟ್' ಎಂಬುದು ಕ್ಯಾಪ್ಟನ್ ಬಾಃಯ್ ಕಾಃಟ್ ಎಂಬ ವ್ಯಕ್ತಿಯು ಕ್ರಿ ಶ. ೧೮೮೦ರಲ್ಲಿ ಅನುಭವಿಸಿದ ಯಾತನೆಗಳ ಮೂಲಕವೂ; 'ಪ್ಯಾಂಫ್ಲೆಟ್' ಎಂಬುದು 'ಪ್ಯಾಂಫಿಲಸ್' ಎಂಬ ಒಬ್ಬ ಕವಿಯು ಲ್ಯಾಟಿನ್‌ದಲ್ಲಿ ಬರೆದ 'ಪ್ಯಾಂಫಿಲೆಟ್' ಎಂಬ ಒಂದು ಕವಿತೆಯ ಮೂಲಕವೂ ಬಂದುವು. 'ರಮನ್-ರೇ ಸರ್. ಸಿ. ವಿ. ರಾಮನ್ ಅವರ ಸಂಶೋಧನೆಯ ಮೂಲಕ ಬಂದಿತು.

'ಡನ್ಸ' ಎಂದರೆ —ಹೆಡ್ಡ, ದಡ್ಡ; ನಮ್ಮ ಕನ್ನಡದ ಪೆದ್ದ. ಈ ಹೆಸರನ್ನು ಸುಪ್ರಸಿದ್ಧ ತಾರ್ಕಿಕನಾದ John Duns Scotus ಎಂಬವನನ್ನು ಅವನ ಪ್ರತಿಸ್ಪರ್ಧಿಗಳು ಚೇಷ್ಟೆ ಮಾಡಿ ಮಾಡಿ ನಿರ್ಮಿಸಿದರು. ನಮ್ಮಲ್ಲಿಯ 'ಬಾಸ್ಕಳ'ರ ಹಾಗೆ ಪೋಪ್ ಕವಿಯು ಬರೆದ 'ಡನ್ಸಿಯಾಡ್' ಎಂಬ ದೀರ್ಘಕಾವ್ಯವು ಇಂಗ್ಲಿಷ್ ಸಾಹಿತ್ಯದಲ್ಲಿ ತೀರ ಪ್ರಸಿದ್ಧವಾದುದು.

ಆದರೆ, ವ್ಯಕ್ತಿಗಳಿಗೆ ಸಂಬಂಧಪಟ್ಟ ಇಂಥ ಶಬ್ದಗಳ ಬಗ್ಗೆ ನಾವು ವಿಚಾರ ಮಾಡುವಾಗ ತುಂಬಾ ಜಾಗ್ರತರಾಗಿರಬೇಕಾಗುತ್ತದೆ. ಯಾಕಂದರೆ, ಇಂಥ ವ್ಯುತ್ಪತ್ತಿಗಳಲ್ಲಿ, ಉತ್ಪತ್ತಿಯೇ ಹೆಚ್ಚಾಗಿ, ಏನಾದರೂ ಕಥೆ ಕೂಡಿಬಿಡುವುದೂ ಸ್ವಾಭಾವಿಕವಾಗಿದೆ. ಉದಾಹರಣೆಗೆ, 'ಟ್ರ್ಯಾಮ್' ಶಬ್ದವನ್ನು ಈ ವರೆಗೆ ಕ್ರಿ. ಶ. ೧೮೦೦ರ ಸುಮಾರಿಗೆ ಒಬ್ಬ 'Outram' ಎನ್ನುವವರ ಹೆಸರಿನಲ್ಲಿ ಹೇಳುತ್ತಿದ್ದರು. ಆದರೆ, ಈ ಪದವನ್ನು ನಾವು ಕ್ರಿ. ಶ. ೧೫೫೫ರಲ್ಲೇ ಕಾಣುತ್ತೇವೆ. ಅದರಂತೆ, ಮೋಟರ ಶಬ್ದವೂ ಹೊಸದೇನೂ ಅಲ್ಲ; Primum motor ಇಲ್ಲವೆ Primum mobile ಎಂದು ಗ್ರಹಮಾಲಿಕೆಯಲ್ಲಿ ಒಂದೊಂದು ಮಿಲ್ಟನ್ ಕವಿ ಹೇಳುತ್ತಾನೆ. ಈ ರೀತಿ ಮೋಟರ ಆಕಾಶದಿಂದ ನೆಲಕ್ಕಿಳಿಯಿತು.

ವ್ಯಕ್ತಿಗಳಂತೆ ಹಲವು ಪ್ರದೇಶಗಳಿಂದಲೂ, ಕೆಲವು ಶಬ್ದಗಳು ಹುಟ್ಟಿಕೊಳ್ಳುತ್ತವೆ. ಉದಾ:— ಕಾಶ್ಮೀರ್ (ಅಂದರೆ ಕಾಶ್ಮೀರ ಶಾಲು); ಚೀನ್ (ಚೀನಾಂಬರ); ಡಮಾಸ್ಕ (ಅತ್ತರು, ಸುಗಂಧ); ಮಸ್ಲಿನ್ (ತೆಳುವಾದ ಅರಿವೆ; ಡಾಕ್ಕಾ ಮಸ್ಲಿನ್): ಈ ಮಸ್ಲಿನ್ ಶಬ್ದವು 'ಕುರ್ಡಿಸ್ತಾನ'ದಲ್ಲಿರುವ 'ಮೊಸಲ್' ಎಂಬ ಊರ ಹೆಸರಿನಿಂದ ಬಂದುದು; ಸ್ಯಾಂಡಲ್-ಹಿಂದುಸ್ಥಾನದಿಂದ; ಬ್ರಾಂಝ್ (ತಾಮ್ರ) ಬ್ರಿಂಡಿಸಿಯಿಂದ; ಮ್ಯಾಗ್ನೆಟ್ (ಲೋಹ-ಚುಂಬಕ) ಮ್ಯಾಗ್ನೆಸಿಯಾದಿಂದ; 'ಇಂಡಿಗೊ' 'ಸ್ಪ್ಯಾನಿಶ್' ಮುಖಾಂತರ 'ಇಂಡಿಯನ್'ದಿಂದ; 'ಕ್ಯಾಲಿಕೊ'—'ಕಾಲಿಕತ್ತ'ದಿಂದ; ಇದರಂತೆ, 'ವರ್ಸ್ಟೆಡ್' ಅರಿವೆ 'ನಾರ್ಫೋಕ'ದ 'ವರ್ಸ್ಟೆಡ್'ದಿಂದಲೂ ಜರ್ಮನ್ ಸಿಲ್ವರ್ ಆ ಸಾದೃಶ್ಯದಿಂದಲೂ ಬಂದುವು.

ಮೇಲೆ ವಿವರಿಸಿದ ಈ ದೂರದ ಪೋರ್ತುಗೀಜ್, ಗ್ರೀಕ್, ಇಂಗ್ಲಿಷ್ ಮೊದಲಾದ ಭಾಷೆಗಳು ಕನ್ನಡದ ಮೇಲೆ ಪ್ರಭಾವವನ್ನು ಮಾಡಿದಂತೆಯೇ, ಕನ್ನಡದ ಮೂಲ ಶಾಖೆಯ ಇತರ ದ್ರಾವಿಡ ಭಾಷೆಗಳೂ ಮತ್ತು ನೆರೆಹೊರೆಯ ಮರಾಠಿ ಭಾಷೆಯೂ ಕನ್ನಡದ ಮೇಲೆ ಪ್ರಭಾವವನ್ನು ಮಾಡಿದ್ದು ಸ್ವಾಭಾವಿಕವೇ ಆಗಿದೆ.

ದ್ರಾವಿಡ ಭಾಷೆಗಳ ದೃಷ್ಟಿಯಿಂದ, ಕನ್ನಡವು ಇನ್ನೂ ಮೂಲ ಶಾಖೆಯಲ್ಲಿದ್ದಾಗಿನಿಂದಲೇ ಇಟ್ಟುಕೊಂಡ ಅನೇಕ ಸಾಮಾನ್ಯ ಶಬ್ದಗಳಲ್ಲದೆ, (ಉದಾ: ಮೀನ, ನೀರು, ಮೆಯ್, ತಲೆ, ಕೈ, ಕಾಲ್ ಇ. ಇ.) ಇನ್ನೂ ಅನೇಕ ದ್ರಾವಿಡ ಶಬ್ದಗಳು ಅನಂತರವೂ ಕೂಡ ಬಂದು ಸೇರಿದುವು ಕೈಪಿಡಿಕಾರರ ಪ್ರಕಾರ 'ಹಲ್ಲಂಡೆ' 'ಹೆರ್ವಾಡಿ' –ಮೊದಲಾದ ಶಬ್ದಗಳು ತಮಿಳಿನಿಂದ ಬಂದುವು. ಇಂದಿಗೂ ಕೂಡ ಯಾವುದೇ ತಮಿಳು ಗ್ರಂಥವನ್ನು ಓದುತ್ತಿರುವಾಗ ಕನ್ನಡಕ್ಕೆ ಸಮೀಪವಾದ ಅನೇಕ ರೂಪಗಳನ್ನು ಅಲ್ಲಿ ಕಾಣಬಹುದೆಂದು ಬಲ್ಲವರು ಹೇಳುತ್ತಾರೆ.

ಕನ್ನಡ ಮತ್ತು ಇತರ ದ್ರಾವಿಡ ಭಾಷೆ ಮತ್ತು ಸಾಹಿತ್ಯಗಳ ಸಂಪರ್ಕವು ಮೊನ್ನೆ ಮೊನ್ನೆಯವರೆಗೂ ನಡೆದು ಬಂದುದನ್ನು ನಾವು ಅನೇಕ ಗ್ರಂಥಗಳ ಮುಖಾಂತರ ಕಾಣುತ್ತೇವೆ. ಕನ್ನಡ ಕ್ರಾಂತಿಯ ಮೂರ್ಧನ್ಯರಾದ ಬಸವಣ್ಣನವರ ಚರಿತ್ರೆಯನ್ನು ಅನೇಕ ಕವಿಗಳಷ್ಟೇ ಅಲ್ಲದೆ, ಕ್ರಿ. ಶ. ೧೨ನೆಯ ಶತಮಾನದಲ್ಲಿ ಪಾಲ್ಕುರಿಕೆ ಸೋಮನಾಥನು ತೆಲುಗು 'ಬಸವ ಪುರಾಣ'ವನ್ನು ಬರೆದನು. ಈ ಗ್ರಂಥವೇ ೧೪ನೆಯ ಶತಮಾನದ ಭೀಮಕವಿಗೆ ಆದರ್ಶವಾಯಿತು. ಚಾಮರಸನು ಕ್ರಿ. ಶ. ೧೫ನೆಯ ಶತಮಾನದಲ್ಲಿ ಬರೆದ 'ಪ್ರಭುಲಿಂಗಲೀಲೆ'ಯ ಭಾಷಾಂತರವು ಕೇವಲ ಸಂಸ್ಕೃತ ಭಾಷೆಯಲ್ಲಷ್ಟೇ ಅಲ್ಲದೆ, ತೆಲುಗು ತಮಿಳುಗಳಲ್ಲಿಯೂ ಇದ್ದುದು ಕನ್ನಡಿಗರ ಹೆಮ್ಮೆಯ ಮಾತಾಗಿದೆ. ತಮಿಳು 'ಪ್ರಭುಲಿಂಗಲೀಲೆ'ಯನ್ನು ತಿರುವಣ್ಣಾಮಲೆಯ ಶಿವಪ್ರಕಾಶ ಸ್ವಾಮಿಗಳು ಬರೆದಿದ್ದಾರೆ. ತೆಲುಗಿನಲ್ಲಂತೂ, ಎರಡು 'ಪ್ರಭುಲಿಂಗ ಲೀಲೆಗಳಿ'ವೆ. ಒಂದನ್ನು ಪಿಡುಪರ್ತಿಯ ಸೋಮನಾಥನು ದ್ವಿಪದಿಯಲ್ಲೂ, ಮತ್ತೊಂದನ್ನು ಪಾಲನಾರ್ಯ ಪುತ್ರನಾದ ಪಿಡುಪರ್ತಿ ಬಸವಕವಿಯು ಚಂಪೂ ರೂಪವಾಗಿಯೂ ಬರೆದಿದ್ದಾರೆ. ೧೬ನೆಯ ಶತಮಾನದ ರತ್ನಾಕರವರ್ಣಿಯು ತನ್ನ ಕಾವ್ಯವನ್ನು ಬರೆದದ್ದು ಕೇವಲ ಕನ್ನಡಿಗರಿಗಾಗಿ ಅಲ್ಲ; ಅವನ ದೃಷ್ಟಿಯಲ್ಲಿ ಕನ್ನಡ, ತೆಲುಗು, ಮತ್ತು ತುಳುವ ಓದುಗರೂ ಇದ್ದಾರೆ. "ಅಯ್ಯಯ್ಯಾ ಚೆನ್ನಾದುದೆನೆ ಕನ್ನಡಿಗರು, 'ರಯ್ಯಮಂಚಿದಿಯೆನೆ' ತೆಲುಗಾ, 'ಎಂಚ ಪೊರ್ಲಾಂಡೆಂದು' ತುಳುವರು, ಮೈಯುಬ್ಬಿ ಕೇಳಬೇಕಣ್ಣಾ" ಎಂದು ಅವನ ಮತ. ದ್ರಾವಿಡದ ತೆಲುಗು ಭಾಷೆಯು ಹೆಚ್ಚಿನ ಪೋಷಣೆಯನ್ನು ಪಡೆದದ್ದು ಕನ್ನಡ ಪೂರ್ವ ಚಲುಕ್ಯರ ರಾಜಮಂದಿರಗಳಲ್ಲಿ. ಇದೂ ಅಲ್ಲದೆ, ತೆಲುಗಿನ ಆದಿಕವಿಯೆನಿಸಿದ ನನ್ನೆಯಭಟ್ಟನಿಗೆ (೧೦೪೦) ತೆಲುಗಿನಲ್ಲಿ ಕಾವ್ಯವನ್ನು ಬರೆಯಲು ಪ್ರೋತ್ಸಾಹಿಸಿದವನೂ, "ಆತನು ಬರೆದುದನ್ನು ತಿದ್ದಿಕೊಟ್ಟವನೂ ನಾರಾಯಣ ಭಟ್ಟನೆಂಬ **ಕನ್ನಡ ಕವಿಯು**. ವಿಜಯನಗರದ ಕಾಲದಲ್ಲಂತೂ ಅದರಲ್ಲಿ ವಿಶೇಷತಃ ಕೃಷ್ಣದೇವರಾಯನ ಕಾಲಕ್ಕೆ ತೆಲುಗಿಗೆ ದೊರೆತ ಪ್ರೋತ್ಸಾಹವು ವಿದಿತವೇ ಇದೆ.

ಚಲುಕ್ಯ ಸಾರ್ವಭೌಮರು ಆ ಕಾಲದಲ್ಲಿ ಪ್ರಚಲಿತವಾಗಿದ್ದ ಸಂಸ್ಕೃತ ಪ್ರಾಕೃತಗಳನ್ನು ಬಿಟ್ಟು ಆ ಆ ದೇಶದ ಭಾಷೆಗಳಿಗೆ ಉತ್ತೇಜನ ಕೊಟ್ಟರು. ತೆಲುಗು "ಸಾಹಿತ್ಯವು" ಪ್ರಾರಂಭವಾಗುವುದು ನನ್ನೆಯ ಭಟ್ಟನ "ಭಾರತ"ದಿಂದ ಎಂದು ಈ ಮೊದಲೇ ಹೇಳಿದೆವಷ್ಟೇ. ಈ ನನ್ನೆಯಭಟ್ಟನ ಪ್ರೇರಕನು ಕನ್ನಡ ನಾರಾಯಣಭಟ್ಟನಾಗಿದ್ದರೆ, ಅವನ ಪ್ರಭುವು ಚಲುಕ್ಯ ಸಾರ್ವಭೌಮನಾದ ರಾಜನರೇಂದ್ರನಾಗಿದ್ದನು. ನನ್ನೆಯನ ಪೂರ್ವಕಾಲದ ತೆಲುಗಿನ ಕಲ್ಪನೆಯು ಕೂಡ ದೊರಕಬೇಕಾದರೆ, ಈ ಚಲುಕ್ಯ ಶಾಸನಗಳಿಂದಲೇ. ಹೆಚ್ಚುಕಡಿಮೆ ಇದೇ ಕಾಲದಲ್ಲೇ ಅನೇಕ ಆಂಧ್ರ ಕವಿಗಳು—ವಿಶೇಷತಃ ವೆಂಗಿನಾಡಿನಿಂದ ಹೊರಬಿದ್ದು—ಕರ್ನಾಟಕದಲ್ಲಿ ಬಂದು ನೆಲಸಿದರು. ಅನಂತರ ವೀರಶೈವ ಕ್ರಾಂತಿಯ ಕಾಲಕ್ಕೆ ಪುನಃ ಅನೇಕ ತೆಲುಗು ಮೇಧಾವಿಗಳು ಕರ್ನಾಟಕದಲ್ಲಿ ನೆಲಸಿ ಕನ್ನಡದಲ್ಲೇ ಸಾಹಿತ್ಯ ನಿರ್ಮಾಣವನ್ನು ಮಾಡಿದರು.* ಅನಂತರ,

* "Later it is as a stronghold of Veerasaivism that Karnataka attracted Telugu poets like ಪಂಡಿತಾರಾಧ್ಯ and ಪಾಲ್ಕುರಿಕೆ ಸೋಮನ to it and encouraged them to write works in Kannada Language" T. L. T. C. P. 8.

ಕರ್ನಾಟಕದ ನೆಲದ ಮೇಲೆ ತೆಲುಗು ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆತದ್ದೆಂದರೆ ಕ್ರಿ. ಶಕ ೧೪—೧೫ರ ವಿಜಯನಗರ ಕಾಲದಲ್ಲಿ.

ವಿಜಯನಗರ ಕಾಲವಾದ ನಂತರ ಕ್ರಿಸ್ತಶಕ ೧೭-೧೮ ರಲ್ಲಿ ತೆಲುಗು ಸಾಹಿತ್ಯವು ಮೈಸೂರರಸರ ಪ್ರಭುತ್ವದಲ್ಲಿ ಪುನಃ ಪುರಸ್ಕಾರವನ್ನು ಪಡೆಯಿತು. ಮೈಸೂರಿನ ಕೃಷ್ಣ ಭೂಪತಿಗಳೂ, ಚಿಕದೇವರಾಜರ ದಳವಾಯಿ ವೀರರಾಜರೂ ತೆಲುಗು ಸಾಹಿತ್ಯದ ನಿಸ್ಸೀಮ ಪೋಷಕರಾಗಿದ್ದರು. ಅಷ್ಟೇ ಅಲ್ಲದೆ, ಈ ದಳವಾಯಿ ವೀರರಾಜನು ತಾನೂ ಸ್ವತಃ ಕವಿಯಾಗಿದ್ದು ಭಾರತವನ್ನು ತೆಲುಗು ಭಾಷೆಯಲ್ಲಿ ಅನುವಾದ ಮಾಡಿದನು. ಈ ವೀರರಾಜನು ತನ್ನ ಸಭಾಪರ್ವದ ಗದ್ಯದಲ್ಲಿ **"ಗೀರ್ವಾಣಾಂಧ್ರ ಕರ್ನಾಟಕಾದಿ ನಾನಾಭಾಷಾ ಕಾವ್ಯರಚನಾ ಚತುರ"** ಎಂದು ತನ್ನ ಬಗ್ಗೆ ಹೇಳಿಕೊಳ್ಳುವುದರ ಮೇಲಿಂದ ಇವನು ಕನ್ನಡದಲ್ಲಿಯೂ ಕಾವ್ಯರಚನೆಯನ್ನು ಮಾಡಿದಂತೆ ಕಾಣುತ್ತದೆ. ಇವನ ಮಗನಾದ ನಂಜರಾಜನು "ನಂಜರಾಜ ಯಶೋಭೂಷಣ"—ಎಂಬ ತೆಲುಗು ಗ್ರಂಥವನ್ನು ಬರೆದ ನೃಸಿಂಹ ಕವಿಯ ಪೋಷಕನಾಗಿದ್ದನಲ್ಲದೆ, ಸ್ವತಃ ತಾನೇ ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಕಾವ್ಯಗಳನ್ನು ರಚಿಸಿದನು. ಈ ನಂಜರಾಜನು ತೆಲುಗಿನಲ್ಲಿ ರಚಿಸಿದ "ಹಲಸ್ಯ ಮಹಾತ್ಮ್ಯ" "ಹರಭಕ್ತವಿಲಾಸ" -ಎಂದು ಮೊದಲಾದ ಗ್ರಂಥಗಳೂ, ಮತ್ತು ಅವನು ಕನ್ನಡ ಗದ್ಯದಲ್ಲಿ ಅನುವಾದ ಮಾಡಿದ ಭಾರತ ಕಥೆಗಳೂ ವಿದಿತವೇ ಇವೆ. ತಂದೆ ವೀರರಾಜನು ತೆಲುಗಿನಲ್ಲಿ ಪರಿವರ್ತನೆಮಾಡಿದರೆ, ಮಗನಾದ ನಂಜರಾಜನು ಕನ್ನಡದಲ್ಲಿ ಅನುವಾದ ಮಾಡಿದನು. ಇದೂ ಅಲ್ಲದೆ, ತುಪಕುಲ ಅನಂತ ಭೂಪಾಲ— ಮೊದಲಾದ ಕವಿಗಳು ಈ ಕರ್ನಾಟಕದಲ್ಲಿದ್ದೇ ತಮ್ಮ ಸಾಹಿತ್ಯವನ್ನು ಪೋಷಿಸಿದರು. ಉಲ್ಲೂರ ಪರಮೇಶ್ವರ ಅಯ್ಯರ ಅವರು ಈ ವಿಷಯವಾಗಿ ಹೇಳುವದೇನಂದರೆ—

"Telugu Scholars before the 11th century proceeded to the Canarese Country and wrote in Kannada" †

ಅಷ್ಟೇ ಅಲ್ಲದೆ; ಕ್ರಿ. ಶ. ಹದಿನೈದನೆಯ ಶತಮಾನದ ಶ್ರೀನಾಥ ಎಂಬ ಕವಿಯು ಸ್ವತಃ ತಾನು ತೆಲುಗಿನಲ್ಲಿಯೇ ಕಾವ್ಯವನ್ನು ರಚಿಸಿರುತ್ತಿದ್ದರೂ, ಕನ್ನಡದಲ್ಲಿ ಬರೆಯುತ್ತಿದ್ದೇನೆಂದು ಹೇಳುತ್ತಾನೆ. †

ತಮ್ಮ ಅಮೋಘವಾದ ತತ್ವಜ್ಞಾನದಿಂದಲೂ, ಅನನ್ಯಸಾಧಾರಣವಾದ ಕಾವ್ಯ-ಪ್ರತಿಭೆಯಿಂದಲೂ, ಇಡೀ ಕನ್ನಡ ನಾಡನ್ನೇ ಎಚ್ಚರಿಸಿದ ಪುರಂದರದಾಸರ ಬಗ್ಗೆ ತಮಿಳು ತ್ಯಾಗರಾಜರಿಗೆ ಅಸದೃಶ ಭಕ್ತಿಯಿದೆ. ಅಂತಲೇ, ತ್ಯಾಗರಾಜರು ತಮ್ಮ 'ಪ್ರಹ್ಲಾದ ಚರಿತ್ರೆ'ಯಲ್ಲಿ ಪುರಂದರದಾಸರ ಬಗ್ಗೆ ಬರೆಯುತ್ತ,—

"ದುರಿತವ್ರಾತಮು ಲೆಲ್ಲನು
ಪರಿಮಾರ್ಚೆಡಿ ಹರಿಗುಣಮುಲಬಾಡುಚುನೆಪುಡುನ್ |
ದರದಾಸುನಿ ಮಹಿಮಮುಲನು ದಲಚದಮದಿಲೋನ್ ||

—ಎಂದು ಹೇಳುತ್ತಾರೆ.

ಈ ರೀತಿ, ಕ್ರಿ. ಶ. ೧೭ನೆಯ ಶತಮಾನದ ವರೆಗೆ ಪರಸ್ಪರ ಸಂಪರ್ಕ–ಪ್ರಭಾವಗಳನ್ನುಂಟು ಮಾಡಿದ ಸಾಹಿತ್ಯದ ಭಾಷೆ ಪರಸ್ಪರ ಹೊಂದಿಕೊಂಡಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಈ ರೀತಿ ಸಾಮಾನ್ಯವಾಗಿದ್ದ

† P. T. O. C. Vol. IX P. 1245

ಶಬ್ದಗಳ ಪಟ್ಟಿಯೊಂದನ್ನು ಕೊನೆಗೆ ಪರಿಶಿಷ್ಟದಲ್ಲಿ ಕೊಡಲಾಗಿದೆ. ಈ ರೀತಿ, ಕೇವಲ ಕನ್ನಡ-ತೆಲುಗು-ತಮಿಳುಗಳು ಮಾತ್ರವಲ್ಲದೆ, ತುಳವು ಕೂಡ ಕನ್ನಡದಿಂದ ಪ್ರಭಾವವನ್ನು ಪಡೆಯಿತು ಮತ್ತು ಕನ್ನಡದ ಮೇಲೆ ತನ್ನ ಪ್ರಭಾವವನ್ನು ಉಂಟುಮಾಡಿತು

ದಕ್ಷಿಣ ಕನ್ನಡದ ಅನೇಕ ಕವಿಗಳು ಬರೆದ ಗ್ರಂಥಗಳಲ್ಲಿ ಹೇರಳವಾದ ತುಳು ಪ್ರಭಾವವನ್ನು ನಾವು ಕಾಣಬಹುದು ಕ್ರಿ. ಶ. ೧೯ರ ಕೊನೆಗಿದ್ದ ಮುದ್ದಣನ ಸಾಹಿತ್ಯದಲ್ಲಿ ಇಂಥ ಪ್ರಭಾವವನ್ನು ನಾವು ಸಾಕಷ್ಟು ಮಟ್ಟಿಗೆ ಕಾಣುತ್ತೇವೆ. ಒಂದು ಕಾಲದಲ್ಲಿ ಸಮಗ್ರ ಕನ್ನಡಿಗರಿಗೂ ಅರ್ಥವಾಗಿ, ಇಂದು ಕೇವಲ ತುಳು-ಪ್ರದೇಶದಲ್ಲಿ ಮಾತ್ರ ಜನರ ನಿತ್ಯದ ಭಾಷೆಯಲ್ಲಿ ನಿಂತ ಅನೇಕ ಪ್ರಯೋಗಗಳನ್ನು ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಸೂಚಿಸುತ್ತಾರೆ. ಈ ರೀತಿ, ಪ್ರಾಚೀನ ಕಾವ್ಯಗಳಲ್ಲಿ ನಾವು ಕಾಣುವ 'ಪರಡು' (ಕಾಲಿನಿಂದ ಕುರುಡರ ಹಾಗೆ ಹುಡುಕು); 'ಕಾಲ್ಗುತ್ತು'; ಕುಮ್ಮರಿ; ಪುಳಿಂಚು; ಮೊದಲಾದ ಅನೇಕ ಪ್ರಯೋಗಗಳನ್ನು ಕಾಣಬಹುದು ತುಳು ಪ್ರಯೋಗನೆಂದು ತಿಮ್ಮಪ್ಪಯ್ಯನವರು ಹೇಳುವ 'ಇಜಾಸಲ' ಪದವನ್ನು, ಉತ್ತರ ಕರ್ನಾಟಕದ ಒಕ್ಕಲಿಗರ ಬಾಯಲ್ಲೂ ನಾವು ಕಾಣಬಹುದು. ಇದರಂತೆ 'ಕೆಸಜಿ ಕಡಿತ' (ಕೆಸರಿನಲ್ಲಿಯ ಕಂಬದ ಹಾಗೆ ಹೊಯ್ದಾಡುವ ಮನಸ್ಸು), 'ತೆಗಲೆ' (ತುಳು-ಎದೆ; 'ಅಡಿತೊಡೆ, ಪೊರ್ಕುಟಿಂ **ತೆಗಲೆ** ಕೈ........ನೆಟ್ಟುವು' ಪಂಪಭಾರತ ನೋಡುವುದು). ಪಂಪನಲ್ಲಿ ಬರುವ 'ಜೊಂಪ' ಶಬ್ದದ ಸಮಾನ ರೂಪವನ್ನು ನಾವು ಇಂದಿಗೂ ತುಳುವಿನಲ್ಲಿ ನೋಡಬಹುದು. ಪಂಪನ "ಬಳ್ಳಿ-ಗಾವಣಂಗಳೊಳಂ ನನೆಯ **ಜೊಂಪಗಳೊಳ**ಮ್ ವಿಶ್ರಮಿಸುತ್ತಾ" ಮೊದಲಾದಲ್ಲಿಯ 'ಜೊಂಪ'ವೆಂದರೆ, ವಿಶ್ರಮಿಸುವನೆಲೆ. ಇಂದಿಗೂ, ತುಳುವಿನಲ್ಲಿ ಈ ಅರ್ಥದ ದೊಂಪ – ಇಲ್ಲವೆ - ಜೊಂಪ ಅಂದರೆ 'ಚಪ್ಪರ' ಎಂಬರ್ಥದ ಶಬ್ದವಿದೆ. ಕನ್ನಡದಲ್ಲಿಯ 'ಜೋಂಪುರೆ-ಜೋಂಪುಡಿ- ಝೋಪಡಿ'ಗಳೂ ಈ ಶಬ್ದದಿಂದಲೇ ಬಂದುವು. ಪಂಪಭಾರತದಲ್ಲಿ, ಈ 'ಝೋಪಡಿ' ಹಾಕುವ ಕ್ರಮದ ಇಡೀ ವರ್ಣನೆಯೇ ಇದೆ. ಆದರೂ ಈ ಶಬ್ದದ ಮೂಲರೂಪವು ಇಂದಿಗೂ ತುಳುವಿನಲ್ಲಿ ಇದ್ದುದೇ ಪ್ರಸ್ತುತ ಮಾತು. (ಈ ಪದದ ಪರ್ಯಾಯಾರ್ಥದ 'ಗುಡಿಸಲು' ಮಾತ್ರ ಬಡವರ ಸ್ಥಾನಗಳನ್ನು ನಿರ್ದೇಶಿಸುವಂತಾಯ್ತು!)

ಇದರಂತೆಯೇ, ಮರಾಠಿ ಭಾಷೆಯೂ ಕನ್ನಡದ ಕೋಶದ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಿದೆ. ಇಂದಿನ ಉತ್ತರ ಕರ್ನಾಟಕದ ಭಾಷೆಯಲ್ಲಂತೂ ಹೇರಳವಾಗಿ ಮರಾಠಿ ಪ್ರಯೋಗಗಳನ್ನು ನಾವು ಕಾಣಬಹುದಾಗಿದೆ. ಕನ್ನಡ ಮತ್ತು ಮರಾಠಿಗಳ ಪರಸ್ಪರ ಸಂಪರ್ಕ ಮತ್ತು ಬಾಂಧವ್ಯಗಳನ್ನು ಪುನಃ ಮುಂದಿನ ಪ್ರಕರಣದಲ್ಲಿ ನೋಡುತ್ತಿರುವುದರಿಂದ, ಸದ್ಯದ ಮಟ್ಟಿಗೆ, ಕನ್ನಡ ಕೋಶದಲ್ಲಿದ್ದ ಮರಾಠಿ ಶಬ್ದಗಳನ್ನು ಮಾತ್ರ ಗುರುತಿಸಿದರಾಯಿತು ಕನ್ನಡ-ಮರಾಠಿಗಳು ತೀರ ನೆರೆಹೊರೆಯ ಭಾಷೆಗಳಾಗಿ ಎಷ್ಟೋ ಶತಮಾನಗಳ ವರೆಗೆ ಕೂಡಿಯೇ ಬಂದದ್ದರಿಂದ ಪ್ರತಿಮಾತಿನಲ್ಲಿ ಕಂಡುಬರುವ ಮರಾಠಿ ಅಂಶವನ್ನು ವಿಂಗಡಿಸಿ ಹೇಳುವುದು ಸ್ವಲ್ಪ ತೊಂದರೆಯ ಮಾತೇ ಸರಿ.

ಈ ಮೊದಲೇ ವಿವರಿಸಿದಂತೆ ಉತ್ತರ ಕರ್ನಾಟಕದಲ್ಲಂತೂ, (ವಿಶೇಷತಃ ವಿಜಯಪುರ ಮತ್ತು ಬೆಳಗಾವಿ ಜಿಲ್ಹೆಗಳಲ್ಲಿ), ಹಣದ ಮತ್ತು ವೇಳೆಯ ಭಾಷೆ ಹೆಚ್ಚುಕಡಿಮೆ ಮರಾಠಿಯೇ ಆಗಿದೆ. 'ದೋನಾಣೆ' 'ಚಾರಾಣೆ' 'ಶಂಭರ್ ಟಕ್ಕೆ' 'ಶೇಕಡಾ' 'ಹಜಾರ್ ರೂಪಾಯಿ'—ಮೊದಲಾದವುಗಳಲ್ಲದೆ, 'ಅಡೀಚ್' 'ಸಾಡೇಸಾತ್' 'ಬಾರಾ'—ಮೊದಲಾದ ವೇಳೆಯನ್ನು ಸೂಚಿಸುವ ಪದಗಳು ಮರಾಠಿಯವೇ ಆಗಿವೆ. ಇದರ ಜೊತೆಗೇ, ದಿನದ ವ್ಯವಹಾರದ ಭಾಷೆಯಲ್ಲಿ ಕಂಡುಬರುವ 'ಜರ್' 'ಜರ್‌ಕರತಾ' ಮೊದಲಾದ ಶಬ್ದಗಳನ್ನೂ ಹೇಳಬಹುದು.

ಮೇಲಿನ ವ್ಯವಹಾರದ ಪ್ರಯೋಗಗಳಲ್ಲದೆ, ಪ್ರಾಚೀನ ಗ್ರಂಥಸ್ಥ ಪ್ರಯೋಗಗಳಲ್ಲೂ ಈ ಮರಾಠಿ ಭಾಷೆಯ ಪ್ರಭಾವವನ್ನು ನಾವು ಸುಸ್ಪಷ್ಟವಾಗಿ ಕಾಣಬಹುದಾಗಿದೆ. ಇತ್ತೀಚೆ ಆಳಿದ ಪೇಶವೆ. ರಾಷ್ಟ್ರೆಯರ ಕಿಂತ ಪೂರ್ವದಲ್ಲೇ ಸೇವುಣರು ಕನ್ನಡ ನಾಡಿನ ಎಷ್ಟೋ ಭಾಗಗಳನ್ನು ಆಳಿದರು. ತತ್ಪರಿಣಾಮನಾಗಿ ಆ ಪ್ರಭುಗಳ ಅನೇಕ ಶಬ್ದಗಳು ಕನ್ನಡದಲ್ಲಿ ಸೇರಿದವು.

ಹತ್ತನೆಯ ಶತಮಾನದ ಪಂಪಕವಿಯ ದ್ರೋಣಾಚಾರ್ಯರು ಅರ್ಜುನನನ್ನು ಶ್ಲಾಘಿಸುವ ರೀತಿ ಹೀಗೆ —

"ಅರೇ, ಹೋಯ . ... " (೨.೬೦)

ಅಚ್ಚಕನ್ನಡಿಗನಾದ ವೀರಶೈವ ಕವಿ ಹರಿಹರನ ಕಣ್ಣಪ್ಪನ ರಗಳೆಯಲ್ಲಿ 'ಬೈಲ' ಎಂದು ಎತ್ತಿಗೆ ಪ್ರಯೋಗವಿದೆ. ಅವನ ಶಿಷ್ಯ ರಾಘವಾಂಕನಲ್ಲಿ 'ಕಂಟಳಿಸು' (ಕಂಟಾಳಣೇ); ಗಾಣ (ಗಾನ) ಪ್ರಯೋಗಗಳಿವೆ "ಹೊಯ್ಸಳರ ಒಡ್ಡೋಲಗದಲ್ಲಿದ್ದ ಜನ್ನನು (೧೨೦೯) ಅನಂತನಾಥ ಪುರಾಣದ ಒಬ್ಬ ಪ್ರತೀಹಾರಿಯು ಬಾಯಲ್ಲಿ 'ಊಠಿ, ಉಠಿ ಮಾಗಾ ಬೈಸ ಜಾ ತೂ ಹಳೂ....' ಎಂಬ ಮಾತುಗಳನ್ನು ಹಾಕಿದ್ದಾನೆ."* ಇವೆಲ್ಲ ಮರಾಠಿ ಇಲ್ಲವೆ ಮಹಾರಾಷ್ಟ್ರೀಯ ಪ್ರಾಕೃತ.

ಕ್ರಿ ಶಕ ೧೫ನೆಯದರ ಕುಮಾರವ್ಯಾಸನಲ್ಲಿ ಕಂಡುಬರುವ ಅನೇಕ ಉದ್ಗಾರವಾಚಕಗಳೂ, ಕುಸ್ತಿಯ ಪಾರಿಭಾಷಿಕ ಪದಗಳೂ ಮರಾಠಿಯವಾಗಿವೆ.—

"**ಪೂತುರೇ** ಬಿಲುಗಾಜ **ಮಝುರೇ** ಸೂತನಂದನ, ಬಾಣರಚನಾ ನೂತನದ ಬಲುವಿದ್ಯೆ" (ವಿ. ಪರ್ವ ೯.೧೯) ಪುನಃ 'ಪೂತುರೇ ಕಲಿಪಾರ್ಥ, ಬಿಲುವಿದ್ಯಾತಿಶಯ ನಿಧಿ'.

'ಧಡಾಳಿಸು' 'ಠೆಕ್ಕೆ' 'ಚೌಪಟ' 'ಖಾಡಾ-ಖಾಡಿ' 'ಮಹಳ7 ವಾಳ' 'ಘಾರಾಘಾರಿ' 'ಖರೆಯ' 'ಪತಿಕರಿಸು' 'ಬಿಡೆಯ' 'ಚೌರಾಸಿ' 'ಝುಗೆ' (=ನಿಲುವಂಗಿ) 'ಲಾವಕ' (ಜಗಳ ಹಚ್ಚುವವ–ಮರಾಠಿಲಾವಣೇ) 'ಬಾಹತ್ತರ (ನಿಯೋಗ)' ಮೊದಲಾದ ಶಬ್ದಗಳು ನೇರವಾದ ಕೋಶದ ರೀತಿಯನ್ನು ತೋರಿಸುತ್ತವೆ. ಕುಮಾರವ್ಯಾಸನಲ್ಲಿ ಬರುವ 'ಜಯ್ಘುರತನ' 'ಝೊಮ್ಮಿಡು' 'ಧಡಾಳಿ' 'ಝುಂಕೆ' 'ವೇಢಯ' 'ಢೆಕ್ಕಾ ಢೆಕ್ಕಿ' 'ಠಪ್ಪರ'—ಈ ಮೊದಲಾದವು ಹೆಚ್ಚಾಗಿ ಪ್ರಾಕೃತ.†

ಕ್ರಿಯಾಪದಗಳಲ್ಲಿ ಮರಾಠಿಯವೆಂದು ಕಾಣಬಹುದಾದ –

"ಮನೆಯಲಿ ಸೂಳೆಯರ ಮುಂದುಲಿದು **ಬಾಹ್ಕಳಗೆಡೆ**ದು ಬಂದೀಗ"

ಮೊದಲಾದವಲ್ಲದೆ, ಈ ಕೆಳಗಿನಂತಹ ಮಾತಿನ ರೀತಿಯನ್ನೂ ನೋಡಿರಿ:—

"ಅರರೆ, ರಾ**ವುತು** ರಾ**ವುತೆಂಬ**
ಬ್ಬರಣೆ ಮಸಗಿದುದೊಂದು ಕಡೆಯೊಳು
ಸರಿಸ ಸಬಳಿಗ ಪೂತುಪಾ**ಯುಕು**ವೆಂಬ ಕಳಕಳಿಕೆ |
ಧಿರರೆ ಸಾರಥಿ **ಹಳುಹಳೆಂಬ**
ರರೆ ಮಸಗಿದುದೊಂದು ಕಡೆಯೊಳು"—ಇತ್ಯಾದಿ.

* ಕ. ನೆ. ಪು ೨೭. † ಎನ್ಕೆ. ಕು. ವ್ಯಾ

'ಅಪ್ರತಿಮ ವೀರಚರಿತೆ'ಯಲ್ಲಿಯ ಯಶವಂತರಾವನಂತೂ, ಮರಾಠಿಯಲ್ಲಿಯೇ ಪ್ರಾರ್ಥಿಸುತ್ತಿದ್ದಾನೆ-

"ಜೀಯ ಜೀಯ ರಾವು ರಾವು ಗಾವು ಮೀ ತುರ್ಝಾ ಘರೇ-
ದೋನುಸಿಂಗ ಚಾರು ಪಾಯ್............" ಇತ್ಯಾದಿ.

ಇದರ ಜೊತೆಗೇ ಹೆಣ್ಣುಮಕ್ಕಳ ಬಾಯಲ್ಲೂ ಕೂಡ ಕಂಡುಬರುವ, ಫತ್ತರ ಫ್ಪೋಡ; ಸಡಲೆ-ಕಾಮು —ಮೊದಲಾದ ಪ್ರಯೋಗಗಳನ್ನು ಸೇರಿಸಿನರೆ, ಮರಾಠಿಯ ಈ ಪ್ರಭಾವವು ಎಷ್ಟು ಆಳವಾಗಿದೆಯೆಂಬುದು ಕಂಡುಬರದಿರದು.

ನಿಜ; ಮೇಲೆ ವಿವರಿಸಿದ ಎಷ್ಟೋ ಶಬ್ದಗಳು ಶುದ್ಧ ಮರಾಠಿಯವು ಎಂದು ಹೇಳುವದಕ್ಕಿಂತ ಮಹಾರಾಷ್ಟ್ರೀಯ ಪ್ರಾಕೃತವೆಂದು ಹೇಳುವುದು ಹೆಚ್ಚು ಸೂಕ್ತವಾದೀತು. ಆದರೂ, ಈ ಪ್ರಾಕೃತದಲ್ಲಿಯ ಅನೇಕ ಶಬ್ದಗಳು ಒಂದು ಕಾಲಕ್ಕೆ ಕನ್ನಡದಲ್ಲೂ ಇರಬಹುದಾಗಿ, ಇಂದು ಮರಾಠಿಯಲ್ಲಿ ಮಾತ್ರ ನಿಂತು ಪುನಃ ಕನ್ನಡಕ್ಕೆ ಬಂದಾಗ ಮರಾಠಿಯೆಂದೇ ಕಾಣಿಸುತ್ತವೆ.

ಕೇಶಿರಾಜನು ತನ್ನ 'ಅಪಭ್ರಂಶ' ಪ್ರಕರಣದಲ್ಲಿ ಹೇಳಿದ ಅನೇಕ ಶಬ್ದಗಳು ಇಂದು ಮರಾಠಿಯಲ್ಲಿ ಮಾತ್ರ ಕಾಣುತ್ತಿದ್ದು ಕನ್ನಡದಲ್ಲಿ ಇಲ್ಲದಿರುವುದು ನಿಜವಾಗಿ ಸೋಜಿಗದ ಮಾತಾಗಿದೆ.—

ಉದಾ —ಮಯೂರ 7 ಮೋರ; ಮರ್ಕಟ 7 ಮಂಕಡ 7 ಮಾಕಡ; ದ್ವಿಗುಣ 7 ದುಗುಣ; ಗ್ರಾಮ 7 ಗಾವ; ಚತುರ್‌ಗ್ರಾಮ 7 ಚೌಗಾವ್; ಚತುಷ್ಕ 7 ಚೌಕ; ಮಹಳ 7 ಮಾಳ; ಕರ್ಪಟ 7 ಕಪ್ಪಡ 7 ಕಾಪಡ; ಕಾರ್ಪಾಸ 7 ಕಾಪೂಸ; ಏಕ 7 ಎಕ್ಕಟಿ 7 ಏಕಟಾ ಇತ್ಯಾದಿ ಇತ್ಯಾದಿ.

ಅಂತೂ, ಕನ್ನಡ ಕೋಶದ ಬೆಳವಣಿಗೆಯ ದಾರಿಯನ್ನು ನಡೆಯುತ್ತ ನಾವು ಬಹುದೂರ ಕ್ರಮಿಸಿದ್ದಾಯಿತು. ನಿಜವಾಗಿಯೂ, ಹೊಸ ಹೊಸ ನೀರನ್ನು ಕಾಲಕಾಲಕ್ಕೆ ಸೇರಿಸಿಕೊಂಡ ಕನ್ನಡ ಕೋಶದ ದಾರಿ ಅಷ್ಟು ಸುದೀರ್ಘವಾಗಿಯೇ ಇದೆ. ಆದ್ದರಿಂದ, ಸಾರಾಂಶರೂಪವಾಗಿ ನಾವು ಈ ವರೆಗೆ ನೋಡಿದ ಮಾತುಗಳೆಂದರೆ,— ಜೀವಂತ ಭಾಷೆ ಬೆಳೆಯುವುದು ಅನಿವಾರ್ಯ; ಆವಶ್ಯಕ. ಆ ರೀತಿ, ಕನ್ನಡ ಭಾಷೆಯೂ ಕೂಡ ಕೇವಲ ಮಡುಗಟ್ಟಿಕೊಂಡು ನಿಂತ ನೀರಿನ ಹಾಗಿರದೆ, ಕಾಲಕಾಲಕ್ಕೆ ಹೊಸ ಹೊಸ ದಾರಿಯನ್ನು ಹಾಕಿಕೊಳ್ಳುತ್ತಿದೆ. **ಹೀಗೆ ಬೆಳೆಯುತ್ತಿರುವ ಭಾಷೆಯು ಹೊರಗಿನ ಹವೆ ಆಹಾರವನ್ನು ಸ್ವೀಕರಿಸಿ, ಒಡಲ ನೂಲಿನಿಂದಲೇ ತನ್ನ ಜಾಲವನ್ನು ನೇಯುವ ಜೇಡನ ಹಾಗೆ, ಹೊರಗಿನ ಸ್ವೀಕರಣಕ್ಕೂ ಒಳಗಿನ ವ್ಯತ್ಯಾಸಕ್ಕೂ ಸದೈವ ಸಿದ್ಧವಿದೆ.** ತತ್ಪರಿಣಾಮವಾಗಿ, ನಾವು ಕನ್ನಡ ಭಾಷೆಯ ಆಂತರ-ವ್ಯತ್ಯಾಸಗಳಲ್ಲಿ, ಸ್ವರಾದಿ, ವರ್ಣವ್ಯತ್ಯಯ, ಸಾದೃಶ್ಯ, ಸಾಹಚರ್ಯ, ದ್ವಿರುಕ್ತಿ, ಭಾಷಾಗೌರವ, ಅಪಕರ್ಷ, ಉತ್ಕರ್ಷ–ಮೊದಲಾದ ಆಂತರ ಪ್ರಕ್ರಿಯೆಗಳನ್ನೂ, ಶತ-ಶತಮಾನಗಳ ಇತಿಹಾಸ ಸಂದರ್ಭದಲ್ಲಿ ಅನ್ಯಭಾಷಾ ಸಂಪರ್ಕ–ಪ್ರಭಾವಗಳನ್ನೂ ಕಾಣುತ್ತೇವೆ. ಈ ರೀತಿ, ಸಂಸ್ಕೃತಿಯ ಮುಬ್ಬುಬೆಳಕಿನ ಕಾಲದಿಂದ, ಇಂದಿನ ವಿದ್ಯುದ್ದೀಪದ ಸುಧಾರಣೆಯ ಕಾಲದ ವರೆಗೆ, ಆರ್ಯರು, ಗ್ರೀಕ್–ರೋಮೀಯರು, ಪಾರಸಿಕ–ಅರಬರು, "ಹಿಂದುಸ್ತಾನಿ" ಜನರು, ಫ್ರೆಂಚ್–ಪೋರ್ತುಗೀಜ್‌ರು, ಆಂಗ್ಲರು; ದ್ರಾವಿಡ ಭಾಷಾಸ್ಕಂಧದ ಜನ ಮತ್ತು ಮರಾಠಿಗರು— ಕನ್ನಡ ಭಾಷೆಗೆ ಹೊಸ ಹೊಸ ಕಾಣಿಕೆಗಳನ್ನು ಕೊಟ್ಟು ಅದರ ಅಭಿವೃದ್ಧಿಯನ್ನು ಗೈದಿದ್ದಾರೆ. ಕನ್ನಡ ಕೋಶದ ಈ ಬೆಳವಣಿಗೆಯೇ 'ವೀರಭಾಷಾಶುದ್ಧಿ'ಯೆಂಬುದು ಯಾವ ಭಾಷೆಯ ಇತಿಹಾಸದಲ್ಲೂ ಸಾಧ್ಯವಿಲ್ಲವೆಂಬುದನ್ನು ಎತ್ತಿ ಸಾರುತ್ತಿದೆ.

ಕುಮಾರವ್ಯಾಸನಂತೂ ಇಂಥ ಪ್ರಯೋಗಗಳಲ್ಲಿ ಎತ್ತಿದ ಕೈ. ಅವನ ಈ ಕೆಳಗಿನ ಪ್ರಯೋಗಗಳೇ ಇದಕ್ಕೆ ದೃಷ್ಟಾಂತ.

ಚಡಣೆ (ಮ. चढणे)= ಏರುವುದು.

" ಬಿಲ್ಲಕೊಪ್ಪಿನ ಮೇಲೆ ಚಾಚಿದ-
ಭುಲ್ಲಣೆಯ ರೋಮಾಂಚನದ **ಚಡ್ಡಣೆಯು** ಚೇತನದ ||
(ದ್ರೋಣಪರ್ವ-೧೭.೩೩)

ಮಂಜರ (ಮ. मांजार) =**ಬೆಕ್ಕು**

" ಅಂಜುವೆವು ನಿಮಗರಸರೇ ಬಲ-
-ಸಂಜರದ ಗಿಣಿ ನೀವು; ನಿಮಗೀ
ಮಂಜರನ ಪಡಿಮುಖಕೆ ನಿಲುವುದು ನೀತಿಯೇ ನಿಮಗೆ — ? ||
(ಕರ್ಣ—೧೧.೪೨)

ಇದೇ ಪದವು ಸಭಾಪರ್ವದಲ್ಲಿ " ಮಂಜಲಿ " ಎಂದು ಬಂದಿದೆ.

ಬೈಸಿಗೆ—(ಮ. ಉಠಾಬೈಸ್)

" ತಿರುವ ಬೆರಳಲಿ ಮಿಡಿದು-
ಬೈಸಿಗೆದೆಗೆದು ಠಾಣದಲಿ " —
(ಕರ್ಣ ೨೧.೧೨)

ಚಾವಟಿ (ಮ. चावट्) = ಫಟಿಂಗ; ಉಡಾಳ.

" ಕುಟಿಲ ಸೃಷ್ಟಿಗೆ ನೀವರಸು **ಚಾ**-
-**ವಟಿಯರಿಗೆ** ಮನೆ; ದುರ್ವ್ಯಸನ ಲಂ-
-ಪಟಿಂಗಾಚಾರಿಯರು " ಇ.
(ಕರ್ಣ ೯.೨೨)

ಜೇವಣಿ (ಮ. जेवण्) = ಊಟ.

" ಶಿವ ಶಿವಾ ಕೌರವನ ತಮ್ಮದಿ-
-ರವಗಡಿಸಿದರು ನಂದೋಪನಂದರು
ಜವಗೆ **ಜೇವಣಿಯಾದರೇ** ಕಲಿ ಭೀಮನಿದಿರಿನಲಿ ||
(ಕರ್ಣ ೧೩.೧೯)

ಕೇವಲ ಶಬ್ದಗಳು ಮಾತ್ರವಲ್ಲದೆ, ಮರಾಠಿಯ ಅನೇಕ ತದ್ಧಿತ ಪ್ರತ್ಯಯಗಳನ್ನೂ ಕುಮಾರ ವ್ಯಾಸನು ಪ್ರಯೋಗಿಸಿದ್ದನ್ನು ಕಾಣಬಹುದು. ಉದಾಹರಣೆಗೆ, " ಪಣ್ " ತದ್ಧಿತಪ್ರತ್ಯಯ ಸೇರಿ ಮರಾಠಿ ಭಾವನಾಮಗಳಾಗುತ್ತವೆಯಷ್ಟೇ – ಶಹಣಾಪಣ್; ಹುಶಾರಪಣ್ ಇತ್ಯಾದಿ - ಹಾಗೆಯೇ, ಕುಮಾರ ವ್ಯಾಸನಲ್ಲಿ " **ವೀರಪಣ** " (ಗದಾಪರ್ವ ೭.೫೨); " **ಸಾಮರ್ಥ್ಯಪಣ** " (ಸಭಾ ೧೩.೩೦) "**ಜಾಣಪಣ**" (ವಿರಾಟ ೮.೪೭) ಮೊದಲಾಗಿ ಬರುತ್ತವೆ –

"**ಜಾಣಪಣವಿದು** ಶಿವ ಸುದರ್ಶನ
ಪಾಣಿಗಳಿಗರಿದಮರರಾಯನ
ರಾಣಿಯಾಣೆಯೆನುತ್ತೆ ಬೆರಗಾಯಿತ್ತು ಸುರನಿಕರ "

ಐದನೆಯ ಪ್ರಕರಣ

ಕನ್ನಡ ಮತ್ತು ನೆರೆ-ಹೊರೆಯ ಭಾಷೆಗಳು

ಕನ್ನಡದ ಪ್ರಭಾವ

ಈ ವರೆಗೆ, ಕನ್ನಡ ಕೋಶದ ಬೆಳವಣಿಗೆಯನ್ನು ನೋಡುವಾಗ, ಕೇವಲ ಆಂತರ ಕಾರಣಗಳಲ್ಲದೆ, ಪ್ರಬಲವಾದ ಅನ್ಯಭಾಷಾ ಸಂಪರ್ಕವೂ ಕೋಶದ ಮೇಲೆ ಯಾವ ರೀತಿ ಪರಿಣಾಮವನ್ನು ಮಾಡಿತೆಂಬುದನ್ನು ನೋಡಿದೆವು. ಆದರೆ, ಈ ರೀತಿಯ ಪರಿಣಾಮವು ಕೇವಲ ಏಕಪಕ್ಷೀಯವಾಗಿರಲಿಲ್ಲ; ಉಳಿದ ಭಾಷೆಗಳು ಕನ್ನಡದ ಮೇಲೆ ಪರಿಣಾಮವನ್ನುಂಟು ಮಾಡಿದಂತೆಯೇ ಕನ್ನಡವೂ ಕೂಡ ಮೇಲೆ ವಿವರಿಸಿದ ಎಷ್ಟೋ ಭಾಷೆಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು. ಭಾಷಾಪ್ರಪಂಚದ ಪ್ರಜಾಪ್ರಭುತ್ವದಲ್ಲಿ ಮೇಲು-ಕೀಳೆಂಬ ಭೇದವಿಲ್ಲವೆಂಬುದನ್ನು ಈ ಮೊದಲೇ ಅನೇಕ ಸಲ ನೋಡಿದ್ದೇವೆ. 'ಮಾಂಗಾಯ್' 'ಆಣೆಕಟ್ಟು' ಮೊದಲಾದ ಶುದ್ಧ ಕನ್ನಡ ದ್ರಾವಿಡ ಪದಗಳು ಇಂಗ್ಲಿಷಿಗೆ ಹೋದದ್ದೇ ಇದಕ್ಕೆ ದೃಷ್ಟಾಂತ. ಅಷ್ಟೇ ಅಲ್ಲದೆ; ಕನ್ನಡ ಭಾಷೆಯಂತೂ ತೀರ ಪ್ರಾಚೀನ ಕಾಲದಿಂದಲೇ ಭಾರತದ ರಾಜ್ಯಾಂಗಗಳಲ್ಲಿ ಒಂದು ತೀರ ಪ್ರಭಾವಶಾಲಿಯಾದ ಘಟಕವಾಗಿದ್ದಿತು. ಇದೂ ಅಲ್ಲದೆ, ಈಗ ತೀರ ಅನ್ಯಭಾಷಾ ಪ್ರದೇಶಗಳೆಂದು ಎನ್ನಿಸಿಕೊಂಡ ಅನೇಕ ಪ್ರಾಂತಗಳಲ್ಲಿ, ಒಂದು ಕಾಲಕ್ಕೆ ಕನ್ನಡರೋ, ದ್ರಾವಿಡರೋ ವಾಸಿಸುತ್ತಿದ್ದರೆಂಬುದನ್ನು ನೆನೆದಾಗ ಇಂಥ ಪ್ರಭಾವವು ಅನಿವಾರ್ಯವೆಂದೇ ಹೇಳಬೇಕು. ಯಾಕಂದರೆ, ಒಂದು ಕಾಲದಲ್ಲಿ ದ್ರಾವಿಡರು ಇಡೀ ಭರತಖಂಡದ ಪಶ್ಚಿಮ ಭಾಗವನ್ನೆಲ್ಲ ವ್ಯಾಪಿಸಿದ್ದರಲ್ಲದೆ, ತಮ್ಮದೇ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡು ಉತ್ತರ ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ನೆಲಸಿದ್ದರು.

ಫಾದರ್ ಹೆರಾಸ್‌ರವರ ಪ್ರಕಾರ ಮೊಹೆಂಜೊದಾರೊ ಮತ್ತು ಹೆರಪ್ಪಗಳಲ್ಲಿಯ ಸಂಸ್ಕೃತಿಯು ದ್ರಾವಿಡವಷ್ಟೇ ಅಲ್ಲ; ಕನ್ನಡದ ರೀತಿಯನ್ನು ತೋರಿಸುತ್ತದೆಂದು ಅಭಿಪ್ರಾಯ. ಅಲ್ಲಿ ಶುಭ-ಸೂಚಕವಾಗಿ ಬರುವ ಡಮರುಹದಂಥ ಈ|X| ಚಿಹ್ನವು ಇಂದಿಗೂ 'ಕೂಡಲ' ಅಥವಾ 'ಶುಭದ ಅರ್ಥದಲ್ಲಿ ಕನ್ನಡ ವೀರಶೈವರ ಮನೆಯ ಮುಂಭಾಗಗಳಲ್ಲಿ ಬರೆಯಲ್ಪಡುತ್ತದೆಂದು ಅವರ ಮತ. ಮೊಹೆಂಜೊದಾರೊದ ಚಿತ್ರ ಲಿಪಿಯಲ್ಲಿ ಕನ್ನಡಿಗರನ್ನು 'ಕಣ್‌ನೀರ್'— ಎಂದು ಈ ರೀತಿ |△| ಸೂಚಿಸಿದ್ದಾರೆಂದು ಅವರ ಅಭಿಪ್ರಾಯ. ಆದರಂತೆ ಛೋಟಾನಾಗಪುರ ಭಾಗದಲ್ಲಿರುವ ಅನಾಗರಿಕರಲ್ಲೂ, | ಭಿಲ್ಲರಲ್ಲೂ, ಮತ್ತು ಬ್ರಾಹುಈ ಭಾಷೆಯನ್ನಾಡುವ ಜನರಲ್ಲೂ ಅನೇಕ ದ್ರಾವಿಡ ಪದಗಳನ್ನು ಕಾಣುತ್ತಿದ್ದೇವೆಂದು ಪಂಡಿತರ ಅಭಿಪ್ರಾಯ.

ಹೀಗಾಗಿ, ತೀರ ಪ್ರಾಚೀನ ಕಾಲದಲ್ಲೇ, ಅಂದರೆ ಕ್ರಿ. ಪೂರ್ವ ಎಷ್ಟೋ ಶತಮಾನಗಳ ಹಿಂದೆಯೇ, ದ್ರಾವಿಡರು ಇಡೀ ಭರತಖಂಡದಲ್ಲೆಲ್ಲ ವ್ಯಾಪಿಸಿ, ತಮ್ಮದೇ ಆದ ಒಂದು ಸಂಸ್ಕೃತಿಯನ್ನು ಕಟ್ಟಿಕೊಂಡಿದ್ದರೆಂಬುದು ವ್ಯಕ್ತವಾಗದಿರದು.

ಪ್ರಾಗ್-ಐತಿಹಾಸಿಕ ಕಾಲದ ಮಾತು ಹೇಗೂ ಇರಲಿ; ಐತಿಹಾಸಿಕ ಕಾಲದಲ್ಲೂ ಕೂಡ ದ್ರಾವಿಡ-ಕನ್ನಡರು ಇಂದು ಪರಭಾಷೆಯನ್ನಾಡುವ ಅನೇಕ ಪ್ರದೇಶಗಳನ್ನು ಆಕ್ರಮಿಸಿದ್ದರೆಂಬುದಕ್ಕೆ ಸಾಕಷ್ಟು, ಜಾನಾಂಗಿಕ (ethnic), ಐತಿಹಾಸಿಕ, ಸಾಹಿತ್ಯಕ, ಮತ್ತು ಉತ್ಖನನಕ್ಕೆ ಸಂಬಂಧಪಟ್ಟ ಅಂಶಗಳಿವೆ. ಒಟ್ಟಾರೆ, ಐತಿಹಾಸಿಕ ಕಾಲದಲ್ಲೂ ಕನ್ನಡರು ತಾವು ವ್ಯಾಪಿಸಿದ **ಭೂಪ್ರದೇಶದ ಭೌಗೋಲಿಕ ವಿಸ್ತಾರ, ಪ್ರಭಾವಶಾಲಿಯಾದ ಸಂಸ್ಕೃತಿ, ರಾಜಕೀಯ ಪ್ರಭುತ್ವ ಮತ್ತು ಉದಾತ್ತ ಮತ-ತತ್ವಗಳ ಮೂಲಕ ಅನೇಕ ನೆರೆಹೊರೆಯ ಭಾಷೆಗಳ ಮೇಲೆ ಪ್ರಭಾವವನ್ನು ಮಾಡಿದರು.**

ಹಾಗಾದರೆ, ಮೊಟ್ಟ ಮೊದಲು ಕನ್ನಡಿಗರು ಆಕ್ರಮಿಸಿದ್ದ ಪೂರ್ವದ ಭೂಪ್ರದೇಶವಾದರೂ ಎಷ್ಟು? ಅರ್ಥಾತ್ ಪ್ರಾಚೀನ ಕರ್ನಾಟಕದ ಭೌಗೋಲಿಕ ಮೇರೆಗಳಾವುವು? - ನೋಡೋಣ.

ಇಂದಿನ 'ಕರ್ನಾಟಕ'ದಲ್ಲಿ, ಕನ್ನಡ ಭಾಷೆಯನ್ನಾಡುವ ಜನರು ಸಾಕಷ್ಟಿದ್ದರೂ, ಯೂನಿಯನ್ ಕರ್ನಾಟಕದ ಮುಂಬಯಿಯ ನಾಲ್ಕು ಜಿಲ್ಹೆಗಳನ್ನು ಬಿಟ್ಟರೆ, ಉಳಿದ ಭಾಗಗಳಿಗೆ 'ಕರ್ನಾಟಕ' ಎನ್ನಬೇಕೋ ಎನ್ನಬಾರದೋ ಎಂಬುದು ಇನ್ನೂ ರಾಜಕೀಯ ಪ್ರಶ್ನೆಯಾಗಿದೆ. ಕೊಡಗು, ನೀಲಗಿರಿ, ಬಳ್ಳಾರಿಯ ಅನಂತಪುರ ಕಡಪಾಗಳ ಮಾತಂತೂ ಒತ್ತಟ್ಟಿಗಿರಲಿ; ಕನ್ನಡ ಸಿಂಹಾಸನವೆಂದು ಹೇಳಿಕೊಳ್ಳುತ್ತಿರುವ ಮೈಸೂರು ಕೂಡ 'ಮೈಸೂರು' ಆಗಿಯೇ ಉಳಿಯ ಬಯಸುತ್ತಿದೆಯೇ ಹೊರತು, 'ಕನ್ನಡ'ವಾಗಿಲ್ಲ. 'ಮೈಸೂರು' ಏನೇ ಆಗಲಿ ಬಿಡಲಿ; ಅದು ಕನ್ನಡದ 'ಪುಣೆ'ಯಂತೂ ಸುತರಾಂ ಇಲ್ಲ. ಮೈಸೂರು ಮೈಸೂರಿಗರಿಗೆ ಮಾತ್ರ. ಹೀಗಾಗಿ, ಈ ಹೊಯ್ದಾಡುವ ಮೈಸೂರು, ಇದ್ದ ನಾಲ್ಕು ಜಿಲ್ಹೆಗಳಲ್ಲಿ ಅನ್ಯಭಾಷಾ ಪ್ರಭಾವಕ್ಕೆ ಒಳಗಾಗಿ ನರಳಾಡುತ್ತಿರುವ ಮೂರು ಜಿಲ್ಹೆಗಳನ್ನುಳಿದರೆ, ಇಂದಿನ ಕರ್ನಾಟಕವೆಂದರೆ ಧಾರವಾಡ ಜಿಲ್ಹೆ ಮಾತ್ರ. ಹೀಗಾಗಿ, ಕರ್ನಾಟಕವೆಂದರೆ, ಇಂದು ನಾವು ನಕಾಶದಲ್ಲಿ ಹುಡುಕಿ ನೋಡಬೇಕಾಗಿದೆ.

ಆದರೆ, ಒಂದು ಕಾಲದಲ್ಲಿದ್ದ ಕರ್ನಾಟಕದ ವ್ಯಾಪ್ತಿಯನ್ನು ನೆನೆದರೆ, 'ಆ ಚಿತ್ರ! ಈ ಚಿತ್ರ'-ಎನ್ನುವಂತಿದೆ. ಅದೇನೇ ಇರಲಿ; ಸದ್ಯ ಪ್ರಾಚೀನ ಕರ್ನಾಟಕದ ಮೇರೆಗಳನ್ನು ನೋಡೋಣ.

ಕನ್ನಡ—ಮಹಾರಾಷ್ಟ್ರ

ಇಂದಿನ 'ಮಹಾರಾಷ್ಟ್ರದ' ಎಷ್ಟೋ ಭಾಗಗಳು ಒಂದು ಕಾಲಕ್ಕೆ ಸಂಪೂರ್ಣ ಕನ್ನಡವಾಗಿದ್ದವು. 'ಮಹಾರಾಷ್ಟ್ರ'-ಎನ್ನುವ ಪದವು ಸಾಕಷ್ಟು ಪ್ರಾಚೀನವಿದ್ದರೂ, ಅದು ಕನ್ನಡವನ್ನು ಬಿಟ್ಟು ದೂರ ಹೋಗಿರಲಿಲ್ಲ. ವಾತ್ಸ್ಯಾಯನನು ತನ್ನ ಕಾಮಸೂತ್ರದಲ್ಲಿ ಮಹಾರಾಷ್ಟ್ರಿಗರ ಬಗ್ಗೆ—

"ಸಕುಲ ಚತುಃಷಷ್ಟಿ ಪ್ರಯೋಗ ರಾಗಿಣ್ಯೋ, ಅಶ್ಲೀಲ ಪರುಷವಾಕ್ಯಪ್ರಿಯಾಃ,
ಶಯನೇ ಚಸರಭಸೋಪಕ್ರಮಾಃ **ಮಹಾರಾಷ್ಟ್ರಿಕ್ಯಃ**—"

ಎಂದೂ—ವರಾಹಮಿಹಿರನು ತನ್ನ ಬೃಹತ್ಸಂಹಿತೆಯಲ್ಲಿ (ಕ್ರಿ. ಶ. ೬)

"ಭಾಗ್ಯೇ ರಸವಿಕ್ರಯಿಣಃ ಪಣ್ಯಸ್ತ್ರೀ ಕನ್ಯಕಾ **ಮಹಾರಾಷ್ಟ್ರಃ**"—ಎಂದೂ,—

ಕ್ರಿಸ್ತಶಕ ೭ನೆಯ ಶತಮಾನದ 'ಹುಯೆನ್‌ತ್ಸ್ಯಾಂಗನು—'ಮಹೋಲೋಚ್'—ಎಂಮೂ ವರ್ಣಿಸುತ್ತಾರೆ. ಕ್ರಿ. ಶಕ ೭ನೆಯ ಶತಮಾನದ ಎರಡನೆಯ ಪುಲಿಕೇಶಿಯ ಐಹೊಳೆಯ ಶಾಸನದಲ್ಲಿ, ಬರುವ—"ಅಗಮತ್ ಅಧಿಪತಿತ್ವಮ್ ಯೋ **ಮಹಾರಾಷ್ಟ್ರಕಾಣಾಮ್** ನವನವತಿ ಸಹಸ್ರ ಗ್ರಾಮ ಭಾಜಾಮ್ ತ್ರಯಾಣಾಮ್"

ಎನ್ನುವ ವರ್ಣನೆಯ ಮೇಲಿಂದ ಸುಪ್ರಸಿದ್ಧ ಮಹಾರಾಷ್ಟ್ರೀಯ ವಿದ್ವಾಂಸರಾದ ಡಾ. ಭಂಡಾರಕರ ಅವರು ಕರ್ನಾಟಕದ ಈ ಭಾಗವೆಲ್ಲ 'ಮಹಾರಾಷ್ಟ್ರ' ವಾಗಿದ್ದಿತೆಂದು ಸಾರಿದರು.

ಆದರೆ, ವಸ್ತುಸ್ಥಿತಿಯ ವಿಮರ್ಶೆಯನ್ನು ಮಾಡಿದರೆ, ಈ ಭಾಗವೆಲ್ಲ ಶುದ್ಧ ಕನ್ನಡ ಭಾಗವಾಗಿದ್ದಿತಲ್ಲದೆ, ಮಹಾರಾಷ್ಟ್ರದ ಎಷ್ಟೋ ಭಾಗಗಳು ಕೂಡ ಕನ್ನಡದಲ್ಲೇ ಸಮಾವೇಶ ಹೊಂದಿ ಕಾಲಕ್ರಮೇಣ ಕನ್ನಡವನ್ನು ಹಿಮ್ಮೆಟ್ಟುತ್ತ ಬಂದುವೆಂಬುದನ್ನು ಕಾಣುತ್ತೇವೆ.

ಉದಾಹರಣೆಗೆ, ಇಂದು ಸಂಪೂರ್ಣವಾಗಿ ಮರಾಠಿಯೆಂದು ಪರಿಗಣಿತವಾಗುತ್ತಿದ್ದ ಕೊಲ್ಹಾಪುರವು ಇಂದಿಗೂ ಅನೇಕ ಕನ್ನಡ ಅವಶೇಷಗಳಿಂದ ಒಡಗೂಡಿದೆ.

ಯಾಕಂದರೆ, ಈ ಭಾಗವು ಮೂಲತಃ ನಿಜವಾಗಿ ಮರಾಠಿಯೇ ಆಗಿದ್ದರೆ, ಪ್ರಾಚೀನಕಾಲದ ಯಾವುವಾದರೂ ಲೇಖಗಳು ಇಲ್ಲಿ ಮರಾಠಿಯಲ್ಲಿ ಸಿಗಬೇಕು. ಆದರೆ ಸುಮಾರು ೨೦೦-೩೦೦ ವರುಷಗಳ ಹಿಂದಿನ ಉಲ್ಲೇಖಗಳೆಲ್ಲ ಇಲ್ಲಿ ಪ್ರಾಕೃತವೋ ಇಲ್ಲವೆ ಕನ್ನಡವೋ ಆಗಿವೆ ಈ ಸಂಸ್ಥಾನದ ಊರುಗಳಾದ 'ಶಿರೋಳ್'—'ಸಿರಿ-ಪ್ರೊಳಲ್' ಮೊದಲಾದವು ಈ ಭಾಗದ ಕನ್ನಡತನವನ್ನೇ ಸಾರುತ್ತವೆ. ಇಂದಿಗೂ, ಇಲ್ಲಿಯ ಜೈನ ಮತ್ತು ವೀರಶೈವರು ಕನ್ನಡ ಭಾಷೆಯನ್ನೇ ಆಡುತ್ತಿದ್ದಾರೆ. ಇಲ್ಲಿಯ ಸುಪ್ರಸಿದ್ಧ ವಿಗ್ರಹವಾದ ಕರವೀರ ಮಹಾಲಕ್ಷ್ಮಿಯ ದೇವಸ್ಥಾನದಲ್ಲಿ ಹೇರಳವಾಗಿ ಕನ್ನಡ ಶಾಸನಗಳು ದೊರಕುತ್ತಿವೆ. ಅಷ್ಟೇ ಅಲ್ಲ; ಈ ವಿಗ್ರಹವು ಮೂಲತಃ ಹಿಂದೂ ವಿಗ್ರಹವಾಗಿರದೆ, ಜೈನವಾಗಿದ್ದಿತೆಂಬ ತರ್ಕವೂ ಇದೆ. ಇಲ್ಲಿಯ ಮತ್ತು ಇದರ ಸಮೀಪದಲ್ಲಿರುವ ಸಾಂಗಲಿ-ಕೂಸವಾಡ-ಮೊದಲಾದ ಸ್ಥಳಗಳಲ್ಲಿಯ ಜೈನರ ಹತ್ತಿರವೂ ಮತ್ತು ಅವರ ಮಠಗಳಲ್ಲೂ ಇನ್ನೂ ಸಾವಿರಾರು ಪ್ರಾಚೀನ ಕನ್ನಡ ಗ್ರಂಥಗಳನ್ನು ನಾವು ಕಾಣಬಹುದು. ಅಷ್ಟೇ ಅಲ್ಲ; ಕರ್ನಾಟಕ ಪ್ರಾಂತದಲ್ಲಿರುವ ತಮ್ಮ ಅನುಯಾಯಿಗಳಿಗೆ ಲಕ್ಷ್ಮೀಸೇನ ಮಠದ ಗುರುಗಳು ಇಂದಿಗೂ ತಮ್ಮ ರಾಯಸವನ್ನು ಕನ್ನಡದಲ್ಲಿಯೇ ಕಳಿಸುತ್ತಾರೆ. ಇದೂ ಅಲ್ಲದೆ, ಕೊಲ್ಹಾಪುರದ 'ರಾಜಕೀಯ ಕಾರ್ಯವಾಹಕನನ್ನು' (Political Agent) ಬ್ರಿಟಿಶ್ ಆಳ್ವಿಕೆ ಇರುವವರೆಗೂ, ಕೊಲ್ಹಾಪುರ 'Political Agent'ನೆಂದು ಸಂಬೋಧಿಸದೆ, "Political Agent for Karaveera Ilakha and Karnatak Prant" - ಎಂದು ಸಂಬೋಧಿಸುತ್ತಿದ್ದರು. *

ಕೊಲ್ಹಾಪುರದಲ್ಲಿಯ ಕನ್ನಡ ಅಂಶದ ಬಗ್ಗೆ ಹೆಚ್ಚಿನ ಅಭ್ಯಾಸಮಾಡಿದ ಕನ್ನಡದ ಮಾನ್ಯ ಪಂಡಿತರಾದ ಪ್ರೊ. ಕೆ. ಜಿ. ಕುಂದಣಗಾರ ಅವರು ಈ ಬಗ್ಗೆ ಈ ಕೆಳಗಿನ ಹೆಚ್ಚಿನ ವಿವರಗಳನ್ನೂ ಸೂಚಿಸುತ್ತಾರೆ —

ಪ್ರಾಚೀನ ಕಾಲದಲ್ಲಂತೂ ಐತಿಹಾಸಿಕವಾಗಿ ಕೊಲ್ಹಾಪುರವು ಇಂದಿನ ಕರ್ನಾಟಕಕ್ಕೇ ಸೇರಿತ್ತು. ಇಲ್ಲಿಯ ಅರಸುಮನೆತನಗಳೊಡನೆ ಕೊಲ್ಹಾಪುರದವರ ಶರೀರಸಂಬಂಧವಿದ್ದಿತು. ಕೊಲ್ಹಾಪುರದ ಶಿಲಾಹಾರರ ಮುಕ್ಕಾಲುಭಾಗ ಶಿಲಾಶಾಸನಗಳು ಕನ್ನಡದಲ್ಲಿವೆ. ಈ ಶಿಲಾಹಾರವಂಶದ ಚಂದ್ರಿಕಾದೇವಿಯನ್ನು ಚಲುಕ್ಯ ವಿಕ್ರಮಾದಿತ್ಯನಿಗೆ ಮದುವೆಮಾಡಿ ಕೊಟ್ಟಿದ್ದಿತು.

ಕರ್ಣಪಾರ್ಯನ 'ನೇಮಿನಾಥ ಪುರಾಣವು' ಕನ್ನಡದಲ್ಲಿದೆ.

---

* H. K. L.

ಕ್ರಿ. ಶ. ಹದಿಮೂರರ ಸುಪ್ರಸಿದ್ಧ ಕವಿಯಾದ ಗುಣವರ್ಮನ 'ಪುಷ್ಪದಂತ' ಪುರಾಣದಲ್ಲಿ ಕಂಡುಬರುವ "ಅಷ್ಟಕದ"ಲ್ಲಿ ಕೊಲ್ಲಾಪುರದ ಚಂದ್ರನಾಥನ ವರ್ಣನೆಯಿದೆ—

—"ಅನಘಂ ಮಾಽಟ್ಕಿ ಭವ್ಯರ್ಗೆ ಸೌಖ್ಯಾವಹಮುಂ **ಕೊಲ್ಲಾಪುರ** ಶ್ರೀ ತ್ರಿಭುವನತಳಕಾಲಂಕೃತಂ —ಚಂದ್ರನಾಥಂ"— (ಪು. ೨೫೦)

ಹದಿನೇಳನೆಯ ಶತಮಾನದ ಮಧ್ಯಭಾಗದ ವಡಗಾವ್ ಮತ್ತು ಕೋರೋಚಿಗಳ ಶಾಸನಗಳೆಲ್ಲ ಕನ್ನಡದಲ್ಲೇ ಇವೆ.

ಕೊಲ್ಲಾಪುರದಿಂದ **ಎಂಟು** ಮೈಲು ಮಾತ್ರ ದೂರವಿರುವ 'ರುಕಡಿ'ಯ ಜನರೂ, ಮತ್ತು **ಕೇವಲ** ನಾಲ್ಕು ಮೈಲು ಪೂರ್ವಕ್ಕಿರುವ 'ನಳಿವಡೆ'ಯ ಜನರೂ **ಇಂದಿಗೂ** ಕನ್ನಡ ಮಾತನ್ನೇ ಆಡುತ್ತಿದ್ದಾರೆ.

"ಮಹಾನವಮಿಯ ಕಾಲ, ಆಶ್ವಿನಮಾಸ ಪಂಚಮಿಯ ದಿವಸ ಚಿಂಚವಾಡದ ಗ್ರಾಮಸ್ಥನ ಅ-ವಿವಾಹಿತ ಮಗಳ ಕೈಯಿಂದ ಕೂಷ್ಮಾಂಡವನ್ನು ಒಡೆಸುವುದು ಕನ್ನಡ ಸಂಸ್ಕೃತಿಯ ಅಂಶವೆಂದು ಕಾಣುತ್ತದೆ."

"ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಹೋರಿ ಇಲ್ಲವೆ ಕೋಣಗಳನ್ನು ಶಂಕರ ಮತ್ತು ಲಕ್ಷ್ಮೀ ದೇವಿಯರಿಗೆ ಬಲಿಕೊಡುವ ಸಂಪ್ರದಾಯವು ಇಲ್ಲಿಯೂ ಇದೆ."

ಕೊಲ್ಲಾಪುರದ ಜನರ ಬಾಯಲ್ಲಿ ಇಂದಿಗೂ ಕಂಡುಬರುವ ಈ ಕೆಳಗಿನ ಪ್ರಯೋಗಗಳು ಕನ್ನಡದವೇ ಆಗಿವೆ:— ಹೆಂಟ್ಯಾ (ಹೆಂಟೆ); ಕೊಯಿಂಡ್ಯಾ (ಕೊಂಡೆ); ಅಡಕವಣೆ; ಸಿಕ್ಕೆಸು; ಮೂಗ ಬಟ್; ಅಳಸುಂದಾ (ಅಲಸಂದಿ); ಕಾಕವಿ (ಕಾಕಂಬಿ)—ಇತ್ಯಾದಿ.

ಇಲ್ಲಿಯ ಮರಾಠಿಯಲ್ಲಿಯ "ತೋ ಮಲಾ ಗಾಟ ಪಡಲಾ"— ಮೊದಲಾದುವು ಕನ್ನಡ ಮೂಲವುಳ್ಳವು.

ಇದರಂತೆಯೇ, ಇಂದು ಮರಾಠಿಗೆ ಹೋಗಬಯಸುವ ಸೊಲ್ಲಾಪುರ ಊರಲ್ಲಿಯೂ ಮತ್ತು ಅದರ ನೆರೆಹೊರೆಯಲ್ಲಿಯೂ ಅನೇಕ ಕನ್ನಡ ಶಿಲಾಶಾಸನಗಳು ದೊರಕುತ್ತಿವೆ. ಈ ಸೊಲ್ಲಾಪುರ-ಸೊನ್ನಲಿಗೆಯೇ— ಸುಪ್ರಸಿದ್ಧ ವೀರಶೈವ ಗುರುವಾದ ಸಿದ್ಧರಾಮನ ಕಾರ್ಯಕ್ಷೇತ್ರವಾಗಿದ್ದಿತು.

ಠಾಣೆಯ ಶಿಲಾಹಾರರಲ್ಲಿ ಇಂದಿಗೂ ಲಕ್ಷ್ಮಿಯವ್ವ, ಪಪ್ಪುವಣ್ಣ, ಮೊದಲಾಗಿ ಕನ್ನಡ ಸ್ತ್ರೀ-ಪುರುಷರ ಹೆಸರನ್ನು ಕಾಣಬಹುದು.

'ಕರಹಟ' ಪ್ರಾಂತದಲ್ಲಿ ಹುಟ್ಟಿದವ ಎಂಬುದನ್ನು ಸೂಚಿಸಬೇಕಾದರೆ, 'ಇಚ' ಪ್ರತ್ಯಯವನ್ನು ಯಾವರೀತಿ ಉಪಯೋಗಿಸಬೇಕೆಂಬುದನ್ನು ೧೨ನೆಯ ಶ. ದ. ನಾಗವರ್ಮನು ತನ್ನ ಭಾಷಾಭೂಷಣದಲ್ಲಿ ಹೇಳುತ್ತಾನೆ—ಪೊಟಲಿಚ ಇತ್ಯಾದಿಯ ಹಾಗೆ, 'ಕರಹಡ ದೇಶದೊಳ್ ಪುಟ್ಟಿದಾತಮ್ ಕರಹಡಿಚಮ್'— ಇತ್ಯಾದಿ. ಏಳನೆಯ ಶತಮಾನದ ಕುಮಾರಿಲಭಟ್ಟನು ಗುಜರಾಥಿ ಮತ್ತು ಮರಾಠಿಗಳನ್ನು ಕನ್ನಡ, ತಮಿಳು, ತೆಲುಗುಗಳ ಜೊತೆಗೆ "ಪಂಚದ್ರಾವಿಡ"ದಲ್ಲಿ ಸೇರಿಸಿದ್ದಾನೆ. ಇದರ ಕಾರಣ ಬಹುಶಃ ಭಾಷಾ-ವಿಷಯಕವೇ ಇರಬೇಕು.

ಇದರಂತೆಯೇ, ಕನ್ನಡದ ಉತ್ತರ-ಮೇರೆಯಾಗಿರಬಹುದಾದ ಕೊಂಕಣಪಟ್ಟಿಯಲ್ಲಿಯ ಆಚಾರ-ವಿಚಾರಗಳು, ದೇವತಾರಾಧನೆಗಳು—ಮೊದಲಾದುವನ್ನು ನೋಡಿದರೆ, ಕನ್ನಡನಾಡಿನ ಕುರುಬ ಒಕ್ಕಲಿಗರಲ್ಲಿ

ಇದ್ದಂತೆಯೇ ಕಾಣುತ್ತವೆ. ಈ ಕೊಂಕಣವನ್ನೇ ಹ್ಯುಯೆನ್‌ತ್ಸಾಂಗನು Kong-Kienna-Pulo ಅಂದರೆ ಕೊಂಗ ವರ್ಗದ ಕೆನ್-ಪೊಳಲು— ಕೊಂಗ+ಕೆನ್+ಪೊಳಲು=ಕೊಂಕೆನ್ ಪೊಳಲು ಎಂದು ಕರೆದುದು.

ಕನ್ನಡನಾಡಿನ ಉತ್ತರ ಮತ್ತು ಪಶ್ಚಿಮ ಮೇರೆಗಳು ಮೇಲಿನ ಪ್ರಕಾರ ಕೊಲ್ಲಾಪುರ-ಕೊಂಕಣಪಟ್ಟಿಗಳನ್ನು ದಾಟಿ ಹೋಗುತ್ತಿದ್ದರೆ, ಇಂದಿಗೆ ಮರಾಠಿ ಎಂದೆನಿಸಿಕೊಳ್ಳುವ ಪಂಢರಪುರದ ವಿಷಯವೂ ಅಷ್ಟೇ. ಪಂಢರಪುರದ ವಿಠ್ಠಲ ವಿಗ್ರಹವು ಮೊದಲು ಕನ್ನಡವಾಗಿದ್ದಿತೆಂದು ಅನೇಕ ಸಂತಮಹಾನುಭಾವರು ಸಾರಿದ್ದಾರೆ. ಈ ವಿಗ್ರಹವನ್ನು ಸಂತ ನಾಮದೇವರು 'ಕಾನಡೇ ಪರಬ್ರಹ್ಮ' ಎಂದು ಸಂಬೋಧಿಸಿದ್ದಾರೆ. ವಿಠ್ಠಲನ ಪರಮಭಕ್ತನಾದ ಪುಂಡಲೀಕನು ಕನ್ನಡಿಗನೆಂದು ಪ್ರೊ. ರಾನಡೆಯವರು ಒಪ್ಪಿರುವರು. ವಿಠ್ಠಲನ ಗುಡಿಯಲ್ಲಿ ಕನ್ನಡ ಶಿಲಾಶಾಸನವಿದೆ ಪಂಢರಪುರದ ಚೌಂಡರಸನು 'ಅಭಿನವದಶಕುಮಾರ ಚರಿತೆ'ಯನ್ನು ಬರೆದಿದ್ದಾನೆ.

ಸಂತ ಜ್ಞಾನೇಶ್ವರರು ಪಂಢರಪುರದ ವಿಠ್ಠಲನ ಮಹತಿಯನ್ನು ಹೊಗಳುವಾಗ ತಮ್ಮ ಅಭಂಗಗಳಲ್ಲಿ

—"ಕಾನಡಾ ಹೋ ವಿಠ್ಠಲು ಕರ್ನಾಟಕು,
ತ್ಯಾನೇ ಮಝು ಲಾವಿಲೇ ವೇಧಿ" –

ಎಂದು ಹೇಳುತ್ತಾರೆ. ಅನ್ಯತ್ರ ಈ ವಿಠ್ಠಲ ವಿಗ್ರಹದ ಬಗ್ಗೆ—

"ದೇವ ಕಾನಡೇ—ಭಕ್ತ ಕಾನಡೇ"

ಎಂದೂ,

"ಕಾಶೀ ಕನೋಜ-ದ್ವಾರಕೇ ಗುರ್ಜರೂ–
ಕಾನಡಾ ವಿಠ್ಠಲೂ–ಪಂಢರೀಯೇ–"

ಎಂದು ಉಲ್ಲೇಖಗಳ. ದೊರಕುತ್ತವೆ.

ಹಲವರ ಪ್ರಕಾರ ಪಂಢರಪುರದ ವಿಠ್ಠಲ ವಿಗ್ರಹವು ಮೂಲತಃ ಶಿವಲಿಂಗವಾಗಿತ್ತು. ಪಾಂಡುರಂಗ ಎಂಬುದು ಶಿವನ ಪರ್ಯಾಯ ನಾಮ. ಈ "ಶಿವಭಕ್ತರ ಪಾಂಡುರಂಗನು ಭಾಗವತರ ಸಲುವಾಗಿ ಪಾಂಡುರಂಗ ವಿಠಲ ಮತ್ತು ಪುರಂದರ ವಿಠಲನಾದನು. ವೈಷ್ಣವರ ದೆಸೆಯಿಂದ ವಿಷ್ಣುವೂ ಮತ್ತು ರಂಗನೂ ಆಗಿ, ಮಾಧ್ವರ ದೆಸೆಯಿಂದ ಕೃಷ್ಣನೂ ಆದನು." – ಇದಕ್ಕೆ ಕಾರಣವೆಂದರೆ ಹೇಮಚಂದ್ರನ ಪ್ರಕಾರ 'ಪಾಂಡುರಂಗ' ಅಂದರೆ "ಶಿವ, ರುದ್ರ".. ಆಚಾರ್ಯರೂ ಕೂಡ ತಮ್ಮ ಪಾಂಡುರಂಗಾಷ್ಟಕದಲ್ಲಿ "ಪರಬ್ರಹ್ಮಲಿಂಗಂ ಭಜೇ ಪಾಂಡುರಂಗಮ್" ಎಂದು ಹೇಳಿದ್ದಾರೆ.... ಮೂಲತಃ ಶಿವಸ್ಥಾನವಿದ್ದುದರಿಂದಲೇ ಪಂಢರಪುರಕ್ಕೆ "ಪಾಂಡುರಂಗಪುರ"ವೆಂದು ಹೆಸರು ಬಂದಿತೆಂದು ಡಾ. ಭಂಡಾರಕರ ಅವರ ಅಭಿಪ್ರಾಯ.... ಸಾತಾರಾ ಜಿಲ್ಹೆಯ ಚಿಕುರ್ಡೆ ಎಂಬ ಗ್ರಾಮದಲ್ಲಿರುವ ಪಾಂಡುರಂಗ ಎಂಬ ದೇವಾಲಯವು ಇಂದಿಗೂ ಶಿವಸ್ಥಾನವಾಗಿದೆ. ಇದರ ಪೂಜಾರಿಗಳು ಕುರುಬರು.... ಸದ್ಯದ ಪಾಂಡುರಂಗನ ಅನುಯಾಯಿಗಳಾದ ವಾರಕರಿಗಳು ತುಲಸೀಮಾಲೆಯನ್ನು ಪಡೆಯುವ ಅವಸೇ ಮಹಾರಾಜರ ಮನೆತನದವರು "ಶುದ್ಧ ಸಂಪ್ರದಾಯದ ಲಿಂಗಾಯತರಿರುವರು." ಈಗ್ಯೂ ಪಂಢರಪುರದ ವಿಗ್ರಹವು ಲಿಂಗಮುದ್ರಾಂಕಿತವಾಗಿದೆ....* ಇತ್ಯಾದಿ.

ಇಂದಿನ ಮಹಾರಾಷ್ಟ್ರದಲ್ಲಿ ಸುಪ್ರಸಿದ್ಧ ವಿಗ್ರಹವಾದ 'ಜೆಜೂರಿ ಖಂಡೋಬ'ನು ವಿದಿತನಷ್ಟೆ. ಇಲ್ಲಿಯೂ ನಾವು ಹೇರಳವಾದ ಕನ್ನಡ ಸಾಮೀಪ್ಯವನ್ನು ಕಾಣಬಹುದು. ಈ 'ಖಂಡೋಬ' ಶಬ್ದವು

* ಇ. ಶ ಸಂ ೧೮; ಪು ೮೨

'ಖಂಡ ಪರಶು'ವಿನ ತದ್ಭವ. ಈ ವಿಗ್ರಹ ಮಲ್ಲಾರಿಯದು. ಇಲ್ಲಿಯ ಅರ್ಚಕರು ಈ ವಿಗ್ರಹಕ್ಕೆ ಆರತಿಯನ್ನು ಎತ್ತುವಾಗ ಹೇಳುವ 'ಉಧೋ'—ವಾಕ್ಯವು ಶುದ್ಧ ಕನ್ನಡ. ಈ ಅರ್ಚಕರು ಆರತಿ ಎತ್ತುವಾಗ ಹೇಳುವ ವಾಕ್ಯವೆಂದರೆ 'ಏಳ್ಕೋಟ್ ಮಲ್ಲಾರ್ ಏಳ್ಕೋಟ್ ಮಲ್ಲಾರ್' ಇತ್ಯಾದಿ. ಇಲ್ಲಿಯ 'ಏಳ್ಕೋಟ' ಶಬ್ದ ಕನ್ನಡ 'ಏಳು ಕೋಟಿ'. ಈ 'ಏಳು ಕೋಟಿ' ಮಲ್ಲಾರಿದೇವರ ಹೆಮ್ಮೆ; ಬಿರುದು ಈ 'ಏಳುಕೋಟಿ' ಸೈನ್ಯವನ್ನು ತೆಗೆದುಕೊಂಡೇ ಮಲ್ಲಾರಿದೇವರು ಮಣಿಮಲ್ಲ ದೈತ್ಯನನ್ನು ಸಂಹರಿಸಿದರೆಂದು 'ಮಲ್ಲಾರಿ ಮಹಾತ್ಮೆ'ಯಲ್ಲಿ ಹೇಳಿದೆ. ಈ 'ಜೆಜೂರಿ ಖಂಡೋಬ'ನಲ್ಲಿಯ ಅರ್ಚನೆಯ ವಿಧಾನಕ್ಕೂ ಮತ್ತು ದೇವರಗುಡ್ಡದ ದೇವತೆಗೂ ತುಂಬಾ ಸಾಮ್ಯವಿದೆಯೆಂದು ಶ್ರೀ. ನಾ. ಶ್ರೀ ರಾಜಪುರೋಹಿತ ಅವರ ಮತ. ದೇವರಗುಡ್ಡದಲ್ಲಿರುವ 'ವಗ್ಗ' ಅಲ್ಲಿ ಅರ್ಥವಾಗದ ಮೂಲಕ 'ವಾಘ್ಯಾ' ಆದನು. ಜೆಜೂರಿಯಲ್ಲಿಯ 'ಹೇಗಡೆ' ಅಥವಾ 'ಹೇಗಪಾ'—ಇದು ಕನ್ನಡ 'ಹೆಗ್ಗಡೆ–ಪ್ರಧಾನ'ದ ಪ್ರತಿರೂಪ. ಈ ರೀತಿ, ದೇವರಗುಡ್ಡ ಮತ್ತು ಜೆಜೂರಿಯಲ್ಲಿ ಕಂಡುಬರುವ ಸಾಮ್ಯಗಳ ಮೂಲಕ ಜಾನಾಂಗಿಕ ಪೂರ್ವ-ಸಂಬಂಧವನ್ನೂ, ಆಚಾರ-ಸಂಪ್ರದಾಯಗಳ ಹರಿದಾಟವನ್ನೂ ಕಾಣಬಹುದಾಗಿದೆ.

ಮಹಾರಾಷ್ಟ್ರದಲ್ಲಿರುವ ಹಳೆಯ ಭವ್ಯ ಕಟ್ಟಡಗಳನ್ನು 'ಹೇಮಾಡಪಂತಿ' ಎಂದು ಕರೆಯುವದುಂಟು. ನಿಜವಾಗಿ, ಈ ದೇವಾಲಯಗಳಿಗೂ ಹೇಮಾಡಪಂತನಿಗೂ ಯಾವ ಸಂಬಂಧವೂ ಇಲ್ಲ. ಈ ದೇವಾಲಯಗಳೆಲ್ಲ ಕ್ರಿ. ಶ. ೧೧ರಲ್ಲಿ ಸುಪ್ರಸಿದ್ಧ ಶಿಲ್ಪಜ್ಞರಾದ ಜಕ್ಕಣಾಚಾರ್ಯರಿಂದ ಕಟ್ಟಲ್ಪಟ್ಟವು. ಜಕ್ಕಣಾಚಾರ್ಯರಿಗೆ ಇಳಿವಯಸ್ಸಿನಲ್ಲಿ ಮಗನಾದಾಗ, ಅವನ ಕುಂಡಲಿಯನ್ನು ನೋಡುವ ಪ್ರಸ್ತಾಪದಲ್ಲಿ, ಗಣಿತದ ತಪ್ಪಿನ ಮೂಲಕ ಮಗನು ವ್ಯಭಿಚಾರಸಂಭೂತನೆಂದು ಕಂಡ ಜಕ್ಕಣಾಚಾರ್ಯರು ದೇಶವನ್ನೆಲ್ಲ ತಿರುಗಾಡಿ ಈ ದೇವಾಲಯಗಳನ್ನು ಕಟ್ಟಿದರು. ಅವರಿಗೆ ಚಲುಕ್ಯ, ರಾಷ್ಟ್ರಕೂಟ, ಯಾದವ, ಶಿಲಾಹಾರರು ಆಶ್ರಯವನ್ನಿತ್ತರು. ಈ ಕಟ್ಟಡಗಳ ಶಿಲ್ಪವು ಶುದ್ಧ ಕನ್ನಡ

ವರಹಟದಲ್ಲಿ (ವರ್ಹಾಡ) 'ಹಳಬ' ಇಂದಿಗೂ ಹಳ್ಳಿಯ ಸೇವಕ. ರಸೆಲ್ ಅವರ ಪ್ರಕಾರ—"A village watchman; oldest resident in the country". ಈ 'ಹಳಬ' ನಮ್ಮಿಂದ ದೂರವಾದ ಶಬ್ದವೇ?.... ಇದರಂತೆ, ಮಹಾರಾಷ್ಟ್ರದಲ್ಲಿ 'ಕುರಬ'ರೂ 'ಒಕ್ಕಲಿಗ'ರೂ—ಇದ್ದಾರೆ. ರಸೆಲ್ ಅವರು ಹೇಳುವ ಪ್ರಕಾರ 'ಒಕ್ಕಲಿಗ'ರೆಂದರೆ "Canarese caste of cultivators of which a few representatives were returned from Nagpur."

ಬಿಹಾರ, ಓರಿಸಾ, ಛೋಟಾನಾಗಪುರಗಳಲ್ಲಿಯ 'ಕುರ್ಖ' ಅಥವಾ 'ಓರಾಓನ್'ರೂ ರಸೆಲ್ಲರ ಪ್ರಕಾರ ಕನ್ನಡರೇ, "have come from Carnatic" ಡಾ. ಗ್ರಿಯರ್ಸನ್ನರೂ ಇವರು ಕನ್ನಡರೆಂದು ಹೇಳಿ ಇವರ ಒಟ್ಟು ಜನಸಂಖ್ಯೆಯು ಐದುಲಕ್ಷವಾಗುತ್ತದೆಂದು ಹೇಳುತ್ತಾರೆ. ಇದರಂತೆ, ಮರಾಠಿಯಲ್ಲಂತೂ, "ಕುಣಬಿ ಮಾಜೂನ್ (ಬಲಿತು, ಮರಾಠಾ ಹೋತೊ" ಎಂದು ಗಾದೆಯಿದೆ. * ಈ 'ಕುಣಬಿ' 'ಕುಟುಂಬಿ' ಗಳು ಕನ್ನಡರು.

ಆದ್ದರಿಂದ, ಮರಾಠಿ ಕೋಶದಲ್ಲಿ ಕಂಡುಬರುವ ಕನ್ನಡ ಶಬ್ದಗಳ ಬಗ್ಗೆ ಬರೆಯುವಾಗ ಶ್ರೀ. ಕೃ. ಪಾ. ಕುಲಕರ್ಣಿ ಅವರು ಹೇಳಿದ ಈ ಕೆಳಗಿನ ಕಾರಣಗಳಲ್ಲದೆ, ಇದಕ್ಕೂ ಪುರಾತನವಾದ ಸಂಬಂಧಗಳು

---

* ಶ. ನೆ.

ಉಂಟೆಂಬುದನ್ನು ನಾವು ಈ ಮೇಲಿನ ವಿವರಣೆಯಲ್ಲಿ ನೋಡುತ್ತೇವೆ. ಶ್ರೀ. ಕೃ. ಪಾ ಕುಲಕರ್ಣಿಯವರ ಪ್ರಕಾರ ಮರಾಠಿಯಲ್ಲಿ ಕನ್ನಡ ಶಬ್ದಗಳು ಸೇರಿದ್ದರ ಕಾರಣವೆಂದರೆ:--

(i) ಬಹಮನಿ ರಾಜ್ಯವು ಒಡೆದು ಬೇರೆ ಬೇರೆಯಾದಾಗ ಕನ್ನಡ ಮತ್ತು ಮರಾಠಿ ಭಾಷೆಗಳನ್ನಾಡುತ್ತಿದ್ದ ಜನ ಕೂಡಿ ಬಂದದ್ದರಿಂದ ಪರಸ್ಪರ ಪರಿಣಾಮವಾಯಿತು.

(ii) ಶಹಾಜಿ ಮಹಾರಾಜನು ದಕ್ಷಿಣ ದಿಗ್ವಿಜಯ ಮಾಡಿ, ತಂಜಾವರದ ಪಾಳೆಗಾರರಿಂದ ಜಹಗೀರುಗಳನ್ನು ಸಂಪಾದಿಸಿದ್ದರ ಮೂಲಕ, ಅನೇಕ ಮರಾಠಿ ಮಾತನ್ನಾಡುವ ಕುಟುಂಬಗಳಿಗೆ ಕನ್ನಡ ಸಂಪರ್ಕವು ಪ್ರಾರಂಭವಾಯಿತು. ಇತ್ಯಾದಿ

ಆದರೆ. ಮೇಲಿನ ವಿವರಣೆಯಲ್ಲಿ ನಾವು ನೋಡಿದ ಪ್ರಕಾರ, ಬುಡಕಟ್ಟಿನ ಜನರಲ್ಲಿ ಕಂಡುಬರುವ ಆಚಾರ-ವಿಚಾರಗಳ ಸಾಮ್ಯತೆಯ ಮೂಲಕ ಒಂದು ಕಾಲಕ್ಕೆ ಕನ್ನಡ ಜನವೇ ಈಗಿನ ಮಹಾರಾಷ್ಟ್ರದಲ್ಲಿ ವಾಸಿಸುತ್ತಿದ್ದರೆಂದು ಹೇಳಬಹುದಾಗಿದೆ. ಅಂತಲೇ, ಕೊಂಕಣದ ಅಶಿಕ್ಷಿತರಲ್ಲೂ ' ಮೀ ಜಾತೋ ' ರೀತಿಯ ಪ್ರಯೋಗಗಳನ್ನು ನಾವು ಕಾಣುತ್ತೇವೆ. ಡಾ. ಸ್ಟೆನ್ ಕೊನೊ ಅವರು ಹೇಳುವ " The substratum over which Gujarathi and Marathi have spread was Dravidian "—ಎನ್ನುವ ಮಾತಿನ ಅರ್ಥವೂ ಇದೇ. ಈ ಮುಂದಿನ ಇತಿಹಾಸದ ಬಗ್ಗೆಯೂ ಪ್ರೊ. ಕೃ. ಪಾ. ಕುಲಕರ್ಣಿ ಅವರು ಬರೆಯುವುದೇನೆಂದರೆ:—

"The people in Maharashtra — many of them especially have come up in Maharashtra from the South. The Deshastha Brahmins are especially a class that has come from the South and colonised here... Not only linguistically but even ethnologically and culturally, the people of Maharashtra appear to be nearer to Kanarese people than Gujarathis."

ಅನಂತರ, ಇತಿಹಾಸ ಕಾಲದಲ್ಲಂತೂ, ಅನೇಕ ಕನ್ನಡ ರಾಜಮನೆತನಗಳು ಇಂದಿನ ಮಹಾರಾಷ್ಟ್ರವನ್ನಾಳಿದವು—ಶಾತವಾಹನರು, ಚಲುಕ್ಯರು, ರಾಷ್ಟ್ರಕೂಟರು ಇತ್ಯಾದಿ. ಸುಪ್ರಸಿದ್ಧ ಕವಿಯೂ, ಪ್ರಭಾವಶಾಲಿಯಾದ ನೃಪತಿಯೂ ಆಗಿದ್ದ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನು ಕನ್ನಡ ಸೀಮೆಗಳನ್ನು ವರ್ಣಿಸುವಾಗ್ಗೆ—

"ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಮ್;
ವಸುಧಾವಲಯವಿಲೀನ ವಿಶದ ವಿಷಯ ವಿಶೇಷಮ್ "

ಎಂದು ಹೇಳುತ್ತಾನೆ. ಈ ಹೇಳಿಕೆಯ ಮೂಲಕವೂ ಮತ್ತು ಮೇಲೆ ನಾವು ವಿವರಿಸಿದ ಕಾರಣಗಳ ಮೂಲಕವೂ ಕ್ರಿ. ಶ. ೯ನೆಯ ಶತಮಾನದಲ್ಲಿ ಕನ್ನಡ ಭಾಷೆಯನ್ನಾಡುವ ಜನರು ದಕ್ಷಿಣದ ಕಾವೇರಿಯಿಂದ ಉತ್ತರದ ಗೋದಾವರಿಯ ವರೆಗಾದರೂ ವ್ಯಾಪಿಸಿದ್ದರೆಂಬುದನ್ನು ಕಾಣಬಹುದು. ಹೀಗಾಗಿ, ಕ್ರಿ. ಶ. ೯ನೆಯ ಶ. ದಲ್ಲಿ ಕನ್ನಡದ ತೀರ ಉತ್ತರ ಮೇರೆ ಗೋದಾವರಿಯಾಗಿದ್ದಿತು.

ಕ್ರಿ. ಶ. ೧೫೨೫ರಲ್ಲಿ ಆಗಿಹೋದ "ಕುಮಾರ ರಾಮನ ಕಥೆ" ಎಂಬ ಗ್ರಂಥದ ಕರ್ತೃವಾದ ನಂಜುಂಡ ಕವಿಯು ಕೂಡ ತನ್ನ ಕಾಲದ ಕನ್ನಡನಾಡಿನ ಎಲ್ಲೆಗಳನ್ನು ವಿವರಿಸುವಾಗ ಹೆಚ್ಚು ಕಡಿಮೆ ನೃಪತುಂಗನನ್ನೇ ಅನುಸರಿಸಿದ್ದಾನೆಂದು ಹೇಳಬಹುದು:—

ಕಾವೇರಿಯಿಂದಮ್ ಗೋದಾವರಿವರೆಗಮ್ ಇರ್ದ ಆ ವಸುಧಾತಳವಳಸು ।
ಭಾವಿಸೆ ಕರ್ಣಾಟಕ ಜನಪದವವನಾವನೊಲಿದು ಬಣ್ಣಿಸುವನು –
ನಡೆವಂಚೆ, ನುಡಿವರಗಿಳಿ, ನಲಿದಾಡುವ ಜೆಡಗಿನ ನವಿಲು
ಕೂಡಿಡುವ ಪಡಿಯಜವಕ್ಕಿ ಮೊರೆವ ಪಜಮೆಗಳೆರ್ದೆಗೆಡಿಪುವು ಪಥಿಕರನಲ್ಲಿ ॥

ಅಂತಲೇ, ಈ ಭಾಗದಲ್ಲಿ ಕ್ರಿ. ಶ ೧೬ರ ವರೆಗೆ ಅನೇಕ ಸುಪ್ರಸಿದ್ಧ ಕನ್ನಡ ಕವಿಗಳೂ ಲಾವಣಿಕಾರರೂ ಆಗಿ ಹೋದರು. ತಮ್ಮ ಅಮೋಘವಾದ ಕೀರ್ತನೆಗಳ ಮೂಲಕ ಕನ್ನಡನಾತನ್ನೇ ಹೊಡೆವೆಬ್ಬಿಸಿದ ಪುರಂದರದಾಸರು ಪುಣೆಯ ಹತ್ತಿರದ ಪುರಂದರಗಡದವರು. ಸಿದ್ಧರಾಮನು 'ಸೊನ್ನಲಿಗೆ'ಯವ; ೧೫ನೆಯ ಶತಮಾನದ 'ಅಭಿನವ ದಶಕುಮಾರ ಚರಿತದ' ಚೌಂಡರಸ ಪಂಢರಿಗೆಯವ; ಇವೇ ಶತಮಾನಕ್ಕೇ ಸೇರಿದ (ಕ್ರಿ. ಶ. ೧೫೫೦) ಸಾಳ್ವಭಾರತ, ಸಾಳ್ವಸಾಂಗತ್ಯ, ಮತ್ತು ರಸರತ್ನಾಕರಗಳನ್ನು ಬರೆದ ಸಾಳ್ವಕವಿ ಕೊಂಕಣಪ್ರಾಂತದ 'ನಗಿರೆ' ಎಂಬ ಊರವ. ಈ 'ನಗಿರೆ' ಗ್ರಾಮವು ಈಗಿನ ಚಿಪಳೂಣ ತಾಲೂಕದಲ್ಲಿದೆ.

ಮಹಾರಾಷ್ಟ್ರದ ಅನೇಕ ಮಹಾನುಭಾವಿಗಳಲ್ಲಿ ಸುಪ್ರಸಿದ್ಧ ವೀರಶೈವ ಕ್ರಾಂತಿಕಾರರಾದ ಬಸವಣ್ಣನವರ ಪ್ರಭಾವವನ್ನು ಕೂಡ ಕಾಣಬಹುದೆಂದೂ, ಮತ್ತು ಮಹಾನುಭಾವ ತುಕಾರಾಮನು ಬಸವಣ್ಣನವರನ್ನು ತನ್ನ ಗುರುವೆಂದು ಭಾವಿಸಿದ್ದನೆಂದೂ ಹಲವು ಪಂಡಿತರ ಅಭಿಪ್ರಾಯ. * ತುಕಾರಾಮನು ಹೇಳಿದ "ಸಾಂಡಿಯಾ ವಿಷಯಾಚಿ ಥಾಯೀರೆ—ಏಕೇಚಿಖೇಳೆ 'ಬಸವಂತ' ಹೋಸಿ" —ಎಂಬಲ್ಲಿಯ 'ಬಸವಂತ' ಪದವು ಬಸವಣ್ಣನವರನ್ನೇ ಸೂಚಿಸುತ್ತದೆಂದು ಇವರ ಅಭಿಪ್ರಾಯ. "ಈ ಸಂತ ಜನರಿಗೆ ಬಸವಣ್ಣನವರು ಆದರ್ಶಭೂತವಾದ ಉಪಾಸ್ಯದೈವತವಾಗಿದ್ದ"ರೆಂದು ಮಹಾರಾಷ್ಟ್ರದ ಪ್ರಸಿದ್ಧ ಲೇಖಕರಾದ ಶ್ರೀ. ಲಕ್ಷ್ಮಣ ರಾಮಚಂದ್ರ ಪಾಂಗಾರಕರ ಅವರೂ ಒಪ್ಪುತ್ತಾರೆ. ಸಂತ ತುಕಾರಾಮರ "ಖೇಳ ಖೇಳೋನಿಯಾ ನಿರಾಳೆ" —ಎಂಬ ಅಭಂಗದಲ್ಲಿ ಈ ಪ್ರಪಂಚದ ಜಂಜಡದಲ್ಲಿ ಸಿಗದ ನಾಲ್ವರು ಪ್ರಮುಖ ಆಟಗಾರರ ವರ್ಣನೆಯಿರುತ್ತದಷ್ಟೇ! ಈ ನಾಲ್ವರು ಪ್ರಮುಖ ಆಟಗಾರರೆಂದರೆ – ಶ್ರೀ. ಜ್ಞಾನದೇವ, ಶ್ರೀ ನಾಮದೇವ, ಕಬೀರ ಮತ್ತು ಏಕನಾಥರು. ಇದೊಂದು ಕೋಲಾಟ. ಇದರಲ್ಲಿ ಬರುವ ಹಲವು ಮಾತುಗಳನ್ನು ನೋಡಿರಿ–

" ರಾಮಾ **ಬಸವಂತ** ಕಬೀರ ಖೇಳಿಯಾ ಜೋಡಾಬರವಾ "—
ಅಥವಾ " ಬ್ರಾಹ್ಮಣಾಚಿ ಪೋರ ಏಕಖೇಳಿಯಾ....ಜನಾರ್ದನ **ಬಸವಂತ** ಕರೂನಿಯಾ "
ಇಲ್ಲವೆ " ಖೇಳತಾ ಖೇಳತಾ ಆಪಣಚಿ **ಬಸವಂತ** ಝಾಲಾರೆ " -

ಇತ್ಯಾದಿಗಳಲ್ಲೆಲ್ಲ ಕಂಡುಬರುವ "ಬಸವಂತ" ಪದವು ಕನ್ನಡ ಬಸವಣ್ಣನವರನ್ನೇ ಸೂಚಿಸುತ್ತದೆಂದು ಈ ಪಂಡಿತರ ಅಭಿಪ್ರಾಯ.

ದುರ್ಗಾದೇವತೆಯ ದುಷ್ಕಾಳದ ನಂತರ ಪಾಟೀಲ ರಾಮಣ್ಣಾ ಬಿನ್ ತಿಮ್ಮಣ್ಣಾ ಗವಳೀ ಎನ್ನುವ ಕನ್ನಡ ಮನುಷ್ಯನು ಹೊಸ ಮಹಾರಾಷ್ಟ್ರದ ಲಾವಣಿಯನ್ನು ವಸೂಲ ಮಾಡುತ್ತಿದ್ದನಂತೆ.

ಈ ರೀತಿ, ಪ್ರಾಚೀನ ಕರ್ನಾಟಕವು ಎಷ್ಟು ವಿಶಾಲವಾಗಿದ್ದಿತೆಂಬುದನ್ನೂ ಮತ್ತು ಅದು ಮೂಲತಃ ಇಂದಿನ ಮರಾಠಿಯ ತಳಹದಿ ಯಾವ ರೀತಿ ಆಗಿದೆಯೆಂಬುದನ್ನೂ ಈ ವರೆಗೆ ನೋಡಿದೆವು.

* ಮ. ಶ. Vol. VIII P. 376.

ಹಾಗಾದರೆ, ಈ ಕರ್ನಾಟಕದ ವಿಸ್ತಾರವು ಕುಗ್ಗುತ್ತ ನಡೆದುದು ಎಂತು?—ಅದು ಇಂದಿನ ಸ್ಥಿತಿಯನ್ನು ಪಡೆಯಬೇಕಾದರೆ ಎಷ್ಟು ಕಾಲ ಹಿಡಿಯಿತೆಂಬುದನ್ನು ನೋಡೋಣ -

ಈ ಬಗ್ಗೆ ಮರಾಠಿ ಸಾಹಿತ್ಯ ಮತ್ತು ಶಾಸನಗಳು ತುಂಬಾ ಉಪಯುಕ್ತವಾಗಿವೆ. ನೃಪತುಂಗನೇನೋ ೯ನೆಯ ಶತಮಾನದಲ್ಲಿದ್ದ ಕನ್ನಡದ ಸೀಮೆಗಳನ್ನು— "ಕಾವೇರಿಯಿಂದೆ ಆ ಗೋದಾವರಿವರಮಿರ್ದ ನಾಡು" ಎಂದು ಹೇಳಿದನು. ಅನಂತರ, ಈ ಕರ್ನಾಟಕದ ಸೀಮೆಯ ಉಲ್ಲೇಖಗಳು ದೊರಕುತ್ತಿದ್ದುದು ಅನೇಕ ಮಹಾನುಭಾವರಲ್ಲಿ. ಮಾನ್ಯ ಪಂಡಿತರಾದ ಶ್ರೀ. ಶಂ. ಬಾ. ಜೋಶಿಯವರು ಹಿಮ್ಮೆಟ್ಟುತ್ತಿರುವ ಕರ್ನಾಟಕದ ಸೀಮೆಯನ್ನು ಬಹು ಸುಂದರವಾಗಿ ಚಿತ್ರಿಸಿದ್ದಾರೆ. ಅವರ ಅಭಿಪ್ರಾಯವನ್ನು ಈ ರೀತಿ ಶೇಖರಿಸಬಹುದು: —

೯ನೆಯ ಶತಮಾನದ ನೃಪತುಂಗನ ಕಾಲಕ್ಕೆ ಕನ್ನಡದ ಉತ್ತರದ ಮೇರೆ ಗೋದಾವರಿಯ ವರೆಗೆ ಇದ್ದಿತು. ಮಹಾರಾಷ್ಟ್ರದ ಮಹಾನುಭಾವ ಪಂಥದ "ಲೀಲಾ ಚರಿತ್ರ"ವೂ (ಕಾಲ ಕ್ರಿ. ಶ ೧೧೯೦) ಇದೇ ಮಾತನ್ನೇ ಸಮರ್ಥಿಸುತ್ತದೆ. ಅದರ ಪ್ರಕಾರ ಮಹಾರಾಷ್ಟ್ರದ ವರ್ಣನೆಯೊಂದರೆ—"ಸಾಠಿ ಲಕ್ಷ ದೇಶ ಮಹಾರಾಷ್ಟ್ರ ತೇ ಥಿಜೆ ಶಿಹಾಣೆ—ಸುಭಟೂ ವೇದಶಾಸ್ತ್ರ ಚಾತುರ್ಯಾಚೀ ಪೇಟೂ - ಭರೈಲೀ ತಿಯೇ ದೇಶೀ—ಐಸೇತೇ ಮಹಾರಾಷ್ಟ್ರ ರಾಯೆ ಸುಂದರೂ—ನಾ ಮಹಾರಾಷ್ಟ್ರ ಭಾಷಾ **ಚತುರೂ ತೇಹಿ: ವಸವಿಲೇ ಗಂಗಾತೀರೂ—ಕ್ಷೇತ್ರ ತ್ರ್ಯಂಬಕೂ ವೇಹ್ರೀ— ಪಶ್ಚಿಮೇ ತ್ರ್ಯಂಬಕ ಪೂರ್ವೇಸಾಗರ ವೇಹ್ರಿ,** " ಆದ್ದರಿಂದ ಇದರ ಪ್ರಕಾರ ಮಹಾರಾಷ್ಟ್ರದ ಪಶ್ಚಿಮಕ್ಕೆ ಗೋದಾವರಿ ತೀರದ-ತ್ರ್ಯಂಬಕ-ನಾಸಿಕ ಮೇರೆಯಾಗಿದ್ದಿತು. ಅರ್ಥಾತ್, ಕನ್ನಡದ ಉತ್ತರ ಮೇರೆ ೧೧೯೦ರಲ್ಲಿ ಅಲ್ಲಿಯ ವರೆಗೆ ಇದ್ದಿತೆಂದು ಹೇಳಬಹುದು. ಆದ್ದರಿಂದ ೯ರಲ್ಲಿ ಗೋದಾವರಿ; ೧೨ರಲ್ಲಿ ಇನ್ನೂ ಗೋದಾವರಿ 'ಕಾನಡಾ ಹೋ ವಿಠ್ಠಲು ಕರ್ನಾಟಕು' ಎಂದು ಹೇಳಿದ ಸಂತ ಜ್ಞಾನೇಶ್ವರರು (ಕ್ರಿ. ಶ. ೧೨೯೦) ತಮ್ಮ ಅಭಂಗಗಳಲ್ಲಿ

"ಐಸೇ ಯುಗೀ ಪರಿಕಳಿ–ಆಣಿ ಮಹಾರಾಷ್ಟ್ರ ಮಂಡಳಿ
ಶ್ರೀ ಗೋದಾವರೀಚ್ಯಾ ಕೂಲಿಂ - ದಕ್ಷಿಣಲಿಂ"—

ಅಂದರೆ, ಈಗ ಕ್ರಿ. ಶ. ೧೨೯೦ರಲ್ಲಿ ಮಹಾರಾಷ್ಟ್ರವು ನಿಧಾನವಾಗಿ ಗೋದಾವರಿಯಿಂದ ದಕ್ಷಿಣಕ್ಕೆ ಕಾಲು ಚಾಚುತ್ತಿದ್ದುದನ್ನು ಕಾಣುತ್ತೇವೆ ಸುಮಾರು, ಇದೇ ಕಾಲಕ್ಕೇ ಸೊನ್ನಲಿಗೆಯಲ್ಲಿ ಸಿದ್ಧರಾಮನೂ (೧೧೬೦), ಪಂಢರಿಗೆಯಲ್ಲಿ ಚೌಂಡರಸನೂ (ಕ್ರಿ. ಶ. ೧೩೦೦), ಆಗಿಹೋದರು. ಆದ್ದರಿಂದ, ಕ್ರಿ. ಶ. ೧೩ರಲ್ಲಿ ಕನ್ನಡವು ತನ್ನ ಉತ್ತರ ಮೇರೆಯಾದ ಗೋದಾವರಿಯನ್ನು ಕಳೆದುಕೊಂಡು ಭೀಮಾನದಿಗೆ ಬರುತ್ತಿರುವುದನ್ನು ಕಾಣುತ್ತೇವೆ. ಅನಂತರ, ಕ್ರಿ. ಶ. ೧೬ರಲ್ಲಿ ದೊರೆತ "ಅರ್ಕಾಡು ಸಂಸ್ಥಾನದ ಕೈಫಿಯತ್ತಿನ" ಪ್ರಕಾರ ಕನ್ನಡಕ್ಕೆ ಈ ಭೀಮೆಯ ಪುಣ್ಯವೂ ಹೋಗಿ, ಕೃಷ್ಣೆಯ ಕೆಳಗಿಳಿಯಿತು. ಯಾಕಂದರೆ, ಈ ಕೈಫಿಯತ್ತಿನಲ್ಲಿ, "ಪೆನುಗೊಂಡೆ ಕರ್ಣಾಟರಾಜ್ಯ; **ವಿಜಾಪುರ ಮಹಾರಾಷ್ಟ್ರ ರಾಜ್ಯ**" ಎಂದು ಬರುತ್ತದೆ. ಅಂದರೆ, ಕನ್ನಡದ ಉತ್ತರದ ಸೀಮೆ ತುಂಗಭದ್ರೆಯ ವರೆಗೂ ಹಿಮ್ಮೆಟ್ಟಿತು. ಈ ರೀತಿ ವಿಜಾಪುರವು 'ಮಹಾರಾಷ್ಟ್ರ'ವಾಗುವದಕ್ಕೆ ಕಾರಣವಾದರೂ ಏನು? ಶ್ರೀ. ಪಾಂಗಾರಕರ್ ಅವರು ಹೇಳುವಂತೆ—ಕ್ರಿ. ಶ. ೧೫ರಲ್ಲಿ 'ಕನ್ನಡ ಜಾಣ' ಆದಿಲ್‌ಶಹನು ಮುಕುಂದರಾಯನೆಂಬ ತನ್ನ ಮಹಾರಾಷ್ಟ್ರ ಸರದಾರನ ತಂಗಿಯನ್ನು ತನ್ನ ಬಂಗಾರದವಳನ್ನಾಗಿ ನೇಮಕ ಮಾಡಿಕೊಂಡಂದಿನಿಂದ, ವಿಜಯಪುರ ದರಬಾರಿನಲ್ಲಿ ಮರಾಠಿ ವರ್ಚಸ್ಸು ಹೆಚ್ಚಾಯಿತು. ಹೀಗಾಗಿ, ವಿಜಾಪುರವು 'ಮಹಾರಾಷ್ಟ್ರ'ವಾಯಿತು. ಯಾವುದೇ ಅಂಕಿಯನ್ನು ಸೊನ್ನೆಯಿಂದ ಗುಣಿಸಿದರೆ, ಸೊನ್ನೆಯೇ ಉತ್ತರ ಬರುವಂತೆ, ಕನ್ನಡ ಪ್ರಪಂಚದಲ್ಲಿ

ಎಲ್ಲಿಯಾದರೂ ಮರಾಠಿ ಸೇರಿದರೆ, ಇಂದಿಗೂ ಪ್ರಜೆ ಮರಾಠಿಯೇ ಆಗುತ್ತಿದೆ. ಯಾವದೇ ಸಂಸಾರದಲ್ಲಿ ಗಂಡನು ಮರಾಠಿಯಾದರಂತೂ ಸರಿಯೆ; ಇಡೀ ಕುಟುಂಬವೇ ಮರಾಠಿಯಾಗತಕ್ಕದ್ದು. ತದ್ವಿರುದ್ಧ ಹೆಂಡತಿ ಮರಾಠಿಯಾದರೂ ಸಾಕು; ಗಂಡ ಹೋಗಲಿ; ಮಕ್ಕಳಾದರೂ ಮರಾಠಿಗೆ ಸೇರುತ್ತವೆ. ಈ ಮರಾಠಿಯ ಪ್ರಭಾವವನ್ನು ಶ್ರೀ. ಶಂ. ಬಾ ಜೋಶಿ ಅವರು ತೀರ ಸುಂದರವಾಗಿ ವರ್ಣಿಸಿದ್ದಾರೆ: - " ಮನುಷ್ಯನ ನೆರಳು ಅವನು ನಿಂತಲ್ಲಿಂದ ದೂರದ ವರೆಗೆ ಬೀಳುವಂತೆ. ಮರ್‍ಹಾಟರ ನೆರಳು ಅವರು ನಿಜವಾಗಿ ಇದ್ದ ಸ್ಥಳದಿಂದ ಮುಂದೆ ಎಷ್ಟೋ ಯೋಜನ ದೂರಬೀಳುತ್ತಿತ್ತು. ವರ್‍ಹಾಟದಲ್ಲಿದ್ದಾಗಲೇ ತ್ರ್ಯಂಬಕದ ವರೆಗೆ; ತ್ರ್ಯಂಬಕಕ್ಕೆ ಬರುತ್ತಲೇ ಪಂಢರಪುರದ ವರೆಗೆ; ಪಂಢರಪುರದಲ್ಲಿ ಕಾಲಿಡುತ್ತಲೇ ಕೃಷ್ಣೆಯ ವರೆಗೆ; ಕೃಷ್ಣೆಗೆ ಬಂದು ನಿಂತೊಡನೆ ತುಂಗಾ ಕಾವೇರಿಗಳ ವರೆಗೆ ಅವರ ನೆರಳು ಬಿದ್ದುದನ್ನು ನೋಡಬಹುದು."

ಕ್ರಿಸ್ತಾಬ್ದ ಪ್ರಾರಂಭದಲ್ಲಿ, ಬ್ರಾಹುಈಯಲ್ಲಿ ಬರುವ ದ್ರಾವಿಡ ಅಂಶಗಳು ಮತ್ತು ಮೊಹೆಂಜೊದಾರೊ ಹರಪ್ಪಗಳ ಉತ್ಖನನಗಳ ಮೂಲಕ ಸಿಂಧದ ವರೆಗಿದ್ದ ಕನ್ನಡದ ಉತ್ತರ ಮೇರೆ ಕ್ರಿ. ಶ. ೯ರಲ್ಲಿ ಗೋದಾ ವರಿಗೆ ಬಂದಿತು; ೧೧೯೦ ರಲ್ಲಿ ಇನ್ನೂ ಅದೇ ರೀತಿ - (ತೇ ಹಿ ವಸವಿತೇ ಗಂಗಾತೀರಾ)—೧೩೯೦ ರಲ್ಲಿ ಭೀಮಾನದಿ- " ಆಣಿ ಮಹಾರಾಷ್ಟ್ರ ಮಂಡಳಿ ಶ್ರೀ ಗೋದಾವರಿಚ್ಯಾ ಕೂಲಿಂ ದಕ್ಷಿಣಲಿಂ " ೧೪ರಲ್ಲಿ ಕೃಷ್ಣಾ—೧೫-೧೬ರಲ್ಲಿ ಅರ್ಕಾಡು ಕೈಫಿಯತ್ತಿನ ಪ್ರಕಾರ ತುಂಗಭದ್ರಾ—೧೭-೧೮ ಕಾವೇರಿ ಮಾತ್ರ— ೧೯ರಲ್ಲಿ ಸತ್ತ ಹೆಬ್ಬಾವು; ಅಸ್ತಿತ್ವಕೂಡ ಶಂಕಿತ—ಇಂದು ೨೦ರಲ್ಲಿ ಬಹುಶಃ ತನ್ನ ಕೈಕಾಲು ಕುಡು ಕೊಳ್ಳುತ್ತಿದೆ.

ಅದೇನೇ ಇರಲಿ; ಕನ್ನಡ-ನಾಡು ವಿಶಾಲವಾಗಿದ್ದಾಗ ಮಾತ್ರ ಅಧಮವಾಗಿರದೆ, ತೀರ ಪ್ರಭಾವ ಶಾಲಿಯಾಗಿದ್ದಿತೆಂಮ ಮೇಲೆಯೇ ನೋಡಿದ್ದೇವೆ. ಕ್ರಿ ಶ. ೧೬ರ ವರೆಗೆ ಅನೇಕ ಕನ್ನಡ ರಾಜಮನೆತನಗಳು ಇಂದಿನ ಮಹಾರಾಷ್ಟ್ರ ಭಾಗದಲ್ಲಿ ರಾಜ್ಯವನ್ನಾಳಿದರಲ್ಲದೆ, ಆ ಇಡೀ ಭಾಷೆಯ ಮೇಲೆಯೇ ತಮ್ಮ ಪ್ರಭಾವದ ಮುದ್ರೆಯನ್ನೊತ್ತಿದರು. ಹೀಗಾಗಿ, ಪ್ರಾಚೀನ ದ್ರಾವಿಡ ತಳಹದಿಯ ಮೇಲೆ ಕಟ್ಟಲ್ಪಟ್ಟ ಮರಾಠಿಯು ಐತಿಹಾಸಿಕ ಕಾಲದಲ್ಲಿ ಪುನಃ ಕನ್ನಡದ ಬೆಳಕನ್ನು ಕಂಡಿತು. ಅಂತಲೇ, ಶ್ರೀ. ಎಮ್. ಜಿ ರಾನಡೆ ಅವರ " The mixture of the two elements (Marathi and Dravidian) is best illustrated by the peculiarities of the Marathi language, whose base is Dravidian but whose structure has been entirely fashioned by the Aryan influence "—ಎಂದು ಹೇಳುತ್ತಾರೆ. ಶ್ರೀ. ರಾನಡೆ ಅವರು ಇಲ್ಲಿ ಹೇಳುವ ದ್ರಾವಿಡ ಪದವು ಹೆಚ್ಚು ಕಡಿಮೆ ಕನ್ನಡವೆಂದೇ ಹೇಳಬೇಕು. ಡಾ. ಪಿ. ಎಲ್. ವೈದ್ಯ ಅವರೂ ಕೂಡ ಈ ಬಗ್ಗೆ 'It is, however, likely that the Old-Maharastra might have adopted words from other Indian languages, principally from the Dravidian languages' — ಎಂದು ಹೇಳುತ್ತಾರೆ.

ಆದರೆ, ಈ ಎಲ್ಲ ಚರ್ಚೆಯಲ್ಲಿ ಸ್ಥೂಲವಾಗಿ ಕೇವಲ 'ದ್ರಾವಿಡ'ವೆಂದು ಉಪಯೋಗಿಸುವ ಪದವನ್ನು ನಾವಿಲ್ಲಿ ಹೆಚ್ಚು ನಿರ್ದಿಷ್ಟಗೊಳಿಸಬೇಕಾಗಿದೆ. ದ್ರಾವಿಡ ಪ್ರಭಾವವೆಂದರೆ ತಮಿಳೇ? ತೆಲುಗೇ? ಕನ್ನಡವೇ? — ನಾವಿಂದು ಹೆಚ್ಚು ಸ್ಪಷ್ಟಗೊಳಿಸಬೇಕು. ಹತ್ತಾರು ವರ್ಷಗಳ ಹಿಂದೇ ಪ್ರೊ. ಜೂಲ್ಸ್ ಬ್ಲಾಕ್ ಅವರು ಈ ಅಂಶವನ್ನು ಸೂಚಿಸಿದರೇನೋ ನಿಜ;—" Lastly where it becomes clear that Aryan is the

* ಮ. ಮೂ. ಪು ೪೪

borrower, it is necessary to determine from *what group of Dravidian the loan has been taken* and also to draw from it information for the history of Dravidian itself.''*

ಈ ಕೆಲಸ ಕಷ್ಟಸಾಧ್ಯವೇನೋ ನಿಜ; ಆದರೆ ತನ್ನ ನೆರೆಹೊರೆಯ ಪ್ರಾಂತಗಳ ಕೂಡ ಕನ್ನಡಕ್ಕಿರುವ ಐತಿಹಾಸಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಪರ್ಕಗಳ ಮೂಲಕವೂ ಮತ್ತು ಕನ್ನಡ ಹಾಗೂ ಇತರ ಭಾಷೆಗಳಲ್ಲಿ ಕಂಡುಬರುವ ಶಬ್ದಸಾಮ್ಯಗಳ ಮೂಲಕವೂ ಹೆಚ್ಚುಕಡಿಮೆ ನಾವು ಉಗಮವನ್ನು ಗುರುತಿಸ ಬಹುದಾಗಿದೆ. ಮಹಾರಾಷ್ಟ್ರದ ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ಪ್ರೊ ಕೃ. ಪಾ. ಕುಲಕರ್ಣಿ ಅವರು ಈ ಬಗ್ಗೆ ಬರೆಯುತ್ತಾ ತೀರ ಪ್ರಾಚೀನಕಾಲದಿಂದಲೂ ಮರಾಠಿಯ ಮೇಲೆ ಕನ್ನಡದ ಪ್ರಭಾವವು ಬಹುಮಟ್ಟಿಗೆ ಆಗಿದೆಯೆಂಬುದನ್ನು ಸಾರಿ ಹೇಳಿದ್ದಾರೆ.—

> "Marathi came in contact with the Kanarese since the time of its very birth. *Even prior to that* the contact with the Kanarese was there of whatever language there was as precurser of Marathi " †

ಯಾಕಂದರೆ, ಐತಿಹಾಸಿಕ ಕಾಲದಲ್ಲಿಯೂ ಕೂಡ, ಇಂದಿನ ಮಹಾರಾಷ್ಟ್ರದ ಪ್ರದೇಶವನ್ನು ಆಂಧ್ರರು, ಶಾತವಾಹನರು, ಚಲುಕ್ಯರು, ರಾಷ್ಟ್ರಕೂಟರು, ವಾಕಾಟಕ ಮತ್ತು ಯಾದವರು ಆಳಿದರು.

ಮರಾಠಿ ಭಾಷೆಯ ಮೇಲಾದ ಕನ್ನಡದ ಪ್ರಭಾವ

ಹಾಗಾದರೆ ಕನ್ನಡದ ಈ ಪ್ರಭಾವವು ಮರಾಠಿಯ ಮೇಲೆ ಯಾವ ರೀತಿ ಆಗಿದೆಯೆಂಬುದನ್ನು ನೋಡೋಣ:—

ಮರಾಠಿಯ ಮೇಲಾದ ಕನ್ನಡದ ಪ್ರಭಾವವನ್ನು ನಾವು ನಾಲ್ಕು ವಿಧವಾಗಿ ಕಾಣಬಹುದು. ಒಂದು: ಸಾಮಾಜಿಕ (Sociological); ಎರಡು: ಸಾಹಿತ್ಯಕ–; ಮೂರು: ವ್ಯಾಕರಣ; ನಾಲ್ಕು: ಕೋಶ.

ಸಾಮಾಜಿಕ ಪ್ರಭಾವ:—ಡಾ. ಮಿಸೆಸ್ ಇರಾವತಿ ಕರ್ವೆ ಅವರ ಪ್ರಕಾರ ಇಂದಿನ ಮರಾಠಿಯಲ್ಲಿ ಕಂಡು ಬರುವ ಎಷ್ಟೋ ಸಂಬಂಧಸೂಚಕ ಪದಗಳು ದ್ರಾವಿಡ ಇಲ್ಲವೆ ಕನ್ನಡವಾಗಿವೆ.

ಪ್ರಾಚೀನ ಮರಾಠಿಯಲ್ಲಿ ಬರುವ 'ಆಮುಲಾ'–'ಆಂಬುಲಾ' ಶಬ್ದಗಳು ಆವರ ಪ್ರಕಾರ ತಮಿಳು ಮೂಲವುಳ್ಳವು.

ಉದಾ — ಪ್ರಾಚೀನ ಮರಾಠಿ—

"ಪ್ರಕೃತಿ ಪುರುಷಾಚೀ ಕುಳವಾಡೀ–
ಸಾಂಗತಾ ಅಸಂಘಡೀ–
ಜೇ **ಆಂಬುಲೀ** ಜೋಡೀ ಆಮುರಾಖಾಯ್"—ಇತ್ಯಾದಿ.

---

* P. A. and P. D., P. 46.

† The Relationship of some Marathi and Kanarese words.

ಇದರ ಅರ್ಥವೆಂದರೆ, "ಪ್ರಕೃತಿ ಮತ್ತು ಪುರುಷರ ಕುಟುಂಬದ ಇತಿಹಾಸವು ತುಂಬಾ ದಿವ್ಯವಾದುದು. ಯಾಕಂದರೆ, ಹೆಂಡತಿಯು (ಆಂಬುಲಿ) ತನ್ನ ಗಂಡನನ್ನು (ಆಮುಲಾ) ತಿಂದಳು." ಇಲ್ಲಿಯ 'ಆಮುಲಾ' 'ಆಂಬುಲಿ' ಶಬ್ದಗಳು ಅವರ ಪ್ರಕಾರ ತಮಿಳು ಮೂಲದವು. *

ಮರಾಠಿಯಲ್ಲಿ 'ಮುಲಗಿ' ಅಂದರೆ ಹುಡುಗೆಯಷ್ಟೇ—ಈ ಪದವು ಕೂಡ ಶ್ರೀಮತಿ ಕರ್ವೆ ಅವರ ಪ್ರಕಾರ ಕನ್ನಡದಿಂದ ಮರಾಠಿಗೆ ಹೋದುದು. "Mulgi or Muli is the general term for daughter. It seems to be of Kannada origin"—

ಅದರಂತೆ 'ಅತ್ಯಾ' ಶಬ್ದ, "The terms ಅತ್ಯಾ, ಆತೆ, ಆತ.... are similar the term ಅತ್ತೆ used for aunts by the Kannada-speaking people...... It may have been of Dravidian origin"

ಪ್ರೊ. ಕೃ. ಪಾ. ಕುಲಕರ್ಣಿ ಅವರ ಪ್ರಕಾರ 'ಅಕ್ಕ' ಶಬ್ದವು ಮೂಲತಃ ಕನ್ನಡ. "The word अक्क is a Kanarese word and from it has come to Marathi." ಇದರಂತೆ, 'ಮುತ್ತಜ್ಜ' ಎಂದು ಹೇಳುವ 'ಮ್ಹಾತಾರಾ ಬಾ' ಅಥವಾ 'ಥೋರಲಾ ಬಾ' ಎಂಬ ಪದಗಳು ಕೂಡ ದ್ರಾವಿಡ ಪ್ರಭಾವದಿಂದ ಬಂದಿರಬಹುದೆಂದು ಅವರ ಅಭಿಪ್ರಾಯ.

"The Marathi usage may be due to contact with the Southerners"

ಮದುವೆಯ ವಿಷಯದಲ್ಲಿ ಸೋದರಮಾವನು ಅಕ್ಕನ ಮಗಳನ್ನು ಮದುವೆಯಾಗುವುದು ಕೂಡ ದ್ರಾವಿಡ-ಕನ್ನಡ ಪ್ರಭಾವವಿರಬೇಕೆಂದು ಮತ.

'It appears therefore, that this custom originally belonged to the South and was taken up by these people, who came most in contact with the Southern people."

ಅಷ್ಟೇ ಅಲ್ಲ; ಇಂದಿಗೂ ಶುದ್ಧ ನೂರಕ್ಕೆ ನೂರರಷ್ಟು ಮರಾಠಿಯಾಗಿದ್ದ ಪುಣೆಯ ಅನೇಕ ಸ್ತ್ರೀಯರ ಬಾಯಲ್ಲಿ ಕಂಡುಬರುತ್ತಿದ್ದ ಪದಗಳು ಶುದ್ಧ ಕನ್ನಡವಾಗಿವೆ. ಅವರು ಇಂದಿಗೂ ತಮ್ಮ ಮಕ್ಕಳನ್ನು ಆಡಿಸುತ್ತಿದ್ದಾಗ ಹಾಡುವ ಜೋಗುಳಪದಗಳು ಸಂಪೂರ್ಣ ಕನ್ನಡವೇ ಆಗಿವೆ. ಪುಣೆಯ ರಸ್ತೆಗಳಲ್ಲಿ ತಿರುಗಾಡುತ್ತಿರುವಾಗ, ತಮ್ಮಲ್ಲಿ ಅನೇಕರು ಅಲ್ಲಿಯ ಸ್ತ್ರೀಯರು ಗುಂಜರಿಸುತ್ತಿರುವ ಈ ಜೋಗುಳವನ್ನು ಕೇಳಿರಬಹುದು:

ಔಡಕ್ ಚೌಡಕ್ ದಾಮಾಡು-
    ದಾಮಾಡುಚಿ ಪಂಚಾಡು-
ಪಂಚಾಡ ಖೋಡ ಖಾಸಾ-
    ಹಿರವಾದಾಣಾ ಕಡಕುಡಿ;

* "Kinship Terminology and usage of the Maratha Country" by Dr. Mrs. Irawati Karwe—

† ಅದೇ ಪು. ೩೫೮

ರಾಜಪೋರೀ ವ್ಯಾಲೀ–
ಸೋನಪಾಣಿ ವ್ಯಾಲಿ–
    ಅನ್ಯಾಮನ್ಯಾ ರೋಜಿ ಬೈಜಾ–
    ಡಾವಾ ಉಜವಾ ಹಾತಚ ಕನ್ಯಾ-
ಔಡಕ್ ಚೌಡಕ್ ದಾಮಾಡು ‖

ಈ ಜೋಗುಳದ ಅರ್ಥವೇನು?—'ಅನ್ಯಾ' 'ಮನ್ಯಾ' 'ದಾಮಾಡು'—ಇತ್ಯಾದಿ ಅಂದರೇನು? ಶುದ್ಧ ಮರಾಠಿಗರಿಗೂ ಕೂಡ ಇದರಲ್ಲಿಯ ಎಷ್ಟೋ ಭಾಗ ಅರ್ಥವಾಗುತ್ತಿಲ್ಲ. ಹಾಗಾದರೆ, ಇದರ ಅರ್ಥವೇನು? ಶ್ರೀ. ವಿ. ಎನ್. ಛತ್ರೆ ಅವರ ಪ್ರಕಾರ ಮೇಲಿನ ಜೋಗುಳದಲ್ಲಿಯ ಎಷ್ಟೋ ಪದಗಳು ಭಾಷೆ ತಿಳಿಯದ ಲಿಪಿಕಾರರ ಹಾವಳಿ. ಅವರ ಪ್ರಕಾರ ಈ ಜೋಗುಳಕ್ಕೆ ಒಂದು ಹಿನ್ನೆಲೆಯಿದೆ. ಅದೆಂದರೆ—ಯಾವನೋ ಒಬ್ಬ ಅಣ್ಣನು ತನ್ನ ಹೊಲದ ಧಾನ್ಯದ ವ್ಯವಸ್ಥೆಯ ಬಗ್ಗೆ ಈ ಮಾತನ್ನು ಹೇಳುತ್ತಿದ್ದಾನೆ. ಆ ಮಾತುಗಳೇ ಇವು. ಅದೆಂದರೆ—

ಔಡಕ್ (ಈ ವಡ್ಡಿಗೆ). ಚೌಡಕ್ (ಆಚೆ ವಡ್ಡಿಗೆ), ದಾಮಾಡು (ತಮ್ಮಾ ಓಡು); ದಾಮಾಡೂಚೆ (ತಮ್ಮಾ ಓಡಿ ಆಚೆ) ಪಂಚಾಡು (ಪಂಚ ಐದು ಆಳು;) ಪಂಚಾಡ ಖೋಡ ಖಾಸಾ (ಅಂದರೆ ಸ್ವಂತ ಐದು ಆಳು ಕೂಡಿ) ಹಿರವಾದಾಣಾ (ಹೋರಿದನಾ) ಕುಡಕುಡೀ (ಕೂಡಿಕೂಡಿ), ರಾಜಫೋರಿ (ರಾಗಿ ಗೋದಿ), ವ್ಯಾಲಿ (ಎಳ್ಳು) ಸೋನಪಾಣೀ ಸುಣ್ಣಬಣ್ಣ(?)) ವ್ಯಾಲಿ (ಬ್ಯಾಳಿ) ಅನ್ಯಾಮನ್ಯಾ (ಓಣಿ ಮಣ್ಣಾಗ) ಸೇಜಿ ಬೈಜಾ (ಸೆಜ್ಜಿ ಬಿತ್ತು); ಅತಚ ಕನ್ಯಾ (ಹತ್ತರ ಹಚ್ಚು ಕಣ್ಯಾ (ಂಡ್ಯಾ)). ಮಹಾರಾಷ್ಟ್ರೀಯರಾದ ಶ್ರೀ. ಛತ್ರೆ ಅವರ ಬಾಯಿಂದಲೇ ಈ ಮಾತನ್ನು ಕೇಳೋಣ:—

"ह्या बालबोलात असे दिसून येईल की—एक मोठा भाऊ धाकट्यास म्हणतो— 'बाळ आपल्या शेतच्या ह्या बांधापासून त्या बांधावर जा—तेथे आपले पांच नोकर आहेत—त्यांस घेऊन, आपली जनवरे घेऊन शाळु, गहु, तीळ आणि ह वरे वगैरे पिवळी धान्ये शेतात पेरव—या जवळच्या माळ्यात बाजरी व ओवा पेरव—पहा'— हा बोल पूर्वी कांनडीमधून घेतलेले असावा" *

ಇದೇ ರೀತಿ, ಶ್ರೀ ಛತ್ರೆ ಅವರ ಪ್ರಕಾರ ಈ ಕೆಳಗಿನ 'ಬಾಲಬೋಧಗಳು' ಕೂಡ ಮೂಲತಃ ಕನ್ನಡದಿಂದಲೇ ಮರಾಠಿಗೆ ಹೋದುವು. ಆ 'ಬಾಲಬೋಲ'ಗಳೆಂದರೆ —

ಆಟಕ ಮಾಟಕ್ ಚನ್ನೀ ಚಾಟಕ್–
    ಚನ್ನೀ ಝೂಲೀ ಗೋಡಗೋಡ–
ತ್ಯಾವರ ಬಸಲೀ ರಾಮಜಿಪೋರ್–
    ರಾಮಜೀಪೋರಾಚೀ ಹಾತಾತ್ ತುಳಶೀಮಾಳಾ–
    ಏಕ,ಏಕ ಹಾತ ಫುಲಲ್ಯೋ—†

---

* चित्रमय जगत्—December 1916, P. 598.

† ಈ ಬಾಲಬೋಧಗಳೆರಡೂ ಹೆಚ್ಚು ಮರಾಠಿಯವೇ ಎಂದು ಹೇಳಬಹುದು. — ಧಾ. ರಾ. ಮು.

ಇದರಂತೆಯೇ ಹೆಚ್ಚು ಸುಸ್ಪಷ್ಟವಾಗಿ ಕನ್ನಡ ಅಂಶವನ್ನು ಕಾಣಬಹುದಾದ ಇನ್ನೊಂದು 'ಬಾಲಬೋಧ' ವೆಂದರೆ ಈ ಕೆಳಗಿನದು:—

ಅಡಗೂಲ ಮಡಗೂಲ, ಸೋನ್ಯಾಚ ಕಡಗೂಲ;
ರೂಪ್ಯಾಚಾ ವಾಳಾ ತಾನ್ಹ್ಯಾ ಬಾಳಾ;– ತೀಟ

ಇದನ್ನು ಮಹಾರಾಷ್ಟ್ರೀಯ ಸ್ತ್ರೀಯರು ತಮ್ಮ ಚಿಕ್ಕಮಕ್ಕಳಿಗೆ ಹಣೆಗೆ ತಿಲಕವನ್ನಿಡುವಾಗ ಹೇಳುತ್ತಾರೆ. ಶ್ರೀ. ಖತ್ರೆ ಅವರ ಪ್ರಕಾರ ಇದರ ಅರ್ಥವೆಂದರೆ –"(ಏನು ಕಂದನ) ಆಟಗಳ ! ಮಾತುಗಳ!! (ಕೈಯಲ್ಲಿ) ಬಂಗಾರದ ಖಡೆಯೇನ! (ಕಡಗೋಲೇನ!) ಸಣ್ಣ ಕಂದನ ರೂಪಕ್ಕೆ ದೃಷ್ಟಿತಾಕೀತೆಂದು ಇಕೊ; ಈ ತಿಲಕವನ್ನು ಹಣೆಗೆ ಇಡುತ್ತೇನೆ."

ಇದರಂತೆಯೇ ಶ್ರೀಯುತರ ಪ್ರಕಾರ "ಅಂಗಾಯಿ ಮಾಂಗಾಯಿ, ಬಾಳಾ ಕಂಗಾಯಿ"— ಮೊದಲಾದ ಪದಗಳಲ್ಲಿಯೂ ಕನ್ನಡ ಅಂಶವನ್ನು ಕಾಣಬಹುದು.

ಸಾಹಿತ್ಯದೃಷ್ಟಿಯಿಂದಲೂ ಅನೇಕ ಹಳಗನ್ನಡ ಗ್ರಂಥಗಳು ಮರಾಠಿಯಲ್ಲಿ ಭಾಷಾಂತರ ಪಡೆದಿವೆ. ಹದಿನೈದನೆಯ ಶತಮಾನದ ಚಾಮರಸನ 'ಪ್ರಭುಲಿಂಗಲೀಲೆ'ಯು ಈ ದೃಷ್ಟಿಯಿಂದ ತುಂಬಾ ಪುಣ್ಯವಂತ ಗ್ರಂಥ. ಇದರ ಭಾಷಾಂತರವು ತಮಿಳಿನಲ್ಲಿ ಒಂದು ಸಲವೂ, ತೆಲುಗಿನಲ್ಲಿ ಎರಡು ಸಲವೂ ಆಯಿತಲ್ಲದೆ ಮರಾಠಿಯಲ್ಲಿ ಕೂಡ ಮಾಡಲ್ಪಟ್ಟಿತು. ಈ ಕಾವ್ಯದ ಮರಾಠಿ ಭಾಷಾಂತರವನ್ನು ಮಾಡಿದವನು ಬ್ರಹ್ಮರಸನೆಂಬವನು. ಕುಮಾರವ್ಯಾಸನ ಕರ್ನಾಟಕ ಭಾರತವನ್ನು ಚಂದ್ರಾತ್ಮಜ ರುದ್ರನು ಮರಾಠಿಗೆ ಪರಿವರ್ತಿಸಿದ್ದಾನೆ. ಅದರಂತೆ ಇನ್ನೂ ಇತರ ಗ್ರಂಥಗಳೂ ಮರಾಠಿಗೆ ಹೋದವು.

ವ್ಯಾಕರಣ ದೃಷ್ಟಿಯಿಂದ ಮರಾಠಿ ಭಾಷೆಯ ಒಕ್ಕಲು–ಹೆಣ್ಣುಮಕ್ಕಳ ಬಾಯಲ್ಲಿ ಬರುವ ಪುರುಷ ಸೂಚಕ ಕ್ರಿಯಾ ರೂಪಗಳು ಕನ್ನಡ ಪ್ರಭಾವವೆಂದೇ ಹೇಳಬೇಕು. ಯಾಕಂದರೆ, ಮರಾಠಿ ಭಾಷೆಯಲ್ಲಿ ಪುರುಷರು ಮಾತಾಡುವಾಗ "ಮೀ ಜಾತೋ" ಅನ್ನಬಹುದೇ ವಿನಾ, ಸ್ತ್ರೀಯರು "ಮೀ ಜಾತೇ" ಎಂದೇ ಎನ್ನಬೇಕು. ಆದರೆ, ಅನೇಕ ಕಡೆಯ ಒಕ್ಕಲು—ಹೆಣ್ಣುಮಕ್ಕಳು ಪುರುಷರೀತಿಯ ವಾಕ್ಯಪ್ರಯೋಗವನ್ನು ಇಟ್ಟುಕೊಂಡುದು ನೆರೆಯ ಭಾಷೆಯಾದ ಕನ್ನಡದ ಪ್ರಭಾವ.

ಅನೇಕ ಮರಾಠಿ ಕ್ರಿಯಾರೂಪಗಳು ಕನ್ನಡ ನಾಮಪದಗಳನ್ನು ಧರಿಸಿದ ರೂಪಗಳಾಗಿವೆ. ಉದಾ: - ಓಪ–ದೇಣೇ; ಗುದ್ದ್ಯಾ–ದೇಣೇ; ಕೀಸ–ಕಾಢಣೇ; ಧಂಡ–ಹೋಣೇ; ಚವ್ (ಕ–ಸವಿ) ಪಾಹಣೇ; ಬಿಕಟ–ಕರಣೇ–ಇತ್ಯಾದಿ.

ಇದೂ ಅಲ್ಲದೆ, ಕೋಶದ ದೃಷ್ಟಿಯಿಂದ ಅನೇಕ ಕನ್ನಡಪದಗಳು ಮರಾಠಿಯಲ್ಲಿ ಸೇರಿಕೊಂಡದ್ದನ್ನು ಕಾಣಬಹುದು. ಶ್ರೀ. ಶಂ. ಬಾ. ಜೋಶಿ ಅವರ ಪ್ರಕಾರ ಈ ಕೆಳಗಿನ ಶಬ್ದಗಳು ಮರಾಠಿಯಲ್ಲಿ ಸೇರಿದ ಕನ್ನಡ ಪದಗಳು. ಉದಾ: ಕೊರೆ–ಕೋರಣೇ; ಹೀರ್–ಹೀರಣೇ; ತುಂಬಣೇ; ಈನ್–ವೀಣೇ; ಹರಡಣೇ; ಬಡವಣೇ; ಕುಟಣೇ; ಹುಡುಕಣೇ—ಇತ್ಯಾದಿ. ಶುದ್ಧ ಮರಾಠಿಯನ್ನು ಆಡುತ್ತಿರುವವರ ಬಾಯಲ್ಲೂ—"ಪಾಣೀ **ತುಂಬಲೇ**"– "ತೀ ಗೋಷ್ಟ ಫಾರ್ **ನಡಲೀ**"—ಮೊದಲಾದ ಪ್ರಯೋಗಗಳನ್ನು ಕಾಣಬಹುದು. ಮುಂಬಯಿಯಲ್ಲಿ ಕೂಲಿಯಾಳಾಗಿ ದುಡಿಯುತ್ತಿರುವ ಘಟ್ಟದ ಜನರ ಬಾಯಲ್ಲಿ ಇಂಥ ಹೇರಳವಾದ ಪ್ರಯೋಗಗಳನ್ನು ಕಾಣಬಹುದು. ಶಂ. ಬಾ. ಅವರ ಪ್ರಕಾರ ಶೈಶವಾವಸ್ಥೆಯ ಎಲ್ಲ

ಶಬ್ದಗಳೂ ಬಹುಮಟ್ಟಿಗೆ ಕನ್ನಡವೇ ಆಗಿವೆ. ತಾಯಿ ಹಾಡುವುದು ಕನ್ನಡ ಓ–ವಿ; ಮಗು ಧರಿಸುವುದು ಮನಗಟೆ—ಮಣಿಕಟ್ಟು; ಸಮಾರಂಭಕ್ಕಾಗಿ 'ಗಡಗನೀರ್'; ಧರಿಸುವುದು ತೊಡರು–ತೋಡೆ; ಸ್ತ್ರೀಯರಿಗಿರಬೇಕಾದುದು 'ಬಾಸಿಂಗಬಳ್' ಇತ್ಯಾದಿ.

ಸುಪ್ರಸಿದ್ಧ ಮರಾಠಿ ಭಾಷೆಯ ಸಂಶೋಧಕರಾದ ಪ್ರೊ. ಕೃ. ಪಾ. ಕುಲಕರ್ಣಿ ಅವರು ತಮ್ಮ "ಭಾಷಾಶಾಸ್ತ್ರ ಆಣಿ ಮರಾಠಿ ಭಾಷಾ" ಎನ್ನುವ ಪುಸ್ತಕದಲ್ಲಿ ಈ ಕೆಳಗಿನ ಹಲವು ಶಬ್ದಗಳು ಕನ್ನಡದಿಂದ ಮರಾಠಿಗೆ ಹೋದವೆಂದು ಹೇಳುತ್ತಾರೆ.—ಉದಾ:—ಗೋಂಧಳ್; ಕೋಡ; ಖಡ್ಡ; ಗಾಡೀ; ಗುಂಡಾ; ಗುಂಟ; ಜೀನ್; ಅಪ್ಪಾ; ಆಡ; ಆಟಪಣೆ; ಇತ್ಯಾದಿ.

ಇದೂ ಅಲ್ಲದೆ, ಮಹಾನುಭಾವರಾದ ಸಂತ ಜ್ಞಾನೇಶ್ವರರ ಗ್ರಂಥದಲ್ಲಿ ಹೇರಳವಾಗಿ ಕನ್ನಡ ಶಬ್ದಗಳು ಬರುತ್ತವೆ. ಈ ಶಬ್ದಗಳನ್ನು ಮೊನ್ನೆ ಮೊನ್ನೆಯ ವರೆಗೂ ಅನೇಕ ಮರಾಠಿ ಪಂಡಿತರು ಕೇವಲ ಜುನೀ–ಮರಾಠಿ ಎಂದು ಬಿಟ್ಟುಬಿಡುತ್ತಿದ್ದರು. ಆದರೆ, ಈ ಬಗ್ಗೆ ಪಂಡಿತರ ಕಣ್ಣನ್ನು ತೆರೆಯಿಸಿದ ಶ್ರೇಯಸ್ಸು ಸುಪ್ರಸಿದ್ಧ ಕನ್ನಡ ಸಂಶೋಧಕರಾದ ಶ್ರೀ. ನಾ. ಶ್ರೀ. ರಾಜಪುರೋಹಿತರಿಗೆ ಸಲ್ಲಬೇಕು. ಶ್ರೀ. ರಾಜಪುರೋಹಿತರು ಕ್ರಿ. ಶ. ೧೯೧೨ರಿಂದ ೧೯೧೩ರ ವರೆಗೆ ಮಹಾರಾಷ್ಟ್ರದ ಸುಪ್ರಸಿದ್ಧ ಪತ್ರಿಕೆಯಾದ 'ಕೇಸರಿ'ಯಲ್ಲಿ 'ಮಹಾರಾಷ್ಟ್ರ ವ ಕರ್ನಾಟಕ' ಎಂಬ ಲೇಖನಮಾಲೆಯನ್ನೇ ಪ್ರಾರಂಭಿಸಿದರು. ತತ್ಪರಿಣಾಮವಾಗಿ, ಅನೇಕ ಮರಾಠಿ ಪಂಡಿತರು ಈ ಪದಗಳ ಅರ್ಥಕ್ಕಾಗಿ ಕನ್ನಡವನ್ನು ನೋಡುವಂತಾಯಿತು.

ಮಹಾನುಭಾವ ಸಂತ ಜ್ಞಾನದೇವರು ಕ್ರಿ. ಶ. ೧೨೭೫ರಲ್ಲಿ ಅಳಂದಿಯಲ್ಲಿ ಜನ್ಮವೆತ್ತಿದರು. ಈ ಕಾಲಕ್ಕೆ ಅಳಂದಿಯು ಕರ್ನಾಟಕದಲ್ಲಿದ್ದಿತಷ್ಟೇ ಅಲ್ಲದೆ, ಅವರ ಆರಾಧ್ಯದೈವತವಾದ ಪಂಢರಪುರದ ವಿಠ್ಠಲ ಮೂರ್ತಿಯು ಕೂಡ ಕನ್ನಡ ದೇಶದಿಂದ ಬಂದವನೆಂಬ ಕಲ್ಪನೆ ಇನ್ನೂ ಜಾಗ್ರತವಾಗಿದ್ದಿತು. ಅಂತಲೇ, ಜ್ಞಾನದೇವರು ಅನೇಕ ಸಲ, ಈ ವಿಠ್ಠಲ ವಿಗ್ರಹವನ್ನು "ಕಾನಡೀ ಹೋ ವಿಠ್ಠಲು ಕರ್ನಾಟಕು"—ಎಂದೂ, ನಾಮದೇವರು "ಕಾನಡೇ ಪರಬ್ರಹ್ಮ" ಎಂದೂ ಕರೆದರು.

೧೩ನೆಯ ಶತಮಾನದ ಈ 'ಜ್ಞಾನೇಶ್ವರಿ'ಯಲ್ಲಿ ಮುಂದಿನ ಈ ಅನೇಕ ಕನ್ನಡ ಪದಗಳನ್ನು ಕಾಣುತ್ತೇವೆ. ಉದಾ:—ಅಡತರ; ಆಗಲೇ (ಅಗಲು); ಆಂಟೀ (ಅಂಟು); ಆಡವಾರಾ (ಅಡ್ಡಬರು); ಆರ್ಡಿ (ಆರಡಿ, ಭೃಂಗ); ಭಾಂಗಾರ; ಮೇಜು (ಮೆಚ್ಚು); ಮಿರವಿಣೆ (ಮೆರವಣಿಗೆ); ಮಾತು (ಶಬ್ದ); ಪಾಳೆ (ಆಚಾರ); ಹರಳು (ಖಡಿ); ರೇವಾ (ರ್‍ಯಾವಿ); ಸೋಆಂಗೇ (ಸೋಂಗು); ಹಡಪು; ಸೂಡು; ಕೇಳವಣೆ; ತೂಕ; ಜೆಂಬಲ; ಮದವಿ; ಅಕ್ಕಸಾಲ; ಉಳೀಗ್ (ಊಳಿಗ–ಸೇವೆ); ಓಗರ (ಊಟ); ಕತಕಟಾ; ಉತತ್ಯಾ (ಉತ್ತತ್ತಿ) ಇತ್ಯಾದಿ.

ಅಮೃತಾನುಭವದಲ್ಲಿ

ಓಪು; ದಾಟಣೆ; ಬೋಣೇ (ಬಾನ); ಭೋಭಾಟ (ಬೊಬ್ಬಾಟ); ಮಾಂದಿ (ಮದಿವಿ); ಸಾನಾ (ಸಣ್ಣ); ಹುಡೆ—ಮೊದಲಾದ ಪದಗಳು ಬರುತ್ತವೆ. ಮಹಾನುಭಾವ ಗ್ರಂಥಕರ್ತರಲ್ಲಿ ಒಬ್ಬರಾದ ಭಾಸ್ಕರ ಭಟ್ಟ ಬೋರಿಕರ ಅವರ "ಶಿಶುಪಾಲವಧ"ದಲ್ಲಿ ಈ ಕೆಳಗಿನ ಕನ್ನಡ ಪದಗಳು ದೊರಕುತ್ತಿವೆ. – ಗುಡಿ; ಗುಂಡಿ; ಹಡಪ; ಗುಡಾರ (ಗುದರೂ); ಇತ್ಯಾದಿ. 'ಉದ್ಧವಗೀತೆ'ಯಲ್ಲಿ – ತೋವರು; ಹೇವ; ಅರಲ (ಹೂವು); ಅಡಣ (ಭಯ); ಇತ್ಯಾದಿ ಶಬ್ದಗಳಿವೆ. ಈ ಶಬ್ದಗಳಷ್ಟೇ ಅಲ್ಲ, ಜ್ಞಾನೇಶ್ವರರ ಅಭಂಗಗಳಲ್ಲಿಯ ಎರಡು ನೂರು ಅಭಂಗಗಳು ಶುದ್ಧ ಕನ್ನಡ ಭಾಷೆಯಲ್ಲಿಯೇ ಇವೆ. ಇವನ್ನು ತಿಳಿಯಲಾರದ

ಮಹಾರಾಷ್ಟ್ರೀಯ ಪಂಡಿತರು ಇವು ಕೇವಲ 'ಜುನೀ ಮರಾಠಿ' ಎಂದು ಹೇಳಿ, ಕೆಲವಕ್ಕೆ ಮಾತ್ರ ಅರ್ಥ ಹಚ್ಚಲು ಯತ್ನಿಸಿದರು. ಆದರೆ, ಈ ಅಭಂಗಗಳ ಸರಿಯಾದ ಅರ್ಥವನ್ನು ಹೇಳಿದವರು ಶ್ರೀ. ರಾಜ ಪುರೋಹಿತರು. ಅವರ ಈ ವಿವರಣೆಯನ್ನು ಶ್ರೀ. ನ. ಚಿ. ಕೇಳಕರರೂ ಮೆಚ್ಚಿದರು.

ಅಲ್ಲಿ ಬರುವ ಒಂದು ಪದ್ಯವೆಂದರೆ

ಅಕಾನಿ **ಕೇಲಲೇ ಚಿಕಾನಾ ಮಾತು** ।
ಕಾಂಲೇಧಸಿಗೇ ಮರುಳಾದನೇ –
ಚಲುವಾನೇ ಚಲುವಾನೇ ಪಂಢರೀರಾಯಾ ಚಲುವಾನೇ—
ಯಲ್ಲೇದೌನರ್ಕವಾನೇ—ಪುಂಡಲೀಕನೇಭಕ್ತಿವಂದಾ –
ರಖುಮಾದೇವೀವರ ವಿಠ್ಠಲೂವೇ– ಇತ್ಯಾದಿ.

ಇದರಲ್ಲಿ ಗೆರೆ ಹೊಡೆದ ಭಾಗ ಮಾತ್ರ ಮರಾಠಿಪಂಡಿತರಿಗೆ ಅರ್ಥವಾಯಿತು. ಕೇಲಲೇ—ಅಂದರೆ ಬಹುಶಃ 'ಕೇಲೆ' ಇದರ ಪ್ರಾಚೀನರೂಪ; 'ಚಿಕಾನಾ' ಅಂದರೆ ದೇಶ್ಯಪದ; ದೇವಿವರ—ಇತ್ಯಾದಿ ಅರ್ಥವಾಯಿತು. ಆದರೆ, ಉಳಿದ ಭಾಗದ ಗತಿಯೇನು ?

ಆಗ, ಶ್ರೀ. ರಾಜಪುರೋಹಿತರು ಮೇಲಿನ ರೀತಿಯ **ಬರವಣಿಗೆಯು ಲಿಪಿಕಾರರ ಹಾವಳಿಯೆಂದು ಹೇಳಿ,** ಈ ಅಭಂಗದ ಅರ್ಥವನ್ನು ವಿವರಿಸಿದರು. ಅವರ ಪ್ರಕಾರ ಇಲ್ಲಿ ಬರುವ ಪದಗಳೆಲ್ಲ ಕನ್ನಡ. ಈ ಅಭಂಗವನ್ನು ಸರಿಯಾಗಿ ಹೊಂದಿಸಿ ಬರೆದರೆ ಈ ರೀತಿಯಾಗುತ್ತದೆ:—

"ಅಕ್ಕಾ ನೀ ಕೇಳೇ ಚಿಕ್ಕನ ಮಾತು,
ಕಾರಲೇದಾಸೀಗೆ ಮರುಳಾದನೇ।
ಚೆಲುವಾನೆ ಚೆಲುವಾನೆ ಪಂಢರಿರಾಯಾ,
ಚೆಲುವಾನೆ ಎಲ್ಲಿ ದೊರಕುವನೇ ||
ಪುಂಡಲೀಕನ ಭಕ್ತೀಗೆ ಬಂದಾ–
ರಖುಮಾದೇವೀ | ವರವಿಠ್ಠಲನೆ—ಇತ್ಯಾದಿ.

ಅಂದರೆ, ಯಾವಳೋ ಒಬ್ಬಳು ತನ್ನ ಸಖಿಯಲ್ಲಿ ತನ್ನ ವಿರಹತಾಪವನ್ನು ತೋಡಿಕೊಳ್ಳುತ್ತಿದ್ದಾಳೆ. ಮುದ್ದು ವಿಠ್ಠಲನ ಸುಂದರ ಮೂರುತಿಯನ್ನು ಬಿಟ್ಟು ಅವಳು ಅರಗಳಿಗೆ ಇರಲಾರಳು. ಭಕ್ತಿಪ್ರಿಯ ಪರಮಾತ್ಮನು ಅನೇಕರಿಗೆ ಒಲಿದಿದ್ದಾನೆಂದು ಅವಳಿಗೆ ಗೊತ್ತಿದೆ. ಅಂತಲೇ, ಚೆಲುವ ಚೆನ್ನಿಗರಾಯನಾದ ರಖುಮಾವರ ವಿಠ್ಠಲನಿಗಾಗಿ ಹಾತೊರೆದು ನಿಂತಿದ್ದಾಳೆ.

"ಅಕ್ಕಾ, ಈ ಚೆಲುವ ಚೆನ್ನಿಗನಾದ ಚಿಕ್ಕನ (ವಿಠ್ಠಲನ) ಮಾತನ್ನು ಏನೆಂದು ಹೇಳಲಿ? ಭಕ್ತಪ್ರಿಯನಾದ ಇವನು 'ಕಾರಲೆ ದಾಸಿಗೆ' (ಜನಾದಾಸಿಗೆ) ಮರುಳಾದವನು. ಇಂಥ ಸುಸ್ವರೂಪವುಳ್ಳ ಸುಂದರನು ನನಗಿಂದು ಎಲ್ಲಿ ದೊರಕುವನು ಹೇಳಬಲ್ಲೆಯಾ?- 'ನ ಮೇ ಭಕ್ತಃ ವಿನಶ್ಯತಿ' ಎಂದ ಈ ಚೆಲುವನು ಪುಂಡಲೀಕನ ಭಕ್ತಿಗೆ ಮೆಚ್ಚಿ ಓಡಿ ಬಂದ; ತಾಯಿ ರುಕುಮಾದೇವಿಯ ಶ್ರೀಪ್ರಾಣನಾಗಿರುವಂಥ ವಿಠ್ಠಲ! ಇನ್ನೆಂದು ದೊರಕುವ?........'- ಎಂಥ ಉದಾತ್ತವಾದ ಭಾವ! ಕನ್ನಡ ಸಂಶೋಧಕರೊಬ್ಬರು

ಇದರ ಅರ್ಥವನ್ನು ಹೇಳುವ ವರೆಗೆ ಈ ಸುಧಾಭಾಂಡಾರವು ಕೇವಲ ' ಜುನೀ ಮರಾಠಿ 'ಯಾಗಿತ್ತಲ್ಲವೇ ?.... ಹೀಗಾಗಿ, ಮಹಾನುಭಾವ ಸಂತ ಜ್ಞಾನೇಶ್ವರರು ಕೇವಲ ಕನ್ನಡ ಶಬ್ದಗಳನ್ನುಪಯೋಗಿಸಿದ್ದರಷ್ಟೇ ಅಲ್ಲದೆ, ಇಡಿಯ ಕನ್ನಡ ವಾಕ್ಯಗಳಿಂದ ಕೂಡಿದ ಎರಡು–ಮೂರು ಅಭಂಗಗಳನ್ನು ರಚಿಸಿದ್ದಾರೆ.

ಇವಲ್ಲದೆ, ಪ್ರೊ. ಕೃ. ಪಾ. ಕುಲಕರ್ಣಿ ಅವರ ಪ್ರಕಾರ ಈ ಕೆಳಗಿನ ಪದಗಳೂ ಕನ್ನಡದಿಂದ ಮರಾಠಿಗೆ ಹೋದುವು—ಅಘಳ (ಅಗಲ); ಆಟ್ಟಲ (ಅಡಾಲು–ಆಟಾಳಿ); ಅಡಕಿತ್ತು; ಅಡಗು (=Confusion); ಅಡಣ; ಅಡಣೀ (ಅಡ್ಡಣಿಗೆ); ಅದಟ; ಅರಣೀ (ಆರು); **ಅವಳೀ** ಜಾವಳೀ (ಅವಳಿ); ಆಟಪಾಟ (ಆಟ್ಯಾಪಾಟ್ಯಾ); ಊಖ (ಕುದಿಯುವುದು) (ಸಂ. ಉತ್+ಕ್ವಥದಿಂದಲ್ಲ; ಕ. ಉರ್ಕು ನೋಡಿರಿ); ಉಂಡಗಾ (ಉಡಾಳ); (ದಾಂಡಿಗನೂ ಕನ್ನಡವೇ); ಗುಂಡಾ; ಉಪದವಣೀ (ಉಪ್ಪವಡಿಸು); ಉಪ್ಪಿಟ್ಟು; ಉರೋಳಿ (ಗುಂಡುಪಾತ್ರೆ); ಏಲಚೀ; ಒಕಣೀ (ಒಕ್ಕರಿಸು); ಖಚ್ಚುನ ಚಾವಣೀ; ಕಟ (ಪಟ್ಟಿ); ಕಡತಾ (Measure); ಕಡಬು; ಪಡತೋರಾ; ಪಡಿಅಣೆ; ಬಡಗಾ; ಬಂಡ್ಯಾ; ಬಟವಿಣೀ; ಬರಡ; ಬಳಕಟ; ಇತ್ಯಾದಿ. (ಶ್ರೀಯುತರು ಹೇಳುವ 'ಅಕ್ಕರತಾಳ' 'ಅಕರಾ ಮಾಸ' ಈ ಮೊದಲಾದುವು ಕನ್ನಡವಾಗಿರದೆ, ಹೆಚ್ಚಾಗಿ ವಿದೇಶೀಯವೆಂದೇ ಹೇಳಬೇಕು. ಈ ಮೊದಲೇ ವಿವರಿಸಿದ 'ಆಂಘೋಳ' ಪದವೂ ಕೂಡ (ಪು. ೫೨) ಕನ್ನಡವಾಗಲಾರದು. ಯಾಕಂದರೆ, (೧) ಈ ರೀತಿ ಪ್ರಾಚೀನ ಪ್ರಯೋಗವು ಕನ್ನಡದಲ್ಲಿ ಎಲ್ಲಿಯೂ ಇಲ್ಲ. (೨) ಅಂಗ+ಹೋಳ–೨–ಪ್ರಯುಕ್ತವಾದ ಅರಿಸಮಾಸ.)

ಕನ್ನಡ ಮತ್ತು ಕೊಂಕಣಿ

ಮರಾಠಿಯಂತೆಯೇ, ಕೊಂಕಣಪಟ್ಟಿಯೂ ಕೂಡ ಮೊದಲಿನಿಂದಲೂ ಕನ್ನಡದ ಜೊತೆಗೇ ಸಾಗಿತು. ಹುಯೆನ್‌ತ್ಸ್ಯಾಂಗನ ಕೊನ್-ಕೆನ್–ಪೊಳಲು, ಶಿಲಾಹಾರರು ಆಳಿದ ನಾಡು. ತಮಿಳು ಶಿಲಪ್ಪದಿಗಾರಮ್ ಗ್ರಂಥದಲ್ಲಿ, ಚೇರ ಅರಸನಾದ ಶೆಂಗುಟ್ಟುವನ್ ಎಂಬವನು ನೋಡಿದ ನೃತ್ಯಗಳಲ್ಲಿ **ಕರ್ನಾಟಕ ಮತ್ತು ಕೊಂಕಣ** ನೃತ್ಯದವರನ್ನು ಕೂಡಿಯೇ ಹೇಳಿದೆ.

ಕ್ರಿಸ್ತಶಕ ೧೯೩೭ ರಲ್ಲಿ ಮಂಗಳೂರಿನಿಂದ ಶ್ರೀ. ಆರ್. ಬಿ. ಪೀಟರ್ ಅವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ "ರಾಕಣೊ" ಎಂಬ ಪತ್ರಿಕೆಯು ಕನ್ನಡಲಿಪಿಯಲ್ಲಿಯ ಕೊಂಕಣಿ ಭಾಷೆಯ ಪತ್ರಿಕೆಯಾಗಿದ್ದಿತು. ಇಂದು ಕೊಂಕಣಿಯನ್ನು ಆಡುವ ಜನರು ತಮ್ಮ ಸುತ್ತುಮುತ್ತಲಿರುವ ಭಾಷೆಯ ಪ್ರಭಾವಕ್ಕೆ ಬಹುಮಟ್ಟಿಗೆ ಒಳಗಾಗಿದ್ದರಿಂದ, ಇಂದಿನ ಕೊಂಕಣಿಯಲ್ಲಿ ಕಾರವಾರ ಕೊಂಕಣಿ, ವೆಂಗುರ್ಲಾ ಕೊಂಕಣಿ—ಎಂದು ಎರಡು ಪ್ರಮುಖ ವಿಭಾಗಗಳನ್ನು ಮಾಡಬಹುದು. ಸ್ವಾಭಾವಿಕವಾಗಿಯೇ ಈ ಈ ಭಾಗದ ಕೊಂಕಣಿಯು ನೆರೆಹೊರೆಯ ಭಾಷೆಯ ಪ್ರಭಾವಕ್ಕೆ ಒಳಗಾಗಿದೆ. ಈ ದೃಷ್ಟಿಯಿಂದ ಡಾ. ಎಸ್. ಎಮ್. ಕತ್ರೆ ಅವರು ಬರೆದ "Formation of Konkani" ಎನ್ನುವ ಪುಸ್ತಕವು ಹೆಚ್ಚಾಗಿ ಮರಾಠಿ ಸಂಬಂಧವನ್ನು ಸೂಚಿಸುತ್ತಿದ್ದರೆ, ಶ್ರೀಯುತ ಎಸ್. ಎಸ್. ತಾಳಮಕ್ಕಿ ಅವರು ಬರೆದ "Konkani Proverbs, Riddles" ಇತ್ಯಾದಿ ಪುಸ್ತಕವು (Bombay 1932–33) ಕನ್ನಡದ ಸಾಮೀಪ್ಯವನ್ನು ಸೂಚಿಸುತ್ತದೆ.

ಕೊಂಕಣಿಯ ಮೇಲಾದ ಈ ಕನ್ನಡದ ಪ್ರಭಾವವನ್ನು ನಾವು **ಮೂರು** ವಿಧವಾಗಿ ವಿಭಾಗಿಸಬಹುದು. ೧. ಕೊಂಕಣಿಯಲ್ಲಿ ಸೇರಿದ ಅನೇಕ ಕನ್ನಡ ಪದಗಳು ಮತ್ತು ಗಾದೆಯ ಮಾತುಗಳು; ೨. ಮಕ್ಕಳನ್ನಾಡಿಸುವಾಗ ಸಾರಸ್ವತ ಸ್ತ್ರೀಯರು ನೇರವಾಗಿ ಉಪಯೋಗಿಸುವ ಶುದ್ಧ ಕನ್ನಡ ಪದ್ಯಗಳು. ೩. ಮೂರನೆಯದಾಗಿ ಕೊಂಕಣಿ ವ್ಯಾಕರಣದ ಮೇಲೆ ಕನ್ನಡವು ಮಾಡಿರಬಹುದಾದ ಪರಿಣಾಮ.

೧. ಕೊಂಕಣಿ ಕೋಶ ಮತ್ತು ಗಾದೆಮಾತುಗಳು

ಶ್ರೀ. ತಾಳಮಕ್ಕಿಯವರು ಕಲೆಹಾಕಿದ ಅನೇಕ ವಿದೇಶೀಯ ಗಾದೆಮಾತುಗಳಲ್ಲಿ ೧೦ ಮರಾಠಿ ಭಾಷೆಯವಿವೆ; ೨೨ ಹಿಂದುಸ್ಥಾನಿ; ಮತ್ತು ೧೩೬ ಕನ್ನಡ ಈ ಗಾದೆಗಳಲ್ಲಿ ಎಷ್ಟೋ ಗಾದೆಗಳು ಇಂದು ಕನ್ನಡದಲ್ಲೇ ಅಷ್ಟಾಗಿ ಪ್ರಯುಕ್ತವಾಗಿರದೆ, ಕೊಂಕಣಿಗರಲ್ಲೇ ಹೆಚ್ಚಾಗಿ ನಿಂತಂತೆ ಕಾಣುತ್ತವೆ. ಉದಾ:– ಅಂಬಲಿ ಕುಡಿಯುವವಗೆ ಮೀಶೆ ತಿಕ್ಕುವವನೊಬ್ಬ; ಅಮ್ಮನವರು ಪ್ರಾಯಕ್ಕೆ ಬರುವನಕ ಅಯ್ಯನವರು ಕೈಲಾಸ; ಎಣ್ಣೆ ಶಿಕ್ಕದ್ದೇ ಶಣಿಯಾರ; ಗೋಡೆಬಿದ್ದರೆ ಜಗಲಿ ಮೇಲೆ, ಸಾಲಬಿದ್ದರೆ ಪೋರನ ಮೇಲೆ; ನೆತ್ತಿಯ ಮೇಲೆ ಬಾಯಿಯಿದ್ದರೆ ಮತ್ತೊಂದು ತುತ್ತು ಉಂಡೇನು; ಮೂವರ ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ; ಯಾವ ದೇವರ ಗುಡಿಯಾದರೇನು? ನಿದ್ದೆ ಬಿದ್ದರೆ ಲೆಕ್ಕ; ಸಂಗತಿ ಸೋತು ನೋಡಬೇಕು, ಹೆಂಡತಿ ಹೇತು ನೋಡಬೇಕು. ಇತ್ಯಾದಿ.

ಹಲಕೆಲವು ಇಂಥ ಗಾದೆಗಳಲ್ಲಿ ಕೊಂಕಣಿವಾತಾವರಣವೂ ಬಾರದಿಲ್ಲ ಉದಾಹರಣೆಗೆ, 'ಕನ್ನಡ ಸೂಳೆಗೆ ಕೊಂಕಣಮಿಂಡ' 'ಹಂದಿಗೋಣದವರು ಹಾದರಾ ಮಾಡಿದರೆ, ಕುಮಟೀಯವರಿಗೆ ದಂಡ'— ಮೊದಲಾದ ಗಾದೆಗಳಲ್ಲಿ ತತ್ಕಾಲೀನ ಯಾವುದೋ ಘಟನೆಯನ್ನೋ, ಅಥವಾ ಜಾನಾಂಗಿಕ ಕಲ್ಪನೆಯನ್ನೋ ಕಾಣಬಹುದಾಗಿದೆ. 'ಆರೆ ಅಲ್ಪ; ಕನ್ನಡ ಸ್ವಲ್ಪ; ತಿಗಳು ಬೊಗಳು'—ಮೊದಲಾವಲ್ಲೂ ಈ ಜಾನಾಂಗಿಕ ಕಲ್ಪನೆ ಕಾಣಬಹುದು.

ಎಷ್ಟೋ ಸಲ ಕನ್ನಡದಿಂದ ಹೋದ ಈ ಗಾದೆಗಳಿಗೆ ಕೆಲಮಟ್ಟಿನ ಕೊಂಕಣಿಸ್ವರೂಪವೂ ಬಾರದೆ ಹೋಗಿಲ್ಲ. ಉದಾಃ ಸೆಟ್ಟಿಶೇರು, ಲಿಂಗ **ಅಡಾಯ್‌ಸೇರು;** ಸೆಟ್ಟಿ ಏನ್ **ಮಾಡತಾ, ಆಳಿತಾ ಹೋಯುತಾ;** ಇತ್ಯಾದಿ.

ಕನ್ನಡದ ಅನೇಕ ಶಬ್ದಗಳು ಈ ಭಾಗದ ಕೊಂಕಣಿಯಲ್ಲಿ ಸೇರಿವೆ. ಉದಾಃ— ಬಾವಲಿ, ಬಾವಲಕ್ಕಿ, ಮಣಗಟ್ಟು, ಬೇಗಡಿ, ಭಾಂಗಾರ್, ಬ್ರಹ್ಮ-ಗುಡಿ, ತಲವಾರ, ದುಡ್ಡು, ಹೂವ, ನತ್ತು, ಬಡ್ಡಿ, ಕೊಪ್ಪರು, ಗುಪಚೀ (ಗುಬ್ಬಚ್ಚಿ), ಬಾಗಿಲು, ಅಂಗಡಿ, ಕಬ್ಬು-ಇತ್ಯಾದಿ. ಮಂಗಳೂರಿನ ಚಿತ್ರಾಪುರ ಸಾರಸ್ವತರು ತಾಯಿಯ 'ಅಕ್ಕ' ಅಥವಾ 'ತಂಗಿ'ಯನ್ನು 'ಪಾಚ್ಚಿ' ಎಂದು ಕರೆಯುತ್ತಾರೆ. ಈ 'ಪಾಚ್ಚಿ' ಬಹುಶಃ ಕನ್ನಡದ 'ಅಬಚಿ'ಯಿಂದ ಬಂದಿರಬೇಕು. ಈ ಬಗ್ಗೆ ಡಾ. ಇರಾವತಿ ಕರ್ವೆ ಅವರು ಬರೆಯುವ ದೇನಂದರೆ—

The Chitrapur Saraswats of Mangalore use the term 'ಪಾಚ್ಚಿ', side by side with the word 'ಮಾವಶಿ'. It seems to be derived from the Kannada word 'ಅಬಚಿ', which means mother's sister " *

ಉದಾಹರಣೆಗೆ, ಇಂಥ ಕನ್ನಡ ಶಬ್ದಗಳು ರೂಪಾಂತರ ಹೊಂದಿ ಈ ಕೊಂಕಣಿ ಗಾದೆಗಳಲ್ಲಿ ಸೇರಿದ ಹಲವು ಗಾದೆಗಳನ್ನು ನೋಡೋಣ:— **ಕೋಟಿಗ್ಯಾಂ** ಆಯಲಿ ಗಾಯಿ; **ಅಣ್ಣಪ್ಪಗೇರಿ** ನ್ಹಾವಚೆ, **ಕುಟ್ಟಪ್ಪಾಗೇಂ** ಜೇವಂಚೆ; ಆ **ಕುಳ್ಳೇಲಿ** ಗಾಯಿ **ಅಪ್ಪಾಭಟ್ಟಾಕ್** ದಾನ; **ಆಶಾ** ಆಶಿಲ್ಯಾ **ಸಾಧೂಕ,** ಮೀಶೋ ಆಶಿಲ್ಯಾ ಸನ್ಯಾಶಾಕ **ನಂಬುನಯೇ;** ಇದರಾರಿ **ಹೋಗಳು** ನಯಿ, ಮಾಕಾಶಿ **ಬೋಗಳ:** ನಯಿ; **ನೋಟಾಕ** ನಾ

* D. C. R. I. B. vol. I P. 348

ಸುಡಿಯಶಾಕ ನಾ; ತೋಂಡ **ಭಾಂಗ್ರಾಚೆ,** ಕಾಣ್ ಪಿತಳಾಚೆ; **ದಮುಡಿ** ಮಾಲಾಕ **ದುಗಾಣೀ** ದಲಾಲಿ; **ಬರಗಾಲಾಂಕ ಬುತ್ತಿ** ಮೇಕಳ್ಳಿ; ಉಂಚ ಚಳ್ಳೇಲಿ **ತಗ್ಗೊ** ಯೇತಾ; ಏಕ **ಕಿಟೇನೇ (ಕಿಡಿ)** ಘರ ಜಳತಾ; ಏಕ ದೇವಳಾಂತಲೇ ತೇಲ ಚೋರುನು, ಅನೇಕ ದೇವಳಾಂತ **ನಂದಾದೀಪು** (ನಮ್ಮಲ್ಲಿ ಎಷ್ಟು ಜನಕ್ಕೆ ಇಂದು ಇದು ಅನ್ವಯಿಸುವದಿಲ್ಲ!); **ಗೊತ್ತು ಅಶಿಲೇ**ಸಗಳೇ ಸಾಂಗುನಕಾ, **ಗಾಂಟ ಅಶಿಲೇ**ಸಗಳೇ ಖರ್ಚು ನಕಾ; ಗಾಂವ್ಪುಭರಿ ಭೋಯಿನೊ ಆಯಿಲೋ, **ತುಳಶಿಕಟ್ಟ್ಯಾಂತು** ಮುತ್ತುಬಸಲೋ; ಹಲ ಕೆಲವು ಸಲವಂತೂ ಕೇವಲ ಪ್ರತ್ಯಯಗಳು ಮಾತ್ರ ಕೊಂಕಣಿ—**ಕಾನಡೇಂತಲು ಗಾಂಟ; ತಟಿಯೆ ಬಾಗಲಾಕ ಪಿತಳೀಚೀಗ** –ಇತ್ಯಾದಿ. ಶ್ರೀ. ತಾಳಮಕ್ಕಿಯವರ ಸಂಗ್ರಹದ ಒಂದೆರಡು ಗಾದೆಗಳಲ್ಲಿ ಪುನಃ ಜಾನಾಂಗಿಕ ಕಲ್ಪನೆಯನ್ನು ಕಾಣಬಹುದು— **ಕುಂಬಾರಾ** ಗೇಲ್ಯಾ ಆವ್ಯಾಂತು, ತಾಂಬ್ಯಾ ಚಂಬು ಸೋದಚೇ; ಖಾರವ್ಯಾಂಲಿ ಜೋಡಿ ಹೊಡಾಕ,—ಶೇಣಯಿಲಿ ಜೋಡಿ ಪಿಂಡಾಕ –ಇತ್ಯಾದಿ.

ಶುದ್ಧ ಕನ್ನಡ ಲಾಲಿಗಳು:— ಸ್ತ್ರೀಯರು ಮಕ್ಕಳನ್ನು ಆಡಿಸುವಾಗ ಹೇಳುವ ಏಳೆಂಟು ಕನ್ನಡ ಲಾಲಿಗಳನ್ನು ಶ್ರೀ ತಾಳಮಕ್ಕಿ ಅವರು ತಮ್ಮ ಸಂಗ್ರಹದಲ್ಲಿ ಕೊಟ್ಟಿದ್ದಾರೆ. ಈ ಲಾಲಿಗಳಲ್ಲಿ ಬರುವ ಕಲ್ಪನಾ–ಶಕ್ತಿ ಮತ್ತು ಶುದ್ಧ ಕನ್ನಡ ಶೈಲಿಯ ದೃಷ್ಟಿಯಿಂದ ಒಂದೆರಡು ಲಾಲಿಗಳನ್ನು ನಾವಿಲ್ಲಿ ನೋಡ ಬಹುದು.

ಮನೆತುಂಬ ಮಕ್ಕಳು,
ಕೆರೆ ತುಂಬ ತಾವರೆ,
ಅರಮನೆ ತುಂಬ ಅರಗೀಣಿ–
ಪಂಜರದೊಳು ಅರಮನೆತುಂಬ ಅರಗೀಣಿ– ।
ಮನೇಗೆ ಮಕ್ಕಳ ಸಿರಿ–
ಕೆರೇಗೆ ತಾವರೆ ಸಿರಿ–
ಅರಮನೆಯ ಚಾವಡೀಗೆ–ದೊರೆ ಸಿರಿಯೇ– ॥ ಇತ್ಯಾದಿ.

ಅಥವಾ, ತಾಯಿಗೆ ತನ್ನ ಮಗನ ಪಾವಿತ್ರ್ಯ, ಸೌಂದರ್ಯಗಳ ಬಗ್ಗೆ ಎಂಥ ವಿಶ್ವಾಸವಿದೆ ನೋಡಿ–ಅವನನ್ನು ಮುಟ್ಟಲು ಕೈ ತೊಳಕೊಳ್ಳುವುದಂತೂ ಇರಲಿ; ನೋಡಲೂ ಕೂಡ,—

ಕಂದಯ್ಯನ ಕಾಂಬುವರೆ,
ಮಿಂದು ಬನ್ನಿ ಗಂಗೇಯ–
ಕೇಂತನ್ನಿ ಕಂದೇಯ ನೊರೆಹಾಲು–
ನೊರೆಹಾಲು ಪಾಯಸ ಉಣಬಾರೊ ಕಂದಯ್ಯ ಹಗಲೂಟ—

ಅಥವಾ, ತಾಯಿಗೆ ತನ್ನ ಕಂದನ ಸ್ವಭಾವದ ಪೂರ್ಣ ಪರಿಚಯವಿದೆ. ಅವನ ಸಿಟ್ಟಿನಲ್ಲೂ ಒಂದು ಮೋಹಕತೆಯಿದೆ; ತತ್ತ್ವಜ್ಞಾನವಿದೆ. ಈ ತಾಯಿಯ ಮಗು ಸಿಟ್ಟು; ಅತಿ ಸಿಟ್ಟು; ಯಾವುದಕ್ಕೂ ಸಿಟ್ಟು. ಆದರೆ, ಯಾವ ಸಿಟ್ಟಾದರೇನು? ತಾಯಿಗೆ ಅದರ ಅರ್ಥವಾಗಿ ಬಿಟ್ಟಿದೆ. ‘ಬಸಳೆಗೆ ಮುಳ್ಳುಂಟೆ?’ ಎಂತೆಂತಹ ಕ್ರೋಧಗಳನ್ನೇ ನೋಡಿದ ತಾಯಿ–ತಪಸ್ವಿನಿ ಈ ಕ್ರೋಧದಲ್ಲೂ ಚೆಲುವನ್ನು ಕಾಣುತ್ತಾಳೆ. ಸರ್ಪನಾ ಹೆಡೆಯ ದಾಟದ **ಮೇಲೆ** ಭಯವುಂಟೆ?’—

ಹಾಗಾದರೆ ಲಾಲಿ ನೋಡೋಣ:— ಆ ಕಂದ,
ನಿದ್ದೆ ಬಂದರೆ **ಕೋಪಿ,**
ಎದ್ದರೆ **ಕಡು ಕೋಪಿ,**
ವಜ್ರದಾಕೋಪಿ ಪಸುಬಾಳೆ,
ಪಸುಬಾಳೆ, ನೀ ಕೇಳೆ,
ಬಸಳೀಗೆ (ಎಂತು) ಮುಳ್ಳುಂಟೆ ?–
ಹಸುವಿನ ಹಾಲೀಗೆ ವಿಷವುಂಟೆ ?–
ವಿಷವುಂಟೆ ಸರ್ಪನಾ ಹೆಡೆಯ–
–ದಾಟದ ಮೇಲೆ ಭಯವುಂಟೆ ?– ||

ಮೂರನೆಯದಾಗಿ, ಕೊಂಕಣಿ ವ್ಯಾಕರಣದ ಮೇಲೂ ಕನ್ನಡವು ಪ್ರಭಾವವನ್ನು ಮಾಡಿರ ಬಹುದಾಗಿದೆ

ಕನ್ನಡವ ದೃಷ್ಟಿಯಿಂದ ಈ ವಿಚಾರವನ್ನು ಮಾಡಿರದ ಶ್ರೀ. ತಾಳಮಕ್ಕಿ ಅವರಿಗೆ, ಕೊಂಕಣಿ ವರ್ಣಮಾಲೆಯಲ್ಲೂ, ವ್ಯಾಕರಣ ಪ್ರಕ್ರಿಯೆಗಳಲ್ಲೂ, ಮರಾಠಿ ಭಾಷೆಯಲ್ಲಿರದ ಎಷ್ಟೋ ರೀತಿಗಳು ಕಂಡು ಬಂದವು. ಅವುಗಳಲ್ಲಿ ಹಲವನ್ನು ಸೂಚಿಸಿ, ಅವರು ಇಲ್ಲಿ ಯಾವ ಪ್ರಭಾವವಾಗಿದೆಯೆಂಬುದನ್ನು ವಿವರಿಸಿದೆ, ಅಲ್ಲಿಯೇ ಬಿಟ್ಟರು. ಒಂದೆರಡು ಸಲ, ಹತ್ತಿರದ ಕನ್ನಡ ಹೇಳಬೇಕೆಂದರೆ, ಹಲವು ಮಾತುಗಳು ವಿರುದ್ಧವಾಗಿ ತೋರಿದುವು. ಹೀಗಾಗಿ, ಈ ಪ್ರಕ್ರಿಯೆಗಳು ಮರಾಠಿ ರೀತಿಯುವಲ್ಲ -ಎಂದು ಮಾತ್ರ ಮಾತನ್ನು ಮುಗಿಸಿವರು.

ಹಾಗಾದರೆ, ಈ ವಿವರಗಳಾವು ನೋಡೋಣ:—

ವರ್ಣಮಾಲೆ:— ಸಂಸ್ಕೃತ ವರ್ಣಮಾಲೆಯಲ್ಲಿಲ್ಲದ ಹ್ರಸ್ವ 'ಎ' ಮತ್ತು 'ಒ' ಕಾರಗಳು ಕನ್ನಡ ದಲ್ಲಿವೆಯಷ್ಟೇ. 'ಹ್ರಸ್ವಮೆನಿಸಿದ ಎ, ಒ, ಸಹಿತಮ್' ಎನ್ನುವಲ್ಲಿ ಕೇಶಿರಾಜನು ಇವನ್ನು ದೇಶ್ಯವರ್ಣ ಗಳೆಂದು ಕರೆಯುತ್ತಾನೆ. ಈ ವರ್ಣಗಳು ಸಂಸ್ಕೃತದಲ್ಲಾಗಲೀ, ಇಲ್ಲವೆ ಸಂಸ್ಕೃತ ಜನ್ಯ ಇತರ ಭಾರತೀಯ ಭಾಷೆಗಳಲ್ಲಾಗಲೀ ಇಲ್ಲ.

ಆದರೆ, ಬಹುಮಟ್ಟಿಗೆ ಮರಾಠಿಯ ರೀತಿಯನ್ನು ಅನುಸರಿಸಿದ ಕೊಂಕಣಿಯಲ್ಲಿ ಮಾತ್ರ ಈ ಹ್ರಸ್ವ 'ಎ' 'ಒ'ಕಾರಗಳಿವೆ. ಉದಾ: ಕೆಸಾಚೊ–ಪೊಟಚಾ—ಇತ್ಯಾದಿ.

ಹಾಗಾದರೆ. ಈ ವರ್ಣಗಳು ಕೊಂಕಣಿಯಲ್ಲಿ ಯಾವ ರೀತಿ ಸೇರಿದುವು ? ಇವು ನೇರೆಯ ಕನ್ನಡದ ಮುಖಾಂತರ ಬಂದುವೆಂದು ಹೇಳಬೇಕಾದರೆ, ಶ್ರೀ. ತಾಳಮಕ್ಕಿಯವರಿಗೆ ಒಂದು ಸಮಸ್ಯೆ ಎದುರಿಸಿತು. ಅದೆಂದರೆ, ಸ್ವತಃ ಕನ್ನಡದಲ್ಲಿ ದೀರ್ಘ 'ಏ' ಮತ್ತು 'ಓ'ಕಾರಗಳುಳ್ಳ ವರ್ಣಗಳು ಕೊಂಕಣಿಗೆ ಬರುವಾಗ ತಾವೇ ಹ್ರಸ್ವವಾಗುತ್ತವೆಂದ. ಮೇಲೆ, ಈ ವರ್ಣಗಳೇ ಬಂದವೆಂದು ಹೇಗೆ ಹೇಳುವುದು ? ಉದಾಹರಣೆಗೆ, ಕನ್ನಡದ ದೀರ್ಘದ '**ತೇರು**' ಕೊಂಕಣಿಗೆ ಹೋದಾಗ 'ತೆರಾಕ' ಎಂದೂ, 'ಕೋಳು', 'ಕೊಳಾಕ' – ಎಂದೂ ಆಗುತ್ತವೆ. ಕನ್ನಡದ ಶಬ್ದಗಳೇ ಈ ರೀತಿ ಮಾರ್ಪಾಟು ಹೊಂದುತ್ತಿದ್ದರೆ, ಈ ವರ್ಣ ಕನ್ನಡದಿಂದ ಬಂದುವೆಂದು ಹೇಗೆ ಹೇಳುವುದು ? ಅಂತಲೇ, ಶ್ರೀ ತಾಳಮಕ್ಕಿ ಅವರು ಈ ರೀತಿ ಬರೆದರು:—

"It is not possible to say that this (Kannada) had its effect on Konkani. For, Kanarese words with such vowel-sounds adopted in Konkani follow the rules of the latter language and not of the former."

ನಿಜ; ಈ ಎರಡೂ ಮಾತುಗಳಲ್ಲಿ ಸತ್ಯಾಂಶವಿದೆ. ಕೊಂಕಣಿಯಲ್ಲಿ ಹ್ರಸ್ವ 'ಎ' 'ಒ'ಗಳಿಲ್ಲವೇನೋ ನಿಜ; ಅದರಂತೆ, ಕನ್ನಡ ದೀರ್ಘಗಳು ಅಲ್ಲಿ ಹ್ರಸ್ವವಾಗುತ್ತದೆಂಬುದೂ ನಿಜ.

ಆದರೆ, ಈ ಶಬ್ದಗಳನ್ನು ಹ್ರಸ್ವಮಾಡಿಕೊಂಡು ಕೊಂಕಣಿ ಸ್ವೀಕರಿಸುತ್ತದೆನ್ನುವುದಕ್ಕಿಂತ, ನೇರವಾಗಿ ಕನ್ನಡ ಪದಗಳನ್ನೇ ತೆಗೆದುಕೊಂಡು ಅನಂತರ ಹ್ರಸ್ವವನ್ನಾಗಿಸಿಕೊಳ್ಳುತ್ತದೆಂದು ಹೇಳುವುದು ಹೆಚ್ಚು ಸೂಕ್ತ. ಹೀಗಾಗಿ, ಎಷ್ಟೋ ಕನ್ನಡ ಹ್ರಸ್ವ, ಮತ್ತು ದೀರ್ಘ ವರ್ಣಗಳುಳ್ಳ ಪದಗಳು ಕೊಂಕಣಿಗೆ ಹೋಗುತ್ತವೆ. ಯಾಕಂದರೆ, ಸ್ವತಃ ಶ್ರೀ. ತಾಳವಃಕ್ಕಿ ಅವರೇ ಹೇಳುವಂತೆ, 'ವೇಗ' ಮತ್ತು 'ಸಾಲಭ್ಯಾ-ಕಾಂಕ್ಷೆಗಳು' ಇಡೀ ಕೊಂಕಣಿ ಭಾಷೆಯ ರೂಪವನ್ನೇ ಬದಲಿಸುವಷ್ಟು ಸಮರ್ಥವಾಗಿವೆ. ಕೊಂಕಣಿ ಕೇಳಿದವರಿಗೆ ಅದರ ಈ ನೂರು ಮೈಲಿನ (ವಾಯುವೇಗ) 'Top-Speed' ದ ಕಲ್ಪನೆ ಇರಲಿಕ್ಕೆ ಸಾಕು. ಹೀಗಾಗಿ, ಎಷ್ಟೋ ಕೊಂಕಣಿ ಶಬ್ದಗಳ ರೂಪಗಳು ಕೂಡ ಬದಲಿಸಿ, ಇಂಥ ಸಂಕೋಚ ಹೊಂದಿದ ಪದಗಳೇ ಹೊಸ ಧಾತುಗಳೋ, ನಾಮಪದಗಳೋ ಆಗಿ ಪರಿಣಮಿಸಿವೆ. ಉದಾಹರಣೆಗೆ, ಮರಾಠಿಯ 'ಸೋಡೂನ್' ಶಬ್ದವು, ಕೊಂಕಣಿಯ ಈ ವೇಗದ ಮೂಲಕ, 'ಸೋಡ್ನು' ಆಗಿ, ಅನಂತರ 'ಸೋಣ್ಣು'- ಆಯಿತು. 'ಧರೂನ್' 'ಧರ್ನು' ಆಯಿತು. 'ರಡೂನಯೆ' ಅಂತೂ, 'ರಡ್ನಯೆ' ಆಗಿ, 'ರಣ್ಣಯೆ' ಆಗಿಯೂ, 'ಪಡತ ನಾಹೀ', 'ಪಡ್ನಾ' ಆಗಿ 'ಪಣ್ಣಾ' ಆಗಿಯೂ ಪರಿಣಮಿಸಿದುವು. ಆದ್ದರಿಂದ, ಈ ವೇಗದ ಮೂಲಕ ಕೊಂಕಣಿ ಪ್ರಯೋಗಗಳು ರೂಪಾಂತರ ಹೊಂದುವಾಗ ಕನ್ನಡದ ಹ್ರಸ್ವ ವರ್ಣಗಳು ತುಂಬಾ ಸಹಾಯಮಾಡಿರಬೇಕು. ತತ್ಪರಿಣಾಮವಾಗಿ, ಕನ್ನಡದಲ್ಲಿಯಂತೆ, ಕೊಂಕಣಿಯಲ್ಲಿಯೂ ಹ್ರಸ್ವ, ದೀರ್ಘಗಳೆರಡೂ ಸೇರಿದುವು

೨. ಕೊಂಕಣಿಯಲ್ಲಿ, ಮರಾಠಿ ಕನ್ನಡಗಳಂತೆ 'ಚ, ಜ' ಗಳಿಗೆ ಎರಡು ಬಗೆಯ ಉಚ್ಚಾರಗಳಿವೆ. ಉದಾ: - ಚಟ್ನಿ, ಚಕ್ಕರ್, ಜಾಗಾ, ಇತ್ಯಾದಿ. ಕನ್ನಡದಲ್ಲಿ ರುಚಿ, ಚಟ, ರಾಚಪ್ಪ, ಜಂಭ, ಕಾಜು ಇತ್ಯಾದಿ ನೋಡಬಹುದು.

೩. ಕೊಂಕಣಿ ಶಬ್ದಗಳು ಮರಾಠಿಯಲ್ಲಿಯಂತೆ, ವ್ಯಂಜನಾಂತವಾಗಿರದೆ, ಸ್ವರಾಂತವಾಗಿರುವುದು ಹೆಚ್ಚು. ಮರಾಠಿಯಲ್ಲಿ ಕಮಳ್, ಜಗ್, ನೀಂದ್, ಝೋಪ್–ಮೊದಲಾಗಿ ಉಚ್ಚಾರಗಳಿದ್ದರೆ, ಕೊಂಕಣಿಯಲ್ಲಿ ಸಾಮಾನ್ಯವಾಗಿ ಈ ಶಬ್ದಗಳನ್ನು ದ್ರಾವಿಡ ಭಾಷೆಗಳಲ್ಲಿಯಂತೆ ಸ್ವರಾಂತವಾಗಿ ಮಾಡಿಕೊಳ್ಳುವದುಂಟು. ಅದರಂತೆ, ಕೊಂಕಣಿ ಸಪ್ತಮಿ ವಿಭಕ್ತಿ ಪ್ರತ್ಯಯವಾದ 'ಅಂತ'ವು, ನಡುಗನ್ನಡ ಕನ್ನಡ ಸಪ್ತಮಿಯಂತೆ, 'ಉ'ಕಾರಾಂತವಾಗುವದುಂಟು. ಉದಾ: ಪಾನಾಂತು, ಝಾಡಾಂತು. ಇ.

೪. ಮರಾಠಿಯ ಕ್ರಿಯಾರೂಪಗಳು ಸಾಮಾನ್ಯವಾಗಿ 'ಓ' ಕಾರಾಂತವಾಗಿರುತ್ತವಷ್ಟೇ. ಉದಾ:- ಧಾವತೋ; ಪಾಹತೊ; ಕರತೊ ಇತ್ಯಾದಿ. ಆದರೆ, ಇವೇ ರೂಪಗಳು ಕೊಂಕಣಿಯಲ್ಲಿ 'ಧಾವತಾಂ' 'ಪಾಹತಾ' 'ಕರತಾಂ'—ಮೊದಲಾಗಿ ಆಗುವುದುಂಟು. ಹಳಗನ್ನಡದಲ್ಲಿ ಮೊದಮೊದಲು ಇದೇ ರೀತಿ, ಕ್ರಿಯಾರೂಪಗಳು, 'ಮಾಡಿದೊನ್' 'ಮಾಡಿದಾನ್'; 'ನೋಡಿದೊ' 'ನೋಡಿದಾನ್' ಎಂದು

ಮೊದಲಾಗಿ ಆಗುತ್ತಿದ್ದುದನ್ನು ನೆನೆದರೆ, ಇಲ್ಲಿಯೂ ಕನ್ನಡ ಪ್ರಭಾವವು ಆಗಿರಬಹುದಷ್ಟೇ—?........ ವಿಚಾರಮಾಡಬೇಕು.

೫. ಕನ್ನಡದಲ್ಲಿ 'ಐ' 'ಔ' ಗಳನ್ನು 'ಎಯ್' (ಅಯ್) 'ಅವ್' 'ಒವ್' ಗಳಾಗಿ ಬರೆಯುವುದು ವ್ಯಾಕರಣಸಮ್ಮತವಷ್ಟೇ. ಉದಾ – ಕೈ–ಕೆಯ್; ಮೈ–ಮೆಯ್; ಔಂಕು–ಅವುಂಕು, ಕೌಂಕುಳ್–ಕವುಂಕುಳ್–ಇತ್ಯಾದಿ. ಹಾಗೇ, ಕೊಂಕಣಿಯಲ್ಲೂ ಅವಮಾನವನ್ನು, 'ಔಮಾನ'ವಾಗಿಯೂ, ಅವಯವವನ್ನು 'ಔಯವ'ವೆಂದೂ, ಬರೆಯಬಹುದು.

೬. ವಿಭಕ್ತಿಪ್ರತ್ಯಯಗಳ ದೃಷ್ಟಿಯಿಂದ ಮರಾಠಿಯಲ್ಲಿಲ್ಲದ ಹಲವು ಪ್ರತ್ಯಯಗಳು ಕೊಂಕಣಿಯಲ್ಲಿದ್ದುದನ್ನು ಕಾಣಬಹುದು. ಉದಾಹರಣೆಗೆ, ಮರಾಠಿಯಲ್ಲಿ ದ್ವಿತೀಯ ಮತ್ತು ಚತುರ್ಥಿಗಳನ್ನು ಸೂಚಿಸುವುದಕ್ಕೆ 'ಲಾ' ಪ್ರತ್ಯಯವನ್ನು ಉಪಯೋಗಿಸುವದುಂಟು. ಉದಾ: – ರಾಮಾಲಾ ಸಾಂಗ್; ರಾಮಾಲಾ ದೇ—ಇತ್ಯಾದಿ. ಆದರೆ, ಈ ಚತುರ್ಥಿ ವಿಷಯದಲ್ಲಿ ಕೊಂಕಣಿ ಭಾಷೆಯು ಮರಾಠಿಯನ್ನು ಅನುಸರಿಸಿಲ್ಲ. ಕೊಂಕಣಿಯಲ್ಲಿ ಈ ಚತುರ್ಥಿ ಪ್ರತ್ಯಯವು 'ಕ' ಎಂದು ಬರುತ್ತದೆ. ಈ ವೈಶಿಷ್ಟ್ಯವನ್ನು ಸೂಕ್ಷ್ಮವಾಗಿ ಕಂಡ ಶ್ರೀ. ತಾಳಮುಕ್ಕಿ ಅವರು ಮರಾಠಿ ಚತುರ್ಥಿಗೆ ಹೊಂದದ ಈ ಕೊಂಕಣಿ 'ಕ' ಪ್ರತ್ಯಯವು ಬಹುಶಃ ಹಿಂದೀ 'ಕೊ'ದಿಂದ ಬಂದಿರಬೇಕೆಂದು ಸೂಚಿಸಿದರು. "The Marathi suffix of 'ಲಾ' of Accusative and Dative cases, becomes 'ಕ' in Konkani.... and therefore, nearest the Hindi 'ಕೊ'" ಎಂದು ಶ್ರೀ. ತಾಳಮುಕ್ಕಿ ಅವರು ಹೇಳಿದರು. ಆದರೆ, ನಾವು ಈ ವರೆಗೆ ನೋಡಿದ ಜಾನಾಂಗಿಕ, ಐತಿಹಾಸಿಕ, ಮತ್ತು ಕೋಶವಿಷಯಕ ಸಂಬಂಧವನ್ನು ಪರಿಶೀಲಿಸಿದರೆ, ಕೊಂಕಣಿ ಭಾಷೆಯ ಈ ಚತುರ್ಥಿಯ 'ಕ' ಪ್ರತ್ಯಯವು 'ಕನ್ನಡ'ದ ಚತುರ್ಥಿಯ 'ಕೆ' ಪ್ರತ್ಯಯಕ್ಕೆ ಹೆಚ್ಚು ಸಮೀಪದ್ದೆಂದು ಹೇಳಬಹುದಲ್ಲವೇ? ಕೊಂಕಣಿಯ ಈ ವಾಕ್ಯಗಳ ಧ್ವನಿಯೂ ಅದನ್ನೇ ಸೂಚಿಸುತ್ತದೆ. ಉದಾ: – ಆಕುಳ್ಳೇಲಿ ಗಾಯಿ **ಅಪ್ಪಾಭಟ್ಟಾಕ್** ದಾನ'; 'ಆಶಾ ಆಶಿಲ್ಯಾ ಸಾ**ಧೂಕ,** ಮೀಶ್ಯೋ ಅಶಿಲ್ಯಾ ಸನ್ಯಾ**ಶಾಕ**' "ದಮಡಿ ಮಾ**ಲಾಕ** ದುಗಾಣೀ ದಲಾಲಿ', 'ಏಕ ಭತ್ತಾ**ಕ** ಏಕು **ತಾಂ**ಮೊಳು' ಇತ್ಯಾದಿ 'ಅಪ್ಪಾಭಟ್ಟಗ ದಾನ'. 'ಸಾಧುಗೆ (ಕೆ)' 'ಸನ್ಯಾಸಿಗೆ (ಕೆ)' 'ಭತ್ತ**ಕೆ**' –ಇತ್ಯಾದಿ. ಮೇಲಿನ 'ಗೆ' ಕೂಡ 'ಕೆ' ದ ಇನ್ನೊಂದು ರೂಪವೆಂದೂ, ಕನ್ನಡದ ಈ 'ಕೆ' ಕೂಡ 'ಕೆಯ್' ಶಬ್ದದ ಸವಕಳಿ ರೂಪವೆಂದೂ ಇಂದು ಒಪ್ಪಿದ ಮಾತು. ಆದ್ದರಿಂದ ಕೊಂಕಣಿಯ 'ಕ' ಕನ್ನಡದ 'ಕೆ'ದ ರೂಪವೆಂದೇ ಹೇಳಬೇಕು.

ಇನ್ನು, ಈ 'ಕ' ಪ್ರತ್ಯಯವು ಹಿಂದೀ ಪ್ರಭಾವವೇ ಎಂದು ಒಪ್ಪಿದರೂ, ಹಿಂದಿಯ ಪ್ರಭಾವ ಕೊಂಕಣಿಯ ಮೇಲೆ ಹೇಗಾಯಿತು? ಹಿಂದಿ ಕೊಂಕಣಿಗಳ ಸಂಬಂಧಕ್ಕಿಂತ ಕನ್ನಡ–ಕೊಂಕಣಿಗಳ ಸಂಬಂಧವೇ ಪುರಾತನದ್ದು. ಹಿಂದಿಯ ಮೇಲಾದ ಈ ಪ್ರಭಾವವು ಕೂಡ ದ್ರಾವಿಡದ್ದೇ ಇದೆಯೆಂದು ಕೆ. ರಾಮಕೃಷ್ಣಯ್ಯನವರ ಮತ.

೭. ಪಂಚಮಿಯಲ್ಲಿಯ ಮರಾಠಿಯ 'ಹೂನ್' ಎನ್ನುವುದು ಕೊಂಕಣಿಯಲ್ಲಿರದೆ, 'ಥಾವೂನ್' 'ಥಾವುನು'– ಎಂದಿದೆ. ಈ ಬಗ್ಗೆ ಶ್ರೀ. ತಾಳಮುಕ್ಕಿಯವರು "Probably, it is a combination of ಅಂತ್ and ಹೂನ್, the 'ಹ' being transferred to 'ತ' in pronunciation" ಎಂದು ಹೇಳುತ್ತಾರೆ. ಹೀಗಿರುವದೇ ಆದರೆ, ಕನ್ನಡದ ಪಂಚಮಿಯಲ್ಲೂ ಕೂಡ, ತೃತೀಯೆಯ ಇಂ, ಇಂದ, ಇಂದೆ ಅಲ್ಲದೆ, 'ಅತ್ತಣ+ಇಂದೆ' 'ಅಲ್ಲಿ+ಇಂದೆ'–-ಎನ್ನುವ ಪ್ರಯೋಗಗಳನ್ನೂ ಗಮನಿಸಬಹುದಲ್ಲವೇ?

೮. ಕೊಂಕಣಿಯ ಪ್ರೇರಣಾರ್ಥಕದ 'ನುಡಿಸುತಾ' - ಮೊದಲಾದ ರೂಪಗಳಲ್ಲಿ ಕನ್ನಡದ ಪ್ರೇರಣಾರ್ಥಕದ 'ಇಸು'ವನ್ನೇ ಕಾಣಬಹುದೇ?

ಹೀಗಾಗಿ, ಗಾದೆ–ಮಾತುಗಳು, ಲಾಲಿ–ಜೋಗುಳಗಳು, ಕೋಶದಲ್ಲಿಯ ಶಬ್ದಗಳು, ಮತ್ತು ವ್ಯಾಕರಣ ಪ್ರಕ್ರಿಯೆಯ ದೃಷ್ಟಿಯಿಂದ ಸಾಕಷ್ಟು ಮಟ್ಟಿಗೆ ನಾವು ಕೊಂಕಣಿಯ ಮೇಲಾದ ಕನ್ನಡ ಪ್ರಭಾವವನ್ನು ಕಾಣಬಹುದಾಗಿದೆ. ಆದರೆ, ಈ ಮೇಲಿನ ವಿಚಾರದಲ್ಲಿ ಒಂದು ಭಾಷೆಯ ಪ್ರಭಾವವು ಮತ್ತೊಂದರ ಮೇಲೆ ಆಗಿದೆಯೆಂದು ಹೇಳುವಲ್ಲಿ ಎರಡು ಮಾತುಗಳನ್ನು ಮಾತ್ರ ನಾವು ಸುಸ್ಪಷ್ಟವಾಗಿ ಲಕ್ಷ್ಯದಲ್ಲಿಡಬೇಕು.— ಮೊದಲನೆಯದಾಗಿ— ಈ ರೀತಿಯ ಪ್ರಭಾವವಾಗುವುದು ಪರಸ್ಪರ ಸಂಪರ್ಕದ ಮೂಲಕ ಅ-ನಿವಾರ್ಯ; ಅಗತ್ಯ. ಇದರಲ್ಲಿ ಯಾವ ಮೇಲು–ಕೀಳಿನ ಭಾವನೆಯೂ ಇರಲಾಗದು. ಎರಡನೆಯದಾಗಿ— ನಾವು ಮೇಲೆ ಆಧಾರವಾಗಿ ತೆಗೆದುಕೊಂಡ ಕೊಂಕಣಿಯಲ್ಲಿ ಬಹುಶಃ ಒಂದು ಭಾಗದ ಕೊಂಕಣಿಯನ್ನೇ ಹೆಚ್ಚಾಗಿ ತೆಗೆದು ಕೊಂಡಿದ್ದೇವೆ. ಇವನ್ನು ಬಿಟ್ಟುಳಿದ ಕೊಂಕಣಿ ಭಾಷೆಯಲ್ಲಿ ಬೇರೆ ವಿಧದ ಪ್ರಭಾವಗಳನ್ನು ಕಾಣಬಹುದು. ಆದರೆ, 'ಕೊಂಕಣಿ'ಯೆಂದೆನಿಸಿಕೊಂಡ ಒಂದು ಬಗೆಯ ಭಾಷೆಯಾದರೂ ಈ ರೀತಿ ಕನ್ನಡ ಸಂಪರ್ಕಕ್ಕೆ ಒಳಗಾಗಿದ್ದರೆ, ಈ ಎರಡೂ ಭಾಷೆಗಳಿಗಿರುವ ಪ್ರಾಚೀನ ಕಾಲದ ಸಂಬಂಧ–ಸಂಪರ್ಕಗಳನ್ನು ಕಾಣ ಬಹುದಾಗಿದೆ.

ಕನ್ನಡ–ಗುಜರಾಥಿ

ಇಂದು ಈ ಪ್ರಶ್ನೆಯ ವಿಚಾರ ಮಾಡುವುದೇ ಆಶ್ಚರ್ಯವನ್ನುಂಟುಮಾಡಬಹುದು. ಯಾಕೆಂದರೆ, ಎಲ್ಲಿಯ ಗುಜರಾಥ! ಎಲ್ಲಿಯ ಕರ್ನಾಟಕ! ಯಾವ ಬಾದರಾಯಣ ಸಂಬಂಧ—ಎಂದು ಸಕೃದ್ದರ್ಶನಕ್ಕೇ ಎನಿಸುವುದು ಸ್ವಾಭಾವಿಕವಾಗಿದೆ.

ಆದರೆ, ಒಂದು ಕಾಲಕ್ಕೆ ಪ್ರತಿಯೊಬ್ಬ ಕನ್ನಡ ಅರಸನ ಹೆಮ್ಮೆಯು 'ದ್ರವಿಡ-ಆಂಧ್ರ-ಚೇರ-ಚೋಳ ಗುರ್ಜರ–ನೇಪಾಳ–ವಂಗ–ಕಳಿಂಗ'ರನ್ನು ಜಯಿಸಬೇಕೆಂದಿತ್ತೆಂಬುದನ್ನು ನೆನೆದರೆ, ಈ ಪ್ರಶ್ನೆ ಅಷ್ಟೇನೂ ಅಸಂಭವವಾಗಿ ಕಾಣುವದಿಲ್ಲ. ಅಷ್ಟೇ ಅಲ್ಲ; ನಾವು ಈ ಮೊದಲೇ ನೋಡಿದ ಪ್ರಕಾರ ದಕ್ಷಿಣದ ದ್ರಾವಿಡರು ಮೊದಲು ಸಿಂಧದ ಮೊಹೆಂಜೊದಾರೊ ಹರಪ್ಪಗಳಲ್ಲಿದ್ದರಲ್ಲದೆ, ಅದಕ್ಕೂ ಉತ್ತರಭಾಗದಲ್ಲಿದ್ದರೆಂಬುದನ್ನು ಕಂಡಿದ್ದೇವೆ. ಕುಮಾರಿಲಭಟ್ಟನು ಮರಾಠಿ ಮತ್ತು ಗುಜರಾಥಿಗಳನ್ನು ಪಂಚದ್ರಾವಿಡವೆಂದು ಕರೆದಿದ್ದಾನೆ ಎಂಬುದನ್ನು ಈ ಮೊದಲೇ ನೋಡಿದ್ದೇವೆ.

ಡಾ. ಸಾಲಿತ್ತೊರೆ ಅವರ ಪ್ರಕಾರ ಮುಂಬಯಿಯ ಸುತ್ತುಮುತ್ತಲಿರುವ 'ಬೋರಿವ್ಲಿ' 'ಕಂಡಿವ್ಲಿ' 'ಲೋಣಾವಳಾ'—ಮೊದಲಾದ ಪ್ರದೇಶಗಳು ಕನ್ನಡ ಹೆಸರನ್ನೇ ಸೂಚಿಸುತ್ತವೆ. ಅವರ ಪ್ರಕಾರ ಇವು ಮೊದಲು 'ಬೋರ–ಪಳ್ಳಿ' 'ಕಾಡ–ಪಳ್ಳಿ' 'ಲೋಣ–ಪಳ್ಳಿ'–ಯಾಗಿದ್ದವು. ಈ ಹೆಸರುಗಳಲ್ಲಿಯ ಉತ್ತರ ಪದವಾದ 'ಪಳ್ಳಿ' ಶುದ್ಧ ಕನ್ನಡ. ರೆವರಂಡ್ ಶರ್ಟ ಅವರು ಸಿಂಧಿ ಭಾಷೆಯಲ್ಲಿ ಕೂಡ ಇರುವ ಅನೇಕ ದ್ರಾವಿಡ ಶಬ್ದಗಳನ್ನು ಎತ್ತಿತೋರಿಸಿದ್ದಾರೆ.*

ಡಾ. ಸ್ಟೆನ್ ಕೋನೊ ಅವರ ಪ್ರಕಾರ, ನಾವು ಈ ಮೊದಲೇ ನೋಡಿದ ಹಾಗೆ, "The substratum over which the Marathi and Gujarathi have spread is Dravidian."

---

* Ind. Ant. VII, 295.

ಡಾ. ಗ್ರೀರ್ಸನ್ನರೂ ಈ ಅಭಿಪ್ರಾಯವನ್ನೇ ಅನುಮೋದಿಸುತ್ತಾರೆ. ಉತ್ತರ ಹಿಂದುಸ್ಥಾನದ ಚಿಕ್ಕ ಮಕ್ಕಳು, ನಮ್ಮಲ್ಲಿಯ ಚಿಣಿ-ದಾಂಡಿನ ಹಾಗೆ, "ಗಿಲ್ಲಿ-ದಾಂಡು"—ಎಂದು ಆಟವಾಡುತ್ತಾರಷ್ಟೇ. ಆಗ ಮಧ್ಯದಿಂದ ಆ 'ಗಿಲ್ಲಿ'ಯ ವರೆಗೆ ಎಣಿಸುವ ಅಂಕಿಗಳೆಲ್ಲ ಗುಜರಾಥಿಯಲ್ಲಿರದೆ, ತೆಲುಗಿನವಿವೆಯೆಂದು ಶ್ರೀ. ಜಯಚಂದ್ರರು ಹೇಳುತ್ತಾರೆ.* ಈ ಗುಜರಾಥಿ ಹುಡುಗರು ಎಣಿಸುವ ರೀತಿಯೆಂದರೆ, ವಕಟ, ರೇಂಡ್, ಮೂಡ, ನಾಲ, ಅಂಕಿ, ಬಂಗಿ, ಜಕುರ—ಇತ್ಯಾದಿ. ಅನಂತರ, ಪುನಃ ಜಕುರದಿಂದ 'ವಕಟ' 'ರೇಂಡ್' ಸುರುವು. ಲಾಹೋರದಲ್ಲೂ ಕೂಡ ಬಾಲಕರು ಇದೇ ರೀತಿ ಎಣಿಸುತ್ತಾರೆಂದು ಜಯಚಂದ್ರರು ಹೇಳುತ್ತಾರೆ.

ಈ ಮಾತಂತೂ ಹೇಗೇ ಇರಲಿ; ಇತಿಹಾಸ ಕಾಲದಿಂದಂತೂ ಕಾಠಿಯಾವಾಡ, ಗುಜರಾಥ ಮತ್ತು ಕನ್ನಡಗಳ ಸಂಪರ್ಕವು ಸಾಕಷ್ಟು ಗಾಢವಾಗಿದ್ದಿತೆಂದು ಅನೇಕ ಶಾಸನಗಳೂ, ಉಲ್ಲೇಖಗಳೂ ಸಾರಿ ಹೇಳುತ್ತವೆ.

"ಶೂದ್ರಕನೆಂಬ ರಾಜನು ವೀರವರನೆಂಬ ತನ್ನ ಸೇವಕನಿಗೆ ಕರ್ಣಾಟ-ಲಾಟ ಯುಕ್ತವಾದ ರಾಜ್ಯವನ್ನು ಒಪ್ಪಿಸಿದ"ನೆಂದು ಗುಣಾಢ್ಯನ ಬೃಹತ್ಕಥೆಯಲ್ಲಿದೆ. ಜೈನ ತೀರ್ಥಂಕರ ಮಹಾವೀರರ ಧರ್ಮವು ಗುಜರಾಥ ಕರ್ನಾಟಕಗಳಲ್ಲಿ ಮಾತ್ರವೇ ಇಂದಿಗೂ ಹೆಚ್ಚು ಪ್ರಚಲಿತವಿದೆ. ಎಲ್ಲ ವರ್ಗದ ಜೈನರಿಗೂ ಕನ್ನಡದ ಶ್ರವಣಬೆಳಗೊಳ, ಕಾರ್ಕಳ, ವೇಣೂರುಗಳೇ ಯಾತ್ರಾಸ್ಥಳಗಳಾಗಿವೆ. ಮಹಾವೀರರನ್ನು 'ನಿಗಂಥ-ನಾಟಪುತ್ತ'ರೆಂದು ಸಂಬೋಧಿಸಲಾಗಿದೆ. ಇಲ್ಲಿಯ 'ನಾಟ' ಎಂದರೆ 'ಕರ್ನಾಟಕ'ವೆಂದು ಹಲವರ ಅಭಿಪ್ರಾಯ. 'ವಟೋದರ' ಎಂದರೆ 'ಬಡೋದೆ'ಯಲ್ಲಿ ದೊರಕುವ ಒಂದು ತಾಮ್ರಪಟದಲ್ಲಿ 'ವೇರೂಳ'ವನ್ನು, 'ಏಲಾಪೂರ' ಎಂದು ಸಂಬೋಧಿಸಲಾಗಿದೆ. ಶ್ರೀ. ನಾ. ಶ್ರೀ. ರಾಜಪುರೋಹಿತರ ಪ್ರಕಾರ ಕನ್ನಡ 'ಎಲ್ಲಾಪುರ'ವೇ 'ಏಲಾಪುರ 7 ಏಲೂರ 7 ಏರೂಳ 7 ವೇರೂಳ್'ವಾಯಿತೆಂದು ಅಭಿಪ್ರಾಯ. ('ಮಹಾರಾಷ್ಟ್ರದ ಕರ್ನಾಟಕ' ಕೇಸರಿ, ೧೯೧೨-೧೩).

ಸೌರಾಷ್ಟ್ರದ ಸೋಮನಾಥನು ದಕ್ಷಿಣಕ್ಕೆ ಬಂದು 'ಪುಲಿಗೆಱೆ' (ಲಕ್ಷ್ಮೇಶ್ವರ) ಸೋಮನಾಥಗಳಲ್ಲಿ ನೆಲಸಿದನೆಂದು ಐತಿಹ್ಯ. ರಾಷ್ಟ್ರಕೂಟ ೩ನೆಯ ಕೃಷ್ಣನ ಒಂದು ತಿಳಿ-ಗನ್ನಡ ಶಾಸನವು ಉತ್ತರದ 'ಜೂರಾ' ಎಂಬಲ್ಲಿ ದೊರಕುತ್ತದೆ. ಈ ರಾಷ್ಟ್ರಕೂಟರ ಒಂದು ಶಾಖೆಯೇ ಗುಜರಾಥದಲ್ಲಿ ಆಳುತ್ತಿದ್ದಿತು. ನವಸಾರಿ ಮತ್ತು ಬಡೋದೆಗಳಲ್ಲಿ ದೊರೆತ ತಾಮ್ರಪಟಗಳ ಭಾಷೆಯು ಸಂಸ್ಕೃತವಾಗಿದ್ದರೂ, ಅವಕ್ಕೆ ಹಾಕಿದ ರಾಷ್ಟ್ರಕೂಟ ಅರಸರ ಒಪ್ಪ ಮಾತ್ರ **ಕನ್ನಡದಲ್ಲೇ ಇದೆ.**—"ಮತಮ್ ಮಮ ಶ್ರೀಧ್ರುವರಾಜಸ್ಯ", "ಶ್ರೀಕರ್ಕರಾಜ ಸುತಸ್ಯ ಯದ್ ಉಪರಿಲಿಖಿತಮ್" ಇತ್ಯಾದಿ. ೨ನೆಯ ಧ್ರುವನ ಬಡೋದೆ ಶಾಸನಗಳಲ್ಲಿ 'ಪೂಸಿಲಾ-ವಳ್ಳಿ' 'ವಿನ್-ಹುಚ-ವಳ್ಳಿ' ಎಂದು ಹೆಸರುಗಳಿವೆ. ಕರ್ನಾಟಕದಲ್ಲಿ ಎಂದೋ ಬಂದು ನೆಲಸಿದ ಗೌರಕಾಯದ ಸುಂದರಾಕೃತಿಯ 'ಪಟ್ಟೆಗಾರರು' ತಾವು ಮೂಲತಃ ಮಾಂಡವಗಡದಿಂದ ಕಾಠೆವಾಡ-ಗುಜರಾಥಗಳ ಮಾರ್ಗವಾಗಿ ಬಂದವರೆಂದು ಹೇಳಿಕೊಳ್ಳುತ್ತಾರೆ. ಅವರ ಭಾಷೆಯಲ್ಲಿಯೂ ಕೂಡ ನಾವು ಇಂದಿಗೂ ಈ ಗುಜರಾಥಿ ಅಂಶವನ್ನು ಎಷ್ಟೋ ಮಟ್ಟಿಗೆ ಕಾಣಬಹುದಾಗಿದೆ.... ಗುಜರಾಥದ ಜಯಸಿಂಹನ ಎರಡನೆಯ ಮಗನ ಹೆಸರು 'ಮಂಗಲ**ರಸ**-ರಾಜ' ಎಂದು ಕನ್ನಡವಿದೆ. ಲಾಟ ದೇಶದ ಹಲವು ಪ್ರಾಚೀನ ಬ್ರಾಹ್ಮಣರ ಹೆಸರುಗಳು ಶುದ್ಧ ಕನ್ನಡ ರೀತಿಯನ್ನೇ ತೋರಿಸುತ್ತವೆ.

* Andhra Historical Journal, 1933.

'ರಾಣಪಭಟ್ಟ ಸುತಾಯ ಪ್ರಭಾಕರಭಟ್ಟಾಯ'
'ಶ್ರೀವೆನ್ನಪಭಟ್ಟ ಸುತಾಯ ಸಿದ್ಧಪಭಟ್ಟಾಯ'
'ಮಹಾದೇವಸ್ಯ ಸುತಾಯ ನಾಗವರ್ಮಾಯ' ಇತ್ಯಾದಿ.

ಇಲ್ಲಿಯ ರಾಣಪಭಟ್ಟ-ವೆನ್ನಪಭಟ್ಟ-ಮೊದಲಾದುವು ಕನ್ನಡವನ್ನೇ ತೋರಿಸುತ್ತವೆ. ಇಂದಿಗೂ, ಗುಜರಾಥದಲ್ಲಿ ಪ್ರಸಿದ್ಧ ಸ್ಥಳಗಳಾದ ಬಾರಡೋಲಿ, ಮೊದಲಾದವುಗಳಲ್ಲಿ 'ಬಾರಡ-ಪಲ್ಲಿಕಾ' ಎಂದು ಮೊದಲಾಗಿ ಕನ್ನಡ ಅಂಶವನ್ನು ಕಾಣಬಹುದೆಂದು ಪಂಡಿತರ ಅಭಿಪ್ರಾಯ. ಐತಿಹಾಸಿಕ ಕಾಲದಲ್ಲಿ, ಕಟಚ್ಛುರಿ ಬುದ್ಧರಾಜನನ್ನು ಸೋಲಿಸಿ ಚಲುಕ್ಯ ಮಂಗಳೀಶನು ಲಾಟ ದೇಶವನ್ನು ತನ್ನ ವಶಮಾಡಿಕೊಂಡನು. ನಂತರ, ಕ್ರಿ. ಶ. ೬೩೦ರ ಸುಮಾರು ಎರಡನೆಯ ಪುಲಿಕೇಶಿಯು ಉತ್ತರದ ಹರ್ಷವರ್ಧನನನ್ನು ಸೋಲಿಸಿದಾಗ ಸಮಗ್ರ ಲಾಟವಿಭಾಗವು ಇವನ ಅಂಕಿತಕ್ಕೆ ಒಳಗಾಯಿತು. ಡಾ. ಸಂಕಾಲಿಯಾ ಅವರು ಹೇಳುವಂತೆ ಈ ಕಾಲದಲ್ಲಿ ಕರ್ನಾಟಕ ಸಂಸ್ಕೃತಿಯ ಪ್ರಭಾವವು ಗುಜರಾಥದ ಮೇಲೆ ಸಾಕಷ್ಟಾಯಿತು. "Under it Gujerath might have been influenced by the Kanarese culture' * ಈ ಮೊದಲು ಕೂಡ ಈ ಭಾಗವಲ್ಲಿ ಆಳಿದ ಸೇಂದ್ರಕ ವಂಶದವರು ಕನ್ನಡಿಗರಾಗಿದ್ದರೆಂದು ಡಾ. ಬ್ಯುಹ್ಲರ ಅವರ ಅಭಿಪ್ರಾಯ. † ಚಲುಕ್ಯರ ನಂತರ ಕ್ರಿ. ಶ. ೭೪೦ ರ ಸುಮಾರು ಲಾಟ ಪ್ರದೇಶವು ರಾಷ್ಟ್ರಕೂಟರ ಕೈಸೇರಿತು. ರಾಷ್ಟ್ರಕೂಟರು ಕರ್ನಾಟಕದ ಮಳಖೇಡಿನವರು. ಗುಜರಾಥವು ಕ್ರಿ. ಶ. ೭೪೦ ರಿಂದ ಕ್ರಿ. ಶ. ೯೭೪ರ ವರೆಗೆ-ಅಂದರೆ ಸುಮಾರು ೨೩೪ ವರ್ಷಗಳವರೆಗೆ ಇವರ ಅಧೀನದಲ್ಲಿತ್ತು. ಇವರ ಒಂದು ವಂಶವೇ ಅನಂತರ ಗುಜರಾಥದಲ್ಲಿ ರಾಜ್ಯವಾಳಿತು. ಚಲುಕ್ಯ ಕುಮಾರಪಾಲನು ತನ್ನ 'ಅಮಾರಿಘೋಷಣ'ವನ್ನು (ಅಂದರೆ ಪ್ರಾಣಿಹತ್ಯ ಮಾಡಬಾರದೆಂಬ ಘೋಷಣೆಯನ್ನು) 'ಕರ್ನಾಟಕ ಕೊಂಕಣ, ಕಿರರಾಷ್ಟ್ರ, ಮೇವಾರ'ಗಳಲ್ಲಿ ಸಾರಿದನು. ಮೈಸೂರು ಪ್ರಾಂತದಲ್ಲಿ ಇಂದಿಗೂ ಇರುವ "ಜಟ್ಟಿ" ಎಂಬ ಕುಸ್ತಿಯ ಜಾತಿಯವರು ಕ್ರಿ. ಶ. ೧೨-೧೩ ರಲ್ಲಿ ಗುಜರಾಥದಿಂದ ಕರ್ನಾಟಕಕ್ಕೆ ಹೋದವರೆಂದು ಶ್ರೀ. ಸಂದೇಸರ ಅವರ ಅಭಿಪ್ರಾಯ. ಅವರ ಪ್ರಕಾರ ಈ "ಜಟ್ಟಿ"ಗಳು ಆಡುವ ಭಾಷೆಯಲ್ಲಿರುವ ಅನೇಕ ವಿದೇಶೀಯ ಅಂಶಗಳು ಗುಜರಾಥಿ ಭಾಷೆಗೆ ಸೇರಿದುವು. ‡

ಗುಜರಾಥದ ಜಾನಪದಗೀತಗಳಲ್ಲಿ "ಜಸಮಾ ಓಡಣ ಆಣೆ ಸಧರಾ ಜೇಸಂಗ" ಎಂಬ ಗೀತವು ತುಂಬಾ ಪ್ರಸಿದ್ಧವಿದೆ. "ಸಧರಾ ಜೇಸಂಗ" ಎಂಬ ಅರಸನು ತನ್ನದೊಂದು ಕೆರೆಯನ್ನು ಕಡಿಸುತ್ತಿರುವಾಗ, ಅಲ್ಲಿ ಕೆಲಸವನ್ನು ಮಾಡುತ್ತಿರುವ "ಜಸಮಾ ಓಡಣ" ಎಂಬ ಸ್ತ್ರೀಯಲ್ಲಿ ಅನುರಕ್ತನಾಗಿ ಅವಳನ್ನು ವಶಪಡಿಸಿಕೊಳ್ಳಲು ಯಾವ ರೀತಿ ಯತ್ನಿಸಿದನೆಂಬುದನ್ನೂ, ಆ ಸ್ತ್ರೀಯು ಅವನ ಪ್ರೀತಿಯನ್ನು ಯಾವ ರೀತಿ ತಿರಸ್ಕರಿಸಿದಳೆಂಬುದನ್ನೂ ವರ್ಣಿಸಲಾಗಿದೆ. ಇಲ್ಲಿ ಬರುವ "ಸಧರಾ ಜೇಸಂಗನು" ಕ್ರಿಸ್ತಶಕ ೧೧ರಲ್ಲಿ ಆಳಿದ ಚಲುಕ್ಯ ಸಿದ್ಧರಾಜ ಜಯಸಿಂಹನು. ಅವನು ಕಾಮಿಸಿದ ಸ್ತ್ರೀ, ಹೆಸರೇ ಸೂಚಿಸುವ ಹಾಗೆ, "ಯಶವ್ವಾ ಒಡ್ಡಣ (ತಿ)" ಎಂಬ ಕನ್ನಡಿತಿಯೆಂದೂ ಪಂಡಿತರ ಅಭಿಪ್ರಾಯ. + ಕನ್ನಡಿಗರಾದ ಚಲುಕ್ಯ ರಾಜರ ಕಾಲದಲ್ಲಿ ಅನೇಕ ಕೂಲಿ-ಕುಂಬಳಿಯವರೂ ಗುಜರಾಥಕ್ಕೆ ಹೋಗಿರಬಹುದೆಂದು ಊಹಿಸಬಹುದಲ್ಲವೇ ?—

* A. G. P. 18. † ಅದೇ. ಪು 18
‡ "ಜೇಠ್ಮಿಮಲ್ಲ ಜ್ಞಾತಿ ಆಣೆ ಮಲ್ಲಪುರಾಣ"—ಭೋಗಿಲಾಲ ಸಂದೇಸರ.
+ G. L. L. Vol. I; Pp 60-63.

ಒಟ್ಟಾರೆ, ಮೇಲಿನ ವಿವರಣೆಯಿಂದ ಗುಜರಾಥ ಕರ್ನಾಟಕಗಳ ಸಂಪರ್ಕವು ಕ್ರಿ. ಶ. ಪ್ರಾರಂಭದಿಂದ ಕ್ರಿ. ಶ. ೧೨ರ ವರೆಗಂತೂ ತೀರ ಗಾಢವಾಗಿದ್ದಿತೆಂದು ಸ್ಪಷ್ಟವಾಗಿ ಕಂಡುಬರುತ್ತದೆ.

ಹಾಗಾದರೆ, ಇಷ್ಟು ದೀರ್ಘಕಾಲ ಒದಗಿದ ಸಂಪರ್ಕದ ಮೂಲಕವಾಗಿ ಗುಜರಾಥಿಯ ಮೇಲಾದ ಕನ್ನಡ ಪ್ರಭಾವವೇನು ಎಂಬುದನ್ನು ನೋಡೋಣ:—

ರಾಜಕೀಯ

ರಾಜಕೀಯ ಆಧಿಪತ್ಯದ ದೃಷ್ಟಿಯಿಂದ ಚಲುಕ್ಯರು ಈ ಮೊದಲು ಗುಜರಾಥದಲ್ಲಿಲ್ಲದ ಎಷ್ಟೋ ಹೊಸ ಪರಂಪರೆಗಳನ್ನು ಅಲ್ಲಿ ಪ್ರಾರಂಭಿಸಿದರೆಂದು ಡಾ. ಸಂಕಾಲಿಯಾ ಅವರ ಅಭಿಪ್ರಾಯ. ಯಾಕಂದರೆ, ಪಶ್ಚಿಮ ಚಲುಕ್ಯರ ರಾಜ್ಯವ್ಯವಸ್ಥೆಯ ಕ್ರಮದಲ್ಲಿ ನಾವು ಈ ಮೊದಲು ಕಾಣದ "ಗ್ರಾಮಭೋಜಿಕ" ಎಂಬ ಹೊಸ ಅಧಿಕಾರಸ್ಥಾನವನ್ನು ಗುಜರಾಥದ ಶಾಸನಗಳಲ್ಲಿ ಕಾಣುತ್ತೇವೆ.* ಈ "ಗ್ರಾಮಭೋಜಿಕನು" ಬಹುಶಃ ಕನ್ನಡದ "ಗ್ರಾ-ಮುಂಡ" "ಗಾವುಂಡ"ದ ಸಂಸ್ಕೃತ ಭಾಷಾಂತರವಾಗಿರಬೇಕು. ಇದರಂತೆಯೇ, ಅನಂತರದ ರಾಷ್ಟ್ರಕೂಟರ ಕಾಲದಲ್ಲಿಯೂ ಕೂಡ ರಾಜ್ಯಾಂಗಗಳಲ್ಲಿ ಆಹಾರ, ಪಥಕ-ಮೊದಲಾದವುಗಳ ಜೊತೆಗೆ "ಗ್ರಾಮಗಳ ಗುಂಪ"ನ್ನೂ ಕಾಣುತ್ತೇವೆ. ಈ "ಗ್ರಾಮಗಳ ಗುಂಪೂ" ಕೂಡ ಗುಜರಾಥಕ್ಕೆ ಹೊಸದು. ಡಾ. ಸಂಕಾಲಿಯಾ ಅವರು ಹೇಳುವಂತೆ ಇದೂ ಸಹ ಬಹುಶಃ ಕನ್ನಡದ ಪ್ರಭಾವ. "The last but one (i. e group of villages) deserves to be noted... and it is not impossible that it is due to the Southern or Karnataka influence brought by the rulers" † ಇದರಂತೆಯೇ, ಅಧಿಕಾರಿಗಳಲ್ಲಿ ಸಂಸ್ಕೃತದ ದೇಶ-ರಕ್ಷಕ, ಸಂಧಿ-ವಿಗ್ರಹಿ — ಮೊದಲಾದವರ ಜೊತೆಗೆ "ಪಟ್ಟಕಿಲ" ಎಂಬ ಅಧಿಕಾರಿಯ ನಿರ್ದೇಶವೂ ಇದೆ. ಇದಕ್ಕೆ ಅಡಿಟಿಪ್ಪಣಿ ಬರೆಯುವಾಗ ಡಾ. ಸಂಕಾಲಿಯಾ ಅವರು "Compare the modern term Patil or Patel" ಎಂದು ಹೇಳುತ್ತಾರೆ. ‡ ಈ ಪದವು ಕೂಡ ಕನ್ನಡದ "ಪಟ್ಟೆಲ" ಎಂಬುದರಿಂದ ಹೋಗಿರಬಹುದಾದ ಪದವಾಗಿದೆ. **ಧಾರ್ಮಿಕ** ದೃಷ್ಟಿಯಿಂದ, ತೀರ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಪ್ರಚಲಿತವಿದ್ದ ಜೈನ ದಿಗಂಬರ ಮತವನ್ನು ಗುಜರಾಥದಲ್ಲಿ ಪ್ರಸಾರಗೊಳಿಸುವ ಕಾರ್ಯವು ಚಲುಕ್ಯರ ಕಾಲದಲ್ಲಿ ತುಂಬಾ ನಡೆಯಿತು. ರಾಷ್ಟ್ರಕೂಟ ದಂತಿವರ್ಮನ ಕಾಲದಲ್ಲಿ ಸಾಮಂತ ಭದ್ರನೆಂಬವನು ಈ ದಿಗಂಬರ ಮತವನ್ನು ಮಾಳವ, ಮಗಧ ಮತ್ತು ಸಿಂಧಗಳಲ್ಲಿ ಪ್ರಸಾರಗೊಳಿಸಲು ಯತ್ನಿಸಿದನು. ಚಲುಕ್ಯರ ಕಾಲದಲ್ಲಿ ಗುಜರಾಥದಲ್ಲಿ ಸುಮಾರು ೧೨೧೦ ಶ್ವೇತಾಂಬರರೂ, ೧೧೦೦ ದಿಗಂಬರರೂ ಇದ್ದರೆಂದು "ಕೀರ್ತಿ ಕೌಮುದಿ" ಎಂಬ ಗ್ರಂಥದಲ್ಲಿ ಹೇಳಿದೆ. ಶ್ವೇತಾಂಬರ ಪಂಥದ ಹೇಮಚಂದ್ರಾದಿಗಳಿಗೂ ಮತ್ತು ಕರ್ನಾಟಕದಿಂದ ಗುಜರಾಥಕ್ಕೆ ಹೋಗಿದ್ದ ದಿಗಂಬರ ಪಂಥದ ಕುಮುದ ಚಂದ್ರನಿಗೂ ನಡೆದ ವಾಗ್ವಾದದ ವಿವರಗಳನ್ನು ಮೇರುತುಂಗನ ಗ್ರಂಥದಲ್ಲಿ ನಾವು ಕಾಣುತ್ತೇವೆ. ದುರ್ದೈವದಿಂದ ಈ ವಾಗ್ವಾದದಲ್ಲಿ ಕುಮುದಚಂದ್ರನು ಸೋತನು. ಇದರ ಕಾರಣವೊಂದರೆ ರಾಜ್ಞಿ. "ಮಯಣಲ್ಲದೇವಿ"ಯು ಹೇಳಿದ ಹಾಗೆ ಕುಮುದಚಂದ್ರನು ಏನೂ ಸಮಾಜದ ರೀತಿ ನೀತಿಗಳು ಗೊತ್ತಿಲ್ಲದೆ "ವಸ್ತ್ರವನ್ನು ಧರಿಸಿದ ಸ್ತ್ರೀ-ಪುರುಷರು ಮೋಕ್ಷವನ್ನು ಹೊಂದುವದಿಲ್ಲವೆಂದು ಸಾರಿದ್ದೇ' ಈ ರೀತಿಯಾಗಿ ಅನೇಕ ವಿಧವಾಗಿ ಗುಜರಾಥದ ಸಂಪರ್ಕವು ಕರ್ನಾಟಕದೊಡನೆ ಇದ್ದದ್ದರಿಂದ, ಭಾಷಾದೃಷ್ಟಿ ಯಿಂದ ಈ ಕೆಳಗಿನ ಪದಗಳು ಕನ್ನಡವೆಂದು ಹೇಳಲು ಸಾಧ್ಯವಿದೆ.

---

* "....the ಗ್ರಾಮಭೋಜಿಕ is mentioned for the first time in Gujarathi inscriptions"— A, G. P. 138 † ಅದೇ ಪು. ೧೯೩. ‡ ಅದೇ ಪು. ೨೦೩

ಗುಜರಾಥಿ ಕೋಶದಲ್ಲಿರುವ 'ಏಲಚಿ' ಪದವು ಕನ್ನಡದಿಂದ ಗುಜರಾಥಿಗೆ ಹೋಗಿರಬಹುದೆಂದು ಪ್ರೊ. ದಿವಾಟಿಯಾ ಅವರು ಊಹಿಸುತ್ತಾರೆ. ಸಂಸ್ಕೃತದಲ್ಲಿ ಈ ಅರ್ಥದ 'ಏಲಾ' ಎಂಬ ಪದವಿದ್ದರೂ, ಇಲ್ಲಿ ಕೊನೆಗೆ ಬರುವ 'ಚಿ' 'ಸೂಕ್ಷ್ಮಾರ್ಥ'ದ ಪ್ರತ್ಯಯವಾಗಿದ್ದು, ಅದು ಕನ್ನಡದ 'ಕ್ಕಿ'ಗೆ ಸಮೀಪದ್ದಾಗಿದೆ. ಆದ್ದರಿಂದ ಅವರ ಪ್ರಕಾರ ಇದರ ಮೂಲರೂಪವು ಕನ್ನಡದ 'ಯಾಲಕ್ಕಿ'. *

ಇದರಂತೆಯೇ, ಗುಜರಾಥಿ 'ಮೋಜು'; 'ಮೋಚೀ' (ಸಿಂಧಿ 'ಮೋಚಣಿ') 'ಮೋಚೀ' ಪದಗಳು ಕನ್ನಡ 'ಮೊಚ್ಚೆ'ಯಿಂದ ಬಂದುವೆಂದು ದಿವಾಟಿಯಾ ಅವರ ಅಭಿಪ್ರಾಯ.

ಸೌರಾಷ್ಟ್ರದ 'ಕಾಥಿ' ಜನರ ಬಾಯಲ್ಲಿರುವ ನಿತ್ಯದ ಬಳಕೆಯ ಎರಡು ಪದಗಳು ಶುದ್ಧ ಕನ್ನಡದವಾಗಿವೆಯೆಂದು ಶ್ರೀ. ರಾಮಪ್ರಸಾದ ಬಕ್ಷಿ ಅವರ ಅಭಿಪ್ರಾಯ.† ಈ ಪದಗಳೆಂದರೆ ತಾಯಿ ಮತ್ತು ತಂದೆಯನ್ನು ಸೂಚಿಸುವ 'ಆಯಿ' (ತಾಯಿ? ಅವ್ವ?) ಮತ್ತು 'ಅಪಾ'! ಈ ಪದಗಳು ಗುಜರಾಥಿಯಲ್ಲಿ ಉಳಿದ ಕಡೆಗೆ ಎಲ್ಲಿಯೂ ಸಿಗುವದಿಲ್ಲ. ಇದರ ಕಾರಣವೆಂದರೆ, ಸಮಾಜಶಾಸ್ತ್ರಜ್ಞರ ಪ್ರಕಾರ ಈ 'ಕಾಥಿ' ಜನರೂ ಮತ್ತು ದ್ರಾವಿಡರೂ ಮೂಲತಃ ಒಂದೇ ಬುಡಕಟ್ಟಿನವರು.—"I have noticed with some surprise that two words of everyday domestic usage,... have found their way in the dialect of the 'Kathis' of Sourashtra ...These must be regarded not as evolutes, but direct loan-words, unmodified importations."†

ಈ ಜಾನಾಂಗಿಕ ಐಕ್ಯದ ಮೂಲಕವೇ ಈ 'ಕಾಥಿ' ಜನರ ಉಚ್ಚಾರವೂ ಕೂಡ ಯಾವ ರೀತಿ ಮಾರ್ಪಟ್ಟಿದೆಯೆಂಬುದನ್ನು ಸದ್ಯ ನಾವು ನೋಡುತ್ತೇವೆ.

ಉಚ್ಚಾರ ಮತ್ತು ವ್ಯಾಕರಣ ದೃಷ್ಟಿಯಿಂದ ಈ ಕೆಳಗಿನ ಪ್ರಭಾವಗಳನ್ನು ಕಾಣಬಹುದೆಂದು ಪಂಡಿತರು ಸೂಚಿಸುತ್ತಾರೆ: -

(i) ಸಂಸ್ಕೃತದ 'ಲ' ಕಾರವು ಕನ್ನಡದಲ್ಲಿ 'ಳ'ಕಾರವಾಗಿ ಪರಿಣಮಿಸುವುದುಂಟಷ್ಟೇ? – ಇದಕ್ಕೆ 'ಕ್ಷಳ'ವೆಂದು ಕರೆಯುವುದುಂಟು. ಕನ್ನಡದ ಸುಪ್ರಸಿದ್ಧ ವೈಯಾಕರಣಿಗಳು ಕೂಡ ಇದನ್ನೊಪ್ಪಿಕೊಂಡು ಇದರ ಬಗ್ಗೆ ಹಲವು ಸೂತ್ರಗಳನ್ನೇ ಗ್ರಥಿಸಿದರು. ಕೇಶಿರಾಜನಂತೂ

"ಕುಳದ ನಿಯಾಮದೊಳ್ ಎಂದುಂ
ಕ್ಷಳಕ್ಕೆ ವಿಕಲ್ಪಮಿಲ್ಲ; ವಿಕಲ್ಪಮ್
ಕ್ಷಳನಲ್ಲದಿಲ್ಲ" -ಎಂದು

ಮೊದಲಾಗಿ ಈ ಬಗ್ಗೆ ನಿಯಮಗಳನ್ನು ಹಾಕಿಕೊಡಬೇಕಾಯಿತು. ಈ ರೀತಿ ಸಂಸ್ಕೃತ 'ಲ'ಕಾರವು 'ಳ'ಕಾರವಾಗುತ್ತಿರುವುದನ್ನು, ಕನ್ನಡದ ನೆರೆ-ಹೊರೆಯ ಗುಜರಾಥಿ ಮತ್ತು ಮರಾಠಿಗಳನ್ನು ಬಿಟ್ಟರೆ, ಆರ್ಯವರ್ಗದ ಉಳಿದ ಔತ್ತರೇಯ ಭಾಷೆಗಳಲ್ಲಿ ಪ್ರಾಯಶಃ ನಾವು ಕಾಣುತ್ತಿಲ್ಲ. ಆದರೆ, ಗುಜರಾಥಿ ಮರಾಠಿಗಳಲ್ಲಿ ಮಾತ್ರ ಇದನ್ನು ಸಾಕಷ್ಟು ಮಟ್ಟಿಗೆ ನಾವು ಕಾಣುತ್ತೇವೆ. ಉದಾ: ಫಲ 7 ಫಳ; ಪಾಳವು; ಮೇಳಾಪ. ಇತ್ಯಾದಿ.

---

* G. L. L. P. 61 — ಶ್ರೀಯುತರ ಈ ಅಭಿಪ್ರಾಯವನ್ನು ಇಂದಿನ ಭಾಷಾಸ್ಥಿತಿಯಲ್ಲಿ ಒಪ್ಪಿಕೊಳ್ಳುವುದು ಕಠಿಣವಾಗಿದೆ. ಶ್ರೀ ಎಚ್. ಸಿ. ಭಯಾನಿ—ಮೊದಲಾದ ಗುಜರಾಥಿ ಪಂಡಿತರೂ ಈ ಅಭಿಪ್ರಾಯವನ್ನು ಒಪ್ಪುವದಿಲ್ಲ.

† ಶ್ರೀಯುತರು ಈ ಬಗ್ಗೆ ನಮಗೆ ಬರೆದ ಒಂದು ಪತ್ರದಲ್ಲಿ ಈ ವಿವರಗಳನ್ನೆಲ್ಲಾ ಕೊಡುತ್ತಿದ್ದಾರೆ.

ಅದೇ ಈ ಪದಗಳು ಇಂದಿಗೂ ಹಿಂದೀ ಭಾಷೆಯಲ್ಲಿ ಫಲ, ಪಾಲನಾ, ವಿಲಾಪ—ಇತ್ಯಾದಿಯಾಗಿ 'ಲ'ಕಾರ ಯುಕ್ತವೇ ಇವೆ. ಇದು ಮರಾಠಿ ಭಾಷೆಯ ಪರಿಣಾಮವೂ ಆಗಿರಬಹುದೇ?—ಬಹುಶಃ ಆಗಿರಲಿಕ್ಕಿಲ್ಲ. ಯಾಕಂದರೆ, ಈ ಬಗ್ಗೆ ಸುಪ್ರಸಿದ್ಧ ಗುಜರಾಥಿ ಭಾಷಾಶಾಸ್ತ್ರಜ್ಞರಾದ ಪ್ರೊ. ರಾಮಪ್ರಸಾದ ಬಕ್ಷಿ ಅವರು ಹೇಳಿದ ಮಾತುಗಳು ಮನನೀಯವಾಗಿವೆ:—

"I am tempted to attribute to Dravidian influence—*conceivably due to the proximity of Kannada strip*, the reclaimed landstrip of ParasuRama to Gujarat—the cerebralization or lingualization in Gujarathi of the ಲ sound of Sanskrit... This process, however, dates from times *long before Maharashtra occupation of parts of Sourashtra.*"†

(ii) ಮತ್ತು ಈ ಅಂಶವು ಗುಜರಾಥದ ಉಳಿದೆಲ್ಲ ಜನರಿಗಿಂತ ಸೌರಾಷ್ಟ್ರದ 'ಕಾಥಿ' ಜನರಲ್ಲಿ ತೀರ ಹೆಚ್ಚಾಗಿ ಕಂಡುಬರುತ್ತದೆ. ಈ 'ಕಾಥಿ' ಜನರು ದ್ರಾವಿಡ ಬುಡಕಟ್ಟಿನವರೇ ಆಗಿರುವರೆಂಬುದನ್ನು ನಾವು ಈ ಮೊದಲೇ ನೋಡಿದ್ದೇವೆ. ಅಂತಲೇ, ಇತರ ಗುಜರಾಥಿಗಳು 'ನನ್ನ' ಎಂಬರ್ಥದಲ್ಲಿ ಹೇಳುವ 'ಮಾರೋ' 'ಮಾರು' ಪದವನ್ನು ಈ 'ಕಾಥಿ' ಜನರು 'ಮಾಳೋ' ಎಂದು ಉಚ್ಚರಿಸುತ್ತಾರೆ.

(iii) ಶ್ರೀ. ದಿವಾಟಿಯಾ ಅವರು, ವರ್ಗ ಪ್ರಥಮ ವರ್ಣವು ತೃತೀಯ ವರ್ಣವಾಗುವ ಸಂದರ್ಭದಲ್ಲಿ ಕನ್ನಡ ಮತ್ತು ಗುಜರಾಥಿಗಳನ್ನು ಹೋಲಿಸಿ ಹೇಳುತ್ತಾರೆ. ಉದಾ. ಕ ಮಳೆ-ಗಾಲ; ಹಳ-ಗನ್ನಡ ಇತ್ಯಾದಿ. ಗುಜರಾಥಿ : ಕಾಗದೇ ಇತ್ಯಾದಿ. ಆದರೆ, ಈ ರೀತಿಯ ಉಚ್ಚಾರಸೌಕರ್ಯವು ಎಲ್ಲ ಭಾಷೆಗಳಿಗೂ ಸಾಮಾನ್ಯವಾದುದೆಂದೇ ಹೇಳಬೇಕು.

(iv) 'ರ'ಕಾರಾಗಮ:— ಗುಜರಾಥಿಯಲ್ಲಿಯೂ ಕನ್ನಡದಂತೆ ಹಲವು ಸಲ ಸಮಾಸಗಳಲ್ಲಿ ಆಗಮವಾಗುವದುಂಟು. ಗಮಕದಲ್ಲಿಯ ಪಿರಿಯ ಮಗ; ನಿಡಿಯ ನಾಲಗೆ-ಎಂದು ಮೊದಲಾಗಿ ಇದ್ದಹಾಗೆ. ಉದಾ : ನಾಗರ ಬಲ; ಕನ್ನಡದ ನಾಗರಪಂಚಮಿ ಇದ್ದಹಾಗೆ—"He (Divatia) definitely attributes the adventitious ರ in Gujarathi ನಾಗರಬಲ to Kannada influence on the analogy of Kannada ನಾಗರಪಂಚಮಿ;.... the ರ as a plural suffix being explainable in Kannada but not in Gujarathi." (ಶ್ರೀ. ಆರ್. ಬಕ್ಷಿ).

ಒಟ್ಟಾರೆ, ಸಾಮಾಜಿಕ, ಜಾನಾಂಗಿಕ ಮತ್ತು ಐತಿಹಾಸಿಕ ಒಂದುಗೂಡಿಕೆಯ ಮೂಲಕ ಕರ್ನಾಟಕ ಮತ್ತು ಗುಜರಾಥಗಳಲ್ಲಿರುವ ಸಾಮಾನ್ಯ ಸಂಪ್ರದಾಯಗಳು, ಮತ್ತು ಭಾಷಾವೈಲಕ್ಷಣಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು.

ಕನ್ನಡ-ಬಂಗಾಲಿ

ಇಂದು ಕನ್ನಡ-ಬಂಗಾಲಿಗಳ ಸಂಬಂಧದ ಮಾತು ಎತ್ತುವುದು ಕೂಡ ಹಾಸ್ಯಾಸ್ಪದವೆನಿಸೀತು. ೧೩ನೆಯ ಶತಮಾನದ ಜನ್ನನಿಗೆ ದೂರದ ವಿಷಯಗಳು 'ನರ್ಮದೆಯಿಂ ಗೆಂಟವಾಗಿದ್ದರೆ', ಇಂದಿನ ನಮಗೆ ಬಂಗಾಲಿ ತೀರ ಗೆಂಟದು.

† Author in a letter written to us

ಆದರೆ, ಐತಿಹಾಸಿಕವಾಗಿ ವಿಚಾರ ಮಾಡಿದರೆ, ಒಂದು ಕಾಲಕ್ಕೆ ಕನ್ನಡ ಬಂಗಾಲಗಳು ತೀರ ಸಮೀಪದಲ್ಲಿದ್ದವು. ಐತಿಹಾಸಿಕ ಕಾಲದ ಕನ್ನಡರ 'ಅಂಗ–ವಂಗ ಕಳಿಂಗ ಚೇರ ಚೋಳ ಮಗಧ'ಗಳನ್ನು ಗೆಲ್ಲುವ ಮಹತ್ವಾಕಾಂಕ್ಷೆಯಂತೂ ಒತ್ತಟ್ಟಿಗಿರಲಿ; ಆದಕ್ಕೂ ಮೊದಲಿನಿಂದ ಕೂಡ ಬಂಗಾಲ–ದ್ರಾವಿಡಗಳ ಸಂಬಂಧವಿದೆ. ಕ್ರಿಸ್ತಶಕ ಪ್ರಾರಂಭ ಕಾಲದಿಂದ ಕೂಡ, ಅನೇಕ ಸಲ 'ದ್ರಾವಿಡರು' ವಂಗರಾಜ್ಯದ ಮೇಲೆ ಅಭಿಯೋಗ ಮಾಡಿ, ಜೇತಾರರಾಗಿದ್ದಾರೆ. ಹಾಗಾದರೆ, ಸ್ವಲ್ಪದರಲ್ಲಿಯೇ ಈ ಪ್ರಾಚೀನ ದ್ರಾವಿಡ ಸಂಬಂಧವನ್ನೂ ನೋಡೋಣ :—

ಕನ್ನಡಿಗರಿಗೆ ಬಂಗಾಲಿಗಳ ಸಂಪರ್ಕವು ಬಂದುದು ಮೂರು ಸಲ ಬೇರೆ ಬೇರೆ ಕಾಲದಲ್ಲಿ; ಮೂರು ಬೇರೆ ಬೇರೆ ವಿಧವಾಗಿ ಎಂದು ಹೇಳಬೇಕು.

ಮೊದಲನೆಯ ಸಲ, ಕ್ರಿ. ಪೂರ್ವ ೯–೧೦ನೆಯ ಶತಮಾನವೆಂದು ಹೇಳಬಹುದು. ಆ ಕಾಲದಲ್ಲಿ, ದ್ರಾವಿಡರೇ ಬಹುಶಃ ಈಗಿನ 'ಬಂಗಾಲಿ' ಭಾಗವನ್ನು ವ್ಯಾಪಿಸಿದ್ದರು. ಆಗ ಕನ್ನಡವು ಇನ್ನೂ ಈ ಮೂಲ ದ್ರಾವಿಡ ವರ್ಗದ ಹೊಟ್ಟೆಯಲ್ಲೇ ಬಹುಶಃ ಇರಬಹುದು. ಯಾಕಂದರೆ, ಈ ಕಾಲದಲ್ಲಿ, ಈ ಭಾಗಗಳಲ್ಲಿ ಬೇರೆ ಬೇರೆ ವರ್ಗದ ಜನಗಳಿದ್ದರೆಂದು ಉಲ್ಲೇಖಗಳಿವೆ. ಅಥರ್ವವೇದದಲ್ಲಿ, ಹಿಮಾಲಯ ಭಾಗಗಳಲ್ಲಿ ಮಂತ್ರ–ತಂತ್ರಗಳಿಗಾಗಿಯೂ ಮತ್ತು ಅಗೆಯುವುದಕ್ಕಾಗಿಯೂ ಕಿರಾತ ಸ್ತ್ರೀಯರನ್ನು ಉಪಯೋಗಿಸುತ್ತಿದ್ದ ಉಲ್ಲೇಖವಿದೆ. (X 4–14). ವಾಜಸೇನೀಯ ಸಂಹಿತೆಯಲ್ಲಿ ಈ ಕಿರಾತರು ಪರ್ವತದಲ್ಲಿ ವಾಸಿಸುತ್ತಿದ್ದರೆಂದು ಹೇಳಿದೆ. (x x x ·6) ಈ ಜನರನ್ನೇ ಮನುವು ವ್ರಾತ್ಯಕ್ಷತ್ರಿಯರೆಂದು ಕರೆಯುತ್ತಿದ್ದಾನೆ. ಬ್ರಾಹ್ಮಣಗಳಲ್ಲೂ ಇವರ ಬಗ್ಗೆ ಉಲ್ಲೇಖ ಬರುತ್ತದೆ.

ಕ್ರಿ. ಪೂರ್ವ ೯ನೆಯ ಶತಮಾನದಲ್ಲಿ ದ್ರಾವಿಡರು ಅರಾಕಾನ ಮತ್ತು ಚಿತಗಾಂಗಗಳಲ್ಲಿ ವಾಸಿಸುತ್ತಿದ್ದರೆಂದು ಹೇಳಲಾಗಿದೆ. (ಮುಜುಮುದಾರ) ಸುಮಾರು ಕ್ರಿ. ಪೂ. ೭ ರಲ್ಲೇ ಹೆಚ್ಚುಕಡಿಮೆ ಇಂದಿನ 'ಬಂಗಾಲ' ಶಬ್ದದ ರೂಪವು ನಮಗೆ ದೊರಕುತ್ತಿದೆ. 'ಲಕ್–ಲಾಃಮ್' ಎನ್ನುವ (Luck-lom) ಬಂಗಾಲಿ ಸಾಹಸಿಯು 'ಆಕಿ' (Auki) ಎನ್ನುವ ಅನ್ನಾಮಿ ಹುಡುಗೆಯನ್ನು ಮದುವೆಯಾದನೆಂದು ಚೀನೀ ಉಲ್ಲೇಖಗಳಿವೆ. ಈ 'ಲಕ್-ಲಾಃಮ್'ನ ದೇಶವೆಂದರೆ -Bong-long 'ಬಾಂಗ್–ಲಾಂಗ್' (ಬಂಗಾಲ). ಇದು ಬಂಗಾಲ ಪ್ರದೇಶದಲ್ಲಿ ದ್ರಾವಿಡ ಜನರ ತೀರ ಉತ್ಕರ್ಷಕಾಲವೆಂದು ಹೇಳಬಹುದು. ಯಾಕಂದರೆ, ಈ ಕಾಲದಿಂದಲೇ, ನಿಧಾನವಾಗಿ ಆರ್ಯ–ಹಿಂದುಗಳು ಇಲ್ಲಿಂದ ದ್ರಾವಿಡರನ್ನು ಹಿಮ್ಮೆಟ್ಟಿಸಲಿಕ್ಕೆ ಪ್ರಾರಂಭಿಸಿದರು. ಈ ಬಗ್ಗೆ ಶ್ರೀ. ಬಿ. ಸಿ. ಮುಜುಮುದಾರ ಅವರು ತಮ್ಮ ಬಂಗಾಲಿ ಭಾಷೆಯ ಇತಿಹಾಸದಲ್ಲಿ ಹೇಳುವುದೇನಂದರೆ: –

"Recent researches in Farther India by such scholars as Mr. Phayre, and Colonel Gerini have disclosed these facts that Telugu-speaking and Tamil speaking Dravidians of India reached *Farther India* both by land and sea and established colonies and political supremacy in many parts of 'Farther India'; and that the Hindus poured in only subsequently to dominate that land by displacing the Dravidian supremacy. The earliest date that we get of the Hindus, who went to Burma, is 923 B. C....... This should lead us to suppose that the Dravidian invasion in Farther

> India took place at least a century before 923 B. C. It is also reported of the Telugu adventurers that they established their supremacy over Arakan and the tract of country now covered by Chittagong Division about 850 B. C."

ಪುನಃ,

> "One fact I may dare-say stands out very prominently with relief viz. some races of men closely allied to the Kalinga people of old (whose descendents speak the Telugu Language today), had been in possession of Bengal as ruling races, before the people of Aryan culture poured into the land to dominate them"

ಈ ಕಾಲದಲ್ಲಿ, ಬಂಗಾಲವನ್ನು 'ಬಾಂಗ್ಲಾ'—'ಬಾಂಗ್‌ಲಾಂಗ್' ಎಂದು ಕರೆಯುತ್ತಿದ್ದರು. ಇವರೇ ವಂಗರು. ಈ ವಂಗ–ಕಳಿಂಗರನ್ನು ಆರ್ಯರು ಅನಾರ್ಯರೆಂದು ತಿಳಿದುಕೊಂಡಿದ್ದರು. ಈ ಕಳಿಂಗರೇ ಮುಡು–ಕಳಿಂಗರು, ತ್ರಿ—ಕಲಿಂಗರು— ತೆಲುಗರಾದರೆಂದೂ ಹೇಳುತ್ತಾರೆ. ಮಹಾಭಾರತದಲ್ಲಿ (I.104) ಅಂಗ, ವಂಗ, ಕಳಿಂಗ, ಪುಂಢ್ರ ಮತ್ತು ಸುಂಹರು ಬಲಿಚಕ್ರವರ್ತಿಯ ಇಚ್ಛೆಯ ಪ್ರಕಾರ, ಉದ್ಭವಿಸಿದ ರಾಜ್ಞಿ ಸುದೇಷ್ಣಾದೇವಿ ಮತ್ತು ದೀರ್ಘತಮಸ್‌ಋಷಿಯ ಸಂತತಿಗಳೆಂದು ಹೇಳಲಾಗಿದೆ. ಈ ಇಡೀ ಕಥೆಯಲ್ಲಿ ಬರುವ ಹೀನ ವರ್ಣನೆಗಳು ಕಲ್ಪನಾತೀತವಾಗಿವೆ. ಪ್ರೊ. ಸಿಲ್ವೇನ್ ಲೆವಿ ಅವರು ಹೇಳಿದಂತೆ ಅಂಗ-ವಂಗರ ಬಗ್ಗೆ ಆರ್ಯರಿಗೆ ಉಚ್ಚಕಲ್ಪನೆ ಇರಲಿಲ್ಲ.* ಬೌಧಾಯನಸೂತ್ರಗಳ ಪ್ರಕಾರವಂತೂ, ಅಂಗ–ವಂಗ ದೇಶಗಳಿಗೆ ಹೋಗಿ ಬಂದ ಪ್ರಯಾಣಿಕನು ಪ್ರಾಯಶ್ಚಿತ್ತವನ್ನು ಕೈಕೊಳ್ಳಬೇಕು.—"ಆರಟ್ಟಾನ್, ಕಾರಸ್ಕರಾನ್, ಪುಂಡ್ರಾನ್, ಸೌವೀರಾನ್, ವಂಗ–ಕಳಿಂಗಾನ್, ಪ್ರಾನೂನಾನ್, ಇತಿ ಚ ಗತ್ವಾ, ಪುನಸ್ತೋಮೇನ ಯಜೇತ–ಸರ್ವಪ್ರಷ್ಠಯಾ ವಾ" (I. 2. 14) ಅಷ್ಟೇ ಅಲ್ಲ; ಬೌಧಾಯನದ ಪ್ರಕಾರ, ಅಂಗ-ಆವಂತ ಮತ್ತು ದಕ್ಷಿಣಾಪಥದ ಜನರು "ಸಂಕೀರ್ಣಯೋನಿಗಳು" 'ಬೆರಕೆ'ಯವರು—

> "ಅವಂತಯೋಂಗಾ ಮಗಧಾ; ಸುರಾಷ್ಟ್ರಾಃ ದಕ್ಷಿಣಾಪಥಾಃ |
> ಉಪಾವೃತ್ತಾ ಸಿಂಧು ಸೌವೀರಾಃ ಏತೇ **ಸಂಕೀರ್ಣಯೋನಯಃ** ॥"

ಅನಂತರ, ಕರ್ನಾಟಕದ ಸಂಬಂಧವು ಬಂದದ್ದೆಂದರೆ, ಕನ್ನಡವು ತೀರ ಸ್ವತಂತ್ರವಾಗಿ ತನ್ನದೇ ಆದ ರಾಜ್ಯವನ್ನು ಕಟ್ಟಿಕೊಂಡು ಪ್ರಬಲವಾದ ರಾಜಕೀಯ ಘಟಕವಾಗಿದ್ದಾಗ. ಈ ಕಾಲವು ಕ್ರಿ.ಶ. ೮–೯ನೆಯ ಶತಮಾನವೆಂದು ಹೇಳಬಹುದು. ಈ ಕಾಲದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳು, ಸ್ವತಂತ್ರವೂ ತೀರ ಉತ್ಕರ್ಷ ಸ್ಥಿತಿಯಲ್ಲಿದ್ದುವೂ ಆಗಿದ್ದವು. ಈ ಕಾಲದಲ್ಲೇ ಕನ್ನಾಡು ಕಾವೇರಿಯಿಂದ ಗೋದಾವರಿಯ ವರೆಗೆ ಸುಸ್ಪಷ್ಟವಾಗಿ ಇದ್ದುದು. ಈ ರಾಷ್ಟ್ರಕೂಟರ ಕಾಲದಲ್ಲಿಯೇ 'ಸೇನ' ಮನೆತನವು ಬಂಗಾಲದಲ್ಲಿ ನೆಲಸಿತು. ಬಂಗಾಲದ ಘೋಷ, ಗುಪ್ತ ಮತ್ತು ನಾಗ ಮನೆತನದವರು ಕೋಸಲ ವಂಶದ ಕಾಯಸ್ಥರಾಗಿದ್ದರೆ, ವೈದ್ಯರು ಸೇನ ವಂಶದವರು. ಈ ಸೇನ ವಂಶವು ಕರ್ನಾಟಕ ಕ್ಷತ್ರಿಯ ವಂಶ. ಈ ಸೇನರು ಇಂದಿಗೂ ತಾವು ದ್ರಾವಿಡ ಇಲ್ಲವೆ ಕರ್ನಾಟಕ ಕ್ಷತ್ರಿಯರೆಂದು ಹೇಳಿಕೊಳ್ಳುತ್ತಾರೆ. ಈ ಬಗ್ಗೆ ಶ್ರೀ. ಬಿ. ಸಿ. ಮುಜುಮದಾರ ಅವರು

* "Anga & Vanga had long remained suspect to the Aryans of India." P. A. & P. D. 73

ಹೇಳುವದೇನಂದರೆ:— " That the Senas describe themselves as *Karnatak Kshatriyas i. e. Kshatriyas of the Dravidian Country is well-known* "

ಇದರ ಬಗ್ಗೆಯೇ, ಶ್ರೀ. ಆರ್. ಡಿ. ಬ್ಯಾನರ್ಜಿ ಅವರು ಕೂಡ ಹೀಗೆ ಬರೆಯುತ್ತಾರೆ:—

" The invasion of the Chola King did not change the political divisions of the Country (Bengal), but it left one permanent mark in the shape of a body of settlers, who occupied the throne of Bengal and Mithila as the 'Sena' and 'Karnata' dynasties," (Memoirs of the As. Soc. of Beng. V 3. P 73).

ಈ ಚೋಳ ಅರಸನೆಂದರೆ ರಾಜೇಂದ್ರ ಚೋಳ. ಈ ಕಾಲದ ಹಿಂದು ಪುನರುತ್ಥಾನದ ಕಾಲದಲ್ಲಿ ಅನೇಕ ಜೈನರು ಕೂಡ ಪೂಜಾರಿಗಳಾಗಿ ವೈದ್ಯರಾದರು. ನಾವು ನೋಡಿದ ಸೇನ ವಂಶದ ಮೂಲಪುರುಷನು 'ಚಂದ್ರ'— ಎನ್ನುವವನಾಗಿದ್ದನೆಂದು ಗೋವರ್ಧನಾಚಾರ್ಯರ 'ಆರ್ಯಾಸಪ್ತಶತಿ'ಯಿಂದ ಕಂಡು ಬರುತ್ತದೆ.

ಡಾ. ಆರ್. ಸಿ. ಮುಜುಮುದಾರ ಅವರ ಪ್ರಕಾರ ಬಂಗಾಲದ 'ಸೇನ' ವಂಶದವರು ಕೇವಲ ಕನ್ನಡಿಗರಷ್ಟೇ ಅಲ್ಲದೆ, ಉತ್ತರ ಕರ್ನಾಟಕದ ಧಾರವಾಡ ಭಾಗದ ನೆರೆಹೊರೆಯವರು. *

ಈ 'ಸೇನ' ವಂಶಜರ ತೀರ ಪ್ರಾಚೀನ ಉಲ್ಲೇಖವು ರಾಷ್ಟ್ರಕೂಟ ಅರಸು ೨ನೆಯ ಕೃಷ್ಣನ ೯೦೨-೩ರ ಮುಳಗುಂದ ಶಾಸನದಲ್ಲಿ ಬರುತ್ತದೆ. ಈ ಶಾಸನದಲ್ಲಿ ಮುಳಗುಂದದಲ್ಲಿ ಒಂದು ಜಿನಾಲಯವನ್ನು ಕಟ್ಟಿಸಿ ಅದರ ಮೇಲ್ವಿಚಾರಣೆಗಾಗಿ ಆಚಾರ್ಯ ಕುಮಾರ ಸೇನರ ಮುಖ್ಯಶಿಷ್ಯನಾಗಿದ್ದ ವೀರಸೇನನ ಶಿಷ್ಯ ಸೇನಾನ್ವಯದ ಕನಕಸೇನನಿಗೆ ದತ್ತಿಹಾಕಿಕೊಟ್ಟಂತೆ ಹೇಳಿದೆ. ಈ ಮೂರೂ ಪೀಳಿಗೆಯ ಕಾಲನಿರ್ಧಾರ ವನ್ನು ಮಾಡಿದರೆ, ಈ "ಸೇನ" ಮನೆತನವೆಲ್ಲ ಧಾರವಾಡ ಭಾಗದಲ್ಲಿ ಕ್ರಿ. ಶ. ೯ರ ಸುಮಾರಿಗೇ ಪ್ರಭಾವ ಶಾಲಿಯಾಗಿದ್ದಂತೆ ಕಾಣುತ್ತದೆ. ಅನಂತರ, ಸೇನರ ಬಗ್ಗೆ ಬರುವ ಉಲ್ಲೇಖವೆಂದರೆ, ಪಶ್ಚಿಮ ಚಲುಕ್ಯ ಅರಸು ೧ನೆಯ ಸೋಮೇಶ್ವರನ ೧೦೫೪ರ ಹೊನವಾಡ ಶಾಸನ.

ಗಂಗ ೨ನೆಯ ಮಾರಸಿಂಹನ ಶ್ರವಣಬೆಳಗೊಳದ ಶಾಸನದಲ್ಲಿ ಅರಸನು ಅನೇಕ ಜಿನಾಲಯ ಗಳನ್ನು ಕಟ್ಟಿಸಿದ್ದಾಗಿಯೂ, ಮತ್ತು ಕೊನೆಗೆ ಇಂದಿನ ಧಾರವಾಡ ಜಿಲ್ಹೆಯ ಬಂಕಾಪುರದಲ್ಲಿ ರಾಜ್ಯ ತ್ಯಾಗವನ್ನು ಮಾಡಿ ನೆಲೆಸಿದ್ದಾಗಿಯೂ ಹೇಳಿದೆ. ಇಲ್ಲಿ ಅವನಿಗೆ ಅಜಿತಸೇನರೆಂಬ ಗುರುಗಳು ದೊರಕಿದರು. ಸುಪ್ರಸಿದ್ಧ ದಣ್ಣಾಯಕನಾದ ಚಾವುಂಡರಾಯನು ಅಜಿತಸೇನರ ಗುರುವು. ಹೀಗಾಗಿ ಧಾರವಾಡ ಪ್ರಾಂತದ ಭಾಗದಲ್ಲಿ **ಸೇನ** ಮನೆತನದವರು ಕ್ರಿ ಶ. ೯ರಿಂದ ಕ್ರಿ. ಶ. ೧೧ರ ವರೆಗೆ ತುಂಬಾ ಪ್ರಭಾವಶಾಲಿಗಳಾಗಿದ್ದರೆಂದು ಹೇಳಬಹುದು.

೧. ಬಂಗಾಲದ 'ಸೇನ'ರು ಮೂಲತಃ ಕರ್ನಾಟಕದವರೆಂಬುದು ವಿಜಯಸೇನ 'ದೇವಪಾರಾ' ಶಾಸನದ ನಾಲ್ಕು ಮತ್ತು ಎಂಟನೆಯ ಶ್ಲೋಕಗಳಿಂದಲೂ ಸ್ಪಷ್ಟವಾಗುತ್ತಿದೆ.

---

* P. T. O. C Vol II P. 343

ಅನಂತರ, ಲಕ್ಷ್ಮಣಸೇನನ ಮಧೈನಗರ ಶಾಸನದಲ್ಲಿಯಂತೂ ಬಂಗಾಲದ 'ಸೇನ'ರ ಬಗ್ಗೆ

—"ಕರ್ಣಾಟ ಕ್ಷತ್ರಿಯಾನಾಮ್ ಅಜನಿ ಕುಲ ಶಿರೋದಾಮಃ ಸಾಮಂತಸೇನಃ"—

ಎಂದು ಸ್ಪಷ್ಟವಾಗಿ ಉಲ್ಲೇಖವಿದೆ.

೨. ಬಂಗಾಲದ 'ಸೇನ'ರು "ಬ್ರಹ್ಮ-ಕ್ಷತ್ರಿಯ"ರೆಂದು ಹೇಳಿಕೊಳ್ಳುತ್ತಾರೆ. ಮೇಲೆ ವಿವರಿಸಿದ ದಣ್ಣಾಯಕ ಚಾವುಂಡರಾಯನೂ ಬ್ರಹ್ಮ-ಕ್ಷತ್ರಿಯನೇ.

೩. ಬಂಗಾಲದ ಈ "ಸೇನ" ರಾಜವಂಶದಲ್ಲಿ ತೀರ ಪ್ರಸಿದ್ಧನಾಗಿದ್ದ ಅರಸನೆಂದರೆ-"ಬಲ್ಲಾಳಸೇನ" ಈ "ಬಲ್ಲಾಳ" ಎನ್ನುವ ಹೆಸರು ಉತ್ತರಾಪಥದಲ್ಲಿ ತುಂಬಾ ಅಪರಿಚಿತ. ಬಂಗಾಲದ ಈ ಹೆಸರು ಆ ಹೆಸರಿನ ಹೊಯ್ಸಳ ಅರಸನಿಂದ ತೆಗೆದುಕೊಂಡದ್ದಾಗಿರಬಹುದೆಂದು ಡಾ. ಆರ್. ಸಿ. ಮುಜುಮದಾರ ಅವರ ಅಭಿಪ್ರಾಯ.

೪. ಈ ರೀತಿ ಕರ್ನಾಟಕರು ದೂರದ ದೇಶಗಳ ಸಂಪರ್ಕವನ್ನಿಟ್ಟುಕೊಂಡದ್ದು ಪ್ರಾಚೀನಕಾಲದಲ್ಲಿ ಆಶ್ಚರ್ಯದ ಮಾತೇನೂ ಅಲ್ಲ. ಯಾಕಂದರೆ, ಪಶ್ಚಿಮ ಚಾಲುಕ್ಯ ಅರಸನಾದ ೨ನೆಯ ವಿಕ್ರಮಾದಿತ್ಯನು ಚಿಕ್ಕವನಿರುವಾಗಲೇ **ಗೌಡ ಮತ್ತು ಕಾಮರೂಪಗಳ** (ಅಂದರೆ ಈಗಿನ ಆಸಾಮು) ಮೇಲೆ ಅಭಿಯೋಗವನ್ನು ಮಾಡಿದ್ದಾಗಿ ವಿಕ್ರಮಾಂಕ ಚರಿತೆಯಿಂದ ಕಂಡುಬರುತ್ತದೆ. ಇವನ ಸಾಮಂತನಾದ 'ಅಚ' ಎಂಬವನು **ವಂಗ ಕಳಿಂಗರನ್ನು** ಸೋಲಿಸಿದಂತೆ ಹೇಳಿದೆ. ಹನ್ನೊಂದನೆಯ ಶತಮಾನದ ಅಂತ್ಯದಲ್ಲಿ ನಾನ್ಯದೇವನೆಂಬ ಕನ್ನಡ ಸಾಮಂತನು ತಿರ್ಹುತ್ ಮತ್ತು ನೇಪಾಳದಲ್ಲಿ ರಾಜ್ಯವಾಳುತ್ತಿದ್ದುದಾಗಿ ಅನ್ಯತ್ರ ವಿವರಿಸಿದೆ.

ಆದ್ದರಿಂದ, ಚಲುಕ್ಯವಿಕ್ರಮನ ಕಾಲಕ್ಕೆ ಮಿಥಿಲೆಯ ನಾನ್ಯದೇವನ ಹಾಗೆ, ಬಂಗಾಲ ಸೇನರ ಪುರಾತನ ಪುರುಷನಾದ ಸಾಮಂತಸೇನನು ಕ್ರಿ. ಶ. ೧೨ನೆಯ ಶತಮಾನದಲ್ಲಿ ವಿಕ್ರಮನ ಕೂಡ ದಂಡ ಯಾತ್ರೆಗೆ ಹೋಗಿ, ಗೆದ್ದ ರಾಜ್ಯವನ್ನು ಆಳುವುದಕ್ಕಾಗಿ ನೆಲಸಿದಂತೆ ಕಾಣುತ್ತದೆ.

ಈ ಕಾಲದಲ್ಲಿ ಮಿಥಿಲೆಯುಲ್ಲಿ ರಾಜ್ಯವಾಳಿದ 'ನಾನ್ಯದೇವ'ನೆಂಬ ಅರಸನೂ ಕರ್ನಾಟಕದವನು. ಈ ನಾನ್ಯದೇವನು ರಾಷ್ಟ್ರಕೂಟ ಅರಸನಾಗಿರಬೇಕು. ಇವನು ಕೀರ್ತಿರಾಜನ ತಮ್ಮನು. ಇವನು ಸೌವೀರ, ಗೌಡ, **ಬಂಗಾಲ** ಅರಸರನ್ನು ಸೋಲಿಸಿ, **ಗುರ್ಜರ** ರಾಜಪುತ್ರಿಯನ್ನು ಮದುವೆ ಮಾಡಿಕೊಂಡನು. ಈತನು ಯೋಧನಿದ್ದಷ್ಟೇ ರಸಿಕನೂ ಆಗಿದ್ದನು. ಇವನು ಭರತನಾಟ್ಯಶಾಸ್ತ್ರದ ಹಲ ಭಾಗಗಳಿಗೆ ವಾರ್ತಿಕ ರೂಪವಾಗಿ "ಸರಸ್ವತೀ ಹೃದಯಾಲಂಕಾರ" ಎಂಬ ಸಂಗೀತ ಗ್ರಂಥವನ್ನು ಬರೆದನು. ಈ ಗ್ರಂಥದ ಹನ್ನೊಂದನೆಯ ಅಧ್ಯಾಯದಲ್ಲಿ ದೇಶೀಯ ರಾಗಗಳ ಅಂದರೆ **ಕರ್ನಾಟಕ ರಾಗಗಳ** ವಿವೇಚನೆಯಿದೆ. ಶಾರ್ಙ್ಗದೇವನ "ಸಂಗೀತ ರತ್ನಾಕರ"ದಲ್ಲಿಯೂ ಇವನ ಬಗ್ಗೆ ಉಲ್ಲೇಖವಿದೆ. ತಾನು **"ಕರ್ಣಾಟ ಕುಲಭೂಷಣ"**ನೆಂದು ಇವನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾನೆ—

ಮೂರನೆಯದಾಗಿ, ಕನ್ನಡ ಸಂಪರ್ಕವು ಬಂಗಾಲಕ್ಕೆ ಬಂದುದು ವೈಷ್ಣವ ಭಕ್ತಿಪಂಥದ ಮೂಲಕ. ಮೊದಲಿನಿಂದಲೂ ಕರ್ನಾಟಕವು ಭಕ್ತಿಯ ತವರುಮನೆಯೆಂಬುದು ವಿದಿತವಷ್ಟೇ. ಭಾಗವತದಲ್ಲಿ ಹೇಳಿದಂತೆ

ಉತ್ಪನ್ನಾ ದ್ರಾವಿಡೇ ಸಾಯಂ
ವೃದ್ಧಿಂ ಕರ್ಣಾಟಕೇ ಗತಾ—

ಈ ಭಕ್ತಿಮಾರ್ಗದ ಪ್ರಬಲವಾದ ಪ್ರಭಾವವು ಬಂಗಾಲದ ಚೈತನ್ಯಪಂಥದ ಮೇಲೆ ತುಂಬಾ ಪರಿಣಾಮವನ್ನು ಉಂಟುಮಾಡಿತು. ಇದರ ಮೂರ್ಧನ್ಯರು ಶ್ರೀ. ಮಧ್ವಾಚಾರ್ಯರು. ಬಂಗಾಲದ ವೈಷ್ಣವ ಮತದ ಮೂಲವು ಮಧ್ವಾಚಾರ್ಯರ ಗ್ರಂಥಗಳಲ್ಲಿ ಇರುತ್ತದೆ. ಮಧ್ವಾಚಾರ್ಯರು ಸ್ವತಃ ಬಂಗಾಲಕ್ಕೆ ಹೋದ ಬಗ್ಗೆ ವಿವರಗಳು "ಸುಮಧ್ವವಿಜಯ"ದಲ್ಲೂ ಮತ್ತು ಮಹಮದೀಯ ಇತಿಹಾಸಕಾರನಾದ ಝಿಯಾವುದ್ದೀನ ಬಾರ್ನಿಯ "ತರೀಖ್-ಫಿರೋಜಶಾಹಿ" ಎಂಬ ಗ್ರಂಥದಲ್ಲೂ ದೊರಕುತ್ತವೆ. ಇದೇ ಕಾಲದಲ್ಲಿ ಕ್ರಿ. ಶ. ೧೩೨೪ರಲ್ಲಿ ದಿಲ್ಲಿಯಲ್ಲಿ ರಾಜ್ಯವಾಳುತ್ತಿದ್ದ ಘಿಯಾಸ್‌ವುದ್ದೀನನು ಆಚಾರ್ಯರಿಗೆ ಬಂಗಾಲ ಪ್ರವಾಸದಲ್ಲಿ ತುಂಬಾ ನೆರವಾದನು. ಈ ಅರಸನ ಮಿತ್ರನಾದ 'ದನುಜರಾಯ' ಎಂಬವನು ಆಚಾರ್ಯರನ್ನು ಬಂಗಾಲದಲ್ಲಿ ಬಹುಪರಿಯಾಗಿ ಸತ್ಕರಿಸಿದನು.

> ಪದಂ ಪಶೋರ್ವಾ ವಿನತಾತನೂಜಃ
> ತೀರ್ತ್ವಾ ನದೀಂ ತಾವದ್ ಅದೀನ ಸತ್ವಃ
> ಅನಾರ್ದವಾಸಾಃ ಸಕೂತಹಲಾದ್ಯೈಃ
> **ನೃದೇವ ಭೂದೇವ** ಪದೌರ್ವವಂದೇ ‖

ಎಂದು "ಮಧ್ವವಿಜಯ"ದಲ್ಲಿ ಬರುವ ವರ್ಣನೆಯು ಈ ಘಟನೆಯನ್ನೇ ವಿವರಿಸುತ್ತದೆ.*

ಇಷ್ಟೇ ಅಲ್ಲ; ಈ ವೈಷ್ಣವಪ್ರಭಾವದ ಮೂಲಕ-ಹಿಂದಿನ ಜೈನ ಶ್ರವಣಬೆಳಗೊಳ, ಕಾರ್ಕಳಗಳಂತೆ-ವೈಷ್ಣವ ವಿಜಯನಗರವೂ ಬಂಗಾಲಿ ವೈಷ್ಣವರ ಯಾತ್ರಾಸ್ಥಳವಾಯಿತು. ಇಂದಿಗೂ ಬಂಗಾಲಿ ವೈಷ್ಣವರಲ್ಲಿ ವಿಜಯನಗರದ ಬಗ್ಗೆ ತೀರ ಪೂಜ್ಯವಾದ ಭಾವನೆಯಿದೆ. ಬಂಗಾಲಿ ವೈಷ್ಣವ ಪರಂಪರೆಯ ಮೂರ್ಧನ್ಯರಾದ ಶ್ರೀ. ಚೈತನ್ಯದೇವರೂ ಮತ್ತು ಶ್ರೀ. ನಿತ್ಯಾನಂದರೂ ಯಾತ್ರಾರ್ಥವಾಗಿ ಹೊರಟು ವಿದ್ಯಾನಗರವನ್ನು ಸಂದರ್ಶಿಸಿ ಹೋದರೆಂದು "ಚೈತನ್ಯ-ಚರಿತಾಮೃತ"ದಲ್ಲಿಯೂ, "ಚೈತನ್ಯ-ಭಾಗವತ"ದಲ್ಲಿಯೂ ಉಲ್ಲೇಖವುಂಟು.

> "ತಬೇ ಪ್ರಭು ಆಯಿಲೇನ ವಿಜಯಾನಗರ"

ಎಂದು ಚರಿತಾಮೃತದಲ್ಲಿ ಉಲ್ಲೇಖವಿದೆ. ಇಲ್ಲಿಯ ವೈಷ್ಣವಪರಂಪರೆಯ ಬಗ್ಗೆ ಅನೇಕ ಉಲ್ಲೇಖಗಳು ಬಂಗಾಲದ ರಾಜೇಂದ್ರಪುರದಲ್ಲಿವೆ. ಶ್ರೀವ್ಯಾಸತೀರ್ಥರು "ವಿಷ್ಣುಸಂಹಿತೆ" ಎಂಬ ಗ್ರಂಥವನ್ನು ಬರೆದರೆಂದು "ಗೌರಾಂಗಗಣೋದ್ದೇಶದೀಪಿಕಾ" ಎಂಬ ಗ್ರಂಥದಲ್ಲಿ ಹೇಳಿದೆ. ಈ ಗ್ರಂಥದಲ್ಲಿ ಚೈತನ್ಯರ ಗುರುಪರಂಪರೆ ಹೀಗೆ ಹೇಳಲಾಗಿದೆ: —

> ಶ್ರೀಮನ್ಮಧ್ವಾಚಾರ್ಯರು — ಪದ್ಮನಾಭಾಚಾರ್ಯರು — ನರಹರಿತೀರ್ಥರು — ದ್ವಿಜಮಾಧವ — ಅನಂತರ ಹದಿಮೂರನೆಯವರು ಚೈತನ್ಯದೇವರು.†

ಒಟ್ಟಾರೆ, ಒಬ್ಬ ಸುಪ್ರಸಿದ್ಧ ವಿಮರ್ಶಕರು ಹೇಳಿದಂತೆ: "ಕ್ರಿ. ಶ. ಹನ್ನೊಂದನೆಯ ಶತಮಾನದ ಅಂತ್ಯಕಾಲದಲ್ಲಿ, ಉತ್ತರ ಭಾಗದಲ್ಲೆಲ್ಲ ಕರ್ನಾಟಕರು ತೀರ ಪ್ರಬಲವಾದ ಸ್ಥಾನವನ್ನು ಆಕ್ರಮಿಸಿದ್ದರು."

---

* I. H. Q.—Rames Basu—1927; P. 184. † ಅದೇ ೧೮೫.

"The Karnatakas had gained prominent footing in the Eastern part of Northern India towards the close of the 11th century" +

ಅಷ್ಟೇ ಅಲ್ಲ; ಹೆಚ್ಚುಕಡಿಮೆ ಈ ಕಾಲದ ಕನ್ನಡಿಗರ ಸಮುದ್ರಯಾನ ಮತ್ತು ವಾಣಿಜ್ಯಗಳ ಸಂಬಂಧವೂ ಅನೇಕ ಶಾಸನಗಳಲ್ಲಿ ವರ್ಣಿತವಾಗಿದೆ. ಉದಾಹರಣೆಗೆ, ಕ್ರಿ. ಶ. ೧೧೮೮ರ ಅರಸೀಕೆರೆಯ ಒಂದು ಶಾಸನದಲ್ಲಿ ಚಿಟ್ಟಪಸೆಟ್ಟಿ ಎಂಬವನು ಈ ಕೆಳಗಿನ ವಸ್ತುಗಳನ್ನು ಹಡಗಿನಿಂದ ತಂದು ಮಾರುತ್ತಿದ್ದನೆಂದು ವರ್ಣನೆಯಿದೆ —

"ಹರಿಯ ಹಯಕ್ಕೆ ತೋಡೆನಿಪ ಹೇಷಚಯಂಗಳಂ
ಇಂದ್ರದಂತಿಯೊಳ್ ದೊರೆಯೆನಿಸಿರ್ಪ ದಂತಿಗಳಂ
ಅಭ್ರದೊಳ್ ಆದ ಸುಪಾಣಿ ಮುತ್ತಿನೊಳ್ ಸರಿಯೆನಿಸಿರ್ಪ ಮುತ್ತುಗಳಂ
ಎಯ್ದೆ ಬಹಿತ್ರದೆ ತಂದು ಮಾರುವಂ....ಚಿಟ್ಟಪಸೆಟ್ಟಿ ಸಂತತಂ ||

ಹಾಗೆಯೇ, ವಾಣಿಜ್ಯಶ್ರೇಷ್ಠನಾದ ದಾಸೆಯನು "ಹರಿಯ ಆಶಾಭಾಂಡಮಂ ವಾರುಣಿಗೆ" ನಡೆಸುತ್ತಿದ್ದಾನೆ.— ಹಾಗಾದರೆ, ಬಂಗಾಲದ ಮೇಲಾದ ಕರ್ನಾಟಕದ ಪ್ರಭಾವವು ಯಾವ ರೀತಿ ಆಗಿದೆಯೆಂಬುದನ್ನು ನೋಡೋಣ:—

ನಾವು ಈ ಪ್ರಭಾವವನ್ನು ಪುನಃ **ಮೂರು** ವಿಧವಾಗಿ ಗುರುತಿಸಬಹುದು. **ಒಂದು** ಸಮಾಜ ಮತ್ತು ಸಂಪ್ರದಾಯಗಳಿಗೆ ಸಂಬಂಧಪಟ್ಟುದು. **ಎರಡು** ಕೋಶವಿಷಯ; **ಮೂರು** ವ್ಯಾಕರಣ ಪ್ರಕ್ರಿಯೆ.

ಸಮಾಜ ಮತ್ತು ಸಂಪ್ರದಾಯ:— ಬಂಗಾಲಿ ಸಂಪ್ರದಾಯಗಳ ಮೇಲಾದ, ಕನ್ನಡವೆನ್ನಲು ಬಾರದಿದ್ದರೂ ದ್ರಾವಿಡ ಪ್ರಭಾವವನ್ನು ಎರಡು ಸಂಗತಿಗಳಲ್ಲಿ ಕಾಣುತ್ತೇವೆ.

ಬಂಗಾಲಿಗಳಲ್ಲಿ ದುರ್ಗಾಷ್ಟಮಿ ಒಂದು ಮಹತ್ವದ ಹಬ್ಬವಷ್ಟೇ; ಅದು ತುಂಬಾ ಉತ್ಸವದ ಕಾಲ. ಈ ಕಾಲಕ್ಕೇ ಅಲ್ಲಿಯ ಶಾಲೆ ಕಾಲೇಜುಗಳಿಗೆ ಬಿಡುವು. ಇವು ಪೂಜಾ ಹಬ್ಬದ ದಿನಗಳು. ಆದರೆ, ಈ ದುರ್ಗಾ ವಿಗ್ರಹದ 'ವಿಸರ್ಜನ' ರೀತಿಯು ದ್ರಾವಿಡವೇ ಆಗಿದೆಯೆಂದು ಪಂಡಿತರ ಅಭಿಪ್ರಾಯ. ಈ ವಿಗ್ರಹಗಳನ್ನು ಊರ ಹೊರಗೆ ಒಯ್ಯುವಾಗ, ಅವುಗಳ ಮುಖವನ್ನು ನೇರವಾಗಿ ಎದುರು ಮಾಡಿರದೆ, ಆ ಆ ಹಳ್ಳಿಗಳ ಕಡೆಗೇ ಮಾಡಿರುತ್ತದಂತೆ. ಇದಕ್ಕೆ ಕಾರಣವೆಂದರೆ, ಈ ವಿಗ್ರಹಗಳಿಗೆ ತಮ್ಮನ್ನು ಎಲ್ಲಿ ಒಯ್ಯುತ್ತಿದ್ದಾರೆಂಬುದು ಗೊತ್ತಾಗಬಾರದಂತೆ! ಈ ರೀತಿಯು ದ್ರಾವಿಡ ಪ್ರಭಾವವೆಂದು ಶ್ರೀ. ಬಿ. ಸಿ. ಮುಜುಮದಾರ ಅವರ ಅಭಿಪ್ರಾಯ. ಅವರು ಈ ಬಗ್ಗೆ ಬರೆಯುವದೆಂದರೆ.—

"That in the Bisarjan of the Devi Goddess of the Shakti cult, a special Dravidian method is followed, is interesting to note."

ಅದರಂತೆಯೇ, ಈ ದ್ರಾವಿಡ ಪ್ರಭಾವವಾಗಿರುವ ಇನ್ನೊಂದು ಪರಂಪರೆಯೆಂದರೆ, "ನಾಶಲ್" ಎನ್ನುವುದು.

+ I. H. Q Dec. 1931.

ಈ "ವಾಶಲ್" ಪದ್ಧತಿಯೆಂದರೆ ಹೀಗೆ: – ಹೊಸದಾಗಿ ಮದುವೆಯಾದ ವಧೂ-ವರರು ತಮ್ಮ ಮನೆಯನ್ನು ಮೊದಲಸಲ ಸೇರುವಾಗ, ಅವರನ್ನು ಹಾಗೆಯೇ ಒಳಗೆ ಬಿಡುವದಿಲ್ಲ. ಅವರು ಮನೆಯ ಹೊಸ್ತಿಲ ಇಲ್ಲವೆ ಬಾಗಿಲವ ಹತ್ತರ ಇದ್ದಾಗ, ಎಲ್ಲ ಸ್ತ್ರೀಯರು ಸುತ್ತು ನೆರೆದು ಈ ವಧೂ–ವಗರು ಗೃಹ-ಪ್ರವೇಶ ಮಾಡದಂತೆ ಚೇಷ್ಟೆ ಮಾಡುತ್ತಾರಂತೆ. ಇದಕ್ಕೆ 'ವಾಶಲ್' ಪದ್ಧತಿಯೆಂದು ಕರೆಯುತ್ತಾರೆ. ಈ 'ವಾಸರ–ಘರ್', ಕಂ–ದಮಿಳು 'ವಾಶಲ್'ದ ಹೆಚ್ಚುಕಡಿಮೆ ಸಂಸ್ಕೃತರೂಪ ಅಷ್ಟೇ. ಈ ಪದ್ಧತಿಯು ಬಿಹಾರದಲ್ಲಿಯ ಹಲಕೆಲವು ಜನಗಳನ್ನು ಬಿಟ್ಟರೆ, ಇಡೀ ಹಿಂದುಸ್ಥಾನದಲ್ಲಿ ಮತ್ತೆಲ್ಲೂ ಇಲ್ಲ. ಇಂದಿಗೂ ಕೂಡ, ಅನೇಕ ಅನಾಗರಿಕ ಪಂಗಡಗಳಲ್ಲಿ ನೂತನ ದಂಪತಿಗಳು ಗೃಹ–ಪ್ರವೇಶ ಮಾಡುವಾಗ ಈ ರೀತಿ ಚೇಷ್ಟೆ ಮಾಡುವ ಪದ್ಧತಿಯನ್ನು ನಾವು ಕಾಣುತ್ತೇವೆ.

ಹಾಗಾದರೆ, ಈ ಸಂಪ್ರದಾಯದ ಹೆಸರಿನ ಅರ್ಥವೇನು ?.... ನಾವು ಮೇಲೆ ಸೂಚಿಸಿದ 'ವಾಸರ-ಘರ' ಎನ್ನುವ ಸಂಸ್ಕೃತ ರೂಪಾಂತರವು ಯಾವ ಅರ್ಥವನ್ನಾಗಲೀ, ಪರಂಪರೆಯನ್ನಾಗಲೀ ಸೂಚಿಸದು. 'ವಾಶಲ್' ಎನ್ನುವ ಕಂದಮಿಳು ಪದವು ಮಾತ್ರ ಬಹುಮಟ್ಟಿನ ಅರ್ಥವನ್ನು ಹೇಳುತ್ತದೆ. ಕಂದಮಿಳಿನಲ್ಲಿ 'ವಾಶಲ್' ಅಂದರೆ ಬಾಗಿಲು. ಕನ್ನಡ 'ಬಾಗಿಲು' ಶಬ್ದದ ಮೂಲವಾದರೂ ಹೀಗೆಯೇ. ಅದು 'ಬಾಕಿಲ್'; 'ವಾಯಿಲ್'. 'ವಾಯಿಲ್' ಅಂದರೆ 'ಇಲ್–ವಾಯ್'. ಈ ರೀತಿ 'ಇಲ್' ಎನ್ನುವ ಪದವು ಸಮಸ್ತಪದವಾಗಿ ಉಪಯುಕ್ತವಾದ ಅನೇಕ ಪದಗಳು ಕನ್ನಡದಲ್ಲಿವೆ. 'ಇಲ್' ಎಂದರೆ, ಇಂದಿಗೂ ತಮಿಳಿನಲ್ಲಿ 'ಮನೆ'. 'ಕೋ–ಯಿಲ್'– ಎಂದರೆ ಯಜಮಾನ ಇಲ್ಲವೆ ದೇವರ ಮನೆ. 'ಇಲ್' ಪದದ ಸ್ವರೂಪವು ಇಷ್ಟು ಸುಸ್ಪಷ್ಟವಾಗಿ ನಮಗೆ ಇಂದು ಕನ್ನಡದಲ್ಲಿ ಕಂಡುಬರದಿದ್ದರೂ, ಅನೇಕ ಕನ್ನಡ ಸಮಸ್ತ–ಪದಗಳಲ್ಲಿ ಇದನ್ನು ಕಾಣುತ್ತಿದ್ದೇವೆ. ಉದಾಹರಣೆಗೆ—ಹಿತ್ತಲು, ಹೊಸ್ತಲು, ಬಾಗಿಲು–ಇತ್ಯಾದಿ. 'ಹಿತ್ತಲು' ಶಬ್ದದ ಮೂಲರೂಪವು 'ಪಿಂತಿಲ್' ಎಂದು. ಕೇಶಿರಾಜನು ತನ್ನ ಸಮಾಸ ಪ್ರಕರಣದ ೧೬೬ನೆಯ ಸೂತ್ರದಲ್ಲಿ 'ಪಿಂತಿಲ್' ಶಬ್ದವು ಈ ರೀತಿಯಾಗಿ ಬಂದಿತೆಂದು ಹೇಳುತ್ತಾನೆ. "ಪೆಱಗು ಎಂಬುದುಮ್ ಆ ತೆಱದಿಂ ಪಿಂತೆಂದಕ್ಕುಂ." ಆದ್ದರಿಂದ, ಪೆಱಗು+ಇಲ್=ಪಿಂತು+ಇಲ್='ಪಿಂತಿಲ್'; 'ಪಿಂತಿಲ್' ಎಂದರೆ ಇಲ್ಲ (ಮನೆಯ), ಪಿಂತು (ಹಿಂಭಾಗ). ಆದ್ದರಿಂದ, ಈ ಪಿಂತಿಲ್ 7 ಪಿತ್ತಿಲವಾಗಿ 7 ಹಿತ್ತಲವಾಯಿತು. ಪಂಪನಲ್ಲಿ ಸೇವಕರಿರುವ ಮನೆ ಎನ್ನುವ ಅರ್ಥದಲ್ಲಿ 'ಕೀೞಿಲ್' ಎಂದು ಪ್ರಯೋಗವಿದೆ.— 'ಪೆಣನಿಕ್ಕುಂಗೂೞಿರೊಳಂ **ಕೀೞಿಲೊಳಮ್** ಅೞಿವಗೆಟ್ಟಪರ್"— ಇ. ೮.೬೭.

ಅದರಂತೆ, ಹೊಸ್ತಲು—ಮೊದಲಿಗೆ 'ಪೊಸಂತಿಲ್'. 'ಪೊಸಂತಿಲ್' ಎಂದರೆ 'ಇಲ್ಲ' (ಮನೆಯ), ಪೊಸಂತು (ಪ್ರಾರಂಭ), ಅಂದರೆ ಹೊಸ್ತಲ. ಹಾಗೇ 'ಬಾಗಿಲು'. 'ಬಾಗಿಲ'ದ ಮೂಲರೂಪ 'ವಾಯಿಲ್'; ಅಂದರೆ 'ಇಲ್+ವಾಯ್'=ಮನೆಯ ಬಾಯಿ. 'ಬಾಗಿಲು' ಮನೆಯ ಬಾಯಿ ಇದ್ದಹಾಗೆಯೇ ಸೈ. ಕಾಲುವೆ 'ಕಾಲ' (ಪ್ರವಾಹದ) ಬಾಯಿ ಇದ್ದಹಾಗೆ. ಆದ್ದರಿಂದ, ಈ 'ವಾಯಿಲ್'ವೇ ನಮ್ಮ ಕಂದಮಿಳಿನ 'ವಾಶಲ್'. ನವ–ದಂಪತಿಗಳ ಗೃಹ–ಪ್ರವೇಶದ ಕಾಲಕ್ಕೆ, ಸ್ತ್ರೀಯರು ಬಾಗಿಲು (ವಾಶಲ) ಕಟ್ಟುವ ಈ ಪರಂಪರೆಯು ಸ್ವಾಭಾವಿಕವಾಗಿಯೇ 'ವಾಶಲ್' ಎಂದು ಬಂಗಾಲಿಯಲ್ಲಿ ಕರೆಯಲ್ಪಟ್ಟಿತು. ಸುಪ್ರಸಿದ್ಧ ಬಂಗಾಲಿ ಶಾಸ್ತ್ರಜ್ಞರಾದ ಶ್ರೀ. ಬಿ. ಸಿ. ಮುಜುಮದಾರ ಅವರು ಈ ಬಗ್ಗೆ ಬರೆಯುವದೇನಂದರೆ:—

" **ವಾಶಲ್** (perhaps from **ವಾ** or **ವಾಯು** – mouth and **ಇಲ್** - house). This word is of great ethnic interest. Excepting the case of a very small country in Bihar, the Bengali custom of holding **ವಾಸರ-ಘರ**, after marriage, is unknown else-

where in India. The Sanskrit word 'ವಾಸರ' does not even distantly signify, what is signified by it... ... ...; the married couple is made to stand at the door way (ವಾಶಲ್) and the women folk generally very merrily cut many jokes. "*

ಸಾಮಾಜಿಕ–ಪರಂಪರೆಗಳ ದೃಷ್ಟಿಯಿಂದ ಬಂಗಾಲಿಯ ಮೇಲಾದ ಕಂದಮಿಳ ಪ್ರಭಾವವನ್ನು ನೋಡಿಯಾದ ಮೇಲೆ ಕೋಶದ ದೃಷ್ಟಿಯಿಂದ ಬಂಗಾಲಿಯಲ್ಲಿ ಸೇರಿದ ಕನ್ನಡಪದಗಳು ಯಾವವಿರಬಹುದೆಂಬುದನ್ನು ವಿಚಾರಿಸುವಾ. ಸಂಸ್ಕೃತ ಕೋಶದ ಮೇಲಾದ ದ್ರಾವಿಡ ಪ್ರಭಾವವನ್ನು ವಿವರಿಸುವಾಗ, ಈಗಾಗಲೇ ನಾವು ಆರ್ಯಸಂಸ್ಕೃತಿಯೇ ಅತ್ಯುಚ್ಚವೆಂಬ ಕಲ್ಪನೆಯನ್ನು ಬಿಟ್ಟು, ವಸ್ತುಸ್ಥಿತಿಯನ್ನು ಪರೀಕ್ಷಿಸಬೇಕೆಂದು ಸೂಚಿಸಿದ್ದೇವೆ. ಶ್ರೀ. ಮುಜುಮದಾರ ಅವರು ಹೇಳುವಂತೆ,

"A peculiar bias of Aryanism befogs the minds of many and a sort of misdirected patriotism does not allow many to see things as they are."

ಇದರ ಪರಿಣಾಮವಾಗಿ, ಡಾ. ಆರ್. ಜಿ. ಭಂಡಾರಕರ ಅವರಂಥ ಕೀರ್ತಿವೆತ್ತ ವಿದ್ವಾಂಸರು ಕೂಡ ಎಷ್ಟೋ ಸಲ ಈ ದ್ರಾವಿಡ ಪ್ರಭಾವವನ್ನು ಗುರುತಿಸದೆ, ಮತ್ತೆ ಬೇರೆ ಕಾರಣಗಳನ್ನು ಸೂಚಿಸಬಯಸುತ್ತಾರೆ. ಈ ಬಗ್ಗೆ, ಪುನಃ ಶ್ರೀ. ಮುಜುಮದಾರ ಅವರು ಹೇಳುವದೇನಂದರೆ : —

"It is really very curious that some peculiarities, which are doubtless due to Dravidian influence, have been sought to be explained by some eminent philologists by a cause other than the real one. Such an eminent scholar as Sri. R. G. Bhandarkar considers such changes in the oldest known Prakrita as ಧಮ್ಮೋ for ಧರ್ಮ; ಸಂಕಪ್ಪೋ for ಸಂಕಲ್ಪ, ಸಿಲೋಕ for ಶ್ಲೋಕ, etc. to have been due to the natural vocal tendencies of the Aryan speakers themselves."

ಆದರೆ, ಇದಕ್ಕೆ ಡಾ. ಭಂಡಾರಕರ ಅವರೂ ಹೊಣೆಯಲ್ಲ. ಯಾಕಂದರೆ, ಡಾ. ಭಾಂಡಾರಕರ ಅವರ ಭಾಷಣದ ಕಾಲದಲ್ಲಿ, ಅಂದರೆ, ಕ್ರಿ. ಶ. ೧೮೭೭ರಲ್ಲಿ ದ್ರಾವಿಡ ಮತ್ತು ಆರ್ಯರು ಒಂದು ಕಾಲಕ್ಕೆ ಕೂಡಿದ್ದಿರಬಹುವೆಂಬ ಕಲ್ಪನೆ ಕೂಡ ಪಂಡಿತರಿಗೆ ಬಂದಿರಲಿಲ್ಲ.

ಹೀಗಾಗಿ, ದ್ರಾವಿಡದಿಂದ ಸಂಸ್ಕೃತಕ್ಕೆ ಹೋದ ಈ ಕೆಳಗಿನ ಶಬ್ದಗಳನ್ನು ಇಂದಿಗೂ ಬಂಗಾಲಿಯಲ್ಲಿ ಉಪಯೋಗಿಸುವುದನ್ನು ಕಾಣುತ್ತೇವೆ. ಉದಾ: ಕಾಳ, ಕುಟಿ, ವಲಯ, ನಾರಿಕೇಳ, ನೀರ್, ತೋಯ, ಮಾಮಾ, ಮಾಲೆ, ಮಲ್ಲೈ, ಮೀನ, ಕಂಬು, ಆಳಿ, ಘೋಟಕ, ಆಟೋಪ, - ಇತ್ಯಾದಿ. ಈ ಶಬ್ದಗಳು ದ್ರಾವಿಡ ವರ್ಗದವಿದ್ದು ಸಂಸ್ಕೃತದ ಮುಖಾಂತರವಾಗಿ ಬಂಗಾಲಿಯಲ್ಲಿ ಸೇರಿದುವು.

ಈ ಸಂಸ್ಕೃತ ಕೋಶದ ಶಬ್ದಗಳಲ್ಲದೆ, ಇನ್ನೂ ನೂರಾರು ಶಬ್ದಗಳು ಕಂದಮಿಳಿನಿಂದ ನೇರವಾಗಿ ಬಂಗಾಲಿ ಭಾಷೆಯಲ್ಲಿ ಸೇರಿದವು. ಈ ಶಬ್ದಗಳು ನಿರ್ದಿಷ್ಟವಾಗಿ ಕನ್ನಡವೇ ಎಂದಾಗಲೀ, ಇಲ್ಲವೆ ಕನ್ನಡ ಭಾಷೆಯಿಂದಲೇ ಬಂಗಾಲಿಗೆ ಹೋದುವೆಂದಾಗಲೀ, ಹೇಳಲು ಬಾರದಿದ್ದರೂ, ಈ ಶಬ್ದಗಳ ರೂಪಗಳು

* H. B. L. P. 87.

ಇಂದಿಗೂ ಕನ್ನಡ ಶಬ್ದಗಳ ರೂಪದ ಸಮೀಪದಲ್ಲಿಯೇ ಇರುವದರಿಂದ, ಐತಿಹಾಸಿಕ ಕಾಲದಲ್ಲಿ ಕೂಡ ಪ್ರಬಲವಾದ ಸಂಪರ್ಕವನ್ನಿಟ್ಟುಕೊಂಡಿದ್ದ ಕನ್ನಡದಿಂದ ಹೋದುವೆಂದು ಊಹಿಸಲಿಕ್ಕೆ ಯಾವ ತೊಂದರೆಯೂ ಇರಕೂಡದು.

ಈ ವರ್ಗದ ಶಬ್ದಗಳಲ್ಲಿ ಕೆಳಗಿನವುಗಳನ್ನು ಹೇಳಬಹುದು :—

ಡಾ. ಕಿಟೆಲ್ ಅವರು ಕನ್ನಡದಲ್ಲಿ ವಿದೇಶೀಯವೆಂದು ಹೇಳುವ ಕಲ್ಲು-ಪರಟೆ ಅರ್ಥದ 'ಖಲ್' ಶಬ್ದವು ಶ್ರೀ. ಮುಜುಮುದಾರ ಅವರ ಪ್ರಕಾರ ದ್ರಾವಿಡ. ಇದರಂತೆ, ಕನ್ನಡ ಉಡುಪು=ಬಂಗಾಲಿ ಉಡುತ್ತು; ಉರಿಯಾ 'ಉಡಿಬಾ'; ಬಂಗಾಲಿ ಕಾಯ್‌ಬಿಚಿ (ಹುಣಸೆಹಣ್ಣು) ಯಲ್ಲಿಯ ಆದಿಪದ ಕಾಯ್ ಕಂದಮಿಳು.

ಬಂಗಾಲಿ	ಕನ್ನಡ	ತೆಲುಗು	ತಮಿಳು
ಖಟವಾ	ಕಟ್ಟಿಗೆ	ಕಟ್ಟೆ	ಕಟ್ಟೈಲ
ಕಟಾಲ್	ಕಡಲು	—	ಕಡಲು

(ಬಂಗಾಲ ಉಪಸಾಗರಕ್ಕೆ 'ಖಾಡಿ' ಎಂದೂ ಕರೆಯುವದುಂಟು. ಬಂಗಾಲದ ಕೆಲವು ಭಾಗಗಳಲ್ಲಿ, ಕೂಡಿ ನಿಂತ ನೀರಿಗೂ 'ಖಾಡಾಲ್'—ಎನ್ನುತ್ತಾರೆ.)

ಸೆಜೋ			
(ಉರಿಯಾ / ನೇಪಾಳಿ { ಸಾನಾ)	ಸಣ್ಣ	—	ಚಿನ್ನ ಇ.
ತೋಡಾ	ತೊಡೆ	—	—

ಪಟ್ಟವಸ್ತ್ರ ತಮಿಳು ಪಟ್ಟೈ; ಬಂಗಾಲಿ 'ನಿರಾಲಾ' (Shade) ಶಬ್ದಕ್ಕೂ ಕನ್ನಡ 'ನೆರಳು' ಶಬ್ದಕ್ಕೂ ಇರುವ ಸಾಮೀಪ್ಯವು ಸ್ಪಷ್ಟವೇ ಇದೆ. "Niral is primarily a shade and secondarily, a place apart; our 'Nirala' is from it" (Mujumdar.) ಪಲದಿಂದ 'ಪಾಲ್' (ಅಂದರೆ ಗುಂಪು) ಬಂದಿತು. 'ಮಗ' ಅರ್ಥದ 'ಮಾಖನ್' ಶಬ್ದವು ಬಂಗಾಲಿಯಲ್ಲಿ ತೀರ ಅಚ್ಚೆಯ ಶಬ್ದ. "Magan=son, is also found in the form ಮಕ್ಕನ್; to give a son an endearing name, this term is usual in Bengal as ಮಾಖನ್; ಮಾಖನ್‌ಲಾಲ್ is a very comon name in Bengali." (H.B L. 86.) 'ಮುಗಿ' ಅರ್ಥದ 'ಮುಡಿ'ಯಿಂದ, ಬಂಗಾಲಿ 'ಮುಡಾ' ಬಂದಿತು.—ಮಾಥೇರ್ ಮುಡಾ ಇತ್ಯಾದಿ. ಬಂಗಾಲಿಯಲ್ಲಿ 'ಮೋಟ್' ಅಂದರೆ 'ಗಂಟು'. ಕಂದಮಿಳು ಮೊಟ್ಟೆ, ಮೋಟ್ಟೈ (ತೆಲುಗು-ನೋಟಾ) ನೋಡುವುದು. ಇದರಂತೆ, ವಾಶಲ್ (ಬಾಗಿಲು); ಕಲ್ಲ; ದಾಡಿ ಶಬ್ದಗಳನ್ನೂ ನೋಡುವುದು.

ಬಂಗಾಲಿ 'ಕಲ್ಲ' ಶಬ್ದವು ಕನ್ನಡ 'ಕಳ್ಳ'ದಿಂದ ಬಂದುದು. ಆದರೆ, ಅಲ್ಲಿ ಅದಕ್ಕೆ ಸ್ವಲ್ಪ ಹೆಚ್ಚು ಉದಾತ್ತ ಅರ್ಥವಿದೆ. ನಮ್ಮಲ್ಲಿ ಅನಧಿಕೃತ ವಿಷಯಗಳನ್ನು ಸಾಧಿಸುವವನು 'ಕಳ್ಳ'ನಾದರೆ, ಅಲ್ಲಿ 'ಜಾಣ ಮತ್ತು ಧೂರ್ತ' ಮನುಷ್ಯ. "'ಕಲ್ಲಾ' a clever but wily man in Bengal is from, 'Kallan'—a thief." (H B..L 82.) ಶ್ರೀ. ಮುಜುಮುದಾರ ಅವರ ಪ್ರಕಾರ ಬಂಗಾಲಿ 'ದಾಡಿ' ಶಬ್ದವು ಸಂಸ್ಕೃತ 'ದಂಷ್ಟ್ರ' ಶಬ್ದದ ಅಪಭ್ರಂಶವಾಗಿರದೆ, ತಮಿಳು 'ತಾಡಿ'ಯಿಂದ ಬಂದಿರಬೇಕೆಂದು ಹೇಳುತ್ತಾರೆ. ಅದಕ್ಕೆ ಅವರು ಕೊಡುವ ಕಾರಣಗಳೆಂದರೆ, ಒಂದು "Such a round-about expression for ಶ್ಮಶ್ರು is hardly

imaginable." ಎರಡು "Moreover, it is not easy to think that in Dravidian, no name for beard existed and the word was only borrowed from the northern country." (ಪುಟ ೮೪) ಆದರೆ, ಇದರ ಜೊತೆಗೆ ಕನ್ನಡದಲ್ಲಿರುವ 'ಗಡ್ಡ' ಶಬ್ದವನ್ನು ಹೋಲಿಸಿದರೆ, ಈ ಅರ್ಥವನ್ನು ಸೂಚಿಸಲು ಶಬ್ದವಿದ್ದಿತೆಂದು ಸ್ಪಷ್ಟವಾಗುತ್ತದೆ. ೧೦ನೆಯ ಶತಮಾನದ ಪಂಪನಲ್ಲಿ 'ಕಡ್ಡು' ರೂಪವಿದೆ. 'ಕಡ್ಡುಬಂದ' ಅಂದರೆ 'ಗಡ್ಡಬಂದ'—'ಅಂತು ಪೊಜಿಮಡುವ ಆರಾತಿ ಕಾಲಾನಲನಂ ಕಂಡು **ಕಡ್ಡುಬಂದ** ದೊಡ್ಡರೆಲ್ಲಂ ಮುಸುಜಿ" ಇ. ೧೩.೬೧. ತೆಲುಗು-ತಮಿಳುಗಳಲ್ಲಿ ಕಟ್ಟ-ಕಟ್ಟೆ ಎಂದು ರೂಪಗಳಿವೆ.

ಪ್ರೊ. ಜೂಲ್ಸ್ ಬ್ಲಾಃಕ್ ಅವರು ಬಂಗಾಲಿ 'ಟೋಂಟ' (lips) ಮತ್ತು ಕನ್ನಡ 'ತುಟಿ' ಪದಗಳಲ್ಲಿಯ ಸಾದೃಶ್ಯವನ್ನು ಎತ್ತಿ ತೋರಿಸುತ್ತಾರೆ. "Canarese ತುಟಿ (lips) recalls too much Bengali" 'Thomt', deformation of the term for 'lips' "*

ಸಾಮಾಜಿಕ ಮತ್ತು ಕೋಶ-ವಿಷಯಕ ಸಂಬಂಧಗಳನ್ನು ನೋಡಿಯಾದ ಮೇಲೆ, ಉಚ್ಚಾರ ಮತ್ತು ವ್ಯಾಕರಣ ಪ್ರಕ್ರಿಯೆಗಳ ದೃಷ್ಟಿಯಿಂದ (ಕನ್ನಡ) ದ್ರಾವಿಡಕ್ಕೂ ಮತ್ತು ಬಂಗಾಲಿಗೂ ಇರುವ ಸಂಬಂಧ ವೇನೆಂಬುದನ್ನು ನೋಡೋಣ: –

ಉಚ್ಚಾರದೃಷ್ಟಿಯಿಂದ ಸಂಸ್ಕೃತ ಇಲ್ಲವೆ ಬಂಗಾಲಿಯಲ್ಲಿ ಕಂಡುಬರುವ ಟ-ವರ್ಗವು ದ್ರಾವಿಡ ಪ್ರಭಾವವೆಂದು ಪಂಡಿತರ ಅಭಿಪ್ರಾಯ. ಈ ಟ-ವರ್ಗವು ದ್ರಾವಿಡ ಮತ್ತು ಕನ್ನಡ ಭಾಷೆಗಳ ವೈಶಿಷ್ಟ್ಯ. ಹತ್ತನೆಯ ಶತಮಾನದ ಪಂಪನು ಭೀಮಸೇನನ ಪ್ರತಿಜ್ಞೆಯೆಂದರೆ 'ಟಾಠಡಾಢಣ'-ವೆಂದು ಆಲಂಕಾರಿಕವಾಗಿ ಹೇಳುತ್ತಾನೆ. ರಾಜಶೇಖರನಂತೂ ಕನ್ನಡಿಗರ ವಾಚನ ರೀತಿಯನ್ನು ವಿವರಿಸುವಾಗ ಅವರು ಧೀರ-ವಾಚನ ರೀತಿಯ 'ಟಂಕಾರೋತ್ತರ ಪಾಠಿನ'ರೆಂದು ಹೇಳುತ್ತಾನೆ:—

"ರಸಃ ಕೋಽಸ್ತು; ಕಾಽಸ್ತು ರೀತಿಃ,
ಸಗರ್ವಂ ಸರ್ವ ಕರ್ಣಾಟಾಃ ಟಂಕಾರೋತ್ತರ ಪಾಠಿನಃ"

ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ಡಾ. ಸ್ಟೆನ್ ಕೋನೋ ಅವರು ಈ ಬಗ್ಗೆ ಬರೆಯುವಾಗ,

"The cerebral letters, however, form an essential feature of Dravidian phonology, and it therefore seems, possible that Dravidian influence has been at work, and at least given strength to a tendency, which can, it is true, have taken its origin among the Aryans themselves."

ಇದರ ಬಗ್ಗೆ, ಶ್ರೀ. ಮುಜುಮದಾರ ಅವರು,—

"It has already been made pretty clear that some people, who were once closely allied to the speakers of Dravidian *speech, ethnically, as well as in culture form the bulk of our Bengali speaking population* "†

ಈ ರೀತಿಯಾಗಿ, ನಾವು ಇಂದಿನ ಬಂಗಾಲಿಯಲ್ಲಿ, 'ಟಂಕ' ಅಂದರೆ 'ಗುಡ್ಡದ ತುದಿ'; 'ಠಕ್ಕುರ', ಬಹುಮಾನಾರ್ಥದ ಪದ; ಡಮುರು; ಢಕ್,—ಮೊದಲಾದವುಗಳನ್ನು ಕಾಣುತ್ತೇವೆ.

* P. A, & P D., P. 56.   † H. B. L. 69.

ವ್ಯಾಕರಣದ ದೃಷ್ಟಿಯಿಂದ, ಬಂಗಾಲಿ ವಿಭಕ್ತಿ ಪ್ರತ್ಯಯಗಳಲ್ಲಿ ನಾವು ಪುನಃ ದ್ರಾವಿಡ ಇಲ್ಲವೆ ಕನ್ನಡ ಪ್ರಭಾವವನ್ನು ಕಾಣಬಹುದು.

ಚತುರ್ಥಿಯ 'ಕೆ':—ಬಂಗಾಲಿ ಭಾಷೆಯಲ್ಲಿ ಚತುರ್ಥಿಯನ್ನಾಗಲೀ, ಉದ್ದೇಶವನ್ನಾಗಲೀ ಸೂಚಿಸಬೇಕಾದರೆ, 'ಕೆ' ಪ್ರತ್ಯಯವನ್ನು ಉಪಯೋಗಿಸುತ್ತಾರೆ. ಉರಿಯಾ 'ಕರಿಬಾಕು'; ಬಂಗಾಲಿ 'ಕರಿಬಾರ್'; ಹಿಂದಿ 'ಕರನೇಕಾ'–'ಜಾನೇಕಾ'—ಇತ್ಯಾದಿ ನೋಡುವುದು. ಆರ್ಯವರ್ಗದ ಈ ಭಾಷೆಗಳಲ್ಲಿ ಕಂಡುಬರುವ 'ಕೆ' ಇಲ್ಲವೆ 'ಕಾ'—ಎನ್ನುವುದು ದ್ರಾವಿಡ ಭಾಷೆಗಳ ಪ್ರಭಾವವೆಂದು ಡಾ. ಕಾಲ್ಡ್‌ವೆಲ್ ಅವರು ಕ್ರಿ. ಶ. ೧೮೬೫ರಲ್ಲಿ ಮೊಟ್ಟಮೊದಲಿಗೆ ಸೂಚಿಸಿದಾಗ, ಅನೇಕ ವಿಮರ್ಶಕರು ಅದನ್ನು ಅಲ್ಲಗಳೆದರು. ಈ ಬಗ್ಗೆ, ಬೀಮ್ಸ ಮೊದಲಾದ ಪಂಡಿತರು ಹೇಳಿದ ಅಭಿಪ್ರಾಯಗಳು ಡಾ. ಭಂಡಾರಕರ ಅವರಿಗೆ ಸರಿಯೆನಿಸದಿದ್ದರೂ, ಅವರು ಡಾ. ಕಾಲ್ಡ್‌ವೆಲ್‌ರ ಅಭಿಪ್ರಾಯವನ್ನೂ ಪುರಸ್ಕರಿಸುವಂತಿರಲಿಲ್ಲ. ಯಾಕಂದರೆ, ದ್ರಾವಿಡರು ಆರ್ಯರ ಮೇಲೆ ಪ್ರಭಾವ ಮಾಡಿರಬಹುದಾದ ಸಾಧ್ಯತೆಯು ಕೂಡ ಅಂದು ಎನಿಸಿರಲಿಲ್ಲ.

ಟ್ರಂಪರವರು, ಬಂಗಾಲಿಯ 'ಕೆ' ಪ್ರತ್ಯಯವು ಸಂಸ್ಕೃತದ 'ಕೃತೆ'—ಎಂಬುದರಿಂದ ಬಂದಿದೆಯೆಂದೂ, ಬೀಮ್ಸ ಅವರು ಆ 'ಕೆ' ಪ್ರತ್ಯಯವು ಹಿಂದಿಯ 'ಕಹಾ' (ಸಂ. 'ಕಕ್ಷ'ದ ತದ್ಭವ) ದಿಂದ ಬಂದಿದೆಯೆಂದೂ ಹೇಳಿದರು. ಆದರೆ, ಸಂಸ್ಕೃತದ ಈ ಪದಗಳು ಬಂಗಾಲಿಯ 'ಕೆ'ದ ಅರ್ಥವನ್ನು ಸೂಚಿಸುತ್ತಿಲ್ಲ. ಡಾ. ಭಂಡಾರಕರ ಅವರು ಹೇಳಿದಂತೆ, ಇವುಗಳಲ್ಲಿ ಚತುರ್ಥಿಯ ಅರ್ಥವಿಲ್ಲ. ಆದರೆ, ಡಾಕ್ಟರ್ ಭಂಡಾರಕರ ಅವರು ಸೂಚಿಸುವ 'ಕೇಹಿ', 'ತೇಹಿ'ಗಳೂ ಕೂಡ ಸಮರ್ಥನೀಯವಿಲ್ಲ; ಯಾಕಂದರೆ, ಇವುಗಳಲ್ಲಿಯೂ ಚತುರ್ಥಿಯ ಆದೇಶವಿಲ್ಲ. ಆದ್ದರಿಂದ, ಡಾ. ಕಾಲ್ಡ್‌ವೆಲ್ ಅವರು ಈ ದ್ರಾವಿಡ ಸಂಬಂಧವನ್ನು ಯಶಸ್ವಿಯಾಗಿ ಸೂಚಿಸಿದರು. ಕನ್ನಡದ 'ಕೆ'ಯಂತೂ, ಇವುಗಳ ತೀರ ಸಮೀಪದಲ್ಲಿದ್ದುದನ್ನು ಗಮನಿಸಬೇಕು.

ಬಹುವಚನದ 'ಗಳ್':—ಕನ್ನಡದಲ್ಲಿ 'ಇರಾಶ್ಲೇಷೋ ಗಳಃ'—ಎಂಬುದು ಬಹುವಚನ ಸೂತ್ರವಷ್ಟೇ. ಕೇಶಿರಾಜನು ಕೂಡ ಇರ್, ಅರ್, ದಿರ್, ವಿರ್, **ಗಳ್, ಕಳ್**—ಮೊದಲಾದುವು ಕನ್ನಡದ ಬಹುವಚನ ಪ್ರತ್ಯಯಗಳೆಂದು ಹೇಳಿದನು.

ಈ 'ಗಳ್' ಪ್ರತ್ಯಯದ ಪ್ರಭಾವವು ಪಾಲಿಯ ಮೇಲಾಯಿತೆಂದು ಹೇಳುತ್ತಾರೆ. ತತ್ಪರಿಣಾಮವಾಗಿ, 'ಪುಪ್ಪ-ಗಲ್' ಅಂದರೆ 'ತುರಾಯಿ' (nose–gay), ಮೊದಲಾದ ರೂಪಗಳು ಬಂದವು. ಅನಂತರದ ಪ್ರಾಕೃತ ಗ್ರಂಥಗಳಲ್ಲೂ ಕೂಡ, ಮತ್ತ–ಗಳ್ (ಅಂದರೆ ಮಾತ್ರೆ–ಗಳು, ಮಾತ್ರಾ-ಸಮೂಹ), ಬಿಸ–ಗಲ್; ಮಾ–ಆ-ಗಲ್ ಮೊದಲಾದ ಬಹುವಚನದ ರೂಪಗಳು ಬರುತ್ತವೆ. ಈ ಪ್ರಾಕೃತದ 'ಗಲ್' ಪ್ರತ್ಯಯವೇ, ಮುಂದು ಬಂಗಾಲಿಯಲ್ಲಿ 'ಗುಲಿ' ಇಲ್ಲವೆ 'ಗುಲಾ'—ಆಯಿತೆಂದು ಪಂಡಿತರ ಅಭಿಪ್ರಾಯ.

ಬಹುವಚನದ 'ಅರ್':—ಇದರಂತೆ, ಬಂಗಾಲಿಯಲ್ಲಿಯ ಇನ್ನೊಂದು ಬಹುವಚನ ಪ್ರತ್ಯಯವೆಂದರೆ 'ರಾ' ಎಂಬುದು. ಹಲವು ಬಂಗಾಲಿ ವಾದಿಗಳ ಪ್ರಕಾರ ಈ 'ರಾ' ಪ್ರತ್ಯಯವು ಷಷ್ಠಿಯ ಪಲ್ಲಟವೆಂದು ಹೇಳುತ್ತಾರೆ. ಆದರೆ, ನಿಜವಾಗಿ ನೋಡಿದರೆ, ಇದು ಕೂಡ ದ್ರಾವಿಡದ 'ಅರ್'ದ ರೂಪಾಂತರವೆಂದು ಪಂಡಿತರ ಅಭಿಪ್ರಾಯ. ದ್ರಾವಿಡ ಭಾಷೆಗಳಲ್ಲಿ, ಅದೂ ವಿಶೇಷತಃ ಕನ್ನಡದಲ್ಲಿ, ಈ 'ಅರ್'—ಎಂಬುದು

ತೀರ ಪ್ರಚಲಿತವಾದ ಪ್ರತ್ಯಯುವೆಂಬುದು ಗೊತ್ತಿದ್ದ ಮಾತು. ಕೇಶಿರಾಜನು ಈ 'ಅರ್' ಪ್ರತ್ಯಯವು ಸರ್ವನಾಮ, ನಾಮಪದ ಮತ್ತು ಗುಣವಚನಗಳಲ್ಲಿ ಬರುತ್ತದೆಂದು ಹೇಳುತ್ತಾನೆ.—ರಾಮರ್, ಪೆರವರ್, ಉದ್ಧತರ್, ಸುಂದರರ್—ಇತ್ಯಾದಿ. ಆದರೆ, ಬಂಗಾಲಿಯ ಈ 'ರಾ' ಪ್ರತ್ಯಯವು ಜನ-ಮಾತಿನಲ್ಲಿ ಕಂಡು ಬರುತ್ತಿದ್ದರೂ, ಲಿಖಿತ-ಭಾಷೆಯ ಗೌರವವನ್ನು ಪಡೆಯಲಿಲ್ಲ. ಬಂಗಾಲಿಯ 'ಶ್ರೀಕೃಷ್ಣ ಕೀರ್ತನ'ದಲ್ಲಿ ಈ 'ಅರ್' ಪ್ರತ್ಯಯವು ಮೂರೇ ಸಲ ಬರುತ್ತದಂತೆ. 'ಪಯಾರ್' ಅಂದರೆ, 'ಪದ+ಅರ್' (couplet). ಈ ಬಗ್ಗೆ ಶ್ರೀ. ಮುಜುಮದಾರ ಅವರು ಹೇಳುವದೇನಂದರೆ.—

> "That this suffix was adopted in Bengali on the soil of Bengal, is quite evident; being a suffix of vulgar or popular origin, it was not much used in the literary language of olden days.' *

ಇದರಂತೆ, ಷಷ್ಠಿಪ್ರತ್ಯಯದ ಮೂಲಕ ಗುಣವಚನದ ಅರ್ಥವನ್ನು ಹೇಳುವುದೂ ಬಂಗಾಲಿ ಮತ್ತು ಕನ್ನಡಗಳಿಗೆ ಸಾಮಾನ್ಯವಾಗಿದೆ. ಉದಾ: ಏಕೇರ್ ನಂಬರ್ ಜುಆಕೋರ್; ಗೋಲೇರ್ ಕಥಾ—ಇತ್ಯಾದಿ. ಕನ್ನಡದ 'ಮೊದಲನೆಯ ನಂಬರ ಘಟಂಗ', 'ಗೊಂದಲದ ಸುದ್ದಿ', ಮೊದಲಾದವನ್ನು ನೋಡುವುದು.

ಶ್ರೀ. ಕೆ. ರಾಮಕೃಷ್ಣಯ್ಯನವರು ಈ ಕೆಳಗಿನ ಅಂಶಗಳು ಕೂಡ ದ್ರಾವಿಡ ವರ್ಗಕ್ಕೂ ಮತ್ತು ಈ ಔತ್ತರೇಯ ಭಾಷೆಗಳಿಗೂ ಸಾಮಾನ್ಯವಾಗಿವೆಯೆಂದು ಹೇಳುತ್ತಾರೆ.

೧. ಸ್ವರಾನುಕರಣ ರೂಪಗಳು

ಕನ್ನಡದಲ್ಲಿ 'ಇತ್ಯಾದಿ' ಅರ್ಥವನ್ನು ಸೂಚಿಸಲು ಸ್ವರಾನುಕರಣವನ್ನು ಉಪಯೋಗಿಸುತ್ತೇವಷ್ಟೇ. ಉದಾ:—ನೀರು-ಗೀರು; ಮನೆ-ಗಿನೆ; ರೊಕ್ಕ-ಗಿಕ್ಕ ಇತ್ಯಾದಿ. ಇದರಂತೆಯೇ, ತಮಿಳು-ತೆಲುಗುಗಳಲ್ಲಿ, ಕುದಿರೈ-ಕಿದಿರೈ; ತೆಲುಗು, ಗುರ್ರಮು-ಗಿರ್ರಮು ಇತ್ಯಾದಿಯಾಗಿ ಹೇಳುವದುಂಟು. ಇದರಂತೆ, ಮರಾಠಿ ಯಲ್ಲಿಯ ಜೇವಣ್-ಜೀವಣ್; ಘೋಡಾ-ಬೀಡಾ; ಬೆಂಗಾಲಿಯ ಘೋರಾ-ಟೋರಾ; - ಮೊದಲಾದುವು ಕೂಡ ದ್ರಾವಿಡ ಪ್ರಭಾವ.

೨. ತರ-ತಮ ಭಾವ

ಆರ್ಯವರ್ಗದ ಭಾಷೆಗಳಲ್ಲಿ ಗುಣವಚನಗಳ ತರ-ತಮ ಭಾವವನ್ನು ವ್ಯಕ್ತಮಾಡಲು ಪ್ರತ್ಯೇಕವಾದ ಪ್ರತ್ಯಯಗಳೇ ಇವೆ. ಉದಾಹರಣೆಗೆ, ಇಂಗ್ಲಿಷದ great ಇದರ 'ತರ-ಭಾವ'ವು greater ಎಂದೂ, 'ತಮ-ಭಾವ'ವು greatest ಎಂದೂ ಆಗುತ್ತವೆ. ಇಂಗ್ಲೀಷದ ಈ 'er' 'est' ಗಳಂತೆಯೇ, ಸಂಸ್ಕೃತದಲ್ಲಿ ಕೂಡ, 'ಕನೀಯಸ್' 'ಕನಿಷ್ಠ'—ಎಂದು ರೂಪಗಳನ್ನು ಕಾಣುತ್ತೇವೆ. ಉಳಿದ ಆರ್ಯವರ್ಗದ ಭಾಷೆಗಳಾದ ಪರ್ಶಿಯನ್‌ದಲ್ಲಿ 'ತರ್' 'ತರೀನ್'-ಎಂಬ ಪ್ರತ್ಯಯಗಳನ್ನೂ, ಗ್ರೀಕದಲ್ಲಿ 'teros'-'tatos'-ಎಂಬು ವನ್ನೂ ಉಪಯೋಗಿಸುತ್ತಾರೆ. ಆದರೆ, ಈ ಪ್ರತ್ಯಯಗಳು ಹಿಂದುಸ್ಥಾನದಲ್ಲಿಯ ಇತರ ಆರ್ಯವರ್ಗದ ಭಾಷೆಗಳಾದ ಬಂಗಾಲಿ, ಮರಾಠಿ ಮೊದಲಾದವುಗಳಲ್ಲಿ ಮಾತ್ರ ಕಂಡುಬರುವದಿಲ್ಲ. ಈ ಭಾಷೆಗಳಲ್ಲಿಯ ಈ ಪ್ರಯೋಗವು ದ್ರಾವಿಡ ರೀತಿಯೆಂದೇ ಹೇಳಬೇಕು.

* H. B. L. 88.

ಉದಾಹರಣೆಗೆ, ಕನ್ನಡದಲ್ಲಿ 'ತರ' ಭಾವವನ್ನು ಹೇಳಲು 'ಕಿಂತ' ಎಂಬ ಪ್ರತ್ಯಯವನ್ನೂ, 'ತಮ' ಭಾವಕ್ಕೆ ಸಪ್ತಮಿಯನ್ನೂ ಉಪಯೋಗಿಸುತ್ತೇವೆ.

ಇದರಲ್ಲಿ, ಮೊದಲನೆಯದರಲ್ಲಿ ಬರುವ 'ಕಿಂತ' ಪ್ರತ್ಯಯವು ಕೂಡ, ಪ್ರತ್ಯೇಕ ಪ್ರತ್ಯಯವೇನೂ ಅಲ್ಲ. ಅದು ಚತುರ್ಥಿ ಮತ್ತು ಪಂಚಮಿಗಳ ಸೇರುವಿಕೆಯಿಂದ ಸಿದ್ಧವಾಯಿತು. ಕೇಶಿರಾಜನ 'ಕೃಷ್ಣಂಗೆ ಬಲಭದ್ರಂ ಪಿರಿಯಂ' ಎಂಬುದು, ಕಾಲಕ್ರಮೇಣ, 'ಕೃಷ್ಣಂಗಿಂದ ಬಲಭದ್ರಂ ಪಿರಿಯಂ' ಎಂದಾಗಿ, ಇಂದು 'ಕೃಷ್ಣನಕಿಂತ' ಎಂಬ ರೂಪವನ್ನು ಕೊಟ್ಟಿತು.

'ತಮ-ಭಾವ'ವಂತೂ ಸಪ್ತಮಿಯಿಂದ ಸಿದ್ಧವಾಗುತ್ತದೆಂದು ಕೇಶಿರಾಜನೇ ಹೇಳಿದ್ದಾನೆ. 'ಪರಿಕಾರರೊಳ್ ಈತಂ ಕಾಲ್ಬಲ್ಲಿದಂ' 'ಈವರೊಳ್ ಶ್ರೇಷ್ಠಂ' ಇತ್ಯಾದಿ.

ಶ್ರೀಮಾನ್ ಕೆ. ರಾಮಕೃಷ್ಣಯ್ಯನವರ ಪ್ರಕಾರ ಮರಾಠಿ-ಬಂಗಾಲಿಗಳ ಈ ರೂಪಗಳು ಕೂಡ ದ್ರಾವಿಡ ಪ್ರಭಾವದಿಂದ ಉಂಟಾದುವು. ಅಲ್ಲಿಯಾದರೂ, ಈ ವಿಚಾರಗಳನ್ನು ಹೇಳಲು ಹೀಗೆ ಪ್ರಯೋಗ ಮಾಡುತ್ತಾರೆ.—'ತ್ಯಾಚಾ ಪ್ರೇಕ್ಷಾ ಥೋರಲಾ'; 'ಸಗಳ್ಯಾಂತ್ ಶ್ರೇಷ್ಠ' ಇತ್ಯಾದಿ. ಬಂಗಾಲಿಯಲ್ಲಿ, 'ಏರ ಚೇಯೆ ಭಾಲೊ'; (good having looked at this) 'ಸಬಾರ ಮಾಝೆ ಭಾಲೋ' (ಅಂದರೆ good in the middle of all).

೩. ಮೂರನೆಯದಾಗಿ, ಈ ಭಾಷೆಗಳಲ್ಲಿಯ ವಾಕ್ಯರಚನಾಕ್ರಮವೂ (Syntax) ಮತ್ತು ದ್ರಾವಿಡ ಭಾಷೆಗಳ ಕ್ರಮವೂ ಒಂದೇ ಆಗಿದೆ. ಆದರೆ, ಇದೇ ಮಾತು ಈ ಆರ್ಯವರ್ಗಕ್ಕೇ ಸೇರಿದ ಇಂಗ್ಲಿಷ್ ಭಾಷೆಗೆ ಅನ್ವಯಿಸುವದಿಲ್ಲ. ಅಂತಲೇ, ಸಂಸ್ಕೃತ-ಮರಾಠಿ ಇಲ್ಲವೆ ಬಂಗಾಲಿ ಭಾಷೆಯಲ್ಲಿಯ ಯಾವುದೇ ವಾಕ್ಯವನ್ನು ಕನ್ನಡಕ್ಕೆ ಭಾಷಾಂತರಿಸಬೇಕಾದರೆ, ಅಷ್ಟೊಂದು ತೊಂದರೆಯಾಗುತ್ತಿಲ್ಲ. ಯಾಕಂದರೆ, ಇಲ್ಲಿ ಯಾವ ಶಬ್ದದ ಸ್ಥಾನವನ್ನೂ ಅದಲುಬದಲು ಮಾಡುವ ಕಾರಣವಿಲ್ಲ. ಅದೇ, ಯಾವುದೇ ಇಂಗ್ಲಿಷದ ವಾಕ್ಯವನ್ನು ಭಾಷಾಂತರಿಸಬೇಕಾದರೆ ಮಾತ್ರ ಇಡೀ ವಾಕ್ಯರಚನೆಯನ್ನೇ ಬದಲು ಮಾಡಬೇಕಾಗುತ್ತದೆ.

ಈ ಅಭಿಪ್ರಾಯವನ್ನು ಉದಾಹರಣೆಯಿಂದ ಸ್ಪಷ್ಟ ಮಾಡಬಹುದು.

ಈಗ, ಇಂಗ್ಲಿಷದ ಈ ಕೆಳಗಿನ ವಾಕ್ಯವನ್ನೇ ಭಾಷಾಂತರಿಸುವದಿದೆಯೆಂದು ತಿಳಿದುಕೊಳ್ಳೋಣ:—

She would hear, (A) if Radha had said so, (B)

ಇದರಲ್ಲಿಯ ಮೂಲವಾಕ್ಯ 'She would hear' ಎಂಬುದು (A). 'If Radha ಇತ್ಯಾದಿ' ಪಕ್ಷಾರ್ಥ (B). ಆದ್ದರಿಂದ ವಾಕ್ಯದ ರೂಪ A–B–ಎಂದಾಯಿತು. ಆದರೆ, ಇದನ್ನೇ ನಾವು ಕನ್ನಡದಲ್ಲಿ ಭಾಷಾಂತರಿಸಬೇಕಾದರೆ,

"ರಾಧೆಯು ಹೇಳಿದ್ದರೆ, (B) ಅವಳು ಕೇಳುತ್ತಿದ್ದಳು" (A)

ಎಂದು ಹೇಳುತ್ತೇವೆ. ಅಂದರೆ, ಪಕ್ಷಾರ್ಥದ B ಮೊದಲಿಗೆ ಬಂದು, ಮೂಲವಾಕ್ಯವಾದ 'ಅವಳು ಕೇಳುತ್ತಿದ್ದಳು' ಎಂಬುದು ಅನಂತರ ಬರುತ್ತದೆ. ಹೀಗಾಗಿ, ವಾಕ್ಯರೂಪವು B A ಎಂದಾಗುತ್ತದೆ. ಆದರೆ, ಇದೇ ವಾಕ್ಯವು ಹಿಂದೀ-ಬಂಗಾಲಿಗಳಲ್ಲಿ ದ್ರಾವಿಡ ರೀತಿಯೇ ಆಗುತ್ತದೆ. ಉದಾ :—

ರಾಧಾ ಕಹತೀತೋ, ವಹ ಸುನತೀ = B A
(ರಾಧಾ ಕಹತೀತೋ = B, ವಹ ಸುನತೀ = A)

ಇದರಂತೆ, ಈ ಕೆಳಗಿನ ಪ್ರಯೋಗಗಳಲ್ಲಿಯ ಸಾಮ್ಯವನ್ನೂ ಗಮನಿಸಿರಿ :—

೧. ಶಾಂತೆಯು ಓದಿ ಬಿಟ್ಟಳು — ಶಾಂತಾ ಪಡ್ ಚುಕಿ

೨. Over the palace (A B) ಸಂ. ಪ್ರಾಸಾದಸ್ಯ ಉಪರಿ (B A)
(Over = A, palace = B; ಪ್ರಾಸಾದಸ್ಯ = B, ಉಪರಿ = A)

ಕ. ಪ್ರಾಸಾದದ ಮೇಲೆ (B A) ಬೆಂ. ಏ ತಾ ಅಮಾದೇರ್ ಬಾರಿ

೩. ಅಧ್ಯಾಹಾರ—ಇದು ನಮ್ಮ ಮನೆ (ಇರುತ್ತದೆ) ಕ. ಇದಮ್ ಅಸ್ಮಾಕಂ ಗೃಹಂ (ಸಂ.)
ಇದಿ ಮಾ ಯಿಲ್ಲು (,,) ತೆ. ಆದರೆ, This our house ಎಂದಾಗದು.
ಇತ್ಯಾದಿ.

ಈ ರೀತಿ ಕನ್ನಡ ಭಾಷೆಯ ಪರಿಣಾಮವು ನೆರೆಹೊರೆಯ ಆರ್ಯ ಭಾಷೆಗಳ ಮೇಲೆ ಈ ಪ್ರಕಾರವಾಗಿ ಆಗಿರಬಹುದಾದರೆ, ಇದೇ ವರ್ಗದ ದ್ರಾವಿಡ ಭಾಷೆಗಳ ಮೇಲೂ ಆಗಿರುವುದು ಸ್ವಾಭಾವಿಕವೇ ಆಗಿದೆ.

ಕನ್ನಡ ತಮಿಳುಗಳ ಪ್ರಾಚೀನ ಸಂಪರ್ಕವನ್ನು ಈ ಮೊದಲೇ ಕೆಲಮಟ್ಟಿಗೆ ಸೂಚಿಸಲಾಗಿದೆ. ಕನ್ನಡಿಗರ ಮತ್ತು ಕರ್ನಾಟಕದ ಉಲ್ಲೇಖವು ತೀರ ಪ್ರಾಚೀನ ಕಾಲದಿಂದ ತಮಿಳು ಸಾಹಿತ್ಯದಲ್ಲಿ ದೊರಕುತ್ತದೆ. ಡಾ. ವಿ. ಆರ್. ಆರ್. ದೀಕ್ಷಿತಾರ್ ಅವರ ಪ್ರಕಾರ 'ಸಂಗಮ್' ಕಾಲದ ತಮಿಳು ಲೇಖಕರಿಗೆಲ್ಲ ನೀಲಗಿರಿಯ ಉತ್ತರ ಭಾಗವ ಪ್ರದೇಶವೆಲ್ಲ ಕರ್ನಾಟಕವಾಗಿದ್ದಿತು.* 'ಶಿಲಪ್ಪದಿಗಾರವ್' ಎಂಬ ಗ್ರಂಥವಲ್ಲಿ ಚೇರ ಅರಸನಾದ 'ಶೆಂಗುಟ್ಟವನ್' ಎಂಬವನು ನೀಲಗಿರಿಯಲ್ಲಿದ್ದಾಗ ಕುಡುಗ, ಕೊಂಕಣ ಮತ್ತು ಕರ್ನಾಟಕದ ಸ್ತ್ರೀ–ಪುರುಷ ನೃತ್ಯದವರು ಅವನ ದರ್ಶನಕ್ಕಾಗಿ ಬಂದಿದ್ದರೆಂದು ಹೇಳಿದೆ. ಅನ್ಯತ್ರ ಕನ್ನಡರನ್ನು 'ಕೊಡುಮ್ ಕರುನಾಡರ್' ಎಂದು ಸಂಬೋಧಿಸಿದೆ. 'ನಾಕ್ಕಿರಾರ್' ಎಂಬ ಕವಿಯ 'ಅಹನಾನೂಱು' ಎಂಬ ಗ್ರಂಥವಲ್ಲಿ 'ವಡುಗರ್ ಪೆರು–ಮಗನ್' ಎಂಬವನು 'ಎರುವೈನಾಡಿನ' ಅಧಿಪತಿಯಾಗಿದ್ದನೆಂದು ಹೇಳಿದೆ (ಶ್ಲೋ. ೨೫೩). ಈ ಎರುವೈನಾಡು ಇಲ್ಲವೆ ಮಹಿಷಮಂಡಲವೆಂದರೆ ಇಂದಿನ ಮೈಸೂರು. ಈ ರೀತಿ ಪ್ರಾಚೀನಕಾಲದಿಂದಲೂ ಕನ್ನಡ ಮತ್ತು ತಮಿಳು ಭಾಷೆಗಳ ಸಂಪರ್ಕವಿದ್ದಾಗ, ಅನೇಕ ಕನ್ನಡ ಪದಗಳು ತಮಿಳಿನಲ್ಲಿ ಸೇರಿರಲಿಕ್ಕೆಬೇಕು. ತಮಿಳು ವೈಯಾಕರಣಿಗಳು ಕೂಡ ದೇಶ್ಯವಲ್ಲದ—'ಇಯರ್ ಶೊಲ್' ಅಲ್ಲದ— ಈ ವಿದೇಶೀಯ ಪದಗಳನ್ನು 'ತಿಶೈಶೋಲ್' ಎಂದು ಕರೆಯುತ್ತಾರೆ. ಡಾ. ದೀಕ್ಷಿತಾರ್ ಅವರ ಪ್ರಕಾರ ಕ್ರಿ. ಶ. ೯ನೆಯ **ಶತಮಾನದ** ದ್ರಮಿಳ ಸಂಘದ ಜೈನಕವಿಯಾದ **'ತಿರುತ್ತಕ್ಕದೇವರ್' ಎಂಬ ಕವಿಯ 'ಜೀವಕ ಚಿಂತಾಮಣಿ' ಎಂಬ ಗ್ರಂಥದಲ್ಲಿ ನಾವು ಅನೇಕ ಕನ್ನಡ ಪದಗಳನ್ನು ಕಾಣುತ್ತೇವೆ.** ಯಾಕಂದರೆ, ಈ ಕಾಲದಲ್ಲಿ ಅಂದಿನಿಂದ ಕರ್ನಾಟಕದಲ್ಲೇ ಇದ್ದ ಶ್ರವಣಬೆಳಗೊಳವು ಜೈನರ ಸುಪ್ರಸಿದ್ಧವಾದ ಕ್ಷೇತ್ರ–ಸ್ಥಳವಾಗಿದ್ದಿತು. ಇದರಂತೆಯೇ, ಶ್ರೀವರ್ತ್ರದೇವರ್ ಇಲ್ಲವೆ 'ತೊಲಾಮೊಳಿ' ಎಂಬ ಕವಿಯು ಬರೆದ 'ಶೂಲಾಮಣಿ' ಎಂಬ ಗ್ರಂಥದಲ್ಲಿಯೂ ಕೂಡ ಅನೇಕ ಕನ್ನಡ ಪದಗಳಿವೆಯೆಂದು ಅವರ ಅಭಿಪ್ರಾಯ.†

---

* Karnataka in Ancient Tamil Literature—P. T. O C. Vol. X, P. 434.

† "This influence of Kannada in Tamil Literature is seen in the "**ಜೀವಕ ಚಿಂತಾಮಣಿ**", an epics of the 9th century A. D. ascribed to one **ತಿರುತ್ತಕ್ಕದೇವರ್**, who

ತಮಿಳಿನಂತೆ ತೆಲುಗೂ ಕೂಡ ಅನೇಕ ವಿಧವಾಗಿ ಕನ್ನಡದ ಪ್ರಭಾವಕ್ಕೆ ಒಳಗಾಯಿತು. ಕ್ರಿಸ್ತಶಕ ೧೨ರಲ್ಲಿ ಉಂಟಾದ ವೀರಶೈವ ಕ್ರಾಂತಿಯ ಮೂರ್ಧನ್ಯರಾದ ಶ್ರೀ. ಬಸವಣ್ಣನವರ ಪ್ರಭಾವವನ್ನು ಅನೇಕ ತೆಲುಗು ಕವಿಗಳ ಮೇಲೆ ಕಾಣಬಹುದಾಗಿದೆ. ಆಂಧ್ರ ವೀರಶೈವ ಕವಿಗಳಲ್ಲಿ ಪ್ರಥಮನಾದ ಪಾಲ್ಕುರಿಕೆ ಸೋಮನಾಥನು ತನ್ನ "ದ್ವಿಪದ ಬಸವಪುರಾಣ"ದಲ್ಲಿ ಶ್ರೀ. ಬಸವಣ್ಣನವರ ನಾಮದ ಫಲವನ್ನು ಅತಿಯಾಗಿ ವರ್ಣಿಸುತ್ತಾನೆ. ಈ "ದ್ವಿಪದ ಬಸವ ಪುರಾಣ"ವೇ ಅನಂತರ ಪಿಡುಪರ್ತಿ ಸೋಮನಾಥನ ತೆಲುಗು "ಬಸವ ಪುರಾಣ"ಕ್ಕೂ, ಭೀಮಕವಿಯ ಕನ್ನಡ "ಬಸವ ಪುರಾಣ"ಕ್ಕೂ ಆಧಾರಗ್ರಂಥವಾಯಿತೆಂದು ಹೇಳುತ್ತಾರೆ. ಈ ಮೊದಲು ಕನ್ನಡ ಛಂದೋಗ್ರಂಥವಾದ 'ಗುಣಗಾಂಕೀಯ' ಎಂಬುದು ಅನೇಕ ತಮಿಳು ಲಾಕ್ಷಣಿಕರಿಗೆ ಆಧಾರವಾಗಲಿಲ್ಲವೇ?—ಹಾಗೆ. ಉದಾಹರಣೆಗೆ ತಮಿಳು ಲಾಕ್ಷಣಿಕನಾದ ಅಮೃತಸಾಗರ ಎಂಬವನು ತನ್ನ 'ಯಾಪ್ಪರುಂಗಲಕ್ಕಾರಿಹೈ' ಎಂಬ ಛಂದೋಗ್ರಂಥದಲ್ಲಿ ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದಾನೆ—

"ಗುಣಗಾಂಕಿಯಮೆನ್ನುಂ ಕರುನಾಟಕಚ್ಚಂದಮೇ ಪೋಲ್
ಮಹಡೂಮನ್ನಿಲೈಯುಡತ್ತಾಯ್ ಅವೈಯಡಕ್ಕಮುಡೈತ್ತಾಯ್".

ನನ್ನಿಚೋಡನ "ಕುಮಾರಸಂಭವ"ದಲ್ಲಿಯಂತೂ ಅನೇಕ ಕನ್ನಡ ಮತ್ತು ತಮಿಳು ಶಬ್ದಗಳೂ, ಛಂದಸ್ಸಿನ ರೀತಿಯೂ ಇವೆಯೆಂದು ಹೇಳುತ್ತಾರೆ. ಬೆದ್ದಣನ "ನೀತಿಸಾರ ಸುಮತಿಶತಕ"ಗಳು ಕನ್ನಡದ ಕಂದದ ರೀತಿಯನ್ನೇ ಹೋಲುತ್ತವೆ. ಪಾಲ್ಕುರಿಕೆ ಸೋಮನಾಥನ ಪ್ರಕಾರ ವೀರಶೈವ ಬಸವಣ್ಣನವರ ಹೆಸರಿನ ಬಲವೆಂದರೆ ಹೀಗೆ—

ಬಸವಾ ಯನಂಗ ವಿನ್ನಂ ಬಾನ ಲೊಂಡೇಲ!
ಪಸುಲಕು ನೈನನು ಬ್ರಬಲದೇ ಭಕ್ತಿ?
ಬಸವಾ ಯನಂಗ ವಿನ್ನಂ ಬಾನ ಲೊಂಡೇಲ?
ಪಸಿಬಾಲುರಕು ನೈನ ನೇಸಂಗದೇ ಭಕ್ತಿ?

ಇತ್ಯಾದಿ.

ವಿಜಯನಗರದ ಪ್ರೌಢದೇವರಾಯನ ಆಳಿಕೆಯಲ್ಲಿದ್ದ ಆಂಧ್ರ ಶ್ರೀನಾಥಕವಿಯಂತೂ ಕನ್ನಡದ ಮೇಲಿನ ತನ್ನ ಪ್ರೀತಿಯನ್ನು ಅನೇಕ ವಿಧವಾಗಿ ವ್ಯಕ್ತಗೊಳಿಸಿದ್ದಾನೆ. ಅವನ ಪ್ರಕಾರ, ಸಂಸ್ಕೃತ ಭಾಷೆಯು ಕೇವಲ ಪ್ರೌಢರಿಗೆ ಮಾತ್ರ ಸವಿಯಾಗಿದ್ದರೆ, ಆಂಧ್ರಭಾಷೆಯು ಕೇವಲ ಆಡಲಿಕ್ಕೆ ಮಾತ್ರ ಸರಸವಾಗಿದ್ದರೆ, **ಕನ್ನಡ ಭಾಷೆ ಮಾತ್ರ ನಿಜವಾಗಿ ಕಾವ್ಯಭಾಷೆಯಾಗಿದೆ.**

---

belonged to the Dravila-Sangha of the Jains At this time Sravana-Belgola was the centre of Jaina activities and there was frequent intercourse between **ದ್ರಮಿಳ ಸಂಘ** and **ಶ್ರವಣಬೆಳ್ಗೊಳ,** which was at that time a part of **ಕರ್ನಾಟಕದೇಶ.** This also is true of the other **ಕಾವ್ಯ, ಕೂಲಃಮಣಿ** whose authorship is ascribed to **ಶ್ರೀವರ್ತ್ತದೇವರ್** alias Tolamoli " — Karnataka in Ancient Tamil Literature—P. T O. C. Vol X, P. 437.

ಪ್ರೌಢರಿಕಿಂಪು ಸಂಸ್ಕೃತಭಾಷೆಯೆಂಡ್ರು
ಪಲುಕು ಘಡಿಕಾರಮುನನಾಂಧ್ರಭಾಷೆಯೆಂಡ್ರು
ಎವ್ವರೇಮನ ನಂಡ್ರು, ನಾಕೇಮಿ ಕೊರತ?
ನಾಕವಿತ್ವಂಬು ನಿಜಮು ಕರ್ನಾಟಭಾಷಾ *

ಇದರಂತೆಯೇ, ವಿಜಯನಗರ ಕಾಲದ ಇತರ ಅನೇಕ ಆಂಧ್ರಕವಿಗಳಿಗೂ ಕೂಡ ಆ ಆ ರಾಜರ ಬಗ್ಗೆ ಮತ್ತು **ಕನ್ನಡ ನಾಡಿನ** ಬಗ್ಗೆ ತುಂಬಾ ಅಭಿಮಾನವಿದ್ದಿತು. ಉದಾಹರಣೆಗೆ, ವಿಜಯನಗರದ ಕೃಷ್ಣದೇವರಾಯನ ಮರಣಾನಂತರ ಗಜಪತಿರಾಯನು ವಿಜಯನಗರವನ್ನು ದಾಳಿಮಾಡಿದನಷ್ಟೆ! ಆಗ, ಕೃಷ್ಣದೇವರಾಯನ ಆಶ್ರಿತನಾಗಿದ್ದ ಅಲ್ಲಸಾನಿ ಪೆದ್ದನನು ಗಜಪತಿಗೆ ಬರೆದು ಕಳುಹಿದ ಮಾತುಗಳು ತುಂಬಾ ಮಾರ್ಮಿಕವಾಗಿವೆ. "ರಾಯರಿಗೆಲ್ಲ ಗಂಡನೆನಿಸಿದ ಕೃಷ್ಣದೇವರಾಯನ ಪಟ್ಟದಾನೆಯು ನಿನ್ನ ಕೋಟೆಯನ್ನು ಒದ್ದು ಕೆಡವಿದಾಗ, ನಿನ್ನ ಧೃತಿ ಎಲ್ಲಿತ್ತು? ಈಗ ಬಾಗಿಲು ತೆರೆದ ಮನೆಯೊಳಗೆ ನಾಯಿ ನುಗ್ಗುವಂತೆ **ಕನ್ನಡ ದೇಶವನ್ನು** ಪ್ರವೇಶಿಸುತ್ತೀಯಾ?"

ಕನ್ನಡಂ ಬೆಟ್ಲು ಸೊಚ್ಚಿದು ಗಜಪತೀಂದ್ರ!
ತೆರಚಿನಿಲು ಕುಕ್ಕಸೊಚ್ಚಿನ ತೆರುದೋಪ—

ನಿಜ; **ಕನ್ನಡನಾಡು ಮತ್ತು ರಾಜರ ಬಗ್ಗೆ** ಇಂಥ ವೀರ ಅಭಿಮಾನವು ಪೋತನನಂಥ ಆಂಧ್ರ ಕವಿಗಳಲ್ಲಿರಲಿಲ್ಲ. ತನ್ನ ಭಾವಮೈದುನನಾದ ಶ್ರೀನಾಥನು ಈ ರೀತಿ ತನ್ನ "ಕಾವ್ಯಕನ್ನಿಕೆಯನ್ನು" ಅರಸರ ಸಿರಿಗೆ ಮಾರಿಕೊಳ್ಳುವುದು ಅವನಿಗೆ ಸ್ವಲ್ಪವೂ ಸರಿಯೆನಿಸಲಿಲ್ಲ. ಇದನ್ನೇ ಅವನು ಸ್ಪಷ್ಟವಾಗಿ ಈ ಮಾತುಗಳಲ್ಲಿ ಹೇಳಿದ್ದಾನೆ.

"ನಿನು ನಾಕಟಕಿಂಗೊನಿಪೋಯಿ ಯಲ್ಲ **ಕರ್ಣಾಟ** ಕಿರಾಟ ಕೀಚಕುಲ
ಕಮ್ಮದ್ರಿಶುದ್ಧಿಗ ನಮ್ಮು ಭಾರತೀ"

ಅದೇನೇ ಇರಲಿ; ಇಷ್ಟರಮಟ್ಟಿಗೆ ಕನ್ನಡದ ಸಂಪರ್ಕವುಳ್ಳ ತೆಲುಗು ಭಾಷೆಯು ಕನ್ನಡದಿಂದ ಸ್ವೀಕರಿಸಿದ ಪ್ರಭಾವವು ನಿಜವಾಗಿಯೂ ವಿಚಾರಣೀಯವೇ ಆಗಿದೆ.

ಇತ್ತೀಚೆ ಕೂಡ ಅನೇಕ ಕನ್ನಡ ಕವಿಗಳು ತೆಲುಗು ಸಾಹಿತ್ಯದಲ್ಲಿ ಕೃಷಿಮಾಡಿದ್ದಾರೆ. ಹೀಗಾಗಿ, ತೆಲುಗಿನಲ್ಲಿ ಸೇರಿದ ಕನ್ನಡ ಅಂಶದ ವಿಚಾರ ತುಂಬಾ ಉದ್ಬೋಧಕವಾಗಿದೆ.

---

* ಆಂಧ್ರ ಕವಿತಂಗಿಣ—

ಪ್ರೌಢರಿಗೆ ಸವಿಯುಹುದು ಸಂಸ್ಕೃತದ ಭಾಷೆ!
ಆಡಲಿಕೆ ಸೊಗಸಹುದು ಆ ಆಂಧ್ರಭಾಷೆ!
ಯಾರೇನು ನುಡಿದರೇಂ ನಮಗೇನು ಕೊರತೆ?
ಸಾರುವೆನು ಕನ್ನಡವೆ ನಿಜಕಾವ್ಯಭಾಷೆ.

— ಪಿ. ವಿ. ಆಚಾರ್

ಆದರೆ, ಈ ಮೇಲಿನ ಚರ್ಚೆಯಲ್ಲೆಲ್ಲ **ಮೂರು** ಮಾತುಗಳನ್ನು ನಾವು ಸ್ಪಷ್ಟವಾಗಿ ಲಕ್ಷದಲ್ಲಿಡಬೇಕು. ಅವೆಂದರೆ,

ಮೊದಲನೆಯದಾಗಿ, ಒಂದು ಭಾಷೆಯು ಮತ್ತೊಂದು ಭಾಷೆಯ ಮೇಲೆ ಪ್ರಭಾವವನ್ನು ಮಾಡಿದೆ ಎನ್ನುವಾಗ ಆ ಪ್ರಭಾವ ಹೊಂದಿದ ಭಾಷೆಗೆ ಯಾವ ನೈಚತ್ವವೂ ಬಾರದು. ವಿವಿಧ ಭಾಷೆಗಳನ್ನಾಡುವ ಜನರ ಪರಸ್ಪರ ಸಂಪರ್ಕವು ಬಂದಾಗ ಈ ರೀತಿಯ 'ಸ್ವೀಕರಣ' ಅನಿವಾರ್ಯ; ಅಗತ್ಯ. ಯಾವ ಭಾಷೆಯಲ್ಲೂ "ವೀರಪಾವಿತ್ರ್ಯ"ವೆಂಬುದು ನಡೆಯದು. ಆ ರೀತಿ, ಒಂದು ಕಾಲಕ್ಕೆ ತೀರ ಪ್ರಬಲವಾದ ರಾಜಕೀಯ ಮತ್ತು ಸಾಂಸ್ಕೃತಿಕ ಘಟಕವಾಗಿದ್ದ ಕನ್ನಡ ಭಾಷೆಯು ಹೀಗೆ ಪ್ರಭಾವ ಮಾಡಿದ್ದರೆ ಏನೂ ಆಶ್ಚರ್ಯವಲ್ಲ. ಇಂದಿನ ಕನ್ನಡಿಗರ ಕಣ್ಣು ಆ ಹಿಂದಿನ ವಿಶಾಲವಾದ ಕರ್ನಾಟಕದ ಭೂಪಟವನ್ನು ಕೂಡ ಕಾಣುವಷ್ಟು ಸಮರ್ಥವಿಲ್ಲ. ತಮ್ಮ 'ಸಣ್ಣತನ'ಕ್ಕೇ ಪ್ರತಿಯೊಂದನ್ನು ಎಳೆಯುತ್ತಿರುವ ಇಂದಿನ ಜನತೆಗೆ ಇಂಥ ಪ್ರಭಾವದ ಮಾತು ಕೇವಲ ಅಪಹಾಸ್ಯಕಾರಕವಾಗಬಹುದು.

ಎರಡನೆಯದಾಗಿ, ಕೋಶ-ವಿಷಯಕ ಸಂಪರ್ಕಗಳನ್ನು ಕಾಣುವಾಗ ನಾವು ಎರಡು ರೀತಿಯ ತಪ್ಪನ್ನು ಮಾಡುವ ಸಂಭವವಿರುತ್ತದೆ. **ಒಂದು**— ಯಾವುದಾದರೂ ಕಾಲ್ಪನಿಕ ವ್ಯುತ್ಪತ್ತಿಯನ್ನು ಅವಲಂಬಿಸಿ, ಕೇವಲ ರೂಪಸಾದೃಶ್ಯದಿಂದ ಹೋಗುವುದು. ಆದ್ದರಿಂದ, ಒಂದು ಭಾಷೆಯ ಶಬ್ದವು ಮತ್ತೊಂದು ಭಾಷೆಗೆ ಹೋಗಿದೆಯೆಂದು ಹೇಳುವಾಗ ಡಾ. ಕಾಲ್ಡ್‌ವೆಲ್ ಅವರು ಸೂಚಿಸಿದ ಈ ಕೆಳಗಿನ ಅಂಶಗಳನ್ನು ನಾವು ಸಂಪೂರ್ಣವಾಗಿ ಲಕ್ಷದಲ್ಲಿಡಬೇಕು.

೧. ಆ ಶಬ್ದದ ವ್ಯುತ್ಪತ್ತಿ ಕೇವಲ ಕಾಲ್ಪನಿಕವಾಗಿರದೆ, ತರ್ಕಕ್ಕೆ ಸರಿಯೆನಿಸುವಂತಿರಬೇಕು.

೨. ನಾವು ಈ ಭಾಷೆಯ ಶಬ್ದವೆಂದು ಹೇಳುವಾಗ, ಈ ಭಾಷೆಯಲ್ಲಿ ಆ ಅರ್ಥವನ್ನು ಸೂಚಿಸಲು ಇದೊಂದೇ ಶಬ್ದವಿದ್ದು ಪ್ರಭಾವ ಹೊಂದಿದ ಭಾಷೆಯಲ್ಲಿ ಸಮಾನಾರ್ಥದ ಅನೇಕ ಪದಗಳಿರಬೇಕು. ಉದಾ:— ಕನ್ನಡ, ನೀರ್; ಸಂಸ್ಕೃತ, ಉದಕ ಇತ್ಯಾದಿ.

೩. ಆ ವರ್ಗದ ಭಾಷೆಯಲ್ಲಾಗಲೀ, ಅಥವಾ ಅದೇ ಭಾಷೆಯಲ್ಲಾಗಲೀ, ಆ ಶಬ್ದದ ಮೂಲದಿಂದ ಸಾಧಿತವಾದ ಇತರ ರೂಪಗಳಿರಬೇಕು.

ಈ ನಿಕಷಕ್ಕೆ ನಿಂತ ಶಬ್ದಗಳು ಮಾತ್ರ ಇಂಥ ಭಾಷೆಯ ಶಬ್ದಗಳೆಂದು ನಾವು ಸ್ಪಷ್ಟವಾಗಿ ಹೇಳಬಹುದು.

ಇದರಲ್ಲಾಗುವ **ಎರಡನೆಯ** ತಪ್ಪೆಂದರೆ, ನೈಮಿತ್ತಿಕ ಇಲ್ಲವೆ ಜಾನಾಂಗಿಕ-ಸಾಮಾನ್ಯತೆಯನ್ನು ಪ್ರಭಾವವೆಂದು ಗುರುತಿಸುವುದು. ಇದಕ್ಕೆ, ಇಂಗ್ಲಿಷಿನಲ್ಲಿ "Ethno-psychological feature"—ಎಂದು ಕರೆಯುತ್ತಾರೆ. ಅಂದರೆ, ಇಂಥ ಅಂಶಗಳು ಬೇರೆ ಬೇರೆ ಜನಾಂಗಗಳಿದ್ದರೂ, ಒಂದೇ ಆಗಿರುತ್ತವೆ. ಉದಾಹರಣೆಗೆ, ತಂದೆತಾಯಿಗಳನ್ನು ಹೇಳುವ ಭಿನ್ನ ಭಿನ್ನ ಭಾಷೆಯ ಪದಗಳಲ್ಲಿ ಒಂದೇ ವ್ಯಂಜನವು ಹೆಚ್ಚಾಗಿ ಇದ್ದದ್ದನ್ನು ಕಾಣುತ್ತೇವೆ. ಈ ರೀತಿ, ಲ್ಯಾಟಿನ್ Pater; ಇಂಗ್ಲಿಷ್ ಫಾಃದರ್; ಸಂಸ್ಕೃತ ಪಿತೃ; ಕನ್ನಡ ಅಪ್ಪಾ; ಮೊದಲಾದ ಪದಗಳಲ್ಲಿ ಸಾಮಾನ್ಯವಾಗಿ ಕಂಡುಬರುವ '**ಪ**' ವ್ಯಂಜನದ ಮೂಲಕ, ಲ್ಯಾಟಿನ್ 'Pater'ದಿಂದ ಕನ್ನಡ 'ಅಪ್ಪಾ' ಬಂದಿತೆಂದು ಹೇಳಲಾಗದು. ಅದೇ ರೀತಿ, ತಾಯಿ ಅರ್ಥವಲ್ಲಿಯ 'Mater' 'Mother' 'ಮಾತೃ'; ಹಿಂದೀ 'ಮಾ'; ಕನ್ನಡ-ತಮಿಳು 'ಅಮ್ಮಾ' 'ಅಮ್ಮಾಳ್';

Old High-German '**ಅಮ್ಮ**'; Icelandic '**ಅಮ್ಮಾ**'; Oceanic '**ಉಮ್**' '**ಉಮಾ**'; ಇಂಡೋನೇಶಿಯನ್ '**ಮಾ**' '**ಉಮಾ**' '**ಯಾಮಾ**'–ಮೊದಲಾದವುಗಳಲ್ಲಿ ಬರುವ '**ಮಾ**' ವ್ಯಂಜನದ ಮೂಲಕ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಈ ಶಬ್ದವು ಹೋಯಿತೆಂದು ಹೇಳುವುದು ಕಠಿಣವಾದ ಮಾತು. ಸಂಖ್ಯಾವಾಚಕಗಳನ್ನೇ ತೆಗೆದುಕೊಂಡರೆ, ದ್ರಾವಿಡ 'ಒನ್ರು', ಒಂದು, ಮತ್ತು ಇಂಗ್ಲಿಷ್ 'one'ಗಳ ಸಾದೃಶ್ಯದ ಮೂಲಕ ದ್ರಾವಿಡ ಸಂಖ್ಯಾವಾಚಕವು ಇಂಗ್ಲೀಷಿಗೆ ಹೋಯಿತೆಂದು ಹೇಳಲಿಕ್ಕಾಗದು. ಹೀಗೆ, ಪ್ರಪಂಚದ ಬೇರೆ ಬೇರೆ ಭಾಷೆಗಳಲ್ಲಿರುವ ಈ ಸಾಮಾನ್ಯವಾದ ಅಂಶಗಳಿಗೇ 'Ethnopsychological feature' –ಎಂದು ಕರೆದುದು. ಇಂಥ ಸಂದರ್ಭಗಳಲ್ಲಿ ಜಾನಾಂಗಿಕ ಮಾನಸ ರೀತಿಯು ಒಂದೇ ವಿಧವಾಗಿ ವಿಚಾರ ಮಾಡುತ್ತಿರುತ್ತದೆ. ಹಾಗಾದರೆ, ಈ ತಂದೆ-ತಾಯಿಗಳ ಬಗ್ಗೆ ಹೇಳುವಾಗ 'ಪ' 'ಮ' ವರ್ಣಗಳೇ ಪ್ರಪಂಚದ ಭಿನ್ನ ಭಿನ್ನ ಭಾಷೆಗಳಲ್ಲಿ ಬರಲು ಕಾರಣವೇನು?.... ಡಾ. ಯೆಸ್ಪರ್ಸನ್ ಅವರು ಬಹುಶಃ ಇದರ ಉತ್ತರವನ್ನು ಸೂಚಿಸುತ್ತಿದ್ದಾರೆ. ಯಾಕಂದರೆ, ಡಾ. ಯೆಸ್ಪರ್ಸನ್ ಅವರ ಪ್ರಕಾರ, ಚಿಕ್ಕ ಮಗುವು ಮೊಟ್ಟ ಮೊದಲಿಗೆ ಕಲಿಯುವ ವರ್ಣಗಳೆಂದರೆ '**ಪ**' '**ಬ**' ಮತ್ತು '**ಮ**' ಎಂಬ ವ್ಯಂಜನಗಳು. ಅವರು ಇದರ ಬಗ್ಗೆ ಕೊಡುವ ಕಾರಣಮೀಮಾಂಸೆಯನ್ನೂ ಗಮನಿಸಿರಿ: —

> "All are agreed, however, that among the consonants, the labials, ಪ, ಬ and ಮ' are early sounds, if not the earliest. The explanation has been given that the child can see the working of his mother's lips in these sounds and therefore, imitates her movements. This implies far too much conscious thought on the part of the baby, which utters his 'ಮಾ' or 'ಮೊ' before he begins to imitate anything said to him... Moreover, it has been pointed out that the child's attention is hardly ever given to its mother's mouth, but is steadily fixed on her eyes. The real reason is probably that the labial muscles used to produce ಬ or ಮ are the same that the baby has exercised in sucking the breast or the bottle."*

ಮೂರನೆಯದಾಗಿ, ಮೇಲಿನ ಚರ್ಚೆಯಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಇಲ್ಲಿ ವಿವರಿಸಿದ ಎಷ್ಟೋ ಭಾಷೆಗಳ ಮೇಲಿನ ಪ್ರಭಾವವು **ನೇರವಾಗಿ** ಕನ್ನಡದ್ದಾಗಿರದೆ, ಸಾಮಾನ್ಯ ದ್ರಾವಿಡ ವರ್ಗದ ಪ್ರಭಾವವಾಗಿರಲೂ ಸಾಧ್ಯವಿದೆ. ಆದರೆ, ತೀರ ಪ್ರಾಚೀನ ಮತ್ತು ಶುದ್ಧ ಐತಿಹಾಸಿಕ ಕಾಲಗಳಿಂದ ಕನ್ನಡಿಗರಿಗೂ ಮತ್ತು ಈ ಪ್ರದೇಶಗಳ ಜನರಿಗೂ ಕೂಡಿ ಬಂದಿರುವ ಗಾಢವಾದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳ ಮೂಲಕವೂ ಮತ್ತು ಈ ಅನ್ಯಭಾಷೆಗಳಲ್ಲಿ ಕಾಣುವ ಪದ ಮತ್ತು ಪ್ರಯೋಗಗಳು ದ್ರಾವಿಡದ ಎಲ್ಲ ವರ್ಗಗಳಲ್ಲಿ ಕನ್ನಡಕ್ಕೆ ತೀರ ಸಮೀಪವಲ್ಲಿರುವದರಿಂದಲೂ, ಈ ಪ್ರಭಾವಗಳು ಕನ್ನಡದವೆಂದು ಹೇಳಲಾಯಿತು.

ಈ ರೀತಿ, ಕನ್ನಡವು ಅನ್ಯರಿಂದ ಬೇಕಾದುದನ್ನು ಸ್ವೀಕರಿಸಿ, ತನ್ನಲ್ಲಿದ್ದ ಹೆಚ್ಚಳವನ್ನು ಇತರರಿಗೆ ಕಾಣಿಕೆಯಾಗಿ ಕೊಟ್ಟಿತು. ಈ ವ್ಯವಹಾರದಲ್ಲಿ ಭಾಷಾಪ್ರಪಂಚದಲ್ಲಿ ಕೊಡು-ಕೊಳ್ಳುವುದಿಲ್ಲದೆ ವ್ಯವಹಾರವು ಸಾಗದೆಂಬುದನ್ನು ಸಿದ್ಧಿಸಿ ತೋರಿಸಿತು.

---

* Language—P. 104.

ಆರನೆಯ ಪ್ರಕರಣ

ಭಾಷೆಯಲ್ಲಿ ಕಂಡುಬರುವ ಕನ್ನಡರ ಸಂಸ್ಕೃತಿ

ಕನ್ನಡ ನಾಡು ಮತ್ತು ನುಡಿಗಳು ತೀರ ಪ್ರಾಚೀನವಾದುವೆಂದೂ ಮತ್ತು ಮೊದಲಿನಿಂದಲೂ ತೀರ ಪ್ರಭಾವಶಾಲಿಯಾಗಿದ್ದುವೆಂಬುದನ್ನೂ ನಾವು ಈ ಮೊದಲೇ ನೋಡಿದ್ದೇವಷ್ಟೇ. ಪ್ರಸ್ತುತ ಪ್ರಕರಣದಲ್ಲಿ ಸಂಸ್ಕೃತಿಯೆಂದರೇನು? ಕನ್ನಡದ ವೈಶಿಷ್ಟ್ಯಗಳೇನು?—ಎಂಬುದನ್ನು ವಿಚಾರ ಮಾಡುವುದಕ್ಕಿಂತ, ಕನ್ನಡ **ಭಾಷೆಯಲ್ಲಿ** ಕಂಡುಬರುವ ತೀರ ಪ್ರಾಚೀನ ಕನ್ನಡರ ಸಂಸ್ಕೃತಿಯ ಮಟ್ಟವೇನಿದ್ದಿತೆಂಬುದನ್ನು ವಿವರಿಸುವುದೇ ಉದ್ದೇಶವಾಗಿದೆ. ಐತಿಹಾಸಿಕ ಕಾಲದ ಸಂಸ್ಕೃತಿಯನ್ನು ತಿಳಿದುಕೊಳ್ಳಲಿಕ್ಕೆ ಆ ಕಾಲದ ಸಾಹಿತ್ಯ, ಉಲ್ಲೇಖ, ನಾಣ್ಯ, ಶಾಸನ, ಶಿಲ್ಪ-ಕಟ್ಟಡಗಳು, ವಿದೇಶೀಯ ವರ್ಣನೆಗಳು ಸಹಾಯಕವಾಗಿವೆ. ಆದರೆ, ಪ್ರಾಗ್ ಐತಿಹಾಸಿಕ ಕಾಲದ ಸಂಸ್ಕೃತಿಯ ಸಾಧನಗಳಾಗಿ ನಾವು ಕೇವಲ ಭೂ-ಸಂಶೋಧನೆ ಮತ್ತು ಭಾಷೆಯ ಮೇಲೆ ಅವಲಂಬಿಸಬೇಕಾಗುತ್ತದೆ.

ಕ್ರಿ. ಶ. ೨ನೆಯ ಶತಮಾನದ ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳು ದೊರಕುವುದೆಂದರೆ, ಆ ಕಾಲಕ್ಕೇ ಕನ್ನಡವು ಸಾಕಷ್ಟು ಮಟ್ಟಿನ ಸಂಸ್ಕೃತಿಯನ್ನು ಪಡೆದಿದ್ದು ಪರದೇಶೀಯ ಸಾಹಿತ್ಯಗಳಲ್ಲೂ ಕೂಡ ಸೇರಿಕೊಳ್ಳುವಷ್ಟು ಪ್ರಭಾವಶಾಲಿಯಾಗಿದ್ದಿತೆಂಬುದು ಕಂಡುಬರುತ್ತದೆ.

ಅದರಂತೆ, ಇತ್ತೀಚೆ ಅಲ್ಲಲ್ಲಿ ಕರ್ನಾಟಕದಲ್ಲಿ ನಡೆದ ಭೂ-ಸಂಶೋಧನೆಗಳು ಕೂಡ ಇದೇ ಮಾತನ್ನೇ ಸಾರುತ್ತವೆ. ಕ್ರಿ. ಶ. ಎಷ್ಟೋ ಸಾವಿರ ವರುಷ ಮೊದಲು ಕೂಡ ಈ ಕನ್ನಡನಾಡು ತುಂಬಾ ಸುಸಂಸ್ಕೃತ ಜನತೆಯ ನಿವಾಸ-ಸ್ಥಾನವಾಗಿದ್ದಿತು. ಅಂತಲೇ, ಅನಂತರದ ಅಶೋಕ ಚಕ್ರವರ್ತಿಯಂಥ ಬಲಿಷ್ಠ ಅರಸರು ಕೂಡ ಇಲ್ಲಿಯ ವರೆಗೆ ತಮ್ಮ ಸಂದೇಶ-ವಾಹಕರನ್ನು ಕೊಟ್ಟು ಕಳಿಸಿದರು. ಅಶೋಕ ಚಕ್ರವರ್ತಿಯ ದಿವ್ಯ ಸಂದೇಶಗಳನ್ನೊಳಗೊಂಡ ಈ ಅಮೌಲ್ಯವಾದ ಶಿಲಾ-ಲೇಖಗಳನ್ನು ಇಂದಿಗೂ ನಾವು ಮೈಸೂರು ಸಂಸ್ಥಾನದ ಬ್ರಹ್ಮಗಿರಿ, ಮಾಸ್ಕಿ ಮೊದಲಾದ ಪ್ರದೇಶಗಳಲ್ಲಿ ಕಾಣುತ್ತೇವೆ.

ಈ ಶಿಲಾಲೇಖಗಳ ಸಮೀಪದಲ್ಲಿಯೇ ಇದ್ದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳು ಕೂಡ ತೀರ ಪ್ರಾಚೀನ ಕಾಲದ ಸಾಂಸ್ಕೃತಿಕ ಅವಶೇಷಗಳನ್ನು ತೋರಿಸುತ್ತವೆ. ಈ ಉತ್ಖನನಗಳಲ್ಲಿ ಮೂರು ಭಿನ್ನ ಭಿನ್ನ ಕಾಲಗಳಿಗೆ ಸಂಬಂಧಪಟ್ಟ ಸಾಂಸ್ಕೃತಿಕ ಅವಸ್ಥಾನವನ್ನು ನಾವು ಕಾಣಬಹುದಾಗಿದೆ. ಡಾ. ವೀಲರ್ ಅವರ ಪ್ರಕಾರ, ಇಲ್ಲಿ ದೊರಕುವ ಮೂರು ಸಾಂಸ್ಕೃತಿಕ ಮಟ್ಟಗಳೆಂದರೆ—ಮೊದಲನೆಯದಾಗಿ, ಪ್ರಾಗ್-ಐತಿಹಾಸಿಕ ಕಾಲಕ್ಕೆ ಸಂಬಂಧಪಟ್ಟದ್ದು, ಮಾನವನು 'ಶಿಲೆ'ಯನ್ನೇ ತನ್ನ ಉಪಕರಣವನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದ ಕಾಲ. ಈ ಕಾಲದ ಅನೇಕ ಸಮಾಧಿಗಳು ಬ್ರಹ್ಮಗಿರಿಯಲ್ಲಿ ದೊರಕಿದ್ದು ಈ ಕಾಲದ ಸಾಂಸ್ಕೃತಿಕ ಮಟ್ಟಕ್ಕೆ 'Megalithic type of culture'—ಎಂದು ಕರೆಯುತ್ತಾರೆ.

ಅನಂತರದ ಕಾಲವೆಂದರೆ, ಕ್ರಿ. ಪೂ. ೧೦ರಿಂದ ಕ್ರಿ. ಶ. ೧೮ ವರೆಗೆ ಆಳಿದ ಶಾತವಾಹನರ ಕಾಲ. ಆಂಧ್ರಯುಗದವರೆಂದು ಡಾ. ವೀಲರ್ ಅವರು ಕರೆಯುವ ಈ ಶಾತವಾಹನರು ನಿಜವಾಗಿ ಕನ್ನಡಿಗರೇ. ಇದನ್ನು ಅನೇಕ ಪಂಡಿತರು ಅನೇಕ ಸಲ ನಿರ್ದುಷ್ಟವಾಗಿ ಪ್ರಸ್ಥಾಪಿಸಿದ್ದಾರೆ.

ಡಾ. ವೀಲರ್ ಅವರ ಪ್ರಕಾರ ದಕ್ಷಿಣದ ಪಾಂಡಿಚೆರಿಯ ಹತ್ತಿರದ ಅರಿಕೆಮೆಡುವಿನಿಂದ ಪ್ರಾರಂಭವಾಗಿ, ಉತ್ತರದ ಮೊಹೆಂಜೊದಾರೊ ಹರಪ್ಪಗಳ ವರೆಗಿರುವ ಈ ಕಾಟಕೋನ ಪ್ರದೇಶದಲ್ಲಿ ಒಂದೇ ಕಾಲಕ್ಕೆ ಒಂದೇ ತೆರನಾದ ಸಂಸ್ಕೃತಿಯ ಅವಸ್ಥಾನವಿದ್ದಿತೆಂದು ಹಿಂದೆಯೇ ನೋಡಿದ್ದೇವಷ್ಟೇ. ಇದರ ತೀರ ಸ್ಪಷ್ಟವಾದ ವಿವರಗಳನ್ನು ನಾವು ಮೊಹೆಂಜೊದಾರೊ ಭೂ-ಸಂಶೋಧನೆಗಳಲ್ಲಿ ಕಾಣುತ್ತೇವೆ.

ಮೊಹೆಂಜೊದಾರೊ ಉತ್ಖನನಗಳಲ್ಲಿ ಕಂಡುಬಂದ ಈ ಸಾಂಸ್ಕೃತಿಕ ಮಟ್ಟವನ್ನು ಅನೇಕ ಪಂಡಿತರು ಬಹುವಿಧವಾಗಿ ಶ್ಲಾಘಿಸಿದ್ದಾರೆ. ಇಲ್ಲಿಯ ಸಮಾಧಿಗಳ ಕ್ರಮ, ಆದರ್ಶವಾದ ಆರೋಗ್ಯವ್ಯವಸ್ಥೆ ಅನೇಕ ಪಂಡಿತರ ಮನಸ್ಸನ್ನು ಆಕರ್ಷಿಸಿವೆ.

ಮೊಹೆಂಜೊದಾರೊದ ಪ್ರತಿ ಮನೆಯಲ್ಲಿಯೂ ಉತ್ತಮವಾದ ನೀರಿನ ವ್ಯವಸ್ಥೆ ಇದ್ದಿತು. ಪ್ರತಿ ಮನೆಗಳ ಸಾಲಿನ ಹಿಂಬದಿಯಲ್ಲೂ ವಿಶಾಲವಾದ ರಾಜಬೀದಿ ಇರುತ್ತಿದ್ದು, ಅಲ್ಲಲ್ಲಿ ನೀರು ಮತ್ತು ಕಸಪೊರಕೆಗಳ ಸಂಚಯ ಮಾಡಲು ಪಾತ್ರೆಗಳನ್ನಿಟ್ಟಿರುತ್ತಿದ್ದರು. ಸಿಂಧು ನದಿಯ ನೆರೆಹಾವಳಿಯ ಹೆದರಿಕೆಯ ಮೂಲಕವಾಗಿಯೋ ಏನೋ, ಇಲ್ಲಿಯ ಮನೆಗಳ ಮುಂಭಾಗವು ಬೀದಿಗಳ ಕಡೆಗಿರದೆ, ಹಿಂಬದಿ ಇರುತ್ತಿದ್ದವು.

ಈ ರೀತಿ ಆದರ್ಶಪೂರ್ಣವೂ, ಅತ್ಯುಚ್ಚವೂ ಆಗಿದ್ದ ಈ ಸಂಸ್ಕೃತಿಯನ್ನು ಕಟ್ಟಿಕೊಂಡು ಅಲ್ಲಿ ವಾಸಿಸುತ್ತಿದ್ದ ಜನರು ಭಾರತದ ಮೂಲನಿವಾಸಿಗಳಾಗಿದ್ದ ದ್ರಾವಿಡರಾಗಿದ್ದರೆಂದೂ, ಅವರು ತೀರ ಪ್ರಭಾವಶಾಲಿಗಳಾಗಿದ್ದರೆಂದೂ ಅನೇಕ ಪಂಡಿತರು ಹೇಳುತ್ತಿದ್ದಾರೆ.

ಆದರೆ, ಇಲ್ಲಿ ದೊರಕುವ ಚಿತ್ರಲಿಪಿಗಳನ್ನು ಓದುವ ರೀತಿಯನ್ನು ಕಂಡುಹಿಡಿದ, ಸುಪ್ರಸಿದ್ಧ ಸಂಶೋಧಕರಾದ ಫಾಃದರ್ ಹೆರಾಸ್ ಅವರು, ಮೊಹೆಂಜೊದಾರೊ ಹರಪ್ಪಗಳಲ್ಲಿ ಕಂಡುಬರುವ ಈ ಸಂಸ್ಕೃತಿಯು ಮಾರ್ಶಲ್ ಮೊದಲಾದ ಪಂಡಿತರು ಹೇಳುವಂತೆ ಕೇವಲ ದ್ರಾವಿಡವಷ್ಟೇ ಆಗಿರದೆ, **ಕನ್ನಡಿಗರದಾಗಿದೆಯೆಂದು ಸ್ಪಷ್ಟವಾಗಿ ಹೇಳಿದ್ದಾರೆ.**

ಯಾಕಂದರೆ, ಇಲ್ಲಿಯ ಚಿತ್ರಲಿಪಿಗಳಲ್ಲಿ ಸ್ಪಷ್ಟವಾಗಿ ಕನ್ನಡಿಗರ ನಿರ್ದೇಶಮಾಡಿದೆಯಲ್ಲದೆ, ಇಲ್ಲಿ ದೊರಿತ ಇನ್ನೂ ಇತರ ಸಾಂಸ್ಕೃತಿಕ ಅವಶೇಷಗಳು ಇಂದಿಗೂ ಕರ್ನಾಟಕವಲ್ಲಿ ಕಂಡುಬರುತ್ತಿವೆ. ಈ ಬಗ್ಗೆ ಫಾಃದರ್ ಹೆರಾಸ್ ಅವರು ಹೇಳುವದೆಂದರೆ:—

> 'The fact that the Ancient people of Mohenjo-Daro were Proto-Dravidians, a fact hinted by Sir John Marshall ......is already a link between all the Dravidian countries, including therefore Karnataka and Mohenjo-Daro But the connection between Karnataka and Mohenjo-Daro is still more explicit than this general inter-relation. "*

* J. K. H. S. Vol. IV, No. 132.

ಇಲ್ಲಿ ಕನ್ನಡಿಗರನ್ನು  ಎಂದು ಈ ರೀತಿ ನಿರ್ದೇಶಿಸಿದ ಈ ಕೆಳಗಿನ ಚಿತ್ರಲಿಪಿಯಿದೆ. ಇದರ ಕನ್ನಡ ರೂಪಾಂತರವೆಂದರೆ—

"ಕಣನ್ ಎರ್ ಇರ್ ತೆನ್ ವೇಲೂರ್ ಅರುಪ್"

(Kaṇan er ir ten Vēlūr arup)

ಅಂದರೆ—ಎರಡು ತೆಂಗಿನ ವೃಕ್ಷಗಳ (ಪ್ರದೇಶವಾಗಿದ್ದ) ವೇಲೂರದ **ಬೆಳಸಿನ** ವಿರುದ್ಧ 'ಕಣನಿರು' ಹೋರಾಡಿದರು—ಎಂದರ್ಥ.

ಮತ್ತೂ ಒಂದು ಚಿತ್ರಲಿಪಿಯಲ್ಲಿ ಕೊಡಗರ ಬಗ್ಗೆ ಬರೆಯುವದೆಂದರೆ—

"ಕಾಲೋರ್ ಮೀನನ್ ಮೀನಕಾನ್ ಕದಎರ್ ವಲಿಲ್ ಅದು
ಕಲಕೂರಿರ್ ವಲ್ ಕೆಯ್ ಕುಡುಗನಾಲ್ ||"

ಇಲ್ಲಿ 'ಕುಡಗರು' ಅಂದರೆ ಇಂದಿನ 'ಕೊಡಗರು'; 'ಕಾಲೊರ್' ಅಂದರೆ "ತ್ರಿಚನಾಪಳ್ಳಿಯ ಹತ್ತಿರವಿದ್ದ ಕಳ್ಳ ಜನಾಂಗದವರು."

ಆದ್ದರಿಂದ, ಈ ಜನಾಂಗಗಳಿಂದ ಭಿನ್ನವಾಗಿ ಕನ್ನಡರು ಮೊಹೆಂಜೊದಾರೊ ಮತ್ತು ಹರಪ್ಪ ಸಂಸ್ಕೃತಿಗಳ ಕಾಲಕ್ಕೇ ಸ್ವತಂತ್ರರಾಗಿ ಜೀವಿಸುತ್ತಿದ್ದರೆಂಬುದು ವ್ಯಕ್ತವಾಗುತ್ತದೆ.

("It seems therefore that the Kananirs or the Kannadigas *already formed a separate tribe amongst the Dravidians in those early days.*"—Heras.)

ಆದರೆ, ಈ ಕನ್ನಡರು ಆ ಕಾಲಕ್ಕೆ ಆಡುತ್ತಿರುವ ಭಾಷೆ ಯಾವುದಾಗಿರಬಹುದು? ಆಗಲೇ, ಕನ್ನಡ ಭಾಷೆ **ಭಿನ್ನವಾಗಿ** ಪ್ರಾರಂಭವಾಗಿ ಬಿಟ್ಟಿತ್ತೇ? ಈ ಪ್ರಶ್ನೆಯ ಉತ್ತರ ಸ್ವಲ್ಪ ಕಠಿಣವಾದದ್ದು. ಆದರೂ, ಈಗಾಗಲೇ ಹಲವಾದರೂ ಇಂದಿನ ಕನ್ನಡ ರೂಪಗಳು ಅಂದೇ ಪ್ರಾರಂಭವಾಗಿದ್ದವೆಂದು ಹೇಳಬಹುದು.—

("At least two of these dialectical forms of speech, the *fore-runners of the modern Kannada* forms—*already appear in the language of Moheujo-Daro*")

ಉದಾಹರಣೆಗೆ, ಫಾಃದರ್ ಹೆರಾಸ್ ಅವರ ಪ್ರಕಾರ ಹೆಚ್ಚುಕಡಿಮೆ ಇಂಗ್ಲಿಷ್ *x* ದ ಆಕಾರದ 'ಕಲಕ' ಸಂಜ್ಞೆಯು 'ಕೂಡಲ' ಎಂದು ಹೇಳುವ **ಕನ್ನಡ** ಸಂಜ್ಞೆಯಾಗಿದೆ. ಇದರಿಂದಲೇ ಇನ್ನೂ ಹಲವು ಚಿತ್ರಗಳನ್ನು ಕೂಡಿಸಿ ಕಲಕಿಲ (=ಕೂಡಿದ ಎಲೆಗಳು); ಕಲಕೂರು (=ಸಂಯುಕ್ತ ದೇಶಗಳು) ಎಂದು ಮೊದಲಾಗಿ ಸಿದ್ಧಮಾಡಿಕೊಂಡದ್ದು ಕಂಡುಬರುತ್ತದೆ.

ಆದರೆ, ಇದಕ್ಕೂ ಹೆಚ್ಚು, ಈ ಚಿತ್ರಲಿಪಿಯಲ್ಲಿ ಪ್ರಯುಕ್ತವಾದ ಹಲವು ಬಹುವಚನದ ರೂಪಗಳು ಕನ್ನಡವೇ ಆಗಿವೆ.

("*More characteristically* **Kannada** *is one of the plural forms used in Mohenjo-Daro,*'—Heras).

ಇಲ್ಲಿ ಸಾಮಾನ್ಯವಾಗಿ ಪ್ರಯುಕ್ತವಾದ ಬಹುವಚನದ ರೂಪವೆಂದರೆ 'ಇರ್' ಎಂಬುದು. ಉದಾಹರಣೆಗೆ, **'ಪಾರವಿರಪಳ್ಳಿ'**— ನೋಡುವುದು. ಈ 'ಇರ್' ಪ್ರತ್ಯಯವು ಕನ್ನಡ ಗ್ರಂಥಸ್ಥವಾದ ಕಾಲದಲ್ಲೂ, ಅನೇಕ ವರ್ಷಗಳ ವರೆಗೆ ಇದ್ದಿತೆಂಬುದನ್ನು ಸಾಹಿತ್ಯದಲ್ಲಿ ಕಾಣುತ್ತೇವೆ. ನಾಗವರ್ಮನು "**ಇರಾ ಶ್ಲೇಷೋಗಳಃ**" ಎಂದು ಹೇಳಿದರೆ, ಕೇಶಿರಾಜನೂ ಇದೇ ಮಾತನ್ನೇ ಹೇಳುತ್ತಾನೆ. ಇದರಂತೆ ಕನ್ನಡ ಬಹುವಚನ ಪ್ರತ್ಯಯವಾದ 'ಒರ್' ಎಂಬುದೂ ಕಂಡುಬರುತ್ತಿದೆ. ಉದಾಹರಣೆಗೆ '**ಆಳೊರ್**' ಎಂಬುದನ್ನು "ಜಿವುತಿ"ಯ ಆಕಾರದಲ್ಲಿ ಬರೆದಿದೆ. ಇದರಂತೆ, ಇಂದು ನಾವು ಕನ್ನಡದಲ್ಲಿ ಉಪಯೋಗಿಸುವ ಬಹುವಚನದ 'ರು' ಕೂಡ (ರಾಮ 7 ರಾಮರು ಇ.) ಈ ಲಿಪಿಯಲ್ಲಿದೆ.

> ("But besides the above two forms, there is still the form in—ರು, *which is purely Kannada*).

ಈ 'ರು' ವರ್ಣವನ್ನು ಮೊಹೆಂಜೊದಾರೊ ಲಿಪಿಯಲ್ಲಿ ಸೂಚಿಸುವುದು ಮುಖ ಮೇಲುಮಾಡಿದ ಕುದುರೆಯ ನಾಲಿನ ಚಿತ್ರದಿಂದ U. ಇದರಂತೆಯೇ, ಇಂದಿಗೂ ಅನೇಕ ಲಿಂಗವಂತರ ಮನೆಯ ಮೇಲೆ ಬರೆಯುವ ಡಮರುವಿನ ಚಿಹ್ನವು ಅನೇಕ ಸಲ ಮೊಹೆಂಜೊದಾರೊ ಲಿಪಿಯಲ್ಲಿ ಪ್ರಯುಕ್ತವಾದದ್ದು ಕಂಡುಬರುತ್ತದೆ. ಫಾದರ್ ಹೆರ್ರಾಸ್ ಅವರ ಪ್ರಕಾರ ಇದರ ಅರ್ಥವೆಂದರೆ 'ಕೂಡು' 'ಸಂಗಮ' ಎಂದರ್ಥ. ಅವರು ಈ ಬಗ್ಗೆ ಹೇಳುವುದೆಂದರೆ:—

> "The modern Lingayats of the Kannada country depict a sign on the walls of their houses, the meaning of which does not seem to be known to them... This sign is often found in the inscription of Mohenjo-Daro and Harappa. It reads **ಕೂಡು** and means 'unite'. The sign very likely refers to the union of male and female principles which is so prominent in the religious tenets of the Vir Saiva sect."

ಒಟ್ಟಾರೆ, ಮೇಲಿನ ವಿವರಣೆಯಿಂದ, ಬಹುವಿಧವಾಗಿ ಶ್ಲಾಘಿಸಲ್ಪಟ್ಟ ಮೊಹೆಂಜೊದಾರೊ ಸಂಸ್ಕೃತಿಯು ಕನ್ನಡದ ತೀರ ನಿಕಟವರ್ತಿಯೆಂದೂ, ಫಾದರ್ ಹೆರಾಸ್ ಅವರ ಪ್ರಕಾರ ಕನ್ನಡ ಪ್ರಧಾನವಾಗಿದ್ದ ಸಂಸ್ಕೃತಿಯೆಂಬುದನ್ನೂ ನಾವು ನಿರ್ವಿವಾದವಾಗಿ ಕಾಣುತ್ತೇವೆ.

ಕನ್ನಡ **ನುಡಿಯು** ಹೆಚ್ಚುಕಡಿಮೆ ಇಂದಿನ ರೂಪದಲ್ಲಿ ಪ್ರಾರಂಭವಾದಂದಿನಿಂದಂತೂ, ಈ ಜನತೆಯ ಸಂಸ್ಕೃತಿಯು ಯಾವ ರೀತಿ ಇದ್ದಿತೆಂಬುದನ್ನು, ಕನ್ನಡಕೋಶದಲ್ಲಿ ಕಂಡುಬರುವ **ಶುದ್ಧ ಕನ್ನಡ ಪದಗಳ ಮೇಲಿಂದ ನಾವು ಅರಿತುಕೊಳ್ಳಬಹುದಾಗಿದೆ.**

ಯಾವುದೇ ಒಂದು ವಿಷಯ ಪ್ರತ್ಯಕ್ಷವಾಗಿ ಕಂಡುಬರುವವರೆಗೆ ಇಲ್ಲವೆ ಕೇಳಿ ತಿಳಿದುಕೊಳ್ಳುವವರೆಗೆ, ಅದಕ್ಕೆ ಸಾಮಾನ್ಯವಾಗಿ ಹೆಸರು ಬಾರದೆಂಬುದನ್ನು ನಾವು ನಿತ್ಯಜೀವನದಲ್ಲಿ ಕಂಡ ಮಾತು. ನಾವು ಹೆಸರಿನಿಂದ ನಿರ್ದೇಶಿಸುವ ವಸ್ತುವನ್ನು ನಮ್ಮ ಪೈಕಿ ಯಾರಾದರೂ ಜನ ಎಲ್ಲಿಯಾದರೂ ನೋಡಿರಲೇಬೇಕು. ಅಂದರೇ ಆ ವಸ್ತುವಿಗೆ ಹೆಸರು ಬರುವದುಂಟು. ಉದಾಹರಣೆಗೆ 'ಬಾನುಲಿ'ಯನ್ನೇ ತೆಗೆದುಕೊಳ್ಳೋಣ; ನಮ್ಮಲ್ಲಿ 'ರೇಡಿಯೋ' ಬರುವವರೆಗೆ ಈ ಶಬ್ದ ಹುಟ್ಟುವ ಆವಶ್ಯಕತೆಯೇ ಇರಲಿಲ್ಲ; ನಮ್ಮಲ್ಲಿಯ ಹಲವು ಜನವಾದರೂ ಇದನ್ನು ಪ್ರತ್ಯಕ್ಷ ಕಂಡಮೇಲೆಯೇ ಈ ಶಬ್ದವು ಹುಟ್ಟಿಕೊಂಡಿತು. ಆ್ಯಟಮ್ ಬಾಂಬು, ಹುಟ್ಟುವ **ಮೊದಲೇ**

ಅದರ ಹೆಸರು ಹುಟ್ಟದ ಹಾಗೆ, 'ಸಿನೇಮಾ' ಬಾರದ ಮೊದಲೇ ಅದರ ಹೆಸರು ಕಾಣದ ಹಾಗೆ, **ಯಾವುದೇ ಒಂದು ಸಾಂಸ್ಕೃತಿಕ ಅಂಶವು ಇರದೇ, ಆ ಅಂಶದ ನಿರ್ದೇಶ ಬಾರದು.** ಈ ರೀತಿ ನೋಡಿದರೆ, ಕನ್ನಡದಲ್ಲಿ ಕಂಡುಬರುವ ಶುದ್ಧ ಕನ್ನಡ ಪದಗಳ ಮೇಲಿಂದ ನಾವು ನಮ್ಮ ಪ್ರಾಚೀನರ ಸಾಂಸ್ಕೃತಿಕ ಅವಸ್ಥಾನವನ್ನು ಬಹುಮಟ್ಟಿಗೆ ಕಾಣಬಹುದಾಗಿದೆ.

ಆದರೆ, ಒಂದು ಎಚ್ಚರಿಕೆಯ ಮಾತು: ಈ ಕೆಳಗಿನ ನಿರ್ದೇಶವು ಹೆಚ್ಚುಕಡಿಮೆ ಸ್ಥೂಲವಾಗಿದೆಯೇ ವಿನಾ, ಸಂಪೂರ್ಣ ವಿವರಗಳುಳ್ಳದ್ದೆಂದು ಯಾರೂ ನಂಬಕೂಡದು. ಎರಡನೆಯದಾಗಿ—**ಯಾವುದೇ ಒಂದು ವಸ್ತುವಿನ ನಿರ್ದೇಶವಿದ್ದದ್ದರ ಮೇಲಿಂದ, ಆ ವಸ್ತುವು ಖಂಡಿತವಾಗಿ ಇರಲೇಬೇಕೆಂದು** ಯಾವ ರೀತಿ ಹೇಳಬಹುದೋ; ಹಾಗೆಯೇ **ತದ್ವಿರುದ್ಧವಾಗಿ,** ಯಾವುದೇ ಒಂದು ವಸ್ತುವಿನ ನಿರ್ದೇಶವಿರದ ಮಾತ್ರಕ್ಕೆ ಅದು **ಆ ಕಾಲದಲ್ಲಿ ಇದ್ದಿರಲೇ ಇಲ್ಲವೆಂದು ಖಂಡಿತವಾಗಿ ಹೇಳಲು ಬಾರದು.** ಉದಾಹರಣೆಗೆ, ಪಂಪನ ಕಾವ್ಯದಲ್ಲಿ 'ನೀರು' 'ನುಚ್ಚು' ಇಲ್ಲವೆ 'ಕಿಚಡಿ'– ಮೊದಲಾದ ಯಾವುದೇ ಒಂದು ಪದದ ನಿರ್ದೇಶವಿಲ್ಲವೆಂದು ಗ್ರಹಿಸಿದರೆ, ೧೦ನೆಯ ಶತಮಾನದಲ್ಲಿ ಆ ವಸ್ತುವೇ **ಇದ್ದಿರಲಿಲ್ಲನೆಂದು ಹೇಳಲು ಬಾರದು.** ಬಹುಶಃ ಪಂಪನ ಕಾವ್ಯಪ್ರಸಂಗಕ್ಕೆ, ಇಲ್ಲವೆ ವಸ್ತುವಿಗೆ ಆ ವಿಷಯದ ವಿವರಣೆ ಆವಶ್ಯಕವಾಗಿರಲಿಕ್ಕಿಲ್ಲ ಅಷ್ಟೇ; ಈ ಬಗ್ಗೆ ಪ್ರೊ. ಸ್ಮಿಥ್ ಅವರು ಇಂಗ್ಲಿಷ್ ಸಾಹಿತ್ಯದ ಬಗ್ಗೆ ಹೇಳಿದ ಮಾತುಗಳು ತುಂಬಾ ಮನನೀಯವಾಗಿವೆ.

> "Finally, we must also guard against the notion that men, or any period, *did not possess* certain thoughts and feelings because they had no words to express them... (such investigation of words) unless it be pursued with caution, will lead to strange and often absurd conclusions. So, if Elizabethans had no word for 'disappointment' and 'homesickness', we can not (therefore) assure that they didnot experience these feelings, but only that they were not interested in expressing them. But even this difference, this change of value and interest, is a very real and very important one..."*

ಈ ದೃಷ್ಟಿಯಿಂದ ನೋಡಿದರೆ, ಪ್ರೊ. ಮರಿಯಪ್ಪ ಭಟ್ಟ ಅವರ ಪ್ರಕಾರ ಕಂಡುಬರುವ ಸಾಂಸ್ಕೃತಿಕ ಮಟ್ಟವನ್ನು ನಾವು ಈ ರೀತಿ ಶೇಖರಿಸಬಹುದು:—

ಕನ್ನಡರು ಕ್ರಿ. ಪೂ. ೩–೪ನೆಯ ಶತಮಾನಗಳಿಂದಲೇ ತಮ್ಮದೇ ಆದ ಉಚ್ಚಮಟ್ಟದ ಸಂಸ್ಕೃತಿಯನ್ನು ಕಟ್ಟಿಕೊಂಡಿದ್ದರು. ಪಂಚದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಸುಮಾರು ೫೦೦೦ ದೇಶ್ಯಶಬ್ದಗಳು ಇದೇ ಮಾತನ್ನೇ ಸಾರುತ್ತಿವೆ. ಪ್ರೊ. ಮರಿಯಪ್ಪ ಭಟ್ಟ ಅವರ ಪ್ರಕಾರ ಕನ್ನಡರ ಈ ಸಂಸ್ಕೃತಿಯೆಂದರೆ:—†

" ಕನ್ನಡರ ಬಾಜ್ಪೆ ಚೆನ್ನಾಗಿದ್ದಿತು.... ಗೆಯ್ಮೆಯೇ (ಅವರ ಬಾಟಿಸ) ಪುರುಳು. ಮಣ್ಣು ಒಕ್ಕುವುದರಿಂದ ಒಕ್ಕಲುಗಳಾಗಿಯೂ, ಒಕ್ಕಲಿಗರಾಗಿಯೂ ಮೆಜಿದರು. ನೆಲ, ಮನೆ, ಹೊಲ, ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ, ತಂಗಿ, ಒಲವಿನ ನಂಟರುಗಳಿಂದ ಕೂಡಿ ಬಳೆದರು. ಕಾಳು, ಬೇಳೆ, ಪಾಲ್, ಮೊಸರು,

* E. L., P. 164. † ಅ. ೫೦.

ಮಜ್ಜಿಗೆ (ಅಳೆ), ನೆಯ್, ಬೆಣ್ಣೆ, ಎಣ್ಣೆ, ಪಣ್, ಕಾಯ್, ಮಿಡಿ, ಪೂ, ಎಲೆಗಳು (ಅವರಿಗೆ) ಬೇಕಾದಂತಿದ್ದವು. ಅವರ ಪುರುಳೆನಿಸಿದ ಆಕಳುಗಳಲ್ಲಿ–ಈದ ಆವು; ಕಟ್ಟಿದ ಆವು; ಕನೆಯ ಆವು; ಬೆದೆಯ ಆವು; ಪೆರ್ಗೆಚ್ಚಲಾವು; ಕಲೆಯಾವು; ಕೊಡವಾಲ ಕಱಿವಾವು – ಬಗೆಬಗೆಯವು . ಗೆಯ್ಮೆಗಳಲ್ಲಿ ಎಷ್ಟು ತೆರನಾದುವು?—ಪೈರು ಬೆಳೆಸುವುದು ಅವರ ಒಲವಿನ ಮಾಟ; ಉಱುವುದು, ಬಿದೆ ಹೊಡೆಯುವುದು, ನೇಜಿ (ನಾಟ) ನಡುವುದು; ಕಳೆ ಕೀಳುವುದು; ತೆನೆ ಬಿಟ್ಟು ನೆಲ್ಲು ಹಣ್ಣಾದ ಮೇಲೆ, ಕೆಯ್ ಕೊಯ್ವುದು; ಕೆಯ್ ಬಡಿವುದು; ಅಕ್ಕಿ ಮಾಡುವುದು; ಇತ್ಯಾದಿ.

ಉದ್ದು, ಪಸಱು, ಮೆಕ್ಕೆ, ರಾಗಿ, ಕಬ್ಬು, ತೊಗರಿ, ಕಡಲೆ – ಮುಂತಾದವುಗಳನ್ನು ಬೆಳೆಸುತ್ತಿದ್ದರು. ಅಡಕೆಯ ಸಾಗುವಳಿಯಲ್ಲಿ ತಿಳಿದವರು; ಅಲ್ಲಿನ ಗಡುಗಳು ಸಿಂಗಾರ, ಮೊಗಡ, ಕಾಯಡಕೆ, ಮಾಲೆಕಾಯಿ, ಪಣ್ಣಡಕೆ, ಗೋಟಡಕೆ; ಕರಿಗೋಟುಗಳನ್ನು ಉಳ್ಳವುಗಳಾಗಿದ್ದುವು. ಅಂದಿನಿಂದ ಇಂದಿಗೂ, ನೆಲ್ಲುಹೊಲ, ಹೂತೋಟ, ಅಡಕೆ ತೋಟ, ತೆಂಗುತೋಟ, ಕಬ್ಬುತೋಟ, ಬಾೞೆತೋಟ, ನಟ್ಟಿಹಿತ್ತಲು, ಎಲೆಬಳ್ಳಿಹಿತ್ತಲು – ಇವುಗಳ ನಡುವೆ ಬದುಕಿದರು; ಬದುಕು ಮಾಡಿದರು. ವೈಗಳ್ಳರಲ್ಲ.

ಹೊಂಡ, ಕೆಱೆ, ಕೊಳ, ಕೆಯ್, ಪಳ್ಳ, ಪೊಱೆ, ಕೋಡು, ಕಣಿ, ಕಾಲ್, ಕಾಲುವೆ, ಕೈ-ಕೋಡು, ಸಾಲು,—ಮುಂತಾದುವು ಅವರ **ನೀರಾವರಿಯ** ಕೆಲಸಗಳನ್ನೂ; ಪಱಿಗೋಲು, ಪಡಗು, ಓಡ, ಕಲಂ, ಜಳ್ಳ, ಚುಕ್ಕಾಣಿ, ದಾಂಟು, ಕೆಱೆ, ಏರುತೆ (ಏತ), ಇಳಿತ, ಅಳಿವೆ, ಮುನ್ನೀರ್, ತೀರ, ಕರೆ, ಎಲ್ಲೆ – ಮುಂತಾದುವು ಅವರು ನೀರ್ಬಟ್ಟೆಯನ್ನು ತಿಳಿದವರಾಗಿದ್ದರೆಂದೂ; ನೆಯ್, ಕಡಿ, ಹೊಡೆ, ಬಡಿ, ಗುರ್ದು, ಕಾಸು, ಹತ್ತಿ, ನೂಲು, ಮಗ್ಗ, ಸಾಲಿಗ, ಕೊಲ್ಲು, ಮಿಸುನಿ, ಪೊನ್, ಚೆಂಬೊನ್, ಕರ್ಬೊನ್, ಪಣಿ, ಅಣಿ, ಮಣಿ, ಬೆಳ್ಳಿ, ಅಡಿಗಲ್, ಸುತ್ತಿಗೆ, ಎಲೆಯುಳಿ, ಕೋಲುಳಿ, ಕೀಸುಳಿ, ಕರುವಿತು, ಮಣೆ, ಮಂಚ, ಬಾಗಿಲ್, ಕಣ್ಡಿ, ಕೇರ್, ಕೇರ್ಪು, ಉಡಿಗೆ, ಕೊಡಿಗೆ, ಬಳೆ, ಓಲೆ, ಕೊಪ್ಪು, ಬುಗುಡಿ, ಕಲ್ಲು, ಕಟ್ಟು, ಒಡವೆ, ಚಿನ್ನ, ಕೊಡಲಿ, ಕಾವು, ಕೊಡೆ, ಗೊರಗು, ಮಾಡು, ಗಳೆ, ಪಟ್ಟ, ಬೆಳಕು, ಸೊಡರು—ಎಂಬ ಎಣಿಸಿ ಮುಗಿಯದ ಸೊಲ್ಲುಗಳು ನಮ್ಮ ಹಿರಿಯರ ಕೈಗಾರಿಕೆಯನ್ನೂ, ದುಡಿಮೆಯನ್ನೂ ಸಾರುತ್ತವೆ.

ನಮ್ಮವರ ಯುದ್ಧದ ಪರಿಭಾಷೆಯಲ್ಲಿ:—ದೂರು, ಮುತ್ತು, ತುಳಿ, ತುಳಿಲ್, ಹೊಂಚು, ತುಬ್ಬು, ಪತ್ತು, ಬಿಟ್ಟ, ಕೋಂಟೆ, ತಳಿಗೋಂಟೆ, ಮುಳುವೇಲಿ, ಪಡಿಗೋಂಟೆ, ನಡೆಗೋಟೆ,—ಮರುಳ್ಗೈ, ಈಟಿ, ಅಗೞ್, ಮುಂದಾಳ್, ಕಾಲಾಳ್, ತೇರ್, ಕುದುರೆ, ಆನೆ, ಪಡೆ, ಆರ್ಪು, ದಾಳಿ, ಕಾದು, ಪೋರ್, ಕಾಳಗ, ಗುರ್ದು, ಪೊಯ್, ಪೊಣರ್, ಅಗುರ್ವು, ಪಂದೆ, ಸೆಱಗು, ಸೆರೆ, ಬಾಬ್ಬುಲೆವಿಡಿ, ಕೈದು, ಕೈನುಗೊಳ್, ಅದಟ್ಟು, ಆಟ್ಟೆ, ಕೊಲ್, ಮುಡಿಪು, ತೀರ್, ಮಡಿ, ಬಟಿಲ್, ಸೋಲ್, ಸೋಲ, ಗೆಲ್, ಗೆಲವು, ಬಿಲ್, ಕೋಲ್, ನೇಣ್, ಬಾಳ್, ನಾರ್, ಪುರಿ, ಕಡಿತಲೆ, ಕಡಿ, ಪಿಡಿ, ಎಲ್ವಡಿ, ಅಡಗು, ನೆಣ,—ಎಂಬ ಈ ಮೊದಲಾದ ನುಡಿಗಳು ಅವರ ಹೋರಟಿಯ ಕ್ರಮವನ್ನೂ;

ನಾಡೆಱೆಯಂ, ಒಡೆಯ, ಆೞ್, ಆಳ್ವಂ, ಕೆಳೆ, ಎಸಕ, ಓಲಯ್ಸು, ಓಲಗ, ಒಡ್ಡೋಲಗ, ಅಂಕಕಾಱ, ಮನ್ನೆಯರು, ನಾಡು, ಬೀಡು, ಊರು, ಎಣಿಕೆ, ಎಣಿಸು, ತೆಱು, ತೆಱಿಗೆ, ಹಱಕೆ, ಒಲಿಪೆ ಕಪ್ಪ–ಕಾಣಿಕೆ, ಪೆರ್ಚು, ಪೆರ್ಕು, ಹುಟ್ಟುವಳಿ, ಸಲುವಳಿ, ಹರಿಕಾಱ, ಒಪ್ಪಂದ, ತೀರ್ಪು, ತೀರ್ಮಾನ, – ಎಂಬುವೂ;—

ಆರೋಗಣೆಯ ವಿವರಗಳಲ್ಲಿ:— ಇನಿದು, ಸಿಹಿ, ಕಹಿ, ಕೈಪೆ, ಪುಳಿ, ಉಪ್ಪು, ಚೊಗರು, ತಣಿ, ಬಿಸು, ಒಗ್ಗು, ತಿಣ್ಡಿ, ತಿನಿಸು, ಊಟ, ಕುಡಿ, ಕುಡಿತೆ, ಉಪ್ಪಿನಕಾಯಿ, ಪಪ್ಪಳ, ಜೇನ್, ಉಂಡೆ, ಕಡುಬು,— ಎಂದಿವು ಅವರ **ಊಟದ** ಏರ್ಪಾಡನ್ನೂ ಹೇಳುವವು.

ಒಲವು, ಕಲಿ, ಓದು, ಬರೆ, ಬರೆಹ, ಓದಾಳಿ, ಕಲ್ಪಿ, ಓಲೆ, ಐಗಳು, ಅಱಿವು – ಎಂಬಿವು ಅವರ ತಿಳಿವಿನ ಬಾಯಾರಿಕೆಯನ್ನೂ; ನಲಿ, ಉಲಿ, ಪಡೆ, ಕೊಳಲು, ಬೊಂಬೆ, ಆಟ, ನೋಟ, ಕೂಟ, ಕುಸುರಿ, ಗಣೆ, ಮಿಸುನಿ, ಕೆಲಸ, ಕೆತ್ತನೆ, ಬಱಿ ಎಂಬಿವು ಅವರ ಬಿಡುವನ್ನೂ ಹೊಲಬನ್ನೂ ಸಾರುತ್ತವೆ.

ಆದರೆ, ಈ ರೀತಿ ಶಬ್ದಗಳ ಮೇಲಿಂದ ಸಂಸ್ಕೃತಿಯ ಬಗೆಯನ್ನು ಕಟ್ಟುವಾಗ **ಎರಡು** ಮಾತುಗಳನ್ನು ಲಕ್ಷ್ಯದಲ್ಲಿಡಬೇಕೆಂದೆನಿಸುತ್ತದೆ.

೧. ಯಾವುದೇ ಒಂದು ಪದವು **ಕೇವಲ ಕನ್ನಡವಾಗಿದೆಯೆಂದಾಕ್ಷಣಕ್ಕೆ** ಆ ವಿಷಯವನ್ನು ನಿರ್ದೇಶಿಸುವ ವಸ್ತುವು ಮೊದಲಿನಿಂದಲೂ ಇದ್ದಿತೆಂದು ಹೇಳಲಾಗದು. ಇಂಥ ಸಂಸ್ಕೃತಿಯ ಕಟ್ಟಡಕ್ಕೆ **ಸಮಸ್ತಪದಗಳು** ಗ್ರಾಹ್ಯವಾಗಲಾರವು. ಅವು ಭಾಷೆಯಲ್ಲಿ ಹೆಚ್ಚುಕಡಿಮೆ ಅನಂತರದ ಬೆಳವಣಿಗೆಗಳು. ಉದಾಹರಣೆಗೆ, 'ಬಾನುಲಿ' ಎಂಬ **ಕನ್ನಡ ಸಮಸ್ತಪದವು** ನಮ್ಮಲ್ಲಿಂದು ಇದ್ದಮಾತ್ರಕ್ಕೆ ಆ ಪದವು ಈಗ ನಿರ್ದೇಶಿಸುವ ವಸ್ತುವು ಮೊದಲಿನಿಂದಲೂ ನಮ್ಮಲ್ಲಿ ಇದ್ದಿತೆಂದು ಹೇಳಲಾಗದು.

೨. ಈ ಶಬ್ದಗಳು **ಶುದ್ಧ ಕನ್ನಡವಾದರೂ,** ಇವು ಎಷ್ಟು ಪ್ರಾಚೀನವಾಗಿ ಪ್ರಯುಕ್ತವಾಗಿವೆ ಎಂಬ ಕಾಲಕ್ರಮವನ್ನೂ (chronology) ಲಕ್ಷದಲ್ಲಿಡಬೇಕು.

ಐತಿಹಾಸಿಕ ಕಾಲದಲ್ಲಿ ಕನ್ನಡರ ಸಂಸ್ಕೃತಿ ಸಂವರ್ಧನವು ಯಾವ ರೀತಿ ಆಯಿತೆಂಬುದನ್ನು ವಿವರಿಸುವುದು ಈ ಪ್ರಕರಣದ ಉದ್ದೇಶವಲ್ಲವೆಂದು ಈ ಮೊದಲೇ ಹೇಳಿದ್ದೇವಷ್ಟೇ.... ಆದರೂ, ಬಹುಶಃ ಅಂದಿನಿಂದ ಇಂದಿನ ವರೆಗೂ ಕನ್ನಡರ ಸ್ವಭಾವದ ಮುಖ್ಯ ಲಕ್ಷಣಗಳಾದ ಕೆಲವು ಅಂಶಗಳನ್ನು ಹಲವಾರು ಲೇಖಕರು ಯಾವ ರೀತಿ ಪ್ರಾಚೀನ ಕಾಲದಿಂದಲೂ ಚಿತ್ರಿಸಿದ್ದಾರೆಂಬುದನ್ನು ನೋಡಿ, ನಾವು ಈ ಪ್ರಕರಣವನ್ನು ಮುಗಿಸಬಹುದು.

ಪ್ರಾಚೀನ ಕನ್ನಡರ ಸ್ವಭಾವವರ್ಣನೆ:— ಮೊದಲಿನಿಂದಲೂ, ಕನ್ನಡರು ವೀರರು, ಉದಾತ್ತರು; ಧ್ಯೇಯವಾದಿಗಳು. ಒಳ್ಳೆಯ ಆದರ್ಶ ಇಲ್ಲವೆ ಕೆಳೆತನಕ್ಕಾಗಿ ಸದಾ ಸಿದ್ಧರು. ಉತ್ತರದ ಶ್ರೀರಾಮಚಂದ್ರನಿಗೆ ಬಹುಶಃ ಎಲ್ಲಿಯೂ ಸಿಗದ ಭಕ್ತನು ಕರ್ನಾಟಕದಲ್ಲಿ ದೊರೆತನು. ಕನ್ನಡನಾಡು 'ಹನುಮನುದಿಸಿದ ಬೀಡು'. ಅಂತಲೇ, ದ್ರಾವಿಡದೇಶಗಳಲ್ಲಿ ಜನ್ಮತಾಳಿದ ಭಕ್ತಿಪಂಥವು, ಕರ್ನಾಟಕದಲ್ಲಿಯೇ ಪರಿಪೂರ್ಣವಾಯಿತೆಂದು ಪದ್ಮಪುರಾಣವು ಹೇಳುತ್ತದೆ. ಇದರಂತೆಯೇ, ಕಲಿಗಳಾದ ಕನ್ನಡರು ಮಿತ-ಭಾಷಿಗಳು. ಕ್ರಿ. ಶ. ೨ರ ಮೃಚ್ಛಕಟಿಕದಲ್ಲಿಯ 'ವಯಂ ತು ದಾಕ್ಷಿಣಾತ್ಯಾಃ ಅವ್ಯಕ್ತ ಭಾಷಿಣಃ' 'ಕರ್ಣಾಟ ಕಲಹಪ್ರಯೋಗಂ ಕರಿಷ್ಯಾಮಿ' – ಎಂಬ ಮಾತುಗಳ ನಿಜವಾದ ಅರ್ಥವೇನೇ ಇರಲಿ; ಸ್ವಭಾವತಃ ಕನ್ನಡರು ಗಭೀರಚಿತ್ತರು; ತಾವಾಗಿಯೇ ಮುಂದುಬೀಳದವರು. ಹೀಗಾಗಿ, ನೋಡಲು ಕೂಡ ಕೆಲಮಟ್ಟಿಗೆ ಉಗ್ರರಾಗೇ ಅವರು ಕಂಡುಬರಬಹುದು. ಆದರೂ ಅವರ ಅಂತಃಕರಣವು ಮಾತ್ರ ತೀರ ನಿರ್ಮಲವೂ ಕೋಮಲವೂ ಆದುದು. ಜೀವನದ ಆದರ್ಶವನ್ನು ತೋರಿಸುವ ಕಾವ್ಯ–ನಾಟಕಾದಿಗಳು ಅವರಿಗೆ ಎಂದಿನಿಂದಲೂ ಪ್ರಿಯವಾದುವು. ಚೇರ ಅರಸನಾದ ಶೆಂಗುಟ್ಟುವನ್ ಎಂಬವನು ನೀಲಗಿರಿಯಲ್ಲಿ ತಂಗಿ, ಅಲ್ಲಿಯ ಕನ್ನಡರ ನೃತ್ಯವನ್ನು

ನೋಡಿ ಮುಂದೆ ಸಾಗಿದನು. ೯ನೆಯ ಶತಮಾನದ ರಾಷ್ಟ್ರಕೂಟ ದೊರೆಯಾದ ಅಮೋಘವರ್ಷ ನೃಪತುಂಗನ ಪ್ರಕಾರ, ಅವರು "ಕುಱಿತು ಓದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್." ಈ ಬಗ್ಗೆ ನೃಪತುಂಗನು ಹೇಳುವುದೇನಂದರೆ—

ಪದನರಿದು ನುಡಿಯಲುಂ, ನುಡಿದುದಂ ಅರಿದು
ಅರಯಲುಂ ಆರ್ಪರ್, ಆ ನಾಡವರ್ಗಳ್;
ಚದುರರ್; ಕುರಿತೋದದೆಯುಂ ಕಾವ್ಯ–ಪ್ರಯೋಗ
ಪರಿಣತಮತಿಗಳ್

ಅವರ ಸ್ವಭಾವವೋ ನೃಪತುಂಗನ ಪ್ರಕಾರ ಯಾವ ರೀತಿ ಇದೆಯೆಂಬುದನ್ನು ಅವನ ಬಾಯಿಂದಲೇ ಕೇಳಬೇಕು. 'ನಾಡವ'ರೆಂದರೆ—

ಸುಭಟರ್ಕಳ್; ಕವಿಗಳ್; ಸುಪ್ರಭುಗಳ್;
ಚೆಲ್ವರ್ಕಳ್; ಅಭಿಜನರ್ಕಳ್; ಗುಣಿಗಳ್;
ಅಭಿಮಾನಿಗಳ್; ಅತ್ಯುಗ್ರರ್; ಗಭೀರ–
ಚಿತ್ತರ್; ವಿವೇಕಿಗಳ್ ನಾಡವರ್ಗಳ್.

ಕನ್ನಡರ **ಉಗ್ರವೃತ್ತಿಯನ್ನು** ಕನ್ನಡರ ನೆರೆಹೊರೆಯವರಾದ ತಮಿಳರೂ ಅನುಭವಿಸದೇ ಇಲ್ಲ. ಉದಾಹರಣೆಗೆ, ತಮಿಳು 'ಶಿಲಪ್ಪದಿಗಾರಮ್' ಗ್ರಂಥದಲ್ಲಿ ಚೇರ ಶೆಂಗುಟ್ಟವನ್ ಎಂಬ ನೃಪನು ಸಂಧಿಸಿದ ಜನರಲ್ಲಿ ಕನ್ನಡರನ್ನು 'ಕೊಡುಮ್ ಕರುನಾಡರ್' ಅಂದರೆ, 'ಕ್ರೂರ ಕನ್ನಡರು' ಎಂದು ಕರೆಯಲಾಗಿದೆ. ಆದರೆ, ಅದೇ ಧ್ವನಿಯಲ್ಲಿಯೇ ಕನ್ನಡರ ವಾದ್ಯ ಮತ್ತು ನೃತ್ಯಕಲಾನೈಪುಣ್ಯವನ್ನೂ ವರ್ಣಿಸಲಾಗಿದೆ.

ಕನ್ನಡರು ತಮ್ಮ ಈ ವೈಶಿಷ್ಟ್ಯಗಳನ್ನು ಇಂದಿನ ವರೆಗೂ ಯಾವ ರೀತಿ ಕಾಯ್ದುಕೊಂಡು ಬಂದಿದ್ದಾರೆಂಬುದನ್ನು, ಆಂಗ್ಲ ಅಧಿಕಾರಿಯೊಬ್ಬನು ಕೊಟ್ಟ ಕನ್ನಡಿಗರಾದ 'ಬಂಟರ ವರ್ಣನೆ'ಯಲ್ಲಿ ಕಾಣಬಹುದು :—

"They still retain their manly independence of character, their strong well-developed physique, and they still carry their heads with the same haughty toss as their fore-fathers did in their stirring fighting days, who were as an old proverb had it 'the slain rested in the yard of the slayer.'···· Both men and women of the 'Pant' community are among the comeliest of Asiatic races..."

ಒಂಬತ್ತನೆಯ ಶತಮಾನದ ನೃಪತುಂಗನ ಉಕ್ತಿಗೂ ಈ ಅಭಿಪ್ರಾಯಕ್ಕೂ ಎಷ್ಟು ಸಾಮ್ಯ! ಮಾನ್ಯ ಶ್ರೀ. ಶಂ. ಬಾ. ಜೋಶಿ ಅವರು ಈ ಬಗ್ಗೆ ಉಚಿತವಾಗಿ ಹೇಳಿದಂತೆ—"ಕವಿರಾಜಮಾರ್ಗದ ವರ್ಣನೆಯನ್ನು ಓದಿ ಅದನ್ನೇ ಇಂಗ್ಲಿಷಿನಲ್ಲಿ ಭಾಷಾಂತರಿಸಿದಂತಿದೆ. ಅಂದಿನ ಗುಣಗಳು ಇಂದಿಗೂ ಅಚ್ಚಳಿಯದೆ ಉಳಿದಿವೆ. ಇವರು —ಬಂಟರು— ಸು-ಭಟರ್ಕಳ್, ಅಭಿಮಾನಿಗಳ್, ಅತ್ಯುಗ್ರರ್, ಗಭೀರಚಿತ್ತರ್, ಚೆಲ್ವರ್ಕಳ್, ಅಭಿಜನರ್ಕಳ್, ಗುಣಿಗಳ್, ವಿವೇಕಿಗಳ್, ಇವರು ಒಬ್ಬರಿಗೆ ತಲೆವಾಗಿ, ಜೀಯೆಂದು ಎಂದೂ ಬಾಳಿದವರಲ್ಲ;

ಆದುದರಿಂದಲೇ ಸು–ಪ್ರಭುಗಳ್. **ಆಳಿ ಗೊತ್ತು ಇವರಿಗೆ; ಆಳಾಗಿ ಬಾಳಿದವರಲ್ಲ.** 'ಸಾರಿಯುಂ ಕೇರಿಯುಂ' ಬಾಳುವವರು, 'ಎಂದುದನೆ ಎಂದು' ಬದುಕಿದವರಲ್ಲ."*

ಕ್ರಿಸ್ತಶಕ ಹತ್ತರಲ್ಲಿ ಆಗಿಹೋದ ರಾಜಶೇಖರನು ತನ್ನ ಕಾವ್ಯಮೀಮಾಂಸೆಯಲ್ಲಿ ಕನ್ನಡರ ವಾಚನ–ಪದ್ಧತಿಯನ್ನು ವಿವರಿಸುವಾಗ –

ರಸಃ ಕೋಪ್ಯಸ್ತು ಕಾಪ್ಯಸ್ತು ರೀತಿಃ
ಸಗರ್ವಂ ಸರ್ವ ಕರ್ಣಾಟಾಃ ಟಂಕಾರೋತ್ತರ ಪಾಠಿನಃ

ಎಂದು ಸಗರ್ವವಾಗಿ ಕನ್ನಡರು ಹೇಳುವ **ಧೀಮಂತ ಟಂಕಾರವೃತ್ತಿ**ಯನ್ನೇ ವಿವರಿಸುತ್ತಾನೆ. ಕನ್ನಡ ಸ್ತ್ರೀಯರ ಚೆಲುವಿಕೆಯೋ!—

'ಕರ್ಣಾಟೀ ಚಿಕುರಾಣಾಂ ತಾಂಡವಕರೋ ವಾಯುಃ'

ಕನ್ನಡರ ಈ ಧೀಮಂತವೃತ್ತಿ ಮತ್ತು ಕಲಿತನಗಳ ಪ್ರಶಸ್ತಿಯನ್ನೇ ಹಲವು ಪಂಡಿತರು ಕನ್ನಡ ಪದದ ವ್ಯುತ್ಪತ್ತಿಯಲ್ಲಿ ಕಾಣುತ್ತಾರೆ. 'ವಿಶ್ವಗುಣಾದರ್ಶ'ದ ವೆಂಕಟಾಧ್ವರಿಯು (ಸು. ೧೭೦೦)—

'ಸ ಏವ (ಕರ್ಣಾಟ-ದೇಶಃ) ಸಾಂಪ್ರತಂ ಪಶ್ಯ, ಚಕ್ಷುಷೋ ಭೂಷಣಾಯತೇ'

ಎಂದು ಹೇಳಿದರೆ, 'ಶಬ್ದರತ್ನಾವಲಿ'ಯ ಪ್ರಕಾರ—ಕರ್ಣಾಟಕವೆಂದರೆ,—

ಕರ್ಣೇಷು ಅಟತಿ, **ಪ್ರಭೂತ ಯಶಸ್ವಿನಃ ಏತದ್ದೇಶಸ್ಥಃ ರಾಜ್ಞಃ—**
ಗುಣಾದಿ ಕೀರ್ತನೇನ ಸರ್ವೇಷಾಂ ಕರ್ಣೇಷು ಭ್ರಮತೀತಿ....
ಸ್ವ–ನಾಮ ಖ್ಯಾತದೇಶ ವಿಶೇಷಃ

ಎಂದು ಹೇಳುತ್ತಾನೆ.

ಕ್ರಿ.ಶ. ೭೭೮ರ ಉದ್ಯೋತನಸೂರಿಯು ಕೂಡ ಕನ್ನಡರ ಗುಣ-ಸ್ವಭಾವವನ್ನು ಹೀಗೆ ವರ್ಣಿಸುತ್ತಾನೆ:–

ಅಕ್ಕಡದಪ್ಪೇ ಪಿ ಆ ಮೋಹಣೇ ಏ(ಪ) ಯರೊದ್ದೇ ಪಯಂಗ ವಿತ್ತಿಯ ।
'ಆದಿ ಪೊಂಡಿ ಮ(ನ) ರೇ' ಭಣಿರೇ ಪೆಚ್ಛ ಇ ಕಣ್ಣಾಡ ಏ ಅಣ್ಣೇ ॥
(ಉತ್ಕಟದರ್ಪಾನ್, ಪ್ರಿಯ ಮೋಹನಾನ್, ಪದರೌದ್ರಾನ್ ಪತಂಗ ವೃತ್ತಿಂಶ್ಚ ।
'ಅದ್ರಿಪೊಡಿಮನರೇ' ಭಣತಃ ಪ್ರೇಕ್ಷತೇ ಕರ್ಣಾಟಕೀಯಾನ್ ಅನ್ಯಾನ್ ॥)†

ಈ ಕಲಿತನದ ಬಗ್ಗೆ ಹೇಳುವಾಗ ರಾಜಶೇಖರನು ಸ್ಪಷ್ಟವಾಗಿ ಹೇಳುವುದೇನಂದರೆ—

ಕರ್ಣಾಟೋ **ಯುದ್ಧತಂತ್ರೇ ಚತುರಮತಿಃ**
ಸಮರಕರ್ಮಣಿ ನಿಸರ್ಗೋದ್ಭವಾಃ–ಏವ ಕರ್ಣಾಟಾಃ

ಪುನಃ—

ಕ್ರಿಂ ಭ್ರೂಥ?—**ಅಖಂಡಪುರುಷಾಕಾರಾಃ ಹಿ ಕರ್ಣಾಟಾಃ**

ಎಂದು ಹೇಳುತ್ತಾನೆ. ಈ ರೀತಿ ಕನ್ನಡ ಜನತೆ ವೀರ್ಯ, ಸ್ಥೈರ್ಯ, ಪ್ರೀತಿ, ಸೌಂದರ್ಯಗಳ ಆಗರರಾಗಿ, ತಮ್ಮ ಸಂಸ್ಕೃತಿಸಂವರ್ಧನವನ್ನು ಅವಿರತವಾಗಿ ಮಾಡಿಕೊಳ್ಳುತ್ತ ಬಂದಿದ್ದಾರೆ.

---

* ಶ. ನೆ. ಪು. ೯೮–೯೯. † ಅದೇ ಪು ೧೦೪.

ಏಳನೆಯ ಪ್ರಕರಣ

ಕನ್ನಡ ವ್ಯಾಕರಣದ ಮುಖ್ಯಾಂಶಗಳು

ನಾಮಪದ

ಮೊದಲಮಾತು:—ಕನ್ನಡ ವ್ಯಾಕರಣ ವಿಷಯಕವಾಗಿ ಗ್ರಂಥಗಳು ಕ್ರಿಸ್ತಶಕ ೯ರಿಂದಲೇ ಉಪಲಬ್ಧವಿವೆ. ಕವಿಗಳಿಗೆ ರಾಜಮಾರ್ಗವನ್ನು ಹಾಕಿಕೊಡಲು ಹೊರಟ ನೃಪತುಂಗನಿಗೆ ಕಾವ್ಯವಿಷಯಕವಾದ ಅಲಂಕಾರ ರಸ–ರೀತಿಗಳಷ್ಟೇ ವ್ಯಾಕರಣವಿವರಣೆಯೂ ಆವಶ್ಯಕವಾಯಿತು. ಆ ರೀತಿ, ಕೆಲಮಟ್ಟಿನ ವ್ಯಾಕರಣಾಂಶಗಳನ್ನು **ನೃಪತುಂಗ**ನು ತನ್ನ ಗ್ರಂಥದಲ್ಲಿ ವಿವರಿಸಿದನು. ಅನಂತರ ಕ್ರಿ. ಶ. ೧೧ರಲ್ಲಿ **ನಾಗವರ್ಮ**ನು ಕೂಡ ಹೆಚ್ಚುಕಡಿಮೆ ನೃಪತುಂಗನ ರೀತಿಯನ್ನು ಅನುಸರಿಸಿದ್ದರೂ, ತನ್ನ 'ಕಾವ್ಯಾವಲೋಕನ'ವೆಂಬ ಗ್ರಂಥದ **'ಶಬ್ದಸ್ಮೃತಿ'**ಯ ಭಾಗವನ್ನು ವ್ಯಾಕರಣಕ್ಕಾಗಿಯೇ ಮೀಸಲಿಟ್ಟನು. ಆದರೆ, ಶುದ್ಧವಾಗಿ ಕೇವಲ ವ್ಯಾಕರಣ–ವಿಷಯವನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಗ್ರಂಥಗಳನ್ನು ಬರೆಯುವ ಕ್ರಮವು **'ಭಾಷಾಭೂಷಣ'**ದಿಂದ ಪ್ರಾರಂಭವಾಯಿತು. ಈ ಭಾಷಾಭೂಷಣವು ತುಂಬಾ ಸೂತ್ರಬದ್ಧವಾಗಿದ್ದು ಸಂಸ್ಕೃತ ಭಾಷೆಯಲ್ಲಿದೆ. ಆದರೆ, ನಿಜವಾಗಿ 'ಸಂಬಂಧ ಅಭಿಧೇಯ ಶಕ್ಯಾನುಷ್ಠಾನ'ಗಳ ಮೂಲಕವೂ, ಮತ್ತು ತನ್ನ ಕನ್ನಡ ವೈಶಿಷ್ಟ್ಯವುಳ್ಳ ದೃಷ್ಟಿಯ ಮೂಲಕವೂ ಹೆಚ್ಚು ಉಪಾದೇಯ ಗ್ರಂಥವೆಂದರೆ, ೧೨೬೦ರ ಕೇಶಿರಾಜನ **'ಶಬ್ದಮಣಿದರ್ಪಣ'** ಎಂಬುದು. ಈ ಎಲ್ಲ ಗ್ರಂಥಗಳು ಮುಗಿದ ಮೇಲೆ ಕ್ರಿ. ಶ. ೧೭ರಲ್ಲಿ ಭಟ್ಟಾಕಲಂಕನೆಂಬ ಜೈನ ಪಂಡಿತನು ಪುನಃ ಸಂಸ್ಕೃತ ಭಾಷೆಯಲ್ಲಿ ಕನ್ನಡ ಭಾಷಾವಿಷಯಕವಾದ **'ಶಬ್ದಾನುಶಾಸನ'**ವೆಂಬ ವ್ಯಾಕರಣ–ಗ್ರಂಥವನ್ನು ಬರೆದನು. ಇವನ ಗ್ರಂಥವು ತುಂಬಾ ಪಾಂಡಿತ್ಯ-ಪೂರ್ಣವಾಗಿದ್ದರೂ ಕೂಡ, ಇದರ ನಿರ್ವಹಣದ ರೀತಿ ಹೆಚ್ಚಾಗಿ ಸಂಸ್ಕೃತ ಮಾರ್ಗದ್ದು. ಇವಲ್ಲದೆ ರನ್ನನ 'ಜಿನಮುನಿತನಯ' ಮೊದಲಾದ ವ್ಯಾಕರಣಗಳು ಇಂದು ಉಪಲಬ್ಧವಿಲ್ಲ.

ಹೀಗಾಗಿ, ಸಾಕಷ್ಟು ವಿವರಗಳನ್ನೊಂಡುದೂ ಮತ್ತು ಬಹುಮಟ್ಟಿನ ಕನ್ನಡ ದೃಷ್ಟಿಯನ್ನಿಟ್ಟುಕೊಂಡುದೂ ಆದ ಕೇಶಿರಾಜನ ಶಬ್ದಮಣಿದರ್ಪಣದಿಂದ ನಮ್ಮ ಭಾಷೆಯ ಶಾಸ್ತ್ರಕ್ಕೆ ಸಂಬಂಧಪಟ್ಟಷ್ಟು ಭಾಗವನ್ನು ಸದ್ಯ ನಾವು ಸಂಗ್ರಹಿಸಬಹುದು.

ಕೇಶಿರಾಜನು ತನ್ನ ಗ್ರಂಥವನ್ನು 'ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ ಮತ್ತು ಅವ್ಯಯ' ಎಂದು **ಎಂಟು** ವಿಧವಾಗಿ ವರ್ಗೀಕರಿಸಿದ್ದಾನೆ. ಇವುಗಳಲ್ಲಿ **ಭಾಷೆಯ ದೃಷ್ಟಿಯಿಂದ** ಮುಖ್ಯವಾದ ನಾಮಪದ, ಗುಣವಚನ, ಆಖ್ಯಾತ, ತದ್ಧಿತ ಮತ್ತು ಅಪಭ್ರಂಶಗಳನ್ನು ಮಾತ್ರ ನಾವು ಇಲ್ಲಿ ನೋಡಬಹುದು.

ನಾಮಪದ

ಕೇಶಿರಾಜನು ನಾಮಪದವನ್ನು ಮೊದಲಿಗೆ ಪ್ರತ್ಯೇಕವಾಗಿ ನಮೂದಿಸಿದ್ದರೂ, ಅದನ್ನು ಉಳಿದ ಹಲವು ಪದಗಳ ಜೊತೆಗೆ 'ಲಿಂಗ'ಗಳಲ್ಲಿ ಸೇರಿಸುತ್ತಾನೆ—

ಕ್ರಿಯೆಯಂ ನುಡಿಯದುದು
ವಿಭಕ್ತಿಯಂ ಇಲ್ಲದುದು
ಅರ್ಥಂ ಉಳ್ಳುದು—ಅಂತದು ಲಿಂಗಂ;
ಅದಾರಯೆ **ಕೃತ್ ತದ್ಧಿತ ಸಮಾಸ ನಾಮಸ್ಥಿತಿಯಿಂ—**

(ಸೂ. ೬೨, ಪು. ೬೨)

ಈ ಮೊದಲಿನ ಭಾಷಾಭೂಷಣಕಾರನು ಕೂಡ 'ಅರ್ಥವತ್ ಅಕ್ರಿಯಾವಾಚಿ ಕೃದಂತಂ ಚ ಲಿಂಗಮ್'— ಎಂದು ಹೇಳುವಲ್ಲಿ ಹೆಚ್ಚುಕಡಿಮೆ ಇದೇ ಮಾತನ್ನೇ ಹೇಳಿದ್ದನು. ಒಟ್ಟು, ಈ ವೈಯಾಕರಣಿಗಳ ಪ್ರಕಾರ 'ಕ್ರಿಯಾರ್ಥಮಂ ನುಡಿವ ಧಾತು (ಮಾತ್ರ) ಲಿಂಗವಲ್ಲ.' ಹೀಗಾಗಿ, ನಾಮಪದಗಳು ಇದರಲ್ಲೇ ಸಮಾವೇಶ ಹೊಂದಿದುವು.

ಈ ನಾಮಪದಗಳಲ್ಲಿ ರೂಢ, ಅಂಕಿತ, ಅನ್ವರ್ಥವೆಂದು ಮೂರು ವಿಧವಾಗಿವೆ. ರೂಢ ಇಲ್ಲವೆ ನಿಶ್ಚಿತ ನಾಮವು ಕನ್ನಡದಲ್ಲಿ 'ಒಂದಕ್ಕರಂ ಮೊದಲಾಗಿ ಐದಕ್ಕರಂಬರಮ್ ಉಂಟು'. ಉದಾ: ಪೂ, ಮರ, ಹೊತ್ತಗೆ, ಕವಳಿಗೆ, ಕಟ್ಟವತ್ತಿಗೆ ಇತ್ಯಾದಿ.

ಲಿಂಗಗಳು:—ಮೇಲೆ ವಿವರಿಸಿದ ಈ ನಾಮಪದಗಳನ್ನು ಅವುಗಳ ಅರ್ಥಕ್ಕೆ ಅನುಸಾರಿಯಾಗಿ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗವೆಂದು ಮೂರು ವಿಧವಾಗಿ ವಿಭಾಗ ಮಾಡುತ್ತಾರೆ. ಕೇಶಿರಾಜನೇನೋ 'ಲಿಂಗ'ವೆಂದರೇನೆಂಬುದನ್ನು ವಿವರಿಸುವಾಗ, ಕನ್ನಡದಲ್ಲಿ 'ಪು'–ಸ್ತ್ರೀ—ಸ್ತ್ರೀನಪ್; ತ್ರಿವಿಧಲಿಂಗ, ಅವ್ಯಯ ಲಿಂಗ'—ಎಂದು ಮೊದಲಾಗಿ ಕನ್ನಡದಲ್ಲಿ 'ಲಿಂಗಮ್ ಒಂಬತ್ತು ತೆರಂ' ಎಂದು ಹೇಳಿದನು. ಆದರೆ, ಈ ಒಂಬತ್ತು ಲಿಂಗಗಳ ವಿವರಣೆಯೆಲ್ಲ ಹೆಚ್ಚಾಗಿ ಕಾವ್ಯ ಇಲ್ಲವೆ ಭಾವನಾಪ್ರಪಂಚಕ್ಕೆ ಸೇರಿದ್ದೇ ಹೊರತು, ಶುದ್ಧ ಭಾಷಾಪ್ರಪಂಚಕ್ಕೆ ಸೇರಿದ್ದಲ್ಲ. ಬಹುಶಃ ಈ ವಿವರಣೆಯಲ್ಲಿ ಸಂಸ್ಕೃತ ಪ್ರಭಾವವಾಗಿದ್ದರೂ ಆಗಿರಬಹುದು. ಏನೇ ಆಗಲಿ; ಅನಂತರ ಸ್ವತಃ ಕೇಶಿರಾಜನೇ, ಈ ರೀತಿ ಕನ್ನಡದಲ್ಲಿ **ಒಂಬತ್ತು** ಲಿಂಗಗಳೆಂದು ಹೇಳಿದ್ದರೂ ಪ್ರಾಮುಖ್ಯವಾಗಿ **ಮೂರೇ** ಲಿಂಗಗಳು ಮಾತ್ರ ಇವೆಯೆಂದು ತಾನೇ ಹೇಳಬೇಕಾಯಿತು—ಅವನ ಪ್ರಕಾರ,

ಪುರುಷರೆ ಪುಲ್ಲಿಂಗಂ; ಸ್ತ್ರೀಯರೆ ತಾಂ ಸ್ತ್ರೀಲಿಂಗಂ
ಉಳಿದುವೆಲ್ಲಂ ನಪ್ಪಾಗಿರೆ ಸಲ್ಗುಂ
ಕನ್ನಡದೊಳ್ **ಪರಿವರ್ತಿಸವು ಉಱಿದ ಲಿಂಗಂ**
ಒಳವಾಗಿರ್ದುಂ ॥

ಈ ರೀತಿ ಅರ್ಥಾನುಸಾರಿಯಾಗಿ ಲಿಂಗವಿವಕ್ಷೆ ಮಾಡುವುದು ಎಲ್ಲ ದ್ರಾವಿಡ ಭಾಷೆಗಳ ವೈಶಿಷ್ಟ್ಯವಾಗಿದೆ. ಇದು ಸಂಸ್ಕೃತ ಮೊದಲಾದ ಆರ್ಯ ಭಾಷೆಗಳಲ್ಲಿ ಕಂಡುಬರುವುದಿಲ್ಲ. ಅಲ್ಲಿ ಒಂದೇ ಅರ್ಥವನ್ನು ಹೇಳುವ ಬೇರೆ ಬೇರೆ ಶಬ್ದಗಳು ಬೇರೆ ಬೇರೆ ಲಿಂಗಗಳಾಗಿರಬಹುದು. 'ಹೆಂಡತಿ' ಎಂದು ಹೇಳುವ 'ಗೃಹಿಣೀ' 'ಕಲತ್ರಂ' ಮೊದಲಾದ ಶಬ್ದಗಳು **ಮೂರೂ** ಲಿಂಗಗಳಲ್ಲಿರುವುದೇ ಇದಕ್ಕೆ ದೃಷ್ಟಾಂತ.

ಅದರಂತೆ, ಚೇತನಾಶಕ್ತಿಯಿಲ್ಲದ 'ನದೀ' 'ಶಾಲಾ' ಮೊದಲಾದ ಪದಗಳು ಸಂಸ್ಕೃತದಲ್ಲಿ ಸ್ತ್ರೀಲಿಂಗ; ಹೀಗಾಗಿ, ಸಂಸ್ಕೃತ ಭಾಷೆಯಲ್ಲಿ ಈ ಲಿಂಗವಿವಕ್ಷೆ ತುಂಬಾ ಗೊಂದಲದ್ದಾಗಿದೆ. ಈ ಭಾಷೆಯ ಅಭ್ಯಾಸವನ್ನು ಅದೇ ಪ್ರಾರಂಭಿಸಿದವರಿಗೆ ಯಾವ ಒಂದು ಶಬ್ದವೂ ಸ್ಪಷ್ಟವಾಗಿ ಇಂಥ ಲಿಂಗದ್ದೇ ಎಂದು ಹೇಳಲು ಸಾಧ್ಯವಿಲ್ಲ. ಕಂಠಪಾಠ ಮಾಡಿದ ಮೇಲೆಯೇ ಈ ಶಬ್ದಗಳ ವಿವರಗಳು ಗೊತ್ತಾಗಬೇಕು. ಸಂಸ್ಕೃತಜನ್ಯವಾದ ಮರಾಠಿಯಲ್ಲೂ ಕೂಡ ಲಿಂಗವಿವಕ್ಷೆಯು ಅಷ್ಟೇ ಕ್ಲಿಷ್ಟವಾಗಿದೆ. 'ಖಂಬ' ಶಬ್ದವು ನಿಂತಾಗ ಸ್ತ್ರೀಲಿಂಗವಾಗಿಯೂ, ಒರಗಿದಾಗ 'ಪುಲ್ಲಿಂಗ'ವಾಗಿಯೂ ಪರಿಣಮಿಸುತ್ತದೆ. ತತ್ಪರಿಣಾಮವಾಗಿ, ಮರಾಠಿ ಮಾತನಾಡುವವರು ಹೊಸದಾಗಿ ಭಾಷೆಯಲ್ಲಿ ಸೇರಿದ ಇಂಗ್ಲಿಷ್ ಪದಗಳಿಗೆ ಅನಿರ್ದಿಷ್ಟವಾದ ಲಿಂಗಸೂಚನೆಯನ್ನು ಹೇಳುತ್ತಿದ್ದುದು ಕಂಡುಬರುತ್ತದೆ.

ಆದರೆ, ಅದೇ ಕನ್ನಡ ಮೊದಲಾದ ದ್ರಾವಿಡ ಭಾಷೆಗಳಲ್ಲಿ ಈ ಲಿಂಗವಿವಕ್ಷೆಯ ತತ್ವವು ಸುಸ್ಪಷ್ಟವಿದೆ. ಈ ಎಲ್ಲ ಭಾಷೆಗಳಲ್ಲೂ ಈ ಲಿಂಗವಿವಕ್ಷೆಯ ಮೂಲತತ್ವವೆಂದರೆ–ಯಾವುದೇ ಒಂದು ವಿಷಯವು **ಸಜೀವವೇ? ನಿರ್ಜೀವವೇ?--ಎಂದು ಮೊದಲು ನೋಡುವುದು.** ಉದಾ:- ರಾಮ; ಆಕಳು; ಮನೆ ಇತ್ಯಾದಿ. ಇದರಲ್ಲಿ 'ಮನೆ' 'ನಿರ್ಜೀವ' ವಸ್ತುವು. ನಿರ್ಜೀವವಾದುದೆಲ್ಲ ನಪುಂಸಕವೇ. ಆದ್ದರಿಂದ ಮನೆ ನಪುಂಸಕ. ಇನ್ನು ಯಾವುದಾದರೂ ಒಂದು ವಿಷಯವು ಸಜೀವವಾಗಿದ್ದರೆ, ಅದಕ್ಕೆ **ಚೇತನಶಕ್ತಿ ಇದೆಯೋ ಇಲ್ಲವೋ** ನೋಡುವುದು. ಅಚೇತನವಾದುವೆಲ್ಲವೂ ಪುನಃ ನಪುಂಸಕವೇ. ಆದ್ದರಿಂದ, ಮೇಲಿನ ಉದಾಹರಣೆಯಲ್ಲಿಯ 'ಆಕಳು' ಶಬ್ದವು ಸ-ಜೀವವಾಗಿದ್ದರೂ ಕೂಡ, ಚೇತನಶಕ್ತಿ ಇಲ್ಲದ ಮೂಲಕ ನಪುಂಸಕವಾಯಿತು.

ಇಂಗ್ಲಿಷ್ ಭಾಷೆಯು ಆರ್ಯವರ್ಗಕ್ಕೆ ಸೇರಿದ್ದರೂ ಕೂಡ, ಇಂದು ಅಲ್ಲಿಯ ಲಿಂಗ-ವಿವಕ್ಷೆಯೂ ಕೂಡ ದ್ರಾವಿಡದಂತೆಯೇ ಇದೆ. ಗ್ರಾಮ್ಯಭಾಷೆಯಲ್ಲಿ ಅಲ್ಲೂ, 'ರೈಲುಗಾಡಿ' 'ಹಡಗು'- ಮೊದಲಾದವುಗಳನ್ನು 'She' ಎಂದು ಸ್ತ್ರೀಲಿಂಗವಾಚಿಯಾಗಿ ಸಂಬೋಧಿಸುತ್ತಿದ್ದರೂ, ಅವುಗಳ ಗ್ರಂಥಸ್ಥ ಪ್ರಯೋಗಗಳೆಲ್ಲ ನಪುಂಸಕವೇ.

ಈ ರೀತಿ, ಆರ್ಯ ವರ್ಗದ ಸಂಸ್ಕೃತಾದಿಗಳಲ್ಲಿಯ ಲಿಂಗ-ವಿವಕ್ಷೆಯ ಅಶಾಸ್ತ್ರೀಯತೆ ಮತ್ತು ಗೊಂದಲಗಳನ್ನು ತಪ್ಪಿಸಿ, ದ್ರಾವಿಡಾದಿ ಭಾಷೆಗಳು ಪ್ರತ್ಯೇಕವಾದ ಸ್ಪಷ್ಟ ಮತ್ತು ಶಾಸ್ತ್ರೀಯ ವಿವಕ್ಷಾಮಾರ್ಗವನ್ನು ಕಂಡುಹಿಡಿದುದು ಈ ಭಾಷೆಗಳ ವೈಶಿಷ್ಟ್ಯ; ಮತ್ತು ಗೌರವ. ಈ ರೀತಿಯು ಬೆಳವಣಿಗೆಯು ಭಾಷಾಕ್ರಮದಲ್ಲಿ ನಿಜವಾಗಿಯೂ ಒಂದು ಆದರ್ಶವಾದ ಪ್ರಗತಿ. ಈ ರೀತಿಯ **ಸು-ಸ್ಪಷ್ಟವಾದ ಲಿಂಗ-ವಿವಕ್ಷೆಯ** ಬಗ್ಗೆ ಸುಪ್ರಸಿದ್ಧ ಆಂಗ್ಲ ಭಾಷಾಶಾಸ್ತ್ರಜ್ಞರಾದ ಎಲ್. ಪಿ. ಸ್ಮಿಥ್ ಅವರು ತಮ್ಮ 'ಆಂಗ್ಲಭಾಷೆ'—ಎಂಬ ಪುಸ್ತಕದಲ್ಲಿ ವ್ಯಕ್ತಮಾಡಿದ ಅಭಿಪ್ರಾಯಗಳು ತುಂಬಾ ಮನನೀಯವಾಗಿವೆ. ಸ್ಮಿಥ್ ಅವರು ಭಾಷೆಯಲ್ಲಿಯ ಸರಳವಾದ ಈ ಲಿಂಗವಿವಕ್ಷೆಯ ಬಗ್ಗೆ ಈ ರೀತಿ ಬರೆಯುತ್ತಾರೆ:—

> "*Simplicity in Language*, is, in fact, like other kinds a product of high civilization not a primitive condition; and the advance of analysis, the creation of words expressing abstract relations is *one of the most remarkable triumphs of the human intellect*......... In the first place, we must note *the loss in* English *of grammatical gender*. The absence of this in English is more extra-ordinary than we always realise. For, this *irrational distinction, which corresponds to no distinction in thought and capriciously attributes sex to sexless objects* (ಸಂಸ್ಕೃತ]

ನದಿ, ಶಾಲಾ, ಮಾಲಾ ನೋಡುವುದು) and of the *wrong* gender to living beings, (**ಸಂ. ಕಲತ್ರಂ ನೋಡುವುದು**) is yet found as a *survival of barbarism and as a useless burden to the memory, in all the other well-known languages of Europe* " *

ಕನ್ನಡಾದಿ ದ್ರಾವಿಡ ಭಾಷೆಗಳಲ್ಲಿ ಮಾತ್ರ ಈ ರೀತಿ ಅಪದ್ಧವಾದ ಲಿಂಗ-ವಿವಕ್ಷೆಯಿರದೆ, ಸು-ಸ್ಪಷ್ಟವೂ ಶಾಸ್ತ್ರೀಯವೂ ಆದ ವಿವಕ್ಷೆಯಿದೆ.

ವಚನಗಳು:—ಸಂಸ್ಕೃತಾದಿ ಆರ್ಯ ಭಾಷೆಗಳಲ್ಲಿ ಏಕ ಮತ್ತು ಬಹುವಚನ ಮಾತ್ರವಲ್ಲದೆ ದ್ವಿ-ವಚನವೆಂಬ ಬೇರೊಂದು ಮೂರನೆಯ ವಚನವಿರುವುದಾಗಿ ವೈಯಾಕರಣಿಗಳು ಹೇಳುತ್ತಾರೆ. ಹೀಗಾಗಿ' 'ರಾಮಃ' 'ರಾಮಾಃ' ಏಕ ಮತ್ತು ಬಹುವಚನ ರೂಪಗಳಾದರೆ, 'ರಾಮೌ'-ಎಂಬುದು ದ್ವಿ-ವಚನ.

ಕೆಲಮಟ್ಟಿನ ಸಂಸ್ಕೃತದ ಪ್ರಭಾವಕ್ಕೊಳಗಾದ ಕನ್ನಡದ ಕೇಶಿರಾಜನು ಕೂಡ ಕ್ಲೇಶದಿಂದಾದರೂ ಕನ್ನಡದಲ್ಲಿ ದ್ವಿ-ವಚನವನ್ನು ಕಂಡುಹಿಡಿಯಲು ಯತ್ನಿಸಿದನು. ಯಾಕಂದರೆ, ಅವನ "ಶಕ್ಯಾನುಷ್ಠಾನ"ದಲ್ಲಿ ಎಷ್ಟೋ ಜೊತೆಜೊತೆಯಾಗಿರುವ ದ್ವಿ-ವಚನದ ಪದಗಳಿರಲಿಲ್ಲವೇ? ಉದಾಹರಣೆಗೆ 'ರಾಮ' ಎಂದರೆ 'ಲಕ್ಷ್ಮಣ' ಇಲ್ಲವೆ 'ಸೀತೆ' ಇರಲೇಬೇಕು. ಹಾಗೆಯೇ, 'ನಕುಲಸಹದೇವರ್' 'ಭೀಮಾರ್ಜುನರ್' 'ಪದಯುಗಂಗಳ್' ಇವೂ ದ್ವಿ-ವಚನವಲ್ಲವೇ?— ಅಂತಲೇ, ಕೇಶಿರಾಜನು ಕನ್ನಡದಲ್ಲಿ ಕೂಡ, "ಏಕ, **ದ್ವಿತ್ವ,** ಬಹುತ್ವಮಂ, ಏಕ, ದ್ವಿ, ಬಹುತ್ವವಸ್ತುಗಳೊಳ್ ಆಚರಿಪರ್" (ಶ. ಮ. ದ. ಸೂ. ೯೪) ಎಂದು ಹೇಳಬೇಕಾಯಿತು. ಆದರೂ, ಕನ್ನಡದ ಜಾಯಮಾನದ ಹೊಲಬನ್ನೂ ಅರಿತ ಕೇಶಿರಾಜನಿಗೆ, **ಅದೇ ಸೂತ್ರದ** ಉತ್ತರಾರ್ಧದಲ್ಲೇ "ಸ್ವೀಕಾರ್ಯಂ ಕನ್ನಡದೊಳಗೇಕ ಬಹುತ್ವಮ್; **ದ್ವಿವಚನಮ್ ಉಚಿತದೆ ಬರ್ಕುಂ"**-ಎಂದು ಹೇಳಬೇಕಾಯಿತು. ಕನ್ನಡ ಆಧುನಿಕ ಭಾಷಾಶಾಸ್ತ್ರಜ್ಞರೂ ಕೂಡ ಕನ್ನಡದಲ್ಲಿ ದ್ವಿ-ವಚನವಿಲ್ಲವೇ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾರೆ.

ಕನ್ನಡದಲ್ಲಿ ದ್ವಿವಚನವಿದೆಯೇ? :—ಹಾಗಾದರೆ, ನಿಜವಾಗಿಯೂ ಕನ್ನಡದಲ್ಲಿ ದ್ವಿ-ವಚನ ವಿದೆಯೇ? ಕೇಶಿರಾಜನು ತನ್ನ ಈ ಸೂತ್ರದಲ್ಲಿ **"ಔಚಿತ್ಯದ ದ್ವಿ-ವಚನ"**-ಎಂದು ಹೇಳುವಲ್ಲಿ ಅರ್ಥವಾದರೂ ಏನು? ವಿಚಾರ ಮಾಡಬೇಕು.

ಈ ದ್ವಿ-ವಚನದ ವಿಷಯವಾಗಿ, ಕೇಶಿರಾಜನಂತೂ ಇರಲಿ; ಕೇಶಿರಾಜನ ಈ ಅಭಿಪ್ರಾಯವನ್ನೇ ಹೆಚ್ಚುಕಡಿಮೆ ಇನ್ನೂ ಒಬ್ಬಿಬ್ಬ ಭಾರತೀಯ ಭಾಷಾಶಾಸ್ತ್ರಜ್ಞರೂ ವ್ಯಕ್ತಪಡಿಸುತ್ತಿದ್ದಾರೆ. ಉದಾಹರಣೆಗೆ-ಸುಪ್ರಸಿದ್ಧ ಬಂಗಾಲಿ ಭಾಷಾಶಾಸ್ತ್ರಜ್ಞರಾದ ಶ್ರೀ. ಬಿ. ಸಿ. ಮುಜುಮುದಾರ ಅವರ ಪ್ರಕಾರ, ಹಲವು ಆರ್ಯ ಭಾಷೆಗಳ ಪಂಗಡಗಳಲ್ಲಿ ಈ ದ್ವಿ-ವಚನವು ಒಂದು ಆವಶ್ಯಕ ಘಟಕವಾಗಿದ್ದಿತು. ಹಲವು ಭಾಷೆಗಳಲ್ಲಂತೂ ಇದು ಅನೇಕತ್ವವನ್ನು ಸೂಚಿಸುವ ಪ್ರಥಮ ಹೆಜ್ಜೆಯಾಗಿದ್ದಿತು.

ಹಾಗಾದರೆ, ಇದರಲ್ಲಿ ನಿಜಾಂಶವಾವುದೆಂಬುದನ್ನು ವಿಚಾರಿಸಿದರೆ, ಸಂಸ್ಕೃತದಲ್ಲಿಯಂತೆ **ಕನ್ನಡದಲ್ಲಿ ದ್ವಿ-ವಚನವಿರುವುದು ಕನ್ನಡದ ವೈಶಿಷ್ಟ್ಯವೆಂದು ಹೇಳುವ ಅಭಿಪ್ರಾಯವೇ ಅಷ್ಟು ಸರಿಯಾದ ದ್ದಲ್ಲ.** ಯಾಕಂದರೆ, ಸಂಸ್ಕೃತದ ದ್ವಿವಚನವನ್ನು ನಾವು ತೀರ ಪ್ರಾಚೀನ ಕಾಲದಿಂದ ಅಂದರೆ ವೇದಪೂರ್ವ

* E L—P. 6

ಕಾಲದಿಂದ ಕೂಡ—ಕಾಣುತ್ತೇವೆ. ಅಷ್ಟೇ ಅಲ್ಲದೆ, ಈ ದ್ವಿವಚನವು ಬಹುವಚನದ ಮೊದಲನೆಯ ಹೆಜ್ಜೆಯಾಗಿ ಈ ಭಾಷೆಗಳಲ್ಲೆಲ್ಲ ಕಂಡುಬರುತ್ತದೆ. ಉದಾಹರಣೆಗೆ ಈ ಬಗ್ಗೆ, ಶ್ರೀ. ಬಿ. ಸಿ. ಮುಜುಮದಾರ ಅವರು ಹೇಳಿದ ಮಾತುಗಳು ಮನನೀಯವಾಗಿವೆ. ಅವರ ಪ್ರಕಾರ—

"A dual, in addition to the plural was no doubt a commonly accepted form in the Pre-Vedic days, for the classical Aryan Languages of Europe disclose some almost effete dual forms *To express two together as a pair, is a familiar mode of thought exhibited by all peoples all over the world.*"*

ಆದರೆ, ಕನ್ನಡದಲ್ಲಿ ಮಾತ್ರ (೧) ಇಂಥ ದ್ವಂದ್ವಸೂಚನೆಯು ತೀರ ವಿರಲವಾಗಿರುವದರಿಂದಲೂ ಮತ್ತು (೨) ಇವಕ್ಕೆ ಸಂಸ್ಕೃತದಲ್ಲಿಯಂತೆ ಪ್ರತ್ಯೇಕವಾದ **ವಿಭಕ್ತಿಪ್ರತ್ಯಯಗಳು** ಇಲ್ಲದ್ದರಿಂದಲೂ, ನಮ್ಮ ಭಾಷೆಯಲ್ಲಿ ವಿಷಯಗಳ ದ್ವಂದ್ವಸೂಚನೆಯಿದೆಯೇ ಹೊರತು ದ್ವಿವಚನವಿಲ್ಲವೆಂದು ಹೇಳಬೇಕು.

ಕನ್ನಡ ವಿಭಕ್ತಿಗಳು :—ವಿಭಕ್ತಿಪ್ರತ್ಯಯಗಳ ದೃಷ್ಟಿಯಿಂದ ಕನ್ನಡವು ಸಂಸ್ಕೃತಾದಿ ಆರ್ಯ ಭಾಷೆಗಳಿಂದ ಈ ಕೆಳಗಿನ **ಮೂರು** ವಿಧದಲ್ಲಿ ಭಿನ್ನವಾಗಿದೆ.

೧. **ಸಂಸ್ಕೃತದಲ್ಲಿ ಏಕ ಮತ್ತು ಅನೇಕ ವಚನಗಳಲ್ಲಿ ಬೇರೆ ಬೇರೆ ವಿಭಕ್ತಿಪ್ರತ್ಯಯಗಳಿದ್ದು ಕನ್ನಡದಲ್ಲಿ ಮಾತ್ರ ಎರಡೂ ವಚನಗಳಲ್ಲಿ ಒಂದೇ ವಿಧವಾದ ವಿಭಕ್ತಿಪ್ರತ್ಯಯಗಳು ಸೇರಿಕೊಳ್ಳುತ್ತವೆ.** (ಉದಾ—ಸಂಸ್ಕೃತ–ರಾಮಃ, ರಾಮೌ, ರಾಮಾಃ; ಕನ್ನಡ–ರಾಮ**ನಂ**, ರಾಮ**ರಂ** ಇತ್ಯಾದಿ.)

೨. ಸಂಸ್ಕೃತದಲ್ಲಿಯಂತೆ, ಕನ್ನಡದಲ್ಲಿ ನಿಜವಾಗಿ ಪ್ರಥಮಾವಿಭಕ್ತಿಗೆ ಬೇರೆ ಪ್ರತ್ಯಯವಿಲ್ಲ. ಪ್ರಕೃತಿಯೇ ಪ್ರಥಮಾ ಅರ್ಥವನ್ನು ಸೂಚಿಸುತ್ತದೆ.

ಕನ್ನಡ ಪ್ರಾಚೀನ ವೈಯಾಕರಣಿಗಳೆಲ್ಲ ಕನ್ನಡದಲ್ಲಿ '**ಮುಮಿಂಕೆ ಅದದೊಳೆ**' ಎಂದು ಸಪ್ತವಿಭಕ್ತಿಗಳಿವೆಯೆಂದು ಹೇಳುತ್ತಾರೆ. ಸಂಬೋಧನಾವಿಭಕ್ತಿಯನ್ನು ಪ್ರಕೃತಿರೂಪದಿಂದಲೇ ಆಗಲಿ;—ಎಲ್ಲಿಯುಮ್ ಆಮಂತ್ರಣದೊಳ್ ಪ್ರಥಮೈಕ ವಚನಮಂ ಲೋಪಿಸುವರ್; ನಿಲ್ಲದೆ ವಿಕಲ್ಪಮುಖದಿಂ ಸೊಲ್ಲಿಸುವರ್ ಹ್ರಸ್ವ ದೀರ್ಘ ಕಾಕುಗಳೆರಡಂ—ಇಲ್ಲವೆ, ದೀರ್ಘಾದೇಶದಿಂದಾಗಲೀ ಸೂಚಿಸುತ್ತಾರೆ. ನಯಸೇನನ ಪ್ರಕಾರವೂ ಕೂಡ ದೀರ್ಘೋಕ್ತಿಯೇ—'ದೀರ್ಘೋಕ್ತಿರ್ನಯಸೇನಸ್ಯ'.

ಆದರೆ, ಮೇಲೆ ವಿವರಿಸಿದ ಈ ಸಪ್ತವಿಭಕ್ತಿಗಳಲ್ಲಾದರೂ, ನಿಜವಾಗಿ ಕನ್ನಡದಲ್ಲಿ ಇರುವವಾದರೂ ಎಷ್ಟು ?....

ಆಧುನಿಕ ಅಭಿಪ್ರಾಯದ ಪ್ರಕಾರ ಈ ಮೇಲಿನ ಏಳು ವಿಭಕ್ತಿಗಳಲ್ಲಿ ಕನ್ನಡದಲ್ಲಿ ಇರುವವು **ಐದೇ.**

ಯಾಕಂದರೆ, ಕನ್ನಡದಲ್ಲಿ ತೃತೀಯಾ ಮತ್ತು ಪಂಚಮಿ ರೂಪಗಳು **ಗಿಡದಿಂದ, ಗಿಡದಿಂದ**—ಎಂದು ಒಂದೇ ವಿಧವಾಗಿವೆ. ಪ್ರಾಚೀನ ವೈಯಾಕರಣಿಗಳು ಕೂಡ ತೃತೀಯೆಯ ರೂಪಗಳೇ ಪಂಚಮಿಯಲ್ಲಿ

* H. B. L —P. 199-200.

ಕೂಡ ಹತ್ತುತ್ತವೆಂದು ಹೇಳುತ್ತಾರೆ. ಹೀಗಾಗಿ, ಕನ್ನಡದಲ್ಲಿ ಪಂಚಮಿವಿಭಕ್ತಿಯ ನಿರ್ದೇಶಕ್ಕಾಗಿ ಪ್ರತ್ಯೇಕವಾದ ವಿಭಕ್ತಿಪ್ರತ್ಯಯವಿಲ್ಲದ್ದರ ಮೂಲಕ ಕನ್ನಡದಲ್ಲಿ ಆರೇ ವಿಭಕ್ತಿಪ್ರತ್ಯಯಗಳು ಉಳಿದವು.

ಈ ಆರರಲ್ಲಿ ಕೂಡ ಪ್ರಥಮಾವಿಭಕ್ತಿಯನ್ನು ನಾವು ಬಿಡಬಹುದು.* ಯಾಕಂದರೆ, ಪ್ರಾಚೀನ ವೈಯಾಕರಣಿಗಳು 'ಮ' ಎಂಬುದು ಪ್ರಥಮಾವಿಭಕ್ತಿಪ್ರತ್ಯಯವೆಂದು ಹೇಳಿದರೂ, **ನಿಜವಾಗಿ ಕನ್ನಡದಲ್ಲಿ ಪ್ರಥಮಾವಿಭಕ್ತಿಪ್ರತ್ಯಯವೇ ಇಲ್ಲ; ಪ್ರಕೃತಿರೂಪವೇ ಪ್ರಥಮಾವಿಭಕ್ತಿಯನ್ನು ಸೂಚಿಸುತ್ತದೆ.**

ಕನ್ನಡದಲ್ಲಿ ಪ್ರಥಮಾವಿಭಕ್ತಿಪ್ರತ್ಯಯವಿಲ್ಲ:—ಕೆಳಗಿನ ಈ ಕಾರಣಗಳ ಮೂಲಕ ಕನ್ನಡದಲ್ಲಿ ಪ್ರಥಮಾವಿಭಕ್ತಿಪ್ರತ್ಯಯವಿಲ್ಲವೆಂದೇ ಹೇಳಬೇಕು:—

೧. ಇದೇ ದ್ರಾವಿಡವರ್ಗಕ್ಕೆ ಸೇರಿ, ಹೆಚ್ಚು ಪ್ರಾಚೀನವೆಂದೆನಿಸಿಕೊಂಡ, ತಮಿಳಾದಿಗಳಲ್ಲಿ ಅದು ಇಲ್ಲ.

೨. ಕನ್ನಡ ವೈಯಾಕರಣಿಗಳು **'ಮ'**–ಎಂಬುದು ಈ ಪ್ರತ್ಯಯವೆಂದು ಹೇಳಿದರಲ್ಲವೇ?........ ಆದರೆ, ನಿಜವಾಗಿ ಈ **'ಮ'** ಎಂಬುದು ಪ್ರಥಮಾಪ್ರತ್ಯಯವಲ್ಲವೆಂಬುದು ಯಾರಿಗಾದರೂ ತಟ್ಟನೆ ತಿಳಿಯುವಂತಿದೆ.

ಯಾಕಂದರೆ,

(ಅ) ಈ **'ಮ'** ಪ್ರತ್ಯಯವಾದರೂ ಹತ್ತುವ ನಾಮಪದಗಳಾವು? "ಮರಮ್" "ರಾಮಮ್" ಇತ್ಯಾದಿ. ಆದರೆ, 'ಹರಿ' 'ಗೋ'–ಮೊದಲಾದ ಪದಗಳ ಅವಸ್ಥೆ ಯೇನು? ಇಲ್ಲಿ 'ಮ' ಹತ್ತುವದಿಲ್ಲವಲ್ಲ?—ಅಷ್ಟೇ ಅಲ್ಲ; ರಾಮ ಪದದ ಇಂದಿನ ರೂಪವು ಕೂಡ 'ರಾಮ**ನು**' ಎಂದೇ ಆಗುತ್ತದೆಯೇ ಹೊರತು 'ರಾಮಮ್' ಎಂದಿಲ್ಲ. ಕೇಶಿರಾಜನು ಕೂಡ ಈ ಬಗ್ಗೆ, "ಬಿಂದು **ಅದಂತಕ್ಕೆ; ಉಳಿದೆಡೆಗೆಂದುಂ ಪ್ರಥಮೈಕವಚನದೊಳ್** ಲೋಪಮ್"—ಎಂದೇ ಹೇಳಿದನು (ಸೂ. ೧೦೫, ಪು. ೬೨). ಅಂದ ಮೇಲೆ, ಈ 'ಮ' ಪ್ರತ್ಯಯವು ಕೇವಲ ನಪುಂಸಕವಾಚಕ ಮತ್ತು **ಹಲವು** ಪುಲ್ಲಿಂಗಗಳಿಗೆ ಮಾತ್ರ ಹತ್ತುತ್ತದೆಂದು ಹೇಳಿದಹಾಗಾಯಿತು. ಹೀಗಿದ್ದರೆ, 'ಮ' ಪ್ರತ್ಯಯವಾದೀತೇ?

(ಬ) ಅದೂ ಹೋಗಲಿ; ಹಳಗನ್ನಡ ರೂಪಗಳೆಲ್ಲ ಹೊಸಗನ್ನಡಕ್ಕೆ ತಿರುಗುವಾಗ ಸ್ವರಾಂತ ವಾಗುತ್ತವೆಂಬುದು ಗೊತ್ತಿದ್ದ ಮಾತಷ್ಟೇ? ಪಾಲ್ 7 ಪಾಲು; ಅಗಟ್ 7 ಅಗಟು ಇತ್ಯಾದಿ. ಹಾಗಾದರೆ, ರಾಮಮ್ ಪದವು ಸ್ವರಾಂತವಾಗಬೇಕಾದರೆ, ರಾಮ**ಮು** ಆಗದೆ, ರಾಮ**ನು** ಎಂದೇಕಾಯಿತು? — ಅಂದಮೇಲೆ ಪ್ರಥಮಾವಿಭಕ್ತಿಪ್ರತ್ಯಯವು 'ಮ' ಎಂಬುದು ಸಾಧ್ಯವೇ? **"ನ"—ಏಕಾಗಿರಬಾರದು?**

(ಕ) ಅದೂ ಹೋಗಲಿ; ಪ್ರಾಚೀನ ಶಿಲಾಶಾಸನಗಳಲ್ಲೂ ಕೂಡ, ಪ್ರಥಮಾರೂಪಗಳಲ್ಲಿ 'ಮ'ಕಾರವು ಕಾಣಿಸದೆ, 'ನ'ಕಾರವಿದ್ದದ್ದನ್ನೇ ಕಾಣುತ್ತೇವೆ.

---

* ಈ ವಿಚಾರವನ್ನು ಸುಂದರವಾಗಿ ಪ್ರತಿಪಾದಿಸಿದವರು ಕನ್ನಡ ಕೈಪಿಡಿಯವರು

ಉದಾ: "ಕಲಿಯುಗ ವಿಪರೀತನ್ **ಈತನ್** ಪೆರನಲ್ಲ"
"ನಂದಿಸೇನ ಮುನಿವರನ್ ದೇವಲೋಕಕ್ಕೆ ಸಂದಾನ್" ಇತ್ಯಾದಿ ಇತ್ಯಾದಿ.

ಅಂದಮೇಲೆ ಇಲ್ಲಿ 'ಮು' ವಿಭಕ್ತಿಪ್ರತ್ಯಯವಾಯಿತೇ ?– 'ನ' ಏಕಾಗಿರಬಾರದು ?— ವೈಯಾಕರಣಿಗಳ 'ಮವಿಂಕೆ ಅದದೊಳ್' — ಎಲ್ಲಿದೆ ?

ಹೀಗೆ, ನಿಜವಾಗಿ ವಿಚಾರಮಾಡಿ ನೋಡಿದರೆ, ಪ್ರಥಮಾಪ್ರತ್ಯಯವನ್ನೇ ಹೇಳಬೇಕಾದರೆ, 'ಮ'ಕಾರದಕಿಂತ 'ನ'ಕಾರವೇ ಹೆಚ್ಚು ಸಮಂಜಸವೆಂದು ಕಾಣುತ್ತದೆ.

ಆದರೆ, ನಿಜವಾಗಿ **ಈ ನಕಾರವೂ ಕೂಡ ಪ್ರಥಮಾಪ್ರತ್ಯಯವಲ್ಲ.**

ಯಾಕಂದರೆ, ಕನ್ನಡ ವೈಯಾಕರಣಿಗಳು ಈ ಪ್ರತ್ಯಯಗಳ ಸೇರುವಿಕೆಯ ಬಗ್ಗೆ ಹೇಳುವಾಗ, ಉಳಿದ ವಿಭಕ್ತಿಪ್ರತ್ಯಯಗಳೆಲ್ಲ ಪ್ರಥಮಾರೂಪದ ಮೇಲೆಯೇ ಸೇರಿಕೊಳ್ಳುವವೆಂದು ಹೇಳಿಯೂ,

ದ್ವಿತೀಯೆಯಲ್ಲಿ, "ನತ್ವ ಮತ್ವ ವಿಧಿಸಂಗತಿವಡೆಗುಂ" ಎಂದೂ,
ತೃತೀಯಾದಿಗಳಲ್ಲಿ, "ತೃತೀಯೆ ಮೊದಲಾದುವರ್ಕೆ 'ದ' ಆಗಮಮುಕ್ಕುಂ"

(ಸೂ. ೧೦೬, ಪು. ೯೨)

ಎಂದೂ ಹೇಳುತ್ತಾರೆ. ಅಂದರೆ, ಪ್ರಥಮಾವಿಭಕ್ತಿರೂಪದ **ಮೇಲೆಯೇ** ಉಳಿದ ವಿಭಕ್ತಿಪ್ರತ್ಯಯಗಳೆಲ್ಲ ಹತ್ತುತ್ತವೆಂದು ಒಂದು ಬಾಯಿಂದ ಹೇಳಿದವರೇ, ಪುನಃ ಈ ರೀತಿ ಹಿಂದೆಗೆಯುವದರಲ್ಲಿ ಕಾರಣವೇನು ?

ಆದ್ದರಿಂದ, ಕನ್ನಡದಲ್ಲಿ ಪ್ರಥಮಾವಿಭಕ್ತಿಪ್ರತ್ಯಯವೇ ಇಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಪ್ರಕೃತಿಯೇ ಪ್ರಥಮಾರೂಪವನ್ನು ನಿರ್ದೇಶಿಸುತ್ತದೆ. ಹೀಗಾಗಿ, ಕನ್ನಡದಲ್ಲಿ ಐದು ವಿಭಕ್ತಿಪ್ರತ್ಯಯಗಳು ಮಾತ್ರ.

೩. ಮೂರನೆಯದಾಗಿ, ಕನ್ನಡದ ಈ ಪ್ರತ್ಯಯಗಳ ಇನ್ನೊಂದು ವೈಶಿಷ್ಟ್ಯವೆಂದರೆ,— ಸಂಸ್ಕೃತಾದಿ ಪ್ರಾತ್ಯಯಿಕ ಭಾಷೆಗಳಲ್ಲಿ ಈ ವಿಭಕ್ತಿಪ್ರತ್ಯಯಗಳ ಮೂಲಸ್ವರೂಪವನ್ನು ಇಂದು ಗುರುತಿಸಲು ಕೂಡ ಸಾಧ್ಯವಿಲ್ಲ. (ಉದಾ: ರಾಮೇನ; ರಾಮೈಃ ಇ.) ಇವುಗಳ ಅರ್ಥವೇ ಇಂದು ಆಗುತ್ತಿಲ್ಲ.

ಆದರೆ, ಅದೇ ಸಮುಚ್ಚಾಯಕ ವರ್ಗಕ್ಕೆ ಸೇರಿದ ಕನ್ನಡಾದಿ ಭಾಷೆಗಳಲ್ಲಿ ಈ ಪ್ರತ್ಯಯಗಳ ಮೂಲಸ್ವರೂಪವನ್ನು ಇಂದಿಗೂ ಕೂಡ ನಾವು ಸ್ಪಷ್ಟವಾಗಿ ಗುರುತಿಸುವಂತಿದೆ. ಕನ್ನಡದ ವಿಭಕ್ತಿಪ್ರತ್ಯಯಗಳೆಲ್ಲ ಒಂದು ಕಾಲಕ್ಕೆ ತಾವೂ ಸ್ವತಂತ್ರ ಪದಗಳೇ ಆಗಿದ್ದವು. ಇಂದಿಗೂ ಅವುಗಳಲ್ಲಿ ಹಲವನ್ನು ಸ್ವತಂತ್ರ ಪದಗಳಾಗಿಯೇ ಉಪಯೋಗಿಸುತ್ತಿದ್ದುದನ್ನು ನಾವು ಕಾಣುತ್ತೇವೆ.

ಉದಾ: ಸಪ್ತಮಿ 'ಅಲ್ಲಿ' "ರಾಮನು **ಮನೆಯಲ್ಲಿದ್ದನು**" "**ಅಲ್ಲಿ** ಯಾರೂ ಇಲ್ಲ" ಇತ್ಯಾದಿ.

ಇದರಂತೆ, ಹಳಗನ್ನಡದ 'ಅತ್ತಣಿಂದ' ಇತ್ಯಾದಿಗಳನ್ನೂ ನೋಡಬಹುದು. ಚತುರ್ಥಿಯ 'ಕೆ' ಎಂಬುದು 'ಕೈ' ಇದರ ಸವಕಳಿರೂಪವೆಂದು ಪಂಡಿತರು ಹೇಳುತ್ತಾರೆ. ಬಹುಶಃ ಈ ವಾಕ್ಯಗಳ ಮೂಲಸ್ವರೂಪವು ಹೀಗಿರಬೇಕು.

"ಕೃಷ್ಣಂ ರಾಮಂ ಕೈ ಕೊಟ್ಟಂ"—ಇದೇ ಸಂಧಿಯಾಗಿ 'ರಾಮಂಕೈ' ಎಂದೂ, 'ರಾಮಂಕೆ' 'ರಾಮಂಗೆ' ಎಂದೂ ಆಗಿರಬೇಕು. **ಈ ಕನ್ನಡದ ಚತುರ್ಥಿಪ್ರತ್ಯಯವು ಉಳಿದ ಅನೇಕ ಭಾಷೆಗಳ ಮೇಲೆ ಮಾಡಿರಬಹುದಾದ ಪರಿಣಾಮವನ್ನು ನಾವು ಈಗಾಗಲೇ ಅನ್ಯತ್ರ ವಿವರಿಸಿದ್ದೇವೆ.**

ಇದರಂತೆಯೇ, ಷಷ್ಠಿಯ 'ಅ'ಕಾರವೂ ಕೂಡ, 'ಅದು' ಎಂಬುದರ ಸವಕಳಿರೂಪವೆಂದು ಅಭಿಪ್ರಾಯ.

ಆದ್ದರಿಂದ, ದ್ರಾವಿಡ ವರ್ಗಕ್ಕೆ ಸೇರಿದ ಕನ್ನಡವು ನಾಮಪದಗಳ ದೃಷ್ಟಿಯಿಂದ ಈ ಮೇಲಿನ ವಿಧಗಳಲ್ಲಿ ಸಂಸ್ಕೃತದಿಂದ ಭಿನ್ನವಾಗಿದೆಯೆಂಬುದನ್ನು ನಾವು ಕಾಣಬೇಕು.

ಗುಣವಚನಗಳು

‘ಮೆಲ್ಲಿತು’ ‘ಬೆಟ್ಟಿತು’ ‘ಇನಿದು’—ಎಂದು ಮೊದಲಾಗಿ ‘ತು, ದು ಕಡೆಯೆನೆ’ ಪದಗಳು ‘ಗುಣವಾಚಿ; ಮೇಣ್ ತುಕಾರಂ ದ್ವಿತ್ವಂ’—ಎಂದು ವೈಯಾಕರಣಿಗಳು ಹೇಳುತ್ತಾರೆ. ಆದರೆ, ಇಂದಿನ ಕನ್ನಡದಲ್ಲಿ ಕೇಶಿರಾಜನು ಹೇಳಿದ ಈ ಎಷ್ಟೋ ಗುಣವಚನಗಳು ಮಾಯವಾಗಿ ಇವುಗಳ ಬದಲಾಗಿ ಸಂಸ್ಕೃತ ಗುಣವಚನಗಳು ಬಂದು ಸೇರಿವೆ.

ಸಂಸ್ಕೃತದ ಗುಣವಚನಗಳಿಗೂ ಕನ್ನಡ ಗುಣವಚನಗಳಿಗೂ ಇರುವ **ಎರಡು** ಮುಖ್ಯವಾದ ಭಿನ್ನಾಂಶಗಳನ್ನು ನಾವಿಲ್ಲಿ ಗಮನಿಸಬಹುದು.

ಒಂದು:—ಸಂಸ್ಕೃತ ಗುಣವಚನಗಳೆಲ್ಲ ತಾವು ವರ್ಣಿಸುವ ನಾಮಪದದ ಲಿಂಗ, ವಚನ ಮತ್ತು ವಿಭಕ್ತಿಗಳನ್ನು ಪಡೆಯುವಂತೆ, ಕನ್ನಡ ಗುಣವಚನಗಳು ಆ ರೀತಿ ರೂಪಗಳನ್ನು ಪಡೆಯುವ ಆವಶ್ಯಕತೆಯಿಲ್ಲ. ಬಹಳವಾದರೆ, ಕನ್ನಡ ಗುಣವಚನಗಳಲ್ಲಿ ಲಿಂಗ-ನಿರ್ದೇಶ ಮಾಡಿದರಾಯಿತು. ಅದೂ ಕೂಡ ಎಷ್ಟೋ ಸಲ ಅಧ್ಯಾಹೃತವಾಗಿರುತ್ತದೆ.

ಉದಾಹರಣೆಗೆ—ಸಂಸ್ಕೃತದಲ್ಲಿ ಭಾಗೀರಥೀ ಎಂಬ ಸ್ತ್ರೀಲಿಂಗವನ್ನು ವರ್ಣಿಸುವಾಗ ಆ ರೀತಿ ಗುಣವಚನಗಳಾದರೂ ಕೂಡ, ‘ಭಾಗೀರಥೀ’ ಪದದ ಲಿಂಗ-ವಚನ-ವಿಭಕ್ತಿಗಳನ್ನೇ ಪಡೆಯುತ್ತವೆ. ಉದಾ: ಅಹೋ **ಪಾವನೀ ಭಗವತೀ ಭಾಗೀರಥೀ;** ಅದರಂತೆಯೇ, ದೇವೀಃ **ಆಪಃ ಶುದ್ಧಾಃ** ಸ್ಥ; ದೇವ, ಆಜ್ಯ **ಶುದ್ಧಮ್** ಅಸಿ. ಅದೇ ಕನ್ನಡದಲ್ಲಿಯೋ—?

“ಪಾವನವಾದ ಭಾಗೀರಥಿಯು ಪ್ರವಹಿಸುತ್ತಾಳೆ; **ಪಾವನವಾದ ಭಾಗೀರಥಿಯ** ಉದಕಸೇವನೆಯಿಂದ **ಪುಣ್ಯವು** ಪ್ರಾಪ್ತಿಸುತ್ತದೆ”—ಎಂದು ಮೊದಲಾಗಿ ಹೇಳಬಹುದು. ಎಷ್ಟೋ ಸಲ, ಲಿಂಗವ್ಯತ್ಯಾಸವೂ ಕೂಡ **ಅಭಿವ್ಯಕ್ತವಾಗಿರದೆ** (ವಾಚ್ಯವಾಗಿರದೆ) ಯೋಜಿಸಲ್ಪಡಬೇಕಾಗುತ್ತದೆ. ಉದಾ **ಜಾಣ ಹುಡುಗ;** ಜಾಣ ಹುಡುಗಿ—ಇತ್ಯಾದಿ. ಇಲ್ಲಿ, ಜಾಣ**ನಾದ** ಹುಡುಗ; ಜಾಣ**ಳಾದ** ಹುಡುಗಿ—ಎಂಬ ಪು-ಸ್ತ್ರೀವಾಚಕಗಳು ಅಧ್ಯಾಹೃತ.

ಆರ್ಯ ವರ್ಗಕ್ಕೆ ಸೇರಿದ ಇಂಗ್ಲೀಷ ಭಾಷೆಯೂ ಕೂಡ ಸಂಸ್ಕೃತದ ಅನಾವಶ್ಯಕ ಜಂಜಡವನ್ನಿಟ್ಟುಕೊಂಡಿರದೆ, ಕನ್ನಡಾದಿ ದ್ರಾವಿಡ ಭಾಷೆಗಳಂತೆಯೇ ಇದೆ. ಸಂಸ್ಕೃತದ ರೀತಿ ಕ್ಲಿಷ್ಟವಾದುದು; ಗೊಂದಲಮಯವಾದುದು; **ಅನವಶ್ಯಕವಾದುದು.** ಆವಶ್ಯಕವಿದ್ದಷ್ಟನ್ನೇ ವ್ಯಯಿಸಿ **ನಮಗೆ ಬೇಕಾದ ಸುಖ-ಸಂಪತ್ತನ್ನು ಪಡೆಯುವುದೇ ಸಂಸ್ಕೃತಿಯ ಲಕ್ಷಣಗಳಲ್ಲಿ ಒಂದಾಗಿದ್ದರೆ, ಭಾಷೆಯ ಈ ಬೆಂದೆ-ಬೊಂತೆಗಳನ್ನು ಬಿಟ್ಟ ಭಾಷೆಗಳೆಲ್ಲವೂ ನಿಜವಾಗಿಯೂ ಪ್ರಗತಿಪರವಾಗಿವೆಯೆಂದೇ ಹೇಳಬೇಕು.** ನಾಮಪದಗಳ ಲಿಂಗ-ವಚನವಿವಕ್ಷೆಯಲ್ಲಿ ಮತ್ತು ಗುಣವಚನಗಳ ಈ ಮಿತವಾದ ಪ್ರಯೋಗದ ದೃಷ್ಟಿಯಲ್ಲಿ ಕನ್ನಡ ಭಾಷೆಯು ಸಂಸ್ಕೃತದಕಿಂತ ಪ್ರಗತಿಪರವಾಗಿದೆಯೆಂದು ಹೇಳಬೇಕು. ಫ್ರೆಂಚ್ ಮೊದಲಾದ ಐರೋಪ್ಯ ಭಾಷೆಗಳೂ ಕೂಡ ಸಂಸ್ಕೃತದ ಜಂಜಡವನ್ನೇ ಇಟ್ಟುಕೊಳ್ಳುತ್ತ ಬಂದಿವೆ. ಈ ಬಗ್ಗೆ ಸುಪ್ರಸಿದ್ಧ ಆಂಗ್ಲಭಾಷಾತತ್ವಜ್ಞರೊಬ್ಬರು ಹೇಳಿದ ಮಾತುಗಳು ತುಂಬಾ ಉದ್ಬೋಧಕವಾಗಿವೆ.

"With the loss of gender, we have also discarded *the agreement of adjectives of possessive pronouns and the article with their nouns.* An Englishman can say, for instance, 'my wife and children', while the French-man must repeat in 'ma femme et mes enfants.' *If we regard it as the triumph of culture to fit means perfectly to ends, and to do the most with the greatest economy of means, we must consider discarding of the superfluous as a great gain in modern English.*"*

ಎರಡು:— ಕನ್ನಡ ಗುಣವಚನಗಳು ಸಂಸ್ಕೃತದಿಂದ ಭಿನ್ನವಾಗಿದ್ದ ಎರಡನೆಯ ರೀತಿಯೆಂದರೆ— ಕನ್ನಡ ಗುಣವಚನಗಳು ಎಷ್ಟೋ ಸಲ ಆಖ್ಯಾತಪ್ರತ್ಯಯಗಳನ್ನೂ ಪಡೆದು ಕ್ರಿಯಾರ್ಥವನ್ನು ಸೂಚಿಸುತ್ತವೆ. ಇದು ಎಲ್ಲ ದ್ರಾವಿಡ ಭಾಷೆಗಳ ವೈಶಿಷ್ಟ್ಯವಾಗಿದೆ. ಉದಾಹರಣೆಗೆ, 'ನಾನು ಒಳ್ಳೆಯವ**ನಾಗಿದ್ದೇನೆ**'; 'ನೀನು ಸುಂದರ**ನಾಗಿದ್ದೀ**' 'ಅವನು ಉದ್ಧತನಾಗಿ**ದ್ದಾನೆ**'-ಎಂದು ಮೊದಲಾದ ವಾಕ್ಯಗಳಲ್ಲಿ '**ಆಗಿದ್ದೇನೆ**' 'ಆಗಿದ್ದೀ' 'ಆಗಿದ್ದಾನೆ'–ಎಂಬ ಕ್ರಿಯಾರ್ಥಗಳನ್ನು ಬಿಟ್ಟುಬಿಟ್ಟು, ಗುಣವಚನ ಗೇ ಆ ಆಖ್ಯಾತಪ್ರತ್ಯಯ ಗಳನ್ನು ಸೇರಿಸಿ, ಕ್ರಿಯಾರೂಪಗಳನ್ನು ಸಿದ್ಧಮಾಡಿಕೊಳ್ಳಲು ಬರುತ್ತದೆ. ಆದ್ದರಿಂದ, ಈ ವಾಕ್ಯಗಳು ಹಳಗನ್ನಡದಲ್ಲಿ ಅನುಕ್ರಮವಾಗಿ, 'ಆಂ ಒಳ್ಳಿ**ದನೆಂ**' 'ನೀಂ ಸುಂದರ**ನಯ್**'; 'ಅವಂ ಉದ್ಧತನನ್' — ಎಂದು ಮೊದಲಾಗಿ ಆಗುತ್ತವೆ. ಈ ರೀತಿ ಭಾಷೆಯಲ್ಲಿ ಸಾಧಿತವಾದ ಸೂತ್ರಬದ್ಧತೆ ಮತ್ತು ಮಿತವ್ಯಯಗಳು ನಿಜವಾಗಿಯೂ ಆವಶ್ಯಕ. ಹೊಸಗನ್ನಡವು ಮಾತ್ರ ಈ ಪ್ರಯೋಗಗಳನ್ನು ಬಳಸಲಿಲ್ಲ.

ನಿಷೇಧರೂಪಗಳು:—ಸಂಸ್ಕೃತದಲ್ಲಿ ಯಾವುದೇ ಗುಣವಚನ ಇಲ್ಲವೆ ಆಖ್ಯಾತದ ನಿಷೇಧಭಾವ ವನ್ನು ವ್ಯಕ್ತಮಾಡಬೇಕಾದರೆ, ಉಚಿತವಾಗಿ 'ನಿರ್' 'ಅ' 'ನ' 'ಮಾ'– ಮೊದಲಾದ ವರ್ಣಗಳನ್ನು ಸೇರಿಸಿ ಸಿದ್ಧಿಸಿಕೊಳ್ಳುತ್ತೇವಷ್ಟೇ! ವಿದ್ಯೆ 7 ಅ-ವಿದ್ಯೆ; ಕ್ಷರ 7 ಅಕ್ಷರ; ಕುರು 7 ಮಾಕುರು; ಇತ್ಯಾದಿ.

ಇದರಂತೆಯೇ, ಕನ್ನಡದಲ್ಲಿಯೂ ಕೂಡ ಅನೇಕ ವಿಧವಾಗಿ ನಿಷೇಧಭಾವವನ್ನು ಸೂಚಿಸಲಾಗುತ್ತದೆ. ಅವುಗಳಲ್ಲಿ 'ಇಲ್ಲ' ಮತ್ತು 'ಅಲ್ಲ' ಪದಗಳು ಮುಖ್ಯವಾದುವು. ಈ ಎರಡೂ ಪದಗಳಿಗೂ ಸಂಸ್ಕೃತದಲ್ಲಿಲ್ಲದ ಒಂದು ಹೆಚ್ಚಿನ ಅರ್ಥವ್ಯಕ್ತಿಯಿದೆ. ಇವುಗಳಲ್ಲಿ ಒಂದು ಪದವು **ಗುಣದ** ಅಭಾವವನ್ನೂ, ಮತ್ತೊಂದು ಅಸ್ತಿತ್ವದ **ಅಭಾವವನ್ನೂ** ಸೂಚಿಸುತ್ತವೆ. ಉದಾ: 'ಅವನು ದುಷ್ಟನಲ್ಲ; ಅವಳು ಸುಂದರಳಲ್ಲ' ಇತ್ಯಾದಿ ಗುಣವಿಷಯಕ; 'ಅವನು ಮನೆಯಲ್ಲಿ ಇಲ್ಲ; ಅವರು ಊರಲ್ಲಿಲ್ಲ'— ಇದು ಅಸ್ತಿತ್ವವನ್ನು ನಿಷೇಧಿಸುತ್ತದೆ. 'ಅವನು ಮನೆಯಲ್ಲಿ ಅಲ್ಲ' ಎಂದು ಯಾರೂ ಹೇಳರು.

೧. ಪಂಪಭಾರತದಲ್ಲಿ 'ಎ' ಪ್ರತ್ಯಯವನ್ನು ಉಪಯೋಗಿಸಿ ಸಾಧಿಸಿಕೊಂಡ ಹಲವು ನಿಷೇಧ ರೂಪಗಳು ದೊರಕುತ್ತವೆ. ಉದಾಹರಣೆಗೆ, ಪಂಪಭಾರತದ ೧೨.೧೦೯ರಲ್ಲಿ, 'ತೊಡಲಿಲ್ಲ' ಎಂಬರ್ಥದಲ್ಲಿ 'ತುಡನೆ' ಎಂಬ ಪ್ರಯೋಗವಿದೆ. 'ಅದಟಂ ಅಣಂ **ತುಡನೆ** ಕವಚಮಂ ರಾಧೇಯಂ'.

೨. ಆದರೆ, ಇದಕ್ಕೂ ಹೆಚ್ಚು '**ಅ**' **ಪ್ರತ್ಯಯ**ವನ್ನುಪಯೋಗಿಸಿ ಸಾಧಿಸಿಕೊಂಡ ಪದಗಳೇ ಹೆಚ್ಚಾಗಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದೊರಕುತ್ತವೆ. ಈ 'ಅ' ಪ್ರತ್ಯಯವಾದರೂ ಕೂಡ ಕೇವಲ

* E. L.—P. 6.

ಯಾವುದಾದರೂ ಶಬ್ದದ **ಹಿಂದೆ** ಮಾತ್ರ ಹತ್ತದೆ ಶಬ್ದಾಂತರಾಳದಲ್ಲಿ ಕೂಡ ಪ್ರಯುಕ್ತವಾದದ್ದು ಕಂಡು ಬರುತ್ತದೆ. ವಿದ್ಯೆ 7 ಅವಿದ್ಯೆ ಆದಹಾಗೆ, 'ಅಱಿಕೆ' ಎಂಬ ಕನ್ನಡಪದವು ಶಬ್ದಾಂತರಾಳದ 'ಅ'ಕಾರವನ್ನು ಪಡೆದು, 'ಅಱಿ**ಯುಮಿ**ಕೆ' 'ಅಜ್ಞಾನ' ಎಂದಾಯಿತು. ಉದಾಹರಣೆಗೆ. ಪಂಪಭಾರತದ ೬.೫೮ರಲ್ಲಿ 'ಅಱಿಯದಿದಂ ಮಾಡಿದೆಂ ಎನ್ನಱಿ**ಯುಮಿಕೆಗೆ** ಸೈರಿಸು' ಎಂದು ಬರುತ್ತದೆ. ಇದರಂತೆಯೇ, ಪುಗಿಲ್, **ಪುಗಲ್.**— ಕವಿ ಪುಟ್ಟಪ್ಪನವರ ಶೂದ್ರ ತಪಸ್ವಿಯಲ್ಲಿ ಬರುವ 'ನಿನಗಿದು ದಿಟಂ **ಪುಗಲ್** ತಾಣಂ'– ಎಂಬುದನ್ನು ಸಾಮಾನ್ಯರು 'ಇದು ನಿನಗೆ ನಿಜವಾಗಿಯೂ ಪ್ರವೇಶಿಸಲು (ಹುಗಲು) ಯೋಗ್ಯವಾದ ಸ್ಥಾನವು' ಎಂದು ಅರ್ಥ ಮಾಡುತ್ತಾರೆ. ಆದರೆ, ನಿಜವಾಗಿ 'ಪುಗಲ್' ಪದವು 'ಪುಗಿಲ್' ಇದರ ವಿರುದ್ಧ. 'ಪುಗಲ್ ತಾಣ'–ಎಂದರೆ 'ಪ್ರವೇಶಿಸಲು ಯೋಗ್ಯವಾದ **ಸ್ಥಾನವಲ್ಲ**' ಎಂದು ನಿಷೇಧಾರ್ಥ. ಪಂಪಭಾರತದಲ್ಲಿ 'ಅರಿಪಾಯ್ತು ಪೊಕ್ಕ ಪುಗಿಲ್';-ಎಂಬ ಸಂಭವಾರ್ಥದಂತೆ, 'ಪೋ, **ಪುಗಲ್, ಪುಗಲ್** ಎನುತಿರ್ಪ ಪಕ್ಕಿ' (V. 35) ಎಂಬ ನಿಷೇಧರೂಪವು ಬರುತ್ತಿದೆ. ಶಬ್ದಮಣಿದರ್ಪಣದಲ್ಲಿ 'ಪುಗಲ್ ಪುಗಲ್ ಎಂದು ಉಚ್ಚತರಮ್ ಊಳ್ವ ಕೋಗಿಲೆ'- ಎಂದು ಪ್ರಯೋಗವಾಕ್ಯವಿದೆ. ಇದರಂತೆ, ಪಂಪನಲ್ಲಿ 'ತಪ್ಪುವುದು' ಎಂಬರ್ಥದಲ್ಲಿ **'ನಿಲ್ಲದಿಕೆ'** (IX 84) ಎಂಬ ಪ್ರಯೋಗವಿದೆ. —'ಪೂಣ್ದು **ನಿಲ್ಲದಿಕೆಯುಂ,** ಬಾಳ್ವಂತು ವಿಖ್ಯಾತಿ ಕೀರ್ತಿಯವೊಲ್ ಈ ಒಡಲಬ್ಬೆ, ಪೇಳಿಂ, ಎನಗೇಂ ಕಲ್ಪಾಂತರ ಸ್ಥಾಯಿಯೇ?'—

ಈ 'ಅ'ಕಾರದ ಮೂಲರೂಪವೆಂಬಂತೆ ಶಾಸನಾದಿಗಳಲ್ಲಿ '**ತಪ್ಪಾದೆ** ನೋಂತಿಂಬಿನಿನ್'—ಎಂದು ಮೊದಲಾಗಿ 'ಆ'ಕಾರವುಳ್ಳ ರೂಪಗಳಿವೆ.

'ಅಲ್ಲ' ಎಂಬ ಇಡೀ ನಿಷೇಧವಾಚಕ ಪದವನ್ನೇ ಉಪಯೋಗಿಸಿ, ನಿಷೇಧಭಾವವನ್ನು ಸೂಚಿಸಿದ್ದು ಅನೇಕ ಕಡೆಗೆ ಕಂಡುಬರುತ್ತದೆ.—ಉದಾಹರಣೆಗೆ, 'ಅರಿಯನ್ನು ಕೊಲ್ಲದೆ, ಕೇವಲ ವಿನೋದದಲ್ಲಿ ಮಾಡಿದ— ಅಳಿಯದೆ ಇದ್ದ—ಕಾಳೆಗಕ್ಕೆ, ಅಲ್ಲ – ಅಳಿ–ಕಾಳೆಗ 7 ಅಲ್ಲಳಿ ಕಾಳೆಗ – ಎಂದು ಪ್ರಯೋಗಿಸಿದ್ದು ಕಂಡು ಬರುತ್ತದೆ.—'ಧರ್ಮಪುತ್ರಂಗೆ ತನ್ನ ನುಡಿದ ನುಡಿವಳಿಯುಂ ನೆನೆದು **ಅಲ್ಲಳಿಗಾಳೆಗಂಗಾದೆ**'—ಎಂದಿದೆ (ಪಂ. ಭಾ. XI. 43).

'ಅಲ್ಲ' ಎಂಬಂತೆಯೇ ಸಮಾಸದಲ್ಲಿ ಈ ನಿಷೇಧದ ಇನ್ನೊಂದು ಪೂರ್ಣರೂಪವಾದ 'ಇಲ್ಲಿ'— ಎಂಬುದನ್ನು 'ಲಿ' ಎಂದು ಮಾಡಿಕೊಂಡು ಪ್ರಯೋಗಿಸಿದ ರೂಪಗಳಿವೆ. ಕೇಶಿರಾಜನ ಪ್ರಕಾರ 'ಇಲ್ಲೆಂದಿರೆ ತಾಂ ಕಡೆಗಕ್ಕುಂ ಲಿತ್ವಂ' (ಸೂ. ೧೮೬; ಪು. ೧೫೮). ಭಾಷಾಭೂಷಣಕಾರನೂ ಕೂಡ 'ಇಲ್ಲಸ್ಯೈಲಿಃ'— ಎಂದು ಹೇಳಿದ್ದಾನೆ. ಹೀಗಾಗಿ, ಹದ**ನಿಲ್ಲದ** ಕುಡಗೋಲು, ಎಂದು ಹೇಳಬೇಕಾದರೆ, 'ಹದ**ನಿಲಿ** ಕುಡಗೋಲು' ಎಂದೂ, ಹ**ಲ್ಲಿಲ್ಲದ** ಬಾಯ್ ಎಂಬುದನ್ನು 'ಹಲ್ಲಿಲಿ ವಾಯ್' ಎಂದೂ, ಹೇಳಬಹುದು. ನಾಚಿ(ಣ್)ಗೆ ಇಲ್ಲದ ಹೆಂಗುಸು 'ನಾಚಿ(ಣಿ)ಲಿ ಹೆಣ್' ಆಗುತ್ತಾಳೆ.

> "ಸೊಗಯಿಸುಗುಮೆ ಪಲ್ಲಿಲಿವಾಯ್ ಅಗಿಲಿಲಿಗಂಧಂ
> ಸಮಂತು ಕೂರಿಲಿ ಕುಡುಗೋಲ್
> ಮಿಗೆ ನಾಣಿಲಿಯೆನಿಸುವ ವಧು ನಗಗೆಡೆಯಕ್ಕುಂ
> ಸಮಸ್ತ ಜಗತೀತಳದೊಳ್?"*

---

* ಶ. ಮ. ದ ಪು ೧೫೯.

‘ನಿಷ್ಫಲ’ ಎನ್ನುವ ಅರ್ಥದಲ್ಲಿ ಪಂಪಭಾರತದಲ್ಲಿ ‘ಪಳಾಳ’ ಎಂಬ ಪದವಿದೆ. (V 18; VI 24.)

‘ಬೇರೆ ಪಳಾಳದೊಳ್ ಏಂ?’

ಪುನಃ ‘ಗಾಳುಗೊಂಡಪಂ ತಗುಳ್ಚಿ ಪಳಾಳಮುಂ ಏನಾದನಪ್ಪೊಡಂ ಗಟ್ಟಿಸಿದೊಡೆ.’

ಹೀಗೆ, ಪ್ರಾಚೀನ ಕನ್ನಡದಲ್ಲಿ ಅನೇಕ ವಿಧವಾಗಿ ಸಿದ್ಧಿಸಿಕೊಳ್ಳುತ್ತಿದ್ದ ‘ಪದಗಳು’ ಇಂದಿನ ಕನ್ನಡದಲ್ಲಿ ನಿಂತುದು ಭಾಷಾಪ್ರಗತಿಗೊಂದು ಹಾನಿ.

ಕ್ರಿಯಾಪದಗಳು

ಭಾಷಾ–ಶಾಸ್ತ್ರದಲ್ಲಿ ಕ್ರಿಯಾಪದ ಮತ್ತು ಸರ್ವನಾಮಗಳಿಗೆ ಬಹಳ ಮಹತ್ವವಿದೆ. ಯಾಕಂದರೆ, ಕೋಶದ ಯಾವ ಭಾಗವು ಬದಲಾಗಬಹುದಾದರೂ, ಸರ್ವನಾಮಗಳು ಮಾತ್ರ ಸಾಮಾನ್ಯವಾಗಿ ಬದಲಾಗುವುದೇ ಇಲ್ಲ. ಯಾವುದೇ ಒಂದು ಭಾಷೆಯ ದೇಶ್ಯ ಸರ್ವನಾಮಗಳೇ ಕೊನೆಯ ವರೆಗೂ ಆ ಭಾಷೆಯ ಕೋಶದಲ್ಲಿ ಉಳಿಯುತ್ತವೆ. ಪರಭಾಷೆಯ ಪ್ರಭಾವವಾಗಿ ಹೊರಗಿನಿಂದ ಬರುವವು ಹೆಚ್ಚಾಗಿ ಗುಣವಚನ ಮತ್ತು ನಾಮಪದಗಳು. ಅನ್ಯಭಾಷೆಯ ಸರ್ವನಾಮಗಳು ಮತ್ತೊಂದು ಕೋಶಕ್ಕೆ ಎಂದೂ ಹೋಗವು.

ಅದರಂತೆಯೇ, ಯಾವುದೇ ಒಂದು ಭಾಷೆಯ **ಮೂಲವನ್ನು ಕ್ರಿಯಾಪದಗಳಲ್ಲೇ ಕಾಣಬೇಕೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ. ಕ್ರಿಯಾಪದಗಳೇ ಕೋಶದ ಮೂಲಧನ; ಉಗಮ ಸ್ಥಾನ.** ಈ ಕ್ರಿಯಾ–ಧಾತುಗಳಿಂದಲೇ ಭಾಷೆ ಪ್ರಾರಂಭವಾಯಿತೆಂದು ಹೇಳುತ್ತಾರೆ. ಡಾ. ವ್ಹಿಟ್ನಿ ಅವರ ಪ್ರಕಾರವಂತೂ **ಕ್ರಿಯಾರೂಪಗಳೇ ಭಾಷೆಯ ಪುರೋಗಾಮಿಗಳು.** ವ್ಯಾಕರಣ–ಬಳಗ ಅನಂತರದ್ದು. ಅವರು ಈ ಬಗ್ಗೆ ಹೇಳುವುದೇನಂದರೆ :—

> "The grand conclusion, however, at which historical study of Language has surely and incontrovertibly arrived, is that all the grammatical apparatus of Languages is of secondary growth...... *The historically traceable beginnings of speech were simple roots.*"

"ಕ್ರಿಯೆ ಅರ್ಥದ ಮೂಲಂ" ಎಂದು (ಸೂ. ೨೧೬, ಪು. ೧೮೩) ಕೇಶಿರಾಜನು ಹೇಳುವಲ್ಲಿ ಈ ಅರ್ಥವನ್ನೇ ಇಟ್ಟುಕೊಂಡಿದ್ದನೇನೋ ವಿಚಾರಿಸಬೇಕು.

ಉದಾಹರಣೆಗೆ, ಕನ್ನಡದಲ್ಲಿ ಬೆಳ್ಳಿ–ಬೆಳಕು–ಬೆಳಗು–ಎಂದು ಸಾಧಿತಪದಗಳಿವೆಯಲ್ಲವೇ? ಇವುಗಳಲ್ಲಿ 'ಬೆಳ್' ಎಂಬ ಕ್ರಿಯಾರೂಪವೇ ಮೂಲವಾದುದೆಂದು ಅಭಿಪ್ರಾಯ. ಅಥವಾ ಕನ್ನಡ 'ಕೆಯ್' ಶಬ್ದವನ್ನೇ ತೆಗೆದುಕೊಳ್ಳೋಣ. ಈ 'ಕೆಯ್' ಅಂದರೆ 'ಮಾಡು' 'ದೇಹದ ಒಂದು ಭಾಗ' 'ಹೊಲ' 'ಕೆಲಸ'–ಎಂದು ಮೊದಲಾಗಿ ಅನೇಕ ಅರ್ಥಗಳನ್ನು ಕೊಡುತ್ತಿದೆ. ಮನುಷ್ಯನು 'ಕೆಯ್ಯಲು' ಉಪಯೋಗಿಸಿದ ದೇಹದ ಸ್ಥಾನವೇ 'ಕೈ';—ಅವನು 'ಕೆಯ್ದುದೇ' 'ಕೆಯ್ಮೆ' 'ಗೆಯ್ಮೆ'; ಇಂಥ ಸಾಹಸದ 'ಗೆಯ್ಮೆ'ಯ ಫಲವೇ 'ಕೆಯ್' 'ಕೆಯ್ವೊಲ'—ಚಿಕುಪಾಧ್ಯಾಯನ 'ಕಾಲೂರ್ಗಳಿಂ ಕೆಯ್ಗಳಿಂ'—ಮರಾಠಿಯ 'ಶೇ–ತ'ವೂ ಈ ದ್ರಾವಿಡ ಕೆಯ್ 7 ಕೇ–ತ (ಕೆಯ್ತು) ದಿಂದಲೇ ಬಂದಿರಬೇಕು. ಕನ್ನಡದಲ್ಲಿ ಕೆಯ್ತು, ಗೆಯ್ತು ಅಂದರೆ ಕೆಲಸ ಎಂದು ಅರ್ಥವಿಲ್ಲವೇ? ಹಾಗಾದರೆ, ಅದು ಮರಾಠಿಯಲ್ಲಿ 'ಶೇ–ತ' 'ಶೇ'–ಏಕಾಯಿತು?.... ಕನ್ನಡದ 'ಕೇ', ಮರಾಠಿಯ 'ಶೇ' ಆಗಲು ಬಹುಶಃ ತೆಲುಗು ಪ್ರಭಾವವೇ ಕಾರಣವೆಂದು ಕಾಣುತ್ತದೆ. ಯಾಕಂದರೆ, ಕನ್ನಡದ 'ಕ' ವರ್ಣವು ಈ ಭಾಷೆಗಳಲ್ಲಿ 'ಶ' ಇಲ್ಲವೆ 'ಚ' ಆಗುವುದನ್ನು ನಾವು ಕಂಡಿದ್ದೇವೆ. ಆದ್ದರಿಂದ ತೆಲುಗು 'ಚೇ' ಧಾತುವಿನಿಂದ 'ಚೇತ' 'ಸೇಶ' ಬಂದಹಾಗೆ ಮರಾಠಿಯಲ್ಲೂ ಈ ರೂಪವು ಸೇರಿರಬೇಕು. ಈ ಬಗ್ಗೆ ಶ್ರೀ. ತ್ಯಾಗರಾಜ ಎಂಬವರು ಹೇಳಿದ ಮಾತುಗಳು ಮನನೀಯವಾಗಿವೆ.

'From ಚೇ to do are derived Cheta, Seta work'*

ಆನುಷಂಗಿಕವಾಗಿ, ಶ್ರೀಯುತರು ಸೂಚಿಸಿದ ಈ ಕೆಳಗಿನ ಮಾತೂ ಕುತೂಹಲಜನಕವಾಗಿದೆ.

'It is interesting to note that *most of the words for th important organs of the body begin with* **ಕ.** cf ಕೆಯ್; ಕಾ-ಲು; ಕಿ-ವಿ; ಕ-ಣ್; ಕೆ-ನ್ನೆ; (ಕ-ವಾಳ); ಕ-ತ್ತು; ಕು-ತ್ತಿಗೆ; ಕ-ಡಪು (=ಹೊಟ್ಟೆ?); ಕ-ವುಂಕಳ್; ಕೂ-ದಲು;" ಇತ್ಯಾದಿ.

ಡಾ. ವ್ಹಿಟ್ನಿ ಅವರು ಇಂದು ವ್ಯಕ್ತಪಡಿಸಿದ ಈ ಅಭಿಪ್ರಾಯವನ್ನೇ ಹೆಚ್ಚುಕಡಿಮೆ ನಮ್ಮ ಸಂಸ್ಕೃತ ವೈಯಾಕರಣಿಗಳು ಕೂಡ ಸಾವಿರಾರು ವರ್ಷಗಳ ಹಿಂದೆಯೇ ಸಾರಿದ್ದಾರೆ. ಅಂತಲೇ ಈ ಕ್ರಿಯಾರೂಪಗಳನ್ನು ಅವರು 'ಧಾ' (=ಆಧಾರವಾಗು) ಧಾತುವಿನಿಂದ "ಧಾತು" ಎಂದು ಕರೆದರು. ಯಾಸ್ಕನ ನಿರುಕ್ತದ ಪ್ರಕಾರ "ಧಾತುಃ ದಧಾತೇಃ"- ಧಾತುವಿನ ಬಗ್ಗೆ ಪ್ರಾತಿಶಾಖ್ಯಗಳು ಹೇಳುವದೆಂದರೆ—

ತನ್ನಾಮ ಏನ ಅಭಿದಧಾತಿ ಸತ್ವಮ್-
ತದಾ ಖ್ಯಾತಮ್ ಯೇನ ಭಾವೇನ ಸ ಧಾತುಃ

ಹೀಗಾಗಿ, ಈ ಮೂಲಧಾತುವಿನ ಪ್ರತ್ಯಯಗಳು ಬರಿಯ "ಆಶ್ರಯ"ಗಳಾದವು. ಈ ಪ್ರತ್ಯಯಗಳಿಲ್ಲದೆ ಬರಿಯ ಧಾತುಗಳನ್ನು ಉಪಯೋಗಿಸಕೂಡದೆಂದು ಸಂಸ್ಕೃತದ ಮತ.—"ಅ-ಪದಮ್ ನ ಪ್ರಯುಂಜೀತ." ಆದ್ದರಿಂದ, ಸಂಸ್ಕೃತ ವೈಯಾಕರಣಿಗಳ ಪ್ರಕಾರ 'ಧಾತು'ವು ಪದದ ಮೂಲವಾಗಿದ್ದರೂ, ಅದನ್ನು ಸ್ವತಂತ್ರವಾಗಿ ಉಪಯೋಗಿಸಲಿಕ್ಕೆ ಬಾರದು. ಆದರೆ, 'ಕ್ವಿಬಂತ'ಗಳನ್ನು ಮಾತ್ರ ಇದಕ್ಕೆ ಅಪವಾದವೆಂದು ಗ್ರಹಿಸಬಹುದು.

ಡಾ. ಕೆ. ರಾಮಕೃಷ್ಣಯ್ಯನವರ ಪ್ರಕಾರ ಕೂಡ ಎಲ್ಲ ಭಾಷೆಗಳೂ ಧಾತುವಿನಿಂದಲೇ ಮೊದಲಾದವಲ್ಲದೆ, ಅವು ಮೂಲತಃ ಬಹುಶಃ ಏಕಾಕ್ಷರಿಗಳೇ ಆಗಿದ್ದವು. ಅವರ ಪ್ರಕಾರ ಚಿಕ್ಕಮಕ್ಕಳ ಮಹತ್ವದ ಎಲ್ಲ ಅಭಿವ್ಯಕ್ತಿಗಳೂ—ಅದು ಹರ್ಷವೇ ಇರಲಿ; ವೇದನೆಯೇ ಇರಲಿ; ಭಯವೇ ಇರಲಿ; ಉತ್ಸಾಹವೇ ಇರಲಿ;—ಎಲ್ಲವೂ ಭಾಷೆಯ ಈ ಏಕಾಕ್ಷರ ಸ್ವರೂಪವನ್ನೇ ತೋರಿಸುತ್ತವೆ.

ಈ ವಿಧವಲ್ಲಿ ಪ್ರಾತ್ಯಯಿಕವಾದ ಸಂಸ್ಕೃತ ಭಾಷೆಗೂ ಮತ್ತು ಕನ್ನಡ ಭಾಷೆಗೂ ಇರುವ ಒಂದು ಮಹತ್ವದ ವ್ಯತ್ಯಾಸವನ್ನು ಗಮನಿಸಬಹುದು.

೧. ಇಂದಿನ ಸಂಸ್ಕೃತ ಭಾಷೆಯಲ್ಲಿ ಎಷ್ಟೋ ಸಲ ಧಾತುವಿನ ಮೂಲರೂಪವನ್ನು ಕೂಡ ಕಾಣಲು ಸಾಧ್ಯವಿಲ್ಲ. ಯಾಕಂದರೆ, ಮೂಲಧಾತುವಿನಿಂದ ಭಿನ್ನವಾದ ಹಲವು ರೂಪಗಳನ್ನು ಕ್ರಿಯಾರ್ಥದಲ್ಲಿ ನಾವಿಲ್ಲಿ ಪ್ರಯೋಗಿಸುವುದನ್ನು ಕಾಣಬಹುದು. ಉದಾಹರಣೆಗೆ—'ನೀ' ಧಾತುವಿನ ರೂಪವಾದ 'ನಯ' 'ನಯತೇ' ರೂಪದಿಂದಾಗಲೀ; ಇಲ್ಲವೆ 'ಗಮ' ಧಾತುವಿನ 'ಗಚ್ಛತಿ' ರೂಪದಿಂದಾಗಲೀ; ಆ ಆ ಧಾತುಗಳ ಮೂಲವನ್ನು ಕಾಣಲಾರೆವು.

---

* "Semantics of Dravidian 'Kai'"—A. F. Tyagaraju 1933.

ಆದರೆ, ಕನ್ನಡದಲ್ಲಿ ಮಾತ್ರ ಈ ರೀತಿ ಕಂಡುಬರುವದಿಲ್ಲ. **ಸಾಮಾನ್ಯವಾಗಿ ಕನ್ನಡ ಧಾತುಗಳ ಮೂಲಸ್ವರೂಪವನ್ನು ಸ್ಪಷ್ಟವಾಗಿ ಇಂದಿಗೂ ಕಾಣಬಹುದಲ್ಲದೆ, ಹಲ ಕೆಲವು ಭಾವಗಳಲ್ಲಂತೂ, ಸ್ಪಷ್ಟವಾಗಿ ಮೂಲ ಧಾತುವೇ ಕ್ರಿಯಾರ್ಥವನ್ನು ಸೂಚಿಸುತ್ತಿದೆ.** ಹೀಗಾಗಿ, ಸಂಸ್ಕೃತದ "ಅಪದಮ್ ನ ಪ್ರಯುಂಜೀತ"—ಎಂಬ ಸೂತ್ರವು ಕನ್ನಡ ಭಾಷೆಗೆ ಅನ್ವಯಿಸುವದಿಲ್ಲ.

ನಿಜ; ಕನ್ನಡದ ಕೊಳ್ 7 ಕೊಂಡ; ನಿಲ್ 7 ನಿಂತ; ಸಾ 7 ಸತ್ತ—ಮೊದಲಾದ ಪ್ರಯೋಗಗಳಲ್ಲೂ ಮೂಲಧಾತುವನ್ನು ಗುರುತಿಸಲು ಅಷ್ಟರಮಟ್ಟಿಗೆ ಸಾಧ್ಯವಾಗದು. ಆದರೆ, ಈ ಎಲ್ಲ ಧಾತುಗಳ ನಿಜವಾದ ಮೂಲರೂಪವು ಯಾವುದಿರಬಹುದೆಂಬುವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಈ ಹೊಸ ರೂಪಗಳು ಯಾವ ರೀತಿ ಸಿದ್ಧವಾದುವೆಂಬುದು ಸ್ಪಷ್ಟವಾಗುತ್ತದೆ. ಯಾಕಂದರೆ, ಕನ್ನಡದ 'ಯ ವ ಲ ಳ' ಮೊದಲಾದ ವರ್ಣಗಳು ಅನುನಾಸಿಕಗಳೂ, ನಿರನುನಾಸಿಕಗಳೂ ಕೂಡಿಯೇ ಇದ್ದದ್ದರಿಂದ, ಎರಡನೆಯ ರೂಪಗಳಲ್ಲಿ ಅನುನಾಸಿಕಗಳು ಪ್ರಾಮುಖ್ಯತೆಯನ್ನು ಪಡೆದವು. 'ಸತ್ತ' ರೂಪದಲ್ಲಿ ಬಹುಶಃ 'ಸಾ' ಎನ್ನುವುದಕ್ಕಿಂತ 'ಸಯ್' ಎನ್ನುವುದೇ ಧಾತುವಿದ್ದಂತೆ ಕಾಣುತ್ತದೆ. "ನೆರೆದು ಬಂದರ್ ಸಯಲಾ ಬಲಮೆಲ್ಲಮುಂ"—ಎಂದು ಪ್ರಯೋಗವಿದೆ.

ಹೀಗಾಗಿ, ಕನ್ನಡ ಧಾತುಗಳನ್ನು ಇಂದಿಗೂ ನಾವು ಸ್ಪಷ್ಟವಾಗಿ ಗುರುತಿಸುವಂತಿವೆ. ಅದೇ ಸಂಸ್ಕೃತ ದಲ್ಲಿ ಹಾಗಾಗದು. ಅಂತಲೇ, ವೈಯಾಕರಣಿಗಳು ಕೂಡ, ಕನ್ನಡ ಧಾತುವಿನ ಮೂಲರೂಪವನ್ನು ಕಾಣಬೇಕಾದರೆ, 'ಅಭಾವಕ್ರಿಯೆ'ಯಲ್ಲಿ ಸ್ಪಷ್ಟವಾಗಿ ಕಾಣಬಹುದೆಂದು ಹೇಳಿದ್ದಾರೆ. –

"ಕ್ರಿಯೆ ಅರ್ಥದ ಮೂಲಂ; ಪ್ರತ್ಯಯರಹಿತಂ ಧಾತು; ಅದಂ ಅಭಾವಕ್ರಿಯೆಯೊಳ್ ನಿಯತಂ ನಿಶ್ಚಯಿಪುದು" –ಎಂದು ಶಬ್ದಮಣಿದರ್ಪಣ (ಸೂ. ೨೧೬). ಹೀಗಾಗಿ, ಮಾಡಿದಂ; ನೋಡಿದಂ— ಮೊದಲಾದ ರೂಪಗಳ 'ಅಭಾವ'ಕ್ರಿಯೆ–ಮಾಡಂ; ನೋಡಂ–ಎಂದಾಗಿ–ಮಾಡು–ನೋಡು–ಎಂಬುವು ಧಾತುಗಳೆಂದು ಅರಿತುಕೊಳ್ಳಬೇಕು.

ಆದರೆ, ಧಾತುವಿನ ಮೂಲರೂಪವನ್ನು ತಿಳಿದುಕೊಳ್ಳಲು ಈ 'ನಿಷೇಧಕ್ರಿಯೆ'ಯನ್ನು ಹುಡುಕುವುದಕ್ಕಿಂತ, 'ವಿಧ್ಯರ್ಥ'ವನ್ನು ಗಮನಿಸುವುದು ಹೆಚ್ಚು ಸುಲಭವೆಂದು ಕಾಣುತ್ತದೆ. ಯಾಕಂದರೆ, ಈ ಧಾತುಗಳ ನಿಷೇಧರೂಪಗಳು 'ಮಾಡಂ' 'ನೋಡಂ' 'ಬೇಡಂ' – ಎಂದಾದರೆ, ಇವುಗಳ 'ವಿಧ್ಯರ್ಥರೂಪ'ಗಳು ಸ್ಪಷ್ಟವಾಗಿ ಧಾತುಗಳೇ ಇದ್ದುದನ್ನು ಕಾಣುತ್ತೇವೆ. ಉದಾ:–ನೀಂ ಮಾಡು; ನೀಂ ನೋಡು; ಬೇಡು; ಇತ್ಯಾದಿ. **ಹೀಗಾಗಿ, ಯಾವುದೇ ಕ್ರಿಯಾರೂಪದ ಮೂಲಧಾತುವನ್ನು ಕಾಣಬೇಕಾದರೆ, ಆ ಪದದ ವಿಧ್ಯರ್ಥದ ಮಧ್ಯಮಪುರುಷ ಏಕವಚನವನ್ನು ಗಮನಿಸಿದರೆ ಸಾಕು; ಅದೇ ಧಾತುವಾಗಿರುತ್ತದೆ. ಅರ್ಥಾತ್ ಕನ್ನಡದಲ್ಲಿ ಧಾತುವೇ ವಿಧ್ಯರ್ಥದ ಮಧ್ಯಮಪುರುಷ ಏಕವಚನವನ್ನು ಸೂಚಿಸುತ್ತದೆ.**

ಈ ಮಾತು ಕನ್ನಡಕ್ಕಷ್ಟೇ ಅಲ್ಲ; ಬಹುಶಃ ಸಂಸ್ಕೃತವನ್ನುಳಿದು ಪ್ರಪಂಚದ ಎಲ್ಲ ಭಾಷೆಗಳಿಗೂ ಅನ್ವಯಿಸುತ್ತದೆಂದು ಹೇಳಬಹುದು. ಉದಾಹರಣೆಗೆ, ಇಂಗ್ಲಿಷ್ ಭಾಷೆಯ go; went; gone; going– ಇವುಗಳ ವಿಧ್ಯರ್ಥದ 'go' ಎಂಬುದೇ ಧಾತುವೆಂದು ಬೇರೆ ಹೇಳಬೇಕಾಗಿಲ್ಲ. ಅದೇ ಸಂಸ್ಕೃತದ 'ಗಮ' ಪದವು ಇದರ ಸಮೀಪದ ಧಾತುವೇ ಆಗಿದ್ದರೂ, 'ಗಚ್ಛ' ಎಂದೇ ವಿಧ್ಯರ್ಥವಾಯಿತು. ಅಂತಲೇ, ಪ್ರೊ. ಕೆ. ರಾಮಕೃಷ್ಣಯ್ಯನವರು ಹೇಳಿದ ಮಾತುಗಳು ಯಥಾರ್ಥವಾಗಿವೆ. ಅವರ ಪ್ರಕಾರ—

"...In most languages rather almost in any stage of any language, the form of the Imperative second person singular happens to be the root itself or nearest to the form of the root in that language."*

ಡಾ. ಕಾಲ್ಡುವೆಲ್ಲ ಅವರೂ ಕೂಡ ಇದೇ ಅಭಿಪ್ರಾಯುವನ್ನೇ ವ್ಯಕ್ತಪಡಿಸಿದ್ದಾರೆ—

"In these languages, the second person singular of the imperative is generally identical with the root or the theme of the verb "*

ಕನ್ನಡದ ಕೇಶಿರಾಜನು ಕೂಡ ಈ ಮಹತ್ವದ ಸೂಕ್ಷ್ಮಾಂಶವನ್ನು ಎಂದೋ ಗ್ರಹಿಸಿದ್ದನು. ಅಂತಲೇ ಅವನು ಕೂಡ —**"ಪರಿಣಮಿಸಿರ್ಕುವತ್ ಪ್ರಕೃತಿಸ್ವರೂಪದಿಂ ಮಧ್ಯಮೈಕ ವಚನವ್ ವಿಧಿಯೊಳ್"** ಎಂದು ಹೇಳಿದನು.

ಈ ವಿಧಿರೂಪವೇ ಬಹುಶಃ ಧಾತುವಿನ ಮೂಲಭಾವವಾಗಿರಬೇಕು. ಯಾಕಂದರೆ, ಆದಿಮಾನವನಿಗೆ ಭಾಷೆಯ ಅವಶ್ಯಕತೆ ಎನಿಸಿದ್ದು ಆಶೆ—ಎನಿಸಿಕೆಗಳನ್ನು ಅಭಿವ್ಯಕ್ತ ಮಾಡುವಾಗ. ವಿಧ್ಯರ್ಥದ ಬಗ್ಗೆ ಪ್ರೊ. ರಾಮಕೃಷ್ಣಯ್ಯನವರು ಹೇಳಿದ ಮಾತುಗಳು ತುಂಬಾ ಮನನೀಯವಾಗಿವೆ.

"Of all the modes or forms of action, expressed by the verb, that which is expressed by the imperative seems to be the most elemental as it expresses the first needs of human society. The mode of human expression relating to the idea of command, request or entreaty seems to stand nearest to the first propensities of human nature." †

೩. ಮೂರನೆಯದಾಗಿ, ಕನ್ನಡ ಧಾತುಗಳ ಬಗ್ಗೆ ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಕನ್ನಡದ ಅನೇಕ ಧಾತುಗಳು ಬಹುಶಃ ವ್ಯಂಜನಾಂತಗಳಾಗಿರಬೇಕು. ಯಾಕಂದರೆ, ದ್ರಾವಿಡ ಭಾಷಾಸ್ಕಂಧದಲ್ಲೇ ಒಂದು ಪದವು ಬೇರೆ ಬೇರೆ ಅಂತ್ಯವರ್ಣಗಳನ್ನು ಪಡೆಯುವುದನ್ನು ಗಮನಿಸಿದರೆ, ಬಹುಶಃ ಇವಕ್ಕೆಲ್ಲ ಮೂಲವಾಗಿ ಯಾವುದಾದರೊಂದು ವ್ಯಂಜನಾಂತರೂಪವಿರುವುದು ಗಮನಕ್ಕೆ ಬಾರದಿರದು.

ಉದಾ: ತ– ಅಲ್ಲೈ; ತೆ – ಅಲೆ; ಕ – ತು. ಅಲೆ;

ಅಥವಾ — ತ – ಮುಲ್ಲೈ; ತೆ – ಮೊಲ (ಚು); ಕ – ಮೊಳೆ

ಕೇಶಿರಾಜನು ಈ ರೀತಿ ಏಕಾಕ್ಷರಗಳಾಗಿ ಅನುನಾಸಿಕಾಂತ್ಯವನ್ನು ಪಡೆದ ಧಾತುಗಳ ಒಂದು ಪಟ್ಟಿಯನ್ನೇ ಕೊಡುತ್ತಾನೆ—ಅವುಗಳ ತಮಿಳು, ತೆಲುಗು ರೂಪಗಳನ್ನೂ ನಾವು ಗಮನಿಸಬಹುದು.

ಕ	ತ	ತೆ
ಕಾಣ್	ಕಾಣ್	ಕನು
ಪೂಣ್	ಪೂಣ್	ಪೂನು
ಪಣ್	ಪಣ್	ಪನ್ನು
ನೋನ್	ನೋಲ್	ನೋಮು
ಈನ್	ಈನ್	ಈನು
ತಿನ್	ತಿನ್	ತಿನು ಇತ್ಯಾದಿ.

* Root Theory and Dravidian Root P. 5. † Cald. P. 446.

ಒಟ್ಟು ಸಾರಾಂಶವೇನಂದರೆ —ಈಗ ನಾಮಪದ ಮತ್ತು ಧಾತು— ಈ ಎರಡೂ ಅರ್ಥವನ್ನು ಹೇಳುತ್ತಿದ್ದ ಪದಗಳು ಮೂಲತಃ ಧಾತುಗಳಾಗಿಯೇ ಪ್ರಾರಂಭವಾದುವು, ಅನಂತರ ಅವುಗಳ ನಾಮಪದ ಅರ್ಥವು ರೂಢಿಯಲ್ಲಿ ಬಂದಿತು. ಹೀಗಾಗಿ, ಕಟ್ಟು ಅಂದರೆ ಮೊದಲು "ಒಂದುಮಾಡು; ಕೂಡಿಹಾಕು; 'Bind" ಎನ್ನುವ ಅರ್ಥ; ಅನಂತರ "ಎಲೆಯ ಕಟ್ಟು; ಬೀಡಿಯ ಕಟ್ಟು; ಒಕ್ಕಟ್ಟು"—ಎಂಬಲ್ಲಿಯ ನಾಮಪದದ ಅರ್ಥ. ಮೆಟ್ಟು ಅಂದರೆ ಮೊದಲು 'ತುಳಿ' ಅನಂತರ 'ಕೆರವು' 'ಹಾಡು'. ಮೊದಲು ಕ್ರಿಯೆ; ನಂತರ ಕ್ರಿಯೆಯ ನಿರ್ಮಾಣ 'ಹಾಡು' ಇತ್ಯಾದಿ.

೨. **ಕನ್ನಡ ಕ್ರಿಯಾಪದಗಳಿಗೂ ಸಂಸ್ಕೃತ ಕ್ರಿಯಾಪದಗಳಿಗೂ ಇರುವ ವ್ಯತ್ಯಾಸವೆಂದರೆ, ಕನ್ನಡ ಕ್ರಿಯಾಪದಗಳೆಲ್ಲ ಕ್ರಿಯಾತ್ಮಕ ಧಾತುಗಳೇ ಆಗಿರಬೇಕೆಂಬ ನಿರ್ಬಂಧವೇನೂ ಇಲ್ಲ. ಕನ್ನಡದಲ್ಲಿ ಗುಣವಚನ, ಸರ್ವನಾಮ, ನಾಮಪದಗಳೂ ಕೂಡ ಆಖ್ಯಾತ ಪ್ರತ್ಯಯಗಳನ್ನು ಪಡೆಯಬಹುದು. ಹೀಗಾಗಿ, ದ್ರಾವಿಡ ಕ್ರಿಯಾಪದಗಳೆಲ್ಲ ಕ್ರಿಯಾಸೂಚಕ ಧಾತುಗಳಿಲ್ಲ.** ಇದು ಎಲ್ಲ ದ್ರಾವಿಡ ಭಾಷೆಗಳ ವೈಶಿಷ್ಟ್ಯ. ಸಂಸ್ಕೃತದಲ್ಲಿ **ಆಖ್ಯಾತ ಪ್ರತ್ಯಯಗಳು ಕ್ರಿಯಾರ್ಥದ ಧಾತುಗಳಿಗೆ ಮಾತ್ರ ಹತ್ತುತ್ತವೆ.** ಸಂಸ್ಕೃತದ 'ಮಿ, ವಸ್, ಮಸ್'—ಎಂಬ ಪ್ರತ್ಯಯಗಳನ್ನು 'ರಾಮ' ಇಲ್ಲವೆ 'ಸುಂದರ' ಪದಗಳಿಗೆ ಹಚ್ಚಲಾಗದು. ಅದೇ ಕನ್ನಡದ 'ಅಮ್ ಅಯ್ ಅರ್ ಅನ್' ಮೊದಲಾದ ಆಖ್ಯಾತಪ್ರತ್ಯಯಗಳನ್ನು ನಾಮಪದ ಗುಣವಚನಗಳೂ ಪಡೆಯಬಹುದು. ಉದಾಹರಣೆಗೆ, ಕವಿಕೇಶವನೆಂ; ಪಂಡಿತೆಯೆಂ; ಮಲ್ಲಿಕಾರ್ಜುನ ಸುತನೆಂ; ಕುಲಕರ್ಣಿಯೆಂ; ಗುಣವಂತನೆಂ; ಪೆರನಯ್ ಇತ್ಯಾದಿ.

ಈ ಬಗ್ಗೆ ಕೇಶಿರಾಜನು ಹೇಳುವದೆಂದರೆ –

> ವಿನುತ ಗುಣವಚನದೊಳ್ ಸರ್ವನಾಮದೊಳ್
> ಸಂಖ್ಯೆಯೊಳು ಪ್ರವರ್ತಿಪುವು ಆಖ್ಯಾತನಿಯುಕ್ತವಿಭಕ್ತಿಗಳ್ ಇವು,
> ಘನತರ ಸಂಸ್ಕೃತ ಗುಣೋಕ್ತಿಯೊಳವ್ ಅಮರ್ದಿರ್ಕುಂ *

ಅಂತಲೇ, ಶ್ರೀ. ರಾಮಕೃಷ್ಣಯ್ಯನವರು "Dravidian roots are not all verbal roots"† ಎಂದು ಹೇಳಿದರು.

೪. **ನಾಲ್ಕನೆಯದಾಗಿ—** ಕನ್ನಡದ ಕ್ರಿಯಾರೂಪಗಳನ್ನು '**ಮಾಡಿದಪಮ್**' '**ಬೇಡಿದಪಂ**' ಎಂದು ಮೊದಲಾಗಿ ಹೇಳುತ್ತೇವಷ್ಟೇ? ನಿಜವಾಗಿ, ವಿಚಾರಮಾಡಿ ನೋಡಿದರೆ, ಈ '**ಮಾಡಿದಪಮ್**' ಮೊದಲಾದವು 'ಕ್ರಿಯಾಪದಗಳ್' ಅಲ್ಲ. ಯಾಕೆಂದರೆ, ಅವು ಹೆಚ್ಚುಕಡಿಮೆ ಗುಣವಚನಗಳಾಗಿವೆ. 'ಅದು ಎಂಥದು?'—ಎಂದು ಕೇಳಿದರೆ 'ಒಳ್ಳೆಯದು ಕೆಟ್ಟುದು' ಎಂದು ಮೊದಲಾಗಿ ಗುಣವಾಚಕ ಉತ್ತರ ಬರುವಂತೆ, ಈ ವಾಕ್ಯದ ಬಗ್ಗೆಯೂ 'ಅವಂ **ಎಂತಹಂ**' ಎಂದು ಪ್ರಶ್ನೆ ಕೇಳಿದರೆ 'ಅವಂ ಮಾಡಿ-**ದಪಂ**' —ಎಂಬ ಉತ್ತರ ಬರುತ್ತದೆ. 'ಅಂತಹಂ' 'ಇಂತಹಂ' ಎಂದು ಹೇಳುವವೆಲ್ಲ ಗುಣವಾಚಕಗಳಾಗಿದ್ದರಿಂದ 'ಮಾಡಿದಪಂ' 'ಮಾಡಿದವಂ' '**ಮಾಡಿದಂಥವಂ**'—ಎಂಬುದೂ ಗುಣವಾಚಕವೇ. ಅಂತಲೇ ಕನ್ನಡ ಕೈಪಿಡಿಕಾರರು ತೀರ ಸುಂದರವಾಗಿ ಹೇಳಿದಂತೆ "ಕನ್ನಡದಲ್ಲಿ ಕ್ರಿಯಾಪದಗಳೇ ಇಲ್ಲ"—

* ಶ ಮ ದ ಸೂ. ೨೧೪. † 'Dravidic Studies' ಪು ೪೬

ಅಂದಾಕ್ಷಣಕ್ಕೆ, ಕ್ರಿಯಾರ್ಥವನ್ನು ಹೇಳುವ ಧಾತುಗಳಿಲ್ಲವೆಂದು ಅಭಿಪ್ರಾಯವಲ್ಲ (ನೋಡು ಬೇಡು – ಮೊದಲಾಗಿ ಸಾವಿರಾರು ಇವೆ); ಆದರೆ, ಸಂಪೂರ್ಣ ಕ್ರಿಯಾರೂಪಗಳನ್ನು ಹೇಳುವ ಪದಗಳಿಲ್ಲ. ಯಾಕೆಂದರೆ, ಕನ್ನಡದ **ಈಗಿನ ಕ್ರಿಯಾರೂಪಗಳೆಲ್ಲ ಗುಣವಾಚಕಗಳೋ ಸಂಬಂಧವಾಚಕ ಸರ್ವನಾಮಗಳೋ ಆಗಿವೆ.** ಡಾ. ಕೆ. ರಾಮಕೃಷ್ಣಯ್ಯ ಅವರು ಹೇಳಿದಂತೆ,

> '*In the Dravidian the verb has an adjectival force, it being really a noun of agency with reference to the subject.*''*

ವೈದಿಕ ಸಂಸ್ಕೃತದಲ್ಲಿ ಅಷ್ಟಾಗಿ ಕಾಣದೆ, ಅನಂತರದ ಸಂಸ್ಕೃತದಲ್ಲಿ ಕಂಡುಬರುವ 'ಸಃ ಗತಃ' (= ಕ. ಅವನ್ ಪೋದನ್-ಪೋ-ದವನ್) ಮೊದಲಾದ ಪ್ರಯೋಗಗಳು ದ್ರಾವಿಡ ಪ್ರಭಾವವೆಂದು ಹೇಳುತ್ತಾರೆ. ಯಾಕೆಂದರೆ, ತೀರ ಪ್ರಾಚೀನ ಸಂಸ್ಕೃತದಲ್ಲಿ **ಕ್ರಿಯಾರ್ಥವನ್ನು ಸಂಪೂರ್ಣ ಕ್ರಿಯಾ ಪದದಿಂದಲೇ ಸೂಚಿಸುತ್ತಿದ್ದರು.** ಉದಾ: ವೈದಿಕ 'ಸಃ ಗಮುತ್' 'ಗಚ್ಛತ್' 'ಜಗಾಮ'—ಇ. ಆದರೆ, ಅನಂತರ ಇವೇ ಪ್ರಯೋಗಗಳು ಭೂತನ್ಯೂನ್ಯಗಳಾಗಿ ಗುಣವಾಚಕಗಳ ಆದೇಶವನ್ನು ಪಡೆದುವು. ಉದಾ: 'ಸಃ ಗತಃ' 'ಸಃ ಆಗತಃ' 'ಅವನು ಹೋದವನು' 'ಬಂದವನು' ಇ.

ಹಾಗೆಯೇ, ಭವಿಷ್ಯದ 'ಕರಿಷ್ಯಾಮಿ' ಸಂಪೂರ್ಣ ಕ್ರಿಯಾಪದವೂ ಕೂಡ 'ಕರ್ತಾಸ್ಮಿ' 'ಮಾಡಿದಪೆಂ' (= ಮಾಡಿ+ಇರ್ದಪೆಂ) ಎಂದಾಯಿತು. ಇದರಂತೆಯೇ ಶ್ರೀ ರಾಮಕೃಷ್ಣಯ್ಯನವರ ಪ್ರಕಾರ "ವೈದಿಕ ಸಾಹಿತ್ಯದಲ್ಲಿ ತೀರ ವಿರಳವಾಗಿ ಬರುತ್ತಿರುವ ಜೋಡು ಪ್ರತ್ಯಯವಾದ 'ತಾ-ವಂತ'— ಎಂಬದೂ ಕೂಡ, ದ್ರಾವಿಡದ 'ದವನ್'ದ ದಾರಿಯನ್ನೇ ತೋರಿಸುತ್ತದೆ" † ಉದಾ: ಸಂ. ಕೃ.— ಕೃತ-ವಂತ; ಕ, ಮಾಡು 7 ಮಾಡಿದವನ್; ತ. ಸೆಯ್ 7 ಸೆಯ್ದವನ್ ಇತ್ಯಾದಿ.

* Dravidic Studies.

† ಅದೇ

ಕರ್ಮಣಿಪ್ರಯೋಗ

" The Dravidian verb is entirely destitute of a passive voice, properly so called, nor is there any reason to suppose that it ever had a passive."

—Dr. Caldwell

" ...It is the contact with the Sanskrit, that must have introduced, the very idea of the passive into the sphere of Dravidian Linguistics. Before that, we may be sure that there was nothing, like passive, inflected or analytical in these languages."

—K. RamaKrishnayya

'ಶ್ರುತಿಸಹ್ಯಸಂಧಿ, ಸಮುಚಿತಮಾಗಿಬರ್ಪ ಸತಿಸಪ್ತಮಿ' — ಮೊದಲಾದ ಕನ್ನಡದ ವೈಶಿಷ್ಟ್ಯಗಳನ್ನು ವಿವರಿಸಿದ ಕೇಶಿರಾಜನು ಕನ್ನಡ ಕರ್ಮಣಿಪ್ರಯೋಗದ ಬಗ್ಗೆ ಗ್ರಥಿಸಲಿಲ್ಲವೆಂದೇ ಹೇಳಬೇಕು. ಅವನ ಶಬ್ದಮಣಿದರ್ಪಣದ ೨೫೭ನೆಯ ಸೂತ್ರವಾದ ಮೇಲೆ ಈ ಬಗ್ಗೆ ಒಂದು ಸೂತ್ರವು ಬರುತ್ತದೆಯೇನೋ ನಿಜ; ಆದರೆ, ಅದರ ಸಂದರ್ಭ ಮತ್ತು ರೀತಿಗಳನ್ನು ನೋಡಿದರೆ, ಅದು ಪ್ರಕ್ಷಿಪ್ತವೆಂಬುದು ಸ್ಪಷ್ಟವಾಗಿ ಕಾಣುತ್ತದೆ.

ಯಾಕಂದರೆ **ಮೊದಲನೆಯದಾಗಿ**, ಎಲ್ಲಿಯೂ ಸಂಸ್ಕೃತ ವಿವರಣೆಯನ್ನು ಆಶ್ರಯಿಸದ ಕೇಶಿರಾಜನು ಇಲ್ಲಿ ಸಂಸ್ಕೃತ ಉದಾಹರಣೆಯನ್ನು ಕೊಡುತ್ತಾನೆ.

೨. ಇದರಲ್ಲಿಯ ಅನೇಕ ದೃಷ್ಟಾಂತಗಳು ಹೆಚ್ಚಾಗಿ ಸಂಸ್ಕೃತಕ್ಕೆ ಸರಿಹೋಗುವಂತಿದ್ದು, **ಅಕರ್ಮಕಧಾತುಗಳ ಉದಾಹರಣೆಗಳೂ ಇವೆ.** ಇದು ಕನ್ನಡದ ರೀತಿಯಲ್ಲ. ಉದಾ : 'ತಾನಿರಲ್ಪಟ್ಟಂ' 'ನಾನಿರಲ್ಪಟ್ಟೆಂ' ಇತ್ಯಾದಿ. ಈ ಸಂದರ್ಭದಲ್ಲಿಯೇ ಬರುವ "ಉಪಾಧ್ಯಾಯಂ ಶಿಷ್ಯರಿಂ ತತ್ವಮಂ ಬೆಸಗೊಳಲ್ಪಟ್ಟಂ" "ಜೇಹುಕಾಜಿಂ ಅರಸನಿಂ ಸುದ್ದಿಯಂ ಕೇಳಲ್ಪಟ್ಟಂ"— ಎಂಬ ಪ್ರಯೋಗಗಳೂ ಕೂಡ ಕನ್ನಡ ಜಾಯಮಾನಕ್ಕೆ ಸರಿಹೊಂದವು.

೩. ಅಲ್ಲದೆ, ಈ ಸೂತ್ರದ ವಿವರಣೆಯಲ್ಲಿ ಬರುವ ಮಾತುಗಳು ಕೇಶಿರಾಜನ ಅನಂತರ ೧೭ನೆಯ ಶತಮಾನದಲ್ಲಿದ್ದ ಭಟ್ಟಾಕಲಂಕನ ಗ್ರಂಥದಿಂದ ತೆಗೆದುಕೊಂಡವಾಗಿವೆ.

೪. ಈ ವಿವರಣೆಯು 'ಮೂಡಬಿದಿರೆ' ಮೊದಲಾದ ಒಳ್ಳೆಯ ಹಸ್ತಪ್ರತಿಗಳಲ್ಲಿ ದೊರಕುತ್ತಿಲ್ಲ. ದೊರಕಿದ ಹಸ್ತಪ್ರತಿಗಳಲ್ಲೂ ಕೂಡ ಈ ಸೂತ್ರವನ್ನು 'ಅನುಕ್ತಸೂತ್ರ'ವೆಂದು ನಿರ್ದೇಶಿಸಲಾಗಿದೆ.*

---

* ಈ ಬಗ್ಗೆ ರಾಮಕೃಷ್ಣಯ್ಯನವರು ಹೇಳುವದೆಂದರೆ—

"In order to gain greater and earlier authority for ಕರ್ಮಣಿಪ್ರಯೋಗ in the language, as mentioned by ಭಟ್ಟಾಕಲಂಕ, some body seems to have introduced that verse in ಶ. ಮ. ದ But, is was early found-out and considered as ಅನುಕ್ತಸೂತ್ರ."

—The Dravidian Passive, P. 12

ಹಾಗಾದರೆ, ಇಷ್ಟರಮಟ್ಟಿನ 'ಶಕ್ತ್ಯಾನುಷ್ಠಾನ' ಮತ್ತು 'ನಿಜೇಷ್ಟಸಿದ್ಧಿಗಳಿದ್ದ' ಕೇಶಿರಾಜನು ಈ ಕರ್ಮಣಿಯ ಬಗ್ಗೆ ಹೇಳಲಿಲ್ಲವೇಕೆ?........**ಅವನು ಪ್ರಾಚೀನ ಸಾಹಿತ್ಯದ ಅಭ್ಯಾಸದಲ್ಲಿ ಕರ್ಮಣಿ ಪ್ರಯೋಗಗಳನ್ನು ನೋಡಿರಲೇ ಇಲ್ಲವೋ ಹೇಗೆ?—ಸ್ವತಃ ಅವನಿಗೇ ಕರ್ಮಣಿಪ್ರಯೋಗವು ಗೊತ್ತಿರಲಿಲ್ಲವೋ ಏನು?**........ಸಂಸ್ಕೃತದಲ್ಲೇನೋ ಕರ್ಮಣಿಪ್ರಯೋಗವು ಹೆಚ್ಚುಕಡಿಮೆ ಪ್ರತಿ ಹೆಜ್ಜೆಗೆ ದೊರಕುತ್ತದೆ. ಕನ್ನಡದಲ್ಲಿ ಅದರ ರೀತಿಯೇನು?—ಎಂಬುದನ್ನು ವಿಚಾರಿಸಿದರೆ, ಕನ್ನಡದಲ್ಲಿ ತೀರ ಪ್ರಾಚೀನ ಕಾಲದಿಂದಲೂ ಈ ಪ್ರಯೋಗವನ್ನಿಟ್ಟುಕೊಂಡಿದ್ದರೆಂಬುದೂ, ಮತ್ತು ಸ್ವತಃ ಕೇಶಿರಾಜನು ಕೂಡ ಇಂಥ ಅನೇಕ ಪ್ರಯೋಗಗಳನ್ನು ಹೇಳಿದ್ದಾನೆಂಬುದೂ ಸ್ಪಷ್ಟವಾಗಿ ಕಂಡುಬರುತ್ತದೆ.

ಉದಾಹರಣೆಗೆ, ಶಬ್ದಮಣಿದರ್ಪಣದ ಮೊದಲನೆಯ ಸೂತ್ರದಲ್ಲಿಯೇ 'ತತ್‌ಶಾಸ್ತ್ರಜ್ಞಾನಾರ್ಥವಾಗಿ ಪೇಟಿ**ಲ್ಪಡುಗುಂ**' ಎಂದೂ, 'ಎಯ್ದಲ್ಪಟ್ಟ' ಎಂದು ಮೊದಲಾಗಿಯೂ ಅನೇಕ ಪ್ರಯೋಗಗಳಿವೆ.

ಅಷ್ಟೇ ಅಲ್ಲ; ಕೇಶಿರಾಜನಕಿಂತ ನೂರಾರು ವರುಷಗಳ ಮೊದಲಿನಿಂದಲೂ ಈ ಪ್ರಯೋಗ ಗಳಿದ್ದುದನ್ನು ನಾವು ಸ್ಪಷ್ಟವಾಗಿ ಕಾಣಬಹುದು.

ಕವಿರಾಜಮಾರ್ಗದಕಿಂತ ಪ್ರಾಚೀನವೆಂದು ಹೇಳಲ್ಪಡುವ 'ವೊಡ್ಡಾರಾಧನೆ'ದಲ್ಲಿ—ಅರ್ಥ 'ಎ' ಕಾರವುಳ್ಳ—

'ಪುಷ್ಪವೃಷ್ಟಿಯಿಂ **ಮುಚ್ಚೆಪಟ್ಟವನಾಗಿ**'—
—'**ಕೊಲಿಪಡುವಾತಂ**'—
—'ದೇಹಧಾರಿಗಳಿಂದಂ **ಗೆಗಟಿಪಟ್ಟುದಂ**'—
—'ಅರಹಂತ ಪರಮದೇವರಾಗಮದೊಳ್ **ಪೇಟಿಪಟ್ಟ**'
—'ಪೊಲ್ಲಲಿಂಗಿಗಳ್ ಅರಸ**ಕನಳಿಂ ಪೂಜಿಸೆಪಡುವರ್**—

ಎಂದು ಮೊದಲಾಗಿ ಪ್ರಯೋಗಗಳಿವೆ.

ಇದಕ್ಕೂ ಪ್ರಾಚೀನವಾದ ಶಿಲಾಶಾಸನಗಳಲ್ಲೂ ಕೂಡ ನಾವು ಹೇರಳವಾಗಿ ಕರ್ಮಣಿಪ್ರಯೋಗ ಗಳನ್ನು ಕಾಣಬಹುದು.

ಉದಾಹರಣೆಗೆ, ಕ್ರಿ. ಶ. ೭ರ ಗೊಪ್ಪದ ಶಾಸನದಲ್ಲಿ -

'ರಾಜದಣ್ಣ**ಮುಮೆಯ್ದೆಪ್ಪಡುವಾರ್**'

ಎಂದಿದ್ದರೆ, ಕನ್ನಡದ ತೀರ ಪ್ರಾಚೀನ ಶಾಸನವೆಂದು ಹೇಳಲ್ಪಟ್ಟ ಕ್ರಿ. ಶ. ೪೫೦ರ ಹಲ್ಮಡಿ ಶಾಸನದಲ್ಲಿ,—

'ಪಶುಪತಿಯೆನ್ದು **ಪೊಗಟಿಪೊಟ್ಟಣ** ಪಶುಪತಿನಾಮಧೇಯದಾ' ಎಂದಿದೆ.

೧೭ನೆಯ ಶತಮಾನದ ಭಟ್ಟಾಕಳಂಕನು ಈ ಕರ್ಮಣಿಯ ವಿವರವನ್ನು ಹೇಳಿರುವನಷ್ಟೇ ಅಲ್ಲದೆ, ಉದಾಹರಣೆಯಾಗಿ, ಇಂದು ಉಪಲಬ್ಧವಿಲ್ಲದ '**ತಂದಿರೆ ಪಟ್ಟುದು ಬಾಲಪೋಷಕರ** ಪೀಯೂಷಂ'— ಎಂಬ ವಾಕ್ಯವನ್ನು ಹೇಳಿದ್ದಾನೆ.

ಕೇಶಿರಾಜನಕಿಂತಲೂ ಮೊದಲಿಗಿದ್ದ ಭಾಷಾಭೂಷಣಕಾರನು ಸ್ಪಷ್ಟವಾಗಿ ಕರ್ಮಣಿಪ್ರಯೋಗದ ಬಗ್ಗೆ ಹೇಳಿರದಿದ್ದರೂ, ತೃತೀಯಾವಿಭಕ್ತಿಯ ಕಾರಕದ ಬಗ್ಗೆ ಹೇಳುವಾಗ ಕನ್ನಡದಲ್ಲಿದ್ದ ಕರ್ಮಣಿ

ರೂಪವನ್ನು ಸೂಚಿಸುತ್ತಾನೆ. ಉದಾಹರಣೆಗೆ, ಭಾಷಾಭೂಷಣದ ೮೦ನೆಯ ಸೂತ್ರದಲ್ಲಿ (ಪು. ೩೧) "ಯಃ ಕ್ರಿಯಾಂ ಕರೋತಿ ಸ ಕರ್ತಾ ತಸ್ಮಿನ್ ಕರ್ತರಿ ಕರಣೇಚ ವಿವಕ್ಷಿತೇ ತೃತೀಯಾ ಭವತಿ"—ಎಂದು ಹೇಳಿ, ಪ್ರಯೋಗಕ್ಕೆ **"ದೇವದತ್ತನಿಂ ಮಾಡಲ್ಪಟ್ಟುದು"; "ಯಜ್ಞದತ್ತನಿಂ ಪೇಳಲ್ಪಟ್ಟುದು"**— ಎಂದು ಹೇಳುತ್ತಾನೆ. ಇವು ಶುದ್ಧನಾಗಿ ಇಂದಿನ ಕರ್ಮಣಿಪ್ರಯೋಗಗಳು. ಇಲ್ಲಿರುವ 'ಅಲ್+ಪಡು" ಪದದ ಪ್ರಯೋಗಕ್ಕೂ ಮತ್ತು ಹೆಚ್ಚು ಕಡಿಮೆ ಉದ್ದೇಶಾರ್ಥವನ್ನು ಹೇಳುವ ೨೨೮ನೇ ಸೂತ್ರದಲ್ಲಿಯ —ಕ್ರಿಯಾಯಾಂ ಕ್ರಿಯಾರ್ಥಾಯಾಂ **ಅಲ್**—ಎಂಬಲ್ಲಿಯ 'ಅಲ್'ಪದದ ಪ್ರಯೋಗಕ್ಕೂ ಇರುವ **ವ್ಯತ್ಯಾಸವು** ಸ್ಪಷ್ಟವಿದೆ. (ಪು. ೮೦) ಈ ಉದ್ದೇಶಾರ್ಥದ ಉದಾಹರಣೆಯಾಗಿ ನಾಗವರ್ಮನು **ಕೂಡಲೆಳಸಿದಂ**; ಮಾಡಲ್‌ಬಗೆದಂ; ಪೋಗಲ್ ಒಡರ್ಚಿದಂ—ಎಂದು ಮೊದಲಾಗಿ ಹೇಳುತ್ತಾನೆ.

ಹೀಗಾಗಿ, ಸ್ವತಃ ನಾಗವರ್ಮ ಕೇಶಿರಾಜರಿಗೆ ಕನ್ನಡದಲ್ಲಿದ್ದ ಕರ್ಮಣಿಪ್ರಯೋಗದ ವಿಷಯವು ಗೊತ್ತಿದ್ದರೂ, ಅವರು ಅದನ್ನು ಹೇಳದೆ, ಭಟ್ಟಾಕಲಂಕನು ಮಾತ್ರ ಅದನ್ನು **ಸ್ಪಷ್ಟವಾಗಿ ಹೇಳಿದನೆಂಬು** ದನ್ನು ಕಾಣುತ್ತೇವೆ. ಇದರ ಕಾರಣ ಬಹುಶಃ ಕೇವಲ ಸಂಸ್ಕೃತ ಪರಂಪರೆಯಲ್ಲಿ ಬೆಳೆದು ಸಂಸ್ಕೃತ ಭಾಷೆಯಲ್ಲಿಯೇ ಕನ್ನಡ ವ್ಯಾಕರಣವನ್ನು ಬರೆಯಲು ಹೊರಟ ಭಟ್ಟಾಕಲಂಕನ ಸಂಸ್ಕೃತ ಅಭ್ಯಾಸವೇ ಕಾರಣವೆಂದು ತೋರುತ್ತದೆ. ಪ್ರೊ. ರಾಮಕೃಷ್ಣಯ್ಯನವರು ಈ ಬಗ್ಗೆ ಹೇಳಿದ ಮಾತುಗಳು ಯಥಾ ಯೋಗ್ಯವೇ ಆಗಿವೆ—

> "He (**ಭಟ್ಟಾಕಲಂಕ**) is a great Sanskrit Scholar, who wrote his grammar of the Kanarese language in Sanskrit, and it is no wonder that he made mention of **ಕರ್ಮಣಿಪ್ರಯೋಗ** and construed the **ಅಲ್-ಪಡು** form as the form of its expression in this language." *

ಉಳಿದ ದ್ರಾವಿಡ ಭಾಷೆಗಳಲ್ಲಿ ಕರ್ಮಣಿಪ್ರಯೋಗ : ತೆಲುಗು ಭಾಷೆ

ಕನ್ನಡದ ರೀತಿ ಹೀಗಿದ್ದರೆ, ಉಳಿದ ದ್ರಾವಿಡ ಭಾಷೆಗಳಲ್ಲಾದರೂ ಕರ್ಮಣಿಪ್ರಯೋಗವಿದೆಯೇ ?– ಇದ್ದರೆ ವೈಯಾಕರಣಿಗಳು ಆ ಬಗ್ಗೆ ಏನು ಹೇಳಿದ್ದಾರೆಂಬುದನ್ನು ನೋಡೋಣ. ಈ ಕರ್ಮಣಿಪ್ರಯೋಗದ ವಿಷಯದಲ್ಲಿ ತೆಲುಗು–ಭಾಷೆಯ ಇತಿಹಾಸವು ಕೇವಲ ಕನ್ನಡದಲ್ಲಿಯಂತೆಯೇ, ಇದೆ. **ತೆಲುಗು-ಭಾಷೆಯಲ್ಲಿ ಕೆಲವುಟ್ಟಿಗೆ ಕರ್ಮಣಿಪ್ರಯೋಗವು ದೊರಕುತ್ತಿದ್ದರೂ, ಅಲ್ಲಿಯೂ ಅದಕ್ಕೆ ವ್ಯಾಕರಣದ ಮರ್ಯಾದೆ ದೊರಕಲಿಲ್ಲ.**

ಅಲ್ಲಿಯೂ ಪ್ರಾಚೀನ ವ್ಯಾಕರಣಗಳಾದ **"ಆಂಧ್ರ ಭಾಷಾ–ಭೂಷಣ"**ದಲ್ಲಾಗಲೀ, ಇಲ್ಲವೆ **"ಕಾವ್ಯಾಲಂಕಾರ ಚೂಡಾಮಣಿ"** ಯಲ್ಲಾಗಲೀ ಈ ಬಗ್ಗೆ ಯಾವ ಮಾತೂ ಬರುವುದಿಲ್ಲ. ಆದರೆ, ನಮ್ಮ "ಶಬ್ದಾನುಶಾಸನ"ದಂತೆ ಸಂಸ್ಕೃತದಲ್ಲಿ ಬರೆಯಲ್ಪಟ್ಟು, **ನನ್ನಯ** ಕವಿಯಿಂದ ವಿರಚಿತವೆಂದು ಹೇಳಲ್ಪಟ್ಟ, **"ಆಂಧ್ರಶಬ್ದಚಿಂತಾಮಣಿ"**ಯಲ್ಲಿ ಮಾತ್ರ ಇದರ ಬಗ್ಗೆ ವಿವರಣೆಯು ಬರುತ್ತದೆ. "ಚಿಂತಾಮಣಿ" ಕಾರನೂ ಕೂಡ, ತೆಲುಗಿನ ಕರ್ಮಣಿಪ್ರಯೋಗವು ಕನ್ನಡದಲ್ಲಿಯಂತೆ 'ಪಡು' ಎಂಬ "ಅನುಬಂಧ"ವನ್ನು ಪಡೆದು ರೂಪಿತವಾಗುತ್ತದೆಂದು ಹೇಳುತ್ತಾನೆ.

---

* The Dravidian Passive, P. 12.

—ಕರ್ಮಣಿ ಅನುಬಂಧಃ ಸ್ಯಾತ್ ಪತಿ ಧಾತುಃ
ಕರ್ತೃವಚ್ಛತದ್ವಿಧಯಂ *

ಆದರೆ, ಪಿ. ರಾಮಶಾಸ್ತ್ರುಲು ಅವರಿಂದ ೧೯೩೦ನೆಯ ಇಸವಿಯಲ್ಲಿ ಸಂಪಾದಿತವಾದ ಈ ಗ್ರಂಥದಲ್ಲಿ ಈ ಸೂತ್ರವೇ ಇಲ್ಲ. ಹೀಗಾಗಿ, ಪ್ರಾಚೀನ ವೈಯಾಕರಣಿಗಳಾದ ಕೇತನ ಮತ್ತು ಪೆದ್ದನರಲ್ಲಿ ಈ ವಿಷಯವು ಬರುವದಿಲ್ಲವೆಂಬ ಕಾರಣದ ಮೂಲಕವಾಗಿಯೂ, ಮತ್ತು ಈ ವಿಷಯವು ವಿವರಿಸಲ್ಪಟ್ಟ "ಆಂಧ್ರ ಶಬ್ದ ಚಿಂತಾಮಣಿ"ಯ ಹಲವು ಆವೃತ್ತಿಗಳಲ್ಲಿ ಈ ಸೂತ್ರವು ಕಂಡುಬರುವದಿಲ್ಲವೆಂಬ ಕಾರಣದ ಮೂಲಕವಾಗಿಯೂ, ಕರ್ಮಣಿಪ್ರಯೋಗಕ್ಕೆ ವ್ಯಾಕರಣದ ಮರ್ಯಾದೆಯು ದೊರಕಲಿಲ್ಲವೆಂದೇ ಹೇಳಬೇಕು. *

ಆದರೆ, ಇದರಿಂದ ತೆಲುಗು ಭಾಷೆಯಲ್ಲಿಯೇ ಕರ್ಮಣಿಪ್ರಯೋಗವು ಇರಲಿಲ್ಲವೆಂದು ಹೇಳಲಾಗದು. ಈ ಪ್ರಯೋಗವು ತೆಲುಗು ಭಾಷೆಯಲ್ಲಿ ಅನೇಕ ಸಲ ಕಂಡುಬರುತ್ತದೆ. ಉದಾಹರಣೆಗೆ, ತೆಲುಗಿನ ಆದಿಕವಿಯಾದ ನನ್ನಯನ "ಭಾರತ"ದಲ್ಲಿಯೇ, ಉಳಿದಲ್ಲಿಯಕಿಂತ ಹೆಚ್ಚಾಗಿ ಈ ಪ್ರಯೋಗವು ಕಂಡುಬರುತ್ತಿದ್ದು, 'ಭಾರತ'ದಲ್ಲಿ ಏನಿಲ್ಲೆಂದರೂ ಸುಮಾರು ಐವತ್ತು ಸಲ ಈ ಪ್ರಯೋಗವನ್ನು ಕಾಣಬಹುದು. (ಕನ್ನಡ ವೊಡ್ಡಾರಾಧಣ ನೋಡುವುದು). ನನ್ನಯನ ಕಾಲದನಂತರ ಸುಮಾರು ೧೫೦ ವರ್ಷಗಳ ಮೇಲೆ ಆಗಿಹೋದ ಕೇತನ ಮತ್ತು ಪೆದ್ದನರಲ್ಲಿ ಈ ಪ್ರಯೋಗವು ಅಷ್ಟಾಗಿ ಕಂಡುಬರುವದಿಲ್ಲ. ಕೇತನನ "ದಶಕುಮಾರಚರಿತೆ"ಯಲ್ಲಿ ಬರುವ—"**ಮಾಳವುಚೇತ ಪಟ್ಟುವಡಿ**"—(ಮಾಳವನ ಕೈಯಲ್ಲಿ ಸಿಕ್ಕಿಬಿದ್ದು) ಮೊದಲಾದ ಪ್ರಯೋಗಗಳು ನಿರ್ದಿಷ್ಟ ಕರ್ಮಣಿಯೆಂದು ಹೇಳಲಾಗದು. ಹನ್ನೆರಡು ಆಶ್ವಾಸಗಳ ಈ ಗ್ರಂಥದಲ್ಲಿ ಒಂದು ಸಲವೂ ಶುದ್ಧ ಕರ್ಮಣಿಪ್ರಯೋಗವು ಉಪಯುಕ್ತವಾಗಿಲ್ಲವೆಂಬುದು ಸ್ಪಷ್ಟವಾಗಿಯೇ ಕಂಡುಬರುತ್ತದೆ. ಕೇತನಕವಿಯಂತೆಯೇ, "ನನ್ನೆಚೋಡನ" "ಕುಮಾರ-ಸಂಭವ" ಗ್ರಂಥದ ಹನ್ನೆರಡು ಅಧ್ಯಾಯಗಳಲ್ಲಿ ಒಂದು ಸಲವೂ 'ಅನ್-ಪಡು' ಅನುಬಂಧದಿಂದ ಕೂಡಿದ ಕರ್ಮಣಿ ಪ್ರಯುಕ್ತವಾಗಿಲ್ಲ. ಈ ಮುಂದಿನ ಪ್ರಬಂಧಸಾಹಿತ್ಯದಲ್ಲೂ ಕೂಡ ಈ "ಅನ್-ಪಡು" ಅನುಬಂಧದ ಉಪಯೋಗವಿಲ್ಲ.

ಸಿದ್ಧಾಂತ

ಹಾಗಾದರೆ, ಈ ಮೇಲಿನ ವಿವರಣೆಯಿಂದ ಸಿದ್ಧವಾಗುವ ಅಭಿಪ್ರಾಯವಾದರೂ ಏನು?.... ದ್ರಾವಿಡಭಾಷೆಗಳ ಪ್ರಾಚೀನ ರೂಪಗಳನ್ನು ನೋಡಿದರೆ, ಈ ರೀತಿಯ ಪ್ರಯೋಗವು ಸಾಮಾನ್ಯವಾಗಿ ಕಡಮೆಯೆಂದೇ ಹೇಳಬೇಕು. ನಮ್ಮ ಪ್ರಾಚೀನ ವೈಯಾಕರಣಿಗಳಾದರೂ ಈ ಪ್ರಯೋಗದ ವಿಷಯವಾಗಿ ಪ್ರತ್ಯೇಕ ವಿವರಣೆ ಕೊಡುವಷ್ಟು ಇದು ಮಹತ್ವದ್ದೆಂದು ಗಮನಿಸಲಿಲ್ಲ. ಈ ರೀತಿಯ ಪ್ರಯೋಗವು ಕೇವಲ ಸಹಾಯಕ ಧಾತುಗಳಿಂದ ಮಾತ್ರ ಸಿದ್ಧವಾದುವೆಂದು ಅವರು ಗಮನಿಸಿದರು. ಅನಂತರ, ದ್ರಾವಿಡಭಾಷೆಗಳ ವ್ಯಾಕರಣದ ಮೇಲೂ ಸಂಸ್ಕೃತದ ಪರಿಣಾಮವಾದಾಗ, ವೈಯಾಕರಣಿಗಳು 'ಅನ್-ಪಡು' 'ಅಲ್-ಪಡು'

* The Dravidian Passive—K. R. ಪು. ೧೩

* From this, it may be presumed that either the ಸೂತ್ರ in question appearing in some manuscripts is a later inter polation or the work itself is a later one, especially in view of the fact that Ketana and Peddana, two early grammarians in Telugu made no mention of this Passive suffix." —The Dravidian Passive, P. 14.

ಇಲ್ಲವೆ 'ಅ–ಪಡು' ರೂಪಗಳಿಂದ ಸಾಧಿತವಾದುವು ಕರ್ಮಣಿಪ್ರಯೋಗವೆಂದು ಹೇಳಲ್ಪಟ್ಟುವು. ಈ ಬಗ್ಗೆ ಪ್ರೊ. ಕೆ. ರಾಮಕೃಷ್ಣಯ್ಯನವರು ಹೇಳಿದ ಮಾತುಗಳು ನಿಜವಾಗಿಯೂ ಮನನೀಯವಾಗಿವೆ:—

> "From this, we have to understand that though the verbal themes made by suffixing **ಪಡು** have been in use from very early times in these languages, the early grammarians do not seem to have attached any special importance or significance to them. They considered them as mere compound verbal forms in the language, and we know there are a good number of them. In fact, most of the verbal relations are expressed by the help of auxiliary roots (cf besides **ಚೇಯನ್ ಪಡು — ಚೇಯನ್ ತಾಗು** = fit to be done; **ಚೇಯನ್ — ಕೂಡು; ಚೇಯನ್ — ಕೂಡದು** etc). But, it was only in later times that owing perhaps to the overpowering influence of Sanskrit and Sanskrit grammatical forms, the **ಅನ್ — ಪಡು, ಅಲ್ — ಪಡು. ಅ — ಪಡು** forms in these languages are particularly construed as signifying the passive idea." *

ದ್ರಾವಿಡಭಾಷೆಗಳಲ್ಲಿ ಕರ್ಮಣಿಪ್ರಯೋಗವನ್ನು ನಿರ್ದೇಶಿಸುವ ಬಗೆ

ಈ ರೀತಿ ಕರ್ಮಣಿಪ್ರಯೋಗವು ದ್ರಾವಿಡ ಭಾಷೆಗಳ ಜಾಯಮಾನಕ್ಕೆ ಹೊಂದಿರದಿದ್ದರೆ, ಅದನ್ನು ಯಾವ ರೀತಿ ನಮ್ಮ ಭಾಷೆಗಳಲ್ಲಿ ನಿರ್ದೇಶಿಸುತ್ತಿದ್ದೇವೆಂಬುದನ್ನು ನೋಡೋಣ.

ಶಬ್ದಮಣಿದರ್ಪಣದ 'ಅನುಕ್ತಸೂತ್ರ'ದಲ್ಲಿ 'ಅಲ್–ಪಡು' ಪ್ರಯೋಗವನ್ನು ಮಾತ್ರ ಹೇಳಿದೆ.

ಕ್ರಿಯೆಯ ಪದಂ ತಾಂ ಕರ್ತೃಪ್ರಯುಕ್ತಮಾಗಿ,
ಎಲ್ಲಿ, ಏನ್ ಅದು ಎಂಬ ಇಚ್ಛೆಯಂ ಆಶ್ರಯಿಪುದು–
ಸಕರ್ಮಕಮ್ ಅದು; ಅದು **ಅಲ್ ಪ್ರಯುಕ್ತ**
ಪಡುಧಾತು ಸರ್ವಧಾತುಗೆ ಅಕ್ಕುಂ†

ಈ ಮಾರ್ಗವಂತೂ ಸರಿಯೇ, ಇದು ಅಲ್ಲದೆ, ಇನ್ನೂ ಹಲವು ವಿಧದಲ್ಲಿ ನಾವು ಕರ್ಮಣಿಯ ರೀತಿಯನ್ನು ಸೂಚಿಸುವುದುಂಟು. ಡಾ. ಕಾಲ್ಡ್‌ವೆಲ್ ಅವರು ಹೇಳಿವಂತೆ ಈ ಅರ್ಥದಲ್ಲಿ ಹಲವು ಸಲ ಅಕರ್ಮಕ ಕ್ರಿಯಾಪದದ ನಪುಂಸಕರೂಪವನ್ನು ಉಪಯೋಗಿಸುವುದುಂಟು. ಉದಾ:— ಮುರಿದುದು ಹರಿದುದು ಇತ್ಯಾದಿ. ಅಂದರೆ ಮುರಿಯಲ್ಪಟ್ಟುದು; ಹರಿಯಲ್ಪಟ್ಟುದು ಇ. ಇದೇ ತೆಲುಗು ತಮಿಳುಗಳಲ್ಲಿ – ಅದಿ ಪಗಿಲಿನದಿ ಉಡೈಂದುದು–ಎಂದು ಮೊದಲಾಗಿ ಪ್ರಯುಕ್ತವಾಗುತ್ತದೆ.

ಉದಾ:– ಮಾಡಿ–ಆಯಿತು; ಬಂದು–ಆಯಿತು; ಬದಿ–ಆಯಿತು– ಇತ್ಯಾದಿಯಿಂದಲೂ ಸೂಚಿಸಲಾಗುತ್ತದೆ.

ತೆಲುಗಿನಲ್ಲಿ— ಮುಡಿಂದ – ಆಯಿತ್ತು-; (having finished it is become) ತಿನಿ ಆಯಿನದಿ; = it is finished ಎಂದು ಹೇಳುತ್ತಾರೆ.

---

* The Dravidian Passive, P. 15. † ಶ. ಮ. ದ ಪು ೨೩೫

ಇದರಂತೆ, ತಮಿಳಿನಲ್ಲಿ – ಕೋವಿಲ್ ಕಟ್ಟ ಆಯಿತ್ತು —(=ಗುಡಿಕಟ್ಟ ಆಯಿತು) . ಹಲವು ಸಲ "ಆಯಿತ್ತು"ದ ಬದಲು "ಪೋಯಿತ್ತು" - ಎನ್ನುವ ಪದವೂ ಪ್ರಯುಕ್ತವಾಗುತ್ತದೆ. ಕನ್ನಡದಲ್ಲೂ ಹಲವು ಸಲ ನಾವು ಈ ಅರ್ಥದಲ್ಲಿ 'ಪೋಗು' ಪದವನ್ನು ಉಪಯೋಗಿಸುತ್ತೇವೆ. ಉದಾ: ಕಡಿದು **ಹೋಯಿತು** —"ಅವನ ಎರಡು ಕಾಲುಗಳು ಕಡಿದು ಹೋದವು" * (= ಕಡಿಯಲ್ಪಟ್ಟವು). ಹಾಗೆಯೇ "ವಾನಿ ಕಾಲ್ಲು ರೆಂಡು ಕೋಸಕೊನಿ ಪೋಯಿನವಿ" ತೆಲುಗು ಪ್ರಯೋಗ ನೋಡುವುದು.

ಹಲವು ಸಲ ಕನ್ನಡದಲ್ಲಿ 'ಕೊಳ್' ಪದವೂ ಈ ಅರ್ಥವನ್ನೇ ಸೂಚಿಸುತ್ತದೆ.† ಉದಾ: ಕಟ್ಟಿಸಿ ಕೊಂಡವನು; "ಶಾಸ್ತ್ರಕ್ರಮದಿಂ ಅಭಿವಾದನಂ ಮಾಡಿಸಿಕೊಳುವಾತನು" ಇತ್ಯಾದಿ. ತೆಲುಗಿನಲ್ಲಿಯೂ ಕೂಡ ಹಲವು ಸಲ ಈ ರೀತಿಯ ಪ್ರಯೋಗವನ್ನೇ ಕಾಣುತ್ತೇವೆ. ಉದಾಹರಣೆಗೆ ಮೇಲಿನ ಕನ್ನಡ ವಾಕ್ಯವನ್ನೇ ತೆಲುಗಿನ ಜಾಯಮಾನಕ್ಕೆ ಸರಿಯಾಗಿ ಹೀಗೆ ಭಾಷಾಂತರಿಸಬಹುದು. — "ತ್ರಾದು ಚೇತ ಕತ್ತಿಂಚು ಕೊನ್ನವಾಡು" ಇ.

ಇದರಂತೆಯೇ, "ಎನಿಸು" ಎನ್ನುವ ಪದವೂ ಈ ಭಾಷೆಗಳಲ್ಲಿ ಹಲವು ಸಲ ಕರ್ಮಣ್ಯರ್ಥವನ್ನು ಸೂಚಿಸುತ್ತದೆ. ‡ ಉದಾಹರಣೆಗೆ, ಕೇಶಿರಾಜನ ಸೂತ್ರದಲ್ಲಿ ಬರುವ ಮಾತೇ ಇದಕ್ಕೆ ದೃಷ್ಟಾಂತ—"ಆದಿಯ ಪತ್ತಕ್ಕರಮುಂ ಸಮಾನಂ **ಎನಿಸುಗುಂ**" ಇದನ್ನೇ ತೆಲುಗಿನಲ್ಲಿ—"ತೊಲಿ ಪದಿ ಅಕ್ಷರಮುಲು ಸಮಾನಾಕ್ಷರ ಮುಲು ಅನಿಪಿಂಚುಕೊನುನು" ಎಂದು ಹೇಳಬಹುದು. ಪುನಃ, ಕನ್ನಡ "ದಾನವರ ತಾಯಿ ದನು ಎನಿಕುಮ್"—ಎಂಬುದನ್ನು ತೆಲುಗಿನಲ್ಲಿ "ದಾನವುಲ ತಲ್ಲಿ ದನುವು ಅನಿಪಿಂಚುಕೊನನು." ಎಂದು ಹೇಳಬಹುದು.

ಇನ್ನೂ ಬೇರೊಂದು ರೀತಿಯೆಂದರೆ—'ಆಗು' ಪದವನ್ನು ಉಪಯೋಗಿಸುವುದು. + ಉದಾ: ಪುಸ್ತಕ ಗಳನ್ನು ತರೋಣ**ವಾಗದು** –; ತೆಲುಗು—ಪುಸ್ತಕಮು ಮುದ್ರಿಂಚುತ ಅಯಿನದಿ. ಇ.

ಇದರಂತೆಯೇ, ಇನ್ನೂ ಅನೇಕ ವಿಧವಾಗಿ ಕರ್ಮಣ್ಯರ್ಥವನ್ನು ಸೂಚಿಸುವಲ್ಲಿ ಈ ಕೆಳಗಿನ ಮುಖ್ಯ ರೂಪಗಳನ್ನೂ ನೋಡಬಹುದು –

೧. **ತಕ್ಕ**—ಉದಾ: **ತೆಲುಗು**—"ಆ ಪನಿ ಚೇಯಾನ್ ತಗುನು"— (= ಕೆಲಸವು ಮಾಡ(ಲು) ತಕ್ಕುದು)
ಕನ್ನಡ— "ಚಮ್ಮಟಿಗೆಯಿಂದ ಹೊಡೆಸಿ **ಕೊಳಲ್‌ತಕ್ಕವನು**" (= ಕೊಳ್ಳಲ್ಪಡಲು ಯೋಗ್ಯನು).
ಅದೇ **ತೆಲುಗು**— "ಕೊಟ್ಟನ್ ದಗಿನವಾಡು"

೨. **ತಿನು; ಉಣ್ಣು ಧಾತುಗಳು**— ಉದಾ ಕನ್ನಡ—"ಅವನು ಪೆಟ್ಟುತಿಂದ"
ತೆಲುಗು— ಅಡಿ ಉಂಡರ್ ವಾಡು ದೆಬ್ಬಲು ತಿನೆನು.

* K. R.—P. 16.

† "A causative verb in the past followed by the verb ಕೊಳ್ has sometimes the force of the passive in Kanarese." (ಅದೇ).

‡ "The use of the causative verb ಎನಿಸು sometimes conveys passive idea."-K. R.

+ "By adding the verb ಆಗು to verbal noun the passive idea is indicated." (ಅದೇ)

೩. **ಬೀಳ್ — ಕನ್ನಡ** "ಗುರುಪಾದಗೆ ಬಡತಬಿದ್ದವು" *
ತೆಲುಗು— ಗುರುವುವೀಡ ದೆಬ್ಬಲು ಪಡೆನು.

೪. **ಭೂತನ್ಯೂನಗಳು‡**-ಉಹಾ : **ತಮಿಳು**-ಎರುದಿನ ಪುಸ್ತಕಮ್ ಅಚ್ಚು ಅದಿತ್ತ ಪುಸ್ತಕಮ್.
ತೆಲುಗು – ವ್ರಾಸಿನ ಪುಸ್ತಕಮು (=ವ್ರಾಯಬಡಿನ ಪುಸ್ತಕಮು) ಅಚ್ಚುಕೊತ್ತಿನ **ಅಥವಾ** ಅಚ್ಚುವೇಸಿನ ಪುಸ್ತಕಮು.
ಕನ್ನಡ— ತೆರೆದ ಕಿಟಕಿ; (= ತೆರೆಯಲ್ಪಟ್ಟ ಕಿಟಕಿ)
ತೆಲುಗು — ತೆರಚಿನ ಕಿಟಕಿ; ಪಗಿಲಿನ ಕುಂಡ— ಇತಾ ದಿ.

ಸಾರಾಂಶವೇನಂದರೆ — ಈ ಮೇಲಿನ ವಿವರಣೆಯಲ್ಲಿ ದ್ರಾವಿಡ ಕರ್ಮಣಿಪ್ರಯೋಗವನ್ನು ನಮ್ಮ ಭಾಷೆಗಳ ದೇಸಿಗೆ ಅನುಸರಿಸಿ ಬೇರೆ ಬೇರೆ ಧಾತುಗಳನ್ನು ಉಪಯೋಗಿಸಿ ನಾವುಸೂಚಿಸುವದುಂಟು. **ಹೀಗಾಗಿ, ದ್ರಾವಿಡ ಭಾಷೆಗಳಲ್ಲಿ ಸಂಸ್ಕೃತದಂತೆ ಪ್ರತ್ಯೇಕ ಕರ್ಮಣಿರೂಪವೇ ಇಲ್ಲ. ಇದ್ದ ರೂಪಗಳೆಲ್ಲ ಪಡು, ತಿನ್ನು, ಉಣ್ಣು, ಮೊದಲಾದ ಸಹಾಯಕ ಧಾತುಗಳಿಂದಲೇ ಸಿದ್ಧವಾದುವು.** ಅನ್-ಪಡು ಅಥವಾ ಅಲ್-ಪಡು ರೂಪಗಳು ಕೃತಕವೆಂದು ಭಾವಿಸಿಯೋ ಏನೋ, ಈ ಭಾಷೆಗಳಲ್ಲಿ ಜನತೆ ಈ ಮೇಲಿನ ಪ್ರಯೋಗಗಳನ್ನೇ ಮಾತ್ರ ಒಡಂಬಟ್ಟರು. ಹೀಗಾಗಿ, ಕೊನೆಗೂ, ದ್ರಾವಿತ ಭಾಷೆಗಳಲ್ಲಿ ಸಂಸ್ಕೃತ ಅರ್ಥದ **ಶುದ್ಧ ಕರ್ಮಣಿಪ್ರಯೋಗವು ಇಲ್ಲವೆಂದೇ ಹೇಳಬೇಕು.** ಈ ಬಗ್ಗೆ ಪ್ರೊ. ಕೆ. ರಾಮುಕೃಷ್ಣಯ್ಯನವರು ಹೇಳಿದ ಮಾತುಗಳು ತುಂಬಾ ಮನನೀಯವಾಗಿವೆ—

"Thus it is clear that all those forms of expression which are considered as indicating or signifying the idea of the passive, are *really phrases or compound verbal forms made by the help of various auxiliary roots*.........
......The passive expression with **ಅನ್—ಪಡು** is generally considered in all these languages as a form of affectation and does not seem to have been recognised as the regular idiom of the language It appears to be one of the forms developed in course of time to express the idea of the Sanskrit Passive." ‡

ಅಂತಲೇ, ಡಾ. ಕಾಲ್ಡ್‌ವೆಲ್ ಅವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ಮೊದಲೇ ಸಾರಿಬಿಟ್ಟರು —

"The Dravidian Languages are indeed, destitute of passives properly so called; and resist every effort to bring the **ಪಡು** into general use."+

---

* "The verb **ಬೀಳ್** may be used with a noun meaning blows."

‡ "Relative participles or participal nouns are used sometimes to signify passive."

‡ The Dravidian Passive by K. R. 18 + Cald.

ತದ್ಭವಗಳು

ವಿದೇಶೀಯ ಪದಗಳನ್ನು ಸೌಂದರ್ಯಕ್ಕೆ ಬಾಧೆ ಬರದಂತೆ ತನ್ನ ಸೊಲ್ಲಿಗೆ ಅನುಗುಣವಾಗಿ ಬೇರೊಂದು ಭಾಷೆಯು ಪರಿವರ್ತಿಸಿಕೊಳ್ಳುವುದೇ ತದ್ಭವ ವಿಧಾನ. ಇದು ಯಾವಾಗಲೂ ನೈಸರ್ಗಿಕ ಕ್ರಮ. ಕನ್ನಡ ಕೋಶದ ಬೆಳವಣಿಗೆಯನ್ನು ನಿರೀಕ್ಷಿಸುವಾಗ, ಸಂಸ್ಕೃತ-ಇಂಗ್ಲಿಷುಗಳ ತದ್ಭವಗಳೂ ಕನ್ನಡದಲ್ಲಿ ಎಷ್ಟರ ಮಟ್ಟಿಗೆ ಮಹತ್ವದ ಭಾಗಗಳಾಗಿವೆಯೆಂಬುದನ್ನು ನಾವು ಈ ಮೊದಲೇ ನೋಡಿದೆವು. ಆದರೂ, ಕನ್ನಡ ವ್ಯಾಕರಣ ಗ್ರಂಥಗಳನ್ನು ಓದುವಾಗ ಈ ತದ್ಭವಗಳು ನಿಜವಾಗಿಯೂ ಸ್ವಾಭಾವಿಕವೇ? ಎಂಬ ಪ್ರಶ್ನೆಯು ಅನೇಕ ಸಲ ತಲೆದೋರದಿರದು. ಯಾಕಂದರೆ, ಈ ವೈಯಾಕರಣಿಗಳ ತಾತ್ವಿಕ ಶಿಕ್ಷಾಶಾಸ್ತ್ರದ ಗೊಂದಲದಕಿಂತ ಜನತೆ ತನ್ನದೇ ಆದ ಮಾರ್ಗವನ್ನು ಅನುಸರಿಸಿ ತದ್ಭವಗಳನ್ನು ನಿರ್ಮಿಸಿಕೊಂಡದ್ದು ಕಂಡುಬರುತ್ತದೆ. ಉದಾಹರಣೆಗೆ, ಕೇಶಿರಾಜನ ಪ್ರಕಾರ ಕಪಿಂಜಲ, ಅಗ್ನಿ, ದಿವಸ, ತೀಕ್ಷ್ಣ, ಮೂಢ ಮೊದಲಾದ ಶಬ್ದಗಳ ತದ್ಭವರೂಪಗಳು. ಕವಿಂಜಳ, ಅಗ್ಗಿ, ದೆವಸ, ತಿಕ್ಕ, ಮೋಡ—ಎಂದು ಮೊದಲಾಗಿ ಆಗುತ್ತವೆ. ಇದು ಕೇವಲ ಶಿಕ್ಷಾಸೂತ್ರದ ಡೊಂಬರಾಟವೆಂಬುದು ಯಾರಿಗೂ ತಟ್ಟನೆ ಹೊಳೆಯದಿರದು. ಅಂತಲೇ, ಸಾಮಾನ್ಯರೂ ಕೂಡ ಈ ಮೇಲಿನ ಶಬ್ದಗಳಲ್ಲಿ ತಮ್ಮ ಅನುಕೂಲತೆಗೆ ಸರಿತೋರಿದಂತೆ, **ಮೂಲದ ಸಂಸ್ಕೃತಶಬ್ದವನ್ನೇ ಇರಿಸಿಕೊಂಡೋ, ಇಲ್ಲವೆ ತಮ್ಮದೇ ಆದ ತದ್ಭವರೂಪವನ್ನು ಮಾಡಿಕೊಂಡೋ** ಈ ಸಮಸ್ಯೆಯನ್ನು ಪರಿಹರಿಸಿದರು. ವೈಯಾಕರಣಿಗಳ ಶಿಕ್ಷಾಸೂತ್ರದ ಈ ಕೆಳಗಿನ ವಾಕ್ಯದಕಿಂತ, ಜನತೆಯ ಭಾಷೆಯೇ ಬೇರೆ ಯಾಯಿತು. ಭಾಷೆಯ ಸರಳತೆಯನ್ನು ಪಡೆಯಲು ಹೊರಟ ಇದರಲ್ಲಿಯ ಎಷ್ಟೋ ಶಬ್ದಗಳು ನಮಗೆ ಇಂದು ಅರ್ಥ ಕೂಡ ಆಗಲಿಕ್ಕಿಲ್ಲ.

ಉದಾ: "ಒಂದು ಅಸಡಿಯ ಬೆಳಗು ದುಜ್ಜೋದನನು, ತನ್ನ ಸುಕುಮದೇಹದ ಕೋರನ ಕೂಡ, ಪಾಗಲದಲ್ಲಿ ಮೋರದ ಆಟವನ್ನು ಕುಡು, ಅದರ ಜುತ್ತಿಯ ಮೂಲಕ ಅದರ ಬೇರವುಳ್ಳದು ಮೋಡರ ಹಾಗೆ ತಾಣಬಟ್ಟನಾದುದನ್ನು ನೋಡಿ 'ಕೊಟ್ಟುಮ್ಮಿಗಳ ಬೇಹಾರದಲ್ಲಿ ಜುದ್ದದಕಿಂತ ಜುತ್ತಿಯೇ ಮೇಲೆಂದು' ನಿಶ್ಚಯಿಸಿ, ಭಾರತದ ಅಧಿಕನಾದ ಜಸೋಯೆಯ ಮಗನಹಾಗೆ ತಾನೂ ತಿಕ್ಕಬಿಜ್ಜೆಯವನಾದನು." — ನಿಜವಾಗಿ ಹೇಳಿರಿ. ಇದರಲ್ಲಿ ಯಾವ ಭಾಗವು ಅರ್ಥವಾಯಿತು? ಆದರೂ, ಇದು ನಮ್ಮ ಕನ್ನಡದ ಸೊಲ್ಲಿಗೆ ಅನುಗುಣವಾಗುವಂತೆ, ನಮ್ಮ ವೈಯಾಕರಣಿಗಳು ಸಂಸ್ಕೃತ ಪದಗಳನ್ನು ಮಾರ್ಪಡಿಸಿಕೊಂಡುದು. ನಾವು ಆಗಲೇ ಹೇಳಿದ ಹಾಗೆ, ಇದು 'ಶಾಸ್ತ್ರದ ಬದನೆಕಾಯಿ'; 'ಬುದ್ಧಿಯ ಡೊಂಬರಾಟ'. ಇದರಲ್ಲಿಯ ಮೂಲ ಪದಗಳು ಯಾವು ಗೊತ್ತೇ?— 'ಅಸಡಿಯ ಬೆಳಗು' 'ಪಾಗಲ (ಲ್?)' 'ಮೋರ' 'ತಾಣಬಟ್ಟ (ತಾಣಬಿಟ್ಟ?)' 'ಜುದ್ದದಕಿಂತ ಜುತ್ತಿ' — ತಿಕ್ಕಬಿಜ್ಜೆ—ಅಂದರೇನು? ತಿಕ್ಕುವ ಬಿಜ್ಜೆಯೇ? ಛೇ; ಅರ್ಥವಾಗದು. ಆದರೆ, ಇವೆಲ್ಲ ಪದಗಳು ತೀರ ನಮ್ಮ ಸಮೀಪದವು; ನಮ್ಮ ಆಪ್ತೇಷ್ಟರು. ಇಲ್ಲವೆ ನಮ್ಮ ನಿಕಟಪರಿಚಯದವರು; ವೈಯಾಕರಣಿಗಳು ಕಟ್ಟಿದ ಗಡ್ಡಮೀಸೆಗಳ ಮೂಲಕ ಇಷ್ಟು ಅಪರಿಚಿತವಾಗಿ ಕಾಣುತ್ತವೆ. ಈ ಗದ್ಯಭಾಗದ ರೂಪವು ಇಂತಿದೆ:—

'ಒಂದು (ದಿವಸ) **ಆಷಾಢದ** ಬೆಳಗು, **ದುರ್ಯೋಧನನು** ತನ್ನ **ಸೂಕ್ಷ್ಮದೇಹದ ಕುಮಾರನ ಕೂಡ, ಪ್ರಾಕಾರದಲ್ಲಿ** (ಅಯ್ಯೋ ಪಾಗಲ್?) --

ಮಯೂರದ ಆಟವನ್ನು ಕಂಡು, ಅದರ **ಯುಕ್ತಿಯ** ಮೂಲಕ ಅದರ **ವೈರವುಳ್ಳುದು** (ಜೇರ !) **ಮೂಢರ** (ಮೋಡಮುಗಿಲು !) ಹಾಗೆ **ಸ್ಥಾನಭ್ರಷ್ಟವಾದುದನ್ನು** ನೋಡಿ **ಕ್ರೂರಕರ್ಮಿಗಳ ವ್ಯವಹಾರದಲ್ಲಿ ಯುದ್ಧದಕಿಂತ ಯುಕ್ತಿಯೇ ಮೇಲೆಂದು** (ಜುದ್ದದಕಿಂತ ಜುತ್ತಿ !!) ನಿಶ್ಚಯಿಸಿ, ಭಾರತದ **ಅಧ್ಯಕ್ಷನಾದ ಯಶೋದೆಯ ಮಗನ ಹಾಗೆ ತಾನೂ ತೀಕ್ಷ್ಣವಿದ್ಯೆಯವನಾದನು** "

ಈ ವಾಕ್ಯವನ್ನು ನೋಡಿದರೆ, ಈ ' ಉಚ್ಚಾರ ಸೌಲಭ್ಯದ ' ತದ್ಭವಗಳಕಿಂತ, ಮೂಲದ ಸಂಸ್ಕೃತ ಪದಗಳೇ ನಮಗೆ ಹೆಚ್ಚು ಪರಿಚಿತವಾಗಿಯೂ, ನಮ್ಮ ಸೊಲ್ಲಿಗೆ ಹೆಚ್ಚು ಅನುಕೂಲವಾಗಿಯೂ ಇವೆ.

೨. ಹೀಗೆಂದಾಕ್ಷಣಕ್ಕೆ, ಈ ತದ್ಭವಗಳೆಲ್ಲ ಕೇವಲ ವೈಯಾಕರಣಿಗಳ ಕಲ್ಪನೆಯೆಂದು ಯಾರೂ ಗ್ರಹಿಸಕೂಡದು. ಯಾಕಂದರೆ, ಒಂದು ದೃಷ್ಟಿಯಿಂದ **ಈ ತದ್ಭವಗಳೆಲ್ಲ ಭಾಷೆಯ ಆವಶ್ಯಕ ಅಂಶಗಳು; ಅನಿವಾರ್ಯ** ಭಾಗ. ಬೆಳೆಯುತ್ತಿರುವ ಭಾಷೆಗೆ ಅನ್ಯಭಾಷಾಸಂಪರ್ಕವು ಬಂದಂತೆ, ಆ ಪರಭಾಷೆಯ ಸೊಲ್ಲನ್ನು ನಮ್ಮ ಸೊಲ್ಲಿಗೆ ಅನ್ವಯಿಸಿಕೊಳ್ಳುವುದು ಅ-ನಿವಾರ್ಯ. ಇದನ್ನು ಯಾವ ವೈಯಾಕರಣಿಯೂ ಹೇಳಿಕೊಡಬೇಕಾಗಿಲ್ಲ. ಜನತೆ ತಾನಾಗಿಯೇ ಅದನ್ನು ನಿರ್ಮಿಸಿಕೊಳ್ಳುತ್ತಿರುತ್ತದೆ. ಶಾಸ್ತ್ರಜ್ಞನು ಅವರ ಪ್ರಯತ್ನಗಳನ್ನೆಲ್ಲ ಕ್ರೋಢೀಕರಿಸಿ, ಶಾಸ್ತ್ರದೃಷ್ಟಿಯನ್ನು ಮಾತ್ರ ಒದಗಿಸಿಕೊಡುತ್ತಿರುತ್ತಾನೆ. **ಹೀಗಾಗಿ, ಬಂಗಾಲಿಗಳು** Grogram**ನನ್ನು ಗಂಗಾರಾಮನೆಂದೂ,** Ramsay**ನನ್ನು ರಾಮಸಹಾಯನೆಂದೂ ಕರೆದರು; ತಮಿಳರು ಆ್ಯಮಿಲ್ಟನ್ ಸಾಹೇಬನನ್ನು ಅಂಬಟ್ಟನನ್ನಾಗಿ ಮಾಡಿಕೊಂಡರು; ಕನ್ನಡಿಗರು ಇಂಗ್ಲಿಷದ** Time **ಅನ್ನು ' ಟೇಮು ' ಎಂದು ಮಾಡಿಕೊಂಡರೆ, ಚೀನೀ ಜನರು ಅದೇ ಪದವನ್ನು ತಮ್ಮ ಸೊಲ್ಲಿಗೆ ಅನುಗುಣವಾಗಿ ' ಟಿಮ್ ' ಎಂದು ಮಾಡಿಕೊಂಡರು. ಆಂಗ್ಲ** Anderson**ನು ಕನ್ನಡರ ಇಂದ್ರಸೇನನಾದನು.** ಹೀಗಾಗಿ, **ತದ್ಭವನಿರ್ಮಾಣಕ್ರಮವು ಯಾವುದೋ ಒಂದು ಕಾಲಕ್ಕೆ ಪ್ರಾರಂಭವಾಗಿ ಇಂದು ನಿಂತು ಹೋಗಿದೆಯೆಂದಾಗಲೀ, ಇಲ್ಲವೆ ನಮ್ಮಲ್ಲಿಯ ವೈಯಾಕರಣಿಗಳು ಮಾತ್ರ ನಿರ್ಮಿಸಿಕೊಂಡರೆಂದಾಗಲೀ ಸರ್ವಥಾ ಗ್ರಹಿಸಕೂಡದು.** ತದ್ಭವ ನಿರ್ಮಾಣವು ಇಂದಿಗೂ ನಡೆದಿದೆಯಷ್ಟೇ ಅಲ್ಲದೆ, ಈಗಲೇ ವಿವರಿಸಿದ ಚೀನೀ ಜನರಂತೆ, ಆಂಗ್ಲರೂ ಕೂಡ ನಮ್ಮ ಅನೇಕ ಭಾರತೀಯ ಪದಗಳನ್ನು ತಮ್ಮ ಸೊಲ್ಲಿಗೆ ಅನುಗುಣವಾಗಿ ಮಾರ್ಪಡಿಸಿಕೊಂಡು ತಮ್ಮ ಭಾಷೆಯಲ್ಲಿ ಸೇರಿಸಿಕೊಂಡಿದ್ದಾರೆ. **ಹೀಗಾಗಿ, ಸಂಸ್ಕೃತದ ' ಮದಿರಾ ' ಇಂಗ್ಲಿಷದಲ್ಲಿ ' ಮಡೀರಾ ' ಆಗಿಯೂ, ಕನ್ನಡ ಚಿತ್ರಕಲ್‌ದುರ್ಗವು ' ಚಿಟಲ್‌ಡ್ರುಗ್ 'ವಾಗಿಯೂ, ಸುಪ್ರಸಿದ್ಧ ಭಾರತೀಯ ರಾಜಪುತ್ರನಾದ ' ಸಿರಾಜಉದ್ದೌಲನು '** Sir Roger Dowler **ಆಗಿಯೂ ' ಯುವರಾಜನು '** 'Upper Roger' **ಆಗಿಯೂ, ಮೊಹರಮ್‌ದ ಕುಣಿತದ ಕೂಗಾದ ' ಯಾಹಸನ ಯಾಹುಸೇನ ' ಎಂಬುದು** Hobson–Jobson **ಎಂದಾಗಿಯೂ ಪರಿಣಾಮ ಹೊಂದಿದವು.***

೩. ಹೀಗಾಗಿ, ಭಾಷಾಪ್ರಗತಿಯ ಅನಿವಾರ್ಯ ಅಂಶವಾದ ಈ ತದ್ಭವವಿಧಾನವು—ಹಲಕೆಲವು

* "Upper Roger is a corruption of Sanskrit **Yuv-Rajah.** It is said to *occur in a letter dated 1755, from Captain Jackson, at Syrian in Burma.*" "Siraj Dowlah commonly called by soldiers, Sir Roger Dowler"; "Hobson Jobson is Anglo-Indian Soldiers' contribution of the Mohrrum cry 'Ya Hasan; Ya Hosain.'"
—"The Poetic Approach to Language" V. K. Gokak.

ಸಲ ಶಿಕ್ಷಾಸೂತ್ರದ ನಿಯಮಗಳನ್ನು ಅನುಸರಿಸಿಯೋ, ಹಲಕೆಲವು ಸಲ ಜನತೆ ತನ್ನ ನಿಯಮವನ್ನೇ ನಿರ್ಮಿಸಿಕೊಂಡೋ, — ಎಂದಿನಿಂದಲೂ ಕನ್ನಡದಲ್ಲಿ ನಡೆದು ಬಂದಿದೆ. ಅಂತಲೇ, ಕೇಶಿರಾಜನು ಕೂಡ —

‘ ಈಕ್ಷಿಸಿ ಶಿಕ್ಷಾಸೂತ್ರದ ಲಕ್ಷಣಮಂ
ಲೋಕರೂಢಿ ಕೆಡದವೊಲ್ ಅಱಿವರ್ ಲಕ್ಷಿಪುದು ’ — *

— ಎಂದು ಹೇಳಿದನು.

ಹೀಗಾಗಿ, ಇಂದಿನ ನಮ್ಮ ಕನ್ನಡದಲ್ಲಿ ಈ ಪದಗಳು ಸಂಸ್ಕೃತ ಮೂಲದವೆಂದು ಗುರುತಿಸದಷ್ಟು, ಇಂಥ ತದ್ಭವಗಳು ಭಾಷೆಯ ಹಾಸು–ಹೊಕ್ಕಿನಲ್ಲಿ ಸೇರಿಬಿಟ್ಟವೆ. ಉದಾಹರಣೆಗೆ, — ಹಗ್ಗ, ಸಂತೆ, ಮೆಣಸು, ಸುಣ್ಣ, ಸಂಗಡ, ಬೀದಿ, ಗಂಟು, ಸಂತೆ, ಈಬತ್ತಿ, ಹರೆಯ, ಹೈತಿಗೆ, ಮಲ್ಲಿಗೆ, ಬೂದಿ, ಸೂಜಿ, ಕರಗಸ, ಸುತ್ತಿಗೆ, ಜೀರಿಗೆ, ಬೇಸಗೆ, ಚಿತ್ರ, ಬಂಜೆ, ಬೆನಕ, ಕಂಬಳಿ, ಜಾತ್ರೆ, ಗೂಗೆ – ಈ ಮೊದಲಾದ ಪದಗಳೆಲ್ಲ ಸಂಸ್ಕೃತದಿಂದ ತದ್ಭವವಾಗಿ ಬಂದುವೆಂದು ಯಾರೂ ನಂಬುವಂತಿಲ್ಲ. ಇವು ಜನ–ನುಡಿಯಲ್ಲಿ ಇಷ್ಟರಮಟ್ಟಿಗೆ ನೈಸರ್ಗಿಕವಾಗಿ ಹೊಂದಿಕೊಂಡುಬಿಟ್ಟವೆ.

೪. ನಾಲ್ಕನೆಯದಾಗಿ, ಈ ತದ್ಭವಗಳಲ್ಲಿ ಅನೇಕ ಪದಗಳು ಪ್ರಾಕೃತಗಳ ಮೂಲಕ ಬಂದದ್ದರಿಂದ, ಅವು ಹೆಚ್ಚಾಗಿ ಇಂದಿನ ಮರಾಠಿಯ ಸಮೀಪದ ಪದಗಳಂತೆ ಕಂಡು, ಕನ್ನಡದಂತೆ ಕಾಣುವದಿಲ್ಲ ಕೂಡ. ಯಾರಾದರೂ, ಇಂದಿನ ಕಾವ್ಯಗಳಲ್ಲಿ ಈ ಪದಗಳನ್ನು ಕಂಡರೆ, ಇವು ಕನ್ನಡ ಎನ್ನುವುದಕ್ಕಿಂತ ಮರಾಠಿಯ ಪದಗಳೆಂದೇ ಹೇಳಬಹುದು. ಆದರೂ, ಪ್ರಾಕೃತದ ವರ್ಚಸ್ಸು ಇನ್ನೂ ತುಂಬಾ ಪ್ರಭಾವಶಾಲಿಯಾಗಿದ್ದಾಗ, ಕನ್ನಡದಲ್ಲಿ ಸೇರಿದ ಈ ಪದಗಳು ಇಂದು ಮರಾಠಿಯಲ್ಲಿ ಮಾತ್ರ ನಿಂತು ಕನ್ನಡದಲ್ಲಿ ಕಾಣದಾದವು. (ಈ ರೀತಿ, ಮೂಲತಃ ಕಂ–ಮರಾಠಿಯಾಗಿದ್ದ ಪದಗಳ ಅಭ್ಯಾಸವೂ ಒಂದು ಒಳ್ಳೆಯ ಉಪಯುಕ್ತವಿಷಯವಾದೀತು; ಇರಲಿ;) ಈಗ ಸದ್ಯ, ಹೀಗೆ, ಮರಾಠಿಯಲ್ಲಿ ಮಾತ್ರ ನಿಂತು ಕನ್ನಡದಿಂದ ಕಳೆದುಹೋದ ಈ ಶಬ್ದಗಳಲ್ಲಿ ೧೩ನೆಯ ಶ. ದ. ಕೇಶಿರಾಜನ ಕೋಶದಲ್ಲಿಯ ಈ ಕೆಳಗಿನವುಗಳನ್ನು ಹೇಳಬಹುದು. ಕಪ್ಪಡ–ಕಾಪಡ; ಮಂಕಡ–ಮಾಕಡ; ಗಾವ್; ಜೇವಣ, ಮೋರಾ; ಮ್ಹೈಸ; ಗಾಡಬ–ಗಾಢವ್; ಲಗನ್–ಲಗೀನ್; ಏಕಟಾ–ಝೋಂಪ 7 ಝೋಪ ಇತ್ಯಾದಿ. ಈ ಪದಗಳೆಲ್ಲ ಕೇವಲ ಶಾಸ್ತ್ರ–ಗ್ರಂಥಗಳಲ್ಲಿ ಮಾತ್ರ ನಿಲ್ಲದೆ, ಅನೇಕ ಉದ್ದಾಮಕವಿಗಳ ಹಸ್ತದಲ್ಲಿ ಕೂಡ ಚಲಾವಣೆಯ ಮಾನ್ಯತೆಯನ್ನು ಪಡೆದುವು; ಉದಾಹರಣೆಗೆ, ಪಂಪಭಾರತದ III ೩೧ರಲ್ಲಿ, ಇನ್ನೂ ಸಂಸ್ಕೃತದ ‘ ಕರ್ಪಟ ’ ಕಂಡುಬಂದರೆ— ‘ ಓರ್ವ ಪಾರ್ವಂ ವಿಸ್ತೀರ್ಣಜೀರ್ಣ ಕರ್ಪಟಾವೃತಕಟಿತಟನುಮ್ ಆಗಿ ’–ಇದೇ ಶತಮಾನದ ವೊಡ್ಡಾರಾಧಣದಲ್ಲಿ ‘ ವೈರಾಗ್ಯಪರಾಯಣರಾಗಿ ಕಪ್ಪಡಮುಟ್ಟು ’–ಎಂದೂ, ‘ ಅರ್ಧಕಪ್ಪಡಮಂ ಬಿಸುಟ್ಟು ಪಡಿಕಮಣಂಗೇಳ್ದು ’ ಎಂದೂ ಇದೆ. ೧೩ನೆಯ ಶ. ದ. ಶ. ಮ. ದರ್ಪಣದಲ್ಲಿ, ‘ ಒರ್ಪಿಡಿಗೂಳುಂ ಸಿತಗನ ಕಪ್ಪಡಮುಂ ಎಂದಿದೆ. ’

೫. ಐದನೆಯದಾಗಿ, ಈ ತದ್ಭವಗಳನ್ನು ಜನತೆಯೂ ಕೂಡ (ಇದಕ್ಕೇ Genius of Language ಎಂದು ಹೇಳಬಹುದು.) ಎಷ್ಟೋ ಸಲ ತಾನೇ ನಿರ್ಮಿಸಿಕೊಂಡಿದೆ. ಈ ರೀತಿ,

* ಸೂ ೨೯೨ – ಪು. ೨೪೦

ಶಾಸ್ತ್ರಸೂತ್ರಗಳನ್ನು ಬಿಟ್ಟು ಭಾಷೆ ತಾನೇ ತಾನಾಗಿ ಯಾವ ರೀತಿ, ಬಳೆಯುತ್ತದೆಂಬುದರ ಬಗ್ಗೆ ಪ್ರೊ. ಎಲ್. ಪಿ. ಸ್ಮಿಥ್ ಅವರು ಹೇಳಿದ ಮಾತುಗಳು ನಿಜವಾಗಿಯೂ ಮನೋಜ್ಞವಾಗಿವೆ—ಅವರು ಈ ಬಗ್ಗೆ ಶಕ್ತಿಯುತವಾಗಿ ಹೇಳುವದೇನಂದರೆ - *

> "Behind all the phenomena of changing form, we are aware of the action of a purpose, an intelligence, incessently modifying and making use of this decadence of sound, *this wear and tear of inflexions, and patently forging for itself, out of the debris of grammatical ruin, new instruments...... for expression of every shade of meaning.*"

ಈ ಪ್ರಕಾರ, ವೈಯಾಕರಣಿಗಳ 'ಗ್ರಹಣದ' 'ಗರಣ'ವನ್ನು ಬಿಟ್ಟು 'ಗ್ರಾಣ'—ಎಂಬುದನ್ನೂ; 'ಛತ್ರಿಕಾ'ದ 'ಸತ್ತಿಗೆ'ಯನ್ನು ಬಿಟ್ಟು 'ಛತ್ತರಿ' 'ಛತ್ತರಿಗೆ'ಗಳನ್ನೂ; 'ಹೃದಯ' 'ಹೆದೆಯ'ದ ಬದಲು, 'ಎದೆ'ಯನ್ನೂ; 'ವೃದ್ಧಿ,' 'ವ್ಯವಹಾರ,' 'ವಿಷ,' 'ಸ್ಫಟಿಕ,' 'ಪ್ರತಿಷ್ಠ,' 'ಕೂರ್ಪಾಸ'–ಈ ಮೊದಲಾದ ಶಬ್ದಗಳಿಗೆ, 'ವಿದ್ದಿ' 'ಬೇಹಾರ' 'ಬಿಸ' 'ಪಳಿಕ' 'ಹದಿಟಿ' 'ಕುಪ್ಪಸ'ಗಳ ಬದಲು, ಹೆಚ್ಚು ನೈಸರ್ಗಿಕವಾದ 'ರಿದ್ದಿ' 'ಯವಾರ' 'ಇಸ' 'ಫಟಕ' 'ಪರ್ತಿಷ್ಟಾ' ಮತ್ತು 'ಕುಬಸ' –ಎಂಬ ಪದಗಳನ್ನೂ ಜನತೆ ನಿರ್ಮಿಸಿಕೊಂಡಿತು.

೬. **ಆರನೆಯದಾಗಿ,** ಕನ್ನಡ ತದ್ಭವಗಳಲ್ಲಿ ಹೇಳಿದ ಜಣ್ಣೋ, ಪೆಕ್ಕಣ, ದೆಖ್ಖಾಣ (ದೇಖಣೇ ಮರಾಠಿ); ಪಖ್ಖಳ, ಸಕ್ಕಿದಾಡಿ– ಮೊದಲಾದವು ಇನ್ನೂ ಪ್ರಾಕೃತದ ದಾರಿಯಲ್ಲಿ ಕಂಡುಬರುವ ಸಂಸ್ಕೃತ ಪುರುಷನ ಹೆಜ್ಜೆಗಳಾಗಿವೆ. ವೊಡ್ಡಾರಾಧಣವಂತೂ ಹಲಕೆಲವು ಸಲ ಪ್ರಾಕೃತದಂತೇ ಕೇಳಿಸುತ್ತದೆ. "ಎಮ್ಮ ಪಚ್ಚಖ್ಖಾಣಂಗೊಟ್ಟು," "ಝುಣಂಬು;" "ಪಡಿಗಹ ಮುಚ್ಚತ್ಥಾಣಮೆಂದೀವೊಂಬತ್ತು ತೆರದಿಂದಂ ಪುಣ್ಯಮಂ ಕೈಕೊಂಡು"

೭. **ಏಳನೆಯದಾಗಿ,** ಕೇಶಿರಾಜನು ಸಂಸ್ಕೃತ ತದ್ಭವಗಳೆಂದು ಎಲ್ಲ ಪದಗಳೂ ತೀರ ನಿರ್ದುಷ್ಟವಾಗಿವೆಯೆಂದು ನಾವು ನಂಬಕೂಡದು. ಇಂದಿನ ಹೆಚ್ಚಿನ ಅಭ್ಯಾಸ ಮತ್ತು ತುಲನಾತ್ಮಕ ಭಾಷಾಶಾಸ್ತ್ರದ ಅರಿವು ಕೇಶಿರಾಜನು ಹೇಳಿದ ಎಷ್ಟೋ ವಿಷಯಗಳು ಸರಿಯಲ್ಲವೆಂಬುದನ್ನು ತೋರಿಸಿಕೊಟ್ಟವೆ.

ಉದಾಹರಣೆಗೆ, ಕೇಶಿರಾಜನ ಪ್ರಕಾರ–ಅಡವಿ, ಗುಡಿ, ಕೋಳಿ, ಕನ್ನಡ, ಗೋಡೆ–ಸುಂಟ ಮೊದಲಾದ ಶಬ್ದಗಳು, ಅಟವಿ, ಕುಟಿ, ಕುಕ್ಕುಟ, ಕರ್ಣಾಟಕ, ಕೋಟಾ—ಈ ಮೊದಲಾದ ಶಬ್ದಗಳಿಂದ ಬಂದುವು. ಆದರೆ, ಡಾ. ಕಾಲ್ಡವೆಲ್ಲರ ಪ್ರಕಾರ ಈ ಪದಗಳೆಲ್ಲ ಶುದ್ಧ ದ್ರಾವಿಡ—

'ಕುಡಿ –Habitation. Tam ಕುಡಿಲ್ 7 ಕುಡಿಸ್ಸೈ (ಕ. ಗುಡಿಸಲು) from ಕುಡ್ or ಕೂಡು= to come together—

'ಕೋಳಿ' ಪದವು ಕೇವಲ ಕನ್ನಡದಷ್ಟೇ ಅಲ್ಲದೆ, ತಮಿಳು (ಕೋಜಿ); ತುಳು (ಕೋರಿ); ತೆಲುಗು (ಕೋಡಿ); ಗೊಂಡ (ಕೋರ್); Vogue (ಕೋರಿ)—ಮೊದಲಾದ ಭಾಷೆಗಳಲ್ಲಿ ಬೇರೆ ಬೇರೆ ರೂಪದಲ್ಲಿ ಕಂಡುಬರುತ್ತದೆ.

* "The English Language" by L. P. Smith, P. 13

ಈ ಬಗ್ಗೆ ಡಾ. ಕಾಲ್ಡ್‌ವೆಲ್ ಅವರು ಬರೆಯುವದೇನಂದರೆ—

"It looks as if the North Asian tongues *borrowed this word directly from the Dravidian. The name being not Sanskrit but Dravidian it would almost appear as if the domestic fowl had been introduced from India into Central and North Asia prior to the irruption into India of the Aryan Race.*"†

ಕಾಜು, ಕಾಜಿನಿಂದ ಬಂದಿರದೆ, ಪರ್ಶಿಯನ್ 'ಕಾಝುಞ್'ದಿಂದ ಬಂದಿತೆಂದು ಪಂಡಿತರು ಹೇಳುತ್ತಾರೆ. ಪ್ರೊ. ಚೆನ್ನಕೇಶವ ಅಯ್ಯಂಗಾರ ಅವರ ಪ್ರಕಾರ, ಹಗ್ಗ, ನೊಗ ಅರಸು ಮೊದಲಾದ ಪದಗಳು ಸಂಸ್ಕೃತ ದಿಂದ ಬಾರಿರದೆ, ದ್ರಾವಿಡ ಭಾಷೆಗಳಿಂದಲೇ ರೂಪಾಂತರವನ್ನು ಪಡೆದುವು.

ಕೇಶಿರಾಜನು ಹೇಳಿದ ಪ್ರಕಾರ 'ಉದ್ದ' ಪದವು ಸಂಸ್ಕೃತ 'ಉಚ್ಚ'ದಿಂದ ಬಂದಿತೆಂದು ಹೇಳುವದ ಕ್ಕಿಂತ 'ಊರ್ಧ್ವ'ದಿಂದ ಬಂದಿತೆಂದು ಹೇಳುವುದು ಹೆಚ್ಚು ಸೂಕ್ತವಾಗುವುದು.

ಒಟ್ಟಾರೆ, ಸಾರಾಂಶವೇನಂದರೆ– ತದ್ಭವಗಳು ಭಾಷೆಯ ಬೆಳವಣಿಗೆಯಲ್ಲಿ ಆವಶ್ಯಕ; ಅ–ನಿವಾರ್ಯ. ಅವನ್ನು ಎಲ್ಲ ಭಾಷೆಯವರೂ ನಿರ್ಮಿಸಿಕೊಳ್ಳುತ್ತಿರುತ್ತಾರೆ. ಕನ್ನಡದ ಈ ತದ್ಭವಗಳು ಎಷ್ಟೋ ಸಲ ತೀರ ಮರಾಠಿಯ ಸಮೀಪಕ್ಕಿದ್ದು ಇಂದು ಕನ್ನಡದಲ್ಲಿ ನಿಂತುಹೋದದ್ದರ ಮೂಲಕ ಮರಾಠಿ ಪದಗಳೇ ಎಂದು ಭಾಸವಾಗುವಂತಿವೆ. ಎಷ್ಟೋ ಸಲ ಜನತೆಯು ಕೂಡ ಈ 'ಶಿಕ್ಷಾ—ಶಾಸ್ತ್ರ'ವನ್ನು ಬದಿಗಿರಿಸಿ, ತನ್ನ ರೀತಿಯಲ್ಲೇ ಹಲವಾರು ಪದಗಳನ್ನು ನಿರ್ಮಿಸಿಕೊಂಡಿದೆ. ಇಂದಿನ ಹೆಚ್ಚಿನ ಅಭ್ಯಾಸ ಮತ್ತು ತುಲನಾತ್ಮಕ ಭಾಷಾಶಾಸ್ತ್ರದ ಮೂಲಕ ಕೇಶಿರಾಜನು ಹೇಳಿದ ಎಷ್ಟೋ ತದ್ಭವಗಳ ಬಗ್ಗೆ ಇರುವ ಅಭಿಪ್ರಾಯವನ್ನು ನಾವಿಂದು ಬದಲಿಸಬೇಕಾಗಿದೆ.

---

† Cald. P. 619.

ಪರಿಶಿಷ್ಟ : ಒಂದು

ಸಂಸ್ಕೃತ ಭಾಷೆಯಲ್ಲಿರುವ ದ್ರಾವಿಡ ಶಬ್ದಗಳು

ಸಂಸ್ಕೃತ ಭಾಷೆಯಲ್ಲಿರುವ ಹಲವು ದ್ರಾವಿಡ ಪದಗಳನ್ನು ಈಗಾಗಲೇ ಎರಡನೆಯ ಪ್ರಕರಣದಲ್ಲಿ ನೋಡಿದ್ದೇವಷ್ಟೇ. ಈ ಕೆಳಗೆ ಇನ್ನೂ ಹಲವು ಹೆಚ್ಚಿನ ಶಬ್ದಗಳನ್ನು ಕೊಟ್ಟಿದೆ. ಡಾ. ಗುಂಡರ್ಟ ಅವರ ಪ್ರಕಾರ ಸಂಸ್ಕೃತದಲ್ಲಿಯ ಈ ಕೆಳಗಿನ ಶಬ್ದಗಳು ದ್ರಾವಿಡವಾಗಿವೆ.

ಕರವಾಲ=ಕೆಯ್‌ಬಾಳ್ (ಬಾಳ್=ಖಡ್ಗ)

ಕುಂಡ=ತೂತು; ಹೋರು. ತ–ಕುಂಡು; ತೆ–ಗುಂಡ; ಕ–ಗುಣಿ; ಕುಣಿ

ಕೇ–ಯೂರ=ಆಭರಣ ವಿಶೇಷ ∠ ಕೆಯ್ಯ–ಉಜು (= ತೋಳಬಂದಿ)

ಘೋಟಾ— ∠ ತೆ–ಗುರ್ರ್ಮು; ತ–ಕುದಿರೈ; fr. ಕುಡಿ to leap

ಪುತ್ರ fr. ಪುದ್=ಹೊಸ

ಮರ್ಕಟ— ∠ ಮರ.

ಫಲ—fr. ಪಜ್ to be old

ರಾತ್ರಿ—fr. ಇರಾ, ಇರವು; ತೆ. ರೇ–ಇರ್ ಧಾತು=ಕತ್ತಲಾಗು cf. ಇರುಳು

ಶೃಂಗವೇರ=Ginger cf. ಇಂಜಿ ಅಥವಾ ಇಂಚಿ ತ. ಮ; ಕ–ಶುಂಠಿ; 'ಗ್ರೀಕರು ಮೊದಲು ಮಲಬಾರದಿಂದ ಇದನ್ನು ತರಿಸುತ್ತಿದ್ದರು.' cf. Dr. Burnell, Ind. Ant. Nov. 1872

ರೂಪ fr. ತ–ಉರುಪ್ಪು

ಖೇದ fr. ಕೆಡು–ಕಿಡು; ತೆ–ಚೇಡು; ಗ್ರೀಕ್–'ಚೆಡೋಸ್' ಇ.

ಶ್ರವ (ಶ್ರವಣ) fr. ತ–ಶೆವಿ; ಚೆವಿ; ತೆ. ಕ–ಕಿವಿ; ತು–ಕೆಪ್ಪಿ; ಸಂ–ಶ್ರವ

ವಲ್ (ವಲಯ) fr. ಬಳೆ

ಬಲ fr. ವಲ್ಮೈ

ಪರಿಶಿಷ್ಟ : ಎರಡು

ಸಂಸ್ಕೃತೇತರ ಆರ್ಯ ಭಾಷೆಗಳಲ್ಲಿಯ ಹಲವು ದ್ರಾವಿಡ ಪದಗಳು

ಡಾ. ಕಾಲ್ಡ್‌ವೆಲ್ ಅವರ ಪ್ರಕಾರ ಈ ಕೆಳಗಿನ ಪದಗಳು ಈ ವರ್ಗಕ್ಕೆ ಸೇರಿದುವು—

Pea fowl=ನವಿಲು, fr. ತ. ತುಕ್ಕೈ=ನವಿಲು fr. ತೂಗು=ಜೋಲು; cf. ತೂಕಿ Hebrew (1000 B. C.); Arabic–Tawas; Grk.–Tawos (Taos); Lat.–Pavo and Eng.–Pea-fowl.)

Rice— 7 ತ–ಅರಿಶಿ; ಮ–ಅರಿ; ಕ–ಅಕ್ಕಿ; Grk.–"Oruza".

Camphor 7 ಸಂ–ಕರ್ಪೂರ; Grk–Karpion; Arabic–Kerfa; ತ. ಮ–ಕರುಪ್ಪು.

Want— 7 A. S. 'Wanian'; 7 ಕ. ತ–ವೇಳ್.

Various 7 Lt. 'Var-us'; 7 ಕ. ತ–ಬೇರೆ; ವೇರು.

"I am quite aware of the danger of mistaking accidental assonances for proofs of relationship."—

ಎಂದು ಡಾ. ಕಾಲ್ಡ್‌ವೆಲ್ ಅವರು ಹೇಳಿದ್ದನ್ನೂ ಈ ವಿಷಯದಲ್ಲಿ ಲಕ್ಷ್ಯದಲ್ಲಿಡಬೇಕು.

ಪರಿಶಿಷ್ಟ : ಮೂರು

ದ್ರಾವಿಡ ಭಾಷೆಗಳಲ್ಲಿಯ ಸಾಮಾನ್ಯ ಪದಗಳು

ದ್ರಾವಿಡ ಭಾಷೆಗಳಲ್ಲಿಯ ಕೋಶದ ಮೂಲಭೂತವಾದ ಹಲವು ಶಬ್ದಗಳನ್ನು ಈ ಮೊದಲೇ ನಿರ್ದೇಶಿಸಿದೆಯಷ್ಟೇ. ಇನ್ನೂ ಹಲವನ್ನು ಈ ಕೆಳಗೆ ಕೊಟ್ಟದೆ.

ದೇಹದ ಅಂಗಸೂಚಕ ಪದಗಳು

ತಮಿಳು	ತೆಲುಗು	ಕನ್ನಡ	ಮಲಯಾಳಮ್	ಮೂಲ ಧಾತು
ತಲೈ	ತಲ	ತಲೆ	ತಲ	ತಲ
ನೆಜಿ ಜಿ	ನೆತ್ತಿ	ನೆತ್ತಿ	ನೆಜಿ ಜಿ	ನೆಂ (ಸೆಟೆದು ನಿಲ್ಲು)
ನುದಲ್	ನುದುರು; ನೊಸಲು	ನೊಸಲ್	ನುದಲ್	
ಮೂಂಜಿ	ಮೂತಿ; ಮುಟ್ಟಿ	ಮೂತಿ; ಮುಸಡೆ	ಮುಚ್ಚಿ; ಮುನ್ನಿ	
ವಾಯ್	ವಾಯಿ; ವಾ	ಬಾಯ್; ಬಾಯಿ	ವಾಯ್	
ಕಳುತ್ತು	ಕುತ್ತು; ಕುತ್ತಿಕ	ಕತ್ತು; ಕುತ್ತಿಗೆ	ಕಳುತ್ತು	
ಕುರುಲು	ಗೊಂತು	ಕೊರಲ್	ಕುರಲ್, ಕುಳಲ್	
ಕಣ್	ಕನು; ಕನ್ನು	ಕಣ್	ಕಣ್	
ಇರಪ್ಪೆ	ರೆಪ್ಪ	ರೆಪ್ಪೆ; ರಪ್ಪೆ	—	
ಮೂಕು; ಮೂಕ್ಕು	ಮುಕ್ಕು	ಮೂಗು	ಮೂಕು; ಮೂಕ್ಕು	
ನಾಕ್ಕು; ನಾವು; ನಾ	ನಾಲುಕು; ನಾಲ್ಕ	ನಾಲಗೆ	ನಾಕ್ಕು; ನಾವು	
ಚೆವಿ	ಚೆವಿ	ಕಿವಿ	ಚೆವಿ	ಕೇಳ್ 7 ಕೇಳ್ವಿ
ಪಲ್	ಪಲ್ಲು; ಪನ್ನು	ಪಲ್ಲು; ಹಲ್ಲು	ಪಲ್ಲು	
ಕುರಲ್; ಕುರುಳ್; ಚುರುಳ್	ಕುರುಲು; ಜುಟ್ಟು	ಕುಗುಳ್; ಕುರುಳು	ಚುರುಳ್	ಚುರುಳ್; ಸುರುಳ್
ಕೈ	ಕೈ; ಕಯಿ; ಚೇಯಿ	ಕೈ; ಕೆಯ್; ಕಯ್	ಕೈ	∠ಕೆಯ್=ಮಾಡು
ವಿರಲ್	ವ್ರೇಲು; ವೇಲು	ಬೆರಲ್	ವಿರಲ್	∠ವಿರಿ–ಬಿರಿ=ιo burst open
ಉಗಿರ್	ಗೋರು	ಉಗುರು	—	ಕೀರು ಅಥವಾ ಗೀರು

ತಮಿಳು	ತೆಲುಗು	ಕನ್ನಡ	ಮಲಯಾಳಮ್	ಮೂಲ ಧಾತು
ಕೈಕ್ಕುಳಿ	ಚಂಕಿಲಿ; ಚಕ್ಕಿಲಿ;	ಕವುಂಕುಳ್	—	ಕೈ+ಕುಳಿ ಸಮಾಸ (ಕನ್ನಡ ಕಂಕುಳ ನಿಜವಾಗಿ ಸಮಾಸ!)
ಕೊಪ್ಪೂಳ್; ಪೋಕಿಲ್	ಪೊಕ್ಕಿಲಿ	ಪೊರ್ಕುಳ; ಹೊಕ್ಕಳ	ಪೊಕ್ಕಿಳ್	ಕವುಂಕುಳದ ಹಾಗೆ ಕನ್ನಡ ಹೊಕ್ಕಳವೂ ಸಮಾಸವೇ. ಇದನ್ನು ಪೊಯ್+ಕುಳಿ ಅಂದರೆ ಪೊಳ್ಳಾದ ತಗ್ಗೆಂದು ಕರ್ಮಧಾರಯವಾಗಿ ಡಾಕ್ಟರ್ ಕಾಲ್ಡವೆಲ್‌ರೂ, ಪೊರ್+ಕುಳಿ ಅಂದರೆ (ಕೂಸನ್ನು) ರಕ್ಷಿಸುವ ತಗ್ಗೆಂದು ಡಾ. ರಾಮಕೃಷ್ಣಯ್ಯ ಅವರೂ ಬಿಡಿಸುತ್ತಾರೆ.
ತೋಲ್	ತೋಲು	ತೊಗಲ್; ತೊವಲ್ ತೋಲ್	ತೋಲ್	∠ ತೋಗು=ಕೂಡಿರು
ಉಡಲ್	ಒಡಲು	ಒಡಲ್	ಉಡಲ್	∠ ಉಡಿ=ಒಡೆ
ಮೆಯ್	ಮೆಯಿ; ಮಾಯಿ	ಮೈ	ಮೆಯ್	
ಮೇನಿ	ಮೇನು	—	ಮೇನಿ	
ಅಂಕೈ	ಅಱಚೆಯ್ ಲೋಚೆಯಿ	ಅಂಗೈ	ಅಂಕೈ	ವೈಯಾಕರಣಿಗಳು ಇದನ್ನು 'ಕೈಯ ಅಡಿ'= ಅಂಗೈ ಎಂದು ಅಂಶಿಸಮಾಸವಾಗಿ ಬಿಡಿಸಿದರು. ಆದರೆ, ಆಧುನಿಕ ಭಾಷಾಶಾಸ್ತ್ರಜ್ಞರ ಪ್ರಕಾರ ಈ ಸಮಾಸದ ವಿಗ್ರಹವು ಅಗಮ್ + ಕೈ = ಉಳ್ಳಮ್ + ಕೈ= ಅಱ + ಚೆಯ್ = ಕೈಯ ಒಳಗು.
ಮಣಿಕಟ್ಟು	ಮಣಿಕಟ್ಟು	ಮಣಿಗಂಟು	ಮಣಿಕಂಟಮ್	
ವೆನ್	ವೆನ್ನು	ಬೆನ್	—	
ವೆರಿನ್	ವೀಪು	ಬೆನ್ನು	—	

ತಮಿಳು	ತೆಲುಗು	ಕನ್ನಡ	ಮಲಯಾಳಮ್	ಮೂಲ ಧಾತು
ಪುಱ	ಪಿಱುಂದ; ಪಿಱುದು	ಪಿಱಿದು	ಪೂಱ; ಪೂನಲ್	∠ಪಿನ್ ಅಥವಾ ಪಿಱ್ (ಪಿಂದು, ಪಿಂತು)
ತೊಡೈ	ತೊಡ	ತೊಡೆ	ತುಟ	∠ತೊಡು=ಕೂಡಿಕೊಳ್ಳು
ಕಟಲ್; ಕಾಲ್	ಕಾಲು	ಕಾಲ್; ಕಾಲು	ಕಾಲ್	∠ಕಟಲ್ or ಕಾಲ್= ಸಡಿಲಾಗು
ಅಡಿ	ಅಡುಗು	ಅಡಿ	ಅಟಿ	∠ಅಳ್ or ಆಳ್=to be pressed
ಮುೞಂಕಾಲ್	ಮೋಕಾಲು ಮುಡುಮು	ಮೊಳಕಾಲು ಮೊಣಕಾಲು	ಮುಟಿಕ್ಕಾಲ್	
ಮುೞಂಕೈ	ಮೋಚೇಯಿ	ಮೊಳಕೈ; ಮೊಣಕೈ	—	∠ಮೂೞಿ=Joint
ಉಡೈ	ಒಡಿ	ಉಡೆ (ಉಡೆನೂಲು; ಉಡೆದಾರ–ಇ.)	ಒಟಿ	∠ಉಡು=ಧರಿಸು
ಎಲುಂಬು	ಎಮ್ಮು	ಎಲು; ಎಲುಬು	ಎಲುಂಬು	
ಎನ್ಬು	ಎಮುಕ	ಎಲುವು	ಎಲ್ಲು	
ಉಯಿರ್	ಉಸುರು; ಊಪಿರಿ ಊರ್ಪು	ಉಸಿರ್; ಉಸಿರು	ಉಯಿರ್	∠ಊಸು; ಊದು = to blow
ನೆಯ್‌ತ್ತೋರ್	ನೆತ್ತುರು	ನೆತ್ತರ	ನಿಣಮ್	
ನರಂಬು	ನರಮು	ನರ; ನರವು	ನಾರಂಬು	
ಉಳ್ಳಮ್	ಉಲ್ಲಮು	ಉಳ್; ಒಳಗು	ಉಳ್ಳಮ್	∠ಉಳ್=inside
ಇಱೈಚ್ಚಿ	ಎಱಚಿ	—	ಇಱಚ್ಚಿ	
ಇಱೈ	ಎರ	ಎಡೆ	ಇರೆ; ಎರೆ	
ಕೊೞುಪ್ಪು	ಕ್ರೊವ್ವು	ಕೊೞ್ಬು; ಕೊಬ್ಬು	ಕೊೞುಪ್ಪು	
ಪಿಣ	ಪೀನಿಗ; ಪೀನುಗ	ಪೆಣ	ಪಿಣಮ್	
ಕುರುಡು	ಗ್ರುಡ್ಡಿ	ಕುರುಡು	ಕುರುಟು	
ಚೆವುಡು; ಚೆವಿಡ	ಚೆವುಡು	ಕಿವುಡು	ಚೆಗುಡ	∠ಕಿವಿ+ಇಡ್= ಕಿವಿ + ಇಲ್ಲುದು. ಹಲವರ ಪ್ರಕಾರ ಕಿವಿ + ಉಡಿದುದು.
ಮೂಕ್ಕಿಲಿ	ಮುಕ್ಕಿಡಿ	ಮೂಗಿಲಿ	—	
ಊಮೈ	ಮೂಗ	ಊಮೆ; ಮೂಕ	ಊಮ	
ನರೈ	ನರ	ನೆರೆ	ನರ	

ತಮಿಳು	ತೆಲುಗು	ಕನ್ನಡ	ಮಲಯಾಳಮ್	ಮೂಲ ಧಾತು
ವಯಿಱು	ಬೊಜ್ಜ	ಬಸಿರು	ವಯಱು	
ನಡು	ನಡಮು	ನಡು	ಇಡ	
ಕನ್ನ	ಚೆಕ್ಕು; ಚೆಕ್ಕಿಲಿ	ಕೆನ್ನೆ; ಕೆಕ್ಕೆ	ಕೆನ್ನಿ; ಕೊನ್ನಿ; ಕೊಮೆ; ಚೆಪ್ಪಿ	
ಉಡದು, ಇದಟ್	ಔಡು	ಅವುಂಡು	—	
ಇಱಕು; ಇಱಕ್ಕೈ	ಎಱಕ; ಱೆಕ್ಕ	ಎಱಂಕೆ; ರೆಕ್ಕೆ	ಇಱಹು	∠ ಇಱ = to pass beyond
ಕೊಂಬು; ಕೋಡು	ಕೋಮು; ಕೋಡು	ಕೊಂಬು; ಕೋಡು	ಕೊಂಬು	∠ ಕೊಂಕು=to bend
ತೋಗೈ	ತೋಕ; ತೋಂಕ	ತೋಕೆ; ಸೋಗೆ	ತೋಗೆ	∠ ತೋಗು or ತೂಗು

ಉಳಿದ ಹೆಚ್ಚಿನ ಪದಗಳ ಬಗ್ಗೆ ಪ್ರೊ. ಕೆ. ರಾಮಕೃಷ್ಣಯ್ಯ ಅವರ "Dravidian cognates" ನೋಡುವುದು.

ಪರಿಶಿಷ್ಟ : ನಾಲ್ಕು

ಆರ್ಯ ಭಾಷೆಗಳಲ್ಲಿ ಕಂಡುಬರುವ ಆಸ್ಟ್ರಿಕ್ ಅಂಶಗಳು

ಆರ್ಯರು ಭಾರತಕ್ಕೆ ಬರುವ ಮೊದಲೇ, ಇಲ್ಲಿ ದ್ರಾವಿಡರು ಮತ್ತು ಅವರ ಸಮಕಾಲೀನರಾಗಿಯೇ, ಅಥವಾ ಅದಕ್ಕೂ ಪೂರ್ವದಿಂದಲೋ ಆಃಸ್ಟ್ರೋ—ಏಶಿಯಾಟಿಕ್ ಜನಾಂಗದವರು ವಾಸಿಸುತ್ತಿದ್ದರು. ಇಂದಿಗೂ ಬ್ರಿಟಿಶ್ ಮಲಯದ ಗುಡ್ಡುಗಾಡು ಜನರಾದ, 'ಸಕಾಯ್' 'ಸೆಮಾಂಗ,' ಮತ್ತು 'ಖಾಸಿ,' 'ನಿಕೋಬಾರಿ' 'ಇಂಡೋನೇಶಿಯಾ' ಮೊದಲಾದ ಪ್ರದೇಶಗಳಲ್ಲಿಯ ಭಾಷೆಗಳನ್ನಾಡುವ ಜನರು ಈ ಜನಾಂಗಕ್ಕೇ ಸೇರಿದವರು. ಸ್ವಾಭಾವಿಕವಾಗಿಯೇ, ಇವರ ಅನೇಕ ಅಂಶಗಳೂ ಆರ್ಯ ಭಾಷೆಗಳಲ್ಲಿ ಸೇರಿದುವೆಂದು ಪ್ರೊ. ಸಿಲ್ವೇನ್ ಲೆವಿ; ಜೆ. ಪ್ರಿಝುಲುಸ್ಕಿ; ಮತ್ತು ಜೂಲ್ಸ್ ಬ್ಲಾಃಕ್ ಅವರ ಅಭಿಪ್ರಾಯ.

ಈ ಪಂಡಿತರ ಪ್ರಕಾರ ಈ ಕೆಳಗಿನ ಅಂಶಗಳು ಆಸ್ಟ್ರೊ—ಏಶಿಯಾಟಿಕ್ ಪ್ರಭಾವ. ಈ ಭಾಷೆಗಳನ್ನು ಆಡುವ ಹಲವು ಅನಾಗರಿಕರನ್ನು ಇಂದಿಗೂ ಉತ್ತರ-ಹಿಂದುಸ್ಥಾನದ ಹಲವು ಭಾಗಗಳಲ್ಲಿ ಕಾಣಬಹುದು:—

ಸಂಸ್ಕೃತ—ಲಿಂಗ; ಲಾಂಗಲ; ತಾಂಬೂಲ; ಕದಳಿ; ಬಾಣ;* ಪಿನಾಕ (ಸ್ಟೇಂಗ್—ಅಕ್; ಸೆಮಾಂಗ್ 'ಆಗ್;' ಮಲಯ 'ಅನಾಕ್'—ಇತ್ಯಾದಿ);

ಕಪ್ರೋಲ; ನಾರಿಕೇಳ; ಕಮರ—ಕರ್ಕಟ; ಭೇಕ (=ಕಪ್ಪೆ); ಜಂಘಾ; ಕಾರ್ಪಾಸ; ಪಟ; ಕಾರ್ಪಟ; ಜಲೂಕ (=ಜಿಗುಳೆ); ಪಾಗಲ್; ಮಶಕ (ಹಿಂದಿ—ಮಚ್ಛಡ); ಸರ್ಷಪ (=ಸಾಸಿವೆ); ಇಂದುರ—ಉಂದುರ =(ಇಲಿ; ಮರಾಠಿ ಉಂದೀರ); ತಂಡುಲ (ಸಕಾಯ್ - ಚೆಂದರಾಃಯ್; ಚೆಂದ್ರಾಯ್); ಛೋಟೊ (=ಸಣ್ಣ) ಇತ್ಯಾದಿ.

---

* "Probably the arrow made of bamboos was unknown to them and this is why they borrowed the name as well as the instrument itself from the aborigines of India; In fact, in the Malaya Archipelago the arrow called 'pa nah' is made of bamboo. In the same way 'bana' designates precisely an arrow of bamboo or of cane in India."—P. A. P. D. 23.

ಗ್ರಂಥಸೂಚಿ

SELECT BIBLIOGRAPHY

Name of Author	*Name of Book*	*Abbreviations used*
Bloch Jules	Pre-Aryan and Pre Dravidian in India	P. A. and P. D.
Bruce Foote	Observations on Ancient sites in India	—
Caldwell Dr. R.	Comparitive Grammar of Dravidian Languages	Cald.
Chatterjee Dr S. K.	Bengali Language	—
Diwatia N. B.	Gujarathi Language and Literature	G. L. L.
Grierson Dr.	Linguistic Survey of India, Vol. IV	L. S. I.
Gokak Prin. V. K.	Poetic Approach to Language [Wilson Philological Lecture]	—
Jagirdar Prof. R. V.	Influence of old Kannada on Jnaneshwari	—
Jesperson O.	Language-Nature Origin and Development Grammar of Language.	O. D. L.
Karwe Dr. Mrs. Irawati	Kinship Terminology in Maratha Country	—
Katre Dr. S. M.	Formation of Konkani	—
Kulkarni Prof. K. P.	Relationship between some Marathi and Kanarese Words [unpublished]	R. S. M. K.
Mujumdar B. C.	History of Bengali Language	H. B. L.
Munshi K. M.	Ancient Gurjara Desha and its Literature	—
Madras University	Dravidic Studies, Vols. I to IV	—
Narasinhacharya R.	History of Kannada Language	H. K. L.
Ramakrishnayya Prof. K.	Studies in Dravidian Philology	K. R.
	Telugu Literature Outside the Telugu Country	T. L. T. C.
	Root Theory and the Dravidian Root	—
	The Dravidian Passive	—
	Dravidian Cognates	—
Sankalia Dr. H. D.	Archaeology of Gujarath	
Ruskin J.	Sesame and Lilies	
Smith Prof. L. P.	English Language	
Talamakki S. S.	Konkani Songs, Proverbs and Riddles	
	Saraswat Families	
Weekly Prof. Ernest	Romance of Words	

ಕನ್ನಡ

ಉಪಾಧ್ಯೆ ಡಾ ಆ. ನೇ.	"ದೇಶಿ ಕೋಶಗಳಲ್ಲಿನ ಕನ್ನಡ ಶಬ್ದಗಳು	—
ಕುಲಕರ್ಣಿ ಶ್ರೀ. ಎನ್. ಕೆ.	"ಕುಮಾರವ್ಯಾಸ" [ಅಪ್ರಕಟಿತ]	ಕು. ವ್ಯಾ.
ಗೋವಿಂದ ಪೈ	ಮೂರು ಉಪನ್ಯಾಸಗಳು	
ಜೋಶಿ ಶ್ರೀ. ಶಂ. ಬಾ.	ಕನ್ನಡದ ನೆಲೆ	ಕ. ನೆ.
	ಮಹಾರಾಷ್ಟ್ರದ ಮೂಲ	ಮ. ಮೂ.
ದೇಶಪಾಂಡೆ ಶ್ರೀ. ರಾ. ಹ.	ಕರ್ನಾಟಕ ಸಾಮ್ರಾಜ್ಯ	ಕ. ಸಾ.
ನಂಜುಂಡಶಾಸ್ತ್ರಿ ಟಿ.	ಕರ್ನಾಟ ಭಾಷಾಲಿಪಿ	
ಮರಿಯಪ್ಪಭಟ್ಟ ಪ್ರೊ. ಎಂ.	ಕನ್ನಡ ಸಂಸ್ಕೃತಿ	
ಮಾಧವ ಕ.	ಕನ್ನಡ ಲಿಪಿಯ ಸುಧಾರಣೆ	
ಮುಳಿಯೆ ಶ್ರೀ. ತಿಮ್ಮಪ್ಪಯ್ಯ	ನಾಡೋಜ ಪಂಪ	
ಮೈಸೂರು ವಿಶ್ವವಿದ್ಯಾನಿಲಯ	ಕನ್ನಡ ಕೈಪಿಡಿ	
ಸಾಲೆತೊರೆ ಡಾ. ಬಿ. ಎ.	ಕನ್ನಡ ನಾಡಿನ ಚರಿತ್ರೆ	

[ಶಬ್ದಮಣಿದರ್ಪಣ; ಕವಿರಾಜಮಾರ್ಗ; ಭಾಷಾಭೂಷಣ; ಪಂಪಭಾರತ; ವೊಡ್ಡಾರಾಧನ; ಪಂಪರಾಮಾಯಣ; ಕುಮಾರವ್ಯಾಸ ಭಾರತ; ಬಸವೇಶ್ವರ ವಚನಗಳು.]

ಮರಾಠಿ

श्रीमत्पतंजलि	महाभाष्यम्
राजपुरोहित ना. श्री.	कर्नाटक व महाराष्ट्र
कुलकर्णि प्रो. कृ. पा.	मराठि भाषा-उगम व विकास
	भाषाशास्त्र-आणि मराठि भाषा
चाफेकर ना. गो.	चित्पावन

JOURNALS

ENGLISH

Mythic Society Journal

Proceedings and Transactions of the Oriental Conference P. T. O. C.

Indian Antiquary	Ind. Ant.
Indian Historical Quarterly	I. H. Q.
Ancient India	
Andhra Historical Journal	
Journal of Karnatak Historical Society	J. K. H. S.
Poona Orientalist	

ಕನ್ನಡ

ಪ್ರಭಾತ; ಜಯ ಕರ್ನಾಟಕ (ಜ. ಕ.); ಕರ್ಣಾಟ ಸಾಹಿತ್ಯ ಪರಿಷತ್ಪತ್ರಿಕೆ; ಪ್ರಬುದ್ಧ ಕರ್ಣಾಟಕ; ಕನ್ನಡ ನುಡಿ (ಕ. ನು.)

ಮರಾಠಿ

चित्रमयजगत.